ಚಿತ್ರದುರ್ಗ ಪ್ರದೇಶದ ಭೂಹಿಡುವಳಿಗಳು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ

([illegible])

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ

ಎಚ್. [illegible] ರಾಜಪ್ಪ

ಮಾರ್ಗದರ್ಶಕರು

ಡಾ. ತಂಬಂಡ ವಿಜಯ್ ಪೂಣಚ್ಚ

ಪ್ರವಾಚಕರು

ಚರಿತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಸೆಪ್ಟೆಂಬರ್ ೨೦೦[illegible]

121

[21]

ಚಿತ್ರದುರ್ಗ ಪ್ರದೇಶದ ಭೂಹಿಡುವಳಿಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ

(೧೭೭೪ ರಿಂದ ೧೯೫೬)

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪಿಎಚ್. ಡಿ ಮಹಾಪ್ರಬಂಧ

ಸಂಶೋಧಕ

ಎಚ್. ಈ. ಬಸವರಾಜಪ್ಪ

ಮಾರ್ಗದರ್ಶಕರು

ಡಾ. ತಂಬಂಡ ವಿಜಯ್ ಪೂಣಚ್ಚ

ಪ್ರವಾಚಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಸೆಪ್ಟೆಂಬರ್ ೨೦೦೦

ಸಂಶೋಧಕನ ಪ್ರಮಾಣ ಪತ್ರ

ಚಿತ್ರದುರ್ಗ ಪ್ರದೇಶದ ಭೂಹಿಡುವಳಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ (೧೭೭೯ ರಿಂದ ೧೯೫೬) ಎಂಬ ವಿಷಯದ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಡಾ. ತಂಬಂಡ ವಿಜಯ್ ಪೂಣಚ್ಚ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಈ ಮಹಾಪ್ರಬಂಧದಲ್ಲಿ ಬರುವಂತಹ ಯಾವುದೇ ಅಂಶವನ್ನೂ ಈ ಮೊದಲು ಭಾಗಶಃ ಆಗಲಿ, ಪೂರ್ಣವಾಗಿ ಆಗಲಿ ಪ್ರಕಟಿಸಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಎಚ್.ಈ. ಬಸವರಾಜಪ್ಪ

ದಿನಾಂಕ : ೧೮-೦೯-೨೦೦೦
ಸ್ಥಳ : ವಿದ್ಯಾರಣ್ಯ

ಎಚ್. ಈ. ಬಸವರಾಜಪ್ಪ
ಸಂಶೋಧಕ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಎಚ್. ಈ. ಬಸವರಾಜಪ್ಪ ಅವರು ಚಿತ್ರದುರ್ಗ ಪ್ರದೇಶದ ಭೂಹಿಡುವಳಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ (೧೭೭೯ ರಿಂದ ೧೯೫೬) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ವಿಷಯವನ್ನು ಇದುವರೆಗೂ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ತಂಬಂಡ ವಿಜಯ್ ಪೂಣಚ್ಚ
ಪ್ರವಾಚಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : ೧೮-೦೯-೨೦೦೦
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ನನಗೆ ಸಂಶೋಧನೆ ಮಾಡಲು ಅನುವು ಮಾಡಿಕೊಟ್ಟು ಈ ಮಹಾ ಪ್ರಬಂಧದ ರಚನೆಗೆ ಪ್ರೇರಣೆ ನೀಡಿದ ಮಾನ್ಯ ಉಪಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೂ, ಹಿಂದಿನ ಮಾನ್ಯ ಕುಲಪತಿಗಳಾಗಿದ್ದ ಡಾ. ಚಂದ್ರಶೇಖರ ಕಂಬಾರ ಅವರಿಗೂ ಮತ್ತು ಕುಲಸಚಿವರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೂ, ಅಧ್ಯಯನಾಂಗದ ನಿರ್ದೇಶಕರಾಗಿದ್ದ ಶ್ರೀ ಬಾಲಸುಬ್ರಮಣ್ಯ ಅವರಿಗೂ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಅಧ್ಯಯನಕ್ಕೆ ಪೂರಕವಾಗುವಂತೆ ಚಿಂತನೆಗೆ ಹಚ್ಚಿ ಬರವಣಿಗೆಯ ಓರೆ-ಕೋರೆಗಳನ್ನು ಸಹನೆಯಿಂದ ತಿದ್ದಿ-ತೀಡಿ ಆತ್ಮೀಯತೆಯಿಂದ ಸಹಕರಿಸಿ ಮಾರ್ಗದರ್ಶನ ಮಾಡಿದ ಪ್ರೀತಿಯ ಗುರುಗಳಾದ ಡಾ. ತಂಬಂಡ ವಿಜಯ್ ಪೂಣಚ್ಚ ಅವರಿಗೂ,

ಅಧ್ಯಯನಕ್ಕೆ ಅಗತ್ಯವಾದ ಅಂಶಗಳನ್ನು ನೀಡಿದ ಚರಿತ್ರೆ ವಿಭಾಗದ ಮುಖ್ಯಸ್ಥರಾದ ಪ್ರೊ. ಲಕ್ಷ್ಮಣ್ ತೆಲಗಾವಿ ಅವರಿಗೆ, ಹಾಗೂ ವಿಭಾಗದ ಅಧ್ಯಾಪಕರುಗಳಾದ, ಡಾ. ಸಿ.ಆರ್. ಗೋವಿಂದರಾಜು, ಶ್ರೀ ಮೋಹನ್‌ಕೃಷ್ಣ ರೈ, ಶ್ರೀ ಎನ್. ಚಿನ್ನಸ್ವಾಮಿ, ಡಾ. ವಿರೂಪಾಕ್ಷಪೂಜಾರಹಳ್ಳಿ ಅವರಿಗೂ, ವಿಭಾಗದ ಇತರ ಸದಸ್ಯರುಗಳಾದ ಶ್ರೀ ಎಂ.ಎಂ.ಶಿವಪ್ರಕಾಶ್, ಶ್ರೀ ವಿಜಯಕುಮಾರ್ ಹಾಗೂ ನನ್ನ ವಿದ್ಯಾ ಗುರುಗಳಾದ ಪ್ರೊ. ಟಿ. ನೀಲಾಂಬಿಕ(ಸಿರಿಗೆರೆ) ಪ್ರೊ. ಎಸ್.ಎ.ಬಾರಿ ಮತ್ತು ಡಾ. ರಾಜರಾಮ ಹೆಗಡೆ ಅವರಿಗೂ,

ನನ್ನ ಅಧ್ಯಯನಕ್ಕೆ ಪ್ರೊತ್ಸಾಹಿಸಿದ ಡಾ. ಕರೀಗೌಡ ಬೀಚನಹಳ್ಳಿ, ಡಾ. ಹಿ.ಚಿ.ಬೋರಲಿಂಗಯ್ಯ, ಡಾ. ಕೆ.ವಿ.ನಾರಾಯಣ, ಡಾ. ಕೆ.ಎಂ.ಸುರೇಶ್, ಡಾ.ರಹಮತ್ ತರೀಕೆರೆ, ಶ್ರೀ ಟಿ.ಆರ್.ಚಂದ್ರಶೇಖರ್, ಡಾ. ದೇವರಕೊಂಡರೆಡ್ಡಿ, ಡಾ. ಸಿ. ಮಹದೇವ, ಡಾ. ಪರಶಿವಮೂರ್ತಿ, ಡಾ. ಸಿ.ಎಸ್.ವಾಸುದೇವನ್ ಮತ್ತು ಶ್ರೀ ಎಚ್.ಡಿ.ಪ್ರಶಾಂತ್ ಅವರುಗಳಿಗೆ,

ಕರಡು ತಿದ್ದುವಲ್ಲಿ ಮುತುವರ್ಜಿವಹಿಸಿದ ಶ್ರೀ ಸುಜ್ಞಾನಮೂರ್ತಿ, ಶ್ರೀ ಎ.ಎಸ್.ಪ್ರಭಾಕರ, ಶ್ರೀ ಎಸ್.ವೈ. ಸೋಮಶೇಖರ, ಶ್ರೀ ಶರಣಬಸಪ್ಪ, ಶ್ರೀ ಚನ್ನಪ್ಪ ಎ. ಅವರಿಗೂ, ಅಧ್ಯಯನದುದ್ದಕ್ಕೂ ಸಹಕರಿಸಿ ಗೆಳೆಯರಾದ ಎಂ.ಪಿ.ವೀಣಾ, ಜಿ.ಎನ್.ಕೀರ್ತಿನಾಥ್, ಎಲ್. ಶ್ರೀನಿವಾಸ, ಎಚ್. ತಿಪ್ಪೇಸ್ವಾಮಿ, ಆರ್.ಬಿ.ಕುಮಾರ್, ರೇವಯ್ಯ ಒಡೆಯರ್, ಕೃಷ್ಣ, ವೆಂಕಟೇಶಮೂರ್ತಿ, ಕರಿಸಿದ್ದನಗೌಡ, ಕೆ.ಜೆ.ರಾಜಕುಮಾರ್, ದಿನೇಶ್, ಜಯಪ್ಪ, ಗೋವಿಂದ, ಮಾರುತಿ ಮತ್ತು ಚಂದ್ರು ಅವರಿಗೆ,

ಬೆಂಗಳೂರು, ಮೈಸೂರು, ಧಾರವಾಡ, ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಸಿಬ್ಬಂದಿಗಳಿಗೂ, ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು ಮತ್ತು ಮೈಸೂರು ಪತ್ರಾಗಾರ, ಮೈಸೂರು, ಮಿಥಿಕ್ ಸೊಸೈಟಿಯ ಸಿಬ್ಬಂದಿಗಳಿಗೂ, ಸಂದರ್ಶನ ಸಂದರ್ಭದಲ್ಲಿ ಮಾಹಿತಿ ಒದಗಿಸಿದವರಿಗೂ, ಅಂದವಾಗಿ ಡಿ.ಟಿ.ಪಿ.ಮಾಡಿಕೊಟ್ಟ ಶ್ರೀ ಎ. ಎಂ. ಕೃಪಾಶಂಕರ್ ಅವರಿಗೂ ನನ್ನ ಕೃತಜ್ಞತೆಗಳು

ಎಚ್.ಈ.ಬಸವರಾಜಪ್ಪ

ಪರಿವಿಡಿ

ಅಧ್ಯಾಯ ೧
ಪ್ರಸ್ತಾವನೆ

ಪ್ರಸ್ತಾವನೆ

ಆಧುನಿಕ ಚಿತ್ರದುರ್ಗದ ಚರಿತ್ರೆ ಬರವಣಿಗೆಯು ಹೆಚ್ಚು ಕಡಿಮೆ ಇತ್ತೀಚಿನ ಬೆಳವಣಿಗೆಯಾಗಿದೆ. ಚಿತ್ರದುರ್ಗ ಜಿಲ್ಲೆಯ ಜಟಿಂಗರಾಮೇಶ್ವರ, ಬ್ರಹ್ಮಗಿರಿ ಮತ್ತು ಸಿದ್ಧಾಪುರಗಳಲ್ಲಿ ದೊರೆತ ಶಾಸನಗಳ ಮೂಲಕ ಅಶೋಕನ ಕಾಲದ ಪ್ರಾಚೀನ ಭಾರತದ ಚರಿತ್ರೆಯು ಇತಿಹಾಸಕಾರರಲ್ಲಿ ಅನೇಕ ಬಗೆಯ ಚರ್ಚೆಗಳನ್ನು ಹುಟ್ಟು ಹಾಕಿವೆ. ಅನೇಕ ಬಗೆಯ ಹೊಸ ಸಂಶೋಧನೆಗಳು ಈ ಹಿನ್ನೆಲೆಯಲ್ಲಿ ಬಂದವು. ನಂತರದ ವರ್ಷಗಳಲ್ಲಿ ಶಾತವಾಹನರು, ಕದಂಬರು, ಗಂಗರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರ ಅರಸರು ಚಿತ್ರದುರ್ಗದ ಅನೇಕ ಪ್ರದೇಶಗಳನ್ನು ಆಳಿದರು. ವಿಜಯನಗರೋತ್ತರ ಕಾಲದಲ್ಲಿ ಪ್ರವರ್ಧಮಾನದಲ್ಲಿ ಇದ್ದವರೆಂದರೆ ಪಾಳೆಯಗಾರರು, ಹೈದರ್-ಟಿಪ್ಪು, ಬ್ರಿಟಿಶರು ಹಾಗೂ ಮೈಸೂರು ಒಡೆಯರು. ಪ್ರಸ್ತುತ ಅಧ್ಯಯನವು ಹೆಚ್ಚು ಕಡಿಮೆ ವಿಜಯನಗರೋತ್ತರ ಚಿತ್ರದುರ್ಗದ ಚರಿತ್ರೆಯನ್ನು ವಿಶ್ಲೇಷಣೆ ಮಾಡುವುದರೊಂದಿಗೆ ಆರಂಭವಾಗುತ್ತದೆ. ಈ ಅಧ್ಯಯನವು ಪ್ರಮುಖವಾಗಿ ವಸಾಹತು ಕಾಲದ ಮೈಸೂರು ಅರಸರ ಅವಧಿಯನ್ನು ಒಳಗೊಂಡಿದೆ. ಚಿತ್ರದುರ್ಗದಲ್ಲಿ ವಸಾಹತುಶಾಹಿಗೆ ಪ್ರತಿಕ್ರಿಯೆ ತೋರಿದ ಸ್ವಾತಂತ್ರ್ಯ ಹೋರಾಟ ಮತ್ತು ಏಕೀಕರಣ ಚಳವಳಿಯನ್ನು ಜೊತೆ ಜೊತೆಯಾಗಿ ಅಭ್ಯಸಿಸಬೇಕಾದ ಒತ್ತಡಗಳ ಹಿನ್ನೆಲೆಯಲ್ಲಿ ೧೭೭೯ ರಿಂದ ೧೯೫೬ ನಡುವಿನ ಕಾಲಾವಧಿಯ ಚಿತ್ರದುರ್ಗ ಪ್ರದೇಶದ ಭೂ ಹಿಡುವಳಿಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನವನ್ನು ಮಾಡಲು ಪ್ರಸ್ತುತ ಮಹಾಪ್ರಬಂಧವು ಉದ್ದೇಶಿಸಿದೆ.

ವಸಾಹತುಕಾಲದಲ್ಲೇ ಆಗಲಿ ಅಥವಾ ವಸಾಹತೋತ್ತರ ಕಾಲದಲ್ಲೇ ಆಗಲಿ ಭಾರತದಂಥ ದೇಶಗಳಲ್ಲಿ ಗ್ರಾಮ ಜೀವನಗಳೇ ಪ್ರಮುಖವಾಗಿವೆ. ಹಾಗೆಯೇ ಈ ದೇಶದ ಮುಖ್ಯ ಬೆನ್ನೆಲುಬೇ ಕೃಷಿಯಾಧರಿತ ಉತ್ಪಾದನೆಯಾಗಿದೆ. ಇದಕ್ಕೆ ಚಿತ್ರದುರ್ಗ ಪ್ರದೇಶಗಳೇನು ಹೊರತಾಗಿಲ್ಲ. ಹಾಗಾಗಿ ಈ ಪ್ರದೇಶದ ಚರಿತ್ರೆ ಎಂದರೆ ಅದು ಕೃಷಿಕರ ಭೂಮಾಲೀಕರ ಹಾಗೂ ಕೃಷಿಕಾರ್ಮಿಕರ ಚರಿತ್ರೆಯೇ ಆಗುತ್ತದೆ. ಕೃಷಿಯ ಅಥವಾ ಕೃಷಿಕರ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಕೃಷಿಯ

ಮೂಲಾಧಾರವಾದ ಭೂ ಹಿಡುವಳಿಗಳನ್ನು ಅಭ್ಯಸಿಸಲೇ ಬೇಕಾಗುತ್ತದೆ. ಭೂಮಾಲೀಕರು, ಭೂಮಿಯನ್ನು ಉಳುಮೆ ಮಾಡುವವರು ಹಾಗೂ ಉತ್ಪಾದನೆಯ ಅಂಶಗಳು ಚರಿತ್ರೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅದರಲ್ಲೂ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಚರಿತ್ರೆಗಳನ್ನು ಸಮರ್ಥವಾಗಿ ಅರ್ಥಮಾಡಿಕೊಳ್ಳಬೇಕಾದರೆ ಈ ಅಂಶಗಳ ಅಧ್ಯಯನ ಇಂದಿನ ಜರೂರಾಗಿದೆ. ಪ್ರಸ್ತುತ ಮಹಾಪ್ರಬಂಧವು ಭೂಹಿಡುವಳಿಗಳ ಅಧ್ಯಯನದ ಹಿನ್ನೆಲೆಯಲ್ಲಿ ಚಿತ್ರದುರ್ಗ ಪ್ರದೇಶದ ಆರ್ಥಿಕತೆ, ಸಮಾಜ ಮತ್ತು ರಾಜಕೀಯ ಅಭಿವ್ಯಕ್ತತೆಗಳನ್ನು ಒಳಗೊಂಡಿವೆ.

ಚಾರಿತ್ರಿಕ ಹಿನ್ನೆಲೆ

ಭಾರತವು ಪ್ರಾಚೀನ ಕಾಲದಿಂದಲೂ ಕೃಷಿ ಪ್ರಧಾನವಾದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ.[೧] ಇದಕ್ಕೆ ಸ್ವಾತಂತ್ರ್ಯ ನಂತರದ ಭಾರತೀಯ ಸಮಾಜವು ಹೊರತಾಗಿಲ್ಲ. ಈ ದೃಷ್ಟಿಯಿಂದ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ರಾಜ್ಯದ ಸ್ಥಾಪನೆಯು ಒಂದು ಮೈಲಿಗಲ್ಲು. ಈ ರಾಜ್ಯವು ಒಂದು ಭಾಷಾಪ್ರದೇಶಕ್ಕೆ ಸೀಮಿತವಾಗಿ ಉಳಿಯದೆ ಬಹುಮಟ್ಟಿಗೆ ಈಗಿನ ದಕ್ಷಿಣ ಭಾರತವನ್ನು ವ್ಯಾಪಿಸಿತ್ತು. ಕ್ರಿ. ಶ. ೧೩೩೬ ರಿಂದ ೧೫೬೫ರವರೆಗೆ ಸುಮಾರು ೨೨೯ ವರ್ಷಗಳ ಬಹುದೀರ್ಘವಾದ ಅವಧಿವರೆಗೆ ಈ ವಿಶಾಲವಾದ ರಾಜ್ಯವು ಅಸ್ತಿತ್ವದಲ್ಲಿತ್ತು.

ವಿಜಯನಗರದ ಅರಸರು ಚಿತ್ರದುರ್ಗ ಪ್ರದೇಶವನ್ನು ತಮ್ಮ ರಾಜ್ಯದ ಒಂದು ಭಾಗವನ್ನಾಗಿಸಿಕೊಂಡು ಆಡಳಿತ ನಡೆಸಿದರು. ೧೩೩೬ರ ಶಾಸನವು ವಿಜಯನಗರದ ಪ್ರತಿನಿಧಿಯಾಗಿ ಮಲ್ಲಿನಾಥ ಒಡೆಯನೆಂಬುವನು 'ಬೆಮ್ಮತ್ತಕಲ್ಲು' ನಾಡನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸುತ್ತಿದ್ದನೆಂಬುದನ್ನು ತಿಳಿಸುತ್ತದೆ.[೨] ಈ ವಿಚಾರದಿಂದ ವಿಜಯನಗರದ ರಾಜಮನೆತನಕ್ಕೆ ಸೇರಿದ ಯುವರಾಜರು ಆರಂಭದಿಂದಲೂ ಆಡಳಿತ ನಡೆಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ವಿಜಯನಗರ ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ಅವರು ವಿಭಾಗಿಸಿದ್ದರು. ಅವುಗಳಲ್ಲಿ ಸೀಮೆ, ವೇಂಠೆ ಮತ್ತು ಚಾವಡಿ ಎಂಬ ವಿಭಾಗಗಳು ಪ್ರಮುಖವಾಗಿದ್ದವು. ಮೊದಲನೇ ಬುಕ್ಕನ ಕಾಲಾವಧಿಯಲ್ಲಿ ಹಲವು ಗ್ರಾಮಗಳನ್ನು ಒಳಗೊಂಡ ಪ್ರದೇಶವನ್ನು ಸೀಮೆ ಎಂದು ಕರೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪ್ರದೇಶವು ವಿಜಯನಗರ ಅರಸರ ಆಡಳಿತಾವಧಿಯಲ್ಲಿ ಯಾವ ಯಾವ ರೀತಿಯ ಆಡಳಿತಾತ್ಮಕ ವಿಂಗಡಣೆಗಳನ್ನು ಹೊಂದಿದ್ದಿತೆಂಬುದನ್ನು ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಅವುಗಳು ಹೀಗಿವೆ:

೧. ಕೊಟ್ಟೂರು ಚಾವಡಿ : ಇದಕ್ಕೆ ಚಿತ್ರದುರ್ಗ ಪ್ರದೇಶದ ದಾವಣಗೆರೆ ಮತ್ತು ಹರಿಹರ ತಾಲೂಕುಗಳು ಸೇರಿದ್ದವು.

೨. ಯಗಟಿ ಚಾವಡಿ : ಚಿತ್ರದುರ್ಗ ಪ್ರದೇಶದ ಹೊಳಲ್ಕೆರೆ ತಾಲೂಕು ಸೇರಿತ್ತು.

೩. ರಾಯದುರ್ಗ ಸೀಮೆ : ವಿಜಯನಗರ ಅರಸರ ಕಾಲಾವಧಿಯಲ್ಲಿ ರಾಯದುರ್ಗ ಸೀಮೆಯು ಕರ್ನಾಟಕ, ಆಂಧ್ರಪ್ರದೇಶಗಳನ್ನೊಳಗೊಂಡ ವಿಶಾಲ ಪ್ರದೇಶವಾಗಿತ್ತು. ಇದರಲ್ಲಿ ಚಿತ್ರದುರ್ಗ ಪ್ರದೇಶದ ಮೊಳಕಾಲ್ಮೂರು, ಹಿರಿಯೂರು ಮತ್ತು ಚಳ್ಳಕರೆ ತಾಲೂಕುಗಳು ಸೇರಿದ್ದವು. ಆಂಧ್ರ ಪ್ರದೇಶದಲ್ಲಿ ವಿಶಾಲವಾದ ಆಡಳಿತ ವಿಭಾಗಗಳನ್ನು ಸೀಮೆ ಎಂದು ಕರೆಯುತ್ತಿದ್ದರು.[೬]

ವಿಜಯನಗರ ಅರಸರ ಕಾಲಾವಧಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ 'ಅಗ್ರಹಾರ' ಮತ್ತು 'ಮಹಾನಾಡು' ಎಂಬ ಸ್ಥಳೀಯ ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು. ವಿಜಯನಗರ ಕೇಂದ್ರಿಕೃತ ಆಡಳಿತ ವ್ಯವಸ್ಥೆಯಲ್ಲಿದ್ದರೂ ಗ್ರಾಮ ಹಂತದಿಂದ ಪ್ರಾಂತ್ಯಗಳವರೆಗೂ ಭೂಹಿಡುವಳಿಗಳ ಹಂಚಿಕೆಯಲ್ಲಿ ಪ್ರಾಂತ್ಯಾಧಿಕಾರಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದರು. ಇದು ವಿಕೇಂದ್ರೀಕರಣದ ಒಂದು ಪ್ರಾಯೋಗಿಕ ಉದಾಹರಣೆಯಾಗಿದೆ. ಈ ಹಿನ್ನೆಲೆಯಲ್ಲಿ ಬರ್ಟನ್ ಸ್ಟೈನ್‌ರವರು ವಿಜಯನಗರ ಸಾಮ್ರಾಜ್ಯವನ್ನು ತುಂಡು ರಾಜ್ಯಗಳ ಒಕ್ಕೂಟವೆಂದು ಹೇಳಿರುವುದನ್ನು ನಾವು ಗಮನಿಸಬೇಕು. ರಾಜಕೀಯ ಪರಮಾಧಿಕಾರವು ತುಂಡು, ತುಂಡಾಗಿ ಒಡೆದುಹೋಗಿರುವುದು ಕರ್ನಾಟಕದಲ್ಲಿ ಮಧ್ಯಯುಗದ ನಿಯಂತ್ರಣದ ಆಡಳಿತ ವ್ಯವಸ್ಥೆ ಉದಯಿಸಲು ದಾರಿಮಾಡಿಕೊಟ್ಟಿತು. ಇಂತಹ ಸ್ಥಳೀಯ ಆಡಳಿತ ಘಟಕಗಳು ಚಿತ್ರದುರ್ಗ ಪ್ರದೇಶದಲ್ಲಿಯೂ ಇದ್ದವು. ಆ ಬಗ್ಗೆ ಶಾಸನಗಳು ವಿವರವಾದ ಮಾಹಿತಿಯನ್ನು ನೀಡುತ್ತವೆ. 'ಸೀಮೆ' ಎಂಬುದು ಸಂಸ್ಕೃತದ 'ಸೀಮಾ' ಎಂಬ ಪದವೇ ಆಗಿದೆ. ಕೈಫಿಯತ್ತುಗಳಲ್ಲಿ ಬರುವಂತೆ ಸೀಮೆಯು ಒಂದು ನಿರ್ದಿಷ್ಟವಾದ ಆಡಳಿತ ಘಟಕವಾಗಿರುತ್ತಿತ್ತು. ವಿಜಯನಗರ ಕಾಲದಲ್ಲಿ ಸೀಮೆಯು ಒಂದು ಆಡಳಿತ ವಿಭಾಗ ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ಆದರೆ ಕ್ರಿ. ಶ. ೧೪೦೦ಕ್ಕಿಂತ ಹಿಂದಿನ ಕನ್ನಡ ಶಾಸನಗಳಲ್ಲಿ ಸೀಮೆ ಎಂಬುದು 'ಎಲ್ಲೆ' ಎಂಬ ಅರ್ಥದಲ್ಲೇ ಪ್ರಯೋಗವಾಗಿರುವುದು ಗಮನಾರ್ಹವಾದ ಸಂಗತಿ. ಚಿತ್ರದುರ್ಗ ಪ್ರದೇಶದಲ್ಲಿದ್ದ ಹಲವು ಆಡಳಿತ ಘಟಕಕ್ಕೆ 'ಸೀಮೆ' ಎಂದು ಕರೆಯಲಾಗಿತ್ತು. ಇವುಗಳೆಲ್ಲವೂ ಶಾಸನೋಕ್ತವಾಗಿವೆ. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಇತರ ಪ್ರದೇಶಗಳಂತೆ ಅವರ ಅಧೀನಕ್ಕೊಳಪಟ್ಟ ಈ ಪ್ರದೇಶದಲ್ಲೂ ಮೂಡಿಬಂದ ಆಡಳಿತ ವಿಭಾಗಗಳು

ಸೀಮೆಗಳೇ ಆಗಿವೆ.[೪] ವಿಜಯನಗರ ಆಳ್ವಿಕೆಯ ಕಾಲದಲ್ಲಿದ್ದ ಚಿತ್ರದುರ್ಗ ಪ್ರದೇಶದ ಸೀಮೆಯ ವಿಂಗಡಣೆಗಳ ವಿವರಗಳನ್ನು ಈ ರೀತಿ ಮಾಡಬಹುದು(ನಕ್ಷೆ ೧ ನೋಡಿ).

೧. **ರಾಮಗಿರಿ ಸೀಮೆ :** ರಾಮಗಿರಿ ಈಗ ಹೊಳಲ್ಕೆರೆ ತಾಲೂಕಿನ ಹೋಬಳಿ ಕೇಂದ್ರವಾಗಿದೆ. ಈ ಪ್ರದೇಶ ಧಾರ್ಮಿಕವಾಗಿಯೂ ಪ್ರಸಿದ್ಧವಾಗಿದೆ. ರಾಮಲಿಂಗದೇವರು ಇಲ್ಲಿನ ಬೆಟ್ಟದಲ್ಲಿ ನೆಲೆಸಿರುವುದರಿಂದ ಈ ಊರಿಗೆ ರಾಮಗಿರಿ ಎಂದು ಕರೆದಿರುವುದು ಐತಿಹ್ಯ ಸಂಗತಿ. ಹೊನ್ನಗೊಂಡನ ಹಳ್ಳಿ, ಬಾಗೂರು ಗ್ರಾಮಗಳು ಈ ಸೀಮೆಯ ಭಾಗವಾಗಿದ್ದವೆಂದು ಶಾಸನದಿಂದ ತಿಳಿಯುತ್ತದೆ. ಕ್ರಿ. ಶ. ೧೫೫೫ರ ಶಾಸನವು ರಾಮಗಿರಿ ಸೀಮೆಯನ್ನು ಬಸವಪ್ಪಯ್ಯನ ಸೋದರ ಕರಣಿಕ ಪ್ರಭುಕಯ್ಯ ಆಡಳಿತ ನಡೆಸುತ್ತಿದ್ದನೆಂದು ವಿವರ ನೀಡುತ್ತದೆ. ಕ್ರಿ. ಶ. ೧೭೫೫ರಲ್ಲಿ ಮಲೆನಾಡಿನ ನಾಯಕರು, ಹರಪನಹಳ್ಳಿಯ ಸೋಮಶೇಖರ ನಾಯಕ, ಆನೆಗೊಂದಿಯ ಫೌಜುದಾರ, ರಾಯದುರ್ಗದ ದಂಡು ಮತ್ತು ಇನ್ನಿತರ ಪಾಳೆಯಗಾರರು ಸೇರಿ ರಾಮಗಿರಿ ಕೋಟೆಗೆ ಮುತ್ತಿಗೆ ಹಾಕಿದಾಗ ಚಿತ್ರದುರ್ಗದ ನಾಯಕ ಅರಸನಾದ ಹಿರೇಮದಕರಿ ನಾಯಕನು ಶತ್ರುಗಳನ್ನು ಹಿಮ್ಮೆಟ್ಟಿಸಿದನು. ಆ ಮೂಲಕ ಹಿರೇಮದಕರಿನಾಯಕನು ರಾಮಗಿರಿಯನ್ನು ಮರುಆಕ್ರಮಿಸಿಕೊಂಡನು. ಅನಂತರದಲ್ಲಿ ಈ ಪ್ರದೇಶವು ಚಿತ್ರದುರ್ಗ ನಾಯಕ ಅರಸರ ಆಡಳಿತದಲ್ಲಿಯೇ ಉಳಿಯಿತು.[೫]

೨. **ಜಾಜೂರು ಸೀಮೆ :** ಇದು ಹೊಳಲ್ಕೆರೆ ತಾಲೂಕಿನ ಮುಖ್ಯಸ್ಥಳವಾಗಿದೆ. ಈ ಸ್ಥಳವು ಶಾಸನಗಳಲ್ಲಿ ವಿಜಯನಗರ ಅರಸರ ಕಾಲದಿಂದ ಚಿತ್ರದುರ್ಗ ಪಾಳೆಯಗಾರರ ಕಾಲದವರೆಗೆ ಜಾಜೂರ ಸೀಮೆಯೆಂದು ಉಲ್ಲೇಖಿಸಲ್ಪಟ್ಟಿರುವ ಪ್ರಮುಖ ಆಡಳಿತ ಪ್ರದೇಶವಾಗಿತ್ತು. ಕ್ರಿ. ಶ. ೧೫೪೦ರ ಅಚ್ಯುತರಾಯನ ಕಾಲದ ಶಾಸನವು ಪೆನುಗೊಂಡೆಯ ವೀರಪ್ಪನಾಯಕನ ನಿರೂಪದ ಮೇರೆಗೆ ಜಾಜೂರು ಸೀಮೆಯನ್ನು ಹಿರಿಯ ಮಲ್ಲಣ್ಣಯ್ಯನು ಆಳುತ್ತಿದ್ದನೆಂದು ತಿಳಿಸುತ್ತದೆ. ಇವನು ಜಾಜೂರು ಸೀಮೆಯ ಮದುವೆಯ ಸುಂಕವನ್ನು ಸರ್ವಮಾನ್ಯ ಮಾಡಿದ ಉಲ್ಲೇಖವಿದೆ. ಕ್ರಿ. ಶ. ೧೮೬೮ರ ನಂತರದ ಶಾಸನಗಳಲ್ಲಿ ಈ ಸೀಮೆಯೂ ತನ್ನ ವಿಸ್ತಾರವನ್ನು ಕಡಿಮೆ ಮಾಡಿ ಕೊಂಡು ಜಾಜೂರು ಸ್ಥಳವೆಂದು ಕರೆಯಲಾಗಿದೆ.[೬]

೩. **ಚಿತ್ರಹಳ್ಳಿ ಸೀಮೆ :** ಹೊಳಲ್ಕೆರೆ ತಾಲೂಕು, ತಾಳ್ಯ ಹೋಬಳಿಗೆ ಸೇರಿರುವ ಚಿತ್ರಹಳ್ಳಿಯು ಈಗ ಸುಮಾರು ೨೦೦ ಮನೆಗಳಿರುವ ಗ್ರಾಮ. ಚಿತ್ರದುರ್ಗ ತಾಲೂಕಿನ ಕಡೆಲೆಗುದ್ದು ಗ್ರಾಮದ

ಶಾಸನದಲ್ಲಿ 'ಚಿತ್ರಹಳ್ಳಿ ಸೀಮೆ'ಯ ಉಲ್ಲೇಖವಿದೆ. ಕಡಲೆಗುದ್ದು ಗ್ರಾಮವು ಆ ಸೀಮೆಗೆ ಸೇರಿದ ಹಿರೇಗುಂಟನೂರು ಮಾಗಣಿಗೆ ಸಲ್ಲುವ ಗ್ರಾಮವಾಗಿದ್ದಿತೆಂಬ ಅಂಶವು ತಿಳಿಯುತ್ತದೆ. ಕ್ರಿ. ಶ. ೧೬೫೩ರ ಶಾಸನವು ಕಾಮಗೇತಿ ಓಬಣ್ಣ ನಾಯಕನ ಮೊಮ್ಮಗ ಮದಕರಿನಾಯಕ ವಿಜಯನಗರ ಅರಸ ರಾಯರಾಜನಿಂದ ಹಗಲು ಕಗ್ಗೊಲೆ ಮಾನ್ಯ ಎಂಬ ಬಿರುದನ್ನು, ಹಾಗೆಯೇ ಚಿತ್ರಹಳ್ಳಿ ಸೀಮೆಯ ಹಿರೇಗುಂಟನೂರು ಗ್ರಾಮವನ್ನು ಅಮರ ಮಾಗಣಿಯಾಗಿ ಪಡೆದ ಬಗ್ಗೆ ವಿವರವಿದೆ.[೭]

೪. ದುಂಮಿಯ ಸೀಮೆ : ಈಗ ಹೊಳಲ್ಕೆರೆ ತಾಲೂಕಿಗೆ ಸೇರಿರುವ ಹೊಳಲ್ಕೆರೆಯಿಂದ ಚನ್ನಗಿರಿಗೆ ಹೋಗುವ ಮಾರ್ಗದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಮನೆಗಳಿರುವ ಒಂದು ದೊಡ್ಡ ಗ್ರಾಮ. ಕ್ರಿ. ಶ. ೧೫೧೫ರ ಶಾಸನದಲ್ಲಿ ದುಂಮಿಯ ಸೀಮೆಯ ಉಲ್ಲೇಖವಿದೆ. ಅಚ್ಯುತರಾಯ ಮಹಾರಾಯರ ದಕ್ಷಿಣ ಭುಜದಂಡನಾದ ಕೃಷ್ಣಪ್ಪನಾಯಕರ ಕಾರ್ಯಕ್ಕೆ ಕರ್ತರಾದ ಮಲ್ಲರಸಯ್ಯನವರು ದುಂಮಿಯ ಸೀಮೆಯನ್ನು ಆಳುತ್ತಿದ್ದನೆಂದು ಶಾಸನವು ತಿಳಿಸುತ್ತದೆ. ಇದೇ ಗ್ರಾಮದ ಕ್ರಿ. ಶ. ೧೫೨೭ರ ಕೃಷ್ಣದೇವರಾಯನ ಕಾಲದ ಒಂದು ಶಾಸನವು ದುಂಮಿಯ ಪಟ್ಟಣದ ೧೮ ಪ್ರಜಾಗೌಡರು ಸೇರಿ ಹಿಂದೆ ದುಂಮಿಯನ್ನು ಬಿಟ್ಟು ಹೋದ ಹಲವು ಕೃಷಿ ಒಕ್ಕಲುಗಳನ್ನು ಬರಮಾಡಿಕೊಂಡು ಭೂ ಹಿಡುವಳಿಗಳನ್ನು ಪುನಃ ಅವರಿಗೆ ಹಂಚಿದ ಬಗೆಗೆ ವಿವರವಿದೆ.[೮] ಈ ಶಾಸನದಿಂದ ಮುಖ್ಯವಾಗಿ ಗ್ರಹಿಸಬಹುದಾದ ವಿಚಾರವೆಂದರೆ ಅಂದಿನ ಸಮಾಜದಲ್ಲಿ ಗ್ರಾಮದ ಗೌಡರು ಭೂಹಿಡುವಳಿಗಳ ಹಂಚಿಕೆಯಲ್ಲಿ ಮತ್ತು ಕಂದಾಯ ವಸೂಲಿಯ ವಿಚಾರದಲ್ಲಿ ರಾಜರಿಗೆ ಮಧ್ಯವರ್ತಿಗಳಾಗಿದ್ದರು. ಇದರಿಂದ ಗ್ರಾಮಗಳು ಸ್ವಾಯತ್ತ ಆಡಳಿತದ ಘಟಕಗಳಾಗಿದ್ದವು ಎಂಬುದು ಸ್ಪಷ್ಟವಾಗುತ್ತದೆ.

೫. ಬಾಗೂರು ಸೀಮೆ : ಇಂದು ಬಾಗೂರು ಹೊಸದುರ್ಗ ತಾಲೂಕಿಗೆ ಸೇರಿದ ಹೋಬಳಿ ಕೇಂದ್ರವಾಗಿದೆ. ಬಾಗೂರಿನಲ್ಲಿ ಬೆಳೆಯುವ ಅಕ್ಕಿಯಿಂದ ಇದು ಸಣ್ಣಕ್ಕಿ ಬಾಗೂರು ಎಂದೇ ಪ್ರಸಿದ್ಧವಾಗಿತ್ತು. ಹೊಸದುರ್ಗ ಮತ್ತು ಹೊಳಲ್ಕೆರೆ ತಾಲೂಕಿನಲ್ಲಿ ಸಿಕ್ಕಿರುವ ಹಲವು ಶಾಸನಗಳಲ್ಲಿ ಈ ಗ್ರಾಮದ ಪ್ರಸ್ತಾಪವಿದೆ. ಇದಕ್ಕೆ ಶಾಸನಗಳಲ್ಲಿ ಭಾಗ್ಯಪುರ, ಬಾಗೂರು ಎಂದು ಕರೆಯಲ್ಪಟ್ಟಿದೆ. ಕ್ರಿ. ಶ. ೧೫೫೪ರ ಸದಾಶಿವರಾಯನ ಕಾಲದ ಶಾಸನವು ವಿಜಯನಗರದ ಪ್ರತಿನಿಧಿಯಾದ ಬಾಗೂರು ಸೀಮೆಯ ಪಾರುಪತ್ಯದ ತನ್ನ ಆಡಳಿತಾವಧಿಯಲ್ಲಿ ಕೆಲವು ಸ್ವಾತಂತ್ರ್ಯ ನಿರ್ಣಯಗಳನ್ನು ತೆಗೆದುಕೊಂಡ ಬಗ್ಗೆ ತಿಳಿಸುತ್ತದೆ. ಅವನ ಆಡಳಿತಾವಧಿಯಲ್ಲಿ ಸುಂಕದ ಅಧಿಕಾರಿಯಾಗಿದ್ದ

ನರಸಿಂಹಯ್ಯನ ಭಿನ್ನವತ್ತಳೆಯ ಮೇರೆಗೆ ಅಲ್ಲಿನ ಗೌಡರಾದ ಲಿಂಗನಗೌಡ, ಶಾನುಭೋಗರಾದ ತಿಮ್ಮಪ್ಪ ಮತ್ತು ಇತರ ಪ್ರಜೆಗಳ ಸಮ್ಮುಖದಲ್ಲಿ ಪರ್ಯಾಲೋಚನೆಯನ್ನು ಮಾಡಿ, ಬಾಗೂರು ಸೀಮೆಯ ಹೊರಭಾಗದಲ್ಲಿ ಒಂದು ಪೇಟೆಯನ್ನು ಕಟ್ಟಿಸಿದನು. ಅದಕ್ಕೆ 'ಕೃಷ್ಣಾಪುರ' ಎಂಬ ಹೆಸರನ್ನು ಇಟ್ಟು ಅಲ್ಲಿಗೆ ಹಲವು ಒಕ್ಕಲುಗಳನ್ನು ಬರಮಾಡಿಕೊಂಡು ಅಲ್ಲಿನ ಭೂಹಿಡುವಳಿಗಳನ್ನು ಒಂದು ವರ್ಷದವರೆಗೆ ತೆರಿಗೆ ಇಲ್ಲದೇ, ಒಪ್ಪಂದದ ಮೂಲಕ ಕೃಷಿಗೊಳಪಡಿಸಲು ಅವಕಾಶ ಕಲ್ಪಿಸಿರುವುದು ಶಾಸನದಿಂದ ತಿಳಿದುಬರುತ್ತದೆ. ಇದರಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ವಿಜಯನಗರ ಕಾಲದ ಅಧೀನ ಅಮರನಾಯಕರು ತಾವು ಆಡಳಿತ ನಡೆಸುವ ಸೀಮೆಗಳಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶವಿತ್ತು. ಹಾಗೆಯೆ ಸ್ಥಳೀಯ ಅಮರನಾಯಕರು ಯಾವುದೇ ತೀರ್ಮಾನವನ್ನು ಕೈಗೊಳ್ಳುವ ಪೂರ್ವದಲ್ಲಿ ಗ್ರಾಮದ ಗೌಡರುಗಳ ಒಪ್ಪಿಗೆ ಪಡೆಯಬೇಕಾಗಿರುವುದು ಶಾಸನದಿಂದ ತಿಳಿದುಬರುತ್ತದೆ.[೯]

೬ **ಬೂದಿಹಾಳು ಸೀಮೆ :** ಇಂದು ಶ್ರೀರಾಂಪುರವೆಂದು ಕರೆಯಲ್ಪಟ್ಟಿರುವ ಗ್ರಾಮವು ಹಿಂದಿನ ಬೂದಿಹಾಳ ಆಗಿತ್ತು. ಈ ಗ್ರಾಮ ಈಗ ಹೊಸದುರ್ಗ ತಾಲೂಕಿನ ಹೋಬಳಿ ಕೇಂದ್ರವಾಗಿದೆ. ಕ್ರಿ. ಶ. ೧೫೫೪ರ ಸದಾಶಿವರಾಯನ ಕಾಲದ ಶಾಸನವು ಬೂದಿಹಾಳ ಸೀಮೆಯ ಮಹಾಮಂಡಲೇಶ್ವರ ರಾಮರಾಜಯ್ಯ ಮಿಥಿಲೇಶ್ವರ ಶ್ರೀಪತಿ ಓಬಳೇಶ್ವರಯ್ಯ ಮಹಾಅರಸು ರಾಜನ ಪ್ರತಿನಿಧಿಯಾಗಿ ಬೂದಿಹಾಳ್ ಸೀಮೆಯ ಆಡಳಿತ ನಡೆಸುತ್ತಿರುವ ವೇಳೆಯಲ್ಲಿ ನಾನು ರಾಜನ ಪ್ರತಿನಿಧಿಯಾಗಿದ್ದೇನೆಂದು ಹೇಳಿಕೊಳ್ಳುತ್ತಾನೆ. ಬೂದಿಹಾಳ್ ಸೀಮೆಯ ಕೆರೆಯ ಕೆಳಭಾಗದ ಭೂಮಿಯನ್ನು ಕ್ಷೌರಿಕರಿಗೆ ತೆರಿಗೆ ರಹಿತವಾಗಿ ಕೊಟ್ಟ ವಿವರವಿದೆ. ಇದರಿಂದ ಅಂದಿನ ಸಮಾಜದಲ್ಲಿ ತೀರ ಕೆಳಸ್ತರದಲ್ಲಿರುವ ಕ್ಷೌರಿಕರು ಸಹ ಭೂಒಡೆತನವನ್ನು ಹೊಂದಿರುವ ಬಗ್ಗೆ ವಿವರವಿದೆ.[೧೦]

೭. **ಮತ್ತನಡುವಿನ ಸೀಮೆ :** ಮತ್ತೋಡು ಹೊಸದುರ್ಗ ತಾಲೂಕಿನ ಒಂದು ಹೋಬಳಿ ಕೇಂದ್ರವಾಗಿದೆ. ಕ್ರಿ. ಶ. ೧೬೦೪ರಲ್ಲಿ ಮತ್ತೋಡು ಅಂಶದ ಮೂಲಪುರುಷ ಚಿನ್ನದ ಗಿರಿಯಪ್ಪನಾಯಕನು ಆನೆಯನ್ನು ಪಳಗಿಸಿ ಪೆನುಗೊಂಡೆಯ ಅಧಿಪತಿ ವೆಂಕಟಪತಿರಾಯನಿಂದ ಲಕ್ಕನಹಳ್ಳಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನು ಬಳುವಳಿಯಾಗಿ ಪಡೆದಿದ್ದನು. ಅರೆಹಳ್ಳಿ ಗ್ರಾಮವು ಈ ಸೀಮೆಗೆ ಸೇರಿದ ಗ್ರಾಮವೆಂದು ಶಾಸನದಿಂದ ತಿಳಿಯುತ್ತದೆ. ಚಿತ್ರದುರ್ಗದ ರಾಜವೀರ

ಮದಕರಿನಾಯಕನ ಭಾವಮೈದನಾದ ಮತ್ತೊಂದು ಹಾಲಪ್ಪನಾಯಕನೆಂಬುವನು ಚಿತ್ರದುರ್ಗದ ದನಗಳು ತನ್ನ ಸೀಮೆಯ ಸರಹದ್ದಿನಲ್ಲಿ ಬಂದು ಮೇಯುತ್ತಿರುವ ವೇಳೆಯಲ್ಲಿ ಕಟ್ಟಿಹಾಕುವುದಕ್ಕೆ ಹೈದರಾಲಿಯ ಸಹಾಯವನ್ನು ಪಡೆದಿದ್ದನು. ಹಾಗೆಯೇ ಚಿತ್ರದುರ್ಗದ ನಾಯಕ ಅರಸರ ಸೋಲಿಗೆ ಇವನು ಕಾರಣನಾಗಿರುವ ಬಗ್ಗೆ ವಿವರವಿದೆ.[೧೧]

೮. **ಜಗಳೂರು ಸೀಮೆ :** ಇಂದು ಜಗಳೂರು ತಾಲೂಕು, ದಾವಣಗೆರೆ ಜಿಲ್ಲಾ ಕೇಂದ್ರಕ್ಕೆ ಸೇರಿದೆ. ೧೯೯೭ಕ್ಕೆ ಮೊದಲು ಚಿತ್ರದುರ್ಗ ಜಿಲ್ಲೆಯ ಒಂಭತ್ತು ತಾಲೂಕು ಕೇಂದ್ರಗಳಲ್ಲಿ ಒಂದಾಗಿದ್ದಿತು. ಕ್ರಿ. ಶ. ೧೫೨೭ರ ನಿಬಗೂರು ಶಾಸನದಲ್ಲಿ ಜಗಳೂರು ಸೀಮೆಯೆಂದು ಕರೆಯಲ್ಪಟ್ಟಿದೆ. ಕೃಷ್ಣದೇವರಾಯನ ಕಾಲದ ಈ ಶಾಸನವು ತಿಳಿಸುವಂತೆ ಅಂದಿನ ಜಗಳೂರು ಸೀಮೆಯನ್ನು ರಂಗನಾಥರೌತನ ಮಗ ವಿಶ್ವನಾಥರೌತ ಆಡಳಿತ ನಡೆಸುತ್ತಿದ್ದನೆಂದು ತಿಳಿಸುತ್ತದೆ. ಇವರು ಆರ್ಯ ಕ್ಷತ್ರಿಯ ಸಮುದಾಯಕ್ಕೆ ಸೇರಿದವರೆಂದು ಹೇಳುತ್ತದೆ. ಕ್ರಿ. ಶ. ೧೬೮೦ರ ಒಂದು ಶಾಸನವು ಜಗಳೂರು ನಾಡು ಎಂದು ಉಲ್ಲೇಖಿಸಲ್ಪಟ್ಟಿದೆ. ಕ್ರಿ. ಶ. ೧೬೮೩ರ ಕಸವನಹಳ್ಳಿ ಶಾಸನವು ಆ ಗ್ರಾಮವು ಜಗಳೂರು ಸೀಮೆಗೆ ಸೇರಿದ ಗ್ರಾಮವೆಂಬುದಾಗಿ ವಿವರವಿದೆ.[೧೨] ಹೀಗಾಗಿ ವಿಜಯನಗರ ಕಾಲದ ನಂತರ ಚಿತ್ರದುರ್ಗದ ನಾಯಕ ಅರಸರ ಆಡಳಿತಕ್ಕೊಳಪಟ್ಟ ಪ್ರದೇಶವಾಗಿತ್ತು.

೯. **ಬಿಳಿಚೋಡು ಸೀಮೆ :** ಈಗ ಜಗಳೂರು ತಾಲೂಕಿಗೆ ಸೇರಿರುವ ಹೋಬಳಿ ಕೇಂದ್ರವಾಗಿದೆ. ಕ್ರಿ. ಶ. ೧೫೫೬ರ ಶಾಸನದಲ್ಲಿ ಇದು ಕೊಟ್ಟೂರು ಚಾವಡಿಯ ಉಚ್ಚಂಗಿ ವೇಂಠಿಗೆ ಸೇರಿದ ಬಿಳಿಚೋಡು ಸೀಮೆಯಾಗಿತ್ತು. ಕ್ರಿ.ಶ.೧೫೫೪ರ ಶಾಸನವು ಬಿಳಿಚೋಡು ಸೀಮೆಗೆ ದಮ್ಮಪ್ಪನಾಯಕನ ಪ್ರತಿನಿಧಿಯಾದ ಬೈಯಪ್ಪನಾಯಕನ ಮಗ ಕೃಷ್ಣಪ್ಪನಾಯಕನು ಅಮರನಾಯಕನಾಗಿದ್ದುದಾಗಿ ಹೇಳುತ್ತದೆ. ಅವನು ತನಗೆ ಸೇರಿದ್ದ ಬಿಳಿಚೋಡು ಗ್ರಾಮದಲ್ಲಿ ಕುರುಬರು ಕೊಡಬೇಕಾಗಿದ್ದ "ಕುರಿ ತೆರಿಗೆ"ಯನ್ನು ತೆಗೆದು ಹಾಕಿದ ಬಗ್ಗೆ ವಿವರವಿದೆ. ಬಿಳಿಚೋಡಿನವನೇ ಆದ ಬಿಚ್ಚುಗತ್ತಿ ಭರಮಣ್ಣನಾಯಕನು ಕ್ರಿ. ಶ. ೧೬೮೯ರಲ್ಲಿ ಚಿತ್ರದುರ್ಗದ ನಾಯಕ ಅರಸನಾಗುತ್ತಾನೆ. ಈ ದೃಷ್ಟಿಯಿಂದ ಬಿಳಿಚೋಡು ಸೀಮೆಯು ವಿಜಯನಗರ ಕಾಲಾನಂತರವೂ ಒಂದು ಆಡಳಿತ ಕೇಂದ್ರವಾಗಿತ್ತು. ಹಾಗೆಯೇ ಈ ಪ್ರದೇಶವು ಕೃಷಿ ಆಧಾರಿತ ಸಮಾಜದ ಮೇಲೆ ನಿಯಂತ್ರಣವನ್ನು ಹೊಂದಿರುವ ಬಗ್ಗೆ ಶಾಸನಗಳು ಸ್ಪಷ್ಟಪಡಿಸುತ್ತವೆ.[೧೩]

೧೦. ಹಿರಿಯೂರು ಸೀಮೆ : ಇಂದು ಹಿರಿಯೂರು, ಚಿತ್ರದುರ್ಗ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದೆ. ಕ್ರಿ. ಶ. ೧೫೧೧ರ ಶಾಸನದಲ್ಲಿ 'ಕುಂತಳ ದೇಶ ವಿಖ್ಯಾತೇ ಹಿರಿಯೂರಾಖ್ಯ ಸೀಮನಿ.....' ಎಂದಿದೆ. ಕ್ರಿ. ಶ. ೧೫೪೮ರ ಮಸ್ಕಲ್ಲು ಗ್ರಾಮದ ತಾಮ್ರಶಾಸನವು 'ಹಿರಿಯೂರು ಸ್ಥಳಾಂತರಗಳ ವಿವರವಿದೆ. ಆದರ ಮೇರೆಗೆ ಈ ಸೀಮೆಯಲ್ಲಿ ಹಿರಿಯೂರು ಸ್ಥಳ, ಹೊಸೂರು ಸ್ಥಳ, ಗೌಡನಹಳ್ಳಿ ಸ್ಥಳ, ಕುರುಬರಹಳ್ಳಿ ಸ್ಥಳ ಸಮಾವೇಶಗೊಂಡಿದ್ದವು. ಕ್ರಿ.ಶ. ೧೫೬೮ರ ಶಾಸನವು ಹಿರಿಯೂರು ಸೀಮೆಯ ಹರತಿಯ ಓಬಣ್ಣ ನಾಯಕನ ಮಗ ಮಹಾನಾಯಕಾಚಾರ್ಯ ಕೆಂಚಯ್ಯ ನಾಯಕನು ನದಿಯ ಕೆಳಭಾಗದ ಗ್ರಾಮವನ್ನು ಅಮರ ಮಾಗಣಿಯಾಗಿ ಮಹಾಮಾಂಡಲೇಶ್ವರ ರಾಮರಾಜ ತಿರುಮಲರಾಯನಿಂದ ಪಡೆದಿದ್ದನೆಂದು ಹೇಳಿದೆ.[೧೫]

ಒಟ್ಟಿನಲ್ಲಿ ಇವುಗಳಲ್ಲದೆ ಇನ್ನು ಹಲವು ಸೀಮೆಗಳಿದ್ದ ಬಗ್ಗೆ ಪಿ.ವಿ.ಕೃಷ್ಣಮೂರ್ತಿಯವರು ಶಾಸನದ ಆಧಾರದಿಂದ ಗುರುತಿಸಿದ್ದಾರೆ. ಅವುಗಳಲ್ಲಿ ದಾವಣಗೆರೆ ತಾಲೂಕಿನಲ್ಲಿರುವ ಬೇತೂರು ಸೀಮೆ, ಬಸವಾಪಟ್ಟಣ ಸೀಮೆ, ಗುಂಟನೂರು ಸೀಮೆ, ಬನ್ನಿಕೋಡು ಸೀಮೆ, ನವಾಬಕುವಾಡ ಸೀಮೆ, ಹರಿಹರ ಸೀಮೆ, ಕೊಡಗನೂರು ಸೀಮೆ, ಹೊರಕೆರೆದೇವರಪುರ ಸೀಮೆ ಮುಂತಾದವುಗಳು ಶಾಸನೋಕ್ತ ವಾಗಿರುವ ಆಡಳಿತ ವಿಭಾಗಗಳಾಗಿದ್ದವು.

ವಿಜಯನಗರ ಕಾಲದಲ್ಲಿ ಗ್ರಾಮಮಟ್ಟದಲ್ಲಿಯೂ ಅತಿ ಚಿಕ್ಕ ಆಡಳಿತ ಘಟಕಗಳಿರುವ ಬಗ್ಗೆ ಶಾಸನಗಳ ಆಧಾರದಿಂದ ಪಿ.ವಿ.ಕೃಷ್ಣಮೂರ್ತಿ ಅವರು ಹೀಗೆ ಗಮನಿಸಿದ್ದಾರೆ. "ಸೀಮೆಯ ಕೆಳಸ್ತರದಲ್ಲಿ 'ಸ್ಥಳ' ಮತ್ತು 'ಗ್ರಾಮ'ಗಳು ಬರುತ್ತವೆ. ಅನೇಕ ಗ್ರಾಮಗಳ ಸಮೂಹವೇ ಸ್ಥಳ. ಒಂದು ಸ್ಥಳದಲ್ಲಿ ಇಂತಿಷ್ಟೇ ಗ್ರಾಮಗಳಿರಬೇಕೆಂಬ ನಿಯಮವಿರಲಿಲ್ಲ. ಇವುಗಳು ಆಡಳಿತದ ಕೆಳಸ್ತರಗಳಲ್ಲಿ ಇರುವ ವಿಭಾಗಗಳಾಗಿದ್ದವು. ವಿಜಯನಗರ ಆಡಳಿತ ಕಾಲದಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಇವುಗಳಲ್ಲಿ ಒಂದೆರಡು ಸ್ಥಳಗಳನ್ನು, ಒಂದು ಹಳ್ಳಿಯನ್ನು ಪಡೆದಿದ್ದ ಅಮರನಾಯಕರಿದ್ದರು. ಅವರು ಚಕ್ರವರ್ತಿಯ ನೇರ ನಿಯಂತ್ರಣದಲ್ಲಿ ಅಥವಾ ಅಧೀನ ರಾಜರ ಹತೋಟಿಯಲ್ಲಿರುತ್ತಿದ್ದರು. ಇಂತಹ ಅಮರ ನಾಯಕರನ್ನು ಶಾಸನಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು. 'ಗೌಡನಹಳ್ಳಿಯ ಸ್ಥಳ' ಇದು ಹತ್ತು ಗ್ರಾಮಗಳನ್ನೊಳಗೊಂಡಂತಹ ಒಂದು ಸ್ಥಳವಾಗಿತ್ತೆಂಬ ಅಂಶವು ಕ್ರಿ. ಶ. ೧೫೪೮ರ ತಾಮ್ರ ಶಾಸನದಿಂದ ತಿಳಿದುಬರುತ್ತದೆ. ಗೌಡನ ಹಳ್ಳಿಯ ಗ್ರಾಮವು ಹಿರಿಯೂರು ತಾಲೂಕಿನ ಜವಗೊಂಡನಹಳ್ಳಿ ಹೋಬಳಿಯಲ್ಲಿದೆ. 'ಕುರುಬನಹಳ್ಳಿಯ ಸ್ಥಳ'ವು

ಹಿರಿಯೂರು ಮಸ್ಕಲ್ಲ ಗ್ರಾಮದ ಕ್ರಿ.ಶ.೧೫೪೮ರ ತಾಮ್ರ ಶಾಸನದಲ್ಲಿ ತಿಳಿದುಬರುತ್ತದೆ.[೧೫] ಈ ಸ್ಥಳವು ೧೩ ಗ್ರಾಮಗಳನ್ನೊಳಗೊಂಡ ಒಂದು ಪುಟ್ಟ ಪ್ರಾದೇಶಿಕ ವಿಭಾಗವಾಗಿತ್ತು. ಇದೇ ರೀತಿ 'ಲಕ್ಕಿಹಳ್ಳಿ ಸ್ಥಳ' ಎನ್ನುವ ಪ್ರದೇಶವು ಹಿರಿಯೂರು ಸೀಮೆಗೆ ಸೇರಿದ ಮತ್ತು ಏಳು ಗ್ರಾಮಗಳನ್ನೊಳಗೊಂಡಂತಹ ಸ್ಥಳವೆಂದು ಶಾಸನದಲ್ಲಿ ತಿಳಿದುಬರುತ್ತದೆ" ಎಂದಿದ್ದಾರೆ. 'ಲಕ್ಕಿಹಳ್ಳಿ'ಯ ಸುತ್ತಮುತ್ತಲ ಹಳ್ಳಿಗಳನ್ನೊಳಗೊಂಡಂತಹ ಪ್ರದೇಶವನ್ನು ಲಕ್ಕಿಹಳ್ಳಿ ಸ್ಥಳವೆಂದು ಕರೆಯಲಾಗಿತ್ತು. ಹಾಗೆಯೇ 'ಅಣಜಿ ಸ್ಥಳ'ವನ್ನು ದಾವಣಗೆರೆ ತಾಲೂಕಿನಲ್ಲಿರುವ ನೀರತಡಿ ಗ್ರಾಮದ ಶಾಸನ ಉಲ್ಲೇಖಿಸುತ್ತದೆ. ಅದರಲ್ಲಿ ಬರುವಂತೆ, ನೀರತಡಿ ಗ್ರಾಮವು ಅಣಜಿ ಸ್ಥಳಕ್ಕೆ ಸೇರಿದ್ದಿತು. ಅಣಜಿ ಮತ್ತು ನೀರತಡಿ ಗ್ರಾಮಗಳೆರಡೂ ಈಗ ಅನುಗೋಡು ಹೋಬಳಿಗೆ ಸೇರಿವೆ. ಜೊತೆಗೆ ಅಣಬೂರು ಸ್ಥಳ, ಅರಳಿಹಾಳ ಸ್ಥಳ, ತವನಿಧಿ ಸ್ಥಳ ಮತ್ತು ನುಲಿಯನೂರು ಸ್ಥಳ ಇನ್ನು ಮುಂತಾದವು ಪ್ರಮುಖ ಆಡಳಿತ ವಿಭಾಗಗಳಾಗಿದ್ದವು. ಇವು ವಿಜಯನಗರ ಆಡಳಿತ ಕಾಲದಲ್ಲಿ ಪ್ರಮುಖ ಪಾತ್ರವಹಿಸಿದ್ದುದನ್ನು ಗಮನಿಸಬಹುದು.[೧೬]

ವಿಜಯನಗರ ಅರಸರ ಅಧೀನದಲ್ಲಿ ಅಮರನಾಯಕರಾಗಿ ಚಿತ್ರದುರ್ಗ ಪ್ರದೇಶದಲ್ಲಿ ಹರತಿ, ನಾಯಕನಹಟ್ಟಿ, ಮತ್ತೋಡು, ಸಂತೇಬೆನ್ನೂರು ಮತ್ತು ಚಿತ್ರದುರ್ಗ ನಾಯಕರು ಪ್ರಮುಖರಾಗಿದ್ದರು. ವಿಜಯನಗರ ಅರಸರು ಚಿತ್ರದುರ್ಗ ಪ್ರದೇಶದ ಪಾಳೆಯಗಾರರ ಅಸ್ತಿತ್ವಕ್ಕೆ ಕಾರಣರಾಗಿದ್ದರು. ಈ ಸಾಮ್ರಾಜ್ಯವನ್ನು ಕುರಿತಂತೆ ಚರಿತ್ರೆಕಾರರಲ್ಲಿ ಒಮ್ಮತ ಅಭಿಪ್ರಾಯವಿಲ್ಲ. ಉದಾಹರಣೆಗೆ ಪ್ರೊ. ಕೆ. ಎ. ನೀಲಕಂಠಶಾಸ್ತ್ರಿ ಮತ್ತು ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ವಿಜಯನಗರ ಸಾಮ್ರಾಜ್ಯದಲ್ಲಿ ಕೇಂದ್ರೀಕೃತ ಆಡಳಿತ ವ್ಯವಸ್ಥೆ ಇದ್ದಿತೆಂದು ವಿವರಿಸುತ್ತಾರೆ. ಆದರೆ ಎ.ವಿ.ವೆಂಕಟರತ್ನಂ ಅವರು ವಿಜಯನಗರ ಸಾಮ್ರಾಜ್ಯದ ಸ್ವರೂಪವು ಸಂಯುಕ್ತ ಊಳಿಗಮಾನ್ಯ ಮತ್ತು ವಿಕೇಂದ್ರೀಕೃತ ಅಂಶಗಳನ್ನೊಳಗೊಂಡ ಒಂದು ಸಾಮ್ರಾಜ್ಯ ವ್ಯವಸ್ಥೆಯಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ. ಬರ್ಟನ್ ಸ್ಟೈನ್ ತನ್ನ "ಸೆಗ್ಮೆಂಟರಿ ಸಿದ್ಧಾಂತದಲ್ಲಿ" ವಿಜಯನಗರ ಸಾಮ್ರಾಜ್ಯವು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಹೊಂದಿರಲಿಲ್ಲ. ಅದು ಸ್ಥಳೀಯವಾಗಿ ಉತ್ಪಾದಿಸಲ್ಪಟ್ಟ ಸಂಪತ್ತು ಸ್ಥಳೀಯವಾಗಿಯೇ ಹಂಚಲ್ಪಡುತ್ತಿತ್ತು ಎಂದಿದ್ದಾನೆ. ವಿಜಯನಗರವು "ತುಂಡುರಾಜ್ಯಗಳ ಒಕ್ಕೂಟ" ಎಂಬ ಅವನ ಅಭಿಪ್ರಾಯವೂ ಇದೆ. ಈ ಸೈದ್ಧಾಂತಿಕ ಹಿನ್ನೆಲೆಗಳಲ್ಲೇ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಆದರೆ ಕ್ರಿ.ಶ.೧೫೬೫ರಲ್ಲಿ ವಿಜಯನಗರ ಪತನಾನಂತರ ದಕ್ಷಿಣ ಭಾರತದಲ್ಲಿ ವಿಜಯನಗರ

ಸಾಮ್ರಾಜ್ಯದಂತೆ ರಾಜಕೀಯ ಕೇಂದ್ರೀಯ ನಿಯಂತ್ರಣ ವ್ಯವಸ್ಥೆ ಮತ್ತೆ ಕಾಣಿಸಿಕೊಳ್ಳಲಿಲ್ಲ. ಹೀಗಾಗಿ ಕರ್ನಾಟಕದಾದ್ಯಂತ ಸಣ್ಣಪುಟ್ಟ ಪಾಳೆಯಗಾರರು ತಲೆ ಎತ್ತಿದ್ದರು. ಚಿತ್ರದುರ್ಗದಲ್ಲಿ ಅಸ್ತಿತ್ವಕ್ಕೆ ಬಂದ ನಾಯಕನಹಟ್ಟಿ, ಹರತಿ, ಮತ್ತೋಡು, ಸಂತೇಬೆನ್ನೂರು ಮುಂತಾದವರಲ್ಲಿ ಚಿತ್ರದುರ್ಗ ನಾಯಕ ಅರಸರು ಪ್ರಮುಖರಾಗಿದ್ದರು.[೧೭]

ವಿಜಯನಗರೋತ್ತರ ಕರ್ನಾಟಕದ ಪ್ರಬಲ ಸಂಸ್ಥಾನಿಕರಲ್ಲಿ ಚಿತ್ರದುರ್ಗದ ನಾಯಕ ಅರಸರು ಪ್ರಮುಖರಾದವರು. ಇವರ ವಂಶಜರನ್ನು ಮದಕರಿನಾಯಕರೆಂದು ಕರೆಯುತ್ತಾರೆ. ಚಿತ್ರದುರ್ಗವನ್ನು ಕೇಂದ್ರವಾಗಿರಿಸಿಕೊಂಡು ಸುಮಾರು ಹನ್ನೊಂದು ಮಂದಿ ಅರಸರು ಕ್ರಿ. ಶ. ೧೫೬೮ ರಿಂದ ೧೭೭೯ರವರೆಗೆ ಒಟ್ಟು ಎರಡೂನೂರ ಹನ್ನೊಂದು ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಈ ನಾಯಕರು ಕಾಮಗೇಟಿ ವಂಶೀಯರೆಂದೂ ವಾಲ್ಮೀಕಿ ಗೋತ್ರೋದ್ಭವರೆಂದೂ ಶಾಸನೋಕ್ತರಾಗಿದ್ದಾರೆ. ಅವರಿಗೆ ಮಹಾನಾಯಕಾಚಾರ್ಯರೆಂಬ ಬಿರುದಿದ್ದಿತು. 'ಕಾಮಗೇಟಿ ಕಸ್ತೂರಿ' ಎಂಬ ಪ್ರಶಸ್ತಿಯೂ ಇದ್ದಿತು.

ವಿಜಯನಗರ ಸಾಮಂತ ಒಕ್ಕೂಟ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಚಿತ್ರದುರ್ಗ ಪ್ರದೇಶವು ಒಂದು ಭಾಗವಾಗಿತ್ತು. ಚಿತ್ರದುರ್ಗದ ನಾಯಕತ್ವಕ್ಕೆ ಬಲವಾದ ತಳಹದಿಯನ್ನು ಹಾಕಿದವನು ತಿಮ್ಮಣ್ಣನಾಯಕ. ಅವನ ರಾಜಕೀಯ ಜೀವನವು ಅಮರನಾಯಕನಾಗಿ ಪ್ರಾರಂಭವಾಗಿ ಹೊಳಲ್ಕೆರೆಯನ್ನು ಅಮರ ಮಾಗಣಿಯನ್ನಾಗಿಯೂ, ನಂತರದಲ್ಲಿ ಚಿತ್ರದುರ್ಗ ಮತ್ತು ಹಿರಿಯೂರು ಪ್ರಾಂತ್ಯವನ್ನು ಸೇರಿಸಿ ಕೊಳ್ಳುತ್ತಾನೆ. ಇವನು ವಿಜಯನಗರ ಅರಸರ ಆದೇಶವನ್ನು ಪಾಲಿಸುವುದರ ಜೊತೆಗೆ ಅವರು ನಡೆಸಿದ ಯುದ್ಧಗಳಲ್ಲಿ ಭಾಗವಹಿಸಿದ್ದನು.

ಚಿತ್ರದುರ್ಗ ಚರಿತ್ರೆಯ ಎಲ್ಲ ವಿಧದ ಘಟನೆಗಳಿಗೂ ಕಾಲಮಾನವನ್ನು ಸೂಚಿಸುವ ಶ್ರೀ ಚಿನ್ಮೂಲಾದ್ರಿ ಗಿರಿದುರ್ಗದಲ್ಲಿ ಆಳಿದ ಹಿಂದಿನ ಅರಸರುಗಳು ಮತ್ತು ಚಿನ್ಮೂಲಾದ್ರಿ ಪೂರ್ವಪರ ವಿಚಾರ ವಿಸ್ತಾರವೆಂಬ ವಂಶಾವಳಿಗಳು ಈ ಅರಸರು ೨೧೧ ವರ್ಷಗಳ ಕಾಲ ಆಡಳಿತ ನಡೆಸಿದ್ದ ರೆಂಬುದನ್ನು ಸಮರ್ಥಿಸುತ್ತವೆ. ಎಂ. ಎಸ್. ಪುಟ್ಟಣ್ಣ ಅವರು ತಮ್ಮ 'ಚಿತ್ರದುರ್ಗದ ಪಾಳೆಯಗಾರರು' ಕೃತಿಯಲ್ಲಿ ವಿಜಯನಗರ ರಾಜರು ಮತ್ತಿತಿಮ್ಮಣ್ಣನನ್ನು ಕ್ರಿ. ಶ. ೧೫೦೮ರಲ್ಲಿ ಹೊಳಲ್ಕೆರೆ ನಾಯಕನಾಗಿ ನೇಮಿಸಿದ್ದರೆಂದು ಉಲ್ಲೇಖಿಸಿದ್ದಾರೆ. ಇವರಲ್ಲಿ ಬರುವ ಪ್ರಮುಖ ನಾಯಕ ಅರಸರೆಂದರೆ ಮತ್ತಿತಿಮ್ಮಣ್ಣನಾಯಕ ಕ್ರಿ. ಶ. ೧೫೬೮-೧೫೮೯, ಗಡ್ಡದ ಮದಕರಿನಾಯಕ ಕ್ರಿ. ಶ. ೧೬೮೯-

೧೬೦೨, ಒಂದನೇ ಕಸ್ತೂರಿ ರಂಗಪ್ಪನಾಯಕ ಕ್ರಿ. ಶ. ೧೬೦೨-೧೬೫೨, ಇಮ್ಮಡಿ ಮದಕರಿನಾಯಕ ಕ್ರಿ. ಶ. ೧೬೫೨-೧೬೭೪, ಇಮ್ಮಡಿ ಓಬ್ಬಣನಾಯಕ ಕ್ರಿ. ಶ. ೧೬೭೪-೧೬೭೫, ಚಿಕ್ಕಣನಾಯಕ ಕ್ರಿ. ಶ. ೧೬೭೫-೧೬೮೬, ಮುಮ್ಮಡಿ ಮದಕರಿನಾಯಕ ಕ್ರಿ. ಶ. ೧೬೮೬-೧೬೮೯, ಬಿಚ್ಚುಗತ್ತಿ ಭರಮಣ್ಣನಾಯಕ ಕ್ರಿ. ಶ. ೧೬೮೯-೧೭೨೧, ಹಿರೇ ಮದಕರಿನಾಯಕ ಕ್ರಿ. ಶ. ೧೭೨೧-೧೭೪೮, ಇಮ್ಮಡಿ ಕಸ್ತೂರಿ ರಂಗಪ್ಪನಾಯಕ ಕ್ರಿ.ಶ.೧೭೪೮-೧೭೫೪ ಹಾಗೂ ಕೊನೆಯ ಮದಕರಿನಾಯಕ ಕ್ರಿ. ಶ. ೧೭೫೪-೧೭೭೯ ಪ್ರಮುಖ ನಾಯಕ ಅರಸರಾಗಿದ್ದರು.[೧೮](ನಕ್ಷೆ ೨ ನೋಡಿ)

ಹೈದರಾಲಿ ಮತ್ತು ಟಿಪ್ಪುಸುಲ್ತಾನ್ (೧೭೭೯ - ೧೭೯೯)

೧೮ನೇ ಶತಮಾನದ ರಾಜಕೀಯದಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನ್, ಆಡಳಿತ ಮತ್ತು ರೆವಿನ್ಯೂ ಸುಧಾರಣೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದರು. ಹೈದರಾಲಿಗೆ ತನ್ನ ಕನಸಿನ ಶಕ್ತಿಯುತ ರಾಜ್ಯವನ್ನು ಕಟ್ಟುವುದಕ್ಕೆ ಇನ್ನೂ ಒಂದು ಸ್ಥಳವನ್ನು ಗೆಲ್ಲುವುದು ಅವಶ್ಯವಾಗಿತ್ತು. ಚಿತ್ರದುರ್ಗ ಪ್ರದೇಶವನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳಲು ಮಾಡಿದ ಪ್ರಯತ್ನವನ್ನು ಇಲ್ಲಿ ಚರ್ಚಿಸಬಹುದಾಗಿದೆ. ಚಿಕ್ಕಬಳ್ಳಾಪುರ, ಶಿರಾ, ಹೊಸಕೋಟೆ, ರಾಯದುರ್ಗ ಮತ್ತು ಹರಪನಹಳ್ಳಿ ಮತ್ತಿತರ ಪಾಳೆಯಗಾರರು ಹೈದರಾಲಿಗೆ ಶರಣಾದಂತೆ ಚಿತ್ರದುರ್ಗದ ನಾಯಕ ಅರಸರು ಚಿತ್ರದುರ್ಗವನ್ನು ಮುತ್ತಿಗೆ ಹಾಕಿದಾಗ ಹೈದರಾಲಿಗೆ ಸುಲಭವಾಗಿ ಶರಣಾಗಲಿಲ್ಲ. ಹೈದರ್‌ಗೆ ಇಲ್ಲಿನ ನೈಸರ್ಗಿಕ ಸನ್ನಿವೇಶಗಳಿಂದಾಗಿಯೇ ಚಿತ್ರದುರ್ಗವನ್ನು ಬೇಗ ಗೆಲ್ಲುವುದು ಸಾಧ್ಯವಾಗಲಿಲ್ಲ. ಹೈದರನ ಜೀವನ ಚರಿತ್ರೆಕಾರ ಹುಸೇನ್ ಅಲಿ ಕಿರ್ಮಾನಿಯು ಅಲ್ಲಿ ನಡೆದ ಎಲ್ಲಾ ಘಟನೆಗಳನ್ನು ವಿವರಿಸಿದ್ದಾನೆ. ಅವನ ಮಾತಿನಲ್ಲೇ ಹೇಳುವುದಾದರೆ ಹೈದರಾಲಿಯ ಒಂದು ಲಕ್ಷ ಸೈನ್ಯವನ್ನು ತಂದು ಮುತ್ತಿಗೆ ಹಾಕಿದನು. ಮದಕರಿ ನಾಯಕನ ಮೇಲೆ ದ್ವೇಷಕಾರುತ್ತಿದ್ದ ಕೆಲವು ಸಂಬಂಧಿಕರು ಹಾಗೂ ಅವನ ಸೈನ್ಯದಲ್ಲಿದ್ದ ಕುತುಬ್ ಉದ್ದೀನ್-ಖಾನ್, ಅಹಮದ್ ಖಾನ್ ಮತ್ತು ಜಮಾಲ್ ಖಾನ್ ಮುಂತಾದ ದಂಡನಾಯಕರು ಸಹ ಈ ಗರೀಬ ಪಾಳೆಯಗಾರ ನಮಗೆ ಏನು ಕೊಡಲು ಸಾಧ್ಯವಿಲ್ಲ. ಅದೇ ಹೈದರಾಲಿ ನವಾಬ ಸಾಹೇಬರಿಗೆ ಸಹಾಯ ಮಾಡಿದರೆ ಅವರು ಜಹಗೀರು ಕೊಡುವರೆಂದು ನಂಬಿ ವಿಶ್ವಾಸ ದ್ರೋಹ ಮಾಡಿದರು. ಹೈದರಾಲಿಗೆ ಮದಕರಿನಾಯಕನ ಮೇಲೆ ದ್ವೇಷವಿರಲು ಮತ್ತೊಂದು ಮುಖ್ಯವಾದ ಕಾರಣವೆಂದರೆ ಮದಕರಿನಾಯಕನು ಒಮ್ಮೆ ಹೈದರಾಲಿಗೂ, ಮತ್ತೊಮ್ಮೆ ಮರಾಠರಿಗೂ ಸಹಾಯ ಮಾಡುತ್ತಿದ್ದರಿಂದ ಅವನು ನಂಬಿಕೆಗೆ ಅರ್ಹನಲ್ಲವೆಂಬ ಭಾವನೆಯು

ಬೆಳೆದಿತ್ತು. ಉದಾಹರಣೆಗೆ ಮದಕರಿನಾಯಕನು ೧೭೭೧ರಲ್ಲಿ ಮರಾಠರ ಮಾಧವರಾವ್ ಜೊತೆ ಸೇರಿ ಹೈದರ್ ವಿರುದ್ಧ ಯುದ್ಧಕ್ಕೆ ಸೇರಿದ್ದನು.[೧೯]

ಕ್ರಿ. ಶ. ೧೭೭೯ ರಲ್ಲಿ ಚಿತ್ರದುರ್ಗದಲ್ಲಿ ಹೈದರಾಲಿ ಮತ್ತು ಮದಕರಿನಾಯಕನ ಸಮರ ಸಿದ್ಧತೆಗಳು ನಡೆಯುತ್ತಿರುವಾಗಲೇ ಅರಮನೆಯ ಸಮಾಲೋಚನಾ ಮಂದಿರದಲ್ಲಿ ಚಿತ್ರದುರ್ಗ ನಾಯಕರ ಆಹ್ವಾನದಂತೆ ಬಂದ ನಾಯಕನಹಟ್ಟಿ, ಗುಡೆಕೋಟೆ, ಹಿರಿಯೂರಿನ ಪಾಳೆಯಗಾರರು, ಹೊಸದುರ್ಗದ ದೊಡ್ಡ ಮದಕರಿನಾಯಕ, ದುರ್ಗದ ದಳವಾಯಿಗಳು ಮತ್ತು ಸರದಾರರು ಯುದ್ಧ ತಂತ್ರದ ಬಗ್ಗೆ ಚರ್ಚೆ ನಡೆಸಿದರು.

ಕ್ರಿ. ಶ. ೧೭೭೯ರಲ್ಲಿ ಯುದ್ಧ ಪ್ರಾರಂಭವಾದಂತೆ ಹೈದರನ ಸೈನ್ಯವು ಕೋಟೆಯ ಪಕ್ಕದ ಕಾಡುಗಳನ್ನು ಕಡಿದು ಬೆಟ್ಟದ ಇಳುಕಲಲ್ಲಿ ಬತೇರಿಗಳನ್ನು ಕಟ್ಟಿ ಅವುಗಳ ಮೇಲೆ ಫಿರಂಗಿಗಳನ್ನು ಜೋಡಿಸಿ ಕೋಟೆಯ ಗೋಡೆಗೆ ಒಡೆಯತೊಡಗಿದರು. ಹೈದರಾಲಿಯು ಚಿತ್ರದುರ್ಗ ಪ್ರದೇಶ ತನ್ನ ವಶವಾಗಲೇಬೇಕೆಂಬ ದೃಢ ನಿರ್ಧಾರದಿಂದ ಸಂಚಿನ ಸನ್ನಾಹದಲ್ಲಿ ಕೈ ಹಾಕಿದನು. ಇದರಿಂದಲೂ ಯಶಸ್ಸು ಕಾಣದ ಹೈದರ್ ಸೈನ್ಯದಲ್ಲಿದ್ದ ಅಧಿಕಾರಿಗಳನ್ನು ಜಹಗೀರು ಮತ್ತು ಹಣದ ಆಸೆ ತೋರಿಸಿ ಶತ್ರುವಿನ ಸೈನ್ಯದ ರಹಸ್ಯವನ್ನು ಕಂಡುಕೊಂಡನು. ಉಗ್ರವಾದ ಕಾಳಗದಲ್ಲಿ ಚಿತ್ರದುರ್ಗ ಪತನಗೊಂಡಿತು. ಚಿತ್ರದುರ್ಗದ ಕೋಟೆಯು ೧೭೭೯ ಮಾರ್ಚ್‌ನಲ್ಲಿ ಹೈದರಾಲಿಯ ವಶವಾಯಿತು.[೨೦] ನಂತರ ಮದಕರಿನಾಯಕ, ದೊಡ್ಡ ಮದಕರಿನಾಯಕ (ಮದಕರಿನಾಯಕನ ಅಣ್ಣ) ಮತ್ತು ತಮ್ಮನಾದ ಪರಶುರಾಮಪ್ಪನಾಯಕ ಮುಂತಾದವರನ್ನೆಲ್ಲಾ ಶ್ರೀರಂಗಪಟ್ಟಣಕ್ಕೆ ಸಾಗಿಸಿ ಸೆರೆಯಲ್ಲಿಟ್ಟನು. ಜೊತೆಗೆ ಸುಮಾರು ೨೦ಸಾವಿರ ನಾಯಕ ಸೈನಿಕರನ್ನು ಶ್ರೀರಂಗಪಟ್ಟಣಕ್ಕೆ ಸಾಗಿಸಿ ಅವರಿಗೆ ಸೈನಿಕ ಶಿಕ್ಷಣವನ್ನು ಕೊಟ್ಟು 'ಭೇಲ ಬೆಟಾಲಿಯನ್' ಎಂಬ ಸೈನಿಕ ಪಡೆಯನ್ನು ರಚಿಸಿದನು.

ಚಿತ್ರದುರ್ಗವನ್ನು ವಶಪಡಿಸಿಕೊಂಡ ಹೈದರಾಲಿ ಷೇಕ್ ಅಯಾಜನನ್ನು ಇಲ್ಲಿಯ ಸಿವಿಲ್ ಮತ್ತು ಮಿಲಿಟರಿ ಗೌರ್ನರನನ್ನಾಗಿ ನೇಮಕ ಮಾಡಿದನು. ಸಂಧು ಅಯಾಜಿಯನ್ನು ಖಿಲ್ಲೇ ಬಂದೋಬಸ್ತಿಗೆ ನೇಮಿಸಿ ಮುಲ್ಕಿಬಾಜಿಗೆ ಕಳಿನರಸಪ್ಪನನ್ನು ನೇಮಿಸಿದನು. ಚಿತ್ರದುರ್ಗ ಪ್ರದೇಶವು ಮೈಸೂರು ಸಂಸ್ಥಾನದ ಒಂದು 'ಸುಭ' ಅಥವಾ 'ಪ್ರಾಂತ್ಯ'ವಾಯಿತು(ನಕ್ಷೆ ೩ ನೋಡಿ)

ಚಿತ್ರದುರ್ಗವನ್ನು ಗೆದ್ದ ಹೈದರಾಲಿಗೆ ಅದರ ಆಡಳಿತಾಭಿವೃದ್ಧಿಗೆ ಹೆಚ್ಚಿನ ಗಮನವನ್ನು ಕೊಡಲು ಸಾಧ್ಯವಾಗಲಿಲ್ಲ. ಅವನ ಗಮನವೆಲ್ಲ ಪ್ರಬಲ ವೈರಿಗಳಾದ ಬ್ರಿಟೀಷರನ್ನು ಎದುರಿಸುವುದರ ಕಡೆಗೆ ಕೇಂದ್ರೀಕೃತವಾಗಿದ್ದಿತು. ಚಿತ್ರದುರ್ಗದಲ್ಲಿ ಹೈದರ್ ಮತ್ತು ಟಿಪ್ಪು ಬಲವಾದ ಕಲ್ಲಿನ ಕೋಟೆಯನ್ನು ಕಟ್ಟಿಸಿದರೆಂದು ಹಯವದನರಾವ್ ತಿಳಿಸುತ್ತಾರೆ. ಚಿತ್ರದುರ್ಗಕ್ಕೆ ಏಳು ಮೈಲಿ ದೂರದಲ್ಲಿರುವ ವಿಜಾಪುರದಲ್ಲಿ ಹೈದರ್ ಒಂದು ಅಂತಃಪುರವನ್ನು ಕಟ್ಟಿಸಿದನು.[೨೧]

ಹೈದರನ ಅಕಾಲ ಮರಣದ ನಂತರ ಚಿತ್ರದುರ್ಗದ ಆಡಳಿತದ ಕಡೆ ಟಿಪ್ಪು ತನ್ನ ಗಮನವನ್ನು ಹರಿಸಿದನು. ಚಿತ್ರದುರ್ಗದ ಮಾಂಡಲೀಕನಾಗಿದ್ದ ಷೇಕ್‌ಅಯಾಜನಿಗೂ ಟಿಪ್ಪುವಿಗೂ ವೈಮನಸ್ಯ ವಿದ್ದುದರಿಂದ ಟಿಪ್ಪು ಅವನನ್ನು ಅವಮಾನಗೊಳಿಸಿದನು. ಕ್ರಿ. ಶ. ೧೭೮೨ರಲ್ಲಿ ಟಿಪ್ಪು ಸುಲ್ತಾನನು ಚಿತ್ರದುರ್ಗದ ಆಡಳಿತವನ್ನು ನೋಡಿಕೊಳ್ಳಲು ಜೈನುಲ್-ಅಬಿ-ದೀನ್ ಭಕ್ಷಿಯಾಗಿ ನೇಮಿಸಲ್ಪಟ್ಟಿದ್ದನು. ಅದೇ ರೀತಿಯಾಗಿ ದಿವಾನ್ ಸಿಫಾದರ್, ರಿಸಲ್ದಾರ್ ಮೊದಲಾದ ಅಧಿಕಾರಿಗಳು ಅಲ್ಲಿ ನೇಮಿಸಲ್ಪಟ್ಟಿದ್ದರು. ಜೈನುಲ್-ಅಬಿ-ದಿನ್‌ಗೆ ಟಿಪ್ಪುಸುಲ್ತಾನ್ ಕ್ರಿ. ಶ. ೧೭೮೫ರ ಆಗಸ್ಟ್ ೧೮ರಂದು ಪತ್ರ ಬರೆದು ಚಿತ್ರದುರ್ಗದಲ್ಲಿರುವ ಸ್ಥಳೀಯ ಅಮಲ್ದಾರರು ಮತ್ತು ಅವರ ಕುಟುಂಬದವರನ್ನು ಒಂದು ಕಡೆ ಇಡಬೇಕೆಂದು ತಿಳಿಸಿದ್ದನು. ಈ ಅಮಲ್ದಾರರು ಮಧ್ಯಕಾಲೀನ ಭಾರತದಲ್ಲಿ ಕಂದಾಯ ಸಂಗ್ರಹಿಸುವ ಅಧಿಕಾರಿಗಳಾಗಿದ್ದರು. ಟಿಪ್ಪುಸುಲ್ತಾನ್ ಚಿತ್ರದುರ್ಗಕ್ಕೆ 'ಫರಕ್ಕಬಾದ್' ಎಂಬ ಹೆಸರು ಇಟ್ಟನು. ಅವನು ತನ್ನ ಕೊನೆಯ ದಿನಗಳಲ್ಲಿ ಚಿತ್ರದುರ್ಗದ ಆಡಳಿತದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದನು. ಇಲ್ಲಿದ್ದ ಟಂಕಸಾಲೆಯಲ್ಲಿ ಅವನು ಎರಡು ವಿಧದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಫರೂಖಿ, ಅಹಮ್ಮದಿ, ಹೈದರಿ ಮೊದಲಾದ ಹೊಸ ನಾಣ್ಯಗಳು ೧೭೮೫ರಿಂದ ಚಿತ್ರದುರ್ಗದಲ್ಲಿ ಚಲಾವಣೆಗೆ ಬಂದವು, ಅಲ್ಲದೆ ಮುಸ್ಲಮಾನರಿಗೆ ಟಿಪ್ಪುಸುಲ್ತಾನ್ 'ಜುಮ್ಮಾ' ಮಸೀದಿಯನ್ನು ಕಟ್ಟಿಸಿಕೊಟ್ಟಿದ್ದನು.

ಕ್ರಿ. ಶ. ೧೭೯೯ರಲ್ಲಿ ಟಿಪ್ಪುವನ್ನು ಕೊನೆಗಾಣಿಸಿದ ಬ್ರಿಟಿಶ್ ಗೌರ್ನರ್ ಜನರಲ್ ವೆಲ್ಲೆಸ್ಲಿ ಮೈಸೂರು ಸಂಸ್ಥಾನದಲ್ಲಿ ಒಡೆಯರ ಮನೆತನವನ್ನು ಪುನರ್‌ಸ್ಥಾಪಿಸಿದನು. ಆಗ ಚಿತ್ರದುರ್ಗವು ಮೈಸೂರು ಸಂಸ್ಥಾನದ ಒಂದು ವಿಭಾಗವಾಯಿತು. ಹಾಗೆಯೇ ಈ ಎಲ್ಲಾ ಭೂ ಪ್ರದೇಶಗಳು ಬ್ರಿಟಿಶರ ಪರೋಕ್ಷ ನಿಯಂತ್ರಣಕ್ಕೆ ಒಳಗಾಗಿದ್ದವು. ರೆಸಿಡೆಂಟ್ ಬ್ಯಾರಿಕ್ಲೋಸ್ ಮತ್ತು ದಿವಾನ್ ಪೂರ್ಣಯ್ಯನವರು ಮುಮ್ಮಡಿ ಕೃಷ್ಣರಾಜರೊಡನೆ ಚರ್ಚಿಸಿ ಚಿತ್ರದುರ್ಗದ ಆಡಳಿತಾಧಿಕಾರಿಯಾಗಿ ಲೆಫ್ಟಿನೆಂಟ್ ಕರ್ನಲ್ ಕ್ಲೋಸ್ ಅವರನ್ನು ನೇಮಕ ಮಾಡಿದ್ದರು. ೧೮೩೧ರ ನಂತರ ಈ ವಿಭಾಗವು ಬ್ರಿಟಿಶ್‌ರ ನೇರ

ಆಡಳಿತಕ್ಕೆ ಒಳಪಟ್ಟಿತ್ತು. ಈ ವ್ಯವಸ್ಥೆ ೧೮೮೧ರಲ್ಲಿ ಕಮೀಷನರ್ ಆಡಳಿತ ಮೈಸೂರು ಸಂಸ್ಥಾನದಲ್ಲಿ ಕೊನೆಗೊಳ್ಳುವವರಿಗೂ ಇತ್ತು. ಈ ವೇಳೆಯಲ್ಲಿ ಕ್ಯಾಪ್ಟನ್ ಎಫ್. ಚಾರ್ಮ್ಸ್‌ನು ಚಿತ್ರದುರ್ಗ ವಿಭಾಗದ ಆಡಳಿತಾಧಿಕಾರಿಯಾಗಿದ್ದನು. ಈ ಅವಧಿಯಲ್ಲಿ ಚಿತ್ರದುರ್ಗ ವಿಭಾಗ ಅನೇಕ ಭಾರಿ ಆಡಳಿತಾತ್ಮಕ ಬದಲಾವಣೆಯನ್ನು ಹೊಂದುತ್ತದೆ. ಬ್ರಿಟಿಶ್ ಆಡಳಿತ ಕಾಲದಲ್ಲಿ .ಚಿತ್ರದುರ್ಗ ವಿಭಾಗವನ್ನು ತುಮಕೂರು ಜಿಲ್ಲೆಗೆ ಸೇರಿಸಿದ್ದರು. ತುಮಕೂರು ಈ ವೇಳೆಯಲ್ಲಿ ಚಿತ್ರದುರ್ಗದ ಆಡಳಿತ ಕೇಂದ್ರವಾಗಿತ್ತು. ೧೮೬೩ರಲ್ಲಿ ಚಿತ್ರದುರ್ಗ ವಿಭಾಗವನ್ನು ನಗರ ವಿಭಾಗಕ್ಕೆ ಸೇರಿಸಿದ್ದರು. ೧೮೭೯ರಲ್ಲಿ ಈ ವಿಭಾಗವನ್ನು ರದ್ದುಗೊಳಿಸಿದರು. ೧೮೮೨ರಲ್ಲಿ ಚಿತ್ರದುರ್ಗವನ್ನು ಒಂದು ಉಪ ವಿಭಾಗವನ್ನಾಗಿ ಮಾಡಿ ತುಮಕೂರು ಜಿಲ್ಲೆಯೊಂದಿಗೆ ಸೇರಿಸಿದ್ದರು.[೨೨]

ಮೈಸೂರು ಸಂಸ್ಥಾನದ ಆಡಳಿತವನ್ನು ಹತ್ತನೇ ಚಾಮರಾಜ ಒಡೆಯರು (೧೮೮೧-೧೮೯೪), ನಾಲ್ವಡಿ ಕೃಷ್ಣರಾಜ ಒಡೆಯರು (೧೯೦೨-೧೯೪೦) ಮತ್ತು ಜಯಚಾಮರಾಜ ಒಡೆಯರು (೧೯೪೦-೪೭) ಆಡಳಿತ ನಡೆಸಿದರು. ಜೊತೆಗೆ ತಮ್ಮ ಆಡಳಿತದ ನಿರ್ವಹಣೆಗೆ ಒಬ್ಬ ದಿವಾನರನ್ನು ಕಾರ್ಯಾಂಗದ ಪ್ರಮುಖರಾದ ಇಬ್ಬರು ಕೌನ್ಸಿಲರುಗಳನ್ನು ಹೊಂದಿದ್ದರು. ೧೮೮೧ರಲ್ಲಿ ಕಮೀಷನರ್ ಆಡಳಿತ ಕೊನೆಗೊಂಡರೂ ಕೆಲವು ಕರಾರಿನ ಪ್ರಕಾರ ಬ್ರಿಟಿಶ್ ಆಡಳಿತದಲ್ಲಿ ಬ್ರಿಟಿಶ್ ಪ್ರತಿನಿಧಿ 'ರೆಸಿಡೆಂಟ್' ಎಂಬ ಅಧಿಕಾರಿಯ ಪಾತ್ರವೂ ಇದ್ದಿತು. ಈ ಕಾಲಾವಧಿಯಲ್ಲಿ ಶ್ರೀ ರಂಗಾಚಾರ್ಲು(೧೮೮೧-೮೩), ಕೆ. ಶೇಷಾದ್ರಿ ಐಯ್ಯರ್ (೧೮೮೩-೧೯೦೧), ಸರ್.ಎಂ. ವಿಶ್ವೇಶ್ವರಯ್ಯ (೧೯೧೨-೧೯೧೮), ಎಂ. ಕಾಂತರಾಜ ಅರಸ್ (೧೯೧೮-೧೯೨೬), ಸರ್ ಮಿರ್ಜಾ ಇಸ್ಮಾಯಿಲ್ (೧೯೨೬-೧೯೪೧) ಮತ್ತು ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮುಂತಾದವರ ದಿವಾನಗಿರಿಯಲ್ಲಿ ಮೈಸೂರು ಸಂಸ್ಥಾನದ ಆಡಳಿತವನ್ನು ನಡೆಸಲಾಯಿತು. ಕಮೀಷನರ್‌ಗಳ ಆಡಳಿತಾವಧಿಯಲ್ಲಿದ್ದ ಆಡಳಿತಾತ್ಮಕ ವಿಧಾನಗಳು ನಂತರದ ಕಾಲಾವಧಿಯಲ್ಲಿಯೂ ಮುಂದುವರೆದು ಅಂದಿನ ಮೈಸೂರು ಸಂಸ್ಥಾನವನ್ನು ಒಂಭತ್ತು ಜಿಲ್ಲಾ ಕೇಂದ್ರಗಳನ್ನಾಗಿ ವಿಭಾಗಿಸಲಾಗಿತ್ತು. ಪ್ರತಿಯೊಂದು ಜಿಲ್ಲಾ ಕೇಂದ್ರದ ಆಡಳಿತವು ನೇರವಾಗಿ ಮೈಸೂರು ಸಂಸ್ಥಾನದ ಆಡಳಿತದೊಂದಿಗೆ ಸಂಪರ್ಕ ಹೊಂದಿತ್ತು.

ಚಿತ್ರದುರ್ಗ ಪ್ರದೇಶವು ಆಡಳಿತದ ದೃಷ್ಟಿಯಿಂದ ಜಿಲ್ಲೆಯಾದದ್ದು ಬಹುಮುಖ್ಯವಾದದ್ದಾಗಿದೆ. ಅದು ೧೮೭೭ರಲ್ಲಿ ಹಿಂದಿನ ರೆವಿನ್ಯೂ ಸರ್ವೆ ನಕ್ಷೆಯಲ್ಲಿ ಕಂಡುಬರುವಂತೆ ಹಿಂದಿನ ಕಣಕುಪ್ಪಾ ತಾಲೂಕಿನ ಸರಹದ್ದುಗಳನ್ನು ಸೇರಿಸಿ ಜಗಳೂರು ತಾಲೂಕು ಎಂದು ಹೊಸ ತಾಲೂಕುಕೇಂದ್ರ ರಚಿತ

ವಾಯಿತು. ಇದರ ಪುನರಚನೆಯು ಜಗಳೂರು, ಮೊಳಕಾಲ್ಮೂರು ಸಬ್‌ತಾಲೂಕಗಳನ್ನಾಗಿ ಏಪ್ರಿಲ್ ೧೮೮೬ರಲ್ಲಿ ರಚಿಸಲಾಯಿತು.

ಸಂ. ೨೨೮ ಏಪ್ರಿಲ್ ತಿಂಗಳ ೧೮೮೬ರಲ್ಲಿ ಚಿತ್ರದುರ್ಗವನ್ನು ಜಿಲ್ಲಾ ಕೇಂದ್ರವೆಂದು ಕರೆಯಲಾಯಿತು. ಅದೇ ವರ್ಷ ಮೇ ತಿಂಗಳಿನಲ್ಲಿ ಆಡಳಿತವನ್ನು ವರ್ಗಾಯಿಸಲಾಯಿತು. ಇದರಡಿ ಕೆಳಕಂಡ ಏಳು ತಾಲೂಕುಗಳನ್ನು ಸದರೀ ಜಿಲ್ಲೆಯಲ್ಲಿ ಸೇರಿಸಲಾಯಿತು. ಶಿವಮೊಗ್ಗ ವಿಭಾಗದಿಂದ ದಾವಣಗೆರೆ ತಾಲೂಕು ೨೨೬ನೇ ಸಂಖ್ಯೆಯುಳ್ಳ ಈ ಪ್ರದೇಶದಲ್ಲಿಯೇ ಹರಿಹರ ಉಪತಾಲೂಕು ರಚನೆಯಾಯಿತು. ಅದೇ ರೀತಿಯಾಗಿ ತುಮಕೂರು ವಿಭಾಗದಿಂದ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ಮತ್ತು ಚಿತ್ರದುರ್ಗ ತಾಲೂಕುಗಳನ್ನು ಸೇರಿಸಿ ಕೇಂದ್ರವಾಗಿ ಮಾಡಿ ಪ್ರತ್ಯೇಕವಾದ ಜಿಲ್ಲಾ ಆಡಳಿತ ಕೇಂದ್ರವಾಗಿ ಚಿತ್ರದುರ್ಗವು ಪರಿವರ್ತನೆ ಪಡೆಯಿತು. ನಂತರ ಚಿತ್ರದುರ್ಗ ಜಿಲ್ಲೆಯ ಸಿವಿಲ್ ಆಡಳಿತಕ್ಕಾಗಿ ಶಿವಮೊಗ್ಗ ಜಿಲ್ಲೆಯ ಜಡ್ಜಿಯವರ ಅಧಿಕಾರಕ್ಕೂ, ಕ್ರಿಮಿನಲ್ ಆಡಳಿತಕ್ಕಾಗಿ ಶಿವಮೊಗ್ಗ ಡಿವಿಜನ್ನಿಗೂ ಒಳಪಟ್ಟಿತ್ತು.[೨೩] (ನಕ್ಷೆ ೪ ನೋಡಿ)

೧೮೮೧ ರಿಂದ ೧೯೪೭ರ ವರೆಗಿನ ಜಿಲ್ಲಾ ಆಡಳಿತದ ಸ್ವರೂಪವು ಬ್ರಿಟಿಶ್ ಕಮೀಷನರ್ ಕಾಲದಂತೆ ಮುಂದುವರೆದಿತ್ತು. ಇಲ್ಲಿ ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯನ್ನು ಒಂಭತ್ತು ತಾಲೂಕು ಕೇಂದ್ರಗಳಾಗಿ ವಿಭಾಗ ಮಾಡಲಾಗಿದ್ದು, ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು, ತಾಲೂಕಿನಲ್ಲಿ ಅಮಲ್ದಾರುಗಳು, ಹೋಬಳಿಮಟ್ಟದಲ್ಲಿ ಶೇಕ್‌ದಾರಗಳು, ಗ್ರಾಮಗಳಲ್ಲಿ ಪಟೇಲರು, ಶಾನುಭೋಗರು ಆಡಳಿತಾತ್ಮಕ ಕಾರ್ಯ ನಿರ್ವಹಣೆಯನ್ನು ವಹಿಸಿಕೊಂಡಿದ್ದರು.[೨೪]

ಅಂದಿನ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಚಿತ್ರದುರ್ಗ ಜಿಲ್ಲೆಯ ಪ್ರಮುಖ ಸಮುದಾಯಗಳೆಂದರೆ ಲಿಂಗಾಯತ, ಬೇಡ(ನಾಯಕ), ಒಕ್ಕಲಿಗ, ಆದಿಕರ್ನಾಟಕ, ಮುಸ್ಲಿಂ, ಕುರುಬ, ಗೊಲ್ಲ, ಇನ್ನಿತರ ಸಮುದಾಯಗಳು ಇದ್ದರೂ ೧೮೮೧-೧೯೪೭ರ ಅವಧಿಯಲ್ಲಿ ಹೆಚ್ಚು ಪ್ರಾಬಲ್ಯದಿಂದ ಗ್ರಾಮಾಂತರ ಪ್ರದೇಶದ ಪ್ರಧಾನ ಜಾತಿಗಳಾಗಿ ಅಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅಗ್ರಮಾನ್ಯತೆಯನ್ನು ಪಡೆದ ಸಮುದಾಯಗಳಲ್ಲಿ ಲಿಂಗಾಯತರು ಮತ್ತು ಒಕ್ಕಲಿಗರ ಸಮುದಾಯಗಳು ಸೇರುತ್ತವೆ. ಸಂಖ್ಯೆಯ ದೃಷ್ಟಿಯಲ್ಲಿ ಹಾಗೂ ಆರ್ಥಿಕ ಮತ್ತು ರಾಜಕೀಯ ದೃಷ್ಟಿಯಲ್ಲಿ ಪ್ರಮುಖರಾಗಿರುವ ಲಿಂಗಾಯತರು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕರೆ, ದಾವಣಗೆರೆ, ಹರಿಹರ, ಜಗಳೂರು ತಾಲೂಕುಗಳಲ್ಲಿ ಗ್ರಾಮಾಂತರ ಪ್ರದೇಶದ ಬದುಕನ್ನು ಊರಿನ ಆಗುಹೋಗುಗಳ

ದೃಷ್ಟಿಯಿಂದ ನೋಡಿದರೆ ಮಹತ್ವದ ಪಾತ್ರವನ್ನು ವಹಿಸಿದರು. ಲಿಂಗಾಯತ ಸಮುದಾಯದ ಮುಂದಾಳುಗಳು ಹೇಳಿದಂತೆ ಉಳಿದ ಸಮುದಾಯಗಳು ಕೇಳುವ ಅವರ ಕೃಪೆಗಾಗಿ ಕಾಯುವ ವ್ಯವಸ್ಥೆ ಇದ್ದಿತು. ಇಲ್ಲಿನ ತಾಲೂಕುಗಳ ಬರಬಲೂತಿ ರಿಜಿಸ್ಟಾರ್‌ಗಳ ಅಧ್ಯಯನದಿಂದಲೂ (ಈ ತಾಲೂಕುಗಳಾದ್ಯಂತ ಕ್ಷೇತ್ರಕಾರ್ಯ ಕೈಗೊಂಡ ನನಗೆ ಈ ಬಹುತೇಕ ತಾಲೂಕುಗಳ) ಗ್ರಾಮಗಳಲ್ಲಿ ಗ್ರಾಮದ ದೊಡ್ಡಕುಳ, ದೊಡ್ಡ ಭೂಮಾಲೀಕ, ದೊಡ್ಡರೈತ, ದೊಡ್ಡ ಬಂಧುಬಳಗವುಳ್ಳ ಕುಟುಂಬದ ಯಜಮಾನ, ಈ ಲಕ್ಷಣಗಳಿಂದಾಗಿ ಅವನ ಮಾತು ಸರಕಾರದ ಆಜ್ಞೆಗಿಂತ ಶಕ್ತಿಶಾಲಿಯಾಗಿತ್ತು ಎಂಬುದು ತಿಳಿಯುತ್ತದೆ. ೧೯ನೇ ಶತಮಾನದ ಪ್ರಾರಂಭದಲ್ಲಿ ಚಿತ್ರದುರ್ಗ ಜಿಲ್ಲೆಯ ಗ್ರಾಮದ ಆಡಳಿತವನ್ನು ಪಟೇಲ ಅಥವಾ ಗೌಡರುಗಳೇ ನೋಡಿಕೊಳ್ಳುತ್ತಿದ್ದರು. ಗ್ರಾಮದ ಆಡಳಿತವು ಸಂಸ್ಥಾನದ ಆಡಳಿತಕ್ಕಿಂತ ದೊಡ್ಡದಾಗಿತ್ತು ಎಂಬ ಭಾವನೆ ಬೇರೂರಿತ್ತು. ಅನೇಕ ವ್ಯಾಜ್ಯಗಳು ಎಷ್ಟೋ ಸಲ ಗೌಡ ಅಥವಾ ಪಟೇಲರುಗಳಿಂದ ತೀರ್ಮಾನಕ್ಕೊಳಪಡುತ್ತಿದ್ದವು. ಗೌಡರ ನ್ಯಾಯ ಬರೀ ತಮ್ಮ ಸಮುದಾಯಕ್ಕಷ್ಟೇ ಅಲ್ಲದೇ ಇಡೀ ಗ್ರಾಮವನ್ನು ನಿಯಂತ್ರಿಸುತ್ತಿದ್ದರು. ಈ ಗೌಡಿಕೆಯು ತಲೆಮಾರುಗಳಿಂದ ಅನುಭವಿಸುತ್ತಾ ಬಂದ ಹಕ್ಕಾಗಿರುತ್ತದೆ.[೨೫]

ಜಿಲ್ಲೆಯ ಒಂಭತ್ತು ತಾಲೂಕುಗಳಲ್ಲಿಯೂ ಇರುವ ಗ್ರಾಮಗಳಲ್ಲಿ ಇದೇ ರೀತಿಯಾಗಿ ಆಡಳಿತ ವ್ಯವಸ್ಥೆ ಜಾರಿಯಲ್ಲಿತ್ತು. ಇದರ ಹೊರತಾಗಿ ಯಾವುದೇ ರೀತಿಯಾದ ಬದಲಾವಣೆ ಇರಲಿಲ್ಲ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಕ್ಷೇತ್ರಕಾರ್ಯದಲ್ಲಿ ಕಂದಾಯ ಆಡಳಿತ ವ್ಯವಸ್ಥೆಯು ಶ್ರೇಣೀಕೃತವಾಗಿದ್ದುದು ಲಭ್ಯವಿರುವ ದಾಖಲೆಗಳಿಂದ ತಿಳಿದುಬರುತ್ತದೆ. ಇಲ್ಲಿ ಅಧಿಕಾರವು ಮೇಲಿನಿಂದ ಕೆಳಕ್ಕೂ, ಜವಾಬ್ದಾರಿಯು ಕೆಳಗಿನಿಂದ ಮೇಲ್ಮುಖವಾಗಿಯೂ ಸಾಗುವುದನ್ನು ಗಮನಿಸಬಹುದು. ತಾಲೂಕಿನ ಅಧಿಕಾರವರ್ಗ ಕೆಳಸ್ತರದಲ್ಲಿ ತಳವಾರ, ಶಾನುಭೋಗ, ಪಟೇಲರು, ಶೇಖ್‌ದಾರ್ ಮತ್ತು ಅಮಲ್ದಾರರನ್ನು ಒಳಗೊಂಡಿತ್ತು. ಜಿಲ್ಲಾ ಮಟ್ಟದಲ್ಲಿ ಡೆಪ್ಯುಟಿ ಕಮೀಷನರ್ ಉನ್ನತ ಮಟ್ಟದ ಕಂದಾಯ ಅಧಿಕಾರಿಗಳಾಗಿದ್ದರು. ೧೯೩೩ರ ಹೊಳಲ್ಕೆರೆ ತಾಲೂಕಿನಲ್ಲಿ ೧೯೫ ಜನರು ಪಟೇಲರು, ೪೭ಜನರು ಶ್ಯಾನುಭೋಗರು ಇದ್ದರು. ಈ ಹುದ್ದೆಗಳು ಆನುವಂಶೀಯವಾಗಿದ್ದವು. ಅಂದಿನ ಪಟೇಲರುಗಳ ಸಮುದಾಯದ ಅಂಕಿಅಂಶಗಳು ಈ ಕೆಳಗಿನಂತೆ ಇರುತ್ತದೆ.

೪೭ಜನ ಶ್ಯಾನುಭೋಗರು ಬ್ರಾಹ್ಮಣರೇ ಆಗಿದ್ದರು. ಏಕೆಂದರೆ ಸಾಮಾನ್ಯವಾಗಿ ಓದು ಬರಹವನ್ನು ಕಲಿತಿರುವ ಸಮುದಾಯ ಇವರೇ ಆಗಿದ್ದರು. "ಹೊಳಲ್ಕೆರೆ ತಾಲೂಕು ಬಾರಾಬಲೂತಿ ರಿಜಿಸ್ಟರ್ ೧೯೩೩, ತಾಲೂಕು ಅಧಿಕಾರಿಗಳ ಕಛೇರಿ ಹೊಳಲ್ಕೆರೆ" ಎನ್ನುವ ದಾಖಲೆಯ ಪ್ರಕಾರ ಪ್ರಮುಖ

ಭೂಮಾಲೀಕ ವರ್ಗ ಲಿಂಗಾಯತರೆಂಬುದಾಗಿಯೂ, ತಾಲೂಕಿನ ಬಹುತೇಕ ಗ್ರಾಮಗಳನ್ನು ಅವರು ನಿಯಂತ್ರಿಸುತ್ತಿದ್ದಾರೆ ಎಂಬುದು ತಿಳಿದುಬರುತ್ತದೆ. ಇಲ್ಲಿ ಸುಮಾರು ೧೧೭ ಜನ ಲಿಂಗಾಯಿತ ಪಟೇಲರುಗಳು ಕಾರ್ಯನಿರ್ವಹಿಸುತ್ತಿದ್ದು ಎರಡನೆ ಸ್ಥಾನವನ್ನು ಕುಂಚಟಿಗರು ಹೊಂದಿರುವುದು ತಿಳಿಯುತ್ತದೆ. ಇಡೀ ಜಿಲ್ಲೆಯನ್ನು ಗಮನಿಸಿದಾಗ ಜನಸಂಖ್ಯಾ ಬಾಹುಳ್ಯಕ್ಕಿಂತ ಮುಖ್ಯವಾಗಿ ಭೂಮಾಲೀಕ ವರ್ಗವಾಗಿದ್ದವರು ಲಿಂಗಾಯಿತರು ಮತ್ತು ಒಕ್ಕಲಿಗರು. ಎಂದರೆ ತಪ್ಪಾಗಲಾರದು. ಈ ಮೇಲಿನ ದಾಖಲೆಗಳ ಪ್ರಕಾರ ತಯಾರಿಸಿದ 'ಪಟೇಲ' ಎನ್ನುವ ಅಧಿಕಾರವನ್ನು ಹೊಂದಿದ ವಿವಿಧ ಸಮುದಾಯಗಳ ಪಟ್ಟಿಯು ಈ ಕೆಳಗಿನಂತಿದೆ.

ಬಣಜಿಗರು	೦೫	ಗೊಲ್ಲರ	೧೩	ಬೇಡರು	೦೮
ಲಿಂಗಾಯಿತರು	೧೧೭	ಮ್ಯಾಸನಾಯಕರು	೦೩	ನಾಮಧಾರಿ ಒಕ್ಕಲಿಗರು	೦೩
ಕುಂಚಿಟಿಗರು	೨೫	ಬ್ರಾಹ್ಮಣರು	೦೬	ಕುರುಬರು	೦೪
ವಡ್ಡರು	೦೧	ದೇವಾಂಗ	೦೧	ಜಂಗಮರು	೦೨
				ಒಟ್ಟು	೧೯೫

ಈ ಅಂಕಿ ಅಂಶಗಳನ್ನು ಗಮನಿಸಿದಾಗ ಎರಡು ಅಂಶಗಳು ಕಂಡುಬರುತ್ತವೆ. ಮೊದಲನೆಯದಾಗಿ ಸಾಮಾಜಿಕವಾಗಿ ಉನ್ನತ ಸ್ಥಾನಗಳು ಪ್ರಭಾವಿ ವರ್ಗಗಳಿಗೆ ಮಾತ್ರ ದೊರಕಿರುವುದನ್ನು ನೋಡಬಹುದು. ಏಕೆಂದರೆ ಇವರಿಗೆಲ್ಲಾ ಭೂಹಿಡುವಳಿಯ ಮಾಲೀಕತ್ವದ ತತ್‌ಸಂಬಂಧಿ ಅಧಿಕಾರಗಳು ಇದ್ದವು. ಎರಡನೆಯದಾಗಿ ಈ ಎಲ್ಲಾ ವೈಪರೀತ್ಯಗಳ ಮಧ್ಯೆಯೂ ಪಟೇಲರಂತಹ ಹುದ್ದೆಗಳನ್ನು ಎಲ್ಲ ಸಮುದಾಯದವರು ಹೊಂದಿದ್ದರೆಂಬುದು ಗಮನಾರ್ಹವಾಗಿದೆ. ಅಂದರೆ ಉನ್ನತ ಹುದ್ದೆಗಳು ಕೇವಲ ಸಾಮಾಜಿಕ ಹಿನ್ನೆಲೆಯನ್ನು ಅವಲಂಬಿಸಿ ಪ್ರಾಪ್ತವಾಗುತ್ತಿರಲಿಲ್ಲ. ಆದರೆ ಆಯಾ ಸಮುದಾಯಗಳ ಆರ್ಥಿಕ ಹಿನ್ನೆಲೆಗೆ ಅನುಗುಣವಾಗಿ ದೊರೆಯುತ್ತಿದ್ದವು ಎನ್ನುವುದು ಸ್ಪಷ್ಟ. ಅನುವಂಶಿಕವಾಗಿ ಗ್ರಾಮಗಳ ಮುಖಂಡತ್ವವನ್ನು ಹೊಂದಿರುವುದನ್ನು ನಾವಿಲ್ಲಿ ಗಮನಿಸಬಹುದು.[೨೬]

೧೯೩೧ರಲ್ಲಿ ಚಿತ್ರದುರ್ಗ ಜಿಲ್ಲೆಯ ಒಕ್ಕಲಿಗರ ಜನಸಂಖ್ಯೆ ೨.೩ರಷ್ಟು ಇದೆ. ಇದೇ ವೇಳೆಯಲ್ಲಿ ಲಿಂಗಾಯಿತರ ಜನಸಂಖ್ಯೆ ೨೧.೫ರಷ್ಟು ಇದೆ. ಅದೇ ೧೯೩೫ರ ಅಂಕಿ-ಸಂಖ್ಯೆಗಳನ್ನು ಗಮನಿಸಿದಾಗ

ಗ್ರಾಮಗಳ ಆಡಳಿತದ ಮುಖಂಡತ್ವ(ಗೌಡರು)ವನ್ನು ಹೊಂದಿದ ಒಕ್ಕಲಿಗರ ಸಂಖ್ಯೆ ೧೬.೭ರಷ್ಟು ಲಿಂಗಾಯಿತರ ಮುಖಂಡತ್ವವನ್ನು ಹೊಂದಿದ್ದ ಗೌಡರ ಸಂಖ್ಯೆ ೫೬.೬ ಅಂದರೆ ಜಿಲ್ಲೆಯ ಶೇಕಡ ೨೧.೫ರಷ್ಟು ಜನಸಂಖ್ಯೆಯುಳ್ಳ ಲಿಂಗಾಯಿತರು ಶೇಕಡ ೫೬.೬ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಪ್ರಭಾವವನ್ನು ಗ್ರಾಮದ ಗೌಡರಾಗಿ ಬೀರುವುದನ್ನು ಕಾಣಬಹುದು.[೨೨] ಇದೇ ಪರಿಸ್ಥಿತಿ ಸ್ವಾತಂತ್ರ್ಯಾನಂತರ ವೇಳೆಯಲ್ಲಿಯೂ ಕಂಡುಬರುತ್ತದೆ. ೧೯೪೭ರಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಎರಡು ಭೂಕಂದಾಯ ಉಪವಿಭಾಗಗಳು, ಒಂಭತ್ತು ತಾಲೂಕುಗಳು ಹಾಗೂ ಮೂವತ್ತು ಹೋಬಳಿಗಳಾಗಿ ವಿಭಾಗಿಸಿದರು. ಈ ವ್ಯವಸ್ಥೆ ೧೯೫೬ರವರೆಗೂ ಮುಂದುವರಿಯಿತು. ನಂತರ ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ವಿಭಜನೆಯಾದಾಗ ಚಿತ್ರದುರ್ಗ ಜಿಲ್ಲೆಯನ್ನು ಬೆಂಗಳೂರು ವಿಭಾಗಕ್ಕೆ ಸೇರಿಸಲಾಯಿತು. ೧೯೯೭ರಲ್ಲಿ ಕರ್ನಾಟಕ ಸರಕಾರವು ಚಿತ್ರದುರ್ಗ ಜಿಲ್ಲೆಯಲ್ಲಿದ್ದ ದಾವಣಗೆರೆಯನ್ನು ಹೊಸ ಜಿಲ್ಲೆಯನ್ನಾಗಿ ರಚಿಸಿತು(ನಕ್ಷೆ ೫,೬ ನೋಡಿ).

ಅಧ್ಯಯನದ ಸ್ವರೂಪ ಮತ್ತು ಉದ್ದೇಶಗಳು

ಯಾವುದೇ ಒಂದು ಪ್ರದೇಶದ ಚರಿತ್ರೆಯು ಆ ಪ್ರದೇಶದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಕ್ಷೇತ್ರಗಳು ಮಾತ್ರವಲ್ಲದೆ ವಿವಿಧ ಮಠ, ಮಂದಿರ, ಸಂಸ್ಥೆಗಳ ಸಮುದಾಯಗಳ ಅಂತರ್ ಸಂಬಂಧಗಳನ್ನು ಗಮನಿಸಿದಾಗ ಅವುಗಳ ಮಹತ್ವ ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗದ ಪ್ರಾದೇಶಿಕ ಚರಿತ್ರೆಯನ್ನು ತಿಳಿಯುವ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಭಾರತೀಯ ಇತಿಹಾಸ ರಚನಾ ಶಾಸ್ತ್ರದ ಸಂದರ್ಭದಲ್ಲಿ ನಾವು ಮುಖ್ಯವಾಗಿ ಎರಡು ಬಗೆಯ ಅಧ್ಯಯನ ಕ್ರಮಗಳನ್ನು ಗಮನಿಸಬಹುದು. ಒಂದನೆಯದು ಸ್ಥೂಲ ಸ್ತರದ ಚರಿತ್ರೆಯಾದರೆ, ಎರಡನೆಯದು ಸೂಕ್ಷ್ಮ ಸ್ತರದ ಚರಿತ್ರೆಯಾಗಿದೆ. ಸ್ಥೂಲ ಸ್ತರದ ಚರಿತ್ರೆ ಅಧ್ಯಯನ ಕ್ರಮವೆಂದರೆ ದೊಡ್ಡ ಸಾಮ್ರಾಜ್ಯದ ಹಾಗೂ ವಿಸ್ತಾರವಾದ ರಾಜ್ಯಗಳ ಚರಿತ್ರೆಯ ಅಧ್ಯಯನ ಕ್ರಮವಾಗಿರುತ್ತದೆ. ಇಂತಹ ಅಧ್ಯಯನ ಕ್ರಮವು ೧೮ನೇ ಶತಮಾನದಿಂದಲೂ ನಡೆಯುತ್ತಾ ಬಂದಿದೆ. ಆದರೆ ಸೂಕ್ಷ್ಮ ಸ್ತರದ ಅಧ್ಯಯನವು ಇದಕ್ಕಿಂತ ಭಿನ್ನವಾದದು. ಒಂದು ಸಂಸ್ಕೃತಿಯ ಬೆಳವಣಿಗೆಯ ದೃಷ್ಟಿಯಿಂದ ಇಂತಹ ಸೂಕ್ಷ್ಮ ಸ್ತರದ ರಾಜಕೀಯ, ಸಾಮಾಜಿಕ, ಆರ್ಥಿಕ ಘಟನೆಗಳು ಪ್ರಮುಖ ಪಾತ್ರ ವಹಿಸುತ್ತವೆ.[೨೩] ಈ ರೀತಿಯ ಸಬಾಲ್ಟರ್ನ್ ಅಧ್ಯಯನಗಳಿಂದ ಸಾಮಾನ್ಯ ಜನರ ಬದುಕು ಹಾಗೂ

ಪ್ರಾದೇಶಿಕ ಸಂಸ್ಕೃತಿಯ ಬೆಳವಣಿಗೆಯನ್ನು ಕುರಿತು ಸಂಶೋಧನೆ ಮಾಡುವುದು ಇಂದಿನ ಅವಶ್ಯಕತೆಯಾಗಿದೆ.

ಭಾರತದ ಉಪಖಂಡದಲ್ಲೆಲ್ಲಾ ಸರ್ವೇಸಾಮಾನ್ಯವಾಗಿ ಭೂಹಿಡುವಳಿಗಳ ಸ್ವರೂಪವು ಹೆಚ್ಚು ಕಡಿಮೆ ಒಂದೇ ರೀತಿ ಇರುವುದನ್ನು ನಾವು ಗಮನಿಸಬಹುದು. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತಿತರ ಕಾರಣಗಳಿಗಾಗಿ ಭೂಹಿಡುವಳಿಗಳನ್ನು ರಾಜ್ಯವು ವ್ಯಕ್ತಿಗಳಿಗೆ ಮತ್ತು ಸಮುದಾಯಗಳಿಗೆ ಶತಮಾನಗಳಿಂದಲೂ ನೀಡುತ್ತಾ ಬಂದಿವೆ. ಚಿತ್ರದುರ್ಗ ಪ್ರದೇಶವು ಇದರಿಂದ ಹೊರತೇನಲ್ಲ. ಪ್ರತಿ ಪ್ರದೇಶದ ಸಮುದಾಯಗಳ ಸ್ಥಾನಮಾನಗಳು ನಿರ್ಧಾರವಾಗಿರುವುದೇ ಕೃಷಿಗೊಳಪಟ್ಟ ಭೂಮಿಯ ಒಡೆತನದ ಆಧಾರದ ಮೇಲೆಯೇ. ಹೀಗಾಗಿ ಆಯಾಯ ಪ್ರದೇಶಗಳ ಸಾಮಾಜಿಕ ಸಂಬಂಧಗಳು ನಿರ್ಣಯಕ್ಕೆ ಒಳಪಡುವುದು ಭೂಮಿಯ ಮೇಲೆ ಹೊಂದಿರುವ ಒಡೆತನದಿಂದ ಎಂಬುದನ್ನು ನಾವಿಲ್ಲಿ ಗಮನಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಚಿತ್ರದುರ್ಗದ ಕೃಷಿ ಸಮುದಾಯಗಳು ಯಾವ ಯಾವ ರೀತಿಯ ಭೂಹಿಡುವಳಿಗಳನ್ನು ಯಾವ ಯಾವ ಕಾರಣಗಳಿಗಾಗಿ ಅನುಭವಿಸುತ್ತಾ ಬಂದಿವೆ ಹಾಗೂ ಭೂರಹಿತ ಸಮುದಾಯಗಳು ಭೂಹಿಡುವಳಿ ಹೊಂದಿರುವ ಸಮುದಾಯಗಳೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿವೆ ಎಂಬುದನ್ನು ವಿಶ್ಲೇಷಿಸುತ್ತದೆ.

ಈ ಮಹಾಪ್ರಬಂಧದ ಎರಡನೆಯ ಅಧ್ಯಾಯದಲ್ಲಿ ಚಿತ್ರದುರ್ಗ ಪ್ರದೇಶದ ಭೂಹಿಡುವಳಿಗಳು ಮತ್ತು ಭೂಸಂಬಂಧಿ ವಿಷಯಗಳನ್ನು ಕುರಿತು ವಿವೇಚಿಸಲಾಗಿದೆ. ಅಧ್ಯಾಯದ ಆರಂಭದಲ್ಲಿ ಚಿತ್ರದುರ್ಗ ಪ್ರದೇಶದ ೧೭೭೯ರ ವರೆಗಿನ ಭೂ ಹಿಡುವಳಿ ವ್ಯವಸ್ಥೆಯ ಸಮೀಕ್ಷೆ ಮಾಡಲಾಗಿದೆ. ಈ ಭಾಗದಲ್ಲಿ ವಿಜಯನಗರ ಅರಸರ ಸಮಕಾಲೀನರು, ಸಾಮಂತರು ಹಾಗೂ ವಿಜಯನಗರೋತ್ತರದಲ್ಲಿಯೂ ಆಡಳಿತ ನಡೆಸಿದ ನಾಯಕರ ಕಾಲದ ಭೂ ಹಿಡುವಳಿ ಹಾಗೂ ಕಂದಾಯ ವ್ಯವಸ್ಥೆ ಕುರಿತು ಚರ್ಚಿಸಲಾಗಿದೆ. ಈ ಅಧ್ಯಾಯದ ಎರಡನೇ ಭಾಗವನ್ನು ಅಧ್ಯಯದ ಅನುಕೂಲಕ್ಕಾಗಿ ಐದುಕಾಲಘಟ್ಟಗಳನ್ನಾಗಿ ವಿಭಜಿಸಿಕೊಳ್ಳಲಾಗಿದೆ. ಮೊದಲ ಘಟ್ಟದ ಅಧ್ಯಯನದಲ್ಲಿ ಹೈದರಾಲಿ ಟಿಪ್ಪು ಕಾಲದ, ಎರಡನೇ ಘಟ್ಟದಲ್ಲಿ ದಿವಾನ್ ಪೂರ್ಣಯ್ಯ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ, ಮೂರನೇ ಘಟ್ಟದಲ್ಲಿ ಕಮೀಷನರ್ ಕಾಲದ, ನಾಲ್ಕನೇ ಘಟ್ಟದಲ್ಲಿ ದಿವಾನರುಗಳ ಕಾಲದ, ಐದನೇ ಘಟ್ಟದಲ್ಲಿ ಸ್ವಾತಂತ್ರ್ಯ ನಂತರದ ಭೂಹಿಡುವಳಿ ವ್ಯವಸ್ಥೆಯನ್ನು ಚರ್ಚಿಸಲಾಗಿದೆ. ನಾಯಕ ಅರಸರ ಕಾಲಾವಧಿಯಿಂದ ಸ್ವಾತಂತ್ರ್ಯನಂತರದ ಕಾಲಾವಧಿಯವರೆಗೂ

ಮಿಷ್ಕಿ, ತರಿ, ಬಾಗಾಯ್ತು ಭೂಹಿಡುವಳಿ ವ್ಯವಸ್ಥೆಗಳೇ ಇವೆ. ಆದರೂ ಪ್ರತಿಯೊಂದು ಕಾಲಘಟ್ಟ ದಲ್ಲಿಯೂ ಭೂಹಿಡುವಳಿಗಳ ಒಡೆತನ ವರ್ಗಾವಣೆ, ಕಂದಾಯ ವ್ಯವಸ್ಥೆ, ಬದಲಾಗುತ್ತಾ ಹೋಗಿರು ವುದನ್ನು ಗುರುತಿಸಲಾಗಿದೆ. ೧೭೭೯ರಲ್ಲಿ ಚಿತ್ರದುರ್ಗದ ಮದಕರಿನಾಯಕನ ಪತನಾನಂತರದಲ್ಲಿ ಹೈದರ್ ಅಲಿ ಮತ್ತು ಟಿಪ್ಪುವಿನ ಅಧಿಕಾರ ಚಿತ್ರದುರ್ಗದಲ್ಲಿ ಮುಂದುವರೆಯುತ್ತದೆ. ಟಿಪ್ಪುವಿನ ಮರಣಾನಂತರದ ವರ್ಷಗಳಿಂದ ೧೯೫೬ನೇ ಇಸವಿಯವರೆಗಿನ ವಿವಿಧ ಘಟ್ಟಗಳ ಆಡಳಿತ ಸುಧಾರಣೆಯ ಬದಲಾವಣೆಗಳನ್ನು ಈ ಸಂದರ್ಭದಲ್ಲಿ ವಿವರವಾಗಿ ಅಭ್ಯಾಸ ಮಾಡಲಾಗಿದೆ. ಭೂಹಿಡುವಳಿಗಳ ಒಡೆತನ, ವರ್ಗಾವಣೆ, ಕಂದಾಯ ವ್ಯವಸ್ಥೆ ಇತ್ಯಾದಿ ವಿಚಾರಗಳ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಲಾಗಿದೆ. ಇದರೊಂದಿಗೆ ರೈತರು ಬ್ರಿಟಿಶ್ ಆಡಳಿತ ವ್ಯವಸ್ಥೆಯೊಂದಿಗೆ ಹೊಂದಿದ್ದ ಸಂಕೀರ್ಣ ಸಂಬಂಧಗಳನ್ನು ಅಭ್ಯಸಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಮೂರನೆಯ ಅಧ್ಯಾಯವು ಚಿತ್ರದುರ್ಗ ಪ್ರದೇಶದ ಭೂಹಿಡುವಳಿ ಸಮುದಾಯಗಳ ಸಾಮಾಜಿಕ ಅಧ್ಯಯನವನ್ನು ಒಳಗೊಂಡಿದೆ. ಚಿತ್ರದುರ್ಗ ಪ್ರದೇಶದ ಸಮಾಜವನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಈ ಪ್ರದೇಶದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿರುವ ಚಿತ್ರದುರ್ಗದ ಮುರುಘಮಠ ಮತ್ತು ಸಿರಿಗೆರೆಯ ತರಳಬಾಳು ಮಠಗಳನ್ನು ಭೂಹಿಡುವಳಿಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳ ಪಡಿಸಲಾಗಿದೆ. ತನ್ಮೂಲಕ ೧೯ ಮತ್ತು ೨೦ನೇ ಶತಮಾನದ ಸಾಮಾಜಿಕ ವ್ಯವಸ್ಥೆಯಲ್ಲಿ ಮಠಗಳ ಸಮುದಾಯಿಕ ಸಂಬಂಧಗಳನ್ನು ಕುರಿತು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಇದೇ ಅಧ್ಯಾಯದ ಎರಡನೇ ಭಾಗದಲ್ಲಿ ಚಿತ್ರದುರ್ಗ ಪ್ರದೇಶದ ಸಮಾಜದಲ್ಲಿರುವ ವಿವಿಧ ಸಮುದಾಯಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಕೃಷಿ ಆಧಾರಿತ ಸಮಾಜದಲ್ಲಿ ಭೂ ಹಿಡುವಳಿ ಹೊಂದಿದ ಮತ್ತು ಹೊಂದದ ಸಮುದಾಯಗಳ ಸಂಕೀರ್ಣ ಸಂಬಂಧಗಳನ್ನು ಇಲ್ಲಿನ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಒಟ್ಟು ಅಧ್ಯಾಯದಲ್ಲಿ ಚಿತ್ರದುರ್ಗ ಪ್ರದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಭೂಹಿಡುವಳಿಯ ಪಾತ್ರವೇನೆಂಬುದನ್ನು ಗ್ರಹಿಸಲು ಯತ್ನಿಸಲಾಗಿದೆ. ಚಿತ್ರದುರ್ಗ ಸಂಸ್ಥಾನದ ಧಾರ್ಮಿಕ ಕೇಂದ್ರಗಳಾದ ವಿವಿಧ ಮಠಗಳ ಭೂಒಡೆತನ ಸಂಬಂಧಗಳು ಹಾಗೂ ಅವುಗಳಿಗೆ ಪೂರಕವಾಗಿರುವ ಸಮುದಾಯಗಳು ಸಮಾಜದಲ್ಲಿ ಹೊಂದಿರುವ ಪ್ರಾಬಲ್ಯದ ಕಾರಣಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಭೂಒಡೆತನ ಹೊಂದಿರುವ ಮತ್ತು ಹೊಂದದ ಸಮುದಾಯಗಳ ಸಂಬಂಧಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯವು ಚಿತ್ರದುರ್ಗ ಪ್ರದೇಶದ ಭೂಹಿಡುವಳಿ ಸಮುದಾಯಗಳ ರಾಜಕೀಯ ಅಭಿವ್ಯಕ್ತತೆಯನ್ನು ಗುರುತಿಸುವ ಉದ್ದೇಶವನ್ನು ಹೊಂದಿದೆ. ಅದಕ್ಕಾಗಿ ಈ ಅಧ್ಯಾಯವನ್ನು ಹಲವು ಭಾಗಗಳಾಗಿ ವಿಭಾಗಿಸಿಕೊಂಡು ಆ ಮೂಲಕ ಸ್ವಾತಂತ್ರ್ಯ ಚಳವಳಿಯ ವಿವಿಧ ಆಯಾಮಗಳನ್ನು ಭೂಹಿಡುವಳಿಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಅದಕ್ಕೋಸ್ಕರ ಚಿತ್ರದುರ್ಗ ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಬೆಳವಣಿಗೆ, ಕಾಂಗ್ರೆಸ್ ಮತ್ತು ಮೈಸೂರು ಸಂಸ್ಥಾನ ಹಾಗೂ ರಾಷ್ಟ್ರೀಯ ಕಾಂಗ್ರೆಸ್ ನಾಯಕರ ಚಟುವಟಿಕೆಗಳನ್ನು, ಕ್ವಿಟ್ ಇಂಡಿಯ ಚಳವಳಿ, ಮೈಸೂರು ಚಲೋ ಚಳವಳಿಗಳನ್ನು ಪರಿಶೀಲಿಸಲಾಗಿದೆ. ಈ ಚಳವಳಿಗಳಲ್ಲಿ ಪ್ರಬಲ ಭೂಹಿಡುವಳಿ ಸಮುದಾಯಗಳೇ ಮುಂಚೂಣಿಯಲ್ಲಿದ್ದವೆಂಬುದನ್ನು ಕಂಡುಕೊಳ್ಳಲಾಗಿದೆ. ಮುಂದಿನ ಭಾಗವು ಏಕೀಕರಣ ಚಳವಳಿಯಲ್ಲಿ ಭೂ ಹಿಡುವಳಿ ಸಮುದಾಯಗಳು ವಹಿಸಿದ ಪಾತ್ರವನ್ನು ಬಿಂಬಿಸುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಭೂಹಿಡುವಳಿ ಸಮುದಾಯಗಳು ೨೦ನೇ ಶತಮಾನದಲ್ಲಿ ರಾಜಕೀಯ ಶಕ್ತಿಗಳಾಗುವ ಪ್ರಕ್ರಿಯೆಗಳನ್ನು ಒಳಗೊಂಡಿದೆ. ಇಂತಹ ಸಂದರ್ಭವನ್ನು ಸ್ವಾತಂತ್ರ್ಯ ಹೋರಾಟ ಹಾಗೂ ಏಕೀಕರಣ ಚಳವಳಿಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಪ್ರಸ್ತುತ ಮಹಾಪ್ರಬಂಧಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಪ್ರದೇಶದ ಚಾರಿತ್ರಿಕ ಹಿನ್ನೆಲೆ ಅಧ್ಯಯನದ ಸ್ವರೂಪ ಮತ್ತು ಉದ್ದೇಶಗಳನ್ನು ವಿವರಿಸಲಾಗಿದೆ. ಹಾಗೆಯೇ ಈ ಅಧ್ಯಾಯದ ಕೊನೆಯ ಭಾಗದಲ್ಲಿ ಅಧ್ಯಯನ ಸಮೀಕ್ಷೆಯನ್ನು ಮಾಡಲಾಗಿದೆ. ಆಕರಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಅಲ್ಲಿ ನೀಡಲಾಗಿದೆ.

ಅಧ್ಯಯನ ಸಮೀಕ್ಷೆ ಮತ್ತು ಆಕರಗಳು

ಚಿತ್ರದುರ್ಗ ಪ್ರದೇಶದ ಭೂಹಿಡುವಳಿ, ಸಾಮಾಜಿಕ ವ್ಯವಸ್ಥೆ ಹಾಗೂ ಸ್ವಾತಂತ್ರ್ಯ ಚಳವಳಿ ಕುರಿತು ನಡೆದಿರುವ ಈವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ಇಲ್ಲಿ ಮಾಡಲಾಗಿದೆ. ಯುರೋಪಿಯನ್ ಪ್ರವಾಸಿಗರು, ಸಾಮ್ರಾಜ್ಯಶಾಹಿ ಇತಿಹಾಸಕಾರರು, ರಾಷ್ಟ್ರೀಯವಾದಿ ಇತಿಹಾಸಕಾರರು, ಬ್ರಿಟಿಶ್ ಆಡಳಿತಗಾರರು ಹಾಗೂ ಸಾಹಿತಿಗಳು ಈ ನಿಟ್ಟಿನಲ್ಲಿ ಚಿತ್ರದುರ್ಗ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಕೊಡುಗೆಗಳನ್ನು ನೀಡಿದ್ದಾರೆ. ಅವುಗಳನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಆದರೆ ಬುಕಾನನ್ ಮತ್ತು ಚಿತ್ರದುರ್ಗದ ಆರಂಭದ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ದುಬಾಯಿಸ್ ಎಂಬ ಪ್ರವಾಸಿಗರ ಬರಹಗಳು ನಮ್ಮ ಗಮನ ಸೆಳೆಯುತ್ತವೆ. ಆರ್ಥಿಕ, ಸಾಮಾಜಿಕ, ಧಾರ್ಮಿಕ, ಮಾನವಶಾಸ್ತ್ರ ಹಾಗೂ ಜಾನಪದೀಯ ಅಂಶಗಳ ದೃಷ್ಟಿಯಿಂದ ಈ ಪ್ರದೇಶದ ಪರಿಪೂರ್ಣ ಹಾಗೂ

ಶಾಸ್ತ್ರೀಯವಾದ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ. ಈ ಪ್ರದೇಶವನ್ನು ಕುರಿತು ಇದುವರೆಗೆ ಬಂದಿರುವ ಕೃತಿಗಳು, ಬಿಡಿಲೇಖನಗಳು, ಸಂಶೋಧನ ಪ್ರಬಂಧಗಳು ಚಿತ್ರದುರ್ಗದ ಸ್ಥೂಲ ಪರಿಚಯವನ್ನು ಕೊಡುವಲ್ಲಿ ಯಶಸ್ವಿಯಾಗಿವೆ. ಈ ದಿಸೆಯಲ್ಲಿ ಚಿತ್ರದುರ್ಗ ಪ್ರದೇಶದ ಮೇಲೆ ಭಿನ್ನ ಭಿನ್ನ ನೆಲೆಗಳಲ್ಲಿ ಸಂಶೋಧನೆ ಮಾಡಿದ ವಿದ್ವಾಂಸರ ಕೃತಿಗಳನ್ನೂ ಸಮೀಕ್ಷೆ ಮಾಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೧೮೦೭ರಲ್ಲಿ ಪ್ರಕಟವಾದ ಫ್ರಾನ್ಸಿಸ್ ಬುಕಾನಾನ್ ಅವರ *ದಿ ಜರ್ನಿ ಥ್ರೂ ದಿ ಮದ್ರಾಸ್, ಮೈಸೂರು, ಕೆನರಾ, ಮಲಬಾರ್‌ನ* ದೀರ್ಘ ಪ್ರವಾಸದ ಚಿತ್ರಗಳು ಕೃತಿಯಲ್ಲಿ ಚಿತ್ರದುರ್ಗದ ಭೂಹಿಡುವಳಿಯ ಬಗ್ಗೆ ವಿವರಣೆ ನೀಡಿದ್ದಾನೆ. ಫ್ರಾನ್ಸಿಸ್ ಬುಕಾನಾನ್ ಒಬ್ಬ ವಿದ್ವಾಂಸನಾಗಿದ್ದು ೧೮೦೦ರ ಅವಧಿಯಲ್ಲಿ ಕಲ್ಕತ್ತಾದ ಈಸ್ಟ್ ಇಂಡಿಯಾ ಕಂಪನಿಯ ಉನ್ನತ ಅಧಿಕಾರಿಯಾದ ನೋಬಲ್ ಮಾರ್ಕ್ವಿಸ್ ವೆಲ್ಲೆಸ್ಲಿ ಅವರ ಆದೇಶದ ಮೇರೆಗೆ ಮೈಸೂರು ಮಹಾರಾಜರ ಪ್ರಾಂತ್ಯ, ಕರ್ನಾಟಕದ ಇತರ ಭಾಗಗಳು ಮತ್ತು ಈಸ್ಟ್ ಇಂಡಿಯಾ ಕಂಪನಿಯ ಆಡಳಿತಕ್ಕೆ ಒಳಪಟ್ಟ ಮದ್ರಾಸ್, ಮಲಬಾರ್ ಪ್ರಾಂತ್ಯಗಳಲ್ಲಿ ಪರ್ಯಟನೆ ಮಾಡಿದನು. ಆ ಪ್ರದೇಶದ ಸಂಪನ್ಮೂಲಗಳ ಬಗೆಗೆ ನೀಡಿದ ವರದಿಯೇ ಮದ್ರಾಸ್, ಮೈಸೂರು, ಕೆನರಾ ಮತ್ತು ಮಲಬಾರ್‌ನ ದೀರ್ಘ ಪ್ರವಾಸದ ಚಿತ್ರಗಳು. ಆಗ ಚಿತ್ರದುರ್ಗದಲ್ಲಿ ಇದ್ದ ಭೂಹಿಡುವಳಿಗಳ ಬಗ್ಗೆ ಆತ ಕೆಲವೊಂದು ವಿಷಯಗಳನ್ನು ತಿಳಿಸುತ್ತಾನೆ. ಹರಿಹರದ ನೆಲವನ್ನು ತನ್ನ ಅಧ್ಯಯನಕ್ಕೋಸ್ಕರ ಸ್ಥಳೀಯರ ಸಹಕಾರದೊಂದಿಗೆ ಮೂರು ಭಾಗವಾಗಿ ವಿಂಗಡಿಸಿ ಎರೆ, ಕೆಂಗಲು, ಕಲ್ಮರಡಿ ಎಂದು ಕರೆಯುತ್ತಾನೆ. ಚಿತ್ರದುರ್ಗ, ಸಿದ್ಧಪ್ಪನಹಳ್ಳಿ ಮತ್ತು ಐಮಂಗಲ ಪ್ರದೇಶದಲ್ಲಿರುವ ಸಾಗುವಳಿಯಾಗದ ಗಟ್ಟಿ ನೆಲವನ್ನು ಎರೆ ಭೂಮಿ ಎಂದೂ ಕರೆಯುತ್ತಾನೆ. ಈ ನೆಲ ಫಲವತ್ತಾಗಿದ್ದು ಬೆಳೆಗೆ ಯೋಗ್ಯವಾಗಿದೆ ಎಂದು ವಿವರಿಸುತ್ತಾನೆ. “ಚಿತ್ರದುರ್ಗವು ಯಾವಾಗ ಜನರಿಂದ ತುಂಬಿ ಉತ್ತಮ ವ್ಯವಸಾಯ ಪದ್ಧತಿಯನ್ನು ರೂಢಿಸಿಕೊಳ್ಳುತ್ತದೆಯೋ ಆಗ ಈ ಪ್ರದೇಶವು ಬೃಹತ್ ಪ್ರಮಾಣದ ಸಂಪತ್ತಿನ ಮೂಲವಾಗುತ್ತದೆ” ಎಂದು ಬುಕಾನಾನ್ ಬಣ್ಣಿಸುತ್ತಾನೆ. ಅವನು ಈ ಪ್ರದೇಶದಲ್ಲಿ ಒರಟು ಜಾತಿಯ ಭತ್ತ ಬೆಳೆಯುವುದನ್ನು ಉಲ್ಲೇಖಿಸುತ್ತಾನೆ. ಇದೇ ಸಂದರ್ಭದಲ್ಲಿ ಇಲ್ಲಿ ಮಳೆಯ ಪ್ರಮಾಣ ಕಡಿಮೆ ಇರುವುದನ್ನು, ನೀರಾವರಿಯ ಅನುಕೂಲಗಳಿಲ್ಲದಿರುವ ಹಾಗೂ ಚಿತ್ರದುರ್ಗದ ಬಹಳಷ್ಟು ಪ್ರದೇಶವು ಖುಷ್ಕಿ ಭೂಮಿಯಾಗಿತ್ತೆಂಬುದನ್ನು ಸಾಬೀತು ಪಡಿಸಲು ಪ್ರಯತ್ನಿಸುತ್ತಾನೆ. ತೋಟ-ತುಡಿಕೆಗಳಿದ್ದುದನ್ನು ಆತ ಎಲ್ಲಿಯೂ ವರದಿ ಮಾಡುವುದಿಲ್ಲ ಎಂಬುದು ಕೂಡ ಇಲ್ಲಿ ಗಮನಾರ್ಹ. ಅಬ್ಬೆ ಜೆ. ಎ.

ದುಬಾಯಿಸ್ ಅವರು ಬರೆದಿರುವ ***ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಅಂಡ್ ಸೆರೆಮನೀಸ್*** ಎಂಬ ಈ ಪುಸ್ತಕವು ಭಾರತೀಯ ಸಮಾಜವನ್ನು ಕುರಿತ ಪಾಶ್ಚಿಮಾತ್ಯ ವಿದ್ವಾಂಸನೊಬ್ಬನ ಪೂರ್ವಗ್ರಹ, ಒಳನೋಟ, ಟೀಕೆ, ಮುಗ್ಧತೆಗಳ್ಳುಳ್ಳ ವಿಶ್ಲೇಷಣೆಗೆ ಸಾಕ್ಷಿಯಾಗಿದೆ. ಈ ಪುಸ್ತಕವನ್ನು ಈಸ್ಟ್ ಇಂಡಿಯಾ ಕಂಪನಿಯ ಅನುಮತಿಯ ಮೇರೆಗೆ ಹೆನ್ರಿ ಕೆ.ಬ್ಯೂಚಂಪ್ ೧೯೦೬ರಲ್ಲಿ ಪ್ರಥಮ ಬಾರಿಗೆ ಪ್ರಕಟಿಸಿದರು. ಇದರ ಪ್ರಕಟಣೆಯ ಮೂಲ ಉದ್ದೇಶ ಭಾರತೀಯ ಸಾಮಾಜಿಕ ಚರಿತ್ರೆಯನ್ನು ವಸಾಹತು ಆಡಳಿತದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದಾಗಿತ್ತು. ನಂತರ ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್‌ನಿಂದ ೧೯೭೨ರಲ್ಲಿ ಇದರ ಪುನರ್ ಮುದ್ರಣವಾಯಿತು. ಈ ಪುಸ್ತಕದ ಕೇಂದ್ರ ಆಸಕ್ತಿ ಹಿಂದೂ ಜಾತಿ ಪದ್ಧತಿಯಾದರೂ ಕೆಳಜಾತಿ ಹಾಗೂ ಬುಡಕಟ್ಟುಗಳನ್ನು ಕುರಿತದ್ದಾಗಿದೆ. ಹಿಂದೂ ಸಮಾಜದ ಕ್ರಮಬದ್ಧವಾದ ಸಂಪ್ರದಾಯ, ಪದ್ಧತಿ, ಸಂಸ್ಕಾರ ಮತ್ತು ಧಾರ್ಮಿಕ ವ್ಯವಸ್ಥೆಗಳನ್ನು ಸಮಪ್ರಮಾಣವಾಗಿ ದಾಖಲಿಸಲು ಪ್ರಯತ್ನಿಸಿದ್ದಾರೆ. ಈ ಪುಸ್ತಕವು ಮೈಸೂರು ಸಂಸ್ಥಾನದ ಸಾಮಾಜಿಕ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಮುಖ್ಯ ಆಕರವಾಗಿದೆ.

ಭಾರತವನ್ನು ವಸಹಾತುವಾಗಿ ಆಳಿದ ಬ್ರಿಟಿಶ್ ಆಡಳಿತಗಾರರು ಕೂಡ ಚಿತ್ರದುರ್ಗದ ಇತಿಹಾಸದ ಬಗ್ಗೆ ಮಾಹಿತಿಗಳನ್ನು ನೀಡುತ್ತಾರೆ. ಇವರು ಬ್ರಿಟಿಶ್ ಆಡಳಿತಗಾರರಷ್ಟೇ ಮಾತ್ರವಾಗಿರದೇ ಆ ಕಾಲದ ಸಾಮ್ರಾಜ್ಯಶಾಹಿ ಸರಕಾರದ ವಕ್ತಾರರಾಗಿದ್ದರು. ಅವರ ಬರವಣಿಗೆಗಳು ಭಾರತವನ್ನು ವಸಾಹತುವನ್ನಾಗಿ ಆಳಲು ಸಹಾಯಕವಾಗಿರುವ ರೀತಿಯಲ್ಲಿದ್ದವು. ೧೮೧೦ರಲ್ಲಿ ಕರ್ನಲ್ ಮಾರ್ಕ್ಸ್‌ವಿಲ್ಕ್ಸ್ ***ಹಿಸ್ಟರಿ ಆಫ್ ಮೈಸೂರು*** ಕೃತಿಯಲ್ಲಿ ಅಧಿಕಾರಯುತವಾಗಿ ಮೈಸೂರು ರಾಜ್ಯದ ಚರಿತ್ರೆಯನ್ನು ಮೊಟ್ಟಮೊದಲು ರಚಿಸಲು ಪ್ರಯತ್ನಿಸಿದನು. ದಕ್ಷಿಣ ಭಾರತದ ಅದರಲ್ಲೂ ಮೈಸೂರು ಪ್ರಾಂತ್ಯದ ಜನರ ಅನುಭವ ಗಳನ್ನು ಕುರಿತು ವಿವರಿಸಿದ್ದಾನೆ. ಹೈದರ್ ಆಲಿ ಚಿತ್ರದುರ್ಗವನ್ನು ಗೆದ್ದ ಬಗ್ಗೆ ವಿವರವಾದ ದಾಖಲೆ ನೀಡಿದ್ದಾನೆ. ಬ್ರಿಟಿಶ್ ಸಾಮ್ರಾಜ್ಯಶಾಹಿ ದೃಷ್ಟಿಕೋನದ ಬರವಣಿಗೆಗೆ ವಿಲ್ಕ್ಸ್‌ನ ಕೃತಿ ನಮಗೆ ಮುಖ್ಯ ಆಕರವಾಗುತ್ತದೆ. ೧೯೦೯ರಲ್ಲಿ ಪ್ರಕಟವಾದ ಎಡ್ಗರ್ ಥರ್ಸ್ಟನ್ ಅವರ ***ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ,*** ಏಳು ಸಂಪುಟಗಳಲ್ಲಿ ಗುಡ್ಡಗಾಡು ಸಮುದಾಯಗಳ ಮೂಲ ಸ್ವರೂಪ, ಆಚರಣೆ ಹಾಗೂ ಸಂಪ್ರದಾಯಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ. ೧೮೯೨ರಲ್ಲಿ ಪ್ರಕಟವಾದ ಬೇಡನ್ ಪೋವೆಲ್ ಬರೆದ ***ದಿ ಲ್ಯಾಂಡ್ ಸಿಸ್ಟಮ್ಸ್ ಆಫ್ ಬ್ರಿಟಿಶ್ ಇಂಡಿಯಾ*** ಕೃತಿಯು ೧೯ನೇ ಶತಮಾನದ ಮೈಸೂರು ಪ್ರಾಂತ್ಯದ ಭೂಹಿಡುವಳಿಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ೧೯೪೭ರಲ್ಲಿ ಎಂ. ವೀಲರ್ ಅವರು *ಬ್ರಹ್ಮಗಿರಿಯಲ್ಲಿ* ಸಂಶೋಧನೆ ನಡೆಸಿದರು. ಈ ಪ್ರದೇಶವು ಪ್ರಾಚೀನ

ಕಾಲದಿಂದಲೂ ನಾಗರಿಕತೆಯ ಕೇಂದ್ರವಾಗಿತ್ತು. ಹಾಗೆಯೇ ದಕ್ಷಿಣ ಭಾರತದ ಚರಿತ್ರೆಯಲ್ಲಿ ಮುಖ್ಯ ಪಾತ್ರವಹಿಸಿದ ಬಗ್ಗೆ ದಾಖಲೆ ನೀಡಿದ್ದಾರೆ. ಈ ಪ್ರದೇಶದಲ್ಲಿ ಕ್ರಿ.ಪೂ. ೧೦೦೦ದಿಂದ ಕ್ರಿ. ಪೂ. ೨ನೆಯ ಶತಮಾನದವರೆಗಿನ ಶಿಲಾಯುಗ ಸಂಸ್ಕೃತಿಯನ್ನು ಮತ್ತು ಕಿ. ಪೂ. ೨೦೦ ರಿಂದ ಕ್ರಿ. ಶ. ೧ನೆಯ ಶತಮಾನದ ಮಧ್ಯ ಭಾಗದಿಂದ ಕ್ರಿ. ಶ. ೨ನೆಯ ಶತಮಾನದವರೆಗೆ 'ಆಂಧ್ರ' ಸಂಸ್ಕೃತಿ ನೆಲೆಸಿದ್ದಿತೆಂದೂ ದಾಖಲೆ ಮಾಡಿದ್ದಾರೆ.

ಭಾರತೀಯ ವಿದ್ವಾಂಸರು ಕೂಡ ಚಿತ್ರದುರ್ಗ ಚರಿತ್ರೆಯನ್ನು ವ್ಯಾಪಕವಾಗಿ ಅಭ್ಯಾಸ ಮಾಡಿದರು. ವಸಾಹತು ಕಾಲದಿಂದಲೇ ಈ ಬಗೆಯ ಕೆಲಸಗಳು ಆರಂಭವಾದವು. ೧೯೨೪ರಲ್ಲಿ ಎಂ.ಎಸ್.ಪುಟ್ಟಣ್ಣ ಅವರ **ಚಿತ್ರದುರ್ಗದ ಪಾಳೆಯಗಾರರು** ಕೃತಿಯನ್ನು ಪ್ರಕಟಿಸಲಾಗಿದೆ. ಇದರಲ್ಲಿ ಮೊದಲು ಚಿತ್ರದುರ್ಗದ ಪಾಳೆಯಗಾರರ ಚರಿತ್ರೆಯನ್ನು ದಾಖಲಿಸುವ ಪ್ರಯತ್ನ ನಡೆದಿದೆ. ವಿಜಯನಗರ-ವಿಜಯನಗರೋತ್ತರ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ ಚರಿತ್ರೆಯನ್ನು ಅರ್ಥಮಾಡಿಕೊಳ್ಳಲು ಮುಖ್ಯವಾದ ಕೃತಿಯಾಗಿದೆ. ಇದರಲ್ಲಿ ಪಾಳೆಯಗಾರರ ಕಾಲದ ರಾಜಕೀಯ ಸಮರ, ಆಡಳಿತ ವ್ಯವಸ್ಥೆ ಹಾಗೂ ಕೃಷಿ ವ್ಯವಸ್ಥೆಯನ್ನು, ಪಾಳೆಯಗಾರರ ಕಾಲದ ಕೃಷಿಯೇತರ ಕಸುಬುಗಳು, ಕಂದಾಯ ಪದ್ಧತಿ, ನಾಣ್ಯಗಳು ಮುಂತಾದ ವಿಚಾರಗಳನ್ನು ದಾಖಲಿಸಲಾಗಿದೆ. ೧೯೪೯ರಲ್ಲಿ ಎಂ. ಎಚ್. ಕೃಷ್ಣ ಅವರು ಬರೆದ ***ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ಉತ್ಖನನ ವರದಿಗಳು*** ಬಹಳ ಉಪಯುಕ್ತವಾಗಿವೆ. ಭೂಶೋಧನೆ ನಡೆಸುವುದರ ಮೂಲಕ ವ್ಯಾಪಕ ಅಧ್ಯಯನ ಕೈಗೊಂಡು, ಶಾತವಾಹನ ಮತ್ತು ಕದಂಬ ರಾಜವಂಶಗಳು ಚಿತ್ರದುರ್ಗದಲ್ಲಿ ಆಳ್ವಿಕೆ ನಡೆಸಿದ ಕಾಲದವರೆಗಿನ ಚರಿತ್ರೆಯನ್ನು ಗುರುತಿಸಿದ್ದಾರೆ. ೧೯೫೦ರ ದಶಕಗಳಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರು (೧೮೮೨-೧೯೫೬) ಚಿತ್ರದುರ್ಗದ ಚರಿತ್ರೆಯನ್ನು ಲೇಖನ ಮತ್ತು ಪುಸ್ತಕ ರೂಪದಲ್ಲಿ ಸಂಗ್ರಹಿಸುವ ಕೆಲಸ ಮಾಡಿದ್ದಾರೆ. ಅವರ ಸಮಗ್ರ ಲೇಖನಗಳನ್ನು ಒಂದು ಕಡೆ ಕಲೆಹಾಕಿ **ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು**(೧೯೯೫) ಎಂದು ಗ್ರಂಥರೂಪದಲ್ಲಿ ಲಕ್ಷ್ಮಣ್ ತೆಲಗಾವಿ ಮತ್ತು ಎಂ. ವಿ. ಶ್ರೀನಿವಾಸ್ ಅವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರು ಬರೆದಿರುವ ೪೮ ಲೇಖನಗಳಿವೆ. ಅವುಗಳಲ್ಲಿ ಮುಖ್ಯವಾದವು ೧. ಚಿತ್ರದುರ್ಗದ ಮಾತಾನಾಡುವ ಕಲ್ಲುಗಳು, ೨. ಚರಿತ್ರೆಪುರ-ಚಿತ್ರದುರ್ಗ, ೩. ಚಿನ್ಮೂಲಾದ್ರಿ ಅರಮನೆ-ಗುರುಮನೆ ಎಂದು ಹೇಳಬಹುದು. ಕಣಕುಪ್ಪಿ ಕೊಟ್ಟೂರು ಬಸಪ್ಪ ಅವರು ಬರೆದಿರುವ *ಶ್ರೀ ಜಗದ್ಗುರು ಜಯದೇವ ದಿಗ್ವಿಜಯ* ಕೃತಿಯು ೧೯೦೬ರಲ್ಲಿ ಪ್ರಕಟವಾಗಿದೆ.

ಈ ಕೃತಿಯು ಜಗದ್ಗುರು ಜಯದೇವ ಮುರುಘರಾಜೇಂದ್ರ ಸ್ವಾಮಿಗಳ ಜೀವನ ಕುರಿತದ್ದು. ಆದರೂ ಈ ಕೃತಿಯ ಕೇಂದ್ರವಸ್ತು ಇಪ್ಪತ್ತನೆಯ ಶತಮಾನದ ಆರಂಭದ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಸಂಘರ್ಷಗಳನ್ನು ವಿವರವಾಗಿ ಚರ್ಚಿಸುವ ಪ್ರಯತ್ನವಾಗಿದೆ. ಅಲ್ಲದೆ ಮುರುಘಾಮಠವು ಹೊಂದಿರುವ ಭೂಹಿಡುವಳಿಗಳ ವಿವರವನ್ನು ಒಳಗೊಂಡಿದೆ. ಎಲ್. ಬಸವರಾಜು ಸಂಪಾದಿಸಿದ ***ಮಹಾದೇವನ ಮಹಲಿಂಗೇಂದ್ರ ವಿಜಯ*** ಕೃತಿಯು ೧೯೭೦ರಲ್ಲಿ ಪ್ರಕಟವಾಗಿದೆ. ಇದು ಚಿತ್ರದುರ್ಗ ಮರುಘಾಮಠದ ಪರಂಪರೆಯನ್ನು ಕುರಿತು ಆಧಾರಪೂರ್ವಕವಾಗಿ ವಿಶ್ಲೇಷಿಸುವ ಕೃತಿಯಾಗಿದೆ. ಲೇಖಕರು ಮುರುಘಾಮಠದ ಗುರುಪರಂಪರೆಯನ್ನು ಜೊತೆಗೆ ೧೮ ಮತ್ತು ೧೯ನೆಯ ಶತಮಾನದ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಕುರಿತು ಟಿಪ್ಪಣಿ ನೀಡಿರುವರು. ಮಹಾದೇವ ಬಣಕಾರ ಅವರು ಸಂಪಾದಿಸಿದ ***ದಿಟ್ಟ ಹೆಜ್ಜೆ-ಧೀರ ಕ್ರಮ*** ಕೃತಿಯು ೧೯೮೮ರಲ್ಲಿ ಪ್ರಕಟವಾಗಿದೆ. ಇದು ಸಿರಿಗೆರೆಯ ಮಠದ ಗುರುಗಳಾಗಿದ್ದ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ಆತ್ಮಕತೆಯಾಗಿದೆ. ಕೃತಿಯ ಉದ್ದಕ್ಕೂ ವೀರಶೈವ ಧರ್ಮ ಕುರಿತ ಚರ್ಚೆಯಿದೆ. 'ಆತ್ಮನಿವೇದನೆ' ಎಂಬ ಭಾಗದಲ್ಲಿ ಬದುಕಿನ ವಿವಿಧ ಸ್ತರಗಳನ್ನು ಲೇಖಕರು ಕಥನರೂಪದಲ್ಲಿ ಹೇಳಿದ್ದಾರೆ. ಸಿರಿಗೆರೆ ಮಠಕ್ಕೆ ಸೇರಿದ ನೂರಾರು ಶಿಕ್ಷಣ ಸಂಸ್ಥೆಗಳ ಚರ-ಸ್ಥಿರ ಆಸ್ತಿಯ ಬಗ್ಗೆ ವಿವರವಾದ ಮಾಹಿತಿಯಿದೆ. ಜಿ. ಎಸ್. ಹಾಲಪ್ಪನವರು ಸಂಪಾದಿಸಿರುವ ***ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ*** ಎಂಬ ಗ್ರಂಥವು ೧೯೬೪ರಲ್ಲಿ ಎರಡು ಸಂಪುಟಗಳಲ್ಲಿ ಪ್ರಕಟವಾಗಿದೆ. ಚಿತ್ರದುರ್ಗ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯನ್ನು ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ ಜಿ. ಎಸ್. ಹಾಲಪ್ಪನವರು ಸಂಪಾದಿಸಿರುವ ಎರಡನೇ ಸಂಪುಟವು ಸ್ವಾತಂತ್ರ್ಯ ಚಳವಳಿ ಮತ್ತು ಏಕೀಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಆಕರಗಳನ್ನು ಒದಗಿಸಿದೆ. ೧೯೬೮ರಲ್ಲಿ ಪ್ರಕಟವಾದ ಆರ್. ಆರ್. ದಿವಾಕರ್ ಅವರ ***ಕರ್ನಾಟಕ ಥ್ರೂ ದಿ ಏಜಸ್*** ಒಂದು ಉಪಯುಕ್ತ ಗ್ರಂಥ. ಈ ಪುಸ್ತಕದ ಅನುವಾದವು ***ಕರ್ನಾಟಕ ಇತಿಹಾಸ ಪರಂಪರೆ*** ಎಂಬ ಶೀರ್ಷಿಕೆಯಲ್ಲಿ ಎರಡು ಸಂಪುಟಗಳಾಗಿ ಪ್ರಕಟವಾಗಿವೆ. ಕರ್ನಾಟಕದ ಪರಂಪರೆಯ ಹಲವಾರು ಮುಖಗಳನ್ನು ಜನಸಾಮಾನ್ಯರಿಗೆ ಒಂದೇ ಕಡೆ ಪರಿಚಯ ಮಾಡಿಕೊಡುವ ಉದ್ದೇಶ ಆರ್. ಆರ್. ದಿವಾಕರ್ ಅವರದು. ಇದರಲ್ಲಿ ಚಿತ್ರದುರ್ಗದ ಪಾಳೆಯಗಾರರ ಚರಿತ್ರೆಯನ್ನು ಒಂದು ಅಧ್ಯಾಯದಲ್ಲಿ ನೀಡಲಾಗಿದೆ. ಇದು ಚಿತ್ರದುರ್ಗದ ಪಾಳೆಯಗಾರರ ಚರಿತ್ರೆಯ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ೧೯೭೭ರಲ್ಲಿ ಸೂರ್ಯನಾಥ ಯು. ಕಾಮತ್ ಅವರು ಸಂಪಾದಿಸಿರುವ ***ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*** ಎಂಬ ಕೃತಿ ಮೂರು ಸಂಪುಟಗಳಲ್ಲಿ ಪ್ರಕಟವಾಗಿವೆ. ಇದರಲ್ಲಿ ಎರಡನೇ

ಸಂಪುಟವು ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ, ಹೋರಾಟಗಾರರು ಮತ್ತು ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದ ಘಟನೆಗಳ ವಿಶ್ಲೇಷಣೆಗಳನ್ನು ಒಳಗೊಂಡಿವೆ. ೧೯೭೭ರಲ್ಲಿ ಎಂ. ವಿ. ಶ್ರೀನಿವಾಸ್ ಮತ್ತು ಲಕ್ಷ್ಮಣ್ ತೆಲಗಾವಿ ಅವರು ಸಂಪಾದಿಸಿರುವ ***ಚಂದ್ರವಳ್ಳಿ*** ಎನ್ನುವ ಕೃತಿಯು ಚಿತ್ರದುರ್ಗದ ಚರಿತ್ರೆಯನ್ನು ಕುರಿತ ಅನೇಕ ಲೇಖನಗಳ ಸಂಗ್ರಹವಾಗಿದೆ. ಪ್ರಾದೇಶಿಕ ಚರಿತ್ರೆಯ ಅಧ್ಯಯನದ ದೃಷ್ಟಿಯಿಂದ ಇದು ಮಹತ್ವದ್ದಾಗಿದೆ. ೧೯೯೫ರಲ್ಲಿ ಪ್ರಕಟವಾದ ಎಂ. ಜಿ. ಈಶ್ವರಪ್ಪ ಅವರ ***ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ*** ಕೃತಿಯಲ್ಲಿ ವ್ಯವಸಾಯ ಪದ್ಧತಿಗಳನ್ನು ಜಾನಪದೀಯ ಆಕರಗಳೊಂದಿಗೆ ಅಭ್ಯಾಸ ಮಾಡಲಾಗಿದೆ. ವ್ಯವಸಾಯಕ್ಕೆ ಸಂಬಂಧಿಸಿದ ಆಚರಣೆಗಳು, ನಂಬಿಕೆಗಳು, ಪರಂಪರೆಗಳು, ಪರಂಪರಾನುಗತ ವ್ಯವಸಾಯ ಸಾಹಿತ್ಯ, ವ್ಯವಸಾಯ ಸಲಕರಣೆಗಳು ಇವೇ ಮುಂತಾದ ವಿಚಾರಗಳ ಬಗ್ಗೆ ಆಳವಾದ ಅಧ್ಯಯನ ಈ ಕೃತಿಯಲ್ಲಿ ನಡೆದಿದೆ. ಷೇಕ್ ಅಲಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಬಂದ **ಕರ್ನಾಟಕ ಚರಿತ್ರೆಯ** ಏಳು ಸಂಪುಟಗಳು ಪ್ರಸ್ತುತ ಅಧ್ಯಯನಕ್ಕೆ ಸಹಾಯಕವಾಗಿವೆ. ಇದರಲ್ಲಿ ಕೆ. ಎಸ್. ಶಿವಣ್ಣನವರು ಸಂಪುಟ ಸಂಪಾದಕರಾಗಿರುವ ಮೂರನೇ ಸಂಪುಟವು ವಿಜಯನಗರ ಸಾಮ್ರಾಜ್ಯವನ್ನು ಕುರಿತಂತಿದೆ. ಈ ಸಂಪುಟವು ವಿಜಯನಗರ ಕಾಲದ ಆಡಳಿತ ವ್ಯವಸ್ಥೆ, ಕೃಷಿ, ವಾಣಿಜ್ಯ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯನ್ನು ಕುರಿತಂತೆ ಸ್ಪಷ್ಟ ಚಿತ್ರಣ ನೀಡುತ್ತದೆ. ಹಾಗೆಯೇ ಷೇಕ್ ಅಲಿ ಅವರು ಸಂಪಾದಿಸಿರುವ ಐದನೇ ಸಂಪುಟದಲ್ಲಿ ಟಿಪ್ಪು ಮತ್ತು ಹೈದರಾಲಿ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ವ್ಯವಸ್ಥೆ ಹಾಗೂ ಭೂಹಿಡುವಳಿ ವ್ಯವಸ್ಥೆಯನ್ನು ವಿವರವಾಗಿ ವಿಶ್ಲೇಷಿಸಿದ್ದಾರೆ. ಅದೇ ರೀತಿ ಸಂಪುಟ ಆರನ್ನು ಸೆಬಾಸ್ಟಿಯನ್ ಜೋಸೆಫ್ ಸಂಪುಟ ಸಂಪಾದಕರಾಗಿದ್ದಾರೆ. ಈ ಸಂಪುಟದಲ್ಲಿ ಹದಿನೆಂಟನೆಯ ಶತಮಾನದ ವಸಾಹತುಶಾಹಿಯ ಬೆಳವಣಿಗೆಯ ಕುರಿತ ಚರ್ಚೆಗಳಿವೆ. ಎಸ್. ಚಂದ್ರಶೇಖರ್ ಸಂಪುಟಸಂಪಾದಕರಾಗಿರುವ ಏಳನೇ ಸಂಪುಟದಲ್ಲಿ ಕರ್ನಾಟಕ ಸ್ವಾತಂತ್ರ್ಯ ಚಳವಳಿ ಮತ್ತು ಏಕೀಕರಣ ಕುರಿತು ಭಿನ್ನ ನೆಲೆಯಲ್ಲಿ ಅಧ್ಯಯನ ಮಾಡಿರುವ ಲೇಖನಗಳನ್ನು ನಾವು ನೋಡಬಹುದು. ಇವುಗಳೆಲ್ಲವು ಚಿತ್ರದುರ್ಗದ ಚರಿತ್ರೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ.

ಗೆಜೆಟಿಯರ್‌ಗಳು ಚರಿತ್ರೆಯನ್ನು ಕಟ್ಟಿಕೊಳ್ಳುವುದಕ್ಕೆ ಬಹಳ ಮುಖ್ಯವಾದ ಆಕರಗಳಾಗುತ್ತವೆ. ಇವು ಬ್ರಿಟಿಶ್ ಆಡಳಿತಗಾರರಿಂದಲೇ ಆರಂಭವಾದವು. ೧೮೯೭ರಲ್ಲಿ ಬಿ. ಎಲ್. ರೈಸ್ ಅವರು ***ಮೈಸೂರು ಗೆಜೆಟಿಯರ್,*** ಸಂಪುಟ-೧, ಸಂಪುಟ-೨ ಪ್ರಕಟಿಸುತ್ತಾರೆ. ಈ ಎರಡು ಸಂಪುಟಗಳು

ಮುಖ್ಯವಾಗಿ ಮೈಸೂರು ಪ್ರದೇಶದ ಚಾರಿತ್ರಿಕ ದಾಖಲೆಯನ್ನು ಕುರಿತ ಬರವಣಿಗೆಯಾಗಿದೆ. ಇವುಗಳಲ್ಲಿ ಮೈಸೂರು ರಾಜ್ಯಕ್ಕೆ ಸೇರಿದ ಎಲ್ಲ ಪ್ರದೇಶಗಳ ಚರಿತ್ರೆಯನ್ನು ದಾಖಲಿಸಲು ಪ್ರಯತ್ನಿಸಿದ್ದಾರೆ. ಹಾಗೆಯೇ ಚಿತ್ರದುರ್ಗದ ಚರಿತ್ರೆಯನ್ನು ದಾಖಲಿಸಿ ಅದರ ವಿವರಣೆಯನ್ನು ನೀಡಿರುವರು. ೧೮೦೦ರ ದಶಕಗಳಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ನಿರ್ದಿಷ್ಟವಾದ ಯಾವ ಮಾನದಂಡವನ್ನು ಅನುಸರಿಸಿ ತೆರಿಗೆ ವಸೂಲು ಮಾಡುವ ಕಾನೂನುಗಳು ವ್ಯವಸ್ಥಿತವಾಗಿ ಇರಲಿಲ್ಲ ಎಂದಿದ್ದಾರೆ.

ಹಯವದನರಾವ್ ಅವರ **ಮೈಸೂರು ಗೆಜೆಟಿಯರ್** ಸಂಪುಟ ೧ (೧೯೨೭), ಸಂಪುಟ ೨ (೧೯೩೦), ಸಂಪುಟ ೩ (೧೯೩೦), ಸಂಪುಟ ೪ (೧೯೩೦)'ಮೈಸೂರು ರಾಜ್ಯದ ಚರಿತ್ರೆ'ಯನ್ನು ವಿಶಿಷ್ಟವಾಗಿ ಪರಿಚಯ ಮಾಡಿಕೊಡುವ ಆಕರಗಳಾಗಿವೆ. ಹೈದರಾಲಿ ಕಾಲಾವಧಿಯಿಂದ ಆಧುನಿಕ ಮೈಸೂರು ಸಂಸ್ಥಾನದವರೆಗಿನ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳು ದೊರಕುತ್ತವೆ. ಅದರಲ್ಲೂ ಕಮೀಷನರ್ ಕಾಲದ ಭೂಹಿಡುವಳಿ ವ್ಯವಸ್ಥೆ ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ಸೂಕ್ತ ಅಂಕಿಅಂಶಗಳೊಂದಿಗೆ ಪರಿಚಯ ಮಾಡಿಕೊಡುತ್ತವೆ. ಈ ಸಂಪುಟಗಳು ಎಲ್ಲಾ ಕಾಲಘಟ್ಟಗಳ ಅಧ್ಯಯನದ ದೃಷ್ಟಿಯಿಂದಲೂ ಸಂಶೋಧನೆಗೆ ಸಾಕಷ್ಟು ಮಾರ್ಗದರ್ಶನ ನೀಡಬಹುದಾದ ಆಕರಗಳಾಗಿವೆ. ೧೯೬೭ರಲ್ಲಿ ಎಂ. ಎಸ್. ಸತ್ಯನ್ ಅವರು ಸಂಪಾದಿಸಿರುವ **ಚಿತ್ರದುರ್ಗ ಗೆಜೆಟಿಯರ್** ನಲ್ಲಿ ಚಿತ್ರದುರ್ಗವನ್ನು ಆಳ್ವಿಕೆ ಮಾಡಿದ ಪ್ರಾಚೀನ ರಾಜಮನೆತನಗಳ ಬಗ್ಗೆ ಸಮಗ್ರ ವಿವರವಿದೆ. ಹಾಗೆಯೇ ಚಿತ್ರದುರ್ಗ ಜಿಲ್ಲೆಯ ವಿವಿಧ ಸಮುದಾಯಗಳ ಪರಿಚಯ, ರಸ್ತೆ ಸಂಪರ್ಕ, ಖನಿಜ ಸಂಪತ್ತು, ಆಡಳಿತ ವ್ಯವಸ್ಥೆ ಮುಂತಾದ ವಿಷಯಗಳನ್ನು ಸಂಗ್ರಹಿಸಲಾಗಿದೆ. ೧೯೮೪ರಲ್ಲಿ ಸೂರ್ಯನಾಥ್ ಕಾಮತ್ ಸಂಪಾದಿಸಿರುವ **ಕರ್ನಾಟಕ ರಾಜ್ಯ ಗೆಜೆಟಿಯರ್** ಸಂಪುಟ ೨, ಕರ್ನಾಟಕದ ರಾಜಕೀಯ, ಸಾಮಾಜಿಕ ಹಾಗೂ ಭೂಸುಧಾರಣೆಯನ್ನು ಕುರಿತ ಮಾಹಿತಿಯನ್ನು ನೀಡುತ್ತದೆ. ಹಾಗೆಯೇ ಸಮಗ್ರ ಕರ್ನಾಟಕದ ಇತ್ತೀಚಿನ ಬೆಳವಣಿಗೆಯನ್ನು ಅಂಕಿ ಅಂಶಗಳ ಸಮೇತ ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾರೆ.

ನನ್ನ ಮಹಾ ಪ್ರಬಂಧಕ್ಕೆ ಸಂಬಂಧಿಸಿದ ಆಕರಗಳನ್ನು ಬೆಂಗಳೂರು, ಮೈಸೂರು, ಚಿತ್ರದುರ್ಗ ಗಳಲ್ಲಿ ಪತ್ರಾಗಾರಗಳಿಂದ ಪಡೆದುಕೊಳ್ಳಲಾಗಿದೆ. ಹಾಗೆಯೇ ಬೆಂಗಳೂರಿನ ಮಿಥಿಕ್ ಸೊಸೈಟಿ, ಬೆಂಗಳೂರು, ಮೈಸೂರು, ಕರ್ನಾಟಕ ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳಲ್ಲಿನ ಪ್ರಕಟಿತ ಹಾಗೂ ಅಪ್ರಕಟಿತ ಬರಹಗಳನ್ನು, ಗ್ರಂಥಗಳನ್ನು ಬಳಸಿಕೊಳ್ಳಲಾಗಿದೆ. ಎಸ್. ನಿಜಲಿಂಗಪ್ಪನವರನ್ನು ಸೇರಿಕೊಂಡಂತೆ ಅನೇಕರನ್ನು ನನ್ನ ಸಂಶೋಧನೆಗೆ ಸಂಬಂಧಪಟ್ಟ ವಿಚಾರಗಳಿಗಾಗಿ ಸಂದರ್ಶನಗಳನ್ನು

ಮಾಡಲಾಗಿದೆ. ಕೆಲವು ಖಾಸಗಿ ಪತ್ರಗಳನ್ನು (ಪ್ರಮುಖವಾಗಿ ಎಸ್. ನಿಜಲಿಂಗಪ್ಪನವರಿಗೆ ಸಂಬಂಧಿಸಿದಂತೆ) ಪ್ರಸ್ತುತ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ. ಶಾಸನ ಸಂಪುಟಗಳು, ಗೆಜೆಟ್, ಗೆಜೆಟಿಯರ್‌ಗಳು, ಜನಗಣತಿ ವರದಿಗಳು, ಮೈಸೂರು ಸರಕಾರದ ಆಡಳಿತದ ವಾರ್ಷಿಕ ವರದಿಗಳು, ಬ್ರಿಟಿಶ್ ಸರಕಾರದ ಕೆಲವು ರಹಸ್ಯ ಪತ್ರಗಳು (ಕಾನ್‌ಫಿಡೆನ್ಸಿಯಲ್ ರಿಪೋರ್ಟ್ಸ್) ಇದರೊಂದಿಗೆ ವಸಾಹತು ಕಾಲದ ಚರಿತ್ರೆಕಾರರ ಅದರಲ್ಲೂ ಪ್ರವಾಸಿಗರ, ಆಡಳಿತಗಾರರ, ರಾಷ್ಟ್ರೀಯವಾದಿಗಳ ಮತ್ತು ವಸಾಹತ್ತೋತ್ತರ ಕಾಲದಲ್ಲಿ ಬಂದ ರಾಷ್ಟ್ರೀಯವಾದಿ ಚರಿತ್ರೆಕಾರರು / ಸಾಹಿತಿಗಳ ಬರಹಗಳನ್ನು, ಗ್ರಂಥಗಳನ್ನು ಪ್ರಸ್ತುತ ಪ್ರಬಂಧದುದ್ದಕ್ಕೂ ಉಪಯೋಗಿಸಿಕೊಳ್ಳಲಾಗಿದೆ.

ಅಡಿಟಿಪ್ಪಣಿ

೧. ಸಂಸ್ಕೃತಿ ವ್ಯವಸಾಯವನ್ನು ಧ್ವನಿಸುತ್ತದೆ. ನಾಗರೀಕತೆ ನಗರವನ್ನು ಧ್ವನಿಸುತ್ತದೆ ಎನ್ನುತ್ತಾರೆ ವಿಲ್ ಡುರೆಂಟ್. ಮನುಷ್ಯ ಅಲೆಮಾರಿ ಹಂತದಲ್ಲಿದ್ದಾಗ ಅನಾಗರಿಕ ಮತ್ತು ಅಸಂಸ್ಕೃತನಾಗಿದ್ದ ಅವನ ಬದುಕಿಗೆ ಮಾತಾಗಲಿ, ಜ್ಞಾನವಾಗಲಿ, ರೀತಿ ನೀತಿಗಳಾಗಲಿ, ನಿಯಮ ಶಿಸ್ತಾಗಲಿ ಯಾವುದೂ ಇರಲಿಲ್ಲ. ಬದುಕು ಅಭದ್ರತೆಯಿಂದ ಕೂಡಿತ್ತು. ಭದ್ರತೆಗಾಗಿ ಭೂಮಿಯ ಆಶ್ರಯ ಪಡೆದು ಪ್ರಕೃತಿಯನ್ನು, ಪ್ರಕೃತಿಯ ಉತ್ಪನ್ನವನ್ನು ಕಚ್ಚಾರೀತಿಯಲ್ಲಿ ಸ್ವೀಕರಿಸಲು ತೊಡಗಿದ. ಪ್ರಕೃತಿ ನಮ್ಮ ಜೀವನಕ್ಕಾಗಿ ಮೂಲಸಾಮಗ್ರಿಯನ್ನು ಒದಗಿಸುತ್ತದೆ. ನಾವು ಅದನ್ನು ಯೋಜನೆ ಅರಿತು ಉಪಯೋಗಿಸಿಕೊಳ್ಳುತ್ತೇವೆ. ಕಾಡನ್ನು ತೋಟವನ್ನಾಗಿ ಮಾಡುವುದೇ ಸಂಸ್ಕೃತಿ. ಅಂದರೆ ವ್ಯವಸಾಯ ಎಂಬುದು ಮಾನವ, ಸಂಸ್ಕೃತಿಗೆ ನಾಂದಿಯಾಯಿತು. ಅಲೆಮಾರಿಯಾಗಿ ಅಲೆದ ಪ್ರಾಚೀನ ಮಾನವ ಆಯ್ದ ಸ್ಥಳಗಳಲ್ಲಿ ನೆಲೆ ನಿಂತು ಒಂದು ಸಮಾಜ ನಿರ್ಮಾಣ ಮಾಡಿಕೊಂಡ. ನೀರು ಇರುವ ಕಡೆ ಬೆಳೆಬೆಳೆದು ಉಳುಮೆಗಾಗಿ ದೈಹಿಕ ಬಲದ ಜೊತೆಗೆ ಪಶುಪಾಲನೆ ಕೈಗೊಂಡನು. ಈ ಮೂಲಕ ಆಹಾರೋತ್ಪಾದನೆಯ ವಿಧಾನದಿಂದ ಒಂದು ಹೊಸ ಸಂಸ್ಕೃತಿಯನ್ನು ಕಟ್ಟಿಕೊಂಡನು. ಭಾರತೀಯ ಇತಿಹಾಸದಲ್ಲಿ ಕ್ರಿ. ಪೂ. ೨೫೦೦ರಿಂದ ಕ್ರಿ. ಪೂ. ೧೫೦೦ವರೆಗೆ ಇದ್ದ ಹರಪ್ಪಾ ಸಂಸ್ಕೃತಿಯಲ್ಲಿಯೇ ಮಾನವ ಕೃಷಿಯನ್ನು ಅಭಿವೃದ್ಧಿಪಡಿಸಿದ್ದನು. ಮರದ ನೇಗಿಲುಗಳನ್ನು ಬಳಸಿದ್ದನು. ಗೋಧಿ, ಬಾರ್ಲಿ, ಬಟಾಣಿ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದನು. ಕೃಷಿಯ ಜೊತೆಗೆ ಪಶುಪಾಲನೆಯನ್ನು ಮಾಡುತ್ತಿದ್ದನು. ಈ ವಿಚಾರವು ಹರಪ್ಪಾ ಸಂಸ್ಕೃತಿಯ ಉತ್ಖನನವು ಸ್ಪಷ್ಟಪಡಿಸಿದೆ. ಅದೇ ರೀತಿ ಕ್ರಿ. ಪೂ. ೧೫೦೦ರವೇಳೆಗೆ ಆರ್ಯರು ಮೂಲತಃ ಕೃಷಿಕರಾಗಿದ್ದರು.

ಋಗ್ವೇದದ ಅತ್ಯಂತ ಪ್ರಾಚೀನ ಭಾಗದಲ್ಲಿ ನೇಗಿಲಿನ ಪ್ರಸ್ತಾಪವಿದೆ. ಬಿತ್ತನೆ, ಕೊಯ್ಲು, ಸುಗ್ಗಿ ಮಾಡುವುದು ಮುಂತಾದ ವಿಚಾರಗಳು ಅವರಿಗೆ ಪರಿಚಯವಿತ್ತು. ನಂತರ ವೇದಗಳ ಕಾಲದಲ್ಲಿ ಕೃಷಿಯೇ ಪ್ರಧಾನವೃತ್ತಿಯಾಗಿ ಗಂಗಾ ಬಯಲಿನಲ್ಲಿ ಸ್ಥಿರ ಜೀವನ ಪ್ರಾರಂಭಿಸಿದರು. ಈ ವೇಳೆಯಲ್ಲಿ ಇವರ ಜೀವನದ ಅವಿಭಾಜ್ಯ ಅಂಗವಾಗಿ ಪಶುಸಂಗೋಪನೆಯೂ ಅಭಿವೃದ್ಧಿಗೊಂಡಿತು. ಏಕೆಂದರೆ ನಂತರದ ವೇದಗಳ ಕಾಲದಲ್ಲಿ ಗೋವುಗಳೇ ಆದಾಯದ ಮೂಲವಾಗಿದ್ದವು. ಇದರಿಂದ ಹಲವಾರು ಕಸುಬುಗಳು ಬೆಳವಣಿಗೆಯಾದವು. ವೇದಗಳ ಕಾಲದಲ್ಲಿ ರೈತರು ತಮಗೆ ಅಗತ್ಯವಾದಷ್ಟನ್ನು ಮಾತ್ರವಲ್ಲದೇ ತಮ್ಮ ರಾಜರಿಗೂ, ಪುರೋಹಿತ ವರ್ಗದವರಿಗೂ ಉತ್ಪಾದನೆಯ ಸ್ವಲ್ಪ ಭಾಗವನ್ನು ನೀಡುತ್ತಿದ್ದರು. ಸುಮಾರು ಕ್ರಿ. ಪೂ. ೨೩೨ರ ವೇಳೆಗೆ ಭಾರತದಲ್ಲಿ ಮೌರ್ಯಸಾಮ್ರಾಜ್ಯವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಪಾಟಲೀಪುತ್ರ, ಕೌಸಂಬಿ, ಉಜ್ಜಯಿನಿ, ತಕ್ಷಶಿಲೆ ಮುಂತಾದ ಪ್ರಮುಖ ನಗರಗಳ ಜೊತೆಗೆ ಕರ್ನಾಟಕದಲ್ಲಿ ಚಿತ್ರದುರ್ಗದ ಬ್ರಹ್ಮಗಿರಿಯೂ ಮುಖ್ಯನಗರವಾಗಿತ್ತು. ಈ ವಿಚಾರವು ಪುರಾತತ್ವ ಉತ್ಖನನದಿಂದ ದೃಢಪಟ್ಟಿದೆ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಕೃಷಿಯ ವಿಸ್ತರಣೆಯ ಉದ್ದೇಶ ರೈತರ ಮೂಲಕ ವಿಪುಲವಾಗಿ ರಾಜಾದಾಯವನ್ನು ಸಂಗ್ರಹಿಸುವ ವಿಧಾನವನ್ನು ತಿಳಿಸಿದ್ದಾನೆ.

ಕ್ರಿ. ಶ. ೫ನೇ ಶತಮಾನದ ಗುಪ್ತ ಸಾಮ್ರಾಜ್ಯದ ಕಾಲಾವಧಿಯಲ್ಲಿ ಅಧಿಕ ಪ್ರಮಾಣದ ಕೃಷಿ ವಿಸ್ತರಣೆಯಾಗಿತ್ತು. ಈ ವೇಳೆಯಲ್ಲೇ ಅಧಿಕ ಪ್ರಮಾಣದ ಭೂ ಹಿಡುವಳಿಗಳನ್ನು ಪುರೋಹಿತ ವರ್ಗದವರಿಗೆ ನೀಡಲಾಯಿತು. ಗುಪ್ತರ ಕಾಲಾನಂತರದಲ್ಲಿಯೇ ಭೂಹಿಡುವಳಿಗಳಿಗೆ ಸಂಬಂಧಿಸಿದ ಹಕ್ಕಿನ ಪ್ರಶ್ನೆ ಉಂಟಾಯಿತು. ಏಕೆಂದರೆ ಕ್ರಿ. ಶ. ೬ನೇ ಶತಮಾನದ ನ್ಯಾಯಶಾಸ್ತ್ರಜ್ಞನಾಗಿದ್ದ ಕಾತ್ಯಾಯನನು ಭೂ ರೂಪದ ಆಸ್ತಿಯಲ್ಲಿ ಸ್ತ್ರೀಯರಿಗೂ ಪಾಲಿದ್ದುದಾಗಿ ಹೇಳಿರುವನು.

ಭಾರತ ದೇಶವು ಮುಖ್ಯವಾಗಿ ಕೃಷಿ ಆಧಾರಿತ ದೇಶ. ಭಾರತದ ಭೂಹಿಡುವಳಿಯ ವಿಸ್ತಾರ ವಿಶಾಲವಾಗಿ ವ್ಯಾಪಿಸಿದೆ. ಭೂಹಿಡುವಳಿಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿದ ವಿದ್ವಾಂಸರು ಭೂ ಹಿಡುವಳಿದಾರರಿಗೆ ಹೆಚ್ಚು ಮಹತ್ವ ನೀಡಿದ್ದಾರೆ. ಪ್ರಾಚೀನಕಾಲದ ನ್ಯಾಯಶಾಸ್ತ್ರಜ್ಞರಾಗಿದ್ದ ಮನು, ನಾರದ ಮತ್ತು ಕೌಟಿಲ್ಯರು ಭೂಒಡೆತನವನ್ನು ಕುರಿತು ಅಭಿಪ್ರಾಯ ಪಡುವಂತೆ ಯಾರು ಭೂಮಿಯಲ್ಲಿ ನಿಜವಾಗಿ ಉಳುಮೆ ಮಾಡುವವರೋ ಅವರಿಗೆ ಭೂಮಿ ಸೇರಿದ್ದಿತ್ತೆನ್ನುತ್ತಾರೆ. ರೈತರಿಗೆ ಅವರು ಸಾಗುವಳಿ ಮಾಡಿದ ಭೂಮಿಯ ಮೇಲೆ ಸಂಪೂರ್ಣವಾದ ಅಧಿಕಾರ ಇತ್ತು. ಯಾವ ರಾಜರು

ರೈತರನ್ನು ಯಾವತ್ತೂ ಹೊರಹಾಕಲು ಸಾಧ್ಯವಿರಲಿಲ್ಲ. ರಾಜನಾದವನು ನಿರ್ದಿಷ್ಟಪಡಿಸಿದ ಭೂಕಂದಾಯವನ್ನು ರೈತರಿಂದ ಪಡೆಯುತ್ತಿದ್ದನು. ಆ ಮೂಲಕ ಭೂ ಹಿಡುವಳಿಗಳ ಒಡೆತನದ ಹಕ್ಕು ರೈತರಿಗೆ ಸೇರಿತ್ತು. ಆದರೆ ರಾಜ್ಯಕ್ಕೆ ಕೃಷಿ ಉತ್ಪಾದನೆಯಲ್ಲಿ ನಿರ್ದಿಷ್ಟವಾದ ಭಾಗವಿತ್ತು. ಏಕೆಂದರೆ ಜನತೆಯ ರಕ್ಷಣೆಯ ಹೊಣೆ ರಾಜ್ಯದಾಗಿತ್ತು. ವಿಲ್ಸನ್ ವಿವರಿಸಿರುವಂತೆ ರಾಜನ ಬಿರುದುಗಳು ಭೂಮಿಯ ಮೇಲೆ ಅವನು ಹೊಂದಿರುವ ಅಧಿಕಾರವನ್ನು ಸೂಚಿಸುತ್ತವೆ ಎಂದು ತಿಳಿಸಿದ್ದಾನೆ. ರಾಜನು ಭೂಮಿಯ ಒಡೆಯನಲ್ಲ, ಆದರೆ ಅವನು ಭೂಮಂಡಲದ ಒಡೆಯ ಅಂದರೆ ಸಂಪೂರ್ಣ ಸಾಮ್ರಾಜ್ಯದ ಒಡೆಯ. ಅವನ ಅಧಿಕಾರಕ್ಕೊಳಪಟ್ಟ ರಾಜ್ಯದ ಯಾವುದೇ ಒಂದು ಭಾಗಕ್ಕಷ್ಟೇ ಅವನ ಅಧಿಕಾರ ಸೀಮಿತವಾಗಿರಲಿಲ್ಲ. ರಾಜನು ತನಗೆ ಸಲ್ಲಿಸಬೇಕಾಗಿದ್ದ ಕಂದಾಯವನ್ನು ಮುಟ್ಟಿಸದಿದ್ದ ಪಕ್ಷದಲ್ಲಿ ಮಾತ್ರ ಅಥವಾ ಸಾಗುವಳಿಯನ್ನು ಕಡೆಗಣಿಸಿದ ಹಿಡುವಳಿದಾರರನ್ನು ಶಿಕ್ಷಿಸಬಹುದಾಗಿತ್ತು. ಗ್ರಾಮಗಳಲ್ಲಿ ರೈತರು ಸಾಗುವಳಿದಾರರಾಗಿದ್ದು, ಅವರ ರಕ್ಷಣೆಯ ಜವಾಬ್ದಾರಿ ರಾಜನಿಗೆ ಸೇರಿದ್ದಿತು. ಅಂದರೆ ಹಿಡುವಳಿದಾರರಿಗೆ ಅವನೇ ಒಡೆಯನಾಗಿರುತ್ತಿದ್ದನು. ರಾಜನು ತನ್ನ ರಾಜ್ಯದ ರಕ್ಷಕನಾಗಿದ್ದನು. ಆದ್ದರಿಂದಲೇ ಅವನಿಗೆ ಪೃಥ್ವಿಪತಿ, ಭೂಮೀಶ್ವರ, ಭೂಮಿಪ ಮುಂತಾಗಿ ಕರೆಯುತ್ತಿದ್ದರು. ಇಂತಹ ಬಿರುದುಗಳು ರಾಜರಿಗೆ ಸಾಮಾನ್ಯವಾಗಿರುತ್ತಿದ್ದವು. ಸ್ಮೃತಿಯಲ್ಲಿ ಬರುವಂತೆ ರಾಜಪ್ರಭುತ್ವವೆಂದರೆ ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವುದಾಗಿತ್ತು. ಭೂಮಿಯೂ ಸಂಪೂರ್ಣವಾಗಿ ರಾಜನ ಆಸ್ತಿಯಾಗಿರಲಿಲ್ಲ. ಅಂದರೆ ಸಕಲ ಜೀವರಾಶಿಗಳು ಭೂಮಿಯ ಮೇಲೆ ಬದುಕಿ ಇಲ್ಲಿನ ಸಂಪತ್ತನ್ನು ಅನುಭವಿಸುವ ಹಕ್ಕಿತ್ತು. ಆದರೂ ರಾಜನು ಭೂಮಿಯನ್ನು ದಾನ ನೀಡುವಾಗ ಒಂದು ಭಾಗವನ್ನು ಮಾತ್ರ ನೀಡಬಹುದಾಗಿತ್ತು. ಇಡೀ ರಾಜ್ಯದ ಭೂಮಿಯನ್ನು ದಾನ ಮಾಡಲು ಸಾಧ್ಯವಿರಲಿಲ್ಲ.

ಈ ದೃಷ್ಟಿಯಿಂದ ಭಾರತದಲ್ಲಿ ಭೂಮಿಯೇ ಸಂಪತ್ತಿನ ಅತ್ಯಂತ ಮುಖ್ಯವಾದ ಮೂಲ. ಅನಾದಿ ಕಾಲದಿಂದಲೂ ದೇಶದ ಜನರನ್ನು ಭೂಮಿಯು ಸಾಕುತ್ತದೆ. ಯುಗಯುಗಾಂತರಗಳಿಂದ ಭೂಮಿಯ ಉತ್ಪನ್ನವನ್ನು ವಿತರಿಸಲು ಅನೇಕ ವಿಧಾನಗಳನ್ನು ರೂಪಿಸಿಕೊಂಡಿದೆ. ಆದ್ದರಿಂದ ಪ್ರತಿಯೊಂದು ಸಮುದಾಯವು ಭೂಮಿಯಲ್ಲಿ ಸಮಾನ ಪಾಲುಪಡೆಯಲು ಅವಕಾಶವಾಯಿತು.

೨. ಬಿ. ಎಲ್. ರೈಸ್, ಎಫಿಗ್ರಾಫಿಯ ಆಫ್ ಕರ್ನಾಟಕ, ಸಂ : ೧೧, ಚಿತ್ರದುರ್ಗ ಶಾಸನ ಸಂಖ್ಯೆ ೩, ಬೆಂಗಳೂರು, ೧೯೦೪

೩. ಎ. ವಿ. ವೆಂಕಟರತ್ನಂ, ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಮೈಸೂರು

ವಿಶ್ವವಿದ್ಯಾನಿಲಯ, ಮೈಸೂರು, ೧೯೭೪, ಪು. ೬೦, ಪಿ. ವಿ. ಕೃಷ್ಣಮೂರ್ತಿ, *ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗ ಗಳು.* ಎಂ.ಎಂ.ಕಲಬುರ್ಗಿ (ಸಂ)., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪು. ೨೧೩

೪. ಎಂ. ಎಂ. ಕಲಬುರ್ಗಿ (ಸಂ)., *ಕರ್ನಾಟಕದ ಕೈಫಿಯತ್ತುಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪, ಪು. XXXI. ಪಿ. ವಿ. ಕೃಷ್ಣಮೂರ್ತಿ, **ಸುಗಟೂರು ವೀರಶೈವ ಅರಸು ಮನೆತನ,** ಕನ್ನಡ ಅಧ್ಯಯನ ಪೀಠ, ಧಾರವಾಡ, ೧೯೯೪, ಪು. ೩೭

೫. ಟಿ. ಗಿರಿಜಾ, **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ, ೧೯೯೧, ಪು. ೯೧. ಬಿ. ಎಲ್. ರೈಸ್, ಎ.ಕ.ಸಂಪುಟ ೧೧, **ಹೊಳಲ್ಕೆರೆ ೧೨೦.** ಲಕ್ಷ್ಮಣ್ ತೆಲಗಾವಿ, *೨೧೧ ವರ್ಷಗಳು ಚಿತ್ರದುರ್ಗವನ್ನಾಳಿದ ನಾಯಕ ಅರಸರು* ಎಂ. ಕೆ.ನಾಯಕ (ಸಂ)., **ವಾಲ್ಮೀಕಿ ವಾಣಿ,** ಮಾಸಿಕ ಪತ್ರಿಕೆ, ಚಿತ್ರದುರ್ಗ, ಜೂನ್, ೧೯೯೮, ಪು. ೨೨

೬. ಬಿ. ಆರ್. ಗೋಪಾಲ್ (ಸಂ)., **ವಿಜಯನಗರ ಇನ್‌ಸ್ಕ್ರಿಪ್ಷನ್ಸ್** ಸಂಪುಟ-೨, **ಹೊಳಲ್ಕೆರೆ ಶಾಸನ ಸಂಖ್ಯೆ** ೬೨, ಪುರಾತತ್ತ್ವ ಇಲಾಖೆ, ಮೈಸೂರು, ಕರ್ನಾಟಕ ಸರ್ಕಾರ, ೧೯೮೬. ಪಿ. ವಿ. ಕೃಷ್ಣಮೂರ್ತಿ, *ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು,* ಎಂ. ಎಂ. ಕಲಬುರ್ಗಿ (ಸಂ)., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಪು.೨೨೫

೭. ಪಿ. ವಿ. ಕೃಷ್ಣಮೂರ್ತಿ, *ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು,* ಎಂ. ಎಂ. ಕಲಬುರ್ಗಿ(ಸಂ), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ ೧. ಬಿ. ಎಲ್. ರೈಸ್, ಎ.ಕ.ಸಂಪುಟ ೧೧, **ಚಿತ್ರದುರ್ಗ ಶಾಸನ ಸಂಖ್ಯೆ** ೮೪

೮. ಟಿ.ಗಿರಿಜಾ, **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ಪು. ೨೧೩. ಮೈಸೂರು ಪುರಾತತ್ವ ಇಲಾಖೆಯ ವರದಿ (ಎಂ.ಎ.ಆರ್), ೧೯೩೯, **ದುಮ್ಮಿ ಶಾಸನ ಸಂಖ್ಯೆ** ೧೬, ಬಿ. ಆರ್. ಗೋಪಾಲ್(ಸಂ), **ವಿಜಯನಗರ ಇನ್‌ಸ್ಕ್ರಿಪ್ಷನ್ಸ್,** ಸಂಪುಟ-೨

೯ ಬಿ. ಎಲ್. ರೈಸ್, ಎ.ಕ.ಸಂಪುಟ ೧೧, **ಹೊಳಲ್ಕೆರೆ ಶಾಸನ ಸಂಖ್ಯೆ** ೧೩. ಮೈಸೂರು ಪುರಾತತ್ತ್ವ ಇಲಾಖೆಯ ವರದಿ(ಎಂ.ಎ.ಆರ್), ೧೯೪೧, **ಬಾಗೂರ ಶಾಸನ ಸಂಖ್ಯೆ**-೩, ಬಿ.ಆರ್. ಗೋಪಾಲ್(ಸಂ), **ವಿಜಯನಗರ ಇನ್‌ಸ್ಕ್ರಿಪ್ಷನ್ಸ್,** ಸಂಪುಟ-೨

೧೦. ಎಂ.ಎ.ಆರ್., ೧೯೪೬, ನಂ-೨, **ಕರ್ನಾಟಕ ಶಾಸನ ಸಂಖ್ಯೆ** ೬೨೬ ಬಿ.ಆರ್.ಗೋಪಾಲ್(ಸಂ), **ವಿಜಯನಗರ ಇನ್‌ಸ್ಕ್ರಿಪ್ಷನ್ಸ್,** ಸಂಪುಟ-೨,

೧೧. ಟಿ. ಗಿರಿಜಾ, **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ಪು. ೪೨೩. ಎಂ. ಎಸ್. ಪುಟ್ಟಣ್ಣ, **ಚಿತ್ರದುರ್ಗ ಪಾಳೆಯಗಾರರು,** ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೯೭, ಪು. ೮೫

೧೨. ಬಿ. ಆರ್. ಗೋಪಾಲ್(ಸಂ), **ವಿಜಯನಗರ ಇನ್‌ಸ್ಕ್ರಿಪ್ಷನ್ಸ್,** ಸಂಪುಟ-೨, **ಜಗಳೂರು ಶಾಸನ ಸಂಖ್ಯೆ** ೧೨. ಬಿ. ಎಲ್. ರೈಸ್, ಎ.ಕ.ಸಂಪುಟ ೧೧, **ಜಗಳೂರು ಶಾಸನ ಸಂಖ್ಯೆ** ೪೬

೧೩. ಟಿ. ಗಿರಿಜಾ, **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ಪು. ೩೧೭. ಬಿ. ಎಲ್. ರೈಸ್, ಎ.ಕ.ಸಂಪುಟ ೧೧, **ಜಗಳೂರು ಶಾಸನ ಸಂಖ್ಯೆ** ೪೧

೧೪. ಬಿ. ಎಲ್. ರೈಸ್, ಎ.ಕ.ಸಂಪುಟ ೧೧, **ಹಿರಿಯೂರು ಶಾಸನ ಸಂಖ್ಯೆ ೯೪.** ಪಿ. ವಿ. ಕೃಷ್ಣಮೂರ್ತಿ, ***ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು,*** ಎಂ. ಎಂ. ಕಲಬುರ್ಗಿ(ಸಂ), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ ೧

೧೫. ಬಿ. ಎಲ್. ರೈಸ್, ಎ.ಕ.ಸಂಪುಟ ೧೧, **ಹಿರಿಯೂರು ಶಾಸನ ಸಂಖ್ಯೆ** ೭೪. ಪಿ. ವಿ. ಕೃಷ್ಣಮೂರ್ತಿ(ಸಂ)., **ಸಗಟೂರು ವೀರಶೈವ ಅರಸು ಮನೆತನ**, ಕನ್ನಡ ಅಧ್ಯಯನ ಪೀಠ, ಧಾರವಾಡ, ೧೯೯೪, ಪು.೩೮. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಹಿರಿಯೂರು ಶಾಸನ ಸಂಖ್ಯೆ** ೮೮

೧೬. ಪಿ. ವಿ. ಕೃಷ್ಣಮೂರ್ತಿ, ***ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು,*** ಎಂ.ಎಂ.ಕಲಬುರ್ಗಿ(ಸಂ), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ ೧. ಬಿ. ಎಲ್. ರೈಸ್, ಎ. ಕ. ಸಂಪುಟ ೧೧, **ಚಿತ್ರದುರ್ಗ ಶಾಸನ ಸಂಖ್ಯೆ** ೮೪ (ಕ್ಯಾಸಾಪುರದ ತಾಮ್ರಶಾಸನದಲ್ಲಿ)

೧೭. ಕೆ. ಎ. ನೀಲಕಂಠ ಶಾಸ್ತ್ರಿ, **ಹಿಸ್ಟರಿ ಆಫ್ ಸೌತ್ ಇಂಡಿಯಾ ಫ್ರಂ ಹಿಸ್ಟಾರಿಕಲ್ ಟೈಮ್ಸ್ ಟು ದಿ ಫಾಲ್ ಆಫ್ ದಿ ವಿಜಯನಗರ ಎಂಪೈರ್**, ಮದ್ರಾಸ್, ೧೯೫೮. ಎ. ವಿ. ವೆಂಕಟರತ್ನಂ., **ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ವಿಜಯನಗರ ಎಂಫೈರ್**, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨, ಪು. ೧೪. ಟಿ.ಪಿ.ವಿಜಯ್ **ಬರ್ಟನ್ ಸ್ಟೇನ್ ಮತ್ತು ವಿಜಯನಗರ ಸಾಮ್ರಾಜ್ಯ**, ರಹಮತ್ ತರೀಕೆರೆ(ಸಂ) ಕನ್ನಡ ಅಧ್ಯಯನ, ಬಿಸಿಲು ಸಂಚಿಕೆ, ತ್ರೈಮಾಸಿಕ ಪತ್ರಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪು. ೯-೧೦. ಬರ್ಟನ್ ಸ್ಟೇನ್‌ರ ವಿಜಯನಗರ ಕೃತಿಯಲ್ಲಿ ನೀಲಕಂಠಶಾಸ್ತ್ರಿ ಅವರ ಕೇಂದ್ರ ರಾಜ್ಯ ವ್ಯವಸ್ಥೆಯಂಥ ವಾದಗಳನ್ನು ಸಂಪೂರ್ಣವಾಗಿ ಅಲ್ಲಗೆಳೆದು ಅವರು **ಸೆಗ್ಮೆಂಟರಿ ಸ್ಟೇಟ್** ಸಿದ್ಧಾಂತ ಎಂದು ಕರೆದರು. ಅಂದರೆ ವಿಜಯನಗರ ಒಂದು ಸಾಮ್ರಾಜ್ಯವಾಗಿ ಎಂದೂ ಇರಲಿಲ್ಲ. ಅಲ್ಲಿ ಮಧ್ಯಕಾಲೀನ ಯುರೋಪಿಯನ್ ದೇಶಗಳಲ್ಲಿದ್ದಂತಹ ಆಡಳಿತಶಾಹಿ ಪ್ರಧಾನವಾದ ಕೇಂದ್ರೀಕೃತ ವ್ಯವಸ್ಥೆಯೂ ಇರಲಿಲ್ಲ. ಇದರ ಬದಲಿಗೆ ತನ್ನದೇ ಆದ ಸ್ವಾಯತ್ತ ಆಡಳಿತ ವ್ಯವಸ್ಥೆ ಹೊಂದಿದ್ದ ಹಾಗೂ ಸಾಮ್ರಾಜ್ಯದ ರಾಜಧಾನಿಯ ನಿರಂಕುಶಶಾಹಿ ಅಧಿಕಾರದಿಂದ ಮುಕ್ತವಾಗಿದ್ದ ತುಂಡು ರಾಜ್ಯ(ಸೆಗ್ಮೆಂಟರಿ ಸ್ಟೇಟ್) ಗಳು ಆ ಕಾಲದಲ್ಲಿ ಪ್ರಮುಖವಾಗಿದ್ದವು ಎಂದು ವಾದಿಸಿದ್ದಾರೆ.

೧೮. ಎಂ. ಎಸ್. ಪುಟ್ಟಣ್ಣ, **ಚಿತ್ರದುರ್ಗ ಜಿಲ್ಲೆಯ ಪಾಳೆಯಗಾರರು**, ಪು.೧೬

೧೯. ಕ. ರಾ. ಕೃಷ್ಣಸ್ವಾಮಿ, **ಚಿತ್ರಕಲ್ಲು ಮೆದಕರಿ**, ಜಾನಪದ ಅಕಾಡೆಮಿ, ಬೆಂಗಳೂರು, ೧೯೭೫, ಪು. II. ಸಿ. ಹಯವದನರಾವ್, **ಮೈಸೂರು ಗೆಜೆಟಿಯರ್**, ಸಂಪುಟ-೨, ಮೈಸೂರ ಸರಕಾರ ಮೈಸೂರು, ೧೯೩೦, ಪು. ೨೫೦೭, ೨೫೧೨-೧೩

೨೦. ಮಾರ್ಕ್‌ವಿಲ್ಕ್ಸ್ , **ಹಿಸ್ಟಾರಿಕಲ್ ಸ್ಕೆಚಸ್ ಆಫ್ ದಿ ಸೌತ್ ಆಫ್ ಇಂಡಿಯಾ ಇನ್ ಪ್ಯಾನ್, ಆಟೆಮ್ಟ್ ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರು**, ಏಷ್ಯನ್ ಎಜುಕೇಷನಲ್ ಸರ್ವೀಸ್, ನ್ಯೂ ದೆಹಲಿ, ೧೯೮೯, ಸಂಪುಟ. ೧, ಪು. ೭೨೭

೨೧. ಎಂ. ವಿ. ಶ್ರೀನಿವಾಸ್, ***ಚಿತ್ರದುರ್ಗ ಜಿಲ್ಲೆಯಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ್ ಆಳ್ವಿಕೆ***, ಎಂ. ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ(ಸಂ), **ಚಂದ್ರವಳ್ಳಿ** ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ, ೧೯೭೬, ಪು. ೯೯

೨೨. ಬಿ. ಎನ್. ಸತ್ಯನ್ (ಸಂ), **ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್**, ಕರ್ನಾಟಕ ಸರಕಾರ, ಬೆಂಗಳೂರು, ೧೯೬೭, ಪು. ೨೫೬

೨೩. **ಮೈಸೂರು ಗೆಜೆಟ್**, ಏಪ್ರಿಲ್ ೧೧-೩-೧೮೮೬, ಮೈಸೂರು ಸರಕಾರ, ಮೈಸೂರು, ಪು. ೬೬-೭೦

೨೪. ಜೇಮ್ಸ್ ಮನೋರ್, **ಪೊಲಿಟಿಕಲ್ ಚೇಂಜ್ ಇನ್ ಯ್ಯಾನ್ ಇಂಡಿಯನ್ ಸ್ಟೇಟ್ ಮೈಸೂರು, ೧೯೧೭-೧೯೫೫**, ಸೌತ್ ಏಷಿಯನ್ ಬುಕ್, ದೆಹಲಿ, ೧೯೭೮, ಪು. ೧೬

೨೫. ಹಾ. ವೆಂ. ನಾಗೇಶ, **ಭಾರತೀಯ ಗ್ರಾಮ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೬, ಪು. ೩೬

೨೬. ಹೊಳಲ್ಕೆರೆ ತಾಲೂಕು, **ಬರಬಲೂತಿ ರಿಜಿಸ್ಟಾರ್ ೧೯೩೩**, ಹೊಳಲ್ಕೆರೆ ತಾಲೂಕು ಅಧಿಕಾರಿಗಳ ಕಛೇರಿ, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ

೨೭. ಜೇಮ್ಸ್ ಮನೋರ್, **ಪೊಲಿಟಿಕಲ್ ಚೇಂಜ್ ಇನ್ ಯ್ಯಾನ್ ಇಂಡಿಯನ್ ಸ್ಟೇಟ್, ಮೈಸೂರು**, ೧೯೧೭-೧೯೫೫, ಪು. ೧೮

೨೮. ಡಿ. ಎನ್. ಯೋಗಿಶ್ವರಪ್ಪ, **ಹಾಗಲವಾಡಿ ನಾಯಕರು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪು. II

ಅಧ್ಯಾಯ ೨

ಭೂಹಿಡುವಳಿಗಳು ಹಾಗೂ ಆರ್ಥಿಕತೆ

ಭೂಹಿಡುವಳಿಗಳು ಹಾಗೂ ಆರ್ಥಿಕತೆ

ಚಿತ್ರದುರ್ಗ ಪ್ರದೇಶವು ನಮ್ಮ ಅಧ್ಯಯನಕ್ಕೆ ಗೊತ್ತುಪಡಿಸಿಕೊಂಡ ಕಾಲಾವಧಿಯಲ್ಲಿ ವಿವಿಧ ರಾಜಕೀಯ ಪ್ರಭುತ್ವದ ಆಡಳಿತಕ್ಕೆ ಒಳಪಟ್ಟಿತ್ತು. ಈ ಪ್ರದೇಶ ಆರ್ಥಿಕ ದೃಷ್ಟಿಯಿಂದ ಕೆಳದಿ ಇಲ್ಲವೇ ಕರಾವಳಿ ಪ್ರದೇಶದಷ್ಟು ಸಂಪದ್ಭರಿತವಾಗಿರಲಿಲ್ಲ. ಅಲ್ಲಿನ ಸ್ಥಳೀಯ ನಾಯಕ ಅರಸರ ಕಾಲದಿಂದ ಸ್ವಾತಂತ್ರ್ಯದ ನಂತರವು ಹೆಚ್ಚಾಗಿ ಖುಷ್ಕಿ ಭೂಹಿಡುವಳಿಗಳನ್ನು ಈ ಪ್ರದೇಶಗಳು ಒಳಗೊಂಡಿವೆ. ಆದರೂ ಕರ್ನಾಟಕದ ಆಯಕಟ್ಟಿನ ಭಾಗದಲ್ಲಿರುವುದರಿಂದ ಚಿತ್ರದುರ್ಗವು ಸ್ವಾತಂತ್ರ್ಯ ನಂತರದ ಕಾಲಾವಧಿಯವರೆಗೂ ಪ್ರಮುಖ ರಾಜಕೀಯ ಚಟುವಟಿಕೆಗಳ ಕೇಂದ್ರಬಿಂದುವಾಗಿತ್ತು.

ಚಿತ್ರದುರ್ಗ ಪ್ರದೇಶವನ್ನು ಅಲ್ಲಿಯ ಸ್ಥಳೀಯ ನಾಯಕರು ವಿಜಯನಗರ ಅರಸರಿಂದ ಅಮರ ಮಾಗಣಿಯಾಗಿ ಪಡೆದಿದ್ದರು. ಆ ಮೂಲಕ ರಾಜಕೀಯ ಅಸ್ತಿತ್ವ ಪಡೆದ ನಾಯಕರು ಇಲ್ಲಿನ ಭೂಸಂಬಂಧಿ ವಿಷಯಗಳ ಕಡೆಯೂ ಗಮನಹರಿಸಿದರು. ನಾಯಕ ಅರಸರು ಖಾಸಗಿ ಭೂ ಒಡೆತನವನ್ನು ರಕ್ಷಿಸುವುದರೊಂದಿಗೆ ಇನಾಂ ಭೂಹಿಡುವಳಿಗಳನ್ನು ಧಾರ್ಮಿಕ ದತ್ತಿ ಸಂಸ್ಥೆಗಳಿಗೆ ನೀಡುವ ಮೂಲಕ ಅವುಗಳ ಮನ್ನಣೆಗೆ ಪಾತ್ರರಾಗಿದ್ದರು. ಈ ಮೂಲಕ ಅಂದಿನ ಸಮಾಜದ ಮೇಲುವರ್ಗದ ಜಾತಿಯ ಹಿತವನ್ನು ಕಾಪಾಡುವ ಉದ್ದೇಶವಿತ್ತು. ಉಳಿದಂತೆ ಇವರ ಕಾಲದಲ್ಲಿಯೂ ಖುಷ್ಕಿ, ತರಿ, ಬಾಗಾಯ್ತು ಎಂದು ಭೂಮಿಯನ್ನು ಅವುಗಳ ಗುಣಮಟ್ಟಕ್ಕನುಗುಣವಾಗಿ ವಿಭಾಗಿಸಿ ಭೂಕಂದಾಯ ಪಡೆಯುವ ಕ್ರಮ ಜಾರಿಯಲ್ಲಿತ್ತು. ಅಂದಿನ ಸಮಾಜದಲ್ಲಿಯೂ ಗೌಡ ಅಥವಾ ಪಟೇಲರು ಭೂ ಹಿಡುವಳಿದಾರರಾಗಿ ರಾಜ್ಯದೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಎಲ್ಲಾ ಕೃಷಿಸಂಬಂಧಿಸಿದ ವ್ಯವಹಾರಗಳನ್ನು ನಿರ್ವಹಿಸಿದ ನಾಯಕ ಅರಸರು ಭೂಮಿಯನ್ನು ವಿತರಿಸುವ ವೇಳೆಯಲ್ಲಿಯೇ ಕ್ರಯ, ಭೋಗ್ಯ ಎಂಬ ಬಗ್ಗೆ ಸ್ಪಷ್ಟಪಡಿಸಿದ್ದರು. ವಿಜಯನಗರ ಅರಸರ ಸಾಮಂತ ಅರಸರಾದ ಇವರು ವಿಜಯನಗರದ ಮಾದರಿಯಲ್ಲಿಯೇ ತಮ್ಮ ಸಂಸ್ಥಾನದಲ್ಲಿ ಆಡಳಿತ ನಡೆಸಿದರು.

ಮೈಸೂರಿನಲ್ಲಿ ಹೈದರಾಲಿ ಅಧಿಕಾರಕ್ಕೆ ಬಂದ ನಂತರ ಮೈಸೂರು ಸಂಸ್ಥಾನವನ್ನು ವಿಸ್ತರಿಸುವ ಕಡೆ ಗಮನಹರಿಸಿದನು. ಇವನ ಆಕ್ರಮಣ ನೀತಿಯಿಂದಾಗಿ ಹಲವು ಪಾಳೆಪಟ್ಟುಗಳು ಸಣ್ಣ ಪುಟ್ಟ

ಸಂಸ್ಥಾನಗಳು ಮೈಸೂರು ಸಂಸ್ಥಾನದಲ್ಲಿ ವಿಲೀನವಾದವು. ಹಾಗೆಯೇ ೧೭೭೯ರಲ್ಲಿ ಚಿತ್ರದುರ್ಗವನ್ನು ಹೈದಾರಾಲಿಯೂ ಆಕ್ರಮಿಸಿ ಮೈಸೂರು ಸಂಸ್ಥಾನಕ್ಕೆ ಸೇರಿಸಿದನು. ಅಲ್ಲಿಂದ ಚಿತ್ರದುರ್ಗ ಒಂದು ಪ್ರಾಂತ್ಯವಾಯಿತು. ಆದರೆ ಹೈದರಾಲಿಯೂ ಚಿತ್ರದುರ್ಗದ ಆಡಳಿತದ ಕಡೆ ಹೆಚ್ಚು ಗಮನಹರಿಸಲಿಲ್ಲ. ಅವನ ನಂತರ ಅಧಿಕಾರಕ್ಕೆ ಬಂದ ಅವನ ಮಗ ಟಿಪ್ಪುವಿನ ಕಾಲದಲ್ಲಿ ಚಿತ್ರದುರ್ಗವನ್ನು ಮೈಸೂರು ಸಂಸ್ಥಾನದ ಒಂದು ಭಾಗವಾಗಿ ಆಡಳಿತ ನಡೆಸಿದನು. ಇವನ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಜಾರಿಗೆ ಬಂದ ಕಾಯಿದೆ ಕಾನೂನುಗಳು ಇಡೀ ಪ್ರದೇಶಕ್ಕೆ ಅನ್ವಯಿಸುವಂತೆ ಚಿತ್ರದುರ್ಗಕ್ಕೂ ಅನ್ವಯಿಸಿದವು. ಹಾಗೆಯೇ ಮೈಸೂರು ಸಂಸ್ಥಾನದಲ್ಲಿ ಭೂ ಸಂಬಂಧಿ ವಿಚಾರಗಳನ್ನು ಕುರಿತು ಕಾಯಿದೆಗಳನ್ನು ಜಾರಿಗೆ ತರುವ ಮೂಲಕ ಪ್ರಬಲ ಭೂಹಿಡುವಳಿದಾರರನ್ನು ತನ್ನ ನೇರ ನಿಯಂತ್ರಣಕ್ಕೆ ತಂದನು. ಪ್ರಬಲ ಭೂಹಿಡುವಳಿಯನ್ನು ಹೊಂದುವ ಮೂಲಕ ಪಾಳೆಯಗಾರಿಕೆ ರೀತಿಯ ಜಮೀನುದಾರಿ ವ್ಯವಸ್ಥೆಯನ್ನು ಮೈಸೂರು ಸಂಸ್ಥಾನ ಸೇರಿದಂತೆ ಚಿತ್ರದುರ್ಗ ಪ್ರದೇಶದಲ್ಲಿಯೂ ನಿರ್ಮೂಲನ ಮಾಡಿದನು. ಯಾವುದೇ ವ್ಯಕ್ತಿ ತನ್ನ ಸ್ವತಃ ಸಾಗುವಳಿ ಮಾಡುವ ಭೂಮಿಯೂ ಒಂದು "ಮೌಜ್ ಗಿಂತ" ಹೆಚ್ಚಾಗಿರದಂತೆ ನೋಡಿಕೊಂಡನು. ಚಿತ್ರದುರ್ಗ ಪ್ರದೇಶದ ಕಂದಾಯ ಇಲಾಖೆಯಲ್ಲಿಯೂ ಮುಖ್ಯ ಆಡಳಿತಗಾರರಾಗಿ ಮುಸ್ಲಿಂರನ್ನೇ ನೇಮಕ ಮಾಡಿದನು. ಕಂದಾಯ ವ್ಯವಸ್ಥೆಯಲ್ಲಿ ಸುಬೇದಾರ ಮತ್ತು ಅಮೀಲರು ಸಾಗುವಳಿದಾರ ಮತ್ತು ರಾಜ್ಯದೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದರು. ಟಿಪ್ಪುವಿನ ಆಡಳಿತದ ಕೊನೆಯ ಭಾಗದಲ್ಲಿ ಇಲ್ಲಿ ಪ್ರವಾಸ ಕೈಗೊಂಡಿದ್ದ ಬುಕಾನನ್ ಭೂಹಿಡುವಳಿ ವ್ಯವಸ್ಥೆ, ಸಾಗುವಳಿ ವಿಧಾನ, ಭೂಮಿಯ ಗುಣಮಟ್ಟ ಇಲ್ಲಿಯ ಜನಜೀವನವನ್ನು ಕುರಿತು ಸಂಗ್ರಹಿಸಿರುವ ವಿಚಾರಗಳು ಟಿಪ್ಪುವಿನ ಕಾಲದ ಮೇಲಿನ ಅಭಿಪ್ರಾಯಕ್ಕೆ ಪೂರಕವಾಗಿವೆ. ಟಿಪ್ಪು ಕಾಲಾವಧಿಯಲ್ಲಿ ಇನಾಂ ಭೂ ಹಿಡುವಳಿದಾರರನ್ನು ಸಂಪೂರ್ಣವಾಗಿ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದನು. ಹಾಗೆಯೇ ನಿಜವಾಗಿಯೂ ಸಾಗುವಳಿಯನ್ನು ಮಾಡುತ್ತಿದ್ದವರೇ ಭೂಹಿಡುವಳಿದಾರರಾಗುವಂತೆ ಗಮನಹರಿಸಿದನು.

ಟಿಪ್ಪುಸುಲ್ತಾನನ ಪತನನಂತರ ಬ್ರಿಟಿಶರು ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಮೈಸೂರಿನಲ್ಲಿ ಅಧಿಕಾರಕ್ಕೆ ತಂದರು. ಆರಂಭದಲ್ಲಿ ದಿವಾನರಾಗಿದ್ದ ಪೂರ್ಣಯ್ಯನವರು ಮೈಸೂರು ಸಂಸ್ಥಾನದ ಆಡಳಿತದಲ್ಲಿ ಸಂಪೂರ್ಣ ನಿಯಂತ್ರಣ ಹೊಂದಿದ್ದರು. ಇವರ ಕಾಲಾವಧಿಯಲ್ಲಿ ಮೈಸೂರು ಸಂಸ್ಥಾನ ಸೇರಿದಂತೆ ಚಿತ್ರದುರ್ಗ ಪ್ರದೇಶದಲ್ಲಿಯೂ ಭೂಹಿಡುವಳಿಗಳನ್ನು ಅನುವಂಶಿಕವಾಗಿ ಅನುಭವಿಸುವ

ಹಕ್ಕಿತ್ತು. ಟಿಪ್ಪು ಕಾಲದಲ್ಲಿ ಇನಾಂ ಭೂಮಿಗಳನ್ನು ಕಳೆದುಕೊಂಡಿದ್ದ ಇನಾಂದಾರರು ಅವುಗಳನ್ನು ಪುನಃ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಈ ಕಾಲಾವಧಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ನೂರು ರೂಗಳಿಗಿಂತಲೂ ಹೆಚ್ಚು ಕಂದಾಯ ಸಲ್ಲಿಸುವ ಪ್ರಬಲ ಭೂಹಿಡುವಳಿದಾರರಿದ್ದರು. ದಿವಾನ್ ಪೂರ್ಣಯ್ಯನವರ ನಿವೃತ್ತಿಯ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರೇ ನೇರ ಅಧಿಕಾರ ಸೂತ್ರ ವಹಿಸಿಕೊಂಡರು. ಅವರು ಕಂದಾಯ ವ್ಯವಸ್ಥೆಯಲ್ಲಿ ಷರತ್ತು ಪದ್ಧತಿಯನ್ನು ಮುಂದುವರಿಸಿದರು. ಆದರೆ ಈ ವ್ಯವಸ್ಥೆಯಿಂದ ಅನುಕೂಲಕ್ಕಿಂತ ಅನಾನೂಕುಲತೆ ಹೆಚ್ಚಾದುದರಿಂದ ಅದನ್ನು ರದ್ದು ಗೊಳಿಸಿದರು. ಪುನಃ ನೇರವಾಗಿ ರೈತರಿಂದ ಸರಕಾರ ಕಂದಾಯ ವಸೂಲಿ ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದರು ಆದರೂ ಇವರ ಕಾಲಾವಧಿಯಲ್ಲಿ ಕಂದಾಯ ವ್ಯವಸ್ಥೆಯಲ್ಲಾದ ಲೋಪದೋಷಗಳಿಂದಾಗಿಯೇ ನಗರದಂಗೆ ಆರಂಭವಾಯಿತು. ಇದರ ಪರಿಣಾಮ ಚಿತ್ರದುರ್ಗ ಪ್ರದೇಶದ ಎಲ್ಲಾ ತಾಲೂಕುಗಳ ಮೇಲು ಉಂಟಾಯಿತು. ಅಲ್ಲಿಯ ಕೆಲವು ಸ್ಥಳಗಳಲ್ಲಿ ರೈತರು ಪೌಜುದಾರರನ್ನು, ಅಮೀಲಾದರರನ್ನು, ಶಿರಸ್ತಾದಾರರನ್ನು ಸೇರೆ ಹಿಡಿದಿದ್ದರು. ಅವರು ಚಿತ್ರದುರ್ಗ ಪ್ರದೇಶದಲ್ಲಿ ಸಂಗ್ರಹಿಸಿದ್ದ ಬಾರಿ ಪ್ರಮಾಣದ ಕಂದಾಯವನ್ನು ಹಿಂತಿರುಗಿ ಪಡೆಯುವಲ್ಲಿ ಯಶಸ್ವಿಯಾದರು. ಚಿತ್ರದುರ್ಗ ಸೇರಿದಂತೆ ಇತರ ಭಾಗಗಳಲ್ಲಿ ನಡೆದ ದಂಗೆಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ನಿಯಂತ್ರಿಸಲಾಗದೆ ಹೋದದು ಗಮನಾರ್ಹ ವಿಷಯ. ಪರಿಣಾಮವಾಗಿ ಅವರು ತಮ್ಮ ಅಧಿಕಾರವನ್ನೇ ಕಳೆದುಕೊಳ್ಳಬೇಕಾಯಿತು.

೧೮ನೇ ಶತಮಾನದ ನಂತರ ಭೂಹಿಡುವಳಿ ಮತ್ತು ಭೂ ಸಂಬಂಧಿ ಪ್ರಶ್ನೆಗಳ ಚರ್ಚೆಯು ಗಮನಾರ್ಹ ಪಾತ್ರವಹಿಸಿತ್ತು. ಕಾರ್ನ್‌ವಾಲಿಸ್ ಬಂಗಾಳದಲ್ಲಿ ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ಧತಿಯನ್ನು ಕಟುಟೀಕೆ ಮಾಡಿದ ಥಾಮಸ್ ಮನ್ರೋ ಮತ್ತು ಅಲೆಗ್ಸಾಂಡರ್ ರೀಡ್ ಮದ್ರಾಸ್ ಪ್ರಾಂತ್ಯದಲ್ಲಿ 'ರೈತವಾರಿ' ವ್ಯವಸ್ಥೆಯನ್ನು ಜಾರಿಗೆ ತಂದರು. ಹೀಗಾಗಿ ಮೈಸೂರು ಸಂಸ್ಥಾನದಲ್ಲಿ ೧೮೩೧ರ ನಂತರ ಅಲ್ಲಿಯ ಕಮೀಷನರುಗಳಾದ ಮಾರ್ಕ್‌ಕಬ್ಬನ್ ಮತ್ತು ಎಲ್. ಬಿ. ಬೌರಿಂಗ್ ಅವರು ರೈತವಾರಿ ವ್ಯವಸ್ಥೆಗೆ ಈ ಪ್ರದೇಶದಲ್ಲಿ ಸ್ಪಷ್ಟ ರೂಪಕೊಟ್ಟರು. ಮೊಟ್ಟ ಮೊದಲಿಗೆ ಭೂ ಹಿಡುವಳಿಗೆ ಸಂಬಂಧಿಸಿದ ನೊಂದಣಿ, ಕಂದಾಯ, ಮೋಜಣಿ ಮತ್ತು ಇನಾಂ ಭೂಮಿ ಮುಂತಾದ ಭೂ ಸಂಬಂಧಿ ವಿಚಾರಗಳನ್ನು ನಿರ್ದಿಷ್ಟ ಕಾಯ್ದೆ-ಕಾನೂನುಗಳಿಗೆ ಒಳಪಡಿಸುವುದರ ಮೂಲಕ ರೈತರು ಸರಕಾರದೊಂದಿಗೆ ನೇರ ಸಂಪರ್ಕ ಹೊಂದುವಂತೆ ಮಾಡಿದರು. ಇವರ ಆಡಳಿತಾವಧಿಯಲ್ಲಿ ಚಿತ್ರದುರ್ಗ ಪ್ರದೇಶ ಸೇರಿದಂತೆ ಮೈಸೂರು ಸಂಸ್ಥಾನದಲ್ಲಿ ಪ್ರಬಲ ಭೂಹಿಡುವಳಿ ಸಮುದಾಯದ

ಮಧ್ಯವರ್ತಿಗಳ ವ್ಯವಸ್ಥೆಯನ್ನು ಸಂಪೂರ್ಣ ನಿರ್ಮೂಲನ ಮಾಡಿದರು. ಅದರಲ್ಲೂ ಗ್ರಾಮದ ಪಟೇಲ ಮತ್ತು ಶ್ಯಾನಭೋಗರನ್ನು ಕಾಯ್ದೆ-ಕಾನೂನುಗಳ ಮೂಲಕ ನಿಯಂತ್ರಿಸಲಾಯಿತು. ಆದರೂ ವಸಾಹತುಶಾಹಿ ಆಡಳಿತ ಘಟ್ಟದಲ್ಲಿ ರೈತರ ಶೋಷಣೆ ಅಧಿಕವಾಗಿತ್ತೆಂಬುದನ್ನು ಗುರುತಿಸಬಹುದು.

ನಾಲ್ಕಡಿ ಕೃಷ್ಣರಾಜ ಒಡೆಯರ ಕಾಲಾವಧಿಯಲ್ಲಿ ಭೂಹಿಡುವಳಿಗೆ ಸಂಬಂಧಿಸಿದ ದಾಖಲೆಗಳು ಸ್ಪಷ್ಟ ರೂಪ ಪಡೆದವು. ಗ್ರಾಮಾಂತರ ಮಟ್ಟದಲ್ಲಿ ಪಟೇಲ, ಶ್ಯಾನುಭೋಗ, ಹಾಗೆಯೇ ತಾಲೂಕು ಮಟ್ಟದಲ್ಲಿ ಅಮಲ್ದಾರರು ಭೂ ದಾಖಲೆಗಳನ್ನು ಲಿಖಿತ ರೂಪದಲ್ಲಿ ನೊಂದಾಯಿಸಿದರು. ಈ ಕಾಲಾವಧಿಯಲ್ಲಿ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಒಂದು ಗ್ರಾಮದ ವಿವಿಧ ಬಗೆಯ ಭೂ ಹಿಡುವಳಿಗಳನ್ನು ಸಕ್ರಮಗೊಳಿಸಿ ಎಲ್ಲಾ ಭೂಹಿಡುವಳಿಗಳನ್ನು ನೊಂದಣಿ ಮಾಡಿಕೊಳ್ಳುವುದು ಅವಶ್ಯಕವಾಗಿತ್ತು. ಅಂದಿನ ಭೂಕಂದಾಯ ಇಲಾಖೆಯಲ್ಲಿ ಏಜೆಂಟರಂತೆ ಕಾರ್ಯನಿರ್ವಹಿಸುತ್ತಿದ್ದ ಪಟೇಲರು ಮತ್ತು ಶ್ಯಾನುಭೋಗರು ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು ಮುಖ್ಯವಾಗಿತ್ತು. ಇವರಿಂದ ಸ್ವಜನಪಕ್ಷಪಾತ, ಕೆಳಹಂತದ ಜನರಿಗೆ ಹಿಂಸೆ, ಕಿರುಕುಳವಾಗದಂತೆ ಸರಕಾರ ಗಮನಹರಿಸಿತ್ತು. ಈ ಮೂಲಕ ಸರಕಾರವು ಒಂದು ಗ್ರಾಮದಿಂದ ಸಂಗ್ರಹಿಸಬಹುದಾದ ಕಂದಾಯದ ಆದಾಯವನ್ನು ನಿಕರವಾಗಿ ಗುರುತಿಸಲು ಸಾಧ್ಯವಾಯಿತು. ದಿವಾನ್‌ರ ಕಾಲಾವಧಿಯಲ್ಲಿ ಒಂದು ಗ್ರಾಮದಲ್ಲಿರುವ ಒಟ್ಟು ಜನಸಂಖ್ಯೆ ಸಾಗುವಳಿ ಭೂಮಿ ಮತ್ತು ಭೂರಹಿತ ಸಮುದಾಯ ಕುಶಲಕರ್ಮಿಗಳು ಹಾಗೆಯೇ ಜಮೀನುದಾರರಲ್ಲಿ ಪ್ರಬಲ ಭೂಹಿಡುವಳಿದಾರ ಮಧ್ಯಮ ಮತ್ತು ಸಣ್ಣ ಭೂಹಿಡುವಳಿದಾರರ ಬಗ್ಗೆ ವಿವರವಾದ ಮಾಹಿತಿಯನ್ನು ದಾಖಲಿಸಲಾಯಿತು. ಹೀಗಾಗಿಯೇ ಈ ಕಾಲಘಟ್ಟದಲ್ಲಿ ಭೂ ಸಂಬಂಧಿ ಮಸೂದೆಗಳು ಸಾಗುವಳಿದಾರರ ಮೇಲೆ ಸಾಕಷ್ಟು ಪರಿಣಾಮ ಬೀರಿರುವುದನ್ನು ಗಮನಿಸಬಹುದು.

ಸ್ವಾತಂತ್ರ್ಯ ನಂತರದಲ್ಲಿ ಭಾರತ ಸರಕಾರವು ದೇಶವ್ಯಾಪಿ ಭೂಸಂಬಂಧಿ ಕಾಯಿದೆಗಳನ್ನು ಜಾರಿಗೆ ತಂದಿತು. ಆ ಮೂಲಕ ಪ್ರಾದೇಶಿಕ ವ್ಯತ್ಯಾಸ, ಗೇಣಿದಾರರು, ಚಿಕ್ಕಹಿಡುವಳಿದಾರರು ಅಸಮ ಭೂಹಂಚಿಕೆ ಮುಂತಾದ ವಿಷಯಗಳ ಮೇಲೆ ಸರಕಾರ ಗಮನಹರಿಸಲು ಸಾಧ್ಯವಾಯಿತು. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರಕಾರವು ೧೯೭೦ರ ನಂತರ ಭೂ ಸುಧಾರಣ ಕಾಯಿದೆ, ಕನಿಷ್ಟ ವೇತನ ಕಾಯಿದೆಗಳನ್ನು ಜಾರಿಗೊಳಿಸುವುದರ ಮೂಲಕ ಭೂರಹಿತ ಸಮುದಾಯಗಳ ಹಿತಾಸಕ್ತಿಯನ್ನು ಗಮನಿಸಿದೆ.

ಪ್ರಸ್ತುತ ಅಧ್ಯಾಯದಲ್ಲಿ ಚಿತ್ರದುರ್ಗ ಪ್ರದೇಶದ ಭೂಹಿಡುವಳಿಗಳು ಮತ್ತು ಭೂಸಂಬಂಧಿ ಪ್ರಶ್ನೆಗಳನ್ನು ಕುರಿತು ವಿವೇಚಿಸಲಾಗಿದೆ. ಅಧ್ಯಾಯದ ಆರಂಭದಲ್ಲಿ ಚಿತ್ರದುರ್ಗ ಪ್ರದೇಶದ ೧೭೭೯ರ ವರೆಗಿನ ಭೂ ಹಿಡುವಳಿ ವ್ಯವಸ್ಥೆಯ ಸಮೀಕ್ಷೆ ಮಾಡಲಾಗಿದೆ. ಈ ಭಾಗದಲ್ಲಿ ವಿಜಯನಗರ ಅರಸರ ಸಮಕಾಲೀನರು, ಸಾಮಂತರು ಹಾಗೂ ವಿಜಯನಗರೋತ್ತರದಲ್ಲಿಯೂ ಆಡಳಿತ ನಡೆಸಿದ ನಾಯಕರ ಕಾಲದ ಭೂ ಹಿಡುವಳಿ ಹಾಗೂ ಕಂದಾಯ ವ್ಯವಸ್ಥೆ ಕುರಿತು ಚರ್ಚಿಸಲಾಗಿದೆ. ಈ ಅಧ್ಯಾಯದ ಎರಡನೇ ಭಾಗವನ್ನು ಅಧ್ಯಾಯದ ಅನುಕೂಲಕ್ಕಾಗಿ ಐದುಕಾಲಘಟ್ಟಗಳನ್ನಾಗಿ ವಿಭಜಿಸಿಕೊಳ್ಳಲಾಗಿದೆ. ಮೊದಲ ಘಟ್ಟದ ಅಧ್ಯಯನದಲ್ಲಿ ಹೈದರಾಲಿ ಟಿಪ್ಪು ಕಾಲದ, ಎರಡನೇ ಘಟ್ಟದಲ್ಲಿ ದಿವಾನ್ ಪೂರ್ಣಯ್ಯ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ, ಮೂರನೇ ಘಟ್ಟದಲ್ಲಿ ಕಮೀಷನರ್ ಕಾಲದ, ನಾಲ್ಕನೇ ಘಟ್ಟದಲ್ಲಿ ದಿವಾನರುಗಳ ಕಾಲದ, ಐದನೇ ಘಟ್ಟದಲ್ಲಿ ಸ್ವಾತಂತ್ರ್ಯ ನಂತರದ ಭೂಹಿಡುವಳಿ ವ್ಯವಸ್ಥೆಯನ್ನು ವಿವೇಚಿಸಲಾಗಿದೆ. ನಾಯಕ ಅರಸರ ಕಾಲಾವಧಿಯಿಂದ ಸ್ವಾತಂತ್ರ್ಯನಂತರದ ಕಾಲಾವಧಿಯವರೆಗೂ ಖುಷ್ಕಿ, ತರಿ, ಬಾಗಾಯ್ತು ಭೂಹಿಡುವಳಿ ವ್ಯವಸ್ಥೆಗಳೇ ಇವೆ. ಆದರೂ ಪ್ರತಿಯೊಂದು ಕಾಲಘಟ್ಟದಲ್ಲಿಯೂ ಭೂಹಿಡುವಳಿಗಳ ಒಡೆತನ ವರ್ಗಾವಣೆ, ಕಂದಾಯ ವ್ಯವಸ್ಥೆ, ಬದಲಾಗುತ್ತಾ ಹೋಗಿರುವುದನ್ನು ಗುರುತಿಸಲಾಗಿದೆ.

ಚಿತ್ರದುರ್ಗ ಪ್ರದೇಶದ ೧೭೭೯ರವರೆಗಿನ ಭೂಹಿಡುವಳಿ ವ್ಯವಸ್ಥೆಯ ಸಮೀಕ್ಷೆ

ವಿಜಯನಗರ ಕಾಲದಲ್ಲಿ ಚಿತ್ರದುರ್ಗ ಪ್ರದೇಶದಲ್ಲಿನ ಆಡಳಿತಗಾರರಿಗೆ ಅಮರನಾಯಕರೆಂದು ಗುರುತಿಸಲಾಗುತ್ತಿತ್ತು. ಶಾಸನಗಳು ಈ ನಾಯಕರ ವಿಷಯವಾಗಿ ವಿವರಗಳನ್ನು ಒದಗಿಸುತ್ತವೆ. ಹಾಗೆಯೇ ಈ ಪ್ರದೇಶದಲ್ಲಿ ಉಂಬಳಿ ಪಡೆದ ಗಣ್ಯರ ಬಗೆಗೆ ಮಾಹಿತಿ ಕೊಡುತ್ತವೆ. ಇವರಿಗೆ ಅವರದೇ ಆದ ಬಿರುದುಗಳು ಮತ್ತು ಭೂಹಿಡುವಳಿಗಳು ಇದ್ದವು. ವಿಜಯನಗರ ಸಾಮ್ರಾಜ್ಯದಲ್ಲಿ ಚಿತ್ರದುರ್ಗವು ಒಂದು ಸಾಮಂತ ಒಕ್ಕೂಟವಾಗಿ ಬಹುಮುಖ್ಯ ಪಾತ್ರ ನಿರ್ವಹಿಸಿತ್ತು. ಆರ್ಥಿಕ ದೃಷ್ಟಿಯಿಂದ ಇದು ಕೆಳದಿ ಮತ್ತು ಕರಾವಳಿ ಪ್ರದೇಶದಷ್ಟು ಸಂಪದ್ಭರಿತವಾದ ಪ್ರದೇಶವಾಗಿರಲಿಲ್ಲ. ಇದು ಒಣಬೇಸಾಯದಿಂದ ಕೂಡಿದ ಪ್ರದೇಶ, ಆದರೆ ಸೈನಿಕ ಮಹತ್ವದ ದೃಷ್ಟಿಯಿಂದ ಗಮನಿಸಿದಾಗ ಚಿತ್ರದುರ್ಗ ಪ್ರದೇಶವು ಬಹುಮುಖ್ಯವಾದುದು. ಏಕೆಂದರೆ ಅದಿದ್ದುದು ತುಂಗಭದ್ರಾ ನದಿಯ ಮೇಲ್ಭಾಗದ ಮತ್ತು ಕೆಳಭಾಗದ ಪ್ರದೇಶಗಳಿಗೆ ಹೋಗುವ ಹೆದ್ದಾರಿಯಲ್ಲಿ. ಹೀಗಾಗಿ ಈ ವಿಜಯನಗರದ ರಾಜರು ಈ ಪ್ರದೇಶದ ನಾಯಕರ ಬಗೆಗೆ ಆಸಕ್ತಿ ವಹಿಸಲು ಕಾರಣವಾಗಿತ್ತು.

ಚಿತ್ರದುರ್ಗದ ನಾಯಕ ಅರಸರ ಕಾಲದಲ್ಲಿ ಭೂಹಿಡುವಳಿ ವ್ಯವಸ್ಥೆ

ವಿಜಯನಗರ ಕಾಲದ ಆಡಳಿತ ವ್ಯವಸ್ಥೆಯನ್ನು ಗುರುತಿಸುವಲ್ಲಿ ಅಮರನಾಯಕರ ಪದ್ಧತಿ ಪ್ರಮುಖ ಪಾತ್ರವಹಿಸುತ್ತದೆ. 'ಅಮರ' ಎಂಬುದು ಸೈನ್ಯದಲ್ಲಿ ಹುದ್ದೆಯ ಅಂತಸ್ತನ್ನು ಸೂಚಿಸುತ್ತದೆ. ಅಂದರೆ ಅಮರನಾಯಕರು ವಿಜಯನಗರ ಸಾರ್ವಭೌಮನಿಗೆ ಎರಡು ಪ್ರಮುಖವಾದ ರೀತಿಯಲ್ಲಿ ಸೇವೆಯನ್ನು ಸಲ್ಲಿಸಬೇಕಾಗಿತ್ತು. ಅಮರ ಮಾಗಣಿಯ ರಕ್ಷಣೆ ಮತ್ತು ಆ ಪ್ರದೇಶದ ಕಂದಾಯ ತೆರಿಗೆಗಳ ವಸೂಲಿ ಹಾಗೂ ತನ್ನ ಖರ್ಚನ್ನು ಕಳೆದು ಸಾರ್ವಭೌಮರಿಗೆ ಕಪ್ಪಕಾಣಿಕೆಯನ್ನು ಸಲ್ಲಿಸಬೇಕಾಗಿತ್ತು. ಚಿತ್ರದುರ್ಗ ಪ್ರದೇಶದಲ್ಲಿ ಸಂತೆಬೆನ್ನೂರು, ಹರತಿ, ನಾಯಕನಹಟ್ಟಿ, ಮತ್ತೋಡು ಮತ್ತು ಚಿತ್ರದುರ್ಗ ಇನ್ನಿತರ ಪಾಳೆಯಗಾರರ ಮನೆತನಗಳು ವಿಜಯನಗರ ಸಾಮ್ರಾಟರಿಂದ ಭೂ ಹಿಡುವಳಿಗಳನ್ನು ಪಡೆದು ಅಮರ ನಾಯಕರೆಂದು ಪ್ರಸಿದ್ಧರಾಗಿದ್ದರು. ಈ ಪ್ರದೇಶದಲ್ಲಿ ಕಡಿಮೆ ಶ್ರೇಣಿಯ ಇತರ ನಾಯಕರೂ ಇದ್ದು ಈ ಪ್ರದೇಶವು ಅತ್ಯಂತ ಹೆಚ್ಚು ಊಳಿಗಮಾನ್ಯ ಪ್ರದೇಶವಾಗಿದ್ದಿತು. ಇಂತಹ ಸಾಮಂತರ ವ್ಯವಸ್ಥೆಯಲ್ಲಿ ಈ ಪ್ರದೇಶದ ಅಧೀನ ರಾಜರ ಚರಿತ್ರೆಯನ್ನು ಅಧ್ಯಯನ ಮಾಡಿದರೆ, ಒಬ್ಬ ನಾಯಕನ ಅಧಿಕಾರವು ಅವನು ಸಾಮ್ರಾಟನಲ್ಲಿಟ್ಟ ವಿಧೇಯತೆಯನ್ನು ಅವಲಂಬಿಸಿತ್ತು. ಅವನು ಎಲ್ಲಿಯವರೆಗೆ ವಿಧೇಯತೆಯಿಂದಿರುವನೋ, ಅಲ್ಲಿಯವರೆಗೆ ಅಧಿಕಾರದಲ್ಲಿ ಮುಂದುವರೆಯಬಹುದಾಗಿತ್ತು.[೧] ಉದಾಹರಣೆಗೆ ಚಿತ್ರದುರ್ಗ ನಾಯಕ ಅರಸರು ವಿಜಯನಗರದ ಅರಸರಿಂದ ಭೂ ಭಾಗಗಳನ್ನು 'ಅಮರ ಮಾಗಣಿ'ಯಾಗಿ ಪಡೆದಿದ್ದರು. ಚಿತ್ರದುರ್ಗದ ಮೊದಲ ನಾಯಕ ಅರಸನಾದ ತಿಮ್ಮಣ್ಣನಾಯಕನು ವಿಜಯನಗರದ ತಿರುಮಲರಾಯನಿಂದ ಕ್ರಿ. ಶ. ೧೫೬೮ರಲ್ಲಿ ಹೊಳಲ್ಕೆರೆ ಸೀಮೆಯನ್ನು 'ಅಮರ ಮಾಗಣಿ' ಶಾಶ್ವತವಾಗಿ ನೀಡಿದ ಭೂಮಿಯಾಗಿತ್ತು. ನಂತರ ಹಿರಿಯೂರು, ಚಿತ್ರದುರ್ಗವನ್ನು ಇದೇ ರೀತಿ ಪಡೆದಿದ್ದನು.

ವಿಜಯನಗರೋತ್ತರ ಕಾಲದಲ್ಲಿ ಚಿತ್ರದುರ್ಗ ಪ್ರದೇಶದ ನಾಯಕ ಅರಸರಾಗಿ ಸುಮಾರು ೧೧ ಮಂದಿ ಅರಸರು ಕ್ರಿ. ಶ. ಸುಮಾರು ೧೫೬೮ ರಿಂದ೧೭೭೯ರವರೆಗೆ ಒಟ್ಟು ೨೧೧ ವರ್ಷಗಳ ಕಾಲ ಆಡಳಿತ ನಡೆಸಿದರು. ಈ ನಾಯಕ ಅರಸರು ಮದಕರಿ ನಾಯಕರೆಂದು ವಾಲ್ಮೀಕಿ ಗೋತ್ರದ ಶ್ರೀಮನ್ ಮಹಾನಾಯಕರೆಂದು ಹೆಸರಾಗಿದ್ದರು. ನಾಯಕ ಅರಸರ ಕಾಲದ ಪೂರ್ವದಲ್ಲಿಯೂ ಸ್ವತಂತ್ರ ಭೂ ಒಡೆತನ ಇತ್ತು. ಇದಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಪ್ರದೇಶಕ್ಕೆ ಹೊಂದಿಕೊಂಡಿರುವ ಸ್ಥಳವಾದ ಅಜ್ಜಂಪುರದ 'ಅಜ್ಜಂಪುರ ಕೈಫಿಯತ್ತು'ನಲ್ಲಿ ಕ್ರಿ. ಶ. ೧೨೦೦ರ ವೇಳೆಗಾಗಲೆ ಭೂಮಿಯ ಒಡೆತನದ

ಬಗ್ಗೆ ನಮಗೆ ಕೆಲವು ಉಲ್ಲೇಖಗಳು ದೊರಕುತ್ತವೆ. ಉದಾಹರಣೆಗೆ ಹೊಯ್ಸಳದೊರೆ ವೀರ ಬಲ್ಲಾಳನು ಕೊಣಬಗೊಂಡನಿಗೆ ಕೊಟ್ಟಿರುವ ಉಂಬಳಿ ಭೂಮಿಯನ್ನು "ಸಾಗುವಳಿ ಮಾಡಿಕೊಂಡು ಬರುವಂತಹ ವೇಳೆಯಲ್ಲಿ" ಅವನ ಭೂಮಿಯಲ್ಲಿ ನಿಧಿ ಸಿಕ್ಕುತ್ತದೆ. ಅದನ್ನು ರಾಜನಿಗೆ ತಿಳಿಸಿದಾಗ ವೀರ ಬಲ್ಲಾಳನು "ನಿನಗೆ ಉಂಬಳಿಯಾಗಿ ಕೊಟ್ಟಂತಾ ಭೂಮಿಯಲ್ಲಿ ಸಿಕ್ಕಿರುವುದು ನಿನ್ನ ಅದೃಷ್ಟದಿಂದ ಸಿಕ್ಕಿದ್ದು ನಿನ್ನದೆ ಸರಿಯೆಂಬುದಾಗಿ" ಅಪ್ಪಣೆ ಕೊಟ್ಟಿರುವುದನ್ನು ನಾವು ಗಮನಿಸಬಹುದು. ತಕ್ಕಮಟ್ಟಿನ ಭೂ ಒಡೆತನದ ಬಗ್ಗೆ ದಾಖಲೆಯ ಛಾಯೆಯನ್ನು ಈ ಕೈಫಿಯತ್ತಿನಲ್ಲಿ ಗುರುತಿಸಬಹುದು. ಇದರ ಪ್ರಕಾರ ರಾಜರಿಗೆ ಕೊಡುವ ತೆರಿಗೆಯನ್ನು ಮಾತ್ರ ತಪ್ಪದೆ ನೀಡಬೇಕಾಗಿತ್ತು. ಇದೇ ರೀತಿಯಾಗಿ ಶಕವರ್ಷ ೧೬೪೪ರ ಅತ್ತಿಕುಪ್ಪೆಗ್ರಾಮ ಕೈಫಿಯತ್ತಿನಲ್ಲಿ ರಾಜನು ಗ್ರಾಮಗಳನ್ನು ಕ್ರಯಕ್ಕೆ ಕೊಂಡು ಬ್ರಾಹ್ಮಣರಿಗೆ ದತ್ತಿನೀಡಿದ ಬಗ್ಗೆ ವಿವರಗಳು ದೊರಕಿವೆ. ಆ ಸಂದರ್ಭದಲ್ಲಿ ಭೂಮಿಯನ್ನು ಮೂರು ರೀತಿಯಾಗಿ ವಿಭಾಗಿಸಿದ್ದಾರೆ. ಅವರು ಅದನ್ನು ಉತ್ತಮ, ಮಧ್ಯಮ, ಕನಿಷ್ಟವೆಂದು ವಿಂಗಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಭೂ ಹಿಡುವಳಿಯನ್ನು ಗುರುತಿಸಲು ಶಿಲಾಪ್ರತಿಷ್ಠೆಯನ್ನು ಮಾಡಿಸಿರುವ ಬಗ್ಗೆ ಮಾಹಿತಿ ಇದೆ.[೨]

ಚಿತ್ರದುರ್ಗದ ನಾಯಕರ ಆಡಳಿತಾವಧಿಯಲ್ಲಿ ವ್ಯಕ್ತಿಯೊಬ್ಬನು ಭೂಹಿಡುವಳಿಗಳನ್ನು ಆಸ್ತಿಯ ರೂಪದಲ್ಲಿ ಹೊಂದಿರಬಹುದೆಂಬ ತತ್ವಕ್ಕೆ ರಾಜನ ಮತ್ತು ಸಮಾಜದ ಮನ್ನಣೆ ಇತ್ತು. ಆ ಕಾಲದಲ್ಲಿ ಭೂಮಾಲಿಕರು ರೈತರಾಗಿರುತ್ತಿದ್ದರು. ರಾಜರು ಭೂಕಂದಾಯದ ವ್ಯವಹಾರಗಳನ್ನು ಗ್ರಾಮ ಮಟ್ಟದ ಅಧಿಕಾರಿಗಳಾದ ಗೌಡ, ಶಾನುಭೋಗ, ತಳವಾರ ಮುಂತಾದವರ ಮೂಲಕ ವಸೂಲಿ ಮಾಡುತ್ತಿದ್ದರು. ಜೊತೆಗೆ ವಾರಸುದಾರರಿಲ್ಲದ ಭೂಮಿಯನ್ನು ತಮ ಗಿಷ್ಟ ಬಂದವರಿಗೆ ಹಂಚುವ, ದಾನ ನೀಡುವ ಅಧಿಕಾರವನ್ನು ಈ ನಾಯಕ ಅರಸರು ಇಟ್ಟುಕೊಂಡಿದ್ದರು.

ಚಿತ್ರದುರ್ಗನಾಯಕ ಅರಸರ ಕಾಲದ ಭೂಹಿಡುವಳಿಗಳನ್ನು ಸಾಗುವಳಿಯಾದ ಮತ್ತು ಸಾಗುವಳಿ ಯಾಗದ ಬೀಳುಭೂಮಿ ಎಂಬುದಾಗಿ ಗುರುತಿಸಬಹುದು. ಬೀಳುಭೂಮಿಯಲ್ಲಿ ಅರಣ್ಯ ಪ್ರದೇಶ, ಬಂಜರು ಭೂಮಿ, ಗುಡ್ಡ ಬೆಟ್ಟಗಳು ಸೇರುತ್ತವೆ. ಸಾಗುವಳಿಯಾದ ಭೂಮಿಯನ್ನು ನಾಯಕ ಅರಸರು ಎರಡು ರೀತಿಯಾಗಿ ವರ್ಗೀಕರಿಸಿದ್ದಾರೆ. ಮೊದಲನೆಯದಾಗಿ ಕಂದಾಯದ ಭೂಮಿಗಳು, ಎರಡನೆಯದು ಕೆಲವು ಉದ್ದೇಶಗಳಿಗಾಗಿ ದಾನ ನೀಡಿದ ಇನಾಮು ಭೂಮಿಯಾಗಿತ್ತು. ಈ ಕಾಲದಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ರೂಢಿಯಲ್ಲಿದ್ದ ಭೂ ಹಿಡುವಳಿಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು.[೩]

೧. ಇನಾಂ ಭೂಮಿ, ೨. ಸಾಮಾನ್ಯ ಭೂಮಿ

ಇನಾಂ ಭೂಹಿಡುವಳಿಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ಮೊದಲನೆಯದರಲ್ಲಿ 'ಉಪಕಾರಿ' ಭೂಹಿಡುವಳಿಗಳು ಸೇರಿವೆ. ಎರಡನೆಯದರಲ್ಲಿ 'ಸೇವಾ' ಭೂಹಿಡುವಳಿಗಳು ಸೇರಿವೆ. ಉಪಕಾರಿ ಭೂಹಿಡುವಳಿಗಳನ್ನು ೧. ಬ್ರಹ್ಮಾದಾಯ, ೨. ದೇವಾದಾಯ, ೩. ಮಠಪುರ ಎಂದು ಮೂರು ವಿಧಗಳಲ್ಲಿ ಗುರುತಿಸಬಹುದು.[೪]

೧. ಬ್ರಹ್ಮಾದಾಯ : ಬ್ರಹ್ಮಾದಾಯ ಭೂಹಿಡುವಳಿಗಳು ಬ್ರಾಹ್ಮಣರಿಗೆ ದಾನ ನೀಡಿದ ಭೂ ಹಿಡುವಳಿಗಳಾಗಿದ್ದವು. ಬ್ರಾಹ್ಮಣರು ಸಾಮಾನ್ಯವಾಗಿ ವೇದ, ಉಪನಿಷತ್ತು, ಸೂತ್ರ, ಪುರಾಣ ಮುಂತಾದ ಆರು ವಿಧದ ತತ್ತ್ವಶಾಸ್ತ್ರದಲ್ಲಿ ವಿದ್ವಾಂಸರಾಗಿದ್ದು, ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದರು. ಇಂತಹ ಬ್ರಾಹ್ಮಣ ವಿದ್ವಾಂಸರಿಗೆ ಭೂಹಿಡುವಳಿಗಳನ್ನು ದಾನ ನೀಡುತ್ತಿದ್ದರು. ಇವುಗಳಿಗೆ ಬ್ರಹ್ಮಾದಾಯ ಭೂಹಿಡುವಳಿಗಳೆಂದು ಕರೆಯುತ್ತಿದ್ದರು. ಇದೇ ರೀತಿ ಬ್ರಾಹ್ಮಣ ಸಮುದಾಯಕ್ಕೆ ದಾನ ಕೊಟ್ಟ ಗ್ರಾಮಗಳನ್ನು ಅಗ್ರಹಾರಗಳೆಂದು ಕರೆಯುತ್ತಿದ್ದರು. ಉದಾಹರಣೆಗೆ ಶಾಲಿವಾಹನ ಶಕವರ್ಷ ೧೪೪೮ರಲ್ಲಿ ಜಗಳೂರು ಸೀಮೆಯ ನಾಯಕರುಗಳಾದ ವಿಶ್ವನಾಥರೌತರ ಮಗ ರಂಗನಾಥರೌತನು ಗ್ರಾಮವನ್ನು ದಾನ ನೀಡುವಾಗ ಶ್ರೀಕೃಷ್ಣದೇವರಾಯ ಮಹಾರಾಯರಿಗೆ ಧರ್ಮವಾಗಬೇಕೆಂದು ಹೇಳಿದ್ದಾನೆ. ಅದರಲ್ಲಿ ಬ್ರಾಹ್ಮಣರ ಭೋಜನ, ಷಡ್‌ದರುಶನ ಮೊದಲಾದವುಗಳು ನಡೆಯುವುದಕ್ಕೆ ಜಗಳೂರು ಸೀಮೆಯೊಳಗಣ 'ನಿಬಗೂರು' ಗ್ರಾಮವನ್ನು ದಾನ ಕೊಟ್ಟಿರುವುದಾಗಿ ಶಾಸನದಲ್ಲಿ ವಿವರವಿದೆ.[೫]

ಶಾಲಿವಾಹನ ಶಕವರ್ಷ ಕ್ರಿ. ಶ. ೧೬೩೦ರಲ್ಲಿ ವಾಲ್ಮೀಕಿ ಗೋತ್ರದ ಶ್ರೀಮಾನ್‌ನಾಯಕಾಚಾರ್ಯ ಕಾಮಗೇತಿ ಭರಮಣ್ಣನಾಯಕನು ಸಿಂಗಣ್ಣ ಜೋಯಿಸರ ಪುತ್ರರಾದ ಕಾಶಿವಾಸಿ ನಾರಾಯಣಭಟ್ಟರು, ಶಂಕರಭಟ್ಟರು, ಶಿವಭಟ್ಟರು ಈ ಮೂರು ಜನಕ್ಕೂ ಬರೆಸಿಕೊಟ್ಟ ಗ್ರಾಮ ಶಾಸನ ಪತ್ರದ ಕ್ರಮವೆಂದರೆ ನಮ್ಮ ಹಿರಿಯರುಗಳಿಗೆ ಪುಣ್ಯವಾಗಲೆಂದು ಕೊಡಗನೂರು ಸೀಮೆಯೊಳಗಿನ 'ಕೋಲುಕುಂಟೆ' ಎಂಬ ಗ್ರಾಮವನ್ನು ದಾನವಾಗಿ ನೀಡಿದ್ದಾನೆ.[೬] ಇದರಲ್ಲಿ ಬರುವ ಕಾಡಾರಾಂಭ, ನೀರಾರಂಭ, ನಿಧಿ ನಿಕ್ಷೇಪ ಎಲ್ಲವು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವುದೆಂದು ತಿಳಿಸಲಾಗಿದೆ. ಅದೇ ರೀತಿ ಕ್ರಿ. ಶ. ೧೬೪೦ನೆಯ ವಿಳಂಬ ಸಂವತ್ಸರದಲ್ಲಿ ವಿಶ್ವಾಮಿತ್ರಗೋತ್ರದ ಸೂರಪ್ಪನಾಯಕರ ರಾಮಂಣಾಯಕರಿಗೆ ವಾಲ್ಮೀಕಿ ಗೋತ್ರದ ಭರಮಣ್ಣನಾಯಕರು ಬರೆಯಿಸಿಕೊಟ್ಟ ಶಾಸನದಲ್ಲಿ ನಮ್ಮ

ಹಿರಿಯರುಗಳಿಗೆ ಪುಣ್ಯವಾಗಬೇಕೆಂದು ನಾವು ಆಳುವ ಬೇತೂರು ಸೀಮೆಯೊಳಗಿನ 'ಚಿಕ್ಕಬೂದಿಹಾಳು' ಎಂಬ ಗ್ರಾಮವನ್ನು ಕೃಷ್ಣಾರ್ಪಣವಾಗಿ ಕೊಟ್ಟಿದ್ದೇವೆಂದು ತಿಳಿಸಲಾಗಿದೆ.[೭] ಕ್ರಿ. ಶ. ೧೬೫೩ರಲ್ಲಿ ರಚಿತವಾಗಿರುವ ಶಾಸನವೊಂದರಲ್ಲಿ ಓಬಣ್ಣನಾಯಕನು ಚಿತ್ರದುರ್ಗ ತಾಲೂಕಿನ ಚಿತ್ರಹಳ್ಳಿ ಸೀಮೆಯ ಹಿರೆಗುಂಟನೂರು ಮಾಗಣೆಯ ಕಡಲೆಕಾಳು ಗ್ರಾಮದ ಖುಷ್ಕಿ ಹಾಗೂ ತರಿ ಪ್ರದೇಶವನ್ನು ಪುಟ್ಟಣ್ಣನ ಮಗ ತಿಮ್ಮಪ್ಪನೆಂಬುವನ ಸ್ವಾಧೀನಾನುಭವಕ್ಕೆ ನೀಡಿದ ಉಲ್ಲೇಖವಿದೆ.[೮]

೨. ದೇವಾದಾಯ ಭೂಮಿ : ಇವು ದೇವಾಲಯಗಳ ಅಭಿವೃದ್ಧಿಗೋಸ್ಕರ ನೀಡಿದ ಭೂ ಹಿಡುವಳಿಗಳಾಗಿವೆ. ದೇವಾಲಯಕ್ಕೆ ದಾನನೀಡಿದ ಭೂಮಿಯಿಂದ ಬಂದ ಆದಾಯದಲ್ಲಿ ದೇವರ ಪೂಜೆ, ಹಬ್ಬ, ಜಾತ್ರೆ, ಉತ್ಸವಗಳನ್ನು ನಡೆಸಲು ಉಪಯೋಗಿಸಲಾಗುತ್ತಿತ್ತು. ಉದಾಹರಣೆಗೆ ಕ್ರಿ. ಶ. ೧೪೦೦ರಲ್ಲಿ ಹರಿಹರಮಹಾರಾಯರು ಶಾಂಕರಿಪುರ ಸ್ತಳದ ಶ್ಯಾಮಿತ್ರ ಗೋತ್ರದ ಆಶ್ವಲಾಯನ ಸೂತ್ರದ ರುಕ್ ಶಾಖೆಯ ರಾಮದೇವರಾಯರ ಮಕ್ಕಳು ಲಿಂಗರಸರಿಗೆ ವಿಜಯನಗರಕ್ಕೆ ಸೇರಿದ ಕೊಟ್ಟೂರು ಚಾವಡಿ ಆ ಕೆಳಗಿರುವ ಉಚ್ಚಂಗಿ ವೇಂಠೆಯಾಳಗಣ ಹರಿಹರ ಸೀಮೆಯೊಳಗಿನ 'ಶಾಂಕರಿಪುರ'ವೆಂಬ ಗ್ರಾಮವನ್ನು ಶ್ರೀ ಹರಿಹರೇಶ್ವರ ದೇವಾಲಯದಲ್ಲಿ ನಿರಂತರ ವೇದ ಶಾಸ್ತ್ರ ಪಾರಾಯಣವಾಗಬೇಕೆಂದು ಆ ಗ್ರಾಮವನ್ನು ಹರಿಹರೇಶ್ವರ ದೇವರ ಹೆಸರಲ್ಲಿ ದಾನ ಕೊಟ್ಟಿರುವುದಾಗಿ ವಿವರವಿದೆ.[೯] ಹಿರೇಗುಂಟನೂರು ಹೋಬಳಿ, ಹಿರೇಗುಂಟನೂರು ಗ್ರಾಮದ ದ್ಯಾಮವ್ವ ದೇವಾಲಯದ ಶಾಸನದಲ್ಲಿ ವಿಜಯನಗರ ಅರಸ ಶ್ರೀ ವೀರಪ್ರತಾಪ ಅಚ್ಯುತರಾಯನು ಚಿತ್ರದುರ್ಗ ಸೀಮೆಯೊಳಗಣ ಗುಂಟನೂರು ಗ್ರಾಮದಲ್ಲಿ ವಿನಾಯಕ ದೇವರ ಗುಡಿಯನ್ನು ಕಟ್ಟಿಸಿ, ಮಲ್ಲಾಪುರ ಗ್ರಾಮಕ್ಕೆ 'ಬೆಸಕಾಪುರ'ವೆಂದು ಪುನರ್ ನಾಮಕರಣ ಮಾಡಿ ದಾನ ನೀಡಿದ ಬಗ್ಗೆ ಉಲ್ಲೇಖವಿದೆ. ಇದೇ ಶಾಸನದಲ್ಲಿ ಸ್ಪಷ್ಟವಾಗಿ ನಾಲ್ಕು ಸೀಮೆಯೊಳಗಿರುವ ಗದ್ದೆ, ಬೆದ್ದಲು, ಕಾಡಾರಂಭ, ನೀರಾರಂಭ ಮುಂತಾದ ಸಕಲ ಸುವರ್ಣಾದಾಯವನ್ನು ದಾನವಾಗಿ ನೀಡಿರುವ ವಿಷಯ ಪ್ರಸ್ತಾಪವಾಗಿದೆ.[೧೦] ಎರ್ರ ಕೃಷ್ಣಪ್ಪನಾಯಕನ ಮಗ ಇಮ್ಮಡಿ ಕೃಷ್ಣಪ್ಪನು ಕಾಮಸಮುದ್ರದ ವೀರಭದ್ರದೇವರ ಪೂಜೆಗಾಗಿ ಕ್ರಿ.ಶ.೧೫೫೮ರಲ್ಲಿ ದಾನ ನೀಡಿದ್ದನು.[೧೧] ಕ್ರಿ. ಶ. ೧೫೫೯ರಲ್ಲಿ ಇಮ್ಮಡಿ ವೆಂಕಟಾದ್ರಿಯು ಗುಂಡೇರಿ ಚನ್ನಕೇಶವ ದೇವರಿಗೆ 'ನರಸಾಪುರ' ಗ್ರಾಮವನ್ನು ದಾನ ನೀಡಿದ ಉಲ್ಲೇಖವಿದೆ.[೧೨] ಕ್ರಿ. ಶ. ೧೬೯೮ರಲ್ಲಿ ಬಿಚ್ಚುಗತ್ತಿ ಭರಮಣ್ಣನಾಯಕನು ಶ್ರೀರಂಗನಾಥಸ್ವಾಮಿಯ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಪುನಃ ವಿಗ್ರಹ ಪ್ರತಿಷ್ಠಾಪನೆ ಮಾಡಿಸಿ 'ಎಮ್ಮೆಹಳ್ಳಿ' ಗ್ರಾಮವನ್ನು ಉಂಬಳಿ ನೀಡಿದ ಬಗ್ಗೆ ವಿವರವಿದೆ.[೧೩]

೩. ಮಠಪುರ ಭೂಮಿ : ಮಠಗಳು ನೀಡುವ ಶಿಕ್ಷಣ, ಸಾಮಾಜಿಕ ಸೇವೆಯನ್ನು ಗಮನಿಸಿ ಭೂಮಿ ರೂಪದ ದಾನವನ್ನು ನೀಡಲಾಗುತ್ತಿತ್ತು. ಇವುಗಳ ಒಡೆತನದಲ್ಲಿರುವ ಭೂಹಿಡುವಳಿಗಳನ್ನು ಮಠಪುರ ಭೂಮಿ ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಕ್ರಿ.ಶ. ೧೬೭೮ರಲ್ಲಿ ಚಿಕ್ಕಣನಾಯಕನು ಬಾಗೂರು ಸೀಮೆಯೊಳಗಿನ 'ಮಾರಬಗಟ್ಟೆ' ಎಂಬ ಗ್ರಾಮವನ್ನು ಕೃಷ್ಣಾರ್ಪಣವಾಗಿ ಧಾರೆಯೆರೆದು ಕೊಡುವುದರ ಮೂಲಕ ತನ್ನ ನಿಷ್ಠೆಯನ್ನು ಕೂಡ್ಲಿಶೃಂಗೇರಿ ಮಠಕ್ಕೆ ತೋರಿಸಿದನು.[೧೪] ಕ್ರಿ.ಶ. ೧೭೧೬ರಲ್ಲಿ ಚಿತ್ರದುರ್ಗದ ಪಾಳೆಗಾರ ಬಿಚ್ಚುಗತ್ತಿ ಭರಮಣ್ಣನಾಯಕರು ವ್ಯಾಸರಾಯ ಮಠದ ಶ್ರೀ ರಘುನಾಥ ತೀರ್ಥಸ್ವಾಮಿಗಳಿಗೆ 'ದ್ಯಾಮೆನ' ಹಳ್ಳಿಯನ್ನು ಭೂಮಾನ್ಯವಾಗಿ ನೀಡಿದರೆಂದು ಶಾಸನದಿಂದ ತಿಳಿಯುತ್ತದೆ.[೧೫] ಅದೇ ರೀತಿ ಮತ್ತೋಡಿನ ಸಂಗಪ್ಪನಾಯಕನ ಮಗ ಹಾಲಪ್ಪನಾಯಕನು 'ಗಂಜಿಗೆರೆ'ಯನ್ನು ಜೀರ್ಣೋದ್ಧಾರ ಮಾಡಿ ಕ್ರಿ. ಶ. ೧೭೩೬ರಲ್ಲಿ ನರಸಾಪುರ ಎಂದು ಹೆಸರಿಟ್ಟು, ತನ್ನ ತಂದೆ ತಾಯಿಗಳಿಗೆ ಒಳಿತಾಗಲೆಂದು ಮುರುಘಮಠ ಕಟ್ಟಿಸಿ 'ಅರಳಹಳ್ಳಿ'ಯನ್ನು ದಾನ ನೀಡಿದ ಬಗ್ಗೆ ವಿವರವಿದೆ.[೧೬] ವಿಜಯನಗರ ಕಾಲದಲ್ಲಿ ಈ ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳಾದ ಅಗ್ರಹಾರ ಮತ್ತು ಮಹಾನಾಡು ಎಂಬ ಸ್ಥಳೀಯ ಸಂಸ್ಥೆಗಳಿದ್ದವು. ಅಗ್ರಹಾರಗಳು ಸಹ ಭೂಹಿಡುವಳಿಗಳನ್ನು ಹೊಂದಿರುವುದರ ಜೊತೆಗೆ ಅವುಗಳ ಅಭಿವೃದ್ಧಿಗೆ ಗಮನ ಹರಿಸಿದ್ದವು. ಅವುಗಳೇ ಕೃಷಿ ಉತ್ಪನ್ನದ ಪಾಲಿನ ಭಾಗವನ್ನು ನಿರ್ಧರಿಸುತ್ತಿದ್ದವು. ಮಹಾನಾಡು ಅನೇಕ ಗ್ರಾಮಗಳನ್ನೊಳಗೊಂಡ ಸ್ಥಳೀಯ ಸಂಸ್ಥೆಯಾಗಿತ್ತು.[೧೭]

ಕೃಷಿ ವಿಸ್ತರಣೆಯ ಹೆಚ್ಚಳವನ್ನು ಪುರೋಹಿತಶಾಹಿ ಸಂಸ್ಥೆಗಳಾದ ಅಗ್ರಹಾರ, ಮಠ, ದೇವಸ್ಥಾನಗಳಿಗಾಗಿ ಭೂಮಿಯನ್ನು ತೆರಿಗೆರಹಿತವಾಗಿ ಬಿಟ್ಟಿರುವುದು ಮೇಲಿನ ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು. ೧೬ನೇ ಶತಮಾನದ ಸಮಾಜದಲ್ಲಿ ದೇವಸ್ಥಾನಗಳು ರಾಜಕೀಯ ಶಕ್ತಿಯನ್ನು ನ್ಯಾಯಬದ್ಧಗೊಳಿಸುವ ಹಾಗೂ ರೈತರ ಅಧೀನತೆಯನ್ನು ಬಲವಾಗಿ ನೆಲೆಗೊಳಿಸುವ ಸಾಧನವಾಗಿದ್ದವು. ಹೀಗೆ ಮಠಗಳು, ದೇವಸ್ಥಾನಗಳು, ಬ್ರಾಹ್ಮಣರು, ಭೂಮಾಲಿಕರಾಗಿ ಉತ್ಪಾದನಾ ಸಾಧನದ ಒಡೆಯರಾದುದರಿಂದ ಯುದ್ಧ ಹಾಗೂ ಬೇರೆ ಕೆಲವು ಪ್ರಕ್ಷೋಭೆಗಳಿಂದ ಪಾರಾಗುವುದು ಅವರಿಗೆ ಸಾಧ್ಯವಿತ್ತು.[೧೮] ದೇವಾಲಯ ವ್ಯವಸ್ಥೆಯ ವಿಸ್ತರಣೆ ವೃತ್ತಿ ಜೀವಿಗಳು ಮತ್ತು ಕುಶಲಕರ್ಮಿಗಳನ್ನು ಗುಲಾಮರನ್ನಾಗಿ ಮಾಡುವ ಪ್ರಕ್ರಿಯೆ ಪೂರಕವಾಗಿ ನಡೆದಿತ್ತೆಂಬುದು ತಿಳಿಯುತ್ತದೆ. ಇಲ್ಲಿ ಕಾರ್ಯನಿರ್ವಹಿಸುವ ಕೆಳಹಂತದ ಜನರ ಪರಿಸ್ಥಿತಿ ಜೀತದಾಳುಗಳಿಗಿಂತ ಬೇರೆಯಾಗಿರಲಿಲ್ಲ. ಇಂತಹ ಭೂ ಹಿಡುವಳಿಗಳು

ರಾಜ್ಯಕ್ಕೆ ಯಾವ ರೀತಿಯ ತೆರಿಗೆಯನ್ನು ನೀಡದೆ ಅನುಭವಿಸುತ್ತಿದ್ದರು. ಈ ವ್ಯವಸ್ಥೆಯನ್ನು ಕುರಿತು ಡಾ. ಸಿದ್ಧಲಿಂಗಸ್ವಾಮಿಯವರು ಅಭಿಪ್ರಾಯಪಡುವಂತೆ "ಬ್ರಾಹ್ಮಣರು ಈ ಜಮೀನುಗಳ ನೆರೆಹೊರೆಯ ಕಾಡುಗಳನ್ನು ಹಾಗೂ ಫಲವತ್ತಾದ ಜಮೀನುಗಳನ್ನು ಒತ್ತುವರಿ ಮಾಡಿಕೊಂಡು ಬಂದರು. ಇದು ಬ್ರಾಹ್ಮಣಶಾಹಿ ಸಿದ್ಧಾಂತದ ಪ್ರಭಾವ ಹಾಗೂ ಸಾಮಾಜಿಕ ಅಸಮಾನತೆಯನ್ನು ಒಪ್ಪುವ ಮನೋಭಾವದಿಂದಾಗಿ ರೈತ ಹೊರಬಂದು ವ್ಯವಸ್ಥೆಯನ್ನು ವಿರೋಧಿಸಲಿಲ್ಲ. ಹೀಗಾಗಿ ಭಯ ಮತ್ತು ಮೋಸದ ನೆರಳಿನಲ್ಲಿ ಈ ಊಳಿಗಮಾನ್ಯ ಧಾರ್ಮಿಕ ಸಿದ್ಧಾಂತ" ಬೆಳೆಯಲು ಅವಕಾಶವಾಯಿತು ಎಂದಿದ್ದಾರೆ.[೧೯]

ಸೇವಾ ಭೂಹಿಡುವಳಿ : ಗ್ರಾಮದಲ್ಲಿ ಸೇವೆ ಸಲ್ಲಿಸುತ್ತಿದ್ದ ಅಥವಾ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದ ವ್ಯಕ್ತಿಗಳಿಗೆ ನೀಡುತ್ತಿದ್ದ ಭೂಹಿಡುವಳಿಯನ್ನು 'ಸೇವಾ ಭೂಹಿಡುವಳಿ' ಎಂದು ಕರೆಯುತ್ತಿದ್ದರು. ಗ್ರಾಮದಲ್ಲಿ ವಾಸಿಸುವ ಜೋಯಿಸ, ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ, ತೋಟಿ, ತಳವಾರ, ಓಲೆಕಾರ, ಪೂಜಾರಿ, ಕ್ಷೌರಿಕ ಇವರೇ ಮೊದಲಾದ ಅಯಗಾರರು ತಾವು ಸಲ್ಲಿಸುತ್ತಿದ್ದ ಸೇವೆಗೆ ಭೂಮಾನ್ಯ ಪಡೆಯುತ್ತಿದ್ದರು. ಇದು ಸಂಪೂರ್ಣವಾಗಿ ತೆರಿಗೆರಹಿತವಾಗಿರುತ್ತಿತ್ತು. ಉದಾಹರಣೆಗೆ ೧೫೫೧ರಲ್ಲಿ ಓಬಣ್ಣನಾಯಕನು ಹನುಮಂತನ ಗುಡಿ ಕಟ್ಟಿಸಿದ್ದಕ್ಕಾಗಿ ಮತ್ತು ನಾಡಿನ ಜನತೆಗೆ ಸೇವೆಸಲ್ಲಿಸಿದ ಒಬ್ಬ ಬಡಗಿ ಹಾಗೂ ಕಲ್ಲುಕುಟಿಕನಿಗೆ ಭೂಮಿಯನ್ನು ಇನಾಂ ಆಗಿ ಕೊಟ್ಟನು. ಅದೇರೀತಿ ಕ್ರಿ. ಶ. ೧೬೬೫ರಲ್ಲಿ ಗ್ರಾಮದಲ್ಲಿ ಚಿನ್ನ, ಬೆಳ್ಳಿ ಕೆಲಸಗಾರರಿಗೆ ಇನಾಂ ಭೂಮಿ ನೀಡಿದ ಬಗ್ಗೆ ಉಲ್ಲೇಖವಿದೆ. ಬೂದಿಹಾಳ್ ಸೀಮೆಯ ಕೆರೆಯ ಕೆಳಭಾಗದ ಭೂಮಿಯನ್ನು ಕ್ಷೌರಿಕರಿಗೆ ತೆರಿಗೆ ರಹಿತವಾಗಿ ಕೊಟ್ಟಿರುವ ಪ್ರಸ್ತಾಪವಿದೆ.[೨೦]

ಭೂಒಡೆತನವು ಒಬ್ಬ ವ್ಯಕ್ತಿಯ ಅಂತಸ್ತನ್ನು ನಿರ್ಧರಿಸುತ್ತಿತ್ತು. ಹಾಗೆಯೇ ಭೂಮಿಯನ್ನು ಒಬ್ಬ ರಾಜನಿಂದ ದಾನವಾಗಿ, ಕಾಣಿಕೆಯಾಗಿ, ಬಳುವಳಿಯಾಗಿ, ಜಹಗೀರಿಯಾಗಿ ವಿವಿಧ ಒಪ್ಪಂದಗಳ ಮೂಲಕ ಪಡೆಯುವುದು ಮತ್ತು ಪಡೆದ ಭೂಮಿಗಾಗಿ ವಿವಿಧ ಸೇವೆ ಕಪ್ಪಕಾಣಿಕೆ ಸೇನಾ ಸಹಾಯ ಸಲ್ಲಿಸುವುದಾಗಿತ್ತು. ಈ ಲಕ್ಷಣಗಳು ಸೇವಾ ಭೂಹಿಡುವಳಿಯಲ್ಲಿ ಚಿತ್ರದುರ್ಗ ನಾಯಕ ಅರಸರ ಕಾಲದಲ್ಲಿಯೂ ಇರುವುದು ಸ್ಪಷ್ಟವಾಗಿ ತಿಳಿಯುತ್ತದೆ.

ಸಾಮಾನ್ಯ ಭೂಮಿ : ವಿಜಯನಗರ ಅರಸರ ಕಾಲದಲ್ಲಿ ಸಾಗುವಳಿಯಾದ ಭೂಹಿಡುವಳಿಗಳನ್ನು ಗದ್ದೆ, ಬೆದ್ದಲು ಮತ್ತು ತೋಟ ಎಂಬುದಾಗಿ ವರ್ಗೀಕರಿಸಲಾಗಿತ್ತು. ತೋಟಗಳನ್ನು ಮಾವಿನ ತೋಟ,

ಹೂವಿನತೋಟ, ಅಡಿಕೆತೋಟ, ತೆಂಗಿನತೋಟ ಮುಂತಾಗಿ ಕರೆಯುತ್ತಿದ್ದರು.[೨೧] ಚಿತ್ತನೆಯ ಪ್ರಮಾಣದ ಮೇಲೆ ಖಂಡುಗ, ಕೊಳಗ, ಸಲಿಗೆ ಮತ್ತು ಮತ್ತರು ಇತ್ಯಾದಿ ಅಳತೆಗಳ ಆಧಾರದಲ್ಲಿ ಭೂಹಿಡುವಳಿಗಳ ಉತ್ಪಾದಕತೆಯನ್ನು ನಿರ್ಧರಿಸಲಾಗುತ್ತಿತ್ತು. ಚಿತ್ರದುರ್ಗದ ನಾಯಕ ಅರಸರ ಆಡಳಿತಾವಧಿಯಲ್ಲಿ ವ್ಯಕ್ತಿಯೊಬ್ಬನು ಭೂಮಿ ರೂಪದ ಆಸ್ತಿಯ ಭೂಒಡೆತನ ಹೊಂದಿದ್ದು ಈ ವೇಳೆಯಲ್ಲಿ ಖುಷ್ಕಿ, ತರಿ, ಭಾಗಾಯ್ತು ಭೂಹಿಡುವಳಿಗಳಿದ್ದವು. ನಾಯಕ ಅರಸರ ಕಾಲದಲ್ಲಿ ಕಂದಾಯ ಪಡೆಯುವ ಭೂ ಹಿಡುವಳಿಗಳನ್ನು ಗದ್ದೆ, ಹೊಲ, ಬೆದ್ದಲು, ತೋಟ ತುಡಿಕೆ ಎಂದು ಕರೆಯುತ್ತಿದ್ದರು. ಈ ಪ್ರದೇಶದ ಕೆರೆಗಳ ಆಶ್ರಯದಲ್ಲಿ ಗದ್ದೆಗಳು ಇದ್ದವು. ಕೆರೆಗಳು ಇಲ್ಲದೆ ಮಳೆಯನ್ನೇ ಅವಲಂಬಿಸಿ ವ್ಯವಸಾಯ ಮಾಡಬೇಕಿದ್ದ ಜಮೀನುಗಳನ್ನು ಹೊಲ ಮತ್ತು ಬೆದ್ದಲು ಎಂದು ಕರೆಯುತ್ತಿದ್ದರು. ಮಳೆಯನ್ನೇ ಅವಲಂಬಿಸಿದ ವ್ಯವಸಾಯ ಪದ್ಧತಿಯನ್ನು 'ಕಾಡಾರಂಭ'ವೆಂದೂ, ಕೆರೆ ಮೊದಲಾದ ಜಲಾಶಯಗಳನ್ನು ಆಧರಿಸಿ ನಡೆಸುತಿದ್ದ ವ್ಯವಸಾಯ ಪದ್ಧತಿಗೆ 'ನೀರಾರಂಭ' ಎಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ಶಾಸನಗಳಲ್ಲಿ ಕಂಡುಬರುವಂತೆ ಕೆರೆಯ ಕೆಳಗೆ ಗದ್ದೆಕಂಬ ೧೬, ತೆಂಕಲು ಕೆಂಗಾಡು ಮತ್ತರು[೨೨] ಎಂದು ಶಾಸನದಲ್ಲಿ ಬರುವ 'ಕಂಬ', 'ಮತ್ತರು' ಎಂಬ ಶಬ್ದಗಳು ಸ್ಪಷ್ಟವಾಗಿ ಭೂಹಿಡುವಳಿಯ ವಿಸ್ತಾರವನ್ನು ಸೂಚಿಸುತ್ತವೆ. ಹಾಗೆಯೇ ಶಾಸನದಲ್ಲಿ ಬರುವಂತೆ ಸೀಮೆ ಒಳಗಾದ ಗದ್ದೆ, ಬೆದ್ದಲು, ಕಾಡಾರಂಭ, ನೀರಾರಂಭ,[೨೩] ಹತ್ತು ಕೊಳಗಗದ್ದೆ,[೨೪] ಖಂಡುಗದ ಭೂಮಿ,[೨೫] ಬಿಟ್ಟಗದ್ದೆ, ಖಂಡುಗವೆರಡ್ತು ಅಥವಾ ಬಿಟ್ಟಗದ್ದೆ ಖಂಡುಗವೆರಡು,[೨೬] ಕೊಳಗಗದ್ದೆ,[೨೭] ಹಿರಿಯಕೆರೆಯ ಕೆಳಗೆ ಗದ್ದೆ,[೨೮] ನೈವೇದ್ಯಕ್ಕೆ ಬಿಟ್ಟಗದ್ದೆ, ಕುಂದೂರು ಪಡುವಣ ತುಂಬಿನಗದ್ದೆ[೨೯] ಎಂಬುದಾಗಿ ಕರೆಯುತ್ತಿದ್ದರು.

ಗದ್ದೆ ಎನ್ನುವುದು ಭತ್ತವನ್ನು ಬೆಳೆಯುವ ನೀರಾವರಿಗೆ ಒಳಪಟ್ಟ ಪ್ರದೇಶವಾದರೆ, ಬೆದ್ದಲು ಎನ್ನುವುದು ಒಣ ಬೇಸಾಯ ಕ್ಷೇತ್ರವನ್ನು ಸೂಚಿಸುತ್ತದೆ. ಬೆದ್ದಲು ಎಂಬುದು ಮಳೆಯಲ್ಲಿ ಒಂದು ಬೆಳೆಯನ್ನು ತೆಗೆಯಲು ಮಾತ್ರ ಪ್ರಶಸ್ತವಾದ ಸ್ಥಳವನ್ನು ಸೂಚಿಸುತ್ತದೆ. ವಿಜಯನಗರದ ಕಾಲದ ಒಣಭೂಮಿ ಬೇಸಾಯ ಪ್ರಕಾರಗಳಲ್ಲಿ ಕಾಡರಾಂಬ ಎಂಬುದು ಮುಖ್ಯವಾದುದು ಎಂದು ತಿಳಿದುಬರುತ್ತದೆ.

ಚಿತ್ರದುರ್ಗ ಪ್ರದೇಶದಲ್ಲಿ ಭೂಹಿಡುವಳಿಗಳನ್ನು ಸಾಮಾನ್ಯವಾಗಿ ಬಿತ್ತುವ ಬೀಜಪದ್ಧತಿಯಲ್ಲಿ ಅಳತೆ ಮಾಡುವ ಕ್ರಮವಿದ್ದಿತು. ಉದಾಹರಣೆಗೆ ಶಾಸನಗಳಲ್ಲಿ ಒಂದು ಖಂಡುಗ ಭೂಮಿ ಎಂಬಂತಹ

ಮಾತುಗಳು ಬರುತ್ತವೆ.[೩೦] ಒಂದು ಖಂಡುಗ ಭೂಮಿ ಎಂದರೆ ಆ ಪ್ರಮಾಣದ ಬೀಜವನ್ನು ಬಿತ್ತುವ ಭೂಮಿ ಎಂದರ್ಥ. ಈ ಪ್ರದೇಶದಲ್ಲಿ ಕೆರೆಗಳಿಂದ, ಬಾವಿಗಳಿಂದಲೂ ವ್ಯವಸಾಯ ಮಾಡುತ್ತಿದ್ದರು. ಶಾಸನಗಳಲ್ಲಿ ಕಪಿಲೆ ಬಾವಿಯ ನೀರಾವರಿ ಮತ್ತು ಯಾತದ ನೀರಾವರಿಯ ಪ್ರಸ್ತಾಪ ಬರುತ್ತದೆ.[೩೧] ಕಪಿಲೆ ಅಥವಾ ಬಕೀಟಿನ ಸಾಧನದಿಂದ ಮೇಲಕ್ಕೆ ಎತ್ತುಗಳ ಸಹಾಯದಿಂದ ನೀರನ್ನು ಎಳೆಯಲಾಗುತ್ತಿತ್ತು. ಒಬ್ಬ ವ್ಯಕ್ತಿ ಮತ್ತು ಒಂದು ಜೊತೆ ಎತ್ತುಗಳ ಸಹಾಯದಿಂದ ನೀರನ್ನು ಎಳೆಯಬಹುದಾಗಿತ್ತೆಂದು ಬುಕಾನನ್ ಹೇಳಿದ್ದಾನೆ.[೩೨] ಯಾತದ ಬಾವಿಯಿಂದ ನೀರನ್ನು ಮನುಷ್ಯರು ಸೂಕ್ತವಾದ ಉಪಕರಣಗಳನ್ನು ಬಳಸಿ ಮೇಲಕ್ಕೆ ಎತ್ತುತ್ತಿದ್ದರು. ಹೀಗೆ ಈ ಪ್ರದೇಶದ ನೀರಾವರಿ ವ್ಯವಸ್ಥೆಯಲ್ಲಿ ಕೆರೆಗಳು ಮತ್ತು ಬಾವಿಗಳು ಪ್ರಧಾನ ಪಾತ್ರ ವಹಿಸಿದ್ದವು.

ಇಲ್ಲಿನ ಕೃಷಿ ವ್ಯವಸ್ಥೆಯಲ್ಲಿ ಭೂಒಡೆಯ ಮತ್ತು ಗೇಣಿದಾರ ಎಂಬ ಎರಡು ವರ್ಗಗಳು ಇದ್ದುದನ್ನು ಗುರುತಿಸಬಹುದು. ಭೂಒಡೆಯರು ಬರುವ ಜಾತಿ ಅಥವಾ ಗುಂಪುಗಳು ಯಾವುವು ಎಂಬ ಪ್ರಶ್ನೆ ಸಹಜವಾಗಿ ನಮ್ಮ ಮುಂದೆ ಬರುತ್ತದೆ. ಈ ಪ್ರದೇಶದ ಸಮಾಜದಲ್ಲಿ ಸಮಸ್ತ ಭೂಮಿಯ ಅಂತಿಮ ಒಡೆತನ ನಾಯಕರಿಗೆ ಸೇರಿದ್ದಿತು. ಆದರೂ ಭೂಹಿಡುವಳಿಯ ಖಾಸಗಿ ಒಡೆತನವನ್ನು ನಾಯಕರು ರಕ್ಷಿಸುತ್ತಿದ್ದರು. ಅದಕ್ಕೆ ಮನ್ನಣೆ ಕೊಟ್ಟಿದ್ದರು. ಚಿತ್ರದುರ್ಗದ ನಾಯಕರು ಭೂಹಿಡುವಳಿಯನ್ನು ಬೇರೆಯವರ ಒಡೆತನಕ್ಕೆ ನೀಡುವಾಗ ಅದು ಕ್ರಯ, ಭೋಗ್ಯ ಮತ್ತು ದಾನ ಇವೇ ಮೊದಲಾದ ವಿಧಾನಗಳನ್ನು ಶಾಸನಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.[೩೩] ಕೃಷಿಪ್ರಧಾನವಾದ ಸಮಾಜದಲ್ಲಿ ಭೂಒಡೆತನ ಭೂಮಾಲೀಕರಿಗೆ ಪ್ರತಿಷ್ಠೆಯ ಸಂಕೇತದ ಜೊತೆಗೆ ಆರ್ಥಿಕ ಸುಭದ್ರತೆಯ ಕುರುಹು ಆಗಿದ್ದಿತು. ಬಹುತೇಕ ಸಮುದಾಯದವರು ಭೂಒಡೆಯರಾಗಿದ್ದರು ಆದರೆ ಕೆಲವರು ಸ್ವತಃ ಕೃಷಿ ಮಾಡುತ್ತಿರಲಿಲ್ಲ. ಲಿಂಗಾಯಿತ, ರೆಡ್ಡಿಗಳು, ಒಕ್ಕಲಿಗರು ಪ್ರಧಾನವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭೂಒಡೆಯರಾಗಿದ್ದರು. ಇದೇ ವರ್ಗದಲ್ಲಿ ಸಣ್ಣ ಭೂಹಿಡುವಳಿದಾರರು ಗೇಣಿದಾರರಾಗಿ ಅಥವಾ ಕೂಲಿಗಾಗಿ ದುಡಿಯುತ್ತಿದ್ದರು. ಇವರ ಜೊತೆಗೆ ಇತರೆ ಜಾತಿಗಳು ಸೇರಿದ್ದವು. ಗೇಣಿದಾರರ ವರ್ಗವಲ್ಲದೆ ಅಸ್ಪೃಶ್ಯ ಜಾತಿಗಳ ಜೀತದಾಳುಗಳು ಇದ್ದರು. ಗೇಣಿದಾರರಿಗಿಂತ ಜೀತದಾಳುಗಳ ಸ್ಥಿತಿ ಶೋಚನೀಯವಾಗಿತ್ತು.

ಒಂದು ಗ್ರಾಮದ ಭೂಹಿಡುವಳಿಯನ್ನು ಲಿಂಗಮುದ್ರೆ ಕಲ್ಲುಗಳ ಮೂಲಕ ಗುರುತಿಸಿ, ಒಂದು ಗ್ರಾಮದಿಂದ ಮತ್ತೊಂದು ಗ್ರಾಮವನ್ನು ಪ್ರತ್ಯೇಕಿಸುವ ಕ್ರಮವು ಜಾರಿಯಲ್ಲಿತ್ತು. ಉದಾಹರಣೆಗೆ

ಭೂಹಿಡುವಳಿಗಳನ್ನು ಕೆತ್ತಿದ ಕಲ್ಲುಗಳ ಮೂಲಕ ಹಾಗೂ ಶಾಸನಗಳ ಮೂಲಕವು ಗುರುತಿಸುತ್ತಿದ್ದರು. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಶಕವರ್ಷ ೧೦೭೮ರ ಶಾಸನವೊಂದು ತಿಳಿಸುವಂತೆ ದಾನ ಕೊಟ್ಟಿರುವ ತೋಟದ ಗಡಿ ಈ ರೀತಿ ಇದೆ. ತೋಟಕ್ಕೆ ಮೂಡಲು ಹಿರೇಕೆರೆ, ತೆಂಕಲು ಹೆದ್ದಾರಿ, ಪಡುವಲು ನೆಟ್ಟಗಲ್ಲು, ಬಡಗಲು ಹುಟ್ಟರೆ ಗದ್ದೆಗಳು ಇದರ ಮಧ್ಯ ಇರುವ ಪ್ರದೇಶವೆಂದು ಗುರುತಿಸಿದ್ದಾರೆ. ಹೀಗೆ ಭೂ ಹಿಡುವಳಿಗಳ ವಿಸ್ತೀರ್ಣತೆಯನ್ನು ನಿಯಮಬದ್ಧವಾಗಿ ವಿಭಾಗಿಸಿರುವುದು ಶಾಸನಗಳಿಂದ ತಿಳಿಯುತ್ತದೆ. ಅದೇ ರೀತಿ ಶಕವರುಷ ೧೪೪೮ರ ಶಾಸನದಲ್ಲಿ ದಾನ ನೀಡಿರುವ ನಿಬಗೂರು ಗ್ರಾಮದ ನಾಲ್ಕು ಗಡಿಗಳ ವಿವರವಿದೆ. ಮೂಡಲು ಕಟ್ಟಿಗೆಹಳ್ಳಿಯ ಹೊಲದ ಮೇರೆ, ತೆಂಕಲು ಬಿದರಕೆರೆಯ ಹೊಲದ ಗಡಿ, ಪಡುವಲು ಅದೇ ಬಿದರಕೆರೆಯ ಹೊಲದ ಮೇರೆ, ಮೂಡಲು ವಾಯುವ್ಯಕ್ಕೆ ಹುಲುಕುಂಟೆಯ ಹೊಲದ ಮೇರೆ, ಆಗ್ನೇಯ ಬಡಗಲು ಈಶಾನ್ಯ ಕೋಡಿಹಳ್ಳಿಯ ಹೊಲ ಮೇರೆ, ಹೀಗೆ ಒಂದು ಗ್ರಾಮದ ಎಲ್ಲಾ ದಿಕ್ಕುಗಳನ್ನು ಸ್ಪಷ್ಟವಾಗಿ ಸೂಚಿಸುವ ಲಿಂಗಮುದ್ರೆ ಕಲ್ಲುಗಳನ್ನು ನೆಟ್ಟು ಗುರುತಿಸುವ ಕ್ರಮ ಜಾರಿಯಲ್ಲಿತ್ತು.[೩೪] ಕೆಲವು ಬಾರಿ ಭೂಮಿಯ ವಿಸ್ತೀರ್ಣವನ್ನು ಬಿತ್ತುವ ಬೀಜದ ಪ್ರಮಾಣದಿಂದ ನಿರ್ಧರಿಸಲಾಗುತ್ತಿತ್ತು. ಒಂದು ಕೊಳದ ಬೀಜವನ್ನು ಬಿತ್ತಿದ ಭೂಮಿಯೂ ಒಂದು ಘಟಕವೆನಿಸುತ್ತಿತ್ತು.

ಚಿತ್ರದುರ್ಗ ಪ್ರದೇಶದ ಭೂಮಿಯ ಫಲವತ್ತತೆಯನ್ನು ಗಮನಿಸಿ ಎರೆಭೂಮಿ, ಕೆಂಪುಭೂಮಿ, ಮರಳುಭೂಮಿ, ಕಲ್ಲಚ್ಚು ಭೂಮಿ ಮುಂತಾಗಿ ಕರೆಯುವ ಕ್ರಮ ರೂಢಿಯಲ್ಲಿತ್ತು. ಈ ನಾಯಕ ಅರಸರು ಕೃಷಿಯ ಅಭಿವೃದ್ಧಿಗೋಸ್ಕರ ಹಲವು ಬಾವಿ, ಕೆರೆಗಳನ್ನು ನಿರ್ಮಿಸಿದ್ದರು. ಅವುಗಳಲ್ಲಿ ೧೭೦೩ರಲ್ಲಿ ಭರಮಪ್ಪನಾಯಕನ ಕಾಲದಲ್ಲಿ ಭರಮಸಾಗರದ ಕೆರೆ, ಅಬ್ಬನಾಯಕನಹಳ್ಳಿ ಕೆರೆ, ಭೀಮಸಮುದ್ರದ ಕೆರೆ ಮೊದಲಾದ ಭಾರೀ ಕೆರೆಗಳು ಸಾವಿರಾರು ಎಕರೆ ಭೂಮಿಗೆ ನೀರುಣಿಸುತ್ತಿದ್ದವು. ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಹಲವು ಪ್ರದೇಶಗಳಲ್ಲಿ ಹೊಸದಾಗಿ ಭೂಮಿಯನ್ನು ಕೃಷಿಗೊಳಪಡಿಸಿ ಅಥವಾ ಜೀರ್ಣೋದ್ಧಾರ ಮಾಡಿ ಇಂತಹ ಗ್ರಾಮಗಳಿಗೆ ರಾಜಮನೆತನದ ರಾಣಿಯರ ಹೆಸರಿಟ್ಟರು. ಅವುಗಳಲ್ಲಿ ಸಿದ್ಧವ್ವನಹಳ್ಳಿ, ಸಿದ್ಧವ್ವನದುರ್ಗ, ರಂಗವ್ವನಹಳ್ಳಿ, ವೀರವ್ವನಾಗತಿಹಳ್ಳಿ, ಓಬವ್ವನಾಗತಿಹಳ್ಳಿ ಮುಂತಾದ ಗ್ರಾಮಗಳಿದ್ದವು. ಈ ನಾಯಕ ಅರಸರ ರಾಣಿಯರಿಗೆ'ನಾಯಕಿ'ಅಥವಾ 'ನಾಗತಿ' ಎಂದು ಸಹ ಕರೆಯಲಾಗುತ್ತಿತ್ತು.

ಚಿತ್ರದುರ್ಗದ ನಾಯಕ ಅರಸರ ಕಾಲದಲ್ಲಿಯೇ ಪ್ರತಿ ೮ ಅಥವಾ ೧೬ ಹಳ್ಳಿಗಳಿಗೆ ಒಂದರಂತೆ ಸ್ಥಾಪನೆಯಾದ ಹೋಬಳಿಗಳು ಕೇವಲ ಆಡಳಿತಾತ್ಮಕ ವಿಭಾಗೀಕರಣವಲ್ಲದೆ ಕಂದಾಯ ಸಂಗ್ರಹಣೆಯ ಘಟಕಗಳೂ ಆಗಿದ್ದವು. ಇಂತಹ ೧೬ ಗ್ರಾಮಗಳ ಒಂದು ಆಡಳಿತ ಘಟಕವನ್ನು ನಾಯಕರು ನಿರ್ಮಿಸಿದ್ದರು. ಮಾಗಣಿ ಎನ್ನುವುದು ಒಂದು ಆಡಳಿತ ವಿಭಾಗ ಎಂದು ಶಾಸನದಿಂದ ತಿಳಿಯುತ್ತದೆ. ಚಿತ್ರದುರ್ಗ ನಾಯಕ ಅರಸರ ಕಾಲದಲ್ಲಿ ಗ್ರಾಮವು ಅತ್ಯಂತ ಚಿಕ್ಕ ಆಡಳಿತ ಘಟಕವಾಗಿತ್ತು. ಪ್ರತಿಯೊಂದು ಸೀಮೆ ಅಥವಾ ಗ್ರಾಮಗಳ ಆಡಳಿತವನ್ನು ಪಾರುಪತ್ತೆಗಾರ, ನಾಡಗೌಡ, ನಾಯಕ, ದಳವಾಯಿ, ಗೌಡ ಮತ್ತು ಶಾನುಭೋಗರು ನೋಡಿಕೊಳ್ಳುತ್ತಿದ್ದರು. ಉದಾಹರಣೆಗೆ ಕ್ರಿ. ಶ. ೧೫೮೧ರ ಶಾಸನದಲ್ಲಿ ಚಿತ್ರದುರ್ಗದ ಎರಡನೇ ದೊರೆ ಓಬಣ್ಣನಾಯಕನ ಮಗ ಮದಕರಿ ನಾಯಕನು ಹಿರೇಗುಂಟನೂರು ಹೋಬಳಿ ರೊಟ್ಟಿಹಳ್ಳಿ ಗೌಡಿಕೆಯನ್ನು ಕೆರೆಯ ದೇವಪ್ಪಗೌಡನ ಮಗ ಸಿದ್ಧಾಪುರದ ಸಿದ್ದಣಗೌಡನು ೨೦೦ ವರಹಗಳನ್ನು ಪಡೆಯುವುದರ ಮೂಲಕ ನೋಡಿಕೊಳ್ಳುತ್ತಿದ್ದ ಬಗ್ಗೆ ಉಲ್ಲೇಖವಿದೆ.[೩೫] ಇದರಿಂದ ಗ್ರಾಮದ ಒಟ್ಟು ಕಂದಾಯದ ವಸೂಲಿಯನ್ನು ಒಬ್ಬ ಗೌಡನಿಗೆ ವಹಿಸಿಕೊಡುವ ವ್ಯವಸ್ಥೆ ಜಾರಿಯಲ್ಲಿರುವುದು ಕಂಡುಬರುತ್ತದೆ. ಚಿತ್ರದುರ್ಗ ನಾಯಕರು ಸುಗ್ಗಿಯಲ್ಲಿ ಕಾಳನ್ನು ಬೇರ್ಪಡಿಸುವ ವೇಳೆಯಲ್ಲಿಯೇ ಕಂದಾಯ ವಸೂಲಿ ಮಾಡುತ್ತಿದ್ದರು. ಕಂದಾಯ ವಸೂಲಿಯಲ್ಲಿ ನೇಗಿಲು ವಿಧಾನವನ್ನು ಬಳಸುತ್ತಿದ್ದರು. ಈ ಪದ್ಧತಿಯಲ್ಲಿ ಭೂಕಂದಾಯವನ್ನು ಭೂಮಿ ಯನ್ನು ಊಳಲು ಅಗತ್ಯವಾದ ನೇಗಿಲುಗಳ ಸಂಖ್ಯೆಯ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು.[೩೬] ಬಿ.ಎಲ್.ರೈಸ್ 'ಚಿತ್ರದುರ್ಗ ನಾಯಕರು ಪ್ರತಿ ನೇಗಿಲು ಒಂದಕ್ಕೆ ಒಂದೂವರೆ ದುರ್ಗಿ ಪಗೋಡ ಕಂದಾಯ ವಿಧಿಸುತ್ತಿದ್ದರು' ಎಂದಿದ್ದಾರೆ.[೩೭] ನೆಲದ ಸ್ವರೂಪ ಮತ್ತು ಬೆಳೆಯನ್ನು ಅನುಸರಿಸಿ ಭೂಕಂದಾಯವನ್ನು ನಿಗದಿಪಡಿಸುತ್ತಿದ್ದರು. ಹಾಗೇಯೆ ಕೆರೆ, ಬಾವಿ, ನದಿ ನೀರಿನಿಂದ ಕೃಷಿಗೊಳಪಟ್ಟ ಭೂಹಿಡುವಳಿಗಳ ಮೇಲೆ ಕೆಲವು ಸಲ ಪ್ರತಿಯೊಂದು ನೇಗಿಲಿಗೆ ಎರಡರಿಂದ ಮೂರು ಗದ್ಯಾಣದವರೆಗೆ ತೆರಿಗೆ ವಿಧಿಸಲಾಗಿತ್ತು. ಅಲ್ಲದೇ ಭೂ ಕಂದಾಯವು ಭೂಮಿಯ ಒಟ್ಟು ಆದಾಯದ ೧/೩ ಭಾಗವನ್ನು ವಸೂಲಿ ಮಾಡುತ್ತಿದ್ದರು. ಪ್ರತಿ ನೇಗಿಲಿಗೂ ಒಂದುವರೆ ದುರ್ಗಿ ವರಹವನ್ನು ನಗದು ಕಂದಾಯ ರೂಪದಲ್ಲಿ 'ಗ್ರಾಮ ಚಾವಡಿ'ಗಳ ಮೂಲಕ ಸಂಗ್ರಹಿಸುತ್ತಿದ್ದರು. ನಾಯಕ ಅರಸರ ಕಾಲದಲ್ಲಿ ಭೂಕಂದಾಯ ವಸೂಲಿ ಮಾಡಲು ಬೇರೆ ಬೇರೆ ಅಧಿಕಾರಿಗಳಿದ್ದರು. ಅವರನ್ನು ಗೌಡ,

ಶ್ಯಾನಭೋಗ, ನಾಡಿಗ ಎಂದು ಗುರುತಿಸಲಾಗಿತ್ತು. ಶ್ಯಾನುಭೋಗರು ಕ್ರಮವಾಗಿ ಭೂಹಿಡುವಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ನೊಂದಾಯಿಸುವ ಜವಾಬ್ದಾರಿಯನ್ನು ಹೊಂದಿದ್ದರು. ನಾಯಕ ಅರಸರ ಕಾಲದಲ್ಲಿ ವ್ಯಾಪಾರ ವಾಣಿಜ್ಯದ ಮೇಲೆ, ಸ್ಥಳೀಯ ಸುಂಕ, ಹುಲ್ಲುಬನ್ನಿ, ಇಟ್ಟಿಗೆ ಗೋಡುಗಳ ಮೇಲಿನ ಸುಂಕ, ತಂಬಾಕು ಸುಂಕ, ಅಬಕಾರಿ ಸುಂಕಗಳು ಸರಕಾರದ ಆದಾಯದ ಮೂಲಗಳಲ್ಲಿ ಮುಖ್ಯವಾಗಿದ್ದವು. ಹಿರೇಮದಕರಿ ನಾಯಕನ ಆಳ್ವಿಕೆಯಲ್ಲಿ ಒಟ್ಟು ೧೮ ಸೀಮೆಗಳಿದ್ದವು. ಇವನ ಆಡಳಿತಾವಧಿಯಲ್ಲಿದ್ದ ಒಟ್ಟು ಆದಾಯವು ಮಾರ್ಗಸುಂಕ, ಹುಲ್ಲುಬನ್ನಿ, ಇಟ್ಟಿಗೆ ಗುತ್ತಿಗೆ, ಎಲೆಮನೆ, ತಂಬಾಕು, ಗಾಂಜ, ಷರಾಬು, ಉಪ್ಪಿನ ಸುಂಕ, ಆಚಾರಗಾಣಿಕೆ ಸಹಾ ಸೇರಿ ಒಟ್ಟು ೩,೦೦,೦೦೦, ೨೦ ವರಹ ಆದಾಯವಾಗಿತ್ತು. ಚಿತ್ರದುರ್ಗದ ಮೊದಲನೇ ತಿಮ್ಮಣ್ಣ ನಾಯಕನೂ ತನಗೆ ಸೇವೆ ಸಲ್ಲಿಸಿದ ವಿರೂಪಾಕ್ಷ ಜೋಯಿಸರ ಮಗ ಪರುಶುರಾಮಪ್ಪನಿಗೆ ಹಾಗೂ ಅವನ ಮಕ್ಕಳಾದ ಯಲ್ಲಪ್ಪ, ಬೋನಪ್ಪ ಇವರಿಗೆ ನಿರೂಪ ಕೊಡಿಸಿದ. ಈ ವಿವರದಿಂದ ತನ್ನ ಅರಸನಿಗೆ ಅಂದಿನ ಜನರು ಸಲ್ಲಿಸಬೇಕಾದ ಕಂದಾಯದ ಬಗ್ಗೆ ಸ್ಪಷ್ಟವಾಗಿ ತಿಳಿಯುತ್ತದೆ. ಒಬ್ಬ ಶಾನುಭೋಗ ಸರಕಾರದ ಪರವಾಗಿ ಗ್ರಾಮದಿಂದ ವೈಯಕ್ತಿಕವಾಗಿ ಪಡೆಯಬಹುದಾದ ತೆರಿಗೆಯ ವಿವರ ಹೀಗಿದೆ:[೩೮]

೧. ೧ ಹೊಲ (ಪ್ರತಿಯೊಂದು ಗ್ರಾಮದಲ್ಲಿ ಸಾಗುವಳಿಯಾದ ಒಂದು ಹೊಲ)

೨. ೧ ಕೆರೆ ಹಿಂದೆ ಗದ್ದೆ (ಪ್ರತಿಯೊಂದು ಗ್ರಾಮದಲ್ಲಿ ಸಾಗುವಳಿಯಾದ ಕೆರೆ ಹಿಂದೆ ಒಂದು ಗದ್ದೆ)

೩. ೧ ತೋಟ (ಪ್ರತಿಯೊಂದು ಗ್ರಾಮದಲ್ಲಿರುವ ತೋಟಗಳಲ್ಲಿ ಒಂದು ತೋಟ)

೪. ೧ ಮಳಲು ಗ್ರಾಮದಲ್ಲಿ ಎರಡು ಎತ್ತಿನ ಗಳೇ ೧ಕ್ಕೆ ಅಳೆಯುವ ಭತ್ತ ಐದು ಕೊಳಗ

೫. ೧ ಎರೇಗ್ರಾಮದಲ್ಲಿ ಎಂಟೆತ್ತಿನ ಗಳೆ ೧ಕ್ಕೆ ಅಳೇವತ್ತ ಹತ್ತು ಕೊಳಗ ಹೊರೆಹುಲ್ಲು, ಮೊರಬತ್ತ, ಬೊಗೆವತ್ತ (ಬೊಗಸೆ ಬತ್ತ) ಸೂಲಿಗೆ ೨೩)

೬. ರೈತ ತೆರುವ ಕಂದಾಯಕ್ಕೆ ದುರ್ಗಿ ೧೯ ವರಹ ೧ಕ್ಕೆ ರುಸುಮುಗ ೧ ಹಾಗದ ಕಾಸು

೭. ೧ ಜಾಡರ ಮಗ್ಗಕ್ಕೆ ಹಾಗದ ಕಾಸು

೮. ಅಂಗಡಿ ೧ಕ್ಕೆ ದಿನ ೧ಕ್ಕೆ ದುಗ್ಗಾಣಿ ತೂಕ ಅಡಿಕೆ ೧೦ ವೀಳಯದೆಲೆ

೯. ಗೊಲ್ಲರ ಹಟ್ಟಿ ೧ಕ್ಕೆ ವರ್ಷಕ್ಕೆ ೧ಕುರಿ ಮತ್ತು ಅಗಸರು ಹಡದಿ ಸೀರೆ ಮುಂತಾಗಿ ನಡೆಸಿಕೊಡ ಬೇಕೆಂದು ದೊರೆಯು ತಾನೇ ಅಪ್ಪಣೆ ಮಾಡಿದನು.

ಇದೇ ರೀತಿ ನಾಯಕ ಅರಸರ ಕಾಲದಲ್ಲಿ ಗ್ರಾಮಗಳ ಆಡಳಿತ ನೋಡಿಕೊಳ್ಳಲು "ಬರಬಲೋತಿ ವ್ಯವಸ್ಥೆ" ಜಾರಿಯಲ್ಲಿತ್ತು. ಇವರು ಗ್ರಾಮದ ಅಭಿವೃದ್ಧಿಗಾಗಿ ಅಥವಾ ಅರಮನೆಯಲ್ಲಿ ನಿರ್ದಿಷ್ಟ ದಿನದಂದು ಬಿಟ್ಟಿ ದುಡಿಯಬೇಕಾಗಿತ್ತು. ಉಳಿದ ದಿನ ಸಲ್ಲಿಸುವ ಸೇವೆಗೆ ರೈತರಿಂದ ಆಯಾ ಪಡೆಯುತ್ತಿದ್ದರು. ಇವರನ್ನು ಹನ್ನೆರಡು ಜನ ಕೈವಾಡದವರು ಎಂದು ಕರೆಯುತ್ತಿದ್ದರು.[೩೯] ಅಂದರೆ ಗ್ರಾಮದಲ್ಲಿ ವಾಸಿಸುವ ಜೋಯಿಸ, ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ, ತೋಟಿ, ತಳವಾರ, ಓಲೆಕಾರ, ಪೂಜಾರಿ, ಕ್ಷೌರಿಕ, ನೇಕಾರ, ಇವರೇ ಮೊದಲಾದ ಆಯಗಾರರು ಇಡೀ ವರ್ಷ ತಮ್ಮ ವೃತ್ತಿಯಿಂದ ರೈತರಿಗೆ ಸಹಾಯ ಮಾಡಿ ಪ್ರತಿ ಕುಳದಿಂದ ಎಂದರೆ ಎರಡೆತ್ತಿನ ಬೇಸಾಯ ಒಂದಕ್ಕೆ ಮೊರಬತ್ತ, ಹೊರೆಹುಲ್ಲು ಪಡೆದು ಬದುಕುತ್ತಿದ್ದರು. ಹೊರೆಹುಲ್ಲು ಎಂದರೆ ತೆನೆ ಸಮೇತವಾದ ಭತ್ತದ ಹುಲ್ಲು ಅಥವಾ ಜೋಳದ ಸಪ್ಪೆ ಮುಂತಾದವುಗಳು ಆಗಿದ್ದವು. ರಾಜಕುಮಾರರು, ರಾಜಕುಮಾರಿಯರು ಸಹ ಬೇವಿನ ಉಡಿಗೆ ಉಟ್ಟು ಬಳಗ ಸಮೇತ ಹೊರಟು ಉತ್ಸವಾಂಬೆಗೂ, ಕಾಟಮ್ಮ ದೇವರಿಗೂ ಸೇವೆ ಸಲ್ಲಿಸುತ್ತಿದ್ದರು. ಹೀಗೆ ಸಲ್ಲಿಸುವಾಗ ಚಿತ್ರದುರ್ಗದ ಪ್ರದೇಶಕ್ಕೆ ಸೇರಿದ ಎಲ್ಲ ಗ್ರಾಮದ ಜನರು ಕಾಣಿಕೆ ಸಲ್ಲಿಸಬೇಕಾಗಿತ್ತು. ಅದರ ವಿವರ ಹೀಗಿದೆ:[೪೦]

೧. ಗ್ರಾಮದ ತಳವಾರರ ಗ್ರಾಮ ೧ಕ್ಕೆ ೧ಟಗರು, ಒಂದು ತುಪ್ಪದ ಕುಂಭ ಸಹಾ ತರಬೇಕು.

೨. ದೊರೆಯು ಜೋಗಿಗೆ ಹೊರಟಾಗ ಪ್ರತಿಗ್ರಾಮದ ಗೌಡನೂ ಗ್ರಾಮ ೧ಕ್ಕೆ ೧೯೦ ವರಹ ಜೋಗಿ ಕಾಣಿಕೆಯನ್ನು ಹಾಕಬೇಕು.

೩. ಭಾದ್ರಪದ ಮಾಸದ ವಿನಾಯಕನ ಚೌತಿಯಲ್ಲಿ ವಿಶಿಷ್ಟ ಮಠದ ಐಯ್ಯನವರೂ ಕರ್ಜಿಕಾಯಿ ಮಾಡಿಕೊಂಡು ಬಂದು ಅದನ್ನು ಅರಮನೆಯ ಬೊಕ್ಕಸದ ಮನೆಗೆ ಒಪ್ಪಿಸಬೇಕು.

೪. ಜಾಡರ ಮಗ್ಗ ೧ಕ್ಕೆ ನೂಲ ಹಗ್ಗದ ಪ್ರಕಾರ ಪ್ರತಿ ವರುಷವೂ ಜಾಡರು ತಂದು ಅರಮನೆಗೆ ಒಪ್ಪಿಸಬೇಕು.

೫. ಗ್ರಾಮಾಂತರಗಳಿಂದ ಹಜಾಮರು ತಿಂಗಳಿಗೆ ಒಂದು ಬಾರಿ ಸರದಿ ಮೇರೆಗೆ ದುರ್ಗಕ್ಕೆ ಬಂದು ಖಾಸಾಪಾಗದ ಕುದುರೆಗಳ ಮೈಕೂದಲನ್ನು ಆಯಾಲನ್ನು ಕತ್ತರಿಸಬೇಕು.

೬. ಗ್ರಾಮದ ಬೇಗಾರರು (ಮಾದಿಗರು) ಖಾಸಾ ಕುದುರೆಗೆ ದಿನ ೧ಕ್ಕೆ ಹಸಿ ಹುಲ್ಲು ೧೦ ಹೊರೆ ಪ್ರಕಾರ ಸರದಿ ಮೇರೆಗೆ ತರಬೇಕು.

೭. ಗ್ರಾಮ ೧ಕ್ಕೆ ೨ ಆಳುಗಳು ಗ್ರಾಮಾಂತರಗಳಿಂದ ತಿಂಗಳಿಗೆ ೧ ಸಾರಿ ದುರ್ಗಕ್ಕೆ ಬಂದು ಹುಲ್ಲನ್ನು ಕೊಯಿದು ಬಣವೆ ಹಾಕಬೇಕು. ಈ ಪ್ರಕಾರ ಏರ್ಪಾಡು ಮಾಡಿಸಿದರು.

ಈ ಮೇಲಿನ ಎಲ್ಲಾ ವಿವರಗಳಿಂದ ಚಿತ್ರದುರ್ಗದ ನಾಯಕ ಅರಸರ ಕಾಲದ ಭೂ ಹಿಡುವಳಿ ಮತ್ತು ಕಂದಾಯ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗ್ರಹಿಸಬಹುದಾಗಿದೆ.

ಮೊದಲನೇ ಘಟ್ಟದ ಅಧ್ಯಯನ

ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದ ಭೂಹಿಡುವಳಿ ವ್ಯವಸ್ಥೆ

ಚಿತ್ರದುರ್ಗ ಪ್ರದೇಶದಲ್ಲಿ ಪಾಳೆಯಗಾರರ ಕಾಲದ ಭೂಹಿಡುವಳಿ ವ್ಯವಸ್ಥೆ ಹೈದರಾಲಿಯ ಕಾಲದಲ್ಲಿಯೂ ಮುಂದುವರೆಯುತ್ತದೆ. ಆದರೆ ಟಿಪ್ಪುಸುಲ್ತಾನನ ಕಾಲದಲ್ಲಿ ಈ ಪ್ರದೇಶದಲ್ಲಿ ಕೆಲವು ಬದಲಾವಣೆಗಳು ಆಗುತ್ತವೆ. ಟಿಪ್ಪುವಿನ ಆಡಳಿತಾವಧಿಯಲ್ಲಿಯೂ ಈ ಪ್ರದೇಶದಲ್ಲಿ ತರಿ, ಖುಷ್ಕಿ, ಭಾಗಾಯ್ತು ಭೂಹಿಡುವಳಿಗಳಿದ್ದವು. ಟಿಪ್ಪುಸುಲ್ತಾನ ಮೈಸೂರು ಸಂಸ್ಥಾನದಾದ್ಯಂತ ಒಂದೇ ರೀತಿಯಾದ ಕಂದಾಯ ವ್ಯವಸ್ಥೆಯನ್ನು ಜಾರಿಗೆ ತಂದನು. ಅದರಿಂದ ಚಿತ್ರದುರ್ಗ ಪ್ರದೇಶದಲ್ಲಿಯೂ ಕೆಲವು ಬದಲಾವಣೆಗಳನ್ನು ಮಾಡಲಾಯಿತು. ಕಂದಾಯ ಭೂಹಿಡುವಳಿಗಳನ್ನು ಅಳತೆ ಮಾಡುವುದರೊಂದಿಗೆ ನೀರಾವರಿಗೊಳಪಟ್ಟ ಭೂ ಹಿಡುವಳಿಗಳಿಗೆ ೧೦ ರಿಂದ ೩೦ ಪಗೋಡ ಕಂದಾಯವನ್ನು ಏರಲಾಗಿತ್ತು. ಕ್ಷಾಮ, ಬರಗಾಲದಂತಹ ಪ್ರಾಕೃತಿಕ ವಿಕೋಪ ಸಂದರ್ಭಗಳಲ್ಲಿ ಒಂದು ನೇಗಿಲು ಹಿಡುವಳಿದಾರರುಗಳಿಗೆ ಕಂದಾಯ ರಿಯಾಯತಿ ನೀಡುವ ವ್ಯವಸ್ಥೆ ಜಾರಿಯಲ್ಲಿತ್ತು.

ಇದೇ ರೀತಿಯಾಗಿ ಟಿಪ್ಪುಸುಲ್ತಾನನು ಕಂದಾಯ ಆಡಳಿತವನ್ನು ಸುಧಾರಣೆ ಮಾಡಲು ಹಳೆಯ ಕಾಯ್ದೆಗಳನ್ನು ತಿರಸ್ಕರಿಸಿದನು. ಹೊಸ ವ್ಯವಸ್ಥೆಯನ್ನು ತನ್ನ ರಾಜ್ಯದಾದ್ಯಂತ ಜಾರಿಗೆ ತಂದನು. ಅವನು ಮೊಗಲ್ ಆಡಳಿತ ಹಾಗೂ ಪಾಶ್ಚಿಮಾತ್ಯ ರಾಜಕೀಯದಿಂದ ಪ್ರಭಾವಿತನಾಗಿದ್ದನು. 'ದೊಡ್‌ವೆಲ್' ಹೇಳುವಂತೆ ಭಾರತೀಯರಲ್ಲಿಯೇ ಪ್ರಥಮವಾಗಿ ಪಾಶ್ಚಿಮಾತ್ಯ ಆಡಳಿತ ವ್ಯವಸ್ಥೆಯನ್ನು ಟಿಪ್ಪು ಅನುಸರಿಸಿದನು ಎಂದಿದ್ದಾನೆ.

ಟಿಪ್ಪುಸುಲ್ತಾನ್ ತನ್ನ ರಾಜ್ಯವನ್ನು ಏಳು ಅಸಫಿ ತುಕ್ರಿಗಳಾಗಿ ವಿಂಗಡಿಸಿದ್ದನು. ಅದರಲ್ಲಿ ಚಿತ್ರದುರ್ಗವೂ ಒಂದು ಅಸಫಿ ತುಕ್ರಿಯಾಗಿತ್ತು. ಅವು ವಿಶಾಲವಾದ ಪ್ರದೇಶಗಳಾಗಿದ್ದರಿಂದ ಆಡಳಿತ ನಡೆಸಲು ನೆರವಾಗಲೆಂದು ಭಾವಿಸಿ ೧೭೮೪ರಲ್ಲಿ ಅವುಗಳನ್ನು ಒಂಭತ್ತಕ್ಕೆ ಹೆಚ್ಚಿಸಿದನು. ಎರಡು

ವರ್ಷಗಳ ನಂತರ ಅವುಗಳನ್ನು ಹದಿನೇಳಕ್ಕೇರಿಸಿದನು. ೧೭೯೨ರಲ್ಲಿ ಇಂಗ್ಲೀಷರೊಡನೆ ಯುದ್ಧ ಕೊನೆಗೊಳಿಸಿದ ಮೇಲೆ ತನ್ನ ರಾಜ್ಯದ ಪ್ರಾಂತ್ಯ ಗಡಿಗಳನ್ನು ಪುನರ್ ವಿಂಗಡಿಸಿದಾಗ, ಅವು ೩೭ ಅಸಫಿ ತುಕ್ರಿಗಳಾಗಿಯು ಮತ್ತು ೧೦೨೪ ಅಮಲ್ದಾರಿ ತುಕ್ರಿಗಳಾಗಿಯೂ ವಿಭಾಗಿಸಿದ್ದನು.[೪೧] ಹೀಗಾಗಿ ಈ ಬದಲಾವಣೆಯಿಂದ ಸುಗಮವಾದ ಆಡಳಿತಕ್ಕೆ ಹಲವು ಸಂದರ್ಭದಲ್ಲಿ ಅಡ್ಡಿಯಾಗುತ್ತಿತ್ತು. ಆದರೆ ಚಿತ್ರದುರ್ಗ ಪ್ರದೇಶವು ಹೈದರ್ ಮತ್ತು ಟಿಪ್ಪು ಕಾಲದಲ್ಲಿ ಒಂದೇ ಆಡಳಿತ ಘಟಕವಾಗಿತ್ತು.

ಟಿಪ್ಪು ಕಾಲದಲ್ಲಿ ಕಂದಾಯ ಸಂಗ್ರಹಿಸುವ ದೃಷ್ಟಿಯಿಂದ ಇಡೀ ರಾಜ್ಯವನ್ನು ಐದು ಸಾವಿರ ಪಗೋಡ ವರಮಾನ ಕೊಡುವ ಸಣ್ಣ ಘಟಕಗಳನ್ನಾಗಿ ವಿಭಾಗಿಸಲಾಗಿತ್ತು. ಅವುಗಳನ್ನು 'ತುಕಡಿ' ಎಂದು ಕರೆಯಲಾಗಿತ್ತು. ಪ್ರತಿಯೊಂದು ತುಕಡಿಯೂ ಒಬ್ಬ ಅಮೀಲನ ಕೈಕೆಳಗಿತ್ತು. ಒಬ್ಬ ಶಿರಸ್ತೇದಾರ, ಮೂವರು ಗುಮಾಸ್ತರು, ಒಬ್ಬ ತರಫ್‌ದಾರ, ಒಬ್ಬ ಸರಫ್, ಒಬ್ಬ ಮುನ್ಷಿ, ಒಬ್ಬ ಗೊಲ್ಲ, ಆರು ಜನ ಸಹಾಯಕರು ಪ್ರತಿಯೊಂದು ತುಕಡಿಯಲ್ಲಿಯೂ ಇರುತ್ತಿದ್ದರು. ಇಪ್ಪತ್ತು ಅಥವಾ ಮೂವತ್ತು ತುಕಡಿಗಳಿಗೆ ಅಸಫ್ ಕಚೇರಿಯನ್ನು ಸೂಕ್ತ ಸಿಬ್ಬಂದಿಯೊಂದಿಗೆ ಸ್ಥಾಪಿಸಲಾಗಿತ್ತು. ಇದು ಇಂದಿನ ಜಿಲ್ಲೆಯನ್ನು ಹೋಲುತ್ತಿತ್ತು. ಮೊದಲ ಮತ್ತು ಎರಡನೇ ಅಸಿಫ್ ಕಚೇರಿಯಲ್ಲಿ ಎರಡು ಜನ ಶಿರಸ್ತೇದಾರ ಎರಡು ಜನ ಗುಮಾಸ್ತರು, ಇವರ ಜೊತೆಗೆ ನಲವತ್ತು ಜನ ಸೇವಕರು, ಒಬ್ಬ ಸಿರಾಫ್, ಒಬ್ಬ ಮುನ್ಷಿ ಕಛೇರಿಯಲ್ಲಿರುತ್ತಿದ್ದರು. ಇವರ ಜೊತೆಗೆ ಒಬ್ಬ ಪರ್ಷಿಯನ್ ಶಿರಸ್ತೇದಾರ ಮತ್ತು ಕೆಲವು ಗುಮಾಸ್ತರು ಪರ್ಶಿಯನ್ ಭಾಷೆಯಲ್ಲಿ ಲೆಕ್ಕ ಪತ್ರವನ್ನಿಡುತ್ತಿದ್ದರು. 'ಸಾದಿಕ್' ಅಸಫ್ ಕಚೇರಿಯ ಅಧ್ಯಕ್ಷನಾಗಿದ್ದನು. ಯಾವುದೇ ಅವಶ್ಯವಾದ ಕಾಯಿದೆ ಜಾರಿಗೆ ಬಂದಾಗ ಅದರ ಕೆಳಗೆ ಟಿಪ್ಪುವಿನ ಸಹಿ ಮತ್ತು ಮುದ್ರೆ ಇರುತ್ತಿತ್ತು. ಟಿಪ್ಪುಕಾಲದ ಕಂದಾಯ ಇಲಾಖೆಯ ಮುಖ್ಯಸ್ಥನನ್ನು ದಿವಾನ್, ಸಾಹೇಬ ದಿವಾನ್, ಹುಜರ್ ದಿವಾನ್ ಅಥವಾ ಮೀರ್ ಅಸಫ್ ಎಂದು ಕರೆಯುತ್ತಿದ್ದರು. ಇವನು ಟಿಪ್ಪು ಕಾಲದ ಬಹುಮುಖ್ಯವಾದ ಅಧಿಕಾರಿಯಾಗಿದ್ದನು. ಇವನ ಜೊತೆಗೆ ಇತರ ಐದು ಜನ ಅಧಿಕಾರಿಗಳಿದ್ದರು. ಇವರನ್ನೊಳಗೊಂಡ ವ್ಯವಸ್ಥೆಗೆ **ಮೀರ್ ಅಸಫ್ ಕಚೇರಿ** ಎಂದು ಕರೆಯುತ್ತಿದ್ದರು. ಈ ಇಲಾಖೆಯಲ್ಲಿ ಪ್ರತಿಯೊಬ್ಬ ಅಧಿಕಾರಿಯ ಕೆಳಗೆ ಶಿರಸ್ತೇದಾರರಿದ್ದರು. ಕಂದಾಯದ ಲೆಕ್ಕವನ್ನು ಪರ್ಶಿಯನ್, ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಬರೆಯುತ್ತಿದ್ದರು.[೪೨]

ಟಿಪ್ಪು ಕಾಲದ ಕಂದಾಯ ವ್ಯವಸ್ಥೆಯಲ್ಲಿ ಸುಭೇದಾರ್ ಮತ್ತು ಅಮೀಲರು ತಾಲೂಕಿನ ಕಂದಾಯ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ವೈಯಕ್ತಿಕವಾಗಿ ನೋಡಿಕೊಳ್ಳುತ್ತಿದ್ದರು. ಹೋಬಳಿಯ ಮುಖ್ಯಸ್ಥನಿಗೆ

ಪಾರುಪತ್ತೆ ಎಂದು ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಇವರು ಮುಸ್ಲಿಂ ಸಮುದಾಯದವರಾಗಿದ್ದರು. ಅವರು ಪ್ರತಿಯೊಂದು ಹಳ್ಳಿಗೂ ಭೇಟಿ ನೀಡಿ ಸಾಗುವಳಿಯಾದ ಭೂ ಹಿಡುವಳಿಗಳ ಮತ್ತು ಕೆರೆಗಳ ಬಗ್ಗೆ ಸಮೀಕ್ಷೆ ಮಾಡುತ್ತಿದ್ದರು. ಪಾರುಪತ್ತೆದಾರನು ಗ್ರಾಮದ ಗೌಡ, ಶಾನುಭೋಗರಿಂದ ಕಂದಾಯ ಸಂಗ್ರಹಿಸಿ ಅಮೀಲರ ಕಚೇರಿಗೆ ಸಲ್ಲಿಸುತ್ತಿದ್ದರು. ಟಿಪ್ಪು ಕಾಲದವರೆಗೂ ಈ ಅಧಿಕಾರಿಗಳು ಆನುವಂಶಿಕವಾಗಿ ನೇಮಕಗೊಳ್ಳುತ್ತಿದ್ದರು. ಸಾಮಾನ್ಯವಾಗಿ ಗ್ರಾಮದ ಶಾನುಭೋಗರು ಬ್ರಾಹ್ಮಣ ರಾಗಿದ್ದರು. ಟಿಪ್ಪು ಈ ಅಧಿಕಾರಿಗಳಿಗೆ ಹಣದ ರೂಪದಲ್ಲಿ ವೇತನ ನೀಡುತ್ತಿದ್ದನು. ಟಿಪ್ಪುವಿ ಕಾಲದಲ್ಲಿ ಅಮೀಲರು ಮುಸ್ಲಿಂರಾಗಿರುತ್ತಿದ್ದರು.[೪೩]

ಮೊಹಬ್ಬುಲ್ ಹಸನ್ ಅವರು ಟಿಪ್ಪು ಕಾಲದ ಭೂಹಿಡುವಳಿ ಕುರಿತು ವಿವರವಾಗಿ ಅಧ್ಯಯನ ನಡೆಸಿದ್ದಾರೆ. ಅವರು ಗುರುತಿಸಿರುವಂತೆ ಅಮೀಲನು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಭೂ ಹಿಡುವಳಿದಾರರೊಡನೆ ಮಾಡಿಕೊಂಡಿದ್ದ ತೀರ್ಮಾನಕ್ಕನುಗುಣವಾಗಿ ಕಂದಾಯವನ್ನು ವರ್ಷದಲ್ಲಿ ಮೂರು ಕಂತುಗಳಲ್ಲಿ ಪಡೆಯುತ್ತಿದ್ದರು. ಆದರೆ ಬಂಜರುಭೂಮಿಗೆ ಮೊದಲನೆಯ ವರುಷ ಕಂದಾಯ ಇರಲಿಲ್ಲ. ಎರಡನೆಯ ವರುಷ ಸಾಮಾನ್ಯವಾಗಿ ವಿಧಿಸುತ್ತಿದ್ದ ಕಂದಾಯದ ಕಾಲುಭಾಗವನ್ನು ವಸೂಲು ಮಾಡುತ್ತಿದ್ದರು. ಅನಂತರದ ವರುಷದಲ್ಲಿ ನಿರ್ದಿಷ್ಟಪಡಿಸಿದ ಕಂದಾಯವನ್ನು ಕಟ್ಟಬೇಕಾಗಿತ್ತು. ಬೆಳೆಯಾಗದಿದ್ದರೆ ಅಥವಾ ಬೇರೆ ಕಾರಣಗಳಿಂದ ಭೂಹಿಡುವಳಿದಾರರು ಕಂದಾಯವನ್ನು ಕೊಡಲು ಸಾಧ್ಯವಾಗದಿದ್ದರೆ ಅಮೀಲನು ಈ ವಿಷಯವನ್ನು ಟಿಪ್ಪುವಿಗೆ ತಿಳಿಸಬೇಕಾಗಿತ್ತು. ಅಮೀಲರು, ಶಿರಸ್ತೇದಾರರು ಮತ್ತು ತರಫ್‌ದಾರರು ಭೂ ಹಿಡುವಳಿದಾರರಿಂದ ಸರಕಾರಕ್ಕೆ ಬರಬೇಕಾದ ಕಂದಾಯವನ್ನಲ್ಲದೇ ಅವರು ಬೇರೆ ಇನ್ನಾವುದೇ ರೀತಿಯಾದ ಆದಾಯವನ್ನು ಪಡೆಯುವಂತಿರಲಿಲ್ಲ. ಗ್ರಾಮಸ್ಥರು ಅಧಿಕಾರಿಗಳ ಬಗ್ಗೆ ದೂರು ಸಲ್ಲಿಸಿದರೆ ಅದನ್ನು ವಿಚಾರಿಸಲಾಗುತ್ತಿತ್ತು.[೪೪]

ಟಿಪ್ಪು ಗುತ್ತಿಗೆ ನೀಡುವ ಹಳೆಯ ಕೃಷಿ ಪದ್ಧತಿಯನ್ನು ಕೆಲವು ಸಂದರ್ಭಗಳಲ್ಲಿ ಅನುಸರಿಸಿದ್ದನು. ಈ ವೇಳೆಯಲ್ಲಿ ಸರಕಾರಿ ಅಧಿಕಾರಿಗಳು ತಮ್ಮ ಭೂ ಹಿಡುವಳಿಗಳನ್ನು ಸಾಗುವಳಿ ಮಾಡಲು ಗುತ್ತಿಗೆ ಕೊಡುತ್ತಿದ್ದರು. ಈ ವ್ಯವಸ್ಥೆಯು ಹೆಚ್ಚು ಪ್ರಚಲಿತವಾಗಿರಲಿಲ್ಲ. ಈ ವ್ಯವಸ್ಥೆಯ ಲೋಪದೋಷಗಳನ್ನು ಕಡಿಮೆ ಮಾಡಲು ಅವನು ಕೆಲವು ನಿರ್ಧಾರಗಳನ್ನು ತೆಗೆದುಕೊಂಡನು. ಮುಖ್ಯವಾಗಿ ಸರಕಾರಿ ಅಧಿಕಾರಿಗಳಿಗೆ ಸಾಗುವಳಿ ಹಕ್ಕನ್ನು ಕೊಟ್ಟಿರಲಿಲ್ಲ. ಹಾಗೆಯೇ ಒಬ್ಬ ವ್ಯಕ್ತಿಯ ಸ್ವಂತ ಭೂಮಿ ಒಂದು 'ಮೌಜ್'ಗಿಂತ ಹೆಚ್ಚಿಗೆ ಹೊಂದಿರಲು ಅವಕಾಶವಿರಲಿಲ್ಲ. ಈ ಭೂ ಹಿಡುವಳಿಯನ್ನು ಸಾಗುವಳಿ

ಮಾಡುವುದಕ್ಕಿಂತ ಮೊದಲು ಅಲ್ಲಿದ್ದ ಹಳೆಯ ಹಾಗೂ ಹೊಸ ನಿವಾಸಿಗಳ ವಾರ್ಷಿಕ ವರಮಾನದ ವರದಿಯನ್ನು ಸಲ್ಲಿಸಬೇಕಾಗಿತ್ತು. ಅದಕ್ಕನುಗುಣವಾಗಿ ಗುತ್ತಿಗೆಯನ್ನು ನಿಗದಿಪಡಿಸಲಾಯಿತು. ರೈತರು ಮತ್ತು ಕಂದಾಯ ಅಧಿಕಾರಿಗಳು ತಮ್ಮ ಕರ್ತವ್ಯದ ಪರಿಮಿತಿಯಲ್ಲಿಯೇ ಕಾರ್ಯನಿರ್ವಹಿಸಬೇಕಾಗಿತ್ತು. ಸುಧಾರಿತ ಸಾಗುವಳಿದಾರರಿಗೆ ಸರಕಾರದಿಂದ ಬೆಂಬಲವಿತ್ತು. ಉತ್ತಮ ಸಾಗುವಳಿದಾರರಾಗುವಂತೆ ಅವರಿಗೆ ಬೆಂಬಲ ನೀಡಲಾಗುತ್ತಿತ್ತು. ಸಾಗುವಳಿ ಪ್ರದೇಶವು ಬೀಳಾಗಿದ್ದರೆ ಉತ್ತಮ ಬೆಳೆ ಬೆಳೆಯುವವರೆಗೂ ಕಂದಾಯ ಸಂಗ್ರಹಿಸುತ್ತಿರಲಿಲ್ಲ. ಆ ಸಾಗುವಳಿ ಭೂಮಿಯ ನಾಲ್ಕನೆಯ ವರ್ಷದಿಂದ ಬರುವ ಬೆಳೆಯನ್ನು ಅನುಸರಿಸಿ ಕಂದಾಯ ಸಂಗ್ರಹಿಸಲಾಗುತ್ತಿತ್ತು.[೪೫]

ಟಿಪ್ಪುವಿನ ಆಡಳಿತದ ಸ್ವಲ್ಪ ಸಮಯದ ನಂತರವೇ ಚಿತ್ರದುರ್ಗ ಪ್ರದೇಶದಲ್ಲಿ ಪ್ರವಾಸ ಮಾಡಿದ ಬುಕಾನನ್ ಭೂಹಿಡುವಳಿ ವ್ಯವಸ್ಥೆ ಮತ್ತು ಕೃಷಿಗೆ ಸಂಬಂಧಿಸಿದ ಅಮೂಲ್ಯವಾದ ಮಾಹಿತಿಯನ್ನು ಸಂಗ್ರಹಿಸಿದ್ದಾನೆ. ಬುಕಾನನ್ ಚಿತ್ರದುರ್ಗ ಪ್ರದೇಶದಲ್ಲಿ ಹೆಚ್ಚಾಗಿ ಕಪ್ಪು ಭೂಮಿಯಿದೆ ಎಂದು ಗುರುತಿಸಿದ್ದಾನೆ. ಆದುದರಿಂದ ಇಲ್ಲಿ ಜೋಳ ಹಾಗೂ ನವಣೆಯನ್ನು ಭಾರಿ ಪ್ರಮಾಣದಲ್ಲಿ ಬೆಳೆಯುತ್ತಿದ್ದರು. ಇವುಗಳ ನಂತರ ಸಜ್ಜೆ ಮತ್ತು ಹತ್ತಿ ಮುಖ್ಯ ಬೆಳೆಗಳಾಗಿದ್ದವು. ಇಂತಹ ಕಪ್ಪು ಭೂಮಿಯೂ ಚಿತ್ರದುರ್ಗ ಪ್ರದೇಶದ ಪೂರ್ವ ಮೈದಾನದಲ್ಲಿ ಹೆಚ್ಚು ಪ್ರದೇಶವನ್ನು ಆಕ್ರಮಿಸಿತು. ಈ ಭಾಗದಲ್ಲಿ ಕಪ್ಪುಮಣ್ಣನ್ನು ಒಳಗೊಂಡ ಎರೆಭೂಮಿಯಿದೆ. ಚಿತ್ರದುರ್ಗ ಪ್ರದೇಶದಲ್ಲಿ ಬಹುತೇಕ ಎಲ್ಲಾ ಭಾಗದಲ್ಲಿಯೂ ಖುಷ್ಕಿ ಸಾಗುವಳಿಯನ್ನು ಹೊಂದಿತ್ತು. ಈ ಭೂಹಿಡುವಳಿಗಳ ವಿಸ್ತಾರವನ್ನು ಉಳುಮೆ ಮಾಡುವ ನೇಗಿಲುಗಳಿಂದ ಗುರುತಿಸಿದ್ದಾನೆ.[೪೬] ರೈತರು ಹೊಂದಿರುವ ಭೂಹಿಡುವಳಿಗಳಲ್ಲಿ ಒಂದು ತುಂಡು ಭೂಮಿಯನ್ನು ಕೃಷಿಗೊಳಪಡಿಸದೆ ಇದ್ದರೂ ರೆವಿನ್ಯೂ ಅಧಿಕಾರಿಗಳು ಪ್ರಶ್ನಿಸುತ್ತಿದ್ದರು. ಆ ಸಂದರ್ಭದಲ್ಲಿ ಭೂಹಿಡುವಳಿದಾರರು ಸಮರ್ಥನೆ ನೀಡಬೇಕಾಗಿತ್ತು.

ಭೂಹಿಡುವಳಿದಾರರು ಬಳಸುವ ಕಬ್ಬಿಣದ ನೇಗಿಲುಗಳು ಎರಡು ಎತ್ತುಗಳಿಂದ ಹದಿನಾರು ಎತ್ತುಗಳು ಎಳೆಯಬಹುದಾದ ದೊಡ್ಡ ನೇಗಿಲುಗಳಾಗಿದ್ದವು. ಇಂತಹ ನೇಗಿಲಿನ ಕಬ್ಬಿಣದ ಭಾಗಗಳು ಸುಮಾರು ೭೧/೪ ಪೌಂಡ್ ತೂಕದವು. ಈ ಪ್ರದೇಶದಲ್ಲಿದ್ದ ಮತ್ತೊಂದು ಭಾರಿ ನೇಗಿಲಿನ ಕಬ್ಬಿಣದ ಭಾಗವು ಮೇಲಿನದಕ್ಕಿಂತಲೂ ಅದರ ಎರಡರಷ್ಟು ತೂಕದಾಗಿತ್ತು. ನೇಗಿಲನ್ನು ಎಳೆಯಲು ಇಷ್ಟೊಂದು ಎತ್ತುಗಳನ್ನು ಬಳಸಲು ಇಲ್ಲಿನ ಕಪ್ಪು ಭೂಮಿಯೂ ಕಾರಣವಾಗಿತ್ತು. ಈ ಪ್ರದೇಶದಲ್ಲಿ ಜನರು ಹೆಚ್ಚು ದನಗಳನ್ನು ಸಾಕುತ್ತಿದ್ದರು. ಹಾಗೆಯೇ ಭೂಹಿಡುವಳಿಗಳ ವಿಸ್ತೀರ್ಣದ ಬಗ್ಗೆ ಬುಕಾನನ್

ವಿವರಿಸುತ್ತ ಈ ಪ್ರದೇಶದಲ್ಲಿ ಬಹುಸಂಖ್ಯಾತ ರೈತರು ಒಂದೇ ನೇಗಿಲನ್ನು ಹೊಂದಿದ್ದರು. ಮಧ್ಯಮ ಮತ್ತು ಶ್ರೀಮಂತ ರೈತರು ಸಾಮಾನ್ಯವಾಗಿ ನಾಲ್ಕು, ಐದು ಅಥವಾ ಆರು ನೇಗಿಲುಗಳನ್ನು ಹೊಂದಿದ್ದರು. ಇಂತಹ ಭೂಹಿಡುವಳಿದಾರರು ಸ್ಥಳೀಯವಾಗಿ ಶ್ರೀಮಂತರಾಗಿದ್ದರು. ಪ್ರತಿಯೊಂದು ನೇಗಿಲಿನಿಂದ ಒಬ್ಬ ವ್ಯಕ್ತಿ ಎರಡು ಎತ್ತುಗಳ ಸಹಾಯದಿಂದ ಎರಡು 'ಮಾರು' ಪ್ರದೇಶವನ್ನು ಅಥವಾ ಸುಮಾರು ೧೭ ಎಕರೆ ಭೂ ಪ್ರದೇಶವನ್ನು ಕೃಷಿಗೊಳಪಡಿಸುತ್ತಿದ್ದರು ಎಂದಿದ್ದಾನೆ. ಇಂತಹ ರೈತರು ಬಾಡಿಗೆ ಕೂಲಿದಾರರನ್ನು ಬಿತ್ತನೆ ಹಾಗೂ ಸುಗ್ಗಿಯ ಕಾಲದಲ್ಲಿ ಹೊಂದಿರುತ್ತಿದ್ದರು. ಬುಕಾನನ್ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಪ್ರವಾಸ ಕೈಗೊಂಡು ಈ ಪ್ರದೇಶದಲ್ಲಿ ಬಿಟ್ಟಿ ದುಡಿಯುವವರು ಅಥವಾ ಗುಲಾಮಗಿರಿಯಾಗಿ ದುಡಿಯುವವರು ಇರಲಿಲ್ಲ, ಆದರೆ ಕೃಷಿ ಕೆಲಸವನ್ನು ಕೂಲಿಯಂತೆ ಮಾಡುತ್ತಿದ್ದರು ಎಂದಿದ್ದಾನೆ.[೪೭]

ಇಲ್ಲಿ ಭೂಹಿಡುವಳಿಯನ್ನು **ಮಾರು** ಎಂಬ ಪದದ ಮೂಲಕ ಸ್ಥಳೀಯರು ಕರೆಯುತ್ತಿದ್ದರು. ಭೂಹಿಡುವಳಿಯ ವಿಸ್ತಾರವನ್ನು ಗುರುತಿಸಲು ಸಾಮಾನ್ಯವಾಗಿ ಮಾರು ಪದದ ಬಳಕೆ ಇತ್ತು. ಒಂದು ಮಾರುಭೂಮಿಯಲ್ಲಿ ೨೧ ೧/೨ ಗದ್ಯಾಣ ಜೋಳವನ್ನು ಬಿತ್ತುತ್ತಿದ್ದರು. ಮತ್ತೊಂದು ಪದ್ಧತಿಯ ಪ್ರಕಾರ ಮಾರು ಭೂಮಿ ಅಳತೆಯನ್ನು ೧೨೦ ಅಕ್ಕಡಿಗಳಿಂದ ಗುರುತಿಸುತ್ತಿದ್ದರು. ಈ ವ್ಯವಸ್ಥೆ ಚಿತ್ರದುರ್ಗ ಪ್ರದೇಶದ ಹರಿಹರದ ಸುತ್ತಮುತ್ತ ಇದ್ದಿತು. ಒಂದು ಅಕ್ಕಡಿಯ ಅಂತರ ನಾಲ್ಕು ಸಾಲುಗಳ ನಡುವಿನ ಅಂತರವಾಗಿತ್ತು. ಚಿತ್ರದುರ್ಗ ಪ್ರದೇಶದ ಕೃಷಿ ಭೂಮಿಯನ್ನು ಮೂರು ವಿಧವಾಗಿ ವಿಂಗಡಿಸಲಾಗಿತ್ತು. ಮೊದಲನೆಯ ಕೃಷಿ ಭೂಮಿಯನ್ನು ಎರೆ ಎಂದು ಕರೆಯುತ್ತಿದ್ದರು. ಎರೆ ಎಂದರೆ ಕಪ್ಪು ಪ್ರದೇಶವನ್ನೊಳಗೊಂಡ ಫಲವತ್ತಾದ ಭೂಮಿ. ಈ ಭೂ ಪ್ರದೇಶದ ಅಂದಿನ ಸ್ಥಳೀಯ ಬೆಲೆ ಒಂದು ಪಗೋಡಕ್ಕೆ ಒಂದು 'ಮಾರು' ಭೂಮಿಯಾಗಿತ್ತು.[೪೮] ಅಥವಾ ಒಂದು ಪೆನ್ನಿಗೆ ಒಂದು ಎಕರೆಯಾಗಿತ್ತು. ಎರಡನೇ ಬಗೆಯ ಭೂಮಿಯನ್ನು **ಕೆಂಗಲು** ಅಥವಾ **ಕೆಂಪು** ಭೂಮಿ ಎಂದು ಕರೆಯುತ್ತಿದ್ದರು. ಇದರ ಅಂದಿನ ಒಂದು ಮಾರು ಭೂಮಿಯ ಬೆಲೆ ೩/೪ ಪಗೋಡವಾಗಿತ್ತು ಅಥವಾ ಒಂದು ಎಕರೆಗೆ ೮೧/೨ ಪೆನ್ಸ್ ಆಗಿತ್ತು. ಮೂರನೇ ವಿಧದ ಭೂಮಿಯನ್ನು **'ಕಲ್ಮರಡಿ'** ಅಥವಾ ಸಣ್ಣಕಲ್ಲುಗಳಿರುವ ಭೂಮಿಯಾಗಿತ್ತು. ಈ ಭೂಮಿಯ ಅಂದಿನ ಬೆಲೆ ಅರ್ಧ ಪಗೋಡಕ್ಕೆ ಒಂದು ಮಾರು ಭೂಮಿಯಾಗಿತ್ತು. ಅಥವಾ ಐದು ಮೂಕ್ಕಾಲು ಪೆನ್ನಿಗೆ ಒಂದು ಎಕರೆ ಭೂಮಿಯಾಗಿತ್ತು. ಈ ಮೇಲಿನ ವಿವರಣೆಯನ್ನು ಬುಕಾನನ್ ಸ್ಥಳೀಯ ಗೇಣಿದಾರರಿಂದಲೇ ಪಡೆದಿದ್ದೇನೆ ಎಂದು ವಿವರಿಸಿದ್ದಾನೆ. ಅವನು ಭೂ ಹಿಡುವಳಿಗಳ ಅಧ್ಯಯನ ಮಾಡುತ್ತಿದ್ದಾಗ ಅವನ ಜೊತೆಯಲ್ಲಿ ರೈತರು,

ಅಮಲ್ದಾರರು ಮತ್ತು ಶಾನುಭೋಗರು ಇರುತ್ತಿದ್ದರು ಎಂಬುದನ್ನು ತಿಳಿಸುತ್ತಾನೆ. ಈ ತೆರನಾದ ಭೂಮಿಯ ವರ್ಗೀಕರಣದಿಂದ ಅವುಗಳ ಮೇಲೆ ತೆರಿಗೆ ವಿಧಿಸುವುದು ಸುಲಭವಾಗಿತ್ತು.[೪೯]

ಈ ಪ್ರದೇಶದಲ್ಲಿ ಮಳೆ ಬಂದ ಮೇಲೆ ಮಣ್ಣು ಜಿಗುಟಾಗಿ ಗಟ್ಟಿಯಾಗಿರುತ್ತಿತ್ತು. ಇಲ್ಲಿ ಗೊಬ್ಬರವಿಲ್ಲದೆ ಜೋಳ ಅಥವಾ ನವಣೆಯ ಒಂದೊಂದು ಬೆಳೆ ತೆಗೆಯಬಹುದಾಗಿತ್ತು. ಬುಕಾನನ್ ಪ್ರಕಾರ ಈ ಪ್ರದೇಶದಲ್ಲಿ ಭತ್ತ ಬೆಳೆಯುವ ಭೂಮಿಯು ಕಡಿಮೆಯಿತ್ತು. ಈ ಪ್ರದೇಶದ ದಕ್ಷಿಣ ಭಾಗದಲ್ಲಿ ಖುಷ್ಕಿ ಬೆಳೆಯನ್ನು ಬೆಳೆಯಲಾಗುತ್ತಿತ್ತು. ಪೂರ್ವದಲ್ಲಿ ತರಿ ಹಾಗೂ ಖುಷ್ಕಿ ಭೂಮಿಯಿತ್ತು. ಈ ಭೂಮಿಯಲ್ಲಿ ಗೋಧಿ ಹಾಗೂ ಕಬ್ಬು ಬೆಳೆಯುವ ಪ್ರದೇಶಗಳಿದ್ದವು. ನವಣೆ ಬೆಳೆಯುವ ಭೂಮಿಯಲ್ಲಿ ಅದರ ಮಧ್ಯದಲ್ಲಿ ಅಕ್ಕಡಿಯಾಗಿ ಹತ್ತಿ ಬೆಳೆಯುತ್ತಿದ್ದರು. ದೊಡ್ಡ ನೇಗಿಲುಗಳಿಂದ ಉಳುಮೆ ಮಾಡಿದ ಮಾರನೇ ವರುಷ ಬೆಳೆ ತುಂಬಾ ಚೆನ್ನಾಗಿ ಬರುತ್ತಿತ್ತು ಎಂದಿದ್ದಾನೆ. ಈ ಪ್ರದೇಶದ ಸಾಗುವಳಿಯಾದ ಭೂಮಿಯ ಒಡೆತನವನ್ನು ಎರಡು ರೀತಿಯಲ್ಲಿ ಗುರುತಿಸಿದ್ದಾನೆ. ಅವುಗಳನ್ನು ಇನಾಂ ಭೂಮಿ ಮತ್ತು ಸಾಮಾನ್ಯ ಭೂಮಿ ಎಂಬುದಾಗಿ ಕರೆಯಲಾಗಿತ್ತು. ಸಾಮಾನ್ಯ ಭೂಮಿಯೂ ಮಾರಾಟ ಮಾಡಬಹುದಾದ ಹಕ್ಕನ್ನು ಪಡೆದಿದ್ದಿತ್ತು. ಇನಾಂ ಭೂಮಿಯನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ. ಅದರ ಅನುಭವದಾರರು ಯಾರೂ ಇಲ್ಲದಿದ್ದರೆ ಆ ಭೂಮಿಯು ಸರಕಾರಕ್ಕೆ ಸೇರುತ್ತಿತ್ತು.

ಟಿಪ್ಪುಕಾಲದ ಕೃಷಿ ಉತ್ಪಾದನೆಯ ಹಂಚಿಕೆ ವಿಧಾನ

ಬುಕಾನನ್ ಟಿಪ್ಪುವಿನ ಕಾಲದಲ್ಲಿ ಕೃಷಿ ಉತ್ಪನ್ನ ವಿತರಣೆಯ ಕುರಿತು ವಿವರವಾಗಿ ನಿರೂಪಣೆ ನೀಡಿದ್ದಾನೆ. ಸುಗ್ಗಿಯ ವೇಳೆಯಲ್ಲಿ ಸಾಮಾನ್ಯವಾಗಿ ಧಾನ್ಯವನ್ನು ಒಂದು ಖಂಡುಗ ಅಥವಾ ೧೯೨೦ ಸೇರುಗಳ ಒಂದು ರಾಶಿಯನ್ನು ಸುಮಾರಾಗಿ ಹೀಗೆ ಹಂಚಿಕೊಳ್ಳಲಾಗುತ್ತಿತ್ತು ಎನ್ನುವುದನ್ನು ಕೆಳಗಿನಂತೆ ತಿಳಿಸಿದ್ದಾನೆ.[೫೦]

೧.	ಸರಕಾರದ ಮಾಪನಕ್ಕೆ	೧೯೨ ಸೇರುಗಳು
೨.	ಅಮೀಲ್‌ರ ಕಚೇರಿ (ಎಣ್ಣೆ ಮತ್ತು ಸಾದಿಲ್ವಾರು ವೆಚ್ಚ)	೨೪ ಸೇರುಗಳು
೩.	ಬ್ರಾಹ್ಮಣರು, ಫಕೀರರು, ಭಿಕ್ಷುಕರು ಇತ್ಯಾದಿ	೨೪ ಸೇರುಗಳು
೪.	ಕಾವಲುಗಾರ	೬ ಸೇರುಗಳು
೫.	ಅಳತೆ ಮಾಡುವವನು	೬ ಸೇರುಗಳು
೬.	ದೇವಾಲಯದ ಪೂಜಾರಿ	೨೪ ಸೇರುಗಳು

ಗ್ರಾಮದ ಅಧಿಕಾರಿಗಳು

೭.	ಪಟೇಲ	೨೪ ಸೇರುಗಳು
೮.	ಶ್ಯಾನುಭೋಗ	೨೪ ಸೇರುಗಳು
೯.	ತಳವಾರ	೨೪ ಸೇರುಗಳು
೧೦.	ನೀರಗಂಟಿ	೨೪ ಸೇರುಗಳು
೧೧.	ಕ್ಷೌರಿಕ	೧೨ ಸೇರುಗಳು
೧೨.	ಕಮ್ಮಾರ	೧೨ ಸೇರುಗಳು
೧೩.	ಸರಕಾರದ ಪಾಲು	೭೬೮ ಸೇರುಗಳು
೧೪.	ರೈತನ ಪಾಲು	೭೬೮ ಸೇರುಗಳು
	ಒಟ್ಟು	**೧೯೨೦ ಸೇರುಗಳು**

ಈ ವಿಭಾಗ ಕ್ರಮವನ್ನು ಗಮನಿಸಿದರೆ ರೈತನ ಶ್ರಮಕ್ಕೆ ಪ್ರತಿಯಾಗಿ ಉತ್ಪನ್ನದ ಅರ್ಧಕ್ಕಿಂತಲೂ ಕಡಿಮೆ ದೊರೆಯುತ್ತಿತ್ತು. ಸಮಾಜದ ಎಲ್ಲಾ ಸಮುದಾಯಕ್ಕೆ ಆಹಾರ ಒದಗಿಸುವ ಹೊಣೆ ರೈತರದ್ದಾಗಿತ್ತು. ಹಾಗೂ ರೈತರನ್ನು ಇತರ ಸಮುದಾಯಗಳು ಅವಲಂಬಿತರಾಗಿ ಬದುಕುತ್ತಿದ್ದರು. ಕೃಷಿ ವ್ಯವಸ್ಥೆಯ ಬೆನ್ನೆಲುಬಾದ ರೈತರ ಪಾತ್ರವು ಬಹುಮಹತ್ವದ್ದಾಗಿತ್ತು ಎಂಬುದನ್ನು ಬುಕಾನನ್ ಗಮನಿಸಿದ್ದಾನೆ.

ಬುಕಾನನ್ ಟಿಪ್ಪು ಕಾಲದ ಕಂದಾಯ ವ್ಯವಸ್ಥೆಯನ್ನು ಕುರಿತು ಬರೆಯುತ್ತ ಭೂಹಿಡುವಳಿದಾರರ ಮೇಲೆ ಟಿಪ್ಪು ಬಹಳ ಕಡಿಮೆ ಕಂದಾಯವನ್ನು ಏರಿದ್ದನು. ಆದರೂ ಅವನ ಅಧಿಕಾರಿಗಳು ಅತ್ಯಂತ ಬಲವಂತದಿಂದ ಕಂದಾಯ ವಸೂಲಿ ಮಾಡುತ್ತಿದ್ದರೆಂದು ದೂರಿದ್ದಾನೆ. ಟಿಪ್ಪು ೧೭೯೨ರ ಮೂರನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಲಾರ್ಡ್‌ಕಾರನ್‌ವಾಲೀಸನಿಗೆ ಸೋತು ಶ್ರೀರಂಗಪಟ್ಟಣದ ಒಪ್ಪಂದದ ಪ್ರಕಾರ ಮೂರು ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇದಕ್ಕೋಸ್ಕರ ಟಿಪ್ಪು ತನ್ನ ಅಧಿಕಾರಿಗಳಿಗೆ ಕಂದಾಯ ಸಂಗ್ರಹಿಸುವಂತೆ ಆಜ್ಞೆ ಮಾಡುತ್ತಾನೆ. ಈ ವೇಳೆಯನ್ನು ಅವನ ಅಧಿಕಾರಿಗಳು ತಮಗೋಸ್ಕರ ದುರುಪಯೋಗಪಡಿಸಿಕೊಳ್ಳುತ್ತಾರೆ. ಅವನ ಅಧಿಕಾರಿಗಳು ಲಂಚ ಪಡೆಯುವುದರಲ್ಲಿ ಪ್ರಜೆಗಳನ್ನು ಪೀಡಿಸುತ್ತಿದ್ದರೆಂಬ ವಿವರ ನೀಡಿದ್ದಾನೆ. ಟಿಪ್ಪು ಇಂತಹ ಅಧಿಕಾರಿಗಳು ಯಾವುದೇ ರೀತಿಯಾದ ಶಿಕ್ಷೆ ನೀಡುತ್ತಿರಲಿಲ್ಲ ಎಂದಿದ್ದಾನೆ. ಈ ಮೇಲಿನ ವಿಚಾರವನ್ನು ತಾನು ಸ್ಥಳೀಯರಿಂದಲೇ ಪಡೆದಿದ್ದಾಗಿ ಸಮರ್ಥಿಸಿಕೊಂಡಿದ್ದಾನೆ.[೫೧]

ಥಾಮಸ್ ಮನ್ರೋ ಟಿಪ್ಪು ಕಾಲದ ಕಂದಾಯ ವ್ಯವಸ್ಥೆಯನ್ನು ಕುರಿತು ಬರೆಯುತ್ತಾ ಶೇ. ೩೦ರಷ್ಟು ಭೂಕಂದಾಯ ದುರುಪಯೋಗವಾಗುತ್ತಿತ್ತು ಎಂದಿದ್ದಾನೆ. ಟಿಪ್ಪುವಿನ ಅಧಿಕಾರಿಗಳಾದ ಅಸಫ್, ಖಿಲ್ಲೇದಾರ್, ಅಮೀಲರು ಇನ್ನು ಇತರ ಅಧಿಕ ಸಂಖ್ಯೆಯ ಕಂದಾಯ ಅಧಿಕಾರಿಗಳ ಗುಂಪು ತಮ್ಮಲ್ಲೇ ಹಂಚಿಕೊಳ್ಳುತ್ತಿದ್ದರು. ಆದರೂ ಟಿಪ್ಪುವು ಪ್ರತಿಯೊಬ್ಬ ಅಧಿಕಾರಿಯನ್ನು ಪರಿಶೀಲಿಸುತ್ತಿದ್ದನು. ಅವನ ಯೋಜನೆಯಂತೆ ವಿಶಾಲವಾದ ಜಿಲ್ಲೆಗಳು ಅಮೀಲನ ಅಧೀನದಲ್ಲಿದ್ದುದರಿಂದ ರಾಜ್ಯದಲ್ಲಿ ಏನು ನಡೆಯುತ್ತದೆ ಎಂಬುದು ತಿಳಿಯುತ್ತಿರಲಿಲ್ಲ. ಪಶುಸಂಗೋಪಕರು, ಸಾರ್ವಜನಿಕ ಸೇವಕರು, ಸಣ್ಣ ರೈತರು ಕಂದಾಯ ಸಲ್ಲಿಸುತ್ತಿದ್ದರು. ಆದರೆ ಗೌಡರು, ಶ್ರೀಮಂತ ಭೂಮಾಲೀಕರು ಹಾಗೂ ಅವರ ಸ್ನೇಹಿತರು ಕಂದಾಯವನ್ನು ಸಲ್ಲಿಸುತ್ತಿರಲಿಲ್ಲ. ಜಿಲ್ಲೆಯ ಅಧಿಕಾರಿಗಳಾದ ಅಮೀಲರು ಶ್ರೀಮಂತ ಮಧ್ಯವರ್ತಿ ಭೂಹಿಡುವಳಿದಾರರಿಂದ ಬಾಡಿಗೆ ಪಡೆಯುವುದರಲ್ಲೇ ಕಾಲ ಕಳೆಯುತ್ತಿದ್ದರು. ಹೀಗಾಗಿ ಹಳ್ಳಿಗಳ ಆಡಳಿತವನ್ನು ಸರಿಯಾಗಿ ನಿರ್ವಹಿಸುತ್ತಿರಲಿಲ್ಲ ಎಂದು ಟೀಕಿಸಿದ್ದಾನೆ.[೫೨] ಕಂದಾಯದ ಬಗ್ಗೆ ಬರೆಯುತ್ತ ೧೭೯೨ರ ಪರಿಶಿಷ್ಟದನ್ವಯ ಲೆಕ್ಕಪತ್ರಗಳನ್ನು ಸಿದ್ಧಗೊಳಿಸಲು ಅವಕಾಶವಿದ್ದಾಗಿಯೂ ೧೭೯೯ರವರೆಗೆ ಆ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯನ್ನು ನೇಮಿಸಿರಲಿಲ್ಲ. ಅವರಿಗೆ ಲೆಕ್ಕಪತ್ರಗಳನ್ನು ಸಿದ್ಧಗೊಳಿಸುವುದರ ಬಗ್ಗೆ ಜ್ಞಾನವಿದ್ದರೂ ಅದರ ವ್ಯಾಪ್ತಿಯ ಬಗ್ಗೆ ಅರಿವಿರಲಿಲ್ಲ. ಹಾಗಾಗಿ ಈ ಅಧಿಕಾರಿಗಳು ತಮ್ಮ ಪಾಲುದಾರಿಕೆಯಲ್ಲಿಯೇ ಕಾಲಕಳೆಯುತ್ತಿದ್ದರೆಂದು ದೂರಿದ್ದಾನೆ.[೫೩]

ಟಿಪ್ಪು ಕಾಲದ ಭೂಹಿಡುವಳಿಗಳನ್ನು ಅಧ್ಯಯನ ಮಾಡಿದ ಷೇಕ್ ಅಲಿ ಅವರು ಮೇಲಿನ ಎರಡು ವಾದಗಳನ್ನು ಅಲ್ಲಗಳೆದು ಟಿಪ್ಪು ಕಾಲದ ಭೂ ಹಿಡುವಳಿ ವ್ಯವಸ್ಥೆಯನ್ನು ಕುರಿತಂತೆ ಕೆಲವು ವಿವರಗಳನ್ನು ಹೀಗೆ ನೀಡಿದ್ದಾರೆ. ಟಿಪ್ಪು ಕಾಲದಲ್ಲಿ ಜಿಲ್ಲಾಧಿಕಾರಿಗಳಾದ್ದ ಅಮೀಲರು ಪ್ರತಿಯೊಂದು ಹಳ್ಳಿಯ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಸಮೀಕ್ಷೆ ಮಾಡುತ್ತಿದ್ದರು. ಆ ಸಮೀಕ್ಷೆ ಮಾಡುವ ವಿಧಾನ ಈ ಕೆಳಗಿನಂತಿತ್ತು. "ನಿಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಜಾತಿಗಳ ವಿವರವಾದ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಗ್ರಾಮದ ಹೆಸರು, ನೇಗಿಲುಗಳ ಸಂಖ್ಯೆ, ಬಿತ್ತಿದ ಬೀಜದ ಗುಣಮಟ್ಟ, ಸಾಗುವಳಿಯಾದ ಭೂಮಿಯ ಗುಣಮಟ್ಟ, ಕೃಷಿ ಕೆಲಸಗಾರರು ಮತ್ತು ಅವರ ಕುಟುಂಬದ ಸದಸ್ಯರ ಸಂಖ್ಯೆ ಅವರ ವಿವಿಧ ಜಾತಿಗಳು ಮತ್ತು ವೃತ್ತಿಗಳು ಈ ಎಲ್ಲಾ ವಿವರಗಳು ಅದರಲ್ಲಿ ಇರತಕ್ಕದ್ದು. ಈ ವರದಿಯನ್ನು ಸಿದ್ಧಪಡಿಸುವಾಗ ರೈತರಿಗೆ ಅದು ಯಾವುದೇ ರೀತಿಯಲ್ಲಿ

ಕಳವಳವನ್ನು ಉಂಟುಮಾಡದಂತೆ ಜಾಗರೂಕತೆ ವಹಿಸತಕ್ಕದ್ದು. ಪ್ರತಿವರ್ಷವು ಬೇಸಾಯ ಮತ್ತು ಜನಸಂಖ್ಯೆಯಲ್ಲಿ ಆಗುವ ಏರಿಳಿತಗಳನ್ನು ಈ ಕೆಳಕಂಡ ವಿಧಾನದಿಂದ ದಾಖಲುಪಡಿಸಬೇಕು. ಗ್ರಾಮದ ಶ್ಯಾನುಭೋಗರು ವರದಿಯನ್ನು ತಯಾರಿಸಿ ಸಿಂಪ್‌ಗೆ ಕಳುಹಿಸಬೇಕು ಶ್ಯಾನಭೋಗರಿಂದ ಸಿಂಪ್‌ಗೆ ಬಂದು ಪೂರ್ಣರೂಪ ಪಡೆದ ವರದಿಯನ್ನು ಜಿಲ್ಲೆಯ ಅಮೀಲ್‌ಗೆ ಕಳುಹಿಸಬೇಕು. ಅವನು ವರದಿಗಳನ್ನು ಸಿದ್ಧಪಡಿಸಿ ತನ್ನ ಕಚೇರಿಯಲ್ಲಿಡಬೇಕು. ಅಲ್ಲಿಂದ ಮುಂದೆ ಅದನ್ನು ಹುಜೂರ್ ಅವರ ಸನ್ನಿಧಾನಕ್ಕೆ ಒಪ್ಪಿಸಬೇಕು. ಹುಜೂರ್ ಸನ್ನಿಧಾನದಲ್ಲಿ ಬೇಹುಬಾ ತಿಂಗಳನ್ನು ಈ ವರದಿಯ ಪರಿಶೀಲನೆಗೆ ನಿಗದಿಪಡಿಸುವುದರಿಂದ ಅವುಗಳನ್ನು ರಂಜಾನ್ ತಿಂಗಳಲ್ಲೇ ಕಚೇರಿಗೆ ಒಪ್ಪಿಸಬೇಕು. ಮನೆಗಳ ಮತ್ತು ಅಲ್ಲಿನ ನಿವಾಸಿಗಳ ಲೆಕ್ಕ ತೆಗೆದುಕೊಳ್ಳಲು ಹೋದಾಗಲೇ ನಾವು ಏತಕ್ಕಾಗಿ ಈ ಕೆಲಸ ಮಾಡುತ್ತಿದ್ದೇವೆ ಎಂಬುದನ್ನು ಗ್ರಾಮಸ್ಥರಿಗೆ ವಿವರಿಸಿ ಹೇಳಬೇಕು. ಯಾರ ವೆಚ್ಚವು ವರಮಾನಕ್ಕಿಂತ ಹೆಚ್ಚಾಗಿದೆ ಎಂಬುದನ್ನು ಕಂಡುಹಿಡಿದು ಅವರಿಗೆ ತಕ್ಕವಿ ಸಾಲವನ್ನು ನೀಡುವ ಉದ್ದೇಶವಿದೆ ಎಂದು ತಿಳಿಸಬೇಕು. ತಕ್ಕವಿ ಸಾಲವೆಂದರೆ ಬಡತನದ ಹಂಚಿನಲ್ಲಿರುವ ರೈತರಿಗೆ ಸಾಲ ನೀಡುವ ವ್ಯವಸ್ಥೆಯಾಗಿತ್ತು. ಈ ಕ್ರಮದಲ್ಲಿ ನೀವು ಸರ್ವೇಕ್ಷಣವನ್ನು ಕೈಗೊಳ್ಳತಕ್ಕದ್ದು" ಟಿಪ್ಪುವು ವರದಿಗಾಗಿ ಸಂಗ್ರಹಿಸಿದ ಅತಿ ಸೂಕ್ಷ್ಮ ವಿವರದಲ್ಲಿ ನೇಗಿಲುಗಳ ಸಂಖ್ಯೆ, ಬಿತ್ತಿದ ಬೀಜದ ಪ್ರಮಾಣ, ಶ್ರಮಜೀವಿಗಳ ಬಲಾಬಲ, ಅವರ ಜಾತಿ ಮತ್ತು ವೃತ್ತಿಗಳಿಗನುಗುಣವಾಗಿ ಟಿಪ್ಪುವಿಗೆ ತನ್ನ ಪ್ರಜೆಗಳ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಚಿತ್ರಣವನ್ನು ನೀಡುತ್ತಿದ್ದವು. ಇದರಿಂದ ಅವನಿಗೆ ತನ್ನ ಪ್ರಜೆಗಳೆಲ್ಲರನ್ನು ಒಂದೇ ಬೃಹತ್ ಕುಟುಂಬದ ಸದಸ್ಯರೆಂಬಂತೆ ಪರಿಗಣಿಸಿದ್ದನೆಂಬುದು ಷೇಕ್ ಅಲಿ ಅವರ ಅಭಿಪ್ರಾಯವಾಗಿದೆ."[೩೪]

'ಮೇಕಿಂಗ್ ಹಿಸ್ಟರಿ'ಯಲ್ಲಿ ಸಾಕಿಯವರು ಟಿಪ್ಪುವಿನ ಕಾಲದಲ್ಲಿ ಕರ್ನಾಟಕದಲ್ಲಿ ಆಧಾರವಾಗಿದ್ದ ಭೂಮಿಯ ಒಡೆತನ ಊಳಿಗಮಾನ್ಯ ವರ್ಗಗಳ ಸಂಪೂರ್ಣ ಏಕಸ್ವಾಮ್ಯ ಮುರಿಯಿತು ಎಂದು ಅಭಿಪ್ರಾಯಪಟ್ಟಿದ್ದಾರೆ. ಅವರು ಆ ಕಾಲದ ಭೂಹಿಡುವಳಿಗಳ ಕುರಿತು ವಿಶ್ಲೇಷಿಸಿದ ವಿವರಗಳು ಹೀಗಿವೆ. "ಭೂಮಾಲೀಕರ ಬದಲಿಗೆ ಸಾಗುವಳಿ ಮಾಡುವ ರೈತರೇ ಭೂಹಿಡುವಳಿಗಳನ್ನು ಕೃಷಿ ಮಾಡುವ ವ್ಯವಸ್ಥೆ ಹುಟ್ಟಿಕೊಂಡಿತು. ಇದರಿಂದ ಕೃಷಿ ಸರಕು ಆರ್ಥಿಕತೆ ತೀವ್ರಗತಿ ಪಡೆದುಕೊಂಡಿತು. ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಭೂಮಿಯನ್ನು ತಮ್ಮ ಹೆಸರಿನಲ್ಲಿ ರೈತರು ಪಡೆದುಕೊಂಡರು. ಅವರು ಬೇಕಾದವರಿಗೆ ಭೂಮಿಯನ್ನು ಹಸ್ತಾಂತರ ಮಾಡಬಹುದಿತ್ತು. ಟಿಪ್ಪುವಿನ ಕಾನೂನಿನಂತೆ

ಆ ಭೂಮಿಯಿಂದ ಯಾವ ರೈತರನ್ನು ಸ್ಥಳಾಂತರಿಸುವಂತಿಲ್ಲ. ಹೀಗಾಗಿ ಸಾಗುವಳಿ ಮಾಡುವವನೇ ಭೂ ಒಡೆಯನಾದನು. ಇದರಿಂದ ಪ್ರಬಲ ಭೂಮಾಲೀಕರು ಕಡಿಮೆಯಾದರು. ಈ ಬಗೆಯ ಊಳಿಗಮಾನ್ಯ ಪದ್ಧತಿಯು ಖಾಸಗಿ ಆಸ್ತಿಯ ಸ್ವರೂಪಕ್ಕಿಂತ ಸಂಪೂರ್ಣ ಭಿನ್ನವಾಗಿತ್ತು. ಇದು ಕೃಷಿಯಲ್ಲಿ ಊಳಿಗಮಾನ್ಯ ಸಂಬಂಧಗಳು ಅರೆ ಊಳಿಗಮಾನ್ಯ ಸಂಬಂಧಗಳಾಗಿ ಪರಿವರ್ತನೆಗೊಳ್ಳು ತ್ತಿದ್ದುದನ್ನು ಸೂಚಿಸುತ್ತದೆ." ಸಾಕಿಯವರು ಬಹಳ ದೀರ್ಘ ಹಾಗೂ ಸಮಗ್ರ ಅಧ್ಯಯನದಿಂದ ಸ್ಪಷ್ಟಪಡಿಸಿರುವಂತೆ ಈ ಬಗೆಯ ಹೊಸ ಆಸ್ತಿ ಸಂಬಂಧಗಳು ಕೃಷಿಯಲ್ಲಿ ಹೊಸ ಉತ್ಪಾದನಾ ಸಂಬಂಧಗಳಿಗೆ ದಾರಿ ಮಾಡಿಕೊಟ್ಟವು. ಇದರಿಂದಾಗಿ ಕೃಷಿ ರಂಗದಲ್ಲಿ ಊಳಿಗಮಾನ್ಯ ವ್ಯವಸ್ಥೆಗೆ ಹೊರತಾದ ಹೊಸ ವರ್ಗಗಳು ಹುಟ್ಟಿಕೊಂಡವು. ಜೀತಗಾರ ಪದ್ಧತಿ ಕ್ರಮೇಣ ಬದಲಾಗುತ್ತಾ ವಾರದ ಅಥವಾ ದಿನಕೂಲಿಯ ಮೇಲೆ ದುಡಿಯುವ ಕೃಷಿ ಕಾರ್ಮಿಕ ವರ್ಗ ಅಸ್ತಿತ್ವಕ್ಕೆ ಬಂದಿತು. ಇದರೊಡನೆ ಜೀತಗಾರರನ್ನು ತಿಂಗಳ ಅಥವಾ ವಾರ್ಷಿಕ ಲೆಕ್ಕದಲ್ಲಿ ಇಟ್ಟುಕೊಳ್ಳುವ ವ್ಯವಸ್ಥೆ ಬಂದಿತು. ಇದು ಜೀವನಪರ್ಯಂತ ಭೂಮಾಲೀಕರ ಸೇವೆಯಲ್ಲಿ ಜೀವನ ನಡೆಸಬೇಕಾಗಿದ್ದ ಜೀತಗಾರರ ಬದುಕಿಗೆ ಒಂದಿಷ್ಟು ಬಿಡುಗಡೆಯನ್ನು ತಂದುಕೊಟ್ಟಿತು. ಸಾಕಿಯು ಹೇಳುವಂತೆ ಹಳ್ಳಿಗಳಲ್ಲಿ ರಾಜಪ್ರಭುತ್ವದ ಪರವಾಗಿ ಕೊನೆಯ ಕೊಂಡಿಯಾಗಿದ್ದ ಗ್ರಾಮದ ಪಟೇಲರು ಮತ್ತು ಶ್ಯಾನಭೋಗರು. ಇದೊಂದು ವಂಶಾಪಾರಂಪರ್ಯ ಅಧಿಕಾರ ವ್ಯವಸ್ಥೆಯಾಗಿತ್ತು. ಈ ವ್ಯವಸ್ಥೆಯು ಉಳ್ಳವರಿಗೆ ಮತ್ತು ಮೇಲ್ಜಾತಿಗಳಿಗೆ ದೊರಕುತ್ತಿತ್ತು. ಟಿಪ್ಪು ಜಾರಿಗೆ ತಂದ ಕಾಯಿದೆಗಳಿಂದಾಗಿ ಪಟೇಲರು ಮತ್ತು ಶ್ಯಾನುಭೋಗರಲ್ಲಿ ಯಾರು ಅರ್ಹರಾಗಿಲ್ಲವೋ ಅವರನ್ನು ತೆಗೆದು ಹಾಕಿ ಆ ಸ್ಥಾನಕ್ಕೆ ರೈತರಿಂದಲೇ ಸಮರ್ಥರಾದವರನ್ನು ನೇಮಕ ಮಾಡಲಾಗುತ್ತಿತ್ತು. ಹಳ್ಳಿಯಲ್ಲಿದ್ದ ಶ್ಯಾನುಭೋಗರಿಗೆ ಕರಣಿಕರಂತೆ ವೇತನವನ್ನು ಕೊಡಲು ಪ್ರಾರಂಭಿಸಿದನು. ಒಂದು ವೇಳೆ ಶ್ಯಾನಭೋಗರು ತಮ್ಮ ವೇತನದ ಬದಲಿಗೆ ಸರಿಸಮಾನಾದ ಭೂಮಿ ಕೇಳಿದರೆ ಅವರಿಗೆ ಉಳುಮೆ ಮಾಡಿರದ ಬೆದ್ದಲು ಭೂಮಿ ನೀಡುತ್ತಿದ್ದನು.[೨೫]

ಈ ಮೇಲಿನ ಅಧ್ಯಯನದಿಂದ ಟಿಪ್ಪುಸುಲ್ತಾನ್ ತನ್ನ ಆಡಳಿತಕ್ಕೆ ಸೇರಿದ ಎಲ್ಲಾ ಪ್ರದೇಶದಲ್ಲಿ ಒಂದೇ ರೀತಿಯಾದ ಭೂಹಿಡುವಳಿ ವ್ಯವಸ್ಥೆಯನ್ನು ಜಾರಿಗೆ ತಂದಿದ್ದನು. ಭೂಹಿಡುವಳಿಯ ಗುಣಮಟ್ಟಕ್ಕನುಗುಣವಾಗಿ ಕಂದಾಯ ವಿಧಿಸುವ ವ್ಯವಸ್ಥೆಯನ್ನು ಅನುಸರಿಸಿದ್ದನು. ಹಾಗೆಯೇ ಸಮಾಜದ ಎಲ್ಲಾ ಸಮುದಾಯಗಳಿಗೂ ಭೂಒಡೆತನ ಹೊಂದಲು ಅವಕಾಶ ಕಲ್ಪಿಸಿದನು. ಜೊತೆಗೆ ಭೂಹಿಡುವಳಿಯ ಒಡೆತನದ ಮೇಲೆ ಮಿತಿ ಏರಿ ಪ್ರಬಲ ಭೂಹಿಡುವಳಿದಾರರನ್ನು ತನ್ನ ನೇರ

ಹಿಡಿತದಲ್ಲಿ ಇಟ್ಟುಕೊಂಡಿದ್ದನು. ಉಳುವವನಿಗೆ ಭೂಮಿ ಸೇರಿತು ಎಂಬ ವಿಚಾರವನ್ನು ತನ್ನ ರಾಜ್ಯದಾದ್ಯಂತ ಜಾರಿಗೆ ತಂದನು. ಹೀಗಾಗಿ ಟಿಪ್ಪು ಕಾಲದಲ್ಲಿ ನಿಜವಾದ ಸಾಗುವಳಿದಾರನೇ ಭೂ ಒಡೆಯನಾದನು ಎಂಬ ವಿವರಗಳನ್ನು ಗುರುತಿಸಬಹುದು.

ಎರಡನೇ ಘಟ್ಟದ ಅಧ್ಯಯನ

ದಿವಾನ್ ಪೂರ್ಣಯ್ಯನವರ ಕಾಲದ ಭೂ ಹಿಡುವಳಿ ವ್ಯವಸ್ಥೆ ೧೭೯೯-೧೮೧೧

೧೭೯೯ರಲ್ಲಿ ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪುಸುಲ್ತಾನನ್ನು ಅಂತ್ಯಗೊಳಿಸಿದ ಬ್ರಿಟಿಷ್ ಗೌರ್ನರ್ ಜನರಲ್ ವೆಲ್ಲಸ್ಲಿ ಒಡೆಯರ ಮನೆತನವನ್ನು ಪುನರ್‌ಸ್ಥಾಪಿಸಿದನು. ಆಗ ಮುಮ್ಮಡಿ ಕೃಷ್ಣರಾಜ ಒಡೆಯರು ಬಾಲಕರಾಗಿದ್ದರಿಂದ ಆಡಳಿತವನ್ನು ಮಾಡಲು ರಾಜಪ್ರತಿನಿಧಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ರಾಜಮಾತೆ ಲಕ್ಷ್ಮಮ್ಮಣ್ಣಿ, ರೆಸಿಡೆಂಟ್ ಬ್ಯಾರಿಕೋಸ್, ದಿವಾನ್ ಪೂರ್ಣಯ್ಯ ಇದ್ದರು. ದಿವಾನ್‌ಪೂರ್ಣಯ್ಯನವರು ೧೭೯೯ರಿಂದ ೧೮೧೧ರವರೆಗೆ ಆಡಳಿತ ನಡೆಸಿದರು. ದಿವಾನ್ ಪೂರ್ಣಯ್ಯನವರು ಹೈದರಾಲಿ ಮತ್ತು ಟಿಪ್ಪುಸುಲ್ತಾನ್‌ರ ಆಡಳಿತ ಅವಧಿಯಲ್ಲಿಯೇ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ ಅನುಭವವಿತ್ತು. ಆದರೂ ಟಿಪ್ಪುಸುಲ್ತಾನ್ ಮರಣಾನಂತರ ಚಿತ್ರದುರ್ಗ ಪ್ರದೇಶವು ಸೇರಿದಂತೆ ಹಲವು ಪಾಳೆಯಗಾರರು, ದೊಡ್ಡ ಜಮೀನ್ದಾರರು ಮತ್ತೆ ತಲೆ ಎತ್ತಿದರು. ಈ ಸಂದರ್ಭದಲ್ಲಿ ಹೊಸ ಕಾನೂನು ಮತ್ತು ಶಿಸ್ತುಗಳನ್ನು ಜಾರಿಗೆ ತಂದರು.

ಚಿತ್ರದುರ್ಗ ಪ್ರದೇಶದಲ್ಲಿ ಭೂ ಹಿಡುವಳಿಗಳನ್ನು ಆನುವಂಶಿಕವಾಗಿ ಪಡೆದು ಅನುಭೋಗಿಸುವ ಹಕ್ಕು ದಿವಾನ್ ಪೂರ್ಣಯ್ಯನವರ ಕಾಲದಲ್ಲಿಯೂ ಮುಂದುವರೆಯಿತು. ಅಂದರೆ ಪ್ರತಿಯೊಬ್ಬ ಭೂ ಹಿಡುವಳಿದಾರನು ಸ್ವತಂತ್ರವಾದ ಭೂಹಿಡುವಳಿಗಳನ್ನು ಹೊಂದಿದ್ದನು. ಈ ಪ್ರದೇಶದಲ್ಲಿ ಭೂ ಹಿಡುವಳಿದಾರನು ನಿರ್ದಿಷ್ಟ ಮೊತ್ತದ ತೆರಿಗೆಯನ್ನು ಸರಕಾರಕ್ಕೆ ಸಲ್ಲಿಸುವ ಮೂಲಕ ಭೂ ಒಡೆತನವನ್ನು ಹೊಂದಿದ್ದನು. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಪಟೇಲರು, ದೊಡ್ಡ ಜಮೀನ್ದಾರರು ತಮ್ಮ ಹೆಸರುಗಳಲ್ಲಿ ನೂರಾರು ಎಕರೆ ಭೂಹಿಡುವಳಿಗಳನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡಿರುವ ಬಗ್ಗೆ ವಿವರಗಳು ಸಿಗುತ್ತವೆ.[೫೭] ಪೂರ್ಣಯ್ಯನವರ ಆಡಳಿತಾವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ರೈತವಾರಿ ಪದ್ಧತಿಯನ್ನು ಜಾರಿಗೆ ತಂದು ವಂಶಪಾರಂಪರ್ಯವಾಗಿ ಬಂದ ಭೂ ಹಿಡುವಳಿಗಳ ಹಕ್ಕನ್ನು ಸಕ್ರಮಗೊಳಿಸಿದನು. ಹೆಚ್ಚಿನ ಪ್ರಮಾಣದಲ್ಲಿದ್ದ ಇನಾಂ ಭೂಹಿಡುವಳಿಗಳನ್ನು "ಜೋಡಿ ಇನಾಂ"ಗಳಾಗಿ ಪರಿವರ್ತಿಸಿ ಹಗುರ ಕಂದಾಯ ಹೇರಿದ್ದನು. ಪೂರ್ಣಯ್ಯನವರ

ಆಡಳಿತಾವಧಿಯಲ್ಲಿ ಸುಬೇದಾರ್ ಮತ್ತು ಅಮೀಲರು ಪ್ರಾಂತ್ಯದ ಸಂಪೂರ್ಣವಾದ ಕಂದಾಯ ವಸೂಲಿ ಮತ್ತು ಮಿಲಿಟರಿ ಅಧಿಕಾರಿಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಈ ವೇಳೆಯಲ್ಲಿದ್ದ ಪ್ರಮುಖ ತಾಲೂಕುಗಳೆಂದರೆ ಚಿತ್ರದುರ್ಗ, ತಳಕು, ಮೊಳಕಾಲ್ಮೂರು, ಚಳ್ಳಕೆರೆ, ಬಿಳಿಚೋಡು, ಅಣಜಿ, ದೊಡ್ಡೇರಿ, ದಾವಣಗೆರೆ, ಹರಿಹರ, ಹೊಳಲ್ಕೆರೆ, ಹೊಸದುರ್ಗ, ಕಣಕುಪ್ಪ ಮತ್ತು ಮತ್ತೋಡು ಈ ಪ್ರದೇಶದ ಆಡಳಿತ ಕೇಂದ್ರಗಳಾಗಿದ್ದು ಇವುಗಳ ಆಡಳಿತವನ್ನು ನೋಡಿಕೊಳ್ಳಲು ಸುಬೇದಾರ್ ಎಂಬ ಅಧಿಕಾರಿಗಳನ್ನು ನೇಮಕ ಮಾಡಲಾಗಿತ್ತು. ಜೊತೆಗೆ ಹೋಬಳಿಯಲ್ಲಿ ಶೇಕ್‌ದಾರರು, ಗ್ರಾಮಗಳಲ್ಲಿನ ಶಾನುಭೋಗರು, ಪಟೇಲರು ಸೇರಿ ವರ್ಷದ ಪ್ರಾರಂಭದಲ್ಲಿ ತಮ್ಮ ಗ್ರಾಮದಲ್ಲಿರುವ ರೈತರನ್ನೆಲ್ಲ ಸೇರಿಸಿ ಅವರು ಹೊಂದಿದ್ದ ಭೂಹಿಡುವಳಿಗಳಿಗೆ ಅನುಸಾರವಾಗಿ ಇಷ್ಟು ಕಂದಾಯ ಅಥವಾ 'ವಾರ' ಕೊಡಬೇಕು ಎಂದು ತೀರ್ಮಾನಿಸುತ್ತಿದ್ದರು. ಕಂದಾಯವು ಒಟ್ಟು ಹುಟ್ಟುವಳಿಯಲ್ಲಿ ಮೂರರಲ್ಲಿ ಒಂದು ಪಾಲು ಇತ್ತು. ಆದರೆ ಚಿತ್ರದುರ್ಗ ಪ್ರದೇಶದಲ್ಲಿ ಮೂರರಲ್ಲಿ ಒಂದು ಪಾಲಿಗಿಂತ ಕಂದಾಯವು ವಾರ್ಷಿಕವಾಗಿ ೧೮ರಷ್ಟಕ್ಕಿಂತಲೂ ಹೆಚ್ಚಾಗಿತ್ತು. ಕಾರಣ ಇಲ್ಲಿ ಭೂ ಹಿಡುವಳಿಗಳನ್ನು ಸಾಗುವಳಿ ಮಾಡುವವರು ಹೆಚ್ಚಾಗಿದ್ದುದರಿಂದ ಜಮೀನ್ದಾರರಿಗೆ ಈ ಹೆಚ್ಚು ಕಂದಾಯದಿಂದ ಬಹಳ ತೊಂದರೆ ಇರಲಿಲ್ಲ. ಜೊತೆಗೆ ಕೃಷಿ ಕೂಲಿಕಾರರು ಅಧಿಕ ಸಂಖ್ಯೆಯಲ್ಲಿ ಸಿಗುತ್ತಿದ್ದರು. ಚಿತ್ರದುರ್ಗ ಪ್ರದೇಶದಲ್ಲಿ ಸಾಮಾನ್ಯವಾಗಿ ೧೦೦ ರೂ. ಹೆಚ್ಚು ಕಂದಾಯ ಸಲ್ಲಿಸುವ ಭೂಹಿಡುವಳಿದಾರರು ಇದ್ದರು. ಮಧ್ಯಮ ಭೂಹಿಡುವಳಿದಾರರು ೫೦ ರೂ. ಕಂದಾಯ ಸಲ್ಲಿಸುತ್ತಿದ್ದರು. ಅತಿ ಕಡಿಮೆ ಕಂದಾಯ ಸಲ್ಲಿಸುವುದೆಂದರೇ ಒಂದು ರೂ. ಆಗಿತ್ತು. ಸುಬೇದಾರರು ಮತ್ತು ಅಮೀಲರು ಕಂದಾಯ ಅಧಿಕಾರಿಗಳಾಗಿದ್ದರು ಮತ್ತು ಪಂಚಾಯ್ತರ ಸಹಾಯದಿಂದ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದರು.[೫೭]

ಅಂದಿನ ಚಿತ್ರದುರ್ಗ ಪ್ರದೇಶದ ಭೂಹಿಡುವಳಿಗಳನ್ನು ತರಿ, ಖುಷ್ಕಿ, ಭಾಗಾಯ್ತು ಎಂಬುದಾಗಿ ವಿಂಗಡಿಸಲಾಗಿತ್ತು. ಸಾಮಾನ್ಯವಾಗಿ ಒಬ್ಬ ಭೂಹಿಡುವಳಿದಾರನ ಅಧೀನದಲ್ಲಿ ಮೂರು ವಿಧದ ಭೂ ಹಿಡುವಳಿಗಳಿದ್ದವು. ಚಿತ್ರದುರ್ಗ ಪೌಜುದಾರಿಯ ಪ್ರತಿಯೊಬ್ಬ ಭೂಹಿಡುವಳಿದಾರನ ವಶದಲ್ಲಿದ್ದ ಖುಷ್ಕಿ, ತರಿ ಮತ್ತು ಭಾಗಾಯ್ತು ಭೂಮಿಯ ವಿವರವು ಹೀಗಿತ್ತು. ಉತ್ತಮವಾದ 'ತರಿ' ೨೦ ಖಂಡಿ, ಮಧ್ಯಮ ಭೂಮಿ (ಖುಷ್ಕಿ) ೧೨ ಖಂಡಿ, ಭಾಗಾಯ್ತು ಅರ್ಧಖಂಡಿ ಇತ್ತು.[೫೮] ಸಾಮಾನ್ಯವಾಗಿ ಈ ಮೂರು ವಿಧದ ಭೂ ಹಿಡುವಳಿಗಳು ಎಲ್ಲರಿಗೂ ಇದ್ದಂತೆ ಕಂಡುಬರುವುದಿಲ್ಲ. ಏಕೆಂದರೆ

ಈ ಪ್ರದೇಶದಲ್ಲಿ ಭಾಗಾಯ್ತು ಭೂಹಿಡುವಳಿಗಳು ಬಹಳ ಕಡಿಮೆ ಪ್ರಮಾಣದಲ್ಲಿತ್ತು. ರೈತರು ಹೊಸದಾಗಿ ಭೂಹಿಡುವಳಿಗಳನ್ನು ಕೃಷಿಗೊಳಪಡಿಸುವಾಗ ಮೂರು, ನಾಲ್ಕು ವರ್ಷಗಳ ವರೆಗೆ ಕಡಿಮೆ ಕಂದಾಯವನ್ನು ಕೊಡುತ್ತಾ ಇದ್ದರು. ಐದನೆ ವರ್ಷದಿಂದ ಪೂರಾ ಕಂದಾಯ ಕೊಡುವ ಸಂಪ್ರದಾಯವಿತ್ತು. ಮಹಾರಾಜರು ತಮ್ಮ 'ಅಭಿಮಾನಕ್ಕೆ' ಪಾತ್ರರಾದವರಿಗೆ ಕಂದಾಯ ಮತ್ತು ಕಾಲದ ಮಿತಿಗಳಿಲ್ಲದೆ ಭೂ ಹಿಡುವಳಿಗಳನ್ನು ನೀಡುತ್ತಿದ್ದರು. ಇಂತಹ ಭೂ ಹಿಡುವಳಿಗಳನ್ನು 'ಕಾಯಂಗುತ್ತಾ' ಎಂದು ಕರೆಯುತ್ತಿದ್ದರು. ಪೂರ್ಣಯ್ಯನವರ ಕಾಲದಲ್ಲಿ ಬ್ರಾಹ್ಮಣರಿಗೂ, ಅಗ್ರಹಾರಗಳಿಗೂ ಸರ್ವಮಾನ್ಯಭೂಮಿಗಳನ್ನು ಕೊಡುವಂತಹ ಪದ್ಧತಿ ಇತ್ತು. ಇದೇ ರೀತಿ ಜೋಡಿದಾರ ಭೂಹಿಡುವಳಿದಾರರು ಕಡಿಮೆ ಕಂದಾಯವನ್ನು ಕೊಡುತ್ತಾ ಭೂ ಹಿಡುವಳಿಗಳನ್ನು ಅನುಭವಿಸುತ್ತಿದ್ದರು.[೫೯] ಇದರಿಂದ ಅವರಿಗೆ ತಮ್ಮ ಭೂಮಿಯನ್ನು ಮಾರುವುದಕ್ಕಾಗಲಿ ಭೋಗ್ಯಕ್ಕೆ ಕೊಡುವುದಕ್ಕಾಗಲೀ ಅಧಿಕಾರವಿತ್ತು. ಹಾಗೆ ಅನುಭವಿಸುವವರು ಸರಕಾರಕ್ಕೆ ಕಂದಾಯ ಕೊಡುವಲ್ಲಿ ವಿಫಲವಾದರೆ ಅಂತಹವರು ತಮ್ಮ ಭೂಹಿಡುವಳಿಗಳನ್ನು ಇತರರಿಗೆ ಮಾರಿ ಹಣ ಕಟ್ಟುತ್ತಿದ್ದರು. ಇದರಿಂದ ಭೂಹಿಡುವಳಿಗಳ ಹಕ್ಕುಗಳೆಲ್ಲವೂ ಕೊಂಡುಕೊಂಡವರಿಗೆ ಬರುತ್ತಿದ್ದವು.

ಕರ್ನಾಟಕ ಚರಿತ್ರೆ ಸಂಪುಟ ಆರರಲ್ಲಿ, ಚಿತ್ರದುರ್ಗ ಪ್ರದೇಶದಲ್ಲಿ ದಿವಾನ್ ಪೂರ್ಣಯ್ಯನವರ ಕಾಲಾವಧಿಯಲ್ಲಿ ಇದ್ದಿರಬಹುದಾದ ನಿರ್ದಿಷ್ಟ ಕೃಷಿಕ ವರ್ಗಗಳನ್ನು ಗುರುತಿಸಲು ಸಾಧ್ಯವಾಗದಿದ್ದರೂ ಕೃಷಿ ಉತ್ಪಾದನಾ ಪ್ರಕ್ರಿಯೆಯಲ್ಲಿ ಭೂರಹಿತ ಕೃಷಿ ಕೂಲಿಕಾರರ ಒಂದು ವರ್ಗವು ಈ ಪ್ರದೇಶದಲ್ಲಿ ಅಸ್ತಿತ್ವದಲ್ಲಿ ಇತ್ತು. ನೇಗಿಲು ಹಿಡಿದು ಉಳುವವರು, ದನಕರುಗಳನ್ನು ಸಾಕುವವರು ಹಾಗೂ ಕೆಳಹಂತದ ಕೆಲಸವನ್ನು ನಿರ್ವಹಿಸುವವರು ಸಮಾಜದಲ್ಲಿ ಅತ್ಯಂತ ಕೆಳಗಿನ ಮಟ್ಟದ ವ್ಯಕ್ತಿಗಳಾಗಿದ್ದರು. ಈ ಕೃಷಿ ಕೂಲಿಕಾರನು ತನ್ನ ಒಡೆಯನಿಂದ ಹೊಟ್ಟೆಗೆ ಎಷ್ಟು ಅಗತ್ಯವೊ ಅಷ್ಟನ್ನು, ಎಷ್ಟು ಕಡಿಮೆ ಸಾಧ್ಯವೋ ಅಷ್ಟು ಕಡಿಮೆ ಆಹಾರವನ್ನು ಪಡೆಯುತ್ತಿದ್ದ. ಈ ರೀತಿಯಾದ ಕೂಲಿಕಾರ ವರ್ಗವು ಚಿತ್ರದುರ್ಗ ಪ್ರದೇಶದಲ್ಲಿ ಹಿಂದಿನಿಂದಲೂ ಸಮಾಜದಲ್ಲಿ ಯಾವುದೇ ರೀತಿಯಾದ ಉನ್ನತ ಸ್ಥಾನಮಾನಗಳನ್ನು ಪಡೆಯಲಿಲ್ಲ. ಇವರೆಲ್ಲರೂ ವಂಶಪಾರಂಪರ್ಯವಾಗಿ ಭೂ ಒಡೆಯರ ಸ್ವತ್ತುಗಳಾಗಿದ್ದರು.[೬೦] ಈಗಲೂ ಚಿತ್ರದುರ್ಗ ಪ್ರದೇಶದಲ್ಲಿ ಅಸ್ಪೃಶ್ಯ ವರ್ಗದವರನ್ನು ಕೃಷಿ ಕೂಲಿಯಾಳುಗಳಾಗಿ ಬಳಸುವ ಪದ್ಧತಿ ಕಂಡುಬರುತ್ತದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಭೂಹಿಡುವಳಿ ವ್ಯವಸ್ಥೆ (೧೮೧೧-೧೮೩೧)

ದಿವಾನ್ ಪೂರ್ಣಯ್ಯನವರು ೧೮೧೧ರಲ್ಲಿ ನಿವೃತ್ತಿಯಾದ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ರಾಜ್ಯಾಡಳಿತವನ್ನು ವಹಿಸಿಕೊಂಡರು. ೧೮೧೧ರಿಂದ ೧೮೩೧ರವರೆಗೆ ಭಕ್ಷಿ ಬಾಲಾಜಿರಾವ್, ಬಾಬೂರಾವ್, ಸಿದ್ದರಾಜಅರಸ್, ಲಿಂಗರಾಜಅರಸ್ ಮೊದಲಾದ ದಿವಾನರು ಅರಸರಿಗೆ ಆಡಳಿತದಲ್ಲಿ ಸಹಾಯಕರಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನವನ್ನು ಆರು ಫೌಜುದಾರಿಗಳಾಗಿ ವಿಭಾಗಿಸಲಾಗಿತ್ತು. ಹಾಗೆಯೇ, ಆ ಫೌಜುದಾರಿಗಳನ್ನು ೧೨೫ ತಾಲೂಕುಗಳಾಗಿ ಒಡೆಯಲಾಗಿತ್ತು. ಅದರಲ್ಲಿ ಚಿತ್ರದುರ್ಗವು ಒಂದು ಪ್ರಮುಖ ಫೌಜುದಾರಿಯಾಗಿತ್ತು. ಅಂದಿನ ಚಿತ್ರದುರ್ಗ ಫೌಜುದಾರಿಯಲ್ಲಿ ೧೩ ತಾಲೂಕುಗಳಿದ್ದವು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿದ್ದ ಪ್ರಮುಖ ಭೂಹಿಡುವಳಿ ವ್ಯವಸ್ಥೆಯನ್ನು ಹೀಗೆ ಗುರುತಿಸಬಹುದು.[೬೧]

೧. **ಖಾಯಂ ಗುತ್ತಾ**	:	ಹಳ್ಳಿಯ ಸುತ್ತ ಇರುವ ಭೂ ಹಿಡುವಳಿಗಳನ್ನು ಶಾಶ್ವತವಾಗಿ ಅನುಭೋಗಕ್ಕೆ ಮಂಜೂರು ಮಾಡುವುದು.
೨. **ನಿರೂಪ**	:	ಒಂದು ಗೊತ್ತಾದ ಕಾಲದವರೆಗೆ ಅನುಭೋಗಕ್ಕೆ ಭೂ ಹಿಡುವಳಿಗಳನ್ನು ಮಂಜೂರು ಮಾಡುವುದು.
೩. **ಕಂದಾಯದ ಜಮೀನು**	:	ನೇರವಾಗಿ ರೈತರು ಭೂ ಒಡೆಯರಾಗಿದ್ದು, ನಿಗದಿಪಡಿಸಿದ ಕಂದಾಯವನ್ನು ಸರಕಾರಕ್ಕೆ ಸಲ್ಲಿಸುವುದು.
೪. **ಬತಾಯಿ ಜಮೀನು**	:	ವ್ಯವಸಾಯಗಾರ ತಾನು ಬೆಳೆದ ಬೆಳೆಯನ್ನು ಸರಕಾರದ ಜೊತೆಗೆ ಹಂಚಿಕೊಳ್ಳುವ ವ್ಯವಸ್ಥೆಯಾಗಿತ್ತು.
೫. **ಅವಮಾನಿತ ಲಾವು ಜಮೀನು**	:	ಯಾವುದೇ ಒಡೆತನಕ್ಕೂ ಸೇರದ ಕೆರೆಯ ಕೆಳಗಿನ ಭೂ ಹಿಡುವಳಿಗಳನ್ನು ಹಲವು ಗ್ರಾಮಗಳ ಜನ ಸೇರಿ ವ್ಯವಸಾಯ ಮಾಡುತ್ತಿದ್ದರು. ಬೆಳೆಯಲ್ಲಿ ಸ್ವಲ್ಪ ಭಾಗ ವನ್ನು ಸರಕಾರಕ್ಕೆ ಸಲ್ಲಿಸಲಾಗುತ್ತಿತ್ತು.
೬. **ಶ್ರೇಯಗೇಣಿ**	:	ಭೂಮಿಯ ಒಡೆತನವನ್ನು ಹೊಂದಿದ ರೈತರು ಹಲವಾರು ಕಾರಣಗಳಿಗಾಗಿ ಒಂದು ಗೊತ್ತಾದ ಕಾಲದವರೆಗೆ ಕಡಿಮೆ ಕಂದಾಯ ಕಟ್ಟುತ್ತಿದ್ದರು.
೭. **ಜೋಡಿ ಜಮೀನು**	:	ಕಡಿಮೆ ಕಂದಾಯಕ್ಕೆ ಜೋಡಿದಾರರಿಗೆ ಮಂಜೂರಾತಿ ಮಾಡಿದ ಭೂಮಿ.

ಈ ಎಲ್ಲಾ ವಿಧಾನಗಳಲ್ಲಿಯೂ ಇದ್ದ ಭೂಹಿಡುವಳಿ ವ್ಯವಸ್ಥೆಯನ್ನು ನೋಡಿದಾಗ ಕೆಲವು ಅಂಶಗಳು ಗೋಚರವಾಗುತ್ತವೆ. ಮೊದಲನೆಯದಾಗಿ ಭೂಹಿಡುವಳಿಗಳ ಪೂರ್ಣ ಒಡೆತನ ವ್ಯವಸಾಯ

ಮಾಡುತ್ತಿದ್ದ ರೈತರ ಕೈಯಲ್ಲಿರುತ್ತಿತ್ತು. ಅವನೇ ನೇರವಾಗಿ ಕಂದಾಯ ಕಟ್ಟುತ್ತಿದ್ದನು. ಎರಡನೆಯದಾಗಿ ಸರಕಾರವು ನೇರವಾಗಿ ಗೇಣಿಯನ್ನು ವಸೂಲಿ ಮಾಡುತ್ತಿದ್ದಿತು. ಅಂತಿಮವಾಗಿ ಭೂ ಒಡೆತನದ ಮೇಲೆ ಆಧಿಪತ್ಯವನ್ನು ಹೊಂದಿತ್ತು.

ಪೂರ್ಣಯ್ಯನವರ ಕಾಲಾವಧಿಯಲ್ಲಿದ್ದ ಭೂವ್ಯವಸ್ಥೆಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಯಾವ ಬದಲಾವಣೆ ಇಲ್ಲದೇ ಮುಂದುವರೆಸಿದರು. 'ಷರತ್ತು'(ಒಪ್ಪಂದ) ಪದ್ಧತಿಯು ಈ ಕಾಲದ ಒಂದು ಪ್ರಮುಖ ಲಕ್ಷಣವಾಗಿತ್ತು. ಇದು ಮೂಲತಃ ಅಮೀಲ್ದಾರನಿಗೂ, ಸರಕಾರಕ್ಕೂ ಮಾಡಿಕೊಂಡ ಒಪ್ಪಂದದ ಪ್ರಕಾರ ಅಮೀಲ್ದಾರನೂ ತಾಲೂಕಿನಲ್ಲಿ ನಿರ್ದಿಷ್ಟ ಮೊತ್ತದ ತೆರಿಗೆಯನ್ನು ವಸೂಲಿ ಮಾಡಿ ತನ್ನ ಕಮಿಷನ್ ತೆಗೆದುಕೊಂಡು ಉಳಿದ ಹಣವನ್ನು ಖಜಾನೆಗೆ ಪಾವತಿ ಮಾಡುತ್ತಿದ್ದನು. 'ಷರತ್ತಿನ' ಪ್ರಕಾರ ರೈತರಿಗೆ ಯಾವುದೇ ಕಿರುಕುಳ ಕೊಡಬಾರದಾಗಿತ್ತು. ಈ ಪದ್ಧತಿಯು ಬರಬರುತ್ತಾ ಯಾರು ಹೆಚ್ಚು ಹಣವನ್ನು ಪಾವತಿ ಮಾಡಲು ತಯಾರಿದ್ದಾರೆಯೋ ಅವರಿಗೆ ಭೂಹಿಡುವಳಿಗಳನ್ನು ಬಿಡುವ ವ್ಯವಸ್ಥೆಯಾಗಿ ಮುಂದುವರೆಯಿತು. ವರ್ಷಗಳುರುಳಿದಂತೆ ಈ ಷರತ್ತು ವ್ಯವಸ್ಥೆಯು ವಿಪರೀತ ದಮನಕಾರಿ ವ್ಯವಸ್ಥೆಯಾಗಿತ್ತು.[೬೧] ಇದು ಮುಂದೆ ಸಾಮಾಜಿಕ ಅಶಾಂತಿಗೂ ದಾರಿ ಮಾಡಿಕೊಟ್ಟಿತು. ಈ ರೀತಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಾವಧಿಯಲ್ಲಿ ಕಂದಾಯದ ಹುಟ್ಟುವಳಿಯು ಕಡಿಮೆಯಾದುದಕ್ಕೆ ಇಂತಹ ವ್ಯವಸ್ಥೆಯು ಕಾರಣವಾಗಿತ್ತು. ತಾಲೂಕಿನ ಅಧಿಕಾರಿಗಳು ಸರಕಾರಕ್ಕೆ ಸಲ್ಲಬೇಕಾದ ದವಸ-ಧಾನ್ಯ ಮತ್ತು ಹಣವನ್ನು ಮುಚ್ಚಿಡುತ್ತಿದ್ದರೆಂದು ಭಾವಿಸಿ ಅದನ್ನು ತಪ್ಪಿಸುವ ಉದ್ದೇಶದಿಂದ 'ಷರತ್' ಎಂಬ ನಿಬಂಧನೆಯನ್ನು ಜಾರಿಗೆ ತಂದಿದ್ದರು. ಈ ನಿಬಂಧನೆಯ ಪ್ರಕಾರ ಪ್ರತಿ ತಾಲೂಕಿನ ಉತ್ಪತ್ತಿಯನ್ನು ಹರಾಜಿಗೆ ಬಿಟ್ಟು ಎಲ್ಲರಿಗಿಂತಲೂ ಹೆಚ್ಚು ಹರಾಜು ಕೂಗಿದ ವ್ಯಕ್ತಿಗೆ ಅಮೀಲ್ದಾರರ ಕೆಲಸವನ್ನು ಕೊಡುತ್ತಿದ್ದರು. ಅವರಿಂದ ಬರಬೇಕಾದ ಗುತ್ತಿಗೆ ಹಣಕ್ಕೆ ಮುಚ್ಚಳಿಕೆ ಬರೆಯಿಸಿಕೊಳ್ಳುತ್ತಿದ್ದರು. ಇದರಿಂದ ಸರಕಾರಕ್ಕೇನೋ ಸ್ವಲ್ಪ ಹೆಚ್ಚು ಹಣ ಬರುತ್ತಿತ್ತು. ಆದರೆ ಪ್ರಜೆಗಳು ಬಹಳ ಹಿಂಸೆಗೆ ಒಳಗಾಗುತ್ತಿದ್ದರು.[೬೨] ಈ ವ್ಯವಸ್ಥೆಯ ಉದ್ದೇಶ ಸಂಪೂರ್ಣವಾಗಿ ಸಫಲವಾಗಲಿಲ್ಲ. ಆದ್ದರಿಂದ ಭೂಮಿಯ ಕಂದಾಯವನ್ನು ಗುತ್ತಿಗೆ ಕೊಡುತ್ತಿದುದರಿಂದ ರೈತರಿಗೆ ಉಂಟಾಗಿದ್ದ ತೊಂದರೆಗಳನ್ನು ತಪ್ಪಿಸುವ ಉದ್ದೇಶದಿಂದ ಪ್ರತಿಯೊಬ್ಬ ರೈತನಿಂದಲೂ ಸರಕಾರವೇ ಕಂದಾಯ ವಸೂಲು ಮಾಡಿಕೊಳ್ಳತಕ್ಕದೆಂದು ಏರ್ಪಾಡಾಯಿತು. ಭೂಹಿಡುವಳಿದಾರರ ಸಂಖ್ಯೆಯು ಹೆಚ್ಚಾದಂತೆಲ್ಲಾ ಭೂಮಿಗೆ ಬೆಲೆಯೂ ಹೆಚ್ಚಿತು. ಹೀಗೆ ಬೆಲೆಯು ಹೆಚ್ಚುತ್ತಿರುವುದರಿಂದ ಕೆಲವರು ಶ್ಯಾನುಭೋಗರಿಗೆ ಲಂಚವನ್ನು ನೀಡಿ ಅನುಭವದಾರರ ಹೆಸರುಗಳನ್ನು ಲೆಕ್ಕದಲ್ಲಿ ಬದಲಾಯಿಸಿ ಭೂಹಿಡುವಳಿಗಳನ್ನು

ತಮ್ಮ ಸ್ವಾಧೀನ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದರು.[೬೪] ನಂತರದಲ್ಲಿ ಪ್ರತಿಯೊಬ್ಬ ಭೂಹಿಡುವಳಿದಾರರಿಗೂ ಅವನ ಭೂಮಿಯ ಹಾಗೂ ಕಂದಾಯದ ವಿವರವನ್ನು ತಿಳಿಸುವುದರೊಂದಿಗೆ ಒಂದು ಪಟ್ಟವನ್ನು ಕೊಡುವಂತೆ ವ್ಯವಸ್ಥೆ ಮಾಡಲಾಗಿತ್ತು. ಆದರೂ ಅಕ್ರಮಗಳನ್ನೆಲ್ಲಾ ಸಂಪೂರ್ಣವಾಗಿ ತಡೆಯುವುದು ಅಸಾಧ್ಯವಾಯಿತು.

ಚಿತ್ರದುರ್ಗದಲ್ಲಿ ನಗರ ದಂಗೆಯ ಪ್ರಭಾವ ೧೮೩೦-೩೧

ನಗರ ದಂಗೆಯು ಬಿದನೂರು ಪ್ರದೇಶದಲ್ಲಿ ಆರಂಭವಾಗಿ ಮೈಸೂರು ಸಂಸ್ಥಾನದ ಎಲ್ಲ ಭಾಗಗಳಲ್ಲೂ ಪ್ರತಿಧ್ವನಿಸಿತು. ಬ್ರಿಟಿಷ್ ಸರಕಾರ ಮೈಸೂರಿನ ಆಡಳಿತವನ್ನು ವಹಿಸಿಕೊಳ್ಳಲು ನಗರ ದಂಗೆಯು ಮುಖ್ಯ ಕಾರಣವಾಗಿತ್ತು. ಟಿಪ್ಪುವಿನ ನಂತರ ಮೂರು ದಶಕಗಳ ಕಾಲ ಪರೋಕ್ಷ ಆಳ್ವಿಕೆಯನ್ನು ಮೈಸೂರು ಸಂಸ್ಥಾನದಲ್ಲಿ ನಡೆಸಿದುದರ ಪ್ರತಿಫಲವೇ ನಗರ ದಂಗೆ.[೬೫] ಈ ದಂಗೆ ಆರಂಭವಾಗಲು ಮುಖ್ಯ ಕಾರಣ ದಿವಾನ್ ಪೂರ್ಣಯ್ಯನವರು ಜಾರಿಗೆ ತಂದ ಷರತ್ (ಗುತ್ತಿಗೆ ಪದ್ಧತಿ) ಪದ್ಧತಿಯೇ ಕಾರಣವಾಗಿತ್ತು. ಈ ಷರತ್ ವ್ಯವಸ್ಥೆಯ ಪ್ರಕಾರ ಅಮೀಲ್ದಾರನು ಸರಕಾರಕ್ಕೆ ತಾನು ನಿಗದಿಯುತ ಮೊತ್ತದ ತೆರಿಗೆಯನ್ನು ವಸೂಲಿ ಮಾಡಿಕೊಡುವ ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದನು. ಇದರಿಂದ ಅತಿ ಹೆಚ್ಚು ಹರಾಜು ಕೂಗಿದವರಿಗೆ ಭೂಮಿಯನ್ನು ಸಾಗುವಳಿ ಮಾಡಲು ಅವಕಾಶ ನೀಡಲಾಗುತ್ತಿತ್ತು. ಈ ವ್ಯವಸ್ಥೆಯಿಂದ ಹೆಚ್ಚು ತೆರಿಗೆ ವಸೂಲಿ ಮಾಡಲು ಅನುಕೂಲವಾಗಿತ್ತು. ಆದರೆ ತೆರಿಗೆ ವಸೂಲಿಯ ಸಂದರ್ಭದಲ್ಲಿ ಒಪ್ಪಂದಕ್ಕಿಂತ ಕಡಿಮೆಯಾದರೆ ಅಮೀಲ್ದಾರನೇ ಹೊಣೆಯಾಗುತ್ತಿದ್ದನು.[೬೬] ಹೀಗಾಗಿ ಇದರಿಂದ ರೈತರು ಅತಿಯಾದ ಕಿರುಕುಳಕ್ಕೆ ಒಳಗಾಗಿದ್ದರು. ಒಪ್ಪಂದ ಮಾಡಿಕೊಂಡ ಅಮೀಲ್ದಾರರು ರೈತರನ್ನು ಸುಲಿಗೆ ಮಾಡಿದರು. ಪಾಳು ಭೂಮಿಗೂ ಕಂದಾಯವನ್ನು ಬಲವಂತವಾಗಿ ವಸೂಲಿ ಮಾಡುತ್ತಿದ್ದರು. ೧೮೩೦ರ ವೇಳೆಗೆ ಆಹಾರ ಬೆಳೆಗಳ ಬೆಲೆಗಳು ಇಳಿದುದರಿಂದಾಗಿ ರೈತರಿಗೆ ಕಂದಾಯ ಸಲ್ಲಿಸಲು ಕಷ್ಟವಾಯಿತು. ಅಮೀಲ್ದಾರರು ಕಂದಾಯ ವಸೂಲಿಗೆ ಬಲವಂತ ಮಾಡಿದರು. ಇದೆಲ್ಲದರ ಪರಿಣಾಮ ಹೆಚ್ಚು ಭೂಕಂದಾಯದ ಬಾಕಿಯಿತ್ತು. ಇದರಿಂದ ರೈತರ ಆರ್ಥಿಕ ಪರಿಸ್ಥಿತಿಯು ತುಂಬಾ ಹದಗೆಟ್ಟಿತ್ತು. ಇದೇ ಸಂದರ್ಭದಲ್ಲಿ ಸ್ಥಳೀಯ ನಾಯಕರಾದ ಬೂದಿಬಸವಪ್ಪನ ನೇತೃತ್ವದಲ್ಲಿ ರೈತರು ಸಭೆ ಸೇರ ತೊಡಗಿದರು. ಅವನು ನಗರದ ರಾಜ ಬೂದಿಬಸವಪ್ಪ ಎಂಬ ಹೆಸರಿನಲ್ಲಿ ದಂಗೆಯೆದ್ದ ರೈತರನ್ನು ತನ್ನೆಡೆಗೆ ಸೆಳೆಯಲು ತನಗೆ ಬೆಂಬಲ ನೀಡಿದ ಪಕ್ಷದಲ್ಲಿ ರೈತರು ಕೊಡಬೇಕಾಗಿರುವ ಕಂದಾಯದ ಬಾಕಿಯನ್ನು ರದ್ದುಪಡಿಸುವುದಾಗಿ

ರೈತರಿಗೆ ಮಾತುಕೊಟ್ಟನು.[೬೭] ಹಾಗೆಯೇ ತೆರಿಗೆಯನ್ನು ಇಳಿಸುವ ಘೋಷಣೆ ಹೊರಡಿಸಿದನು. ತರೀಕೆರೆಯ ಪಾಳೆಯಗಾರ ರಂಗಪ್ಪನಾಯಕನು ಸಹ ಮೈಸೂರಿನ ಬಗೆಗಿದ್ದ ದ್ವೇಷದಿಂದಾಗಿ ರೈತರಿಗೆ ಬೆಂಬಲ ನೀಡಿದನು. ರೈತರು ನಗರ, ಹೊನ್ನಾಳಿ, ಚನ್ನಗಿರಿ ಮೊದಲಾದ ಕಡೆ ತೆರಿಗೆ ಕೊಡಲು ನಿರಾಕರಿಸಿದರು.

ಇದೇ ಸಂದರ್ಭದಲ್ಲಿ ಚಿತ್ರದುರ್ಗ ಪ್ರದೇಶದಲ್ಲಿಯೂ ದಂಗೆ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ರೈತರೊಂದಿಗೆ ಸಂಧಾನ ನಡೆಸಲು ದಿವಾನ್ ವೆಂಕಟರಾವ್ ಬಂದರೂ ಅವರ ಪ್ರಯತ್ನವು ಈಡೇರಲಿಲ್ಲ. ಇದೇ ಹಿನ್ನೆಲೆಯಲ್ಲಿ ೧೮೩೦, ಡಿಸೆಂಬರ್ ೧೬ರಂದು ದಿವಾನನು ಪಟೇಲರುಗಳಿಗೆ ಒಂದು ಮನವರಿಕೆ ಪತ್ರವನ್ನು ಕಳುಹಿಸುತ್ತಾನೆ. ಅದರಲ್ಲಿ ರೈತರ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆಯಾಗಲಿ, ದೂರುಗಳ ವಿಚಾರಣೆ ಮಾಡುವ ಬಗೆಗಾಗಲಿ ಪ್ರಸ್ತಾಪವಿರಲಿಲ್ಲ. ಆದ್ದರಿಂದ ಎಲ್ಲಾ ಸಂಧಾನ ವಿಫಲವಾಗಿ ರೈತರು ದಂಗೆಯ ದಾರಿ ಹಿಡಿದರು. ಚಿತ್ರದುರ್ಗ, ಹೊಳಲ್ಕೆರೆ ಮತ್ತು ಹೊಸದುರ್ಗಗಳ ರೈತರು ಸಂಘಟಿತರಾಗಿ ಅಮೀಲ್ದಾರರು ಮತ್ತು ಶಿರಸ್ತೇದಾರರಿಗೆ ತಾವು ನೀಡಿದ್ದ ಕಂದಾಯ ಮತ್ತು ಲಂಚದ ಹಣವನ್ನು ಹಿಂತಿರುಗಿಸಬೇಕೆಂದು ಚಳವಳಿ ಪ್ರಾರಂಭಿಸಿದರು. ಚಿತ್ರಹಳ್ಳಿಯ ರೈತರು ಚಿತ್ರದುರ್ಗದ ಫೌಜ್‌ದಾರರನ್ನು ಸುತ್ತುಗಟ್ಟಿ ಸೆರೆಮನೆಯಲ್ಲಿಟ್ಟರು. ಅಂದನ ಕೆರೆಯಲ್ಲಿ ರೈತರು ಒಟ್ಟಿಗೆ ಸೇರಿ ಅಮೀಲ್ದಾರರನ್ನು ಹಿಡಿದು ಥಳಿಸಿದರು. ರೈತರಿಂದ ಅವನು ವಸೂಲಿ ಮಾಡಿದ ತೆರಿಗೆಯನ್ನು, ಲಂಚವನ್ನು ಹಿಂದಿರುಗಿಸುವಂತೆ ಒತ್ತಾಯಿಸಿದರು. ಅವನ ವಸೂಲಾತಿಯಿಂದ ಸಂಗ್ರಹಿಸಲ್ಪಟ್ಟಿದ್ದ ಒಂದೂವರೆ ಸಾವಿರ ಪಗೋಡಗಳನ್ನು ಅವರು ಕಿತ್ತುಕೊಂಡರು. ಇದೇ ಸಮಯದಲ್ಲಿ ಇನ್ನೊಂದು ಗ್ರಾಮವೊಂದರಲ್ಲಿ ರೈತರು ಅಮೀಲ್ದಾರನ ಸಹೋದರನ ಮೇಲೆ ಹಲ್ಲೆ ಮಾಡಿ ಅವನಿಂದ ಐದುನೂರು ಪಗೋಡಗಳನ್ನು ಕಿತ್ತುಕೊಂಡರೆಂದು ತಿಳಿಯುತ್ತದೆ.[೬೮] ಚಿತ್ರದುರ್ಗದಲ್ಲಿ ರೈತರು ಫೌಜ್‌ದಾರರಾದ ಶೇಷಗಿರಿರಾವ್‌ನನ್ನು, ಅನೇಕ ಅಮೀಲ್ದಾರರನ್ನು, ಶಿರಸ್ತೇದಾರರನ್ನು ಸೆರೆಹಿಡಿದಿದ್ದರು. ಹಿಂದೆ ಅನ್ಯಾಯವಾಗಿ ತಮ್ಮಿಂದ ವಸೂಲಿ ಮಾಡಿದ್ದರೆಂದು ಹೇಳಲಾದ ಭಾರಿ ಮೊತ್ತದ ಹಣವನ್ನು ಅವರಿಂದ ಪಡೆದುಕೊಂಡರು. ದೊಡ್ಡೇರಿ, ತಳುಕು, ದಾವಣಗೆರೆ, ಮಾಯಕೊಂಡಗಳಲ್ಲೂ ಇಂತಹ ದಂಗೆ ನಡೆದ ಬಗ್ಗೆ ವಿವರವಿದೆ. ಕ್ರಿ. ಶ. ೧೮೩೧ರ ಕೊನೆಯ ವೇಳೆಗೆ ಚಿತ್ರದುರ್ಗ ಫೌಜ್‌ದಾರಿಯ ಏಳು ತಾಲೂಕುಗಳಲ್ಲಿ ಕಂದಾಯ ವಸೂಲಾತಿಯೇ ನಿಂತಿತು.

ನಾವರ್ ಕಛೇರಿಗೆ ಸೇರಿದ ರೆಜಿಮೆಂಟ್‌ದಾರರಾದ ಚಂದ್ರರಾವ್ ರಾಣಿ ಮತ್ತು ಅಶ್ರಫ್ ಅಲಿ ಖಾನ್ ಇವರಿಗೆ ಕಳುಹಿಸಿಕೊಟ್ಟ ಒಂದು ರಾಜಾಜ್ಞೆಯಲ್ಲಿ ಈ ವಿವರ ತಿಳಿದುಬರುತ್ತದೆ. ಚಿತ್ರದುರ್ಗ ಪ್ರದೇಶದ ತಾಲೂಕುಗಳಿಗೆ ಸೇರಿದ ಅನೇಕ ರೈತರು ಪಟೇಲರು ಮೊದಲಾದವರು ಹೆಚ್ಚಿನ ಸಂಖ್ಯೆಯಲ್ಲಿ ಬಂಡಾಯವೆದ್ದಿದ್ದಾರೆ, ಅವರ ಹೋರಾಟದ -ಮೊದಲನೆ ಹೆಜ್ಜೆ ಸರಕಾರಕ್ಕೆ ಕೊಡಬೇಕಾದ ತೆರಿಗೆಗಳನ್ನು ತಡೆಯುವುದು. ಅವರು ಗುಂಪಾಗಿ ಹೋಗಿ ಆಡಳಿತ ಹಾಗೂ ಕಂದಾಯ ವಸೂಲಿ ಎರಡೂ ಹೊಣೆಗಾರಿಕೆಗಳನ್ನು ಹೊತ್ತಿದ್ದ ಚಿತ್ರದುರ್ಗದ ಫೌಜ್‌ದಾರನ ಮೇಲೆ ದಾಳಿ ಮಾಡಿದರು. ಆಮೇಲೆ ಅಮೀಲ್ದಾರ, ಶಿರಸ್ತೇದಾರ ಮೊದಲಾದ ಕಂದಾಯ ಆಡಳಿತದ ಕೆಳಹಂತದ ಅಧಿಕಾರಿಗಳ ಮೇಲೆ ಆಕ್ರಮಣ ಮಾಡಿದರು. ಈ ರೀತಿಯ ರೈತರ ದಂಗೆಯಿಂದ ರಾಜನಿಗೆ ದಿಕ್ಕು ತೋಚದಂತಾಯಿತು. ಆ ಪ್ರದೇಶದ ಪಟೇಲರು ಸರಕಾರಿ ಅಧಿಕಾರಿಗಳಿಗೆ ಎದುರಾಗಿ ಬಂಡಾಯಗಾರರನ್ನು ಸೇರಿಕೊಂಡಿರುವುದು ರಾಜನ ಆತಂಕ ಮತ್ತು ಕಳವಳಗಳಿಗೆ ಇನ್ನೂ ಒಂದು ಕಾರಣವಾಗಿತ್ತು.

ಚಿತ್ರದುರ್ಗ ಮತ್ತು ನಗರ ಫೌಜುದಾರಿಗಳಲ್ಲಿ ಪ್ರಾರಂಭಗೊಂಡ ರೈತರ ದಂಗೆಯು ಆಗ ಬೆಂಗಳೂರು ಫೌಜುದಾರಿಗೆ ಸೇರಿದ್ದ ಬೂದಿಹಾಳ್ ಗ್ರಾಮದ ರೈತರನ್ನು ಪ್ರಚೋದಿಸಿತು. ಬೂದಿಹಾಳ್ ರೈತರು ಅಲ್ಲಿನ ಫೌಜುದಾರನ ವಿರುದ್ಧ ತಿರುಗಿಬಿದ್ದರು. ಈ ಗಲಭೆಗಳನ್ನು ಶಾಂತಿಗೊಳಿಸಲು ಮುಮ್ಮಡಿ ಕೃಷ್ಣರಾಜ ಒಡೆಯರು ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡರು. ಆದರೆ ಬೂದಿಹಾಳ್ ರೈತರು ಇದರಿಂದ ಸಮಾಧಾನಗೊಳ್ಳಲಿಲ್ಲ. ಅದೇ ಸಮಯಕ್ಕೆ ಬ್ರಿಟಿಶರು ದಂಗೆಕೋರರ ಮುಂದಾಳುಗಳನ್ನು ಶಿಕ್ಷಿಸಿದರು.[೬೯]

ಹೀಗೆ ಮೈಸೂರು ಸಂಸ್ಥಾನದ ಎಲ್ಲಾ ಭಾಗಗಳಿಗೂ ಹರಡಿದ ಈ ದಂಗೆಯನ್ನು ಅಡಗಿಸಲು ಬ್ರಿಟಿಶ ಸೈನಿಕರ ನೆರವನ್ನು ಪಡೆಯಲಾಯಿತು. ಮೈಸೂರು ಸಂಸ್ಥಾನದಲ್ಲಿ ಉಂಟಾದ ಗಲಭೆ ಹಿಂಸಾಚಾರಗಳನ್ನು ನಿರ್ಮೂಲನ ಮಾಡಲಾಯಿತು. ನಂತರ ಗೌರ್ನರ್ ಜನರಲ್ ಲಾರ್ಡ್‌ವಿಲಿಯಂ ಬೆಂಟಿಕ್‌ನು ಸಂಸ್ಥಾನದ ಆಡಳಿತವನ್ನು ತನ್ನ ಕೈಗೆತ್ತಿಕೊಂಡನು. ಪರಿಣಾಮವಾಗಿ ಪ್ರಾಂತ್ಯದ ಆಡಳಿತವನ್ನು ನೋಡಿಕೊಳ್ಳಲು ಬ್ರಿಟಿಶ್ ಕಮೀಷನರನ ನೇಮಕವಾಯಿತು.

ಮೂರನೇ ಘಟ್ಟದ ಅಧ್ಯಯನ

ಕಮೀಷನರುಗಳ ಕಾಲದ ಭೂಹಿಡುವಳಿ ವ್ಯವಸ್ಥೆ ೧೮೩೧-೧೮೮೧

೧೮ನೇ ಶತಮಾನದ ಕೊನೆಯ ಭಾಗದಲ್ಲಿ ಖಾಸಗಿ ಆಸ್ತಿಯ ಹಕ್ಕು ಪವಿತ್ರವಾದ ಹಾಗೂ ಪರಭಾರೆ ಮಾಡಲಾಗದ ಒಂದು ಹಕ್ಕು ಎಂದು ಪರಿಗಣಿಸಲ್ಪಟ್ಟಿತು. ಈ ದೃಷ್ಟಿಯಿಂದ ಲಾರ್ಡ್ ಕಾರ್ನ್‌ವಾಲೀಸ್ ೧೭೯೨ರಲ್ಲಿ ಜಾರಿಗೆ ತಂದ ಭೂಕಂದಾಯ ಸುಧಾರಣೆ ಪ್ರಮುಖವಾದದು. ಲಾರ್ಡ್ ಕಾರ್ನ್‌ವಾಲೀಸ್ ಬಂಗಾಳದಲ್ಲಿ ಜಾರಿಗೆ ತಂದ ಖಾಯಂ ಭೂಕಂದಾಯ ಪದ್ಧತಿಯನ್ನು ಖಾಯಂ ಜಮೀನ್ದಾರಿ ಪದ್ಧತಿ ಅಥವಾ ಖಾಯಂ ಗುತ್ತಿಗೆದಾರಿ ಪದ್ಧತಿ ಎಂದು ಕರೆಯಲಾಗಿದೆ. ಖಾಯಂ ಗುತ್ತಿಗೆದಾರಿ ಪದ್ಧತಿಯನ್ನು ಜಾರಿ ಮಾಡುವಲ್ಲಿ ಕಂದಾಯ ಮಂಡಲಿ ಅಧ್ಯಕ್ಷನಾದ ಸರ್ ಜಾನ್ ಷೋರನ ಪಾತ್ರ ಮುಖ್ಯವಾಗಿದ್ದಿತು. ಜಮೀನ್ದಾರ ಭೂಮಿಯ ಒಡೆತನ ಹೊಂದಬೇಕು. ಅದಕ್ಕೆ ಬದಲಾಗಿ ನಿಗದಿಪಡಿಸಲಾದ ಭೂಕಂದಾಯವನ್ನು ಅವನು ಸರಕಾರಕ್ಕೆ ಸಲ್ಲಿಸಬೇಕು. ಈ ವಾರ್ಷಿಕ ಭೂಮಿಯನ್ನು ಅವನು ತನ್ನ ಮಕ್ಕಳಿಗಾದರೂ ಬಿಡಬಹುದು, ಮಾರಾಟ ಮಾಡಬಹುದು ಅಥವಾ ಅಡವಿಡಬಹುದು ಎಂಬುದು ಸರ್ ಜಾನ್‌ಷೋರನ ಸಲಹೆ. ಇದರ ಪರಿಣಮವಾಗಿ ಲಾರ್ಡ್ ಕಾರ್ನ್‌ವಾಲೀಸ್ ಸರ್ ಜಾನ್‌ಷೋರನ ಸಲಹೆಯನ್ನು ಜಾರಿ ಮಾಡಲು ನಿರ್ಧರಿಸಿ ಜಮೀನ್ದಾರರೊಡನೆ ೧೦ ವರ್ಷಗಳ ಕಾಲದ ಒಂದು ಖಾಯಂ ವ್ಯವಸ್ಥೆ ಮಾಡಿಕೊಂಡನು. ಅದರ ಪ್ರಕಾರ ಜಮೀನ್ದಾರರು ಎಲ್ಲಿಯವರೆಗೂ ತಪ್ಪದೆ ಕಂದಾಯ ಸಲ್ಲಿಸುವರೋ ಅಲ್ಲಿಯವರೆಗೂ ಭೂಒಡೆಯರಾದರು. ಅದು ಅನುವಂಶಿಕವು ಆಯಿತು. ಸ್ವಯಾರ್ಜಿತವಾದ ಭೂಮಿಯ ಉತ್ತಾರಾಧಿಕಾರತ್ವ ಅವನ ಮಕ್ಕಳಿಗೂ ಲಭಿಸುವಂತಾಯಿತು. ಆದರೆ, ಅಲೆಗ್ಸಾಂಡರ್ ರೀಡ್ ಮತ್ತು ಥಾಮಸ್ ಮನ್ರೊ ಖಾಯಂ ಜಮೀನ್ದಾರಿ ವ್ಯವಸ್ಥೆಯನ್ನು ಕಟುಟೀಕೆ ಮಾಡಿದರು. ಈ ವಿಚಾರವನ್ನು ಹೌಸ್ ಆಫ್ ಕಾಮನ್ಸ್ ಸೆಲೆಕ್ಟ್ ಕಮಿಟಿ ಈಸ್ಟ್ ಇಂಡಿಯಾ ಕಂಪನಿಯ ವ್ಯವಹಾರಗಳನ್ನು ವಿಮರ್ಶಿಸಿತು. ಒರಿಸ್ಸಾ, ಬಂಗಾಳ ಮತ್ತು ಉತ್ತರ ಪ್ರದೇಶಗಳಲ್ಲಿ ಜಾರಿಗೆ ತಂದ ಖಾಯಂ ಭೂಕಂದಾಯ ಪದ್ಧತಿಯಲ್ಲಿ ಜಮೀನ್ದಾರ ಸರಕಾರ ಮತ್ತು ರೈತನ ಮಧ್ಯವರ್ತಿಯಾಗಿದ್ದನು. ಇದನ್ನು ವಿರೋಧಿಸಿದ ಥಾಮಸ್ ಮನ್ರೊ ಮತ್ತು ಅಲೆಗ್ಸಾಂಡರ್ ರೀಡ್ ೧೭೯೨ರ ನಂತರ ಮದ್ರಾಸ್ ಪ್ರೆಸಿಡೆನ್ಸಿಯ ವಿವಿಧ ಭಾಗಗಳಲ್ಲಿ ರೈತವಾರಿ ಪದ್ಧತಿಯನ್ನು ಜಾರಿಗೆ ತಂದರು. ಈ ವ್ಯವಸ್ಥೆಯಲ್ಲಿ ರೈತ ಮತ್ತು ಸರಕಾರದ ನಡುವೆ ಜಮೀನ್ದಾರ ಅಥವಾ ಯಾವುದೇ ಮಧ್ಯವರ್ತಿ ಇಲ್ಲವಾದನು. ಇಲ್ಲಿನವರೆಗೂ ಮಧ್ಯವರ್ತಿಯಾಗಿದ್ದುಕೊಂಡು ರಾಜಕುಮಾರನಂತೆ ವರ್ತಿಸುತ್ತಿದ್ದ ಜಮೀನ್ದಾರನ ಅಸ್ತಿತ್ವವನ್ನೆ ಅಲ್ಲಗಳೆಯಲಾಯಿತು. ಅದರಲ್ಲೂ

ಥಾಮಸ್ ಮನ್ರೊ ಖಾಯಂ ಜಮೀನ್ದಾರಿ ವ್ಯವಸ್ಥೆಯ ಕಡುವಿರೋಧಿಯಾಗಿದ್ದನು. ರೈತರಿಂದ ನಿಗದಿತ ತೆರಿಗೆಯನ್ನು ಸರಕಾರವು ಪಡೆಯುವಲ್ಲಿ ಜಮೀನ್ದಾರ ಅಥವಾ ಗುತ್ತಿಗೆದಾರರಾದ ಯಾವುದೇ ಮಧ್ಯವರ್ತಿ ವರ್ಗದ ಅವಶ್ಯಕತೆ ಇಲ್ಲವೆಂಬುದೇ ಅವನ ನಿಲುವಾಗಿದ್ದಿತು.[೨೦] ದಖನ್‌ನಲ್ಲಿ ಜಾರಿಗೆ ಬಂದ ಈ ರೈತವಾರಿ ವ್ಯವಸ್ಥೆಯೂ ಮೈಸೂರು ಸಂಸ್ಥಾನದಲ್ಲಿಯೂ ಕಮೀಷನರ್ ಆಡಳಿತಾವಧಿಯಲ್ಲಿ ಜಾರಿಗೆ ಬಂದಿತು.

ಬಿದನೂರಿನ ೧೮೩೧ರ ದಂಗೆಯ ಪರಿಣಾಮವಾಗಿ ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರ ವನ್ನು ಕಳೆದುಕೊಳ್ಳಲು ಪ್ರಮುಖ ಕಾರಣವಾಯಿತು. ಅಂದಿನ ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಕನು ಬ್ರಿಟಿಶ್ ಸರಕಾರದ ಆಜ್ಞೆಯಂತೆ ೧೮೩೧ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಅಧಿಕಾರದಿಂದ ಇಳಿಸಿದನು. ಅನಂತರ ಬ್ರಿಟಿಶ್‌ರು ಮೈಸೂರನ್ನು ತಮ್ಮ ಅಧಿಕಾರಕ್ಕೆ ಒಳಪಡಿಸಿಕೊಂಡರು. ಹೀಗೆ ೧೮೩೧ ರಿಂದ ೧೮೮೧ರವರೆಗೆ ಮೈಸೂರು ಸಂಸ್ಥಾನವನ್ನು ಬ್ರಿಟಿಶ್ ಕಮೀಷನರ್ ಆಳಿದರು.

ಕಮೀಷನರ್ ಆಡಳಿತ ಅವಧಿಯಲ್ಲಿ ಪ್ರತ್ಯೇಕ ಕಂದಾಯ ಇಲಾಖೆಯನ್ನು ಸ್ಥಾಪಿಸಲಾಯಿತು. ಕೃಷಿಯ ಅಭಿವೃದ್ಧಿಗಾಗಿ ರೈತರಿಗೆ ಸಾಲ ನೀಡುವ ಏರ್ಪಾಡನ್ನು ಮಾಡಲಾಯಿತು. ಭೂಕಂದಾಯ ಆಡಳಿತವನ್ನು ವಿಭಾಗ ಮಟ್ಟದಲ್ಲಿ ವಿಕೇಂದ್ರಿಕರಿಸಲಾಯಿತು. ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು, ತಾಲೂಕುಗಳಲ್ಲಿ ಅಮಲ್ದಾರರು, ಹೋಬಳಿಯಲ್ಲಿ ಶೇಕ್‌ದಾರರಿಗೆ ವಹಿಸಿಕೊಡಲಾಯಿತು. ಗ್ರಾಮಗಳಲ್ಲಿ ಪಟೇಲ ಅಥವಾ ಗೌಡನು ಕಮೀಷನರ ಆಡಳಿತಾವಧಿಯಲ್ಲಿ ಗ್ರಾಮದ ಮುಖ್ಯಸ್ಥ ನಾಗಿದ್ದು, ಕಂದಾಯ ವ್ಯವಸ್ಥೆಯಲ್ಲಿ ಮಧ್ಯವರ್ತಿಯಂತೆ ಕಾರ್ಯನಿರ್ವಹಿಸುತ್ತಿದ್ದನು. ಗ್ರಾಮಗಳ ಭೂಹಿಡುವಳಿಗಳ ದಾಖಲಾತಿ ಮತ್ತು ಕಂದಾಯ ವಸೂಲಿಯ ಕಾರ್ಯವನ್ನು ಶ್ಯಾನುಭೋಗರು ನಿರ್ವಹಿಸುತ್ತಿದ್ದರು. ಪ್ರಮುಖವಾಗಿ ಮಾರ್ಕ್‌ಕಬ್ಬನ್ ಮತ್ತು ಎಲ್. ಬಿ. ಬೌರಿಂಗ್ ಅವರ ಕಾಲದ ಆಡಳಿತಾತ್ಮಕ ಬದಲಾವಣೆಯನ್ನು ಇಲ್ಲಿ ಗಮನಿಸಲಾಗಿದೆ.

ಮಾರ್ಕ್‌ಕಬ್ಬನ್ ೧೮೩೪ - ೧೮೬೧

ಮಾರ್ಕ್‌ಕಬ್ಬನ್ ತನ್ನ ಅಧಿಕಾರಾವಧಿಯಲ್ಲಿ ಭೂ ದಾಖಲೆಗಳಿಗೆ ಸಂಬಂಧಿಸಿದಂತೆ ಒಂದು ವ್ಯವಸ್ಥಿತವಾದ ರೂಪತರಲು ಪ್ರಯತ್ನಿಸಿದ್ದನು. ಈ ಕಾಲದಲ್ಲಿಯೇ ಸರಕಾರಕ್ಕೆ ಸೇರಿದ್ದ ಭೂಮಿಯ

ಸರಹದ್ದುಗಳು, ಭೂಮಿಯ ಗುಣಮಟ್ಟ ಹಾಗೂ ಕೃಷಿ ಉತ್ಪನ್ನದ ಸಂಬಂಧವನ್ನು ಗುರುತಿಸಿದರು. ಕಮೀಷನರ್ ಆಳ್ವಿಕೆಯ ಸಮಯದಲ್ಲಿ ಭೂಹಿಡುವಳಿಗಳು ರೈತ್ವಾರಿಪದ್ಧತಿಯಲ್ಲಿ ಕೃಷಿಗೊಳಪಡುತ್ತಿದ್ದವು. ರೈತ್ವಾರಿಪದ್ಧತಿಯಲ್ಲಿ ಸರಕಾರದ ಭೂಮಿಗೆ ಗೇಣಿದಾರರಾದ ರೈತರು ಕಂದಾಯ ಕಟ್ಟುತ್ತಿದ್ದರು, ಇಲ್ಲವೇ ಬತಾಯಿ ರೂಪದಲ್ಲಿ ತಾವು ಬೆಳೆದ ಬೆಳೆಯಲ್ಲಿ ಗೊತ್ತಾದ ಪಾಲಿನ ಧಾನ್ಯವನ್ನು ಸರಕಾರಕ್ಕೆ ಒಪ್ಪಿಸುತ್ತಿದ್ದರು. ಕಮೀಷನರ್ ಆಳ್ವಿಕೆಯ ಕಾಲದಲ್ಲಿ ಭೂ ಒಡೆತನಕ್ಕೆ ಸಂಬಂಧಪಟ್ಟ ಕಾನೂನುಗಳು ಜಾರಿಗೆ ಬಂದವು. ಹೊಸ ಪದ್ಧತಿಯನ್ನು ಜಾರಿಗೆ ತರುವಾಗ ಮಾರ್ಕ್‌ಕಬ್ಬನ್ ಶಾನುಭೋಗರಿಗೆ ತುಂಬಾ ಪ್ರಾಮುಖ್ಯತೆ ಕೊಟ್ಟನು.[೨೧] ಇವರು ಕಾಲಕಳೆದಂತೆ ರೈತರಿಗೂ, ಸರಕಾರಕ್ಕೂ ನಡುವೆ ಏಜೆಂಟರಾಗಿ ಬೆಳೆದರು. ಹಾಗಾಗಿ ಹೊಸ ಪದ್ಧತಿಯೂ ಹಲವು ನ್ಯೂನತೆಗಳಿಂದ ಕೂಡಿತ್ತು. ರೈತರಿಗೆ ವಾರ್ಷಿಕವಾಗಿ ಪಟ್ಟಾಗಳನ್ನು ಅಥವಾ ಹಕ್ಕುದಾರ ಪತ್ರಗಳನ್ನು ನೀಡುವ ಪದ್ಧತಿಯನ್ನು ಜಾರಿಗೊಳಿಸಲಾಯಿತು. ಅದರಲ್ಲಿ ಭೂಮಿಯ ವರ್ಣನೆ ಕಂದಾಯದ ಮೊತ್ತ ರೈತರು ತೆರಿಗೆ ನೀಡಬೇಕಾದ ಬಗ್ಗೆ ವಿವರವಿರುತ್ತಿತ್ತು. ಇಂತಹ ಹಕ್ಕು ಪತ್ರಗಳಿಂದ ರೈತರು ಪ್ರತಿವರ್ಷವೂ ಕಂದಾಯ ಪಾವತಿಮಾಡಿದ್ದಾರೆಯೇ ಎಂಬುದರ ಮೇಲೆ ನೀಡಲಾಗುತ್ತಿತ್ತು. ಕೆಲವು ದೊಡ್ಡ ಭೂಹಿಡುವಳಿ ದಾರರು ಜಿಲ್ಲೆಯ ಸೂಪರಿಂಟೆಂಡೆಂಟ್‌ರ ಅನುಮೋದನೆಯ ಮೇರೆಗೆ ಐದು ವರ್ಷದ ಕಂದಾಯವನ್ನು ಒಂದೇ ಬಾರಿ ಪಾವತಿಮಾಡಿ ಹಕ್ಕು ಪತ್ರಗಳನ್ನು ಪಡೆಯುತ್ತಿದ್ದರು.

ಹೀಗೆ ಪಟ್ಟಾ ಪಡೆದ ರೈತರ ನೋಂದಣೆಯನ್ನು ಶಾನುಭೋಗರು ತಮ್ಮ ರಿಜಿಸ್ಟರುಗಳಲ್ಲಿ ದಾಖಲಿಸಿಕೊಳ್ಳುತ್ತಿದ್ದರು. ಆದರೂ ಮಾರ್ಕ್‌ಕಬ್ಬನ್‌ನ ಹೊಸ ಯೋಜನೆಗಳು ಹೆಚ್ಚು ಯಶಸ್ವಿ ಯಾಗಲಿಲ್ಲ. ಏಕೆಂದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಕಂದಾಯದ ದರ ವಿಪರೀತ ಹೆಚ್ಚಾಗಿತ್ತು. ದರಗಳು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿದ್ದವು. ಸರಕಾರವು ಕೃಷಿ ಭೂಮಿಯ ಒಡೆತನ ಹೊಂದಿದ್ದು, ಮರಣ ಹೊಂದಿದ್ದ ಅಥವಾ ತೆರಿಗೆ ನೀಡಲು ಸಾಧ್ಯವಾಗದೇ ಇದ್ದಂತಹ ವ್ಯಕ್ತಿಗಳ ಭೂ ಹಿಡುವಳಿಗಳನ್ನು ಬೇರೆ ರೈತರಿಗೆ ಕೃಷಿಗೊಳಪಡಿಸಲು ಒತ್ತಾಯಿಸುತ್ತಿದ್ದಿತು.[೨೨]

ಹಾಗೆ ಭತ್ತವನ್ನು ಬೆಳೆಯುವ ಗದ್ದೆಗಳನ್ನು ರೈತರು ಸರಿಯಾದ ರೀತಿಯಲ್ಲಿ ಕೃಷಿಗೊಳಪಡಿಸದೇ ಇದ್ದ ಸಂದರ್ಭದಲ್ಲಿ ಸರಕಾರವೇ ಅಂತಹ ಭೂಮಿಯನ್ನು ವಾಪಸು ಪಡೆಯುತ್ತಿದ್ದಿತು. ಕಬ್ಬನ್ನನ ಆಡಳಿತಾವಧಿಯಲ್ಲಿ ರೈತರಿಗೆ ಪರಿಶೀಲನೆಯ ನಂತರ ಸೂಚನೆ ನೀಡಿ ಬದಲಾವಣೆ ಮಾಡುವ ಸಂದರ್ಭದಲ್ಲಿ ಕೆಲವು ಸಮಸ್ಯೆಗಳನ್ನು ವಿಚಾರಿಸಿ ಪ್ರಶ್ನಿಸುವ ಮೂಲಕ ಅಂಕಿಸಂಖ್ಯೆಗಳನ್ನು

ತಯಾರಿಸುತ್ತಿದ್ದರು. ಕಬ್ಬನ್ನನ ಆಡಳಿತಾವಧಿಯಲ್ಲಿ ರೈತರ ಸ್ಥಿತಿಯಲ್ಲಿ ಗಮನಾರ್ಹವಾದ ಬದಲಾವಣೆಯನ್ನು ಚಿತ್ರದುರ್ಗ ವಿಭಾಗದ ಈ ಅಂಕಿ ಅಂಶಗಳ ತಖ್ತೆಯಿಂದ ತಿಳಿಯಬಹುದು.[೭೩]

ಕ್ರ. ಸಂ.	ವರ್ಷ	ನಿಜವಾದ ಭೂ ಹಿಡುವಳಿದಾರರು	ವ್ಯವಸಾಯ ಮಾಡದೇ ಇದ್ದ ಭೂಹಿಡುವಳಿದಾರರು	ನೇಗಿಲುಗಳು
೧.	೧೮೩೪-೩೫	೫೫.೪೫೭	೨೨.೭೯೨	೬೧.೯೭೩
೨.	೧೮೪೦-೪೧೬.	೬೬,೧೧೧	೪೦.೧೫೬	೭೧.೮೮೩
	ವೈಯಕ್ತಿಕವಾಗಿ ಹೆಚ್ಚಾಗುತ್ತ ಇರುವ	೧೦.೬೫೪	೧೭.೩೬೪	೦೯.೯೧೦
	ವೈಯಕ್ತಿಕವಾಗಿ ಶೇಕಡಾವಾರು ಘಟಕವೇ ಕಡಿಮೆಯಾಗುತ್ತ ಇತ್ತು	೧೯%	೭೬%	೧೬%

ಈ ಪಟ್ಟಿಯಿಂದ ತಿಳಿದು ಬಂದ ಫಲಿತಾಂಶವೆಂದರೆ ಕೃಷಿಯೇತರ ವ್ಯಕ್ತಿಗಳ ಸಂಖ್ಯೆಯಲ್ಲಿ ಅಧಿಕ ಹೆಚ್ಚಳವಾಯಿತು. ಹೇಗೆಂದರೆ ಪ್ರಭಾವಿ ರೈತರು, ಬಡ ರೈತರು ನೀಡುತ್ತಿದ್ದ ತೆರಿಗೆಗಿಂತ ಕಡಿಮೆ ತೆರಿಗೆಯನ್ನು ನೀಡಿ ಉತ್ತಮ ಭೂಮಿಗಳನ್ನು ಪಡೆದರು. ಹಾಗೆಯೆ ಸಾರ್ವಜನಿಕ ಸೇವಕರು ತಮ್ಮ ಹೆಸರಿನಲ್ಲಿ ಉತ್ತಮ ಭೂ ಹಿಡುವಳಿಗಳನ್ನು ಪಡೆದರು, ಇಲ್ಲವೇ ತಮ್ಮ ಬಂಧುಗಳ ಹೆಸರಿನಲ್ಲಿ ನೋಂದಾಯಿಸಿದರು.

ಲೂಯಿಸ್ ಬೆಂಥಾಮ್ ಬೌರಿಂಗ್ ೧೮೬೨-೧೮೭೦

ಲೂಯಿ ಬೆಂಥಾಮ್ ಬೌರಿಂಗ್ ಕಾಲದಲ್ಲಿಯೇ ಇನಾಂ ಕಮೀಷನ್ ಜಾರಿಗೆ ತಂದು ಇನಾಂ ಭೂಹಿಡುವಳಿಗಳನ್ನು ಸರಕಾರದ ಅಧೀನಕ್ಕೆ ಒಳಪಡಿಸಲಾಯಿತು. ಮುಂಬೈ ಪ್ರಾಂತ್ಯದ ಕಂದಾಯ ಪದ್ಧತಿಯನ್ನು ಅನುಸರಿಸಿ ೧೮೬೨ರಲ್ಲಿ ಬೌರಿಂಗನು ಭೂಮಿಯ ಮೋಜಿಣಿ ಮತ್ತು ಕಂದಾಯ (ಸರ್ವೇ ಅಂಡ್ ಸೆಟ್ಲಮೆಂಟ್) ಇಲಾಖೆಯನ್ನು ಜಾರಿಗೆ ತಂದನು. ಮೂವತ್ತು ವರ್ಷಗಳ ಸರಾಸರಿ ಆದಾಯವನ್ನು ಪರಿಗಣಿಸಿ ಭೂಕಂದಾಯವನ್ನು ನಿಷ್ಕರ್ಷೆ ಮಾಡುವ ಪದ್ಧತಿಯನ್ನು ಜಾರಿಗೆ ತಂದನು. ಅದೇ ರೀತಿ ಭೂಹಿಡುವಳಿಗಳನ್ನು ನೋಂದಾಣಿ ಮಾಡಲು ತಾಲೂಕುಗಳಲ್ಲಿ ಸಬ್ ರಿಜಿಸ್ಟ್ರಾರ್, ಜಿಲ್ಲಾ ಕೇಂದ್ರಗಳಲ್ಲಿ ಡೆಪ್ಯುಟಿ ರಿಜಿಸ್ಟ್ರಾರ್‌ಗಳನ್ನು ನೇಮಿಸಲಾಯಿತು. ಕಂದಾಯ ವ್ಯವಸ್ಥೆಯಲ್ಲಾಗುವ ವ್ಯತ್ಯಾಸಗಳಿಗೆ ಶಾನುಭೋಗರು ಮತ್ತು ಪಟೇಲರೇ ಕಾರಣವೆಂದು ಬೌರಿಂಗ್ ಗಮನಿಸಿದ್ದನು.[೭೪]

ಅಂದಿನ ಬೃಹತ್ ಪ್ರಮಾಣದ ಆರ್ಥಿಕ ದುರ್ಬಳಕೆ ಆಗುತ್ತಿರುವುದಕ್ಕೆ ಕಂದಾಯದ ದರಗಳಲ್ಲಿದ್ದ ಅಸಂಖ್ಯಾತ ವ್ಯತ್ಯಾಸಗಳೇ ಕಾರಣವಾಗಿದ್ದವು. ಪ್ರಬಲ ಭೂಹಿಡುವಳಿದಾರರು ಸುಲಭವಾಗಿ ಶಾನುಭೋಗರಿಗೆ ಲಂಚ ಕೊಟ್ಟು ಹೆಚ್ಚು ಕಂದಾಯ ರಿಯಾಯತಿಗಳನ್ನು ಪಡೆದುಕೊಳ್ಳುತ್ತಿದ್ದರು.

ಬೌರಿಂಗ್ ಮಾಡಿದ ಸರ್ವೆ ಮತ್ತು ಸೆಟ್ಲಮೆಂಟ್ ಪ್ರಕಾರ ಕಂದಾಯದ ದರಗಳನ್ನು ಮೊದಲ ಮೂವತ್ತು ವರ್ಷಗಳಿಗೆ ಯಾವುದೇ ಏರಿಕೆ ಇಲ್ಲದಂತೆ ನಿಗದಿಪಡಿಸಲಾಯಿತು. ಪರಿಷ್ಕೃತ ಸರ್ವೆಮಾಡಿದಾಗ ಭಾಗಾಯ್ತು ಭೂಹಿಡುವಳಿಗಳನ್ನು ಮರುವರ್ಗೀಕರಣಗೊಳಿಸಲಾಗಿತ್ತು. ಚಿತ್ರದುರ್ಗ ಜಿಲ್ಲೆಯಲ್ಲಿ ವಿಧಿಸಲಾದ ಕಂದಾಯ ದರಕ್ಕೆ ನಿವ್ವಳ ಅಥವಾ ಒಟ್ಟು ಬೆಳೆಯ ಭಾಗವು ಆಧಾರವಾಗಿರಲಿಲ್ಲ. ಸರ್ವೆಸೆಟ್ಲಮೆಂಟಿನ ಪ್ರಮುಖ ಉದ್ದೇಶ ಕಂದಾಯದ ಭಾಗವನ್ನು ಭೂಹಿಡುವಳಿಗಳ ಉತ್ಪಾದನೆಯನ್ನು ಗಮನದಲ್ಲಿಟ್ಟುಕೊಂಡು ಆಯಾಯ ತಾಲೂಕಿನ ಎಲ್ಲಾ ಭೂಹಿಡುವಳಿಗಳ ಮೇಲೆ ಸಮಾನವಾಗಿ ಹಂಚುವುದಾಗಿತ್ತು. ಪ್ರತಿಯೊಂದು ಭೂಹಿಡುವಳಿಗಳನ್ನು ಸಮಾನ ಎಕರೆಯ ಅಳತೆಯ ಭಾಗಗಳನ್ನಾಗಿ ಒಡೆಯಲಾಗಿತ್ತು. ಪ್ರತಿಯೊಂದು ತಾಲೂಕಿನ ಎಲ್ಲಾ ಭಾಗಗಳ ಮಣ್ಣನ್ನು ಪರೀಕ್ಷಿಸಿ ನಿರ್ಧರಿಸಿದ ನಂತರ ಪ್ರಸ್ತುತ ಭೂಹಿಡುವಳಿಗಳ ಮೇಲೆ ಸರಾಸರಿ ಮೌಲ್ಯವನ್ನು ಕಂಡುಹಿಡಿಯಲಾಗುತ್ತಿತ್ತು. ಅತೀ ಕ್ಲಿಷ್ಟಕರವಾದ ಈ ಪ್ರಕ್ರಿಯೆ ಮುಗಿದ ನಂತರ ಗ್ರಾಮದ ಎಲ್ಲಾ ಭೂಹಿಡುವಳಿಗಳನ್ನು ವರ್ಗೀಕರಿಸಲಾಗಿತ್ತು. ಹೀಗೆ ಇಡೀ ತಾಲೂಕನ್ನು ಕಂದಾಯ ವ್ಯವಸ್ಥೆಗೆ ಸಜ್ಜುಗೊಳಿಸಲಾಗಿತ್ತು. ನಂತರ ತಾಲೂಕಿನ ಹಳ್ಳಿಗಳನ್ನು ವರ್ಗೀಕರಿಸಿ ಏಕರೂಪದ ಕಂದಾಯ ದರವನ್ನು ನಿಗದಿಪಡಿಸಲಾಗಿತ್ತು. ವಾಯುಗುಣ, ಮಾರುಕಟ್ಟೆಯಿಂದ ಇರುವ ದೂರ, ಕೃಷಿಕರ ಪರಿಸ್ಥಿತಿ, ಇಂದಿನ ಕಂದಾಯ ಈ ಎಲ್ಲಾ ಅಂಶಗಳನ್ನು ಪರಿಗಣಿಸಲಾಗಿತ್ತು. ಸರ್ವೇಸಟ್ಲೆಮೆಂಟ್ ಅಧಿಕಾರಿಯು ಹೊಲ, ಗದ್ದೆ, ತೋಟಗಳು ಸೇರಿ ಹಲವು ವರ್ಗಗಳಿಗೆ ಗರಿಷ್ಟ ದರವನ್ನು ನಿಗದಿಪಡಿಸಲಾಗಿತ್ತು. ೧೮೬೪-೬೫ರಲ್ಲಿ ಚಿತ್ರದುರ್ಗದ ಉತ್ತರಭಾಗಗಳಲ್ಲಿ ಅಂದರೆ ಹರಿಹರ ಮತ್ತು ದಾವಣಗೆರೆಯಲ್ಲಿ ಸರ್ವೇ ಪ್ರಾರಂಭಿಸಲಾಯಿತು.[೭೫] ನಂತರ ಅದನ್ನು ದಕ್ಷಿಣ ಮತ್ತು ಪಶ್ಚಿಮ ಭಾಗಗಳಿಗೆ ವಿಸ್ತರಿಸಲಾಯಿತು. ಹಿರಿಯೂರು ತಾಲೂಕಿನ ಮೂರನೆಯ ವರ್ಗಕ್ಕೆ ಎಕರೆಗೆ ಕೇವಲ ಎಂಟಾಣೆ ನಿಗದಿಯಾಗಿತ್ತು. ಹಿರಿಯೂರು ತಾಲೂಕಿನ ಸರಾಸರಿ ನಿಗದಿ ೦-೩-೦೪ ಆಗಿತ್ತು.[೭೬]

ಕಮೀಷನರ್ ಆಡಳಿತಾವಧಿಯಲ್ಲಿ ಚಿತ್ರದುರ್ಗ ವಿಭಾಗದಲ್ಲಿದ್ದ ಪ್ರಮುಖ ತಾಲೂಕುಗಳೆಂದರೆ ಚಿತ್ರದುರ್ಗ, ದಾವಣಗೆರೆ, ದೊಡ್ಡೇರಿ, ಹರಿಹರ, ಕಣಕುಪ್ಪ, ಮೊಳಕಾಲ್ಮೂರು, ಹೊಸದುರ್ಗ,

ಹಿರಿಯೂರು, ಬೂದಿಹಾಳು, ಮತ್ತು ಪಾವಗಡಗಳಾಗಿದ್ದವು. ಚಿತ್ರದುರ್ಗ ವಿಭಾಗದಲ್ಲಿ ಕಮೀಷನ್‌ರ ಆಡಳಿತಾವಧಿಯಲ್ಲಿಯೂ ಖುಷ್ಕಿ, ತರಿ ಮತ್ತು ಭಾಗಾಯ್ತು ಭೂಹಿಡುವಳಿಗಳಿದ್ದವು. ಅಂದಿನ ಕೃಷಿ ಉತ್ಪಾದನೆಯಲ್ಲಿ ತೊಡಗಿದ್ದ ಪ್ರಮುಖ ಸಮುದಾಯಗಳೆಂದರೆ ಒಕ್ಕಲಿಗರು ೨೨.೬, ಬೇಡರು ೨೨.೩, ಗೊಲ್ಲರು ೧೧.೨, ಸಾಧರು ೧೦.೩, ಲಿಂಗಾಯತರು ೧೦.೧, ಕುರುಬರು ೬.೪, ಉಪ್ಪಾರರು ೩.೦, ಇತರರು ೭.೦ ಯಷ್ಟು ಪ್ರಮಾಣದಲ್ಲಿ ಈ ಸಮುದಾಯಗಳು ಕೃಷಿ ಉತ್ಪಾದನೆಯಲ್ಲಿ ತೊಡಗಿರುವುದು ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ.[೭೭] ಸಾಮಾನ್ಯವಾಗಿ ಚಿತ್ರದುರ್ಗ ವಿಭಾಗದಲ್ಲಿ ಈ ಕಾಲಾವಧಿಯಲ್ಲಿ ಖುಷ್ಕಿ ಹಿಡುವಳಿಗಳಲ್ಲಿ ರಾಗಿ, ಜೋಳ, ಹತ್ತಿ, ಸವಣೆ, ತೊಗರಿ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರು. ತರಿ ಹಿಡುವಳಿಗಳಲ್ಲಿ ಭತ್ತ, ಕಬ್ಬು ಮುಖ್ಯ ಬೆಳೆಯಾಗಿದ್ದವು. ಖುಷ್ಕಿ ಪ್ರದೇಶದಲ್ಲಿಯೇ ತೆಂಗಿನ ತೋಟದ ಬೆಳೆಯನ್ನು ಬೆಳೆಯಲು ಪ್ರಾರಂಭಿಸಿರುವುದು ಕಂಡುಬರುತ್ತದೆ. ೧೮೬೪-೬೫ರಲ್ಲಿ ಚಿತ್ರದುರ್ಗ ವಿಭಾಗದಿಂದ ೭,೫೯,೬೬೭ ರೂ.ಗಳಷ್ಟು ಕಂದಾಯವನ್ನು ಸಂಗ್ರಹಿಸಿರುವುದು ಕಂಡುಬರುತ್ತದೆ. ಅದೇ ಹತ್ತು ವರ್ಷಗಳ ನಂತರ ೧೮೭೩-೭೪ರಲ್ಲಿ ೭,೫೫,೬೨೩ ರೂ.ಗಳಷ್ಟು ಕಂದಾಯವನ್ನು ಸಂಗ್ರಹಿಸಿದ್ದಾರೆ.[೭೮] ಕಮೀಷನರ್ ಆಡಳಿತಾವಧಿಯಲ್ಲಿ ವಾರ್ಷಿಕ ಕಂದಾಯದ ಏರಿಕೆ ಹತ್ತು ವರ್ಷದ ನಂತರವೂ ೪,೦೪೪ ರೂ.ಗಳಷ್ಟು ಕಡಿಮೆಯಾಗಿರುವುದು ಕಂಡುಬರುತ್ತದೆ. ಇದಕ್ಕೆ ಸ್ಪಷ್ಟವಾದ ಕಾರಣ ಮಾರ್ಕ್‌ಕಬ್ಬನ್‌ನ ಕಾಲಾವಧಿಯಲ್ಲಿ ಜಾರಿಗೆ ಬಂದ ರೈತವಾರಿ ಪದ್ಧತಿಯಿಂದಲೂ, ನಂತರ [illegible]ಬೌರಿಂಗ್‌ರವರು ೩೦ ವರ್ಷಗಳ ಸರಾಸರಿ ಆದಾಯವನ್ನು ಪರಿಗಣಿಸಿ ಭೂಕಂದಾಯವನ್ನು ನಿಷ್ಕರ್ಷೆ ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದಿದ್ದನು. ಇದರಿಂದಾಗಿ ಕಂದಾಯದ ದರ ಪದೇ ಪದೇ ಬದಲಾಗುತ್ತಿರಲಿಲ್ಲ ಎಂಬುದು ತಿಳಿಯುತ್ತದೆ. ಈ ದೃಷ್ಟಿಯಿಂದ ಅಂದಿನ ಕಂದಾಯ ವ್ಯವಸ್ಥೆಯಲ್ಲಿ ಗ್ರಾಮ, ಹೋಬಳಿ, ತಾಲೂಕು ಮಟ್ಟದ ಅಧಿಕಾರಿಗಳು ನಿರ್ವಹಿಸಿದ ಪಾತ್ರವನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ.

ಪಟೇಲರು : ಅಂದಿನ ಆಡಳಿತ ವ್ಯವಸ್ಥೆಯಲ್ಲಿ ಮುಖ್ಯವಾದ ಪಾತ್ರವಹಿಸಿದ ಪಟೇಲರು ಸರ್ವೇ ಇಲಾಖೆಯಿಂದ ಅಂಗೀಕೃತವಾದ ಪ್ರತಿಯೊಂದು ಗ್ರಾಮಕ್ಕೂ ಒಬ್ಬೊಬ್ಬ ಪಟೇಲರಿದ್ದರು. ಆದರೆ ಸರ್ವೇ ಆಗುವುದಕ್ಕಿಂತ ಮುಂಚೆ ಒಂದೇ ಗ್ರಾಮದಲ್ಲಿ ಅನೇಕ 'ಮಜರೆ' ಗಳಿದ್ದು ಪ್ರತಿಯೊಂದಕ್ಕೂ ಒಬ್ಬೊಬ್ಬ ಪಟೇಲನಿದ್ದಲ್ಲಿ ಸದರೀ ಮಜರೆಗಳೆಲ್ಲವನ್ನು ಸರ್ವೆ ಇಲಾಖೆಯವರು ಒಟ್ಟುಗೂಡಿಸಿದರೂ ಸಹಾ ಸದರಿ ಪಟೇಲರೆಲ್ಲರೂ ಆಯಾ ಮಜರೆಯ ಪಟೇಲರಾಗಿಯೇ ಇರಲು ಅವಕಾಶವಿತ್ತು.[೭೯]

ಒಂದೇ ಗ್ರಾಮಕ್ಕೆ ಇಬ್ಬರೂ ಹಕ್ಕುದಾರರಿದ್ದರೆ ಡೆಪ್ಯುಟಿ ಕಮೀಷನರವರು ರೆವಿನ್ಯೂ ಕೆಲಸಕ್ಕೆ ಒಬ್ಬನು, ಪೋಲಿಸ್ ಕೆಲಸಕ್ಕೆ ಒಬ್ಬನು ಈ ರೀತಿ ಇಬ್ಬರು ಪಟೇಲರನ್ನು ನೇಮಕ ಮಾಡಿ ಅವರವರ ಹಕ್ಕುಗಳಿಗನುಗುಣವಾಗಿ ತೆರಿಗೆ ಹಂಚಿಕೆಯನ್ನು ಅವರಿಬ್ಬರಿಗೂ ವಿಭಾಗಿಸಬಹುದಾಗಿತ್ತು. ಆದರೆ ಪಟೇಲರ ಕೆಲಸಕ್ಕೆ ಅನುಭವದ ಜೊತೆಗೆ ಗ್ರಾಮವಾಸಿಗಳಾಗಿಯೂ ಸದರಿ ಗ್ರಾಮದಲ್ಲಿ ಭೂಮಿ ಇದ್ದವರು ಮಾತ್ರ ಪಟೇಲರಾಗಲು ಅವಕಾಶವಿತ್ತು. ಒಂದೇ ಕುಟುಂಬಕ್ಕೆ ಸೇರಿದವರು ಪಟೇಲಗಿರಿ ಮತ್ತು ಶ್ಯಾನುಭೋಗಿ ಕೆಲಸಗಳೆರಡನ್ನು ಮಾಡಬಹುದಾಗಿತ್ತು. ಚಿತ್ರದುರ್ಗ ಜಿಲ್ಲೆಯಲ್ಲಿಯೇ ಇದ್ದ ವಿಶೇಷ ತರಗತಿಯ ಪಟೇಲರನ್ನು ಮೊಖ್ತೇಸರ್ ಪಟೇಲರು, ನಾಡ ಪಟೇಲರು ಮತ್ತು ಬಾಗಿಟಾಣ ಪಟೇಲರು ಎಂದು ಕರೆಯುತ್ತಿದ್ದರು. ಪಟೇಲರು ಗ್ರಾಮಗಳ ಜನರ ಕಷ್ಟಸುಖಗಳು ತಮ್ಮದೆಂದು ಭಾವಿಸಿದ್ದರು ಒಂದು ಗ್ರಾಮಕ್ಕೂ, ತಾಲೂಕಿಗೂ, ಜಿಲ್ಲೆಗೂ ನಿಕಟವಾದ ಸಂಬಂಧವನ್ನು ಬೆಳೆಸಿಕೊಡುವುದು ಇವರ ಮುಖ್ಯ ಕರ್ತವ್ಯವಾಗಿತ್ತು. ಜೊತೆಗೆ ಗ್ರಾಮದ ಕಂದಾಯವನ್ನು ಸಂಗ್ರಹಿಸಿ ಸರಕಾರಕ್ಕೆ ಸಲ್ಲಿಸುತ್ತಿದ್ದರು.

ಪಟೇಲರು ತನಗೆ ಕೊಡಲ್ಪಟ್ಟ ಗ್ರಾಮದ ನಕಾಶೆಯನ್ನು ಭದ್ರವಾಗಿಟ್ಟುಕೊಂಡು ತಾಲೂಕು ಮತ್ತು ಗ್ರಾಮದ ಜಮಾಬಂದಿಗೆ ಅಧಿಕಾರಿಗಳು ಬಂದಾಗ ಅದನ್ನು ತಮ್ಮ ಸಂಗಡ ತೆಗೆದುಕೊಂಡು ಹೋಗುತ್ತಿದ್ದರು. ಸರಕಾರಿ ಕೆಲಸದ ಮೇಲೆ ಗ್ರಾಮಕ್ಕೆ ಬರುವ ಅಧಿಕಾರಿಗಳು ಕೇಳಿದಾಗ ನಕಾಶೆಯನ್ನು ಹಾಜರುಪಡಿಸುತ್ತಿದ್ದರು. ಸದರಿ ಅಧಿಕಾರಿಗಳು ಗ್ರಾಮವನ್ನು ಬಿಟ್ಟು ಹೋಗುವುದಕ್ಕೆ ಮುಂಚೆ ಅದನ್ನು ವಾಪಸ್ಸು ಪಡೆಯುತ್ತಿದ್ದರು.

ಹಾಗೆಯೇ ಪ್ರತಿಯೊಬ್ಬ ಭೂಹಿಡುವಳಿದಾರನು ತನ್ನ ಭೂಹಿಡುವಳಿಯ ಬಾಂದುಗಳ ಸಂರಕ್ಷಣೆ ಮತ್ತು ಅವುಗಳ ದುರಸ್ತಿಗೂ ಜವಾಬ್ದಾರರಾಗಿರುತ್ತಿದ್ದರು. ಅವುಗಳನ್ನು ಬದಲಾಯಿಸಬೇಕಾದ ಅಥವಾ ತೆಗೆದು ಹಾಕಬೇಕಾದ ಸಂದರ್ಭಗಳಲ್ಲಿ ರೆವಿನ್ಯೂ ಅಧಿಕಾರಿಗಳಿಂದ ನ್ಯಾಯವಾಗಿ ಮಾಡಲ್ಪಟ್ಟ ಖರ್ಚನ್ನು ಕೊಡಬೇಕಾಗಿತ್ತು. ಗ್ರಾಮದ ಎಲ್ಲೆಯ ಗುರುತುಗಳನ್ನು ನಾಶಪಡಿಸುವುದನ್ನಾಗಲಿ ಬಗರ್ ಹುಕುಂ ಬದಲಾಯಿಸುವುದನ್ನಾಗಲಿ ಮಾಡದಂತೆ ಪಟೇಲರು ನೋಡಿಕೊಳ್ಳುತ್ತಿದ್ದರು.[೮೦] ಸಾಗುವಳಿ ಮಾಡಲ್ಪಡದ ಸರಕಾರಿ ಬಂಜರು ಜಮೀನುಗಳ ಬಾಂದುಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ನೋಡಿಕೊಳ್ಳುತ್ತಿದ್ದರು. ಭೂಹಿಡುವಳಿಗಳ ಬಾಂದುಗಳ ರಿಪೇರಿ ಬಗ್ಗೆ ಹಣವನ್ನು ಪಟೇಲರು ಕೇಳಬಹುದಾಗಿತ್ತು. ಲ್ಯಾಂಡ್ ರೆವಿನ್ಯೂ ನಿಬಂಧನೆಗಳ ಪೈಕಿ ೮೦ ಮತ್ತು ೮೧ನೇ ನಿಬಂಧನೆಗಳಲ್ಲಿ

ನೀಡಬಹುದಾದ ಮೊತ್ತ ಮಂಜೂರಾಗುತ್ತಿತ್ತು. ಜೊತೆಗೆ ಸರಕಾರಿ ಬಂಜರು ಜಮೀನಿನ ಪ್ರತಿ ಸಾವಿರ ಎಕರೆಗಳಿಗೆ ಶೇ.೧೦ ರೂ.ಗಳಂತೆ ಜಮೀನುಗಳ ಹುಲುಬನ್ನಿಯನ್ನು ವಸೂಲಿ ಮಾಡಿ ಸರಕಾರಕ್ಕೆ ಪಾವತಿಸುತ್ತಿದ್ದರು.[೮೧]

ಶ್ಯಾನುಭೋಗರು : ಗ್ರಾಮಾಂತರ ಪ್ರದೇಶದಲ್ಲಿ ಶ್ಯಾನುಭೋಗರು ಕಂದಾಯ ಅಧಿಕಾರಿಗಳಾಗಿದ್ದು, ಬ್ರಾಹ್ಮಣ ಸಮುದಾಯದಿಂದ ಬಂದ ವ್ಯಕ್ತಿಗಳಾಗಿರುತ್ತಿದ್ದರು. ಇವರು ಸಾಮಾನ್ಯವಾಗಿ ಗ್ರಾಮಮಟ್ಟದ ಕಂದಾಯಾಧಿಕಾರಿಗಳಾಗಿ ಪ್ರತಿವರ್ಷವೂ ಗ್ರಾಮಮಟ್ಟದಲ್ಲಿನ ರೈತರ ಸಮ್ಮುಖದಲ್ಲಿ ವಾರ್ಷಿಕ ಯೋಜನೆಯನ್ನು ತಯಾರಿಸುತ್ತಿದ್ದರು.[೮೨] ಶ್ಯಾನುಭೋಗರು ಕಂದಾಯ ಭೂಮಿಗೆ ನಿರ್ದಿಷ್ಟ ಪಡಿಸಿದ ಬೆಲೆಯನ್ನು ಗೊತ್ತುಪಡಿಸುತ್ತಿದ್ದರು. ಇದರಿಂದ ರೈತರು ಭೂಮಿಯನ್ನು ಕಡ್ಡಾಯವಾಗಿ ಉಳುಮೆ ಮಾಡಬೇಕಾಗುತ್ತಿತ್ತು. ಗ್ರಾಮದ ಲೆಕ್ಕಪತ್ರಗಳನ್ನು ಇಡುವುದು, ಗ್ರಾಮದ ನಕ್ಷೆಯನ್ನು ತಯಾರಿಸುವುದು, ಬೆಳೆಗಳ ಬಿತ್ತನೆ ಪ್ರದೇಶ ಮತ್ತು ಇಳುವರಿ ಮುಂತಾದ ವಿವರಗಳನ್ನು ರಿಜಿಸ್ಟಾರುಗಳಲ್ಲಿ ದಾಖಲಿಸಿಕೊಳ್ಳುವುದು, ಕೃಷಿ ಭೂಮಿಯ ಎಲ್ಲೆಗಳನ್ನು ನಾಶಪಡಿಸುವ ಇಲ್ಲವೆ ತೆಗೆದುಹಾಕುವುದನ್ನು ತಡೆಯುವುದು ಅವರ ಕರ್ತವ್ಯಗಳಾಗಿದ್ದವು.[೮೩]

ಶ್ಯಾನುಭೋಗರು ತಾವು ವಸೂಲಿ ಮಾಡಿದ ಕಂದಾಯವನ್ನು ಭದ್ರವಾಗಿಟ್ಟುಕೊಂಡಿರಬೇಕಿತ್ತು. ಲ್ಯಾಂಡ್ ರೆವಿನ್ಯೂ ನಿಬಂಧನೆಗಳಲ್ಲಿ ವಿಧಿಸಿರುವ ನಿಯಮಕ್ಕನುಸಾರವಾಗಿ ಅವನು ಕಂದಾಯವನ್ನು ವಸೂಲಿ ಮಾಡಿ ಅದಕ್ಕೆ ರಸೀದಿಯನ್ನು ಕೊಟ್ಟು ಕಂದಾಯಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ತಾಲೂಕು ಕಛೇರಿಗೆ ತಲುಪಿಸಬೇಕಾಗಿರುತ್ತಿತ್ತು.[೮೪]

ಚಿತ್ರದುರ್ಗ ಪ್ರದೇಶದ ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಭಾರಿ ಸಂಖ್ಯೆಯ ಪಟೇಲರು ಮತ್ತು ಶ್ಯಾನುಭೋಗರುಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಗಮನಿಸಿದರೆ ಇದರಲ್ಲಿ ಸಾಮಾನ್ಯವಾಗಿ ಶ್ಯಾನುಭೋಗರಿಗೆ ಓದು, ಬರಹ ಗೊತ್ತಿದ್ದು, ಕಂದಾಯ ಇಲಾಖೆಯ ಆಡಳಿತದಲ್ಲಿ ನಿಪುಣರಾಗಿರುತ್ತಿದ್ದರು. ಗ್ರಾಮದ ಮುಖಂಡರಾಗಿದ್ದ ಪಟೇಲರಲ್ಲಿ ಬಹುಸಂಖ್ಯಾತರು ಓದು, ಬರಹ ಕಲಿತವರಾಗಿದ್ದರು. ಸುಮಾರು ೪೮ ಜನರಿಗೆ ಸಹಿ ಮಾಡಲು ಬಂದರೆ ಓದಲು ಬರುತ್ತಿರಲಿಲ್ಲ. ೧೭ ಜನರಿಗೆ ಓದು, ಬರಹದ ಜೊತೆಗೆ ಸಹಿ ಮಾಡಲು ಸಹ ಬರುತ್ತಿರಲಿಲ್ಲ. ಅಂದರೆ ಗ್ರಾಮಗಳಲ್ಲಿನ ಪ್ರಭಾವಿ ಭೂಮಾಲೀಕರು ಅವಿದ್ಯಾವಂತರಾಗಿದ್ದರು.[೮೫]

ಚಿತ್ರದುರ್ಗ ವಿಭಾಗದಲ್ಲಿ ೧೮೭೪ರಲ್ಲಿದ್ದ ಪಟೇಲರು ಮತ್ತು ಶ್ಯಾನುಭೋಗರು

ತಾಲೂಕುಗಳು	ಓದು, ಬರಹ ಗೊತ್ತಿರುವ	ಸಹಿ ಮಾಡಲು ಮಾತ್ರ ಬರುವ	ಸಹಿ ಮಾಡಲು ಬರದ
೧. ಚಿತ್ರದುರ್ಗ	೧೬೦	೧೦	೦೨
೨. ಚಳ್ಳಕೆರೆ	೧೫೪	೦೨	೦೦
೩. ಹಿರಿಯೂರು	೧೩೬	೦೬	೦೧
೪. ಹೊಳಲ್ಕೆರೆ	೧೮೮	೦೦	೦೦
೫. ದಾವಣಗೆರೆ	೧೫೬	೦೦	೦೨
೬. ಮೊಳಕಾಲ್ಮೂರು	೦೮೭	೦೨	೦೪
೭. ಜಗಳೂರು	೧೫೮	೦೮	೦೩
೮. ಹೊಸದುರ್ಗ	೧೮೮	೧೮	೦೫
೯. ಹಿರಿಯೂರು	೦೮೧	೦೨	೦೦
ಒಟ್ಟು	೧,೩೦೮	೪೮	೧೭

ಈ ಮೇಲಿನ ಪಟ್ಟಿಗೆ ಪೂರಕವಾಗಿ ಅಧ್ಯಾಯ ೧ರಲ್ಲಿ ಪಟೇಲರ ಜಾತಿವಾರು ಹಂಚಿಕೆಯ ಬಗ್ಗೆ ಚರ್ಚಿಸಿದ್ದು, ಇಲ್ಲಿ ಪ್ರಸ್ತುತವಾಗುತ್ತದೆ. (ವಿವರಗಳಿಗೆ ಅಧ್ಯಾಯ ೧ ನೋಡಿ)

ಶೇಕ್‌ದಾರ : ಹೋಬಳಿಯಲ್ಲಿದ್ದು, ತನ್ನ ಹೋಬಳಿ ವಿಭಾಗಕ್ಕೆ ಸೇರಿದ ಎಲ್ಲಾ ಗ್ರಾಮಗಳಲ್ಲೂ ಪ್ರವಾಸ ಮಾಡಬೇಕಿತ್ತು. ಗ್ರಾಮಕ್ಕೆ ಒಳಪಟ್ಟ ಸರಕಾರಿ ಭೂಮಿ ನೀರಾವರಿಗೊಳಪಡಬಹುದಾದಂತಹ ಭೂಹಿಡುವಳಿಗಳಿದ್ದರೆ, ಆ ಬಗ್ಗೆ ಶ್ಯಾನುಭೋಗ ಮತ್ತು ಪಟೇಲರೊಂದಿಗೆ ಚರ್ಚಿಸಿ ವಿವರವಾದ ವರದಿ ತಯಾರಿಸಿ ತನ್ನ ಮೇಲಧಿಕಾರಿಗಳಿಗೆ ಕಳಿಸುತ್ತಿದ್ದನು. ಶಾನುಭೋಗರು ತಮ್ಮ ಗ್ರಾಮದ ತರಿ, ಖುಷ್ಕಿ ಮತ್ತು ಭಾಗಾಯ್ತು ಭೂಹಿಡುವಳಿಗಳಲ್ಲಿ ಬೆಳೆದಿರಬಹುದಾದ ಬೆಳೆಯ ಬಗ್ಗೆ ಸಮಗ್ರ ವರದಿಯನ್ನು ತಯಾರಿಸುತ್ತಿದ್ದನು. ಆಗಿಂದಾಗ್ಗೆ ಬದಲಾಗಬಹುದಾದ ಕಾಯಿದೆ ಕಾನೂನುಗಳ ಬಗ್ಗೆ ಶ್ಯಾನುಭೋಗ ಮತ್ತು ಪಟೇಲರಿಗೆ ವಿವರಿಸುವುದು ಶೇಕ್‌ದಾರನ ಮುಖ್ಯ ಕರ್ತವ್ಯವಾಗಿತ್ತು. ಶ್ಯಾನುಭೋಗರು ವಸೂಲಿ ಮಾಡಬಹುದಾದ ಕಂದಾಯವನ್ನು ಮತ್ತು ಹಳ್ಳಿಗಳ ಒಂದು ಗುಂಪನ್ನು ಫಿರ್ಕ್ (ಹೋಬಳಿ) ಎಂದು ಕರೆಯಲಾಗುತ್ತಿತ್ತು. ಪ್ರತಿಯೊಂದು ಫಿರ್ಕ್‌ಗೆ ಒಬ್ಬ ಕಂದಾಯ

ನಿರೀಕ್ಷಕನಾದ ಶೇಕದಾರನನ್ನು ನೇಮಿಸಲಾಗುತ್ತಿತ್ತು. ಚಿತ್ರದುರ್ಗ ವಿಭಾಗದಲ್ಲಿ ೨೫ ಫಿರ್ಕ್‌ಗಳಿದ್ದವು. ಫಿರ್ಕ್‌ದಲ್ಲಿನ ಅತ್ಯಂತ ದೊಡ್ಡ ಗ್ರಾಮಗಳಲ್ಲಿ ಕಂದಾಯ ನಿರೀಕ್ಷಕನಾದ ಶೇಕ್‌ದಾರ ವಾಸಿಸುತ್ತಿದ್ದನು. ಅವನು ಗ್ರಾಮಗಳಿಗೆ ಭೇಟಿಮಾಡಿ ಕೃಷಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಶಾನುಭೋಗರುಗಳಿಂದ ಪಡೆದುಕೊಳ್ಳುತ್ತಿದ್ದನು. ಶೇಕ್‌ದಾರನು ಹೋಬಳಿಗಳ ಆಡಳಿತವನ್ನು ನೋಡಿಕೊಂಡು ಇರಬೇಕಾಗಿದ್ದಿತು. ಇವರು ರೈತರಿಂದ ದರಖಾಸ್ತುಗಳನ್ನು ಪಡೆದು ತಾಲೂಕು ಕಛೇರಿಗೆ ಕಳುಹಿಸುತ್ತಿದ್ದರು.[೮೬] ನಂತರ ಪಟ್ಟಿಗಳನ್ನು ತಯಾರಿಸಿ ಸಹಿಗಾಗಿ ಜಿಲ್ಲಾ ಕಛೇರಿಗೆ ಕಳುಹಿಸುತ್ತಿದ್ದರು. ಅಲ್ಲದೆ ಇವರು ಗ್ರಾಮದ ಪಟೇಲ, ಶಾನುಭೋಗ ಮತ್ತು ತಾಲೂಕು ಕಛೇರಿಗಳ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸಬೇಕಾಗಿದ್ದಿತು.

ಅಮಲ್ದಾರರು : ಕಮೀಷನರ್ ಕಾಲದಲ್ಲಿ ತಾಲೂಕುಗಳ ಆಡಳಿತ ನೋಡಿಕೊಳ್ಳಲು ಪ್ರತಿಯೊಂದು ತಾಲೂಕು ಕೇಂದ್ರಕ್ಕೂ ಒಬ್ಬ ಅಮಲ್ದಾರನನ್ನು ನೇಮಿಸಲಾಗುತ್ತಿತ್ತು. ಇವನು ತನ್ನ ತಾಲೂಕಿನ ಆಡಳಿತದಲ್ಲಿ ಮುಖ್ಯ ನ್ಯಾಯಾಧೀಶನಾಗಿ ಮತ್ತು ಮುಖ್ಯ ಪೋಲೀಸ್ ರಕ್ಷಣ ಅಧಿಕಾರಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದನು. ತಾಲೂಕು ಕಛೇರಿ ಆಡಳಿತವು ಜಿಲ್ಲಾ ಆಡಳಿತಕ್ಕೆ ಕೊಂಡಿಯಾಗಿದ್ದಿತು. ಇವರು ಭೂ ಹಿಡುವಳಿದಾರರಿಗೆ ಸಂಬಂಧಪಟ್ಟ ವಿಷಯಗಳನ್ನು ನೇರವಾಗಿ ಗಮನಿಸುತ್ತಿದ್ದರು. ಇವರು ಬೆಳಿಗ್ಗೆ ೧೧ರಿಂದ ಸಂಜೆ ೭ ಗಂಟೆಯವರೆಗೆ ಕಛೇರಿಯಲ್ಲಿರಬೇಕಾಗಿದ್ದಿತು.[೮೭] ಈ ತಾಲೂಕು ಕಛೇರಿಯಲ್ಲಿ ಒಂದು ತಾಲೂಕಿನ ಎಲ್ಲಾ ಖುಷ್ಕಿ ಭೂ ಹಿಡುವಳಿಗಳ ವ್ಯವಹಾರ ಮತ್ತು ಲೆಕ್ಕಪತ್ರಗಳನ್ನು ಕ್ರಮವಾಗಿ ಬರೆದಿಡುತ್ತಿದ್ದರು. ಇವರಿಗೆ ತಾಲೂಕಿನ ಎಲ್ಲ ಅರಣ್ಯ ಪ್ರದೇಶ ಮತ್ತು ಗೋಮಾಳಗಳ ಆಡಳಿತವು ಸೇರಿತು.[೮೮] ಪ್ರಾಚೀನ ಕಾಲದಿಂದಲೂ ಸಮಾಜದ ಅವಿಭಾಜ್ಯ ಅಂಗವಾಗಿದ್ದ ಧಾರ್ಮಿಕ ಸಂಸ್ಥೆಗಳ ಆರ್ಥಿಕತೆಯನ್ನು ಕೃಷಿ ವ್ಯವಸ್ಥೆಯೇ ನಿರ್ವಹಿಸುತ್ತಿತ್ತು. ಬದಲಾದ ಸರಕಾರಗಳು, ಆಡಳಿತ ವ್ಯವಸ್ಥೆಗಳು ಕಾಲಾನಂತರದಲ್ಲಿ ಅವುಗಳನ್ನು ನಿಯಂತ್ರಿಸುವ ಪ್ರಯತ್ನವನ್ನು ಮಾಡಿದವು. ಇಲ್ಲಿ ಮುಖ್ಯವಾಗಿ ಇನಾಂ ಭೂಹಿಡುವಳಿಗಳನ್ನು ಕುರಿತು ಚರ್ಚಿಸಲಾಗಿದೆ.

ಇನಾಂ ಭೂಹಿಡುವಳಿಗಳು

ಇನಾಂ ಎಂಬ ಪದವು ಪರ್ಶಿಯಾನ್ ಭಾಷೆಯಿಂದ ಬಂದ ಪದವಾಗಿದೆ. ಪ್ರಾಚೀನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಒಂದು ವಿಧದ ಸಾಗುವಳಿ ಭೂಮಿಗೆ ಹೀಗೆ ಕರೆಯುತ್ತಿದ್ದರು.[೮೯] ಸಾಹಿತ್ಯಿಕವಾದ

ಅರ್ಥದಲ್ಲಿ ಕಂದಾಯರಹಿತ ಕೊಡುಗೆಭೂಮಿ ಎಂದು ಕರೆಯಬಹುದು. ಇನಾಂ ಭೂಹಿಡುವಳಿಗಳನ್ನು ಪ್ರಾಚೀನ ಕಾಲದಿಂದ ಬಂದ ಎಲ್ಲಾ ರಾಜವಂಶಗಳು ಧಾರ್ಮಿಕ ಸಂಸ್ಥೆಗಳಿಗೆ ಕೊಟ್ಟು ರಕ್ಷಿಸುತ್ತಾ ಬಂದಿವೆ. ಇದು ಭಾರತ ಸ್ವಾತಂತ್ರ್ಯ ಪಡೆದ ನಂತರ ೧೯೫೫ರಲ್ಲಿ ಇನಾಂ ಕಾಯಿದೆಯು ರದ್ದುಗೊಳಿಸುವವರಿಗೂ ಒಂದಲ್ಲ ಒಂದು ರೀತಿಯಲ್ಲಿ ಜಾರಿಯಲ್ಲಿತ್ತು.

ಚಿತ್ರದುರ್ಗ ಪ್ರದೇಶದಲ್ಲಿ ವಿಜಯನಗರ ಅರಸರ ಕಾಲದಲ್ಲಿ ಇನಾಂ ಭೂಹಿಡುವಳಿಗಳನ್ನು 'ಉಪಕಾರಿ' ಅಥವಾ 'ಸೇವಾ' ಎಂಬುದಾಗಿ ಕರೆಯಲಾಗುತ್ತಿತ್ತು. ಉಪಕಾರಿ ಭೂಹಿಡುವಳಿಗಳನ್ನು ಬ್ರಹ್ಮಾದಾಯ, ದೇವಾದಾಯ, ಮಠಪುರ ಭೂಹಿಡುವಳಿಗಳೆಂಬುದಾಗಿ ಗುರುತಿಸಿದ್ದರು. ಸೇವಾ ಭೂಹಿಡುವಳಿಗಳೆಂದರೆ ಸೈನಿಕ ಸೇವೆ ಮತ್ತು ನಾಗರಿಕ ಸೇವೆಗಳಿಗಾಗಿ ನೀಡಿದ ಭೂಹಿಡುವಳಿಗಳಾಗಿದ್ದವು. ಇದೇ ರೀತಿಯಾದ ಭೂಹಿಡುವಳಿಗಳು ಚಿತ್ರದುರ್ಗದ ನಾಯಕ ಅರಸರ ಕಾಲದಲ್ಲಿಯೂ ಯಾವ ಬದಲಾವಣೆಯಿಲ್ಲದೆ ಜಾರಿಯಲ್ಲಿದ್ದವು. ಈ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನದ ಮೊದಲ ಭಾಗದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಚಿತ್ರದುರ್ಗ ಪ್ರದೇಶವು ೧೭೭೯ರಲ್ಲಿ ಹೈದರಾಲಿಯ ಸ್ವಾಧೀನವಾದನಂತರ ಮೈಸೂರು ಸಂಸ್ಥಾನದಲ್ಲಿ ವಿಲೀನವಾಗುತ್ತದೆ. ಹೈದರನ ಮಗನಾದ ಟಿಪ್ಪುವಿನ ಕಾಲದಲ್ಲಿ ೧೭೮೮ರಲ್ಲಿ ರೆವಿನ್ಯೂ ಸರ್ವೇ ಕಾರ್ಯಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಇನಾಂ ಭೂ ಹಿಡುವಳಿಗಳನ್ನು ಸರಕಾರಕ್ಕೆ ಸೇರಿಸಿಕೊಳ್ಳಲಾಯಿತು. ಆದರೆ ಕೆಲವು ಧಾರ್ಮಿಕ ಸಂಸ್ಥೆಗಳಾದ ಮಸೀದಿಗಳು, ದೇವಾಲಯಗಳು, ಮಠಗಳು ಹಾಗೆಯೇ ಬ್ರಾಹ್ಮಣರು ತಮ್ಮ ಎಂದಿನ ಇನಾಂ ಭೂಹಿಡುವಳಿಗಳನ್ನು ಈ ವೇಳೆಯಲ್ಲೂ ರಕ್ಷಿಸಿಕೊಂಡಿದ್ದರು. ಅದೇ ರೀತಿ ಟಿಪ್ಪುವಿನ ಕಾಲದಲ್ಲಿ ಕೆಲವು ಅಧಿಕಾರಿಗಳಿಗೂ ಸಣ್ಣ ನೌಕರರಿಗೂ ಇನಾಂ ಭೂಹಿಡುವಳಿಗಳನ್ನು ನೀಡಲಾಗಿತ್ತು. ಇವನ ಕಾಲದಲ್ಲಿ ಹೆಚ್ಚು ಪ್ರಚಲಿತವಾಗಿದ್ದ ಇನಾಂ ಭೂಹಿಡುವಳಿಗಳೆಂದರೆ ಒಬ್ಬ ವ್ಯಕ್ತಿಯು ತನ್ನ ಸ್ವತಃ ವೆಚ್ಚದಲ್ಲಿ ಕೆರೆಗಳನ್ನು ನಿರ್ಮಿಸಿದರೆ, ಬಾವಿಯನ್ನು ತೊಡಿದರೆ, ಸಣ್ಣ ಕೋಟೆ ಕೊತ್ತಲಗಳನ್ನು ಕಟ್ಟಿದರೆ ಇಂತಹ ರೈತರಿಗೆ ಒಂದು ನಿರ್ದಿಷ್ಟ ಪ್ರಮಾಣದ ಭೂಮಿಯನ್ನು ಸ್ಥಳೀಯ ರೂಪದಲ್ಲಿಯೇ ಇನಾಂ ಭೂಹಿಡುವಳಿಗಳನ್ನು ಮಂಜೂರು ಮಾಡುತ್ತಿದ್ದನು. ಇದೇ ಕಾಲದ ಬುಕಾನನ್ ಬರವಣಿಗೆಯಿಂದಲೂ ಕೆಲವು ವಿಚಾರಗಳು ತಿಳಿಯುತ್ತವೆ.[೧೦] ಇವನು ಗಮನಿಸಿದಂತೆ ಶ್ರೀಮಂತ ವ್ಯಕ್ತಿಯು ತನ್ನ ಸ್ವಂತದ ಹಣದಲ್ಲಿ ಒಂದು ಕೆರೆಯನ್ನು ಕಟ್ಟಿಸಿ ನೀರಾವರಿಗೆ ಅನುಕೂಲ ಮಾಡಿಕೊಟ್ಟರೆ ಹಾಗೆ ನೀರಾವರಿಗೆ ಒಳಗಾದ ಭೂಮಿಯ ನಾಲ್ಕನೆಯ

ಒಂದು ಭಾಗದಷ್ಟನ್ನು ಅನುವಂಶೀಯವಾಗಿ ಅನುಭವಿಸಿಕೊಂಡು ಹೋಗಲು ಅಂತಹ ವ್ಯಕ್ತಿಗಳಿಗೆ ನೀಡಲಾಗುತ್ತಿತ್ತು. ಆದರೆ ಆ ಕೆರೆಯನ್ನು ಯಾವಾಗಲೂ ಸರಿಯಾಗಿರುವಂತೆ ನೋಡಿಕೊಳ್ಳಬೇಕಾಗಿತ್ತು. ಹೀಗೆ ಒಬ್ಬ ವ್ಯಕ್ತಿಯ ಅಧೀನದಲ್ಲಿರುವ ಕೆರೆಗಳು ಸರಕಾರದ ಅಡಳಿತದಲ್ಲಿರುವ ಕೆರೆಗಳಿಗಿಂತ ಹೆಚ್ಚು ಉತ್ತಮ ಸ್ಥಿತಿಯಲ್ಲಿರುತ್ತವೆ ಎಂದಿದ್ದಾನೆ.

ದಿವಾನ್ ಪೂರ್ಣಯ್ಯನವರು ತಮ್ಮ ಕಾಲದಲ್ಲಿ ಇನಾಂ ಭೂಹಿಡುವಳಿಗಳನ್ನು ಪುನರುಜ್ಜೀವನಗೊಳಿಸಿದರು. ಎಲ್ಲಾ ವಿಧದ ದತ್ತಿ ಹಿಡುವಳಿಗಳನ್ನು 'ಮುಜರಾಯಿ' ಇಲಾಖೆಗೆ ಸೇರಿಸಲಾಯಿತು. ಮುಜಾರಾಯಿ ಇಲಾಖೆಯ ಮೇಲ್ವಿಚಾರಣೆಯನ್ನು ಅಮಲ್ದಾರರು ಮತ್ತು ಫೌಜುದಾರರಿಗೆ ವಹಿಸಲಾಯಿತು.[೯೧] ಹಿಂದೂ ಮತ್ತು ಮುಸ್ಲ್ಮಾನರಿಗೆ ಸೇರಿದ ಧಾರ್ಮಿಕ ಹಾಗೂ ದತ್ತಿ ಸಂಸ್ಥೆಗಳಾದ ದೇವಾಲಯ, ಛತ್ರ, ಮಠ, ದರ್ಗಾ ಮೊದಲಾದವುಗಳ ವರಮಾನದ ಮೇಲ್ವಿಚಾರಣೆಯನ್ನು ಮುಜರಾಯಿ ಇಲಾಖೆಗೆ ವಹಿಸಿಕೊಡಲಾಯಿತು. ಹಾಗೆಯೇ ದಿವಾನ್ ಪೂರ್ಣಯ್ಯನವರು ೧೮೦೦ರಲ್ಲಿ ಸರ್ವಮಾನ್ಯ ಅಥವಾ ಜೋಡಿ ಇನಾಂಗಳನ್ನು ದಾಖಲೆಯಲ್ಲಿರಲಿ ಅಥವಾ ಇಲ್ಲದೇ ಇದ್ದರೂ ಇನಾಂ ಸಟ್ಲಮೆಂಟ್‌ನಲ್ಲಿ ಸೇರಿಸಿದನು. ಇನಾಂ ಭೂಹಿಡುವಳಿಗಳಲ್ಲಿ ಬಹಳಷ್ಟನ್ನು ಜೋಡಿ ಇನಾಂಗಳಾಗಿ ಪರಿವರ್ತಿಸಿದರು.[೯೨] ನಂತರ ಇಂತಹ ಭೂಹಿಡುವಳಿಗಳ ಮೇಲೆ ಕಡಿಮೆ ಕಂದಾಯ ಹಾಕಿದರು. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಒಂದು ಭಾಗವಾಗಲಿ ಅಥವಾ ಅದರ ಪೂರ್ತಿಯಾಗಲಿ ಇನಾಂ ಹಿಡುವಳಿಗಳನ್ನು ಸರಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟರೆ ಇಂತಹ ಭೂಹಿಡುವಳಿಗಳು ಕಂದಾಯವಿಲ್ಲದೇ ಅನುಭವಿಸಲ್ಪಟ್ಟರೆ, ಈ ಹಿಡುವಳಿಗಳ ಆದಾಯದ ಮೇಲೆ ಮೂರನೇ ಒಂದು ಭಾಗದಷ್ಟು ಕಂದಾಯ ವಿಧಿಸಲಾಗುತ್ತಿತ್ತು.

ಮುಮ್ಮಡಿ ಕೃಷ್ಣರಾಜ ಒಡೆಯರು ಮುಜರಾಯಿ ಸಂಸ್ಥೆಗಳನ್ನು ೧೮೩೧ರ ನಂತರ ಪರಿಷ್ಕರಿಸಿ, ಈ ಸಂಸ್ಥೆಗಳ ಮೇಲ್ವಿಚಾರಣೆಯನ್ನು ಅಧೀಕ್ಷಕರು ಹಾಗು ಅವರ ಅಧೀನ ಜಿಲ್ಲಾಧಿಕಾರಿಗಳಿಗೆ ವಹಿಸಲಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರು ೧೮೩೧ರಲ್ಲಿ ನೀಡಿದ ನಿರೂಪಗಳು ಧರ್ಮಸಂಬಂಧವಾದ ಮಠ, ದೇವಸ್ಥಾನ ಮೊದಲಾದವುಗಳ ರಕ್ಷಣೆ ಅಥವಾ ಅಲ್ಲಿ ಕಾರ್ಯ ನಿರ್ವಹಿಸುವ ಜನರ ರಕ್ಷಣೆಗೋಸ್ಕರ ಕೊಟ್ಟಿರುವ ಇನಾಂಗಳಾಗಿದ್ದವು. ಇಂತಹ ಧರ್ಮಸಂಬಂಧವಾದ ಇನಾಂಗಳನ್ನು ಅನುಭವದಾರರಿಗೆ ಕಾಯಂ ಮಾಡಲಾಯಿತು. ಧರ್ಮಸಂಬಂಧವಾದ ದೇವಸ್ಥಾನ, ಮಠಗಳು ಒಳ್ಳೆಯ ಸ್ಥಿತಿಯಲ್ಲಿರುವವರೆಗೂ ಅದಕ್ಕೆ ಸಂಬಂಧಿಸಿದ ಇನಾಂಗಳು ಅದರ

ಪ್ರಯೋಜನಾರ್ಥವಾಗಿರುತ್ತಿದ್ದವು. ಮುಮ್ಮಡಿ ಕೃಷ್ಣರಾಜ ಒಡೆಯರು ವಂಶಾಪಾರಂಪರ್ಯವಾಗಿ ಅನುಭವಿಸಬಹುದಾದ ಇನಾಂಗಳನ್ನು ಕೊಟ್ಟಿದ್ದರು. ಹಾಗೆಯೇ ಅವುಗಳನ್ನು ಕ್ರಯ ಅಥವಾ ಭೋಗ್ಯ ಮುಂತಾದವುಗಳಾಗಿ ಪರಿವರ್ತಿಸಬಹುದಾಗಿತ್ತು.

ಕಮೀಷನ್‌ರವರ ಕಾಲಾವಧಿಯಲ್ಲಿ ೧೮೫೨ರಲ್ಲಿ ಮಾರ್ಕ್‌ಕಬ್ಬನ್ ಮುಜಾರಾಯಿ ಇಲಾಖೆಯನ್ನು ಸರಕಾರದ ಅಧೀನಕ್ಕೆ ವರ್ಗಾವಣೆ ಮಾಡಿಕೊಂಡನು. ಅನಂತರ ವಿಭಾಗೀಯ ಅಧೀಕ್ಷಕರುಗಳಿಗೆ ವರ್ಗಾಯಿಸಲಾಯಿತು. ೧೮೭೬ರಲ್ಲಿ ಮುಜರಾಯಿ ಇಲಾಖೆಗೆ ಮುಖ್ಯ ಕಮೀಷನರುಗಳನ್ನು ನೇಮಿಸಲಾಯಿತು. ಮಾರ್ಕ್‌ಕಬ್ಬನ್ ಛತ್ರ, ಮಠ ಮತ್ತು ದೇವಾಲಯ ಮುಂತಾದ ಧರ್ಮಕಾರ್ಯಗಳಿಗೋಸ್ಕರ ಕೊಟ್ಟ ಇನಾಂಗಳನ್ನು ಎಂದಿಗೂ ಕ್ರಯ, ಭೋಗ್ಯ ಮಾಡಕೂಡದೆಂಬ ಕಾಯಿದೆಯನ್ನು ಜಾರಿಗೆ ತಂದನು.[೯೩] ಒಂದು ವೇಳೆ ಇನಾಂಗಳನ್ನು ಕೊಡುವುದಕ್ಕೆ ಅಧಿಕಾರವಿಲ್ಲದವರು ಇನಾಂಗಳನ್ನು ಕೊಟ್ಟಿದ್ದರೆ ಇಂತಹ ಇನಾಂಗಳ ಅನುಭವವು ೫೦ವರ್ಷಗಳ ಒಳಗಾಗಿದ್ದರೆ ಅರ್ಧ ಕಂದಾಯ ಕಟ್ಟಬೇಕಾಯಿತು. ೫೦ ವರ್ಷಗಳಿಗೂ ಹೆಚ್ಚಾಗಿದ್ದರೆ ನಾಲ್ಕರಲ್ಲಿ ಒಂದು ಭಾಗ ಕಂದಾಯವನ್ನು ಕೊಡಬೇಕಾಗಿತ್ತು. ಇಂತಹ ಇನಾಂದಾರರ ವಂಶವು ಇಲ್ಲವಾದರೆ ಆ ಇನಾಂಗಳು ಸರಕಾರಕ್ಕೆ ಸೇರುತ್ತಿದ್ದವು.

೧೮೬೩-೬೪ರಲ್ಲಿ ರೆವಿನ್ಯೂ ಸರ್ವೆ ಮಾಡಲಾಯಿತು. ಅದೇ ವರ್ಷ ಇನಾಂ ಭೂಹಿಡುವಳಿಗಳನ್ನು ವ್ಯವಸ್ಥೆಗೊಳಿಸುವುದಕ್ಕೋಸ್ಕರ ಒಬ್ಬ ಇನಾಂ ಕಮೀಷನರನ್ನು ನೇಮಿಸಲಾಯಿತು. ಮೈಸೂರು ಇನಾಂ ಕಾಯಿದೆ ೧೮೬೮ರಲ್ಲಿ ಭಾರತ ಸರಕಾರದಿಂದ ಅಂಗೀಕೃತವಾಯಿತು. ಇನಾಂ ಭೂಹಿಡುವಳಿಯ ಬಗ್ಗೆ ಒಂದು ವಿವರವಾದ ಸರ್ವೆಯನ್ನು ಮಾಡಲಾಯಿತು. ಸರ್ವೆಯಲ್ಲಿ ಕಂದಾಯ ಸಲ್ಲಿಸುವ ಇನಾಂ ಭೂ ಹಿಡುವಳಿಗಳನ್ನು ಗುರುತಿಸಲಾಯಿತು. ಅದರಲ್ಲಿ ಬಹುತೇಕ ಇನಾಂ ಹಿಡುವಳಿಗಳನ್ನು ಕಾಯಂ ಗೊಳಿಸಲಾಯಿತು. ಇಲ್ಲವೇ ಇನಾಂ ಹಿಡುವಳಿಗಳಿಗೆ ತೆರಿಗೆ ಏರಲಾಯಿತು. ಗ್ರಾಮದಲ್ಲಿರುವ ಮತಸಂಬಂಧವಾದ ಅಥವಾ ಧರ್ಮಕಾರ್ಯಕ್ಕಾಗಿ ಉಪಯೋಗಿಸಲ್ಪಟ್ಟಿರುವ ಇನಾಂ ಭೂಹಿಡುವಳಿಗಳನ್ನು ಸರಕಾರಕ್ಕೆ ಸೇರಿಸಿಕೊಳ್ಳಬಹುದಾಗಿತ್ತು. ಆದರೆ ಹರಾಜು ಮಾಡುವಂತಿರಲಿಲ್ಲ. ಇನಾಂ ಭೂಹಿಡುವಳಿ ದಾರರು ಕಂದಾಯ ಬಾಕಿ ಉಳಿಸಿಕೊಂಡಿದ್ದರೆ, ಡೆಪ್ಯೂಟಿ ಕಮೀಷನರ್ ಇನಾಂ ಭೂಹಿಡುವಳಿದಾರರ ಸ್ವತ್ತಾದ ಚರಾಸ್ತಿಗಳನ್ನು ಮಾತ್ರ ಜಪ್ತಿ ಮಾಡಿ, ಹರಾಜು ಮಾಡುವ ಮೂಲಕ ಬಾಕಿ ವಸೂಲಿ ಮಾಡುತ್ತಿದ್ದರು. ಹರಾಜು ಮೂಲಕ ಕಂದಾಯದ ಬಾಕಿಯನ್ನು ವಸೂಲು ಮಾಡಲು ಸಾಧ್ಯ

ವಾಗದಿದ್ದರೆ ಇನಾಂ ಭೂಹಿಡುವಳಿಗಳನ್ನು ಸರಕಾರಕ್ಕೆ ಸೇರಿಸಿಕೊಳ್ಳುತ್ತಿದ್ದರು. ಆ ಭೂಹಿಡುವಳಿಗಳನ್ನು ಪುನಃ ಪಡೆಯುವಾಗ ಅವರು ಸರಕಾರದಿಂದ ಪುನಃ ಮಂಜೂರಾತಿ ಪಡೆಯಬೇಕಾಯಿತು.

೧೮೭೭ರಲ್ಲಿ ಇನಾಂ ಭೂಹಿಡುವಳಿಗಳಿಗೆ ಸಂಬಂಧಿಸಿದಂತೆ ಕೆಲವು ವಿಶೇಷ ಕಾಯಿದೆಗಳು ರಚನೆಯಾದವು. ಅವುಗಳೆಂದರೆ ಒಂದು ಇನಾಂ ಗ್ರಾಮದಲ್ಲಿ ಸರಕಾರದ ಭೂಹಿಡುವಳಿಗಳಿದ್ದರೆ, ಸರಕಾರದ ಆಡಳಿತಕ್ಕೊಳಪಟ್ಟ ಇನಾಂ ಹಿಡುವಳಿಗಳ ಸರ್ವೆ ನಂಬರುಗಳನ್ನು ಪ್ರತ್ಯೇಕವಾಗಿ ದಾಖಲಿಸುವ ಕ್ರಮ ಜಾರಿಗೆ ಬಂದಿತು. ಒಂದು ಗ್ರಾಮದಲ್ಲಿ ಸರಕಾರಕ್ಕೆ ಸೇರಿರುವ ಭಾಗವು ಕಾಲುಭಾಗಕ್ಕಿಂತ ಹೆಚ್ಚಾಗಿದ್ದರೆ ಅದರಲ್ಲಿನ ಇನಾಂ ಹಿಡುವಳಿಗಳನ್ನು ಅಲ್ಪಸಂಖ್ಯಾತ ಇನಾಂಗಳ ಹಾಗೆ ದಾಖಲಿಸುತ್ತಿದ್ದರು. ದೀರ್ಘಕಾಲದಿಂದ ಇನಾಂ ಆಡಳಿತದಲ್ಲಿದ್ದು ಕೆಲವು ಕಾರಣಗಳಿಂದ ಸರಕಾರಕ್ಕೆ ಸೇರಿಸಲ್ಪಟ್ಟಿದ್ದರೆ, ಅವುಗಳನ್ನು ಸರಕಾರಿ ಸಂಖ್ಯೆಗಳಲ್ಲಿ ಇನಾಂ ಭೂಹಿಡುವಳಿಗಳೆಂದೇ ಗುರುತಿಸಲಾಗುತ್ತಿತ್ತು.[೯೪]

೧೮೭೭ರಲ್ಲಿ ಪರಭಾರೆ ಮಾಡಲ್ಪಟ್ಟ ನೌಕರಿ ಇನಾಂಗಳ ಬಗ್ಗೆ ಕೆಲವು ಕಾಯಿದೆಗಳು ರಚನೆಯಾಗಿದ್ದವು. ಇದರಲ್ಲಿ ಧರ್ಮ ಸಂಬಂಧವಾದ ಜನೋಪಯೋಗಿ ನೌಕರಿಗಳಿಗಾಗಿ ಕೊಡಲ್ಪಟ್ಟ ಇನಾಂ ಹಿಡುವಳಿಗಳನ್ನು ತಪ್ಪಿಸಲಾಗಿತ್ತು. ಅಲ್ಲದೇ ಪರಭಾರೆ ಮಾಡಿದ ಕುಟುಂಬಕ್ಕೆ ಸೇರಿದವರನ್ನು ನೌಕರಿಗಳಿಂದ ವಜಾ ಮಾಡಲಾಗುತ್ತಿತ್ತು. ಇನಾಂಗಳನ್ನು ಕೊಡಲ್ಪಟ್ಟಿರುವ ದೇವಾಲಯ ಅಥವಾ ಧಾರ್ಮಿಕ ಸಂಸ್ಥೆಯ ಸಂಬಂಧವೇನಾದರೂ ಇದ್ದರೆ ಅಂಥಹ ನೌಕರಿಗಳನ್ನು ವಜಾ ಮಾಡಲಾಗುತ್ತಿತ್ತು. ಇಂಥಹ ಭೂಹಿಡುವಳಿಗಳನ್ನು ಕ್ರಯ ಅಥವಾ ಭೋಗ್ಯಕ್ಕೆ ಪಡೆದಿರುವ ವ್ಯಕ್ತಿಗಳು ಸರಿಯಾದ ಬೆಲೆಕೊಟ್ಟು ಕೊಂಡುಕೊಂಡಿದ್ದರೆ, ಅಂತಹ ಸಂದರ್ಭದಲ್ಲಿ ಆ ದೇವಾಲಯ ಅಥವಾ ಧಾರ್ಮಿಕ ಸಂಸ್ಥೆಗಳಿಗೆ ಹೊಸ ವ್ಯಕ್ತಿಗಳನ್ನು ಅದೇ ಸಮುದಾಯದಿಂದ ಆಯ್ಕೆ ಮಾಡಲಾಗುತ್ತಿತ್ತು. ಅಂದು ಮೈಸೂರು ಪ್ರದೇಶದಲ್ಲಿದ್ದ ಇನಾಂ ಭೂ ಹಿಡುವಳಿಗಳನ್ನು ಬಿ. ಎಲ್. ರೈಸ್ ಅವರು ೧೩ ವಿಭಾಗಗಳಾಗಿ ಗುರುತಿಸಿದ್ದಾರೆ.[೯೫] ೧. ಸರ್ವಮಾನ್ಯ ಇನಾಂತಿ, ೨. ಅರ್ಧಮಾನ್ಯ, ೩. ಜೋಡಿ ಗ್ರಾಮ, ೪. ಜೋಡಿ ಅಗ್ರಹಾರ, ೫. ಮಹಲ್ ಜೋಡಿ, ೬. ಬ್ರಹ್ಮಾದಾಯ, ೭. ದೇವಾದಾಯ ಅಥವಾ ಧರ್ಮಾದಾಯ, ೮. ಉಂಬಳಿ ಮತ್ತು ಉತ್ತಮ, ೯. ಕುಳಿಗಾದಿ, ೧೦. ಕೋಡಗಿ ಇನಾಮು, ೧೧. ಬವಡಿದಾಸವಂದೆ ಇನಾಂ, ೧೨. ಕೆರೆಬಂಡಿ ಮತ್ತು ಕೆರೆಕುಳ ಇನಾಂ, ೧೩. ಪಟ್ಟಗದ್ದೆ ಹೀಗೆ ವರ್ಗೀಕರಿಸಿದ್ದಾರೆ.

ಕಮೀಷನರ್ ಆಡಳಿತಾವಧಿಯಲ್ಲಿ ರೈತ್ವಾರಿ ಪದ್ಧತಿಯನ್ನು ಜಾರಿಗೆ ತಂದು ಇನಾಂದಾರರನ್ನು ವ್ಯವಸಾಯಗಾರರನ್ನಾಗಿ ಪರಿಗಣಿಸಿತು. ಆದರೆ ಇವರಲ್ಲಿ ಬಹಳಷ್ಟು ಮಂದಿ ತಮ್ಮ ಜಮೀನಿನ ಬಹುಭಾಗವನ್ನು ಗೇಣಿ ವ್ಯವಸಾಯಕ್ಕೆ ಕೊಡುತ್ತಿದ್ದರು. ಕೆಲವೇ ಇನಾಂದಾರರು ಸ್ವಂತ ವ್ಯವಸಾಯ ಮಾಡುತ್ತಿದ್ದರು. ಇವರು ಸಣ್ಣ ಹಿಡುವಳಿದಾರರಾಗಿದ್ದರು. ಹಲವು ಸಂದರ್ಭದಲ್ಲಿ ಇನಾಂದಾರರು ತಮ್ಮ ಗೈರು ಹಾಜರಿಯಲ್ಲೇ ವ್ಯವಸಾಯ ಮಾಡಿಸುತ್ತಿದ್ದರು. ಚಿತ್ರದುರ್ಗ ಪ್ರದೇಶದಲ್ಲಿದ್ದ ಕೆಲವು ಪ್ರಮುಖ ಇನಾಂ ಭೂಹಿಡುವಳಿಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. **ಸರ್ವಮಾನ್ಯ ಜೋಡಿ :** ಸರ್ವಮಾನ್ಯ ಜೋಡಿ ಭೂಹಿಡುವಳಿಗಳೆಂದರೆ, ಗ್ರಾಮಗಳಲ್ಲಿರುವ ಕೆರೆಗಳನ್ನು ದುರಸ್ತಿಯಲ್ಲಿಟ್ಟಿರುವ ವ್ಯಕ್ತಿಗಳಿಗೆ ಸರ್ವಮಾನ್ಯ ಜೋಡಿ ಭೂಹಿಡುವಳಿಗಳನ್ನು ನೀಡಲಾಗುತ್ತಿತ್ತು. ಈ ಭೂಹಿಡುವಳಿಗಳನ್ನು ಕಡಿಮೆ ಕಂದಾಯಕ್ಕೆ ಜೋಡಿದಾರರಿಗೆ ನೀಡಿತು. ಇವರು ಮುಖ್ಯವಾಗಿ ತಾವು ಹೊಂದಿರುವ ಗ್ರಾಮಗಳ ಕೆರೆಗಳನ್ನು ದುರಸ್ತಿ ಮಾಡಿಸುವುದು ಚೀಫ್ ಕಮೀಷನರ್ ಆಜ್ಞಾನುಸಾರವಾಗಿ ಅವರ ನಿಬಂಧನೆಗೊಳಪಟ್ಟಿರುತ್ತಿದ್ದರು.

೨. **ಖಾಯಂಗುತ್ತಾ ಗ್ರಾಮಗಳು :** ಖಾಯಂ ಗುತ್ತಾ ಗ್ರಾಮಗಳನ್ನು ಮಹಾರಾಜರಿಂದ ಮಂಜೂರಾದ ಭೂಹಿಡುವಳಿಗಳಾಗಿವೆ. ಖಾಯಂಗುತ್ತಾ ಗ್ರಾಮಗಳು ೧೮೭೭ರವರೆಗೂ ಇನಾಂ ಇಲಾಖೆಯ ವ್ಯವಸ್ಥೆಗೆ ಒಳಪಟ್ಟಿರಲಿಲ್ಲ. ೧೮೭೭ರ ನಂತರ ಅವುಗಳ ಆಡಳಿತದ ಬಗ್ಗೆ ನಿಬಂಧನೆಗಳು ರಚನೆಯಾದವು.

೩. **ಮಹಲ್ ಜೋಡಿ ಗ್ರಾಮಗಳು :** ೧೮೩೧ ನಂತರ ಕೊಡಲ್ಪಟ್ಟಿರುವ ಮಹಲ್ ಜೋಡಿ ಗ್ರಾಮಗಳು ಭೂ ನೋಂದಣಿಯಲ್ಲಿ ದಾಖಲೆ ಇಲ್ಲದೆ, ಇನಾಂ ಪಡೆದು ಬಂದಿರುವ ಇನಾಂಗಳಿಗೆ ಸ್ಥಳ ಖಾಯಂ ಗುತ್ತಾ ಅಥವಾ ಮಹಲ್ ಜೋಡಿ ಗ್ರಾಮಗಳೆಂದು ಹೆಸರು. ಕಮೀಷನರ್ ಆಡಳಿತಾವಧಿಯಲ್ಲಿ ಇಂತಹ ಇನಾಂಗಳಿಗೆ ಖಾಯಂ ಕಂದಾಯವನ್ನು ಕಟ್ಟಿ ಭೂಹಿಡುವಳಿದಾರರು ಈ ಭೂಮಿಗಳನ್ನು ಅನುಭವಿಸುತ್ತಾ ಬಂದರು. ಮಹಾರಾಜರವರ ಹುಕುಂ ಪಡೆದುಕೊಂಡು, ಫೌಜುದಾರರಿಂದ ಖಾಯಂ ಗುತ್ತಾ ಗ್ರಾಮಗಳನ್ನು ಅವುಗಳ ಸ್ವಭಾವದಿಂದ ಗುರುತಿಸಲಾಗುತ್ತಿತ್ತು. ಅವುಗಳ ಹಕ್ಕಿನ ಆಧಾರದ ಮೇಲೆ ಇಂತಹ ಭೂಹಿಡುವಳಿಗಳನ್ನು ಹೊಂದಿರುವ ಸದರಿ ಗ್ರಾಮಗಳಿಗೆ ನಿವ್ವಳ ಬೆಲೆಯ ಅರ್ಧ ಮೊಬಲಗಿನಷ್ಟು ಹೆಚ್ಚು ಕಂದಾಯವನ್ನು ಅವುಗಳ ಮೇಲೆ ವಿಧಿಸಿ ಕೆಲವು ಕಾಯಿದೆ, ಕಾನೂನಿನ ಷರತ್ತಿನ ಮೇಲೆ ಅವುಗಳನ್ನು ಕ್ರಮವಾದ ಮತ್ತು ಸರಿಯಾದ ಖಾಯಂ ಗುತ್ತಾ ಹಿಡುವಳಿಗಳನ್ನಾಗಿ ಮಾಡುತ್ತಿದ್ದರು.[೬]

ಚಿತ್ರದುರ್ಗ ವಿಭಾಗದಲ್ಲಿರುವ ವಿವಿಧ ಇನಾಂ ಗ್ರಾಮಗಳ ಹಂಚಿಕೆ

ಕೋಷ್ಟಕ ೧

ತಾಲೂಕುಗಳು	ಹೋಬಳಿಗಳು	ಗ್ರಾಮಗಳು	ಸಣ್ಣ ಗ್ರಾಮಗಳು	ಕಂದಾಯ ಗ್ರಾಮಗಳು	ಸರ್ವಮಾನ್ಯ ಗ್ರಾಮ	ಜೋಡಿ ಗ್ರಾಮಗಳು	ಖಾಯಂ ಗುತ್ತಾ ಗ್ರಾಮಗಳು	ಜನಸಂಖ್ಯೆ
೧	೨	೩	೪	೫	೬	೭	೮	೯
ಚಿತ್ರದುರ್ಗ	ಚಿತ್ರದುರ್ಗ	೫೧	-	-	-	-	-	೩೮೬೧೯
	ಹಿರೇಗುಂಟನೂರು	೪೮	-	-	-	-	-	೧೬೭೮೩
	ಭರಮಸಾಗರ	೬೫	-	-	-	-	-	೨೧೬೮೮
	ತುರುವನೂರು	೨೪	-	-	-	-	-	೨೧೯೦೬
ಚಳ್ಳಕೆರೆ	ಚಳ್ಳಕೆರೆ	೪೭	೦೩	೪೬	-	-	೦೧	೨೪೮೩೩
	ನಾಯಕನಹಟ್ಟಿ	೪೭	೦೮	೪೭	-	-	-	೧೬೩೦೭
	ಪರುಶುರಾಮಪುರ	೫೧	೦೪	೫೦	-	೦೧	-	೨೧೮೮೪
	ತಳಕು	೪೬	೧೦	೪೫	೦೧	-	-	೨೨೫೩೨
ದಾವಣಗೆರೆ	ದಾವಣಗೆರೆ	೪೩	೦೨	೪೧	-	-	೦೨	೩೦೮೭೩
	ಮಾಯಕೊಂಡ	೪೬	೦೩	೪೪	೦೨	-	-	೧೭೧೧೦
	ಹದಡಿ	೩೯	-	೩೯	-	-	-	೧೨೩೭೦
	ಆನಗೋಡು	೪೮	೦೧	೪೬	೦೧	-	೦೧	೧೫೫೧೯
ಹರಿಹರ	ಹರಿಹರ	೪೨	-	-	-	-	-	೧೮೮೭೮
	ಮಲೆಬೆನ್ನೂರು	೪೪	-	-	-	-	-	೧೯೫೦೫
ಹೊಳಲ್ಕೆರೆ	ಹೊಳಲ್ಕೆರೆ	೪೨	-	-	-	-	-	೧೪೬೬೯
	ತಾಳ್ಯ	೫೭	-	-	-	-	-	೧೬೦೩೦
	ಬಿ.ದುರ್ಗ	೫೨	-	-	-	-	-	೧೩೪೦೯
	ರಾಮಗಿರಿ	೩೯	-	-	-	-	-	೧೬೯೯೮
ಹೊಸದುರ್ಗ	ಹೊಸದುರ್ಗ	೮೦	-	೭೬	-	೦೪	-	೨೦೨೦೭
	ಮತ್ತೋಡು	೪೧	-	೦೪	-	೦೧	-	೦೮೩೯೧
	ಮಾಡದಕೆರೆ	೪೧	-	೪೧	-	-	-	೧೨೬೬೧
	ಶ್ರೀರಾಮಪುರ	೫೫	-	೫೪	-	೦೧	-	೧೫೦೭೫
ಜಗಳೂರು	ಜಗಳೂರು	೬೦	-	-	-	-	-	೨೨೫೧೯
	ಬಿಳಿಚೋಡು	೬೦	-	-	-	-	-	೧೬೫೭೧

	ಸೊಕ್ಕೆ	೫೧	-	-	-	-	-	೧೨೩೫೫
	ದೇವಸಮುದ್ರ	೫೨	೧೧	೪೮	೦೨	೦೨	-	೧೫೭೮೫
ಮೊಳಕಾಲ್ಮೂರು	ಮೊಳಕಾಲ್ಮೂರು	೪೫	೦೭	೪೩	-	೦೨	-	೨೦೬೯೮
	ಐಮಂಗಳ	೩೬	೨೪	೩೫	-	೦೧	-	೨೫೫೧೯
	ಧರ್ಮಪುರ	೨೮	೦೮	೨೮	-	-	-	೧೩೩೭೧
ಹಿರಿಯೂರು	ಹಿರಿಯೂರು	೧೯	೧೨	೧೮	-	೦೧	-	೭೨೮೦
	ಜವನಗೊಂಡನಹಳ್ಳಿ	೩೧	-	೩೧	-	-	-	೮೪೬೪
	ಚಾನಲ್	೪೧	೦೩	೩೯	೦೧	-	೦೧	೧೫೩೨೮

ಮೈಸೂರು ಮಹಾರಾಜರು ೧೮೮೧ರಲ್ಲಿ ಅಧಿಕಾರ ಪಡೆದ ನಂತರ ಮುಜಾರಾಯಿ ಇಲಾಖೆಗಳ ಆಡಳಿತವನ್ನು ಜಿಲ್ಲಾ ಡೆಪ್ಯುಟಿ ಕಮೀಷನರ್ ನೋಡಿಕೊಳ್ಳುತ್ತಿದ್ದರು. ಇದರ ಜೊತೆಗೆ ದಿವಾನರ ಕಛೇರಿಯಲ್ಲಿ ಪ್ರತ್ಯೇಕವಾದ ಮುಜರಾಯಿ ಇಲಾಖೆಯ ಸಿಬ್ಬಂದಿಯು ಇತ್ತು. ೧೮೯೧ರಲ್ಲಿ ಸರಕಾರವು ಮುಜರಾಯಿ ಅಧೀಕ್ಷಕರೆಂಬ ವಿಶೇಷ ಅಧಿಕಾರಿಯನ್ನು ನೇಮಿಸಿತು. ೧೯೨೧-೨೨ರವರೆಗೆ ಈ ವ್ಯವಸ್ಥೆಯು ಮುಂದುವರಿದು ಮುಂದೆ ಮುಜರಾಯಿ ಅಧೀಕ್ಷಕ ಹುದ್ದೆಯನ್ನು ರದ್ದುಗೊಳಿಸಿದರು. ನಂತರ ಮೈಸೂರಿನ ಕಂದಾಯ ಕಮೀಷನರಿನ್ನು ಮುಜರಾಯಿ ಆಯುಕ್ತರನ್ನಾಗಿಯೂ ನೇಮಕ ಮಾಡಲಾಯಿತು.[೯೭] ಮೈಸೂರಿನ ಇನಾಂ ಹಿಡುವಳಿಗಳ ಧಾರ್ಮಿಕ ದತ್ತಿ ಸಂಸ್ಥೆಯ ನಿಯಮ ೧೯೨೭ರಲ್ಲಿ ಜಾರಿಗೆ ಬಂದಿತು. ಈ ಕಾನೂನಿನ ಅನ್ವಯ ರಾಜ್ಯದ ಮುಜರಾಯಿ ಇಲಾಖೆಗೆ ಕಂದಾಯ ಕಮೀಷನರೇ ಮುಖ್ಯಸ್ಥರಾಗಿದ್ದರು. ಇವರ ಕಚೇರಿಯಲ್ಲಿ ಮುಜರಾಯಿ ವಿಭಾಗವು ಪ್ರತ್ಯೇಕವಾಗಿತ್ತು.[೯೮] ಇಂತಹ ಮುಜರಾಯಿ ಇಲಾಖೆಯು ಚಿತ್ರದುರ್ಗ ಜಿಲ್ಲೆಯಲ್ಲಿ ೧೯೨೭ರಿಂದಲೂ ಇತ್ತು. ಇದು ಧಾರ್ಮಿಕ ಸಂಘಸಂಸ್ಥೆಗಳ ಮಠಮಾನ್ಯಗಳ ಹಾಗೂ ದೇವಾಲಯಗಳ ಭೂಹಿಡುವಳಿಗಳಿಗೆ ಸಂಬಂಧಿಸಿದ ಆಡಳಿತವನ್ನು ನೋಡಿಕೊಳ್ಳುತ್ತಿತ್ತು. ಈ ಅವಧಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ದೇವಾಲಯಗಳು ಹೆಚ್ಚು ಭೂಹಿಡುವಳಿಗಳ ಒಡೆತನವನ್ನು ಹೊಂದಿದ್ದವು. ಇದಕ್ಕೆ ಸಂಬಂಧಿಸಿದಂತೆ ಧಾರ್ಮಿಕ ಮತ್ತು ದತ್ತಿ ಆಯುಕ್ತರಲ್ಲಿರುವ ದಾಖಲೆಗಳನ್ನು ಗಮನಿಸಿದರೆ ಅವುಗಳು ಹೊಂದಿರುವ ಭೂಹಿಡುವಳಿಯ ಪ್ರಭಾವವನ್ನು ಗಮನಿಸಬಹುದು. ಇನಾಂಗಳ ರದ್ಧತಿ, ಕಾಯಿದೆ ೧೯೫೫ರ ಪ್ರಕಾರ ಅವುಗಳಿಗೆ ತಸ್ತಿಕ್ ಮಂಜೂರಾತಿ ಆದೇಶ ನೀಡಲಾಯಿತು. ಉದಾಹರಣೆಗೆ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕು, ರಾಮಸಾಗರ ಗ್ರಾಮದ ಜಟಿಂಗರಾಮೇಶ್ವರ ದೇವಾಲಯ

೧೭೨೨.೩೬ಗುಂಟೆ ಭೂಹಿಡುವಳಿಯ ಒಡೆತನವನ್ನು ೧೯೫೫ಕ್ಕಿಂತ ಮೊದಲು ಹೊಂದಿತ್ತು.[೬೯] ಇಷ್ಟೊಂದು ಅಪಾರವಾದ ಭೂಮಿಯನ್ನು ೭೩ಜನ ಗೇಣಿದಾರರಿಗೆ ದೇವಾಲಯದ ಆಡಳಿತ ವರ್ಗ ಗುತ್ತಿಗೆಗೆ ಕೊಟ್ಟಿರುವುದು ಕಂಡುಬರುತ್ತದೆ. ಗುತ್ತಿಗೆದಾರರು ತಮಗೆ ಸರಿ ಎನ್ನಿಸುವಂತೆ ಪ್ರತ್ಯೇಕ ಸರ್ವೇನಂಬರ್ ಅನುಸರಿಸಿಯೇ ಗುತ್ತಿಗೆ ಪಡೆದಿದ್ದರು. ಪ್ರತಿಯೊಬ್ಬ ಗುತ್ತಿಗೆದಾರನು ಸಾಮಾನ್ಯವಾಗಿ ಹೆಚ್ಚೆಂದರೆ ೪೬ ಎಕರೆ ಇಪ್ಪತ್ತೊಂದು ಗುಂಟೆಯವರೆಗೂ ದೇವಾಲಯದ ಭೂಮಿಯನ್ನು ಗುತ್ತಿಗೆ ಪಡೆದಿರುವುದು ತಿಳಿಯುತ್ತದೆ. ಗುತ್ತಿಗೆ ಪಡೆದಿರುವ ಕಡಿಮೆ ಭೂಹಿಡುವಳಿ ಎಂದರೆ ೧೦ ಎಕರೆವರೆಗೂ ಪಡೆದಿದ್ದಾರೆ. ಈ ಜಟಂಗರಾಮೇಶ್ವರ ದೇವಾಲಯದ ಭೂಮಿಯು ಹೆಚ್ಚಿನ ಪ್ರಮಾಣದಲ್ಲಿ ಖುಷ್ಕಿ ಭೂಮಿಯನ್ನು, ಅಲ್ಪಪ್ರಮಾಣದಲ್ಲಿ ಭಾಗಾಯ್ತು ಭೂಮಿಯನ್ನು ಹೊಂದಿತ್ತು. ಈ ವಿವರವು ಮುಜರಾಯಿ ಇಲಾಖೆಯ ದಾಖಲೆಗಳಿಂದ ತಿಳಿಯುತ್ತದೆ. ಇದೇ ರೀತಿ ಚಿತ್ರದುರ್ಗದ ಕೆಲವು ದೇವಾಲಯಗಳು ಸುಮಾರು ೨೦೦೦ ಎಕರೆಯಷ್ಟು ಹೆಚ್ಚು ಪ್ರಮಾಣದ ಭೂಹಿಡುವಳಿಯ ಒಡೆತವನ್ನು ಹೊಂದಿದ್ದವು. ಆದಕ್ಕೆ ಉದಾಹರಣೆ ಹರಿಹರ ತಾಲೂಕಿನ ಕೊಮಾರನಹಳ್ಳಿಯ, ಶ್ರೀರಂಗನಾಥಸ್ವಾಮಿ ದೇವಾಲಯ. ಅದು ಇಂದಿಗೂ ಸುಮಾರು ೪೫,೬೬೩ ರೂ. ತಸ್ತಿಕ್ ಪಡೆಯುತ್ತಿದೆ. ಹಾಗೆಯೇ ಹರಿಹರದ ಹರಿಹರೇಶ್ವರ ದೇವಾಲಯ. ಹಿರಿಯೂರಿನ ವೆಂಕಟರಾಮಣಸ್ವಾಮಿ ದೇವಾಲಯ ಸುಮಾರು ೨೦೦೦ ಎಕರೆ ಭೂಮಿಯನ್ನು ಇನಾಂ ಆಗಿ ಹೊಂದಿದ್ದವು. ಬಹು ಹಿಂದಿನಿಂದಲೂ ಕಾಯಿದೆಗಳಿಂದ ಧಾರ್ಮಿಕ ಸಂಸ್ಥೆಗಳಿಗೆ ಸೇರಲ್ಪಟ್ಟ ಇನಾಂ ಹಿಡುವಳಿಗಳನ್ನು ವ್ಯಕ್ತಿಗಳು ದುರುಪಯೋಗಪಡಿಸಿಕೊಳ್ಳದಂತೆ ರಾಜರು, ಸಂಬಂಧಿಸಿದ ಅಧಿಕಾರಿಗಳು ಮತ್ತು ಗ್ರಾಮದ ಪಟೇಲರು ರಕ್ಷಣೆ ನೀಡಿರುವುದನ್ನು ಅಧ್ಯಯನದಿಂದ ತಿಳಿಯಬಹುದು.

ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಪರಿಸ್ಥಿತಿಯ ಬದಲಾವಣೆಗಳಿಂದಾಗಿ ಹಾಗೂ ಭೂಸುಧಾರಣೆ ಕ್ರಮದಿಂದಾಗಿ ಮೊದಲಿನ ಸಾಮಾಜಿಕ ಮತ್ತು ಧಾರ್ಮಿಕ ಪ್ರಭಾವಗಳು ಕಳೆದುಕೊಳ್ಳುತ್ತಾ ಬಂದವು. ಹೀಗಾಗಿ ಬಹಳಷ್ಟು ಮಂದಿ ಇನಾಂ ಭೂಹಿಡುವಳಿಗಳನ್ನು ಮಾರಿ ಪಟ್ಟಣಕ್ಕೆ ವಲಸೆ ಹೋದರು. ಈ ರೀತಿಯ ಜೀವನ ಕ್ರಮ ಚಿತ್ರದುರ್ಗ ಪ್ರದೇಶದಲ್ಲಿಯೂ ನಡೆದಿರುವುದಕ್ಕೆ ಉದಾಹರಣೆಗಳಿವೆ. ೧೯೫೫ರಲ್ಲಿ ಇನಾಂ ರದ್ಧತಿಯ ಕಾನೂನು ಜಾರಿಗೆ ಬರುವುದಕ್ಕೆ ಮುಂಚೆ ಬಹಳಷ್ಟು ಇನಾಂದಾರರು ತಮ್ಮ ಭೂಮಿಯನ್ನು ಮಾರಿಕೊಂಡಿದ್ದರಿಂದ ಈ ಕಾನೂನಿನ ಉದ್ದೇಶ ಅಷ್ಟಾಗಿ ಸಫಲವಾಗಲಿಲ್ಲ. ದೇವಾಲಯಗಳು ಸಹ ತಮ್ಮ ಭೂಹಿಡುವಳಿಗಳನ್ನು ಉಳಿಸಿ

ಕೊಳ್ಳಲು ಸಾಧ್ಯವಾಗದೆ, ತಸ್ತಿಕ್ ಪಡೆಯುವುದರಲ್ಲಿಯೇ ತಟಸ್ಥವಾಗಿರುವುದನ್ನು ಅಧ್ಯಯನದಿಂದ ತಿಳಿಯುತ್ತದೆ. ಇಂತಹ ಕೆಲವು ಪ್ರಮುಖ ಇನಾಂ ದೇವಾಲಯಗಳ ಪಟ್ಟಿಯನ್ನು ಕೆಳಗಿನಂತೆ ಗಮನಿಸಬಹುದು.[೧೦೦]

ಸ್ಥಳಗಳು	ದೇವಾಲಯಗಳು	ತಸ್ತಿಕ್ (ರೂಪಾಯಿಗಳಲ್ಲಿ)
ಚಿತ್ರದುರ್ಗ ತಾಲೂಕು		
೧. ಭೀಮಸಮುದ್ರ	ಶ್ರೀ ಭೀಮೇಶ್ವರ ದೇವಾಲಯ	೮,೨೫೫
೨. ಕಬ್ಬಿಗನಹಾಳು	ಶ್ರೀ ಕಣಿವೆ ಮಾರಮ್ಮ	೭,೧೮೯
೩. ಬೆಳಗಟ್ಟ	ಶ್ರೀ ಹನುಮಂತ ದೇವಾಲಯ	೫,೭೩೯
೪. ಹಂಪನೂರು	ಶ್ರೀ ರಂಗನಾಥಸ್ವಾಮಿ	೫,೬೪೩
ಚಳ್ಳಕೆರೆ ತಾಲೂಕು		
೧. ನಾಯಕನಹಟ್ಟಿ	ಶ್ರೀ ಗುರುತಿಪ್ಪೇರುದ್ರಸ್ವಾಮಿ ಮಠ	೧೪,೧೦೯
೨. ಪರುಶುರಾಮಪುರ	ಶ್ರೀ ವಿಶ್ವನಾಥಸ್ವಾಮಿ	೭,೧೧೪
೩. ತಿಪ್ಪೇರೆಡ್ಡಿಹಳ್ಳಿ	ಶ್ರೀ ಅಂಜನೇಯಸ್ವಾಮಿ ದೇವಾಲಯ	೬,೦೦೧
ಜಗಳೂರು ತಾಲೂಕು		
೧. ಕಲ್ಲೇದೇವರಪುರ	ಶ್ರೀ ಕಲ್ಲೇಶ್ವರ ದೇವಾಲಯ	೧೧,೨೧೯
೨. ಬಿಳಿಚೋಡು	ಶ್ರೀ ಚನ್ನಕೇಶವ ದೇವಾಲಯ	೪,೨೪೦
೩. ಬಸವನಕೋಟೆ	ಶ್ರೀ ಹನುಮಂತ ದೇವಾಲಯ	೫,೫೪೫
ಹೊಳಲ್ಕೆರೆ ತಾಲೂಕು		
೧. ಹೊರಕೆರೆದೇವಪುರ	ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ	೭,೯೪೯
೨. ಹೊಳಲ್ಕೆರೆ	ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ	೩,೨೧೮
೩. ಕಣುಗಲಿ	ಶ್ರೀ ರಂಗನಾಥ ದೇವಾಲಯ	೨,೩೪೯
೪. ತಾಳ್ಯ	ಶ್ರೀ ಹನುಮಂತ ದೇವಾಲಯ	೨,೨೮೫
ಮೊಳಕಾಲ್ಮೂರು ತಾಲೂಕು		
೧. ರಾಮಸಾಗರ	ಶ್ರೀ ಜಟಂಗರಾಮೇಶ್ವರ ದೇವಾಲಯ	೪೫,೩೮೦
೨. ಶಿರೆಕೊಳ	ಶ್ರೀ ರಾಘವೇಂದ್ರಸ್ವಾಮಿ ದೇವಾಲಯ	೬,೧೩೫
೩. ಬ್ರಾಂಡವಿ	ಶ್ರೀ ಪ್ರಾಣದೇವರು	೨,೯೩೮
ಹಿರಿಯೂರು ತಾಲೂಕು		
೧. ಕೊಡ್ಲಹಳ್ಳಿ	ಶ್ರೀ ಸಂಗಮೇಶ್ವರ ದೇವಾಲಯ	೧೫,೦೦೬
೨. ಹಿರಿಯೂರು	ಶ್ರೀ ವೆಂಕಟರಮಣಸ್ವಾಮಿ ದೇವಾಲಯ	೪೧,೪೯೧

೩. ಹಿರಿಯೂರು	ಶ್ರೀ ಸತ್ಯನಾರಾಯಣಸ್ವಾಮಿ ದೇವಾಲಯ	೨೫,೬೪೬
೪. ಅಂಬಲಗೆರೆ	ಶ್ರೀ ರಂಗನಾಥ ದೇವಾಲಯ	೧೧,೨೬೧
ಹರಿಹರ ತಾಲೂಕು		
೧. ಕೊಮಾರನಹಳ್ಳಿ	ಶ್ರೀ ರಂಗನಾಥ ದೇವಾಲಯ	೪೫,೬೬೩
೨. ಹರಿಹರ	ಶ್ರೀ ಹರಿಹರೇಶ್ವರ ದೇವಾಲಯ	೧೮,೮೬೪
೩. ಬಾಮವಳ್ಳಿ	ಶ್ರೀ ಹನುಮಂತ ದೇವಾಲಯ	೧೮,೮೬೪
೪. ಯಲವಟ್ಟಿ	ಶ್ರೀ ಹನುಮಂತ ದೇವಾಲಯ	೯,೪೫೧
ಹೊಸದುರ್ಗ ತಾಲೂಕು		
೧. ಬಾಗೂರು	ಶ್ರೀ ಚೆನ್ನಕೇಶವ ದೇವಾಲಯ	೧೮,೭೭೮
೨. ದೇವಪುರ	ಶ್ರೀ ಹಾಲರಾಮೇಶ್ವರ ಕ್ಷೇತ್ರ	೫,೮೮೩
೩. ಮಧುರೆ	ಶ್ರೀ ಆಂಜನೇಯಸ್ವಾಮಿ ದೇವಾಲಯ	೪,೩೯೦
ದಾವಣಗೆರೆ ತಾಲೂಕು		
೧. ಕಡ್ಲೆಬಾಳು	ಶ್ರೀ ಪ್ರಾಣದೇವರು	೨೫,೫೩೨
೨. ಕೋಡಿಹಳ್ಳಿ	ಶ್ರೀ ಪ್ರಾಣದೇವರು	೩,೦೨೮
೩. ದೊಡ್ಡಬಾತಿ	ಶ್ರೀ ಸಿದ್ಧೇಶ್ವರ ದೇವಾಲಯ	೫,೨೮೮

ಇದೇ ರೀತಿ ಚಿತ್ರದುರ್ಗ ತಾಲೂಕಿನಲ್ಲಿ ೭೩, ಚಳ್ಳಕೆರೆ ತಾಲೂಕಿನಲ್ಲಿ ೪೦, ದಾವಣಗೆರೆ ತಾಲೂಕಿನಲ್ಲಿ ೫೮, ಜಗಳೂರು ತಾಲೂಕಿನಲ್ಲಿ ೪೯, ಹೊಳಲ್ಕೆರೆ ತಾಲೂಕಿನಲ್ಲಿ ೩೪, ಹಿರಿಯೂರು ತಾಲೂಕಿನಲ್ಲಿ ೪೦, ಹರಿಹರ ತಾಲೂಕಿನಲ್ಲಿ ೩೦, ಹೊಸದುರ್ಗ ತಾಲೂಕಿಗಲ್ಲಿ ೭೪, ಮೊಳಕಾಲ್ಮೂರು ತಾಲೂಕಿನಲ್ಲಿ ೨೫, ಒಟ್ಟು ಚಿತ್ರದುರ್ಗ ಜಿಲ್ಲೆಯಲ್ಲಿ ಭೂಹಿಡುವಳಿಯನ್ನು ಹೊಂದಿದ ೩೨೩ ಇನಾಂ ದೇವಾಲಯಗಳಿವೆ.

ನಾಲ್ಕನೇ ಘಟ್ಟದ ಅಧ್ಯಯನ

ದಿವಾನರ ಕಾಲದ ಭೂ ಹಿಡುವಳಿ ವ್ಯವಸ್ಥೆ ೧೮೮೧ - ೧೯೪೭

ಚಿತ್ರದುರ್ಗ ಪ್ರದೇಶದಲ್ಲಿ ೧೮೮೧ ರಿಂದ ೧೯೪೭ರ ಅವಧಿಯಲ್ಲಿಯೂ ಖುಷ್ಕಿ, ತರಿ ಹಾಗೂ ಭಾಗಾಯ್ತು ಭೂಹಿಡುವಳಿಗಳಿವೆ. ಕಮೀಷನರ ಕಾಲದ ೧೮೬೮ - ೬೯ರಲ್ಲಿ ರೆವಿನ್ಯೂ ಸರ್ವೇ ಮತ್ತು ಸೆಟ್ಲಮೆಂಟಿಗೆ ಅನುಗುಣವಾಗಿ ವಿಭಾಗಿಸಿದ್ದ ಭೂಹಿಡುವಳಿಗಳನ್ನು ೧೯೦೪-೧೯೦೫ರಲ್ಲಿ ಪುನಃ ಪರಿಷ್ಕರಿಸಲಾಯಿತು. ಪರಿಷ್ಕೃತ ಭೂಹಿಡುವಳಿಗಳನ್ನು ಕೋಷ್ಟಕ ೨ರಲ್ಲಿ ಸೂಚಿಸಿರುವಂತೆ ಖುಷ್ಕಿ,

ತರಿ ಮತ್ತು ಭಾಗಾಯ್ತು ಭೂಹಿಡುವಳಿಗಳ ಜೊತೆಗೆ ಇನಾಂ ಭೂಹಿಡುವಳಿ, ಅಮೃತಮಹಲ್ ಹುಲ್ಲುಗಾವಲು ಇರುವುದು ಸ್ಪಷ್ಟವಾಗಿ ತಿಳಿಯುತ್ತದೆ. ೧೯೦೪-೧೯೦೫ರಲ್ಲಿ ಈ ಪ್ರದೇಶವು ಹೆಚ್ಚಿನ ಪ್ರಮಾಣದಲ್ಲಿ ಖುಷ್ಕಿ ಭೂಹಿಡುವಳಿಗಳನ್ನು ಹೊಂದಿರುವ ಬಗ್ಗೆ ಅಂಕಿ-ಅಂಶಗಳು ಸ್ಪಷ್ಟಪಡಿಸುತ್ತವೆ.[೧೦೧]

ಭಾರತೀಯ ಜನಸಂಖ್ಯೆ ೧೯೧೧ರ ಅಂಕಿ-ಅಂಶದಲ್ಲಿ ಚಿತ್ರದುರ್ಗ ಜಿಲ್ಲೆಯ ಜನಸಂಖ್ಯೆ ೫,೬೪,೭೪೩ ಜನರಿದ್ದಾರೆ. ಇದೇ ಅಂಕಿ ಅಂಶದ ಅಧ್ಯಯನದ ಪ್ರಕಾರ ಈ ಪ್ರದೇಶದಲ್ಲಿ ಒಟ್ಟು ಭೂಕಂದಾಯದ ಆದಾಯ ೯.೧೭೩ರಷ್ಟು ಇತ್ತು. ಕೃಷಿ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸಿದ ಸಾಮಾನ್ಯ ಭೂಹಿಡುವಳಿದಾರರ ಸಂಖ್ಯೆ ೩೫೮.೦೨೫ ಆಗಿತ್ತು. ನಿಜವಾದ ಭೂಹಿಡುವಳಿದಾರರ ಸಂಖ್ಯೆ ೩೦೦.೪೭೪ ಜನರಿದ್ದರು. ಕೃಷಿ ಗೇಣಿದಾರರು ೫೭.೫೫೧ ಜನರಿದ್ದರು. ಹಾಗೆಯೇ ಭೂ ಒಡೆಯರಾಗಿದ್ದು, ಕೃಷಿ ಉತ್ಪಾದನೆಯಲ್ಲಿ ಭಾಗವಹಿಸದೇ ಇದ್ದವರು ೮.೨೫೫ ಜನರಿದ್ದರು. ಇವರಲ್ಲದೆ ಭೂಹಿಡುವಳಿಯ ಗೇಣಿದಾರರಾಗಿದ್ದು, ಕೃಷಿ ಉತ್ಪಾದನೆಯಲ್ಲಿ ತೊಡಗದೇ ಇದ್ದವರು ೯೧೮ ಜನರಿದ್ದರೆಂದು ಅಂಕಿ-ಅಂಶಗಳು ಸ್ಪಷ್ಟಪಡಿಸುತ್ತವೆ.[೧೦೨]

ಈ ಹಿನ್ನೆಲೆಯಲ್ಲಿ ೧೯೨೦ರಿಂದ ೧೯೨೫ರವರೆಗಿನ ಭೂ ದಾಖಲೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ೧೯೨೦-೨೧ರಲ್ಲಿ ಸಾಗುವಳಿಗೊಸ್ಕರ ಉಪಯೋಗವಾಗಿದ್ದ ಭೂಪ್ರದೇಶ ೧೪,೯೦,೩೨೬ ಎಕರೆ ಪ್ರದೇಶವಾಗಿತ್ತು. ಹಾಗೆಯೇ ೧೯೨೪-೨೫ರಲ್ಲಿ ೧೫,೦೦,೩೬೪ ಎಕರೆ ಪ್ರದೇಶ ಸಾಗುವಳಿಯಾಗಿತ್ತು.[೧೦೩] ಅಂದಿನ ಚಿತ್ರದುರ್ಗ ಪ್ರದೇಶದ ಭೂ ಹಿಡುವಳಿದಾರರನ್ನು ಅಧ್ಯಯನದಲ್ಲಿ ಆರು ವಿಧವಾಗಿ ಗುರುತಿಸಬಹುದು. ಅವರನ್ನು ಒಂದು ಎಕರೆಗಿಂತ ಕಡಿಮೆ ಭೂಹಿಡುವಳಿದಾರರು, ಒಂದರಿಂದ ಐದು ಎಕರೆವರೆಗಿನ ಭೂ ಹಿಡುವಳಿದಾರರು, ಐದರಿಂದ ಹತ್ತು ಎಕರೆವರೆಗಿನ ಭೂಹಿಡುವಳಿದಾರರು, ಹತ್ತರಿಂದ ಐವತ್ತು ಎಕರೆವರೆಗಿನ ಭೂಹಿಡುವಳಿದಾರರು, ಐವತ್ತರಿಂದ ನೂರು ಎಕರೆವರೆಗಿನ ಭೂ ಹಿಡುವಳಿದಾರರು, ನೂರರಿಂದ ಐದನೂರು ಎಕರೆವರೆಗಿನ ಭೂಹಿಡುವಳಿ ದಾರರು ಮತ್ತು ಐನೂರು ಎಕರೆಗಿಂತ ಹೆಚ್ಚಿನ ದೊಡ್ಡ ಭೂಹಿಡುವಳಿದಾರರೆಂಬುದಾಗಿ ಗುರುತಿಸ ಬಹುದು. ಕೋಷ್ಟಕ ೩ರಲ್ಲಿ ೧೯೨೧ ರಿಂದ ೧೯೨೫ರವರೆಗಿನ ಭೂಹಿಡುವಳಿದಾರರು ಹೊಂದಿರುವ ಶೇಕಡವಾರು ಅಂಕಿ-ಅಂಶಗಳನ್ನು ನೀಡಲಾಗಿದೆ. ಈ ಅಂಕಿ-ಅಂಶಗಳನ್ನು ಗಮನಿಸಿದರೆ ಒಂದರಿಂದ ಹತ್ತು ಎಕರೆ ಭೂಹಿಡುವಳಿದಾರರ ಸಂಖ್ಯೆ ಅಧಿಕ ಪ್ರಮಾಣದಲ್ಲಿತ್ತು. ೧೯೨೧-೨೨ರಲ್ಲಿ ೧,೫೧,೩೭೬ಜನ ಭೂಹಿಡುವಳಿದಾರರಿದ್ದರು. ಅದೇ ರೀತಿ ಚಿತ್ರದುರ್ಗ ಪ್ರದೇಶದಲ್ಲಿ ನೂರರಿಂದ

ಭೂಹಿಡುವಳಿ ಹಂಚಿಕೆ ೧೯೦೪-೧೯೦೫ (ಎಕರೆಗಳಲ್ಲಿ)

ಕೋಷ್ಟಕ ೨

ಕೃಷಿಭೂಮಿಗಳು	ಚಿತ್ರದುರ್ಗ	ಚಳ್ಳಕೆರೆ	ಹೊಳಲ್ಕೆರೆ	ಹೊಸದುರ್ಗ	ಜಗಳೂರು	ಮೊಳಕಾಲ್ಮೂರು	ದಾವಣಗೆರೆ	ಹಿರಿಯೂರು
೧	೨	೩	೪	೫	೬	೭	೮	೯
೧. ಖುಷ್ಕಿ	೧೭೫.೭೩೨	೧೬೩.೪೮೧	೧೫.೫೭೪	೧೪೦.೮೧೩.೮	೧೨೦.೪೦೪	೫೫.೨೭೦	೨೪೧೫೮೮	೧೮೯.೯೦೦
೨. ತರಿ	೬.೩೮೮	೬.೭೮೪	೪.೮೫೦	೩.೩೧೭.೩೫	೧.೪೬೭	೩.೨೩೧	೩.೭೧೧	೫.೧೧೭
೩. ಭಾಗಾಯ್ತು	೩.೩೭೧	೧೨.೬೩೯	೩.೩೮೬	೮.೩೫೪.೩೮	೨.೩೨೧	೬.೫೦೨	೧.೬೫೦	೮.೦೯೩
ಒಟ್ಟು ಕೃಷಿಭೂಮಿ	೧೮೫೪೯೧	೧೮೨.೯೦೪	೧೬೩.೯೯೦	೧೫೨೪೮೬	೧೨೪.೧೯೨	೬೫.೦೦೩	೨೪೬.೯೪೯	೩೩.೧೧೦
೪. ಕೃಷಿ ಮಾಡದ ಭೂಮಿ	೩೧.೨೩೫	೧೨೫.೧೪೩	೨೦೯.೧೭೦	೧೯೩.೮೧೨	೨೬.೩೩೫	೯೦.೦೨೧	೫೬.೨೭೮	೨೩೬.೮೫೬
೫. ಇನಾಂ ಭೂಮಿ	----	----	೧,೧೩೪	೭.೭೭೩	೫೭೦	೨.೯೩೨	------	೧,೨೭೧
೬. ಅಮೃತ್ ಮಹಲ್‌ಕಾವಲು	----	----	----	೧೦.೦೨೪	----	----	----	----

ಐದನೂರು ಎಕರೆವರೆಗಿನ ಭೂಹಿಡುವಳಿದಾರರು ೧೯೨೧-೨೨ರಲ್ಲಿ ೯೨೮ ಜನರಿದ್ದರು. ಹಾಗೆ ಐನೂರು ಎಕರೆಗಿಂತ ಹೆಚ್ಚಿನ ದೊಡ್ಡ ಭೂಹಿಡುವಳಿದಾರರು ೧೯೨೦-೨೧ರಲ್ಲಿ ಹನ್ನೊಂದು ಜನರಿದ್ದರು. ಅದೇ ೧೯೨೪-೨೫ರಲ್ಲಿ ಆರು ಜನರಿದ್ದರು. ಅವರು ಹೊಂದಿದ್ದ ಭೂಹಿಡುವಳಿ ವಿಸ್ತಾರ ೬,೧೫೦ ಎಕರೆಯಷ್ಟಾಗಿತ್ತು.[೧೦೪]

ಭೂಹಿಡುವಳಿದಾರರಲ್ಲಿ ಭೂಕಂದಾಯ ಪಾವತಿಸುತ್ತಿದ್ದ ಅಂಕಿ-ಅಂಶಗಳನ್ನು ಗಮನಿಸುವುದಾದರೆ ಐದರಿಂದ ಇಪ್ಪತ್ತೈದು ರೂ.ವರೆಗೆ ಭೂಕಂದಾಯ ಪಾವತಿಸುವ ಭೂ ಹಿಡುವಳಿದಾರರು ಅಧಿಕ ಪ್ರಮಾಣದಲ್ಲಿದ್ದರು. ೧೯೨೪-೨೫ರಲ್ಲಿ ೪೧,೪೬೯ ಹಿಡುವಳಿದಾರರು ೩,೭೮,೫೫೨ ರೂ.ಗಳನ್ನು ಕಂದಾಯ ಪಾವತಿಸಿದ್ದಾರೆ. ಆದೇ ರೀತಿ ಐದನೂರುಕ್ಕಿಂತ ಹೆಚ್ಚು ಕಂದಾಯ ಪಾವತಿಸುವ ಭೂಹಿಡುವಳಿದಾರರು. ಚಿತ್ರದುರ್ಗ ಪ್ರದೇಶದಲ್ಲಿ ೧೯೨೧-೨೨ರಲ್ಲಿ ಹನ್ನೊಂದು ಜನರಿದ್ದರು. ಆ ವರ್ಷ ಅವರು ಪಾವತಿಸಿದ ಒಟ್ಟು ಭೂಕಂದಾಯ ೬,೫೮೩ ರೂ.ಗಳಾಗಿತ್ತು. ಹಾಗೆಯೇ ಒಟ್ಟು ಸಾಗುವಳಿದಾರರ ಅಧೀನದಲ್ಲಿದ್ದ ಭೂಹಿಡುವಳಿಗಳು ೧೯೨೪-೨೫ ರಲ್ಲಿ ೧೫,೦೦,೩೬೪ ಎಕರೆ ಪ್ರದೇಶವಾಗಿತ್ತು.[೧೦೫]

ಖುಷ್ಕಿ ಭೂಹಿಡುವಳಿಗಳಲ್ಲಿ ಸರಾಸರಿ ಇಳುವರಿಯ ಬಗ್ಗೆ ಮಾಹಿತಿ ೧೯೨೫ಕ್ಕೆ ಸಂಬಂಧಿಸಿದಂತೆ ದೊರಕುತ್ತದೆ. ಇದರ ಪ್ರಕಾರ ಸರಾಸರಿ ಇಳುವರಿ ರಾಗಿಗೆ ಸಂಬಂಧಿಸಿದಂತೆ ೨೫೦ ರಿಂದ ೩೦೦ ಸೇರು, ಜೋಳ ೪೦೦-೭೦೦ ಸೇರು ಬೆಳೆಯುತ್ತಿದ್ದರು ಎನ್ನಲಾಗಿದ್ದು, ಖುಷ್ಕಿ ಸಾಗುವಳಿಯು ರೈತರಿಗೆ ಹೆಚ್ಚು ಲಾಭದಾಯಕವಾಗಿರಲಿಲ್ಲ. ಇಲ್ಲಿ ಜೀವನಾಧಾರಿತ ಕೃಷಿಯನ್ನು ಹೆಚ್ಚಾಗಿ ಕಾಣಬಹುದು. ಈ ಕೃಷಿಯಿಂದ ದೊರಕುತ್ತಿದ್ದ ಉತ್ಪಾದನೆ ಕೃಷಿಕರ ಕುಟುಂಬ ವರ್ಗದವರಿಗೆ ಆಹಾರ ಮತ್ತು ಅವರ ದನಗಳಿಗೆ ಮೇವು ಒದಗಿಸಲು ಸಹಾಯಕವಾಗುತ್ತಿತ್ತು.[೧೦೬] ಚಿತ್ರದುರ್ಗ ಜಿಲ್ಲೆಯಿಂದ ರಾಗಿಯನ್ನು ರಫ್ತು ಮಾಡಲಾಗುತ್ತಿತ್ತು. ಖುಷ್ಕಿ ಬೆಳೆಗಳಲ್ಲಿ ರಾಗಿ ಪ್ರಮುಖವಾದ ಆಹಾರ ಬೆಳೆಯಾಗಿತ್ತು. ೧೯೨೩-೨೪ರಲ್ಲಿ ರಾಗಿಯನ್ನು ೧೩೭,೯೩ರಷ್ಟು ಎಕರೆ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು.

ತರಿ ಜಮೀನಿನಲ್ಲಿ ಬೆಳೆಯುತ್ತಿದ್ದ ಮುಖ್ಯವಾದ ಬೆಳೆಗಳು ಕಬ್ಬು, ಭತ್ತ ನೀರಾವರಿ ಸೌಲಭ್ಯವನ್ನು ಹೊಂದಿದ್ದ ಸಾಗುವಳಿಯಲ್ಲಿ ಕೃಷಿಕರು ಮತ್ತು ಭೂಒಡೆಯರು ಬೇರೆಯಾಗಿದ್ದರು ಎಂದು ತಿಳಿದುಬರುತ್ತದೆ. ಆದ್ದರಿಂದ ಈ ದಿಸೆಯಲ್ಲಿ ಗುತ್ತಿಗೆ ಪದ್ಧತಿಯನ್ನು ಕಾಣಬಹುದಾಗಿತ್ತು.

ಗುತ್ತಿಗೆಯು ಮೂರು ವರ್ಷಗಳಿಗೆ ಸೀಮಿತವಾಗಿರುತ್ತಿತ್ತು. ಭತ್ತಕ್ಕೆ ಸಂಬಂಧಿಸಿದಂತೆ ಗುತ್ತಿಗೆ ಎಕರೆಗೆ ಒಂದರಿಂದ ಐದು ಖಂಡುಗಗಳಾಗಿರುತ್ತಿತ್ತು. ಭತ್ತದ ಸರಾಸರಿ ಇಳುವರಿ ೧೦ರಿಂದ ೧೫ ಪಲ್ಲವಾಗಿತ್ತು. ಅಂದಿನ ಚಿತ್ರದುರ್ಗ ಜಿಲ್ಲೆಯಲ್ಲಿ ೧೯೨೩-೨೪ರಲ್ಲಿ ಭತ್ತ ೨೫.೬೯೩ ಎಕರೆ ಪ್ರದೇಶದಲ್ಲಿಯೂ ಅದೇ ರೀತಿಯಾಗಿ ಕಬ್ಬು ೧.೧೭೮ ಎಕರೆ ಪ್ರದೇಶದಲ್ಲಿಯೂ ಬೆಳೆಯಲಾಗುತ್ತಿತ್ತು.[೧೦೭] ಅಂದು ಚಿತ್ರದುರ್ಗ ಜಿಲ್ಲೆಯಲ್ಲಿ ಸಣ್ಣ ಹಾಗೂ ದೊಡ್ಡ ಪ್ರಮಾಣದ ಸುಮಾರು ೩೫೦ಕ್ಕೂ ಹೆಚ್ಚು ದೊಡ್ಡ ಕೆರೆಗಳಿದ್ದವು. ದೊಡ್ಡ ಕೆರೆಗಳಲ್ಲಿ ಚಿತ್ರದುರ್ಗ ತಾಲೂಕಿನ ಭೀಮಸಮುದ್ರಕೆರೆ, ಭರಮಸಾಗರ ಕೆರೆ, ಚಳ್ಳಕೆರೆ ತಾಲೂಕಿನ ಪರಶುರಾಮಪುರಕೆರೆ, ಹಿರಿಯೂರು ತಾಲೂಕಿನ ಧರ್ಮಪುರಕೆರೆ, ಜಗಳೂರು ತಾಲೂಕಿನ ಸಂಗೇನಹಳ್ಳಿಕೆರೆ, ದಾವಣಗೆರೆ ತಾಲೂಕಿನ ಅಣಜಿಕೆರೆ, ಕೊಡಗನೂರುಕೆರೆ ಮತ್ತು ಹೊಳಲ್ಕೆರೆ ತಾಲೂಕಿನ ಮುದುಕದೂರುಕೆರೆಗಳು ಪ್ರಮುಖವಾದವುಗಳು. ಇವುಗಳ ಜೊತೆಗೆ ಶಾಗಲೆ ಹಳ್ಳ, ಹಗರಿ ಹಳ್ಳ, ವಾಣಿವಿಲಾಸ ಸಾಗರ ಜಲಾಶಯ ಮುಂತಾದವುಗಳು ಪ್ರಮುಖ ನೀರಾವರಿ ಸಂಪನ್ಮೂಲಗಳಾಗಿದ್ದವು.

ಅದೇ ರೀತಿ ಭಾಗಾಯ್ತು ಬೆಳೆಗಳಲ್ಲಿ ೧೯೨೩-೨೪ರಲ್ಲಿ ತೆಂಗು ೧೦.೪೬೦ ಎಕರೆ, ಅಡಿಕೆ ೩.೨೨೬ ಎಕರೆ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಚಿತ್ರದುರ್ಗ ಪ್ರದೇಶದ ಭೂಹಿಡುವಳಿಗಳ ಸ್ವರೂಪ ಅಂದಿನ ಕೃಷಿ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದವು. ಚಿತ್ರದುರ್ಗ ಪ್ರದೇಶದ ಭೂ ಹಿಡುವಳಿಗಳ ಸಂಖ್ಯೆ ಹಾಗೂ ಭೂಹಿಡುವಳಿಗಳ ವಿಸ್ತೀರ್ಣ ಎರಡರ ದೃಷ್ಟಿಯಿಂದಲೂ, ಅವುಗಳ ಸಂಖ್ಯೆಯನ್ನು ಗಮನಿಸಿದರೆ ದೊಡ್ಡ ಭೂಹಿಡುವಳಿಗಾರರ ಪ್ರಾಬಲ್ಯದಿಂದಲೂ ಹಲವು ಗ್ರಾಮಗಳು ಕೂಡಿದ್ದವು. ದೊಡ್ಡ ಭೂಹಿಡುವಳಿಗಳಲ್ಲಿ ಸಾಮಾನ್ಯವಾಗಿ ಅರ್ಧ ಕಿಲೊಮೀಟರುವರೆಗೆ ಉದ್ದವಾದ ಭೂಹಿಡುವಳಿಗಳು ಒಬ್ಬನೇ ವ್ಯಕ್ತಿಯ ಒಡೆತನದಲ್ಲಿರುವುದು, ಚಳ್ಳಕೆರೆ, ಜಗಳೂರು, ಹಿರಿಯೂರು ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿತ್ತು. ೧೯೨೩-೨೪ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸಾಮಾನ್ಯವಾಗಿ ಭೂ ಹಿಡುವಳಿಗಳ ಗಾತ್ರವು ಒಂದರಿಂದ ೫೦೦ ಎಕರೆ ಒಡೆತನ ಹೊಂದಿರುವ ಭೂ ಹಿಡುವಳಿದಾರರೂ ಇದ್ದರು. ಇದೇ ರೀತಿಯಾದ ಭೂಹಿಡುವಳಿದಾರರನ್ನು ಚಿತ್ರದುರ್ಗ ಪ್ರದೇಶ ದಲ್ಲಿಯೂ ಗುರುತಿಸಬಹುದು.[೧೦೮] ಭೂಹಿಡುವಳಿಗಳಂತೆ ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿ ಸಮುದಾಯ ಮತ್ತು ಸರಕಾರಕ್ಕೆ ಆದಾಯದ ಮೂಲವಾಗಿ ಪಶುಸಂಗೋಪನೆ ಬಹುಜನರ ಉದ್ಯೋಗವಾಗಿತ್ತು. ಇದಕ್ಕೆ ಹುಲ್ಲುಗಾವಲುಗಳು ಮೂಲ ಆಧಾರವಾಗಿದ್ದವು. ಈ ವಿಷಯ ಕುರಿತು ಮುಂದೆ ಚರ್ಚಿಸಲಾಗುತ್ತದೆ.

ಭೂಹಿಡುವಳಿಗಳ ಹಂಚಿಕೆಯನ್ನು ಗುರುತಿಸುವ ಕೋಷ್ಟಕ

ಕೋಷ್ಟಕ ೩

ವರ್ಷ	೧ ಎಕರೆಗಿಂತ ಕಡಿಮೆ ಭೂಹಿಡುವಳಿದಾರರು		೧ ರಿಂದ ೫ ಎಕರೆವರೆಗಿನ ಭೂಹಿಡುವಳಿದಾರರು		೫ ರಿಂದ ೧೦ಎಕರೆವರೆಗಿನ ಭೂಹಿಡುವಳಿದಾರರು		೧೦ರಿಂದ ೫೦ಎಕರೆವರೆಗಿನ ಭೂಹಿಡುವಳಿದಾರರು	
೧	೨	೩	೪	೫	೬	೭	೮	೯
	ಸಂಖ್ಯೆ	ವಿಸ್ತಾರ	ಸಂಖ್ಯೆ	ವಿಸ್ತಾರ	ಸಂಖ್ಯೆ	ವಿಸ್ತಾರ	ಸಂಖ್ಯೆ	ವಿಸ್ತಾರ
೧೯೨೦-೨೧	೧,೨೪೪	೧,೨೪೭	೧೨,೯೧೩	೪೬,೮೩೩	೧೯,೦೫೯	೧,೫೪,೧೦೩	೩೨,೧೭೩	೭,೭೨,೦೦೧
೧೯೨೧-೨೨	೧,೨೪೭	೧,೨೪೭	೧೨,೮೮೮	೧೮,೮೦೨	೧,೫೧,೩೭೬	೧,೫೧,೩೭೬	೩೨,೨೦೭	೭,೭೪,೦೬೪
೧೯೨೨-೨೩	೧,೨೮೭	೨,೩೧೫	೧೨,೯೬೪	೧೮,೮೦೨	೧೮,೮೬೦	೧,೫೩,೪೫೧	೩೨,೦೬೯	೭,೭೨,೨೨೫
೧೯೨೩-೨೪	೧,೨೧೩	೧,೧೨೨	೧೨,೯೭೩	೪೭,೮೩೫	೧೯,೧೨೫	೧,೫೫,೯೯೪	೩೨,೨೧೩	೭,೭೨,೧೮೬
೧೯೨೪-೨೫	೧,೧೭೮	೧,೧೦೫	೧೩,೨೧೧	೫೩,೪೮೦	೧೯,೦೬೮	೧,೩೭,೦೮೯	೩೨,೧೧೧	೭,೬೨,೦೨೪

ವರ್ಷ	೫೦ ರಿಂದ ೧೦೦ ಎಕರೆವರೆಗಿನ ಭೂಹಿಡುವಳಿದಾರರು		೧೦೦ ರಿಂದ ೫೦೦ಎಕರೆವರೆಗಿನ ಭೂಹಿಡುವಳಿದಾರರು		೫೦೦ಎಕರೆಗಿಂತ ಹೆಚ್ಚಿನ ಭೂಹಿಡುವಳಿದಾರರು	
೧	೨	೩	೪	೫	೬	೭
	ಸಂಖ್ಯೆ	ವಿಸ್ತಾರ	ಸಂಖ್ಯೆ	ವಿಸ್ತಾರ	ಸಂಖ್ಯೆ	ವಿಸ್ತಾರ
೧೯೨೦-೨೧	೪,೮೬೩	೩,೫೨,೫೯೫	೯೬೬	೧,೫೪,೯೩೭	೧೧	೮,೫೮೪
೧೯೨೧-೨೨	೪,೭೬೯	೩,೫೨,೫೬೩	೯೫೮	೧,೫೫,೧೯೪	೧೧	೮,೫೮೪
೧೯೨೨-೨೩	೪,೭೪೪	೩,೫೧,೪೪೯	೯೩೮	೧,೫೩,೭೦೦	೧೧	೮೫೮೪
೧೯೨೩-೨೪	೪,೭೩೧	೩,೫೦,೦೯೪	೯೨೩	೧,೫೪,೧೦೮	೮	೬,೬೧೫
೧೯೨೪-೨೫	೪,೭೧೫	೩,೪೬,೮೦೦	೯೦೫	೧,೯೩,೭೧೬	೬	೬,೧೫೦

ಚಿತ್ರದುರ್ಗ ಜಿಲ್ಲೆಯಲ್ಲಿ ೧೯೨೧ರಿಂದ ೧೯೨೫ರವರಗಿನ ಭೂ ಕಂದಾಯದ ವಿವರ (ರೂಪಾಯಿಗಳಲ್ಲಿ)

ಕೋಷ್ಟಕ ೪

ವರ್ಷ	೫ ರೂ.ಗಳಿಗಿಂತ ಕಡಿಮೆ ಭೂ ಕಂದಾಯ ಪಾವತಿಸುವ ಭೂ ಹಿಡುವಳಿದಾರರು		೫ ರಿಂದ ೨೫ ರೂ.ವರೆಗೆ ಭೂಕಂದಾಯ ಪಾವತಿಸುವ ಭೂ ಹಿಡುವಳಿದಾರರು		೨೫ ರಿಂದ ೧೦೦ ರೂ.ವರೆಗೆ ಭೂಕಂದಾಯ ಪಾವತಿಸುವ ಭೂ ಹಿಡುವಳಿದಾರರು		೧೦೦ರಿಂದ ೫೦೦ ರೂ.ವರೆಗೆ ಭೂಕಂದಾಯ ಪಾವತಿಸುವ		೫೦೦ರೂ.ಗಿಂತ ಹೆಚ್ಚು ಭೂಕಂದಾಯ ಪಾವತಿಸುವ ಭೂ ಹಿಡುವಳಿದಾರರು	
೧	೨	೩	೪	೫	೬	೭	೮	೯	೧೦	೧೧
	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
೧೯೨೦-೨೧	೧೮,೮೪೩	೫೮,೬೪೦	೪೦,೫೮೪	೩೮೧,೪೬೨	೧೧,೨೨೫	೩,೬೫,೭೯೧	೫೬೭	೭೯,೪೫೮	೯	೬,೨೦೨
೧೯೨೧-೨೨	೧೮,೮೩೮	೫೮,೮೦೨	೪೦,೫೫೨	೩,೭೩,೨೪೭	೧೦,೯೭೫	೩,೬೪,೫೨೧	೫೦೬	೮೨,೪೦೮	೧೧	೬,೫೮೩
೧೯೨೨-೨೩	೧೮,೮೪೭	೫೮,೮೬೧	೪೦,೪೨೯	೩,೭೧,೨೭೨	೧೧,೦೨೭	೩,೬೪,೭೭೮	೪೯೭	೮೨,೨೧೪	೧೦	೫,೮೫೫
೧೯೨೩-೨೪	೧೮,೮೬೦	೫೮,೯೧೩	೪೦,೫೬೭	೩,೭೧,೮೦೩	೧೦,೯೫೧	೧೦,೪೦,೭೯೦	೪೯೩	೮೬,೫೧೭	೪	೨,೪೮೦
೧೯೨೪-೨೫	೧೮,೨೩೧	೫೬,೩೧೬	೪೧,೪೩೯	೩,೭೮,೫೨೫	೧೧,೦೨೮	೩,೬೩,೪೪೦	೪೯೧	೮೭,೩೯೮	೪	೨,೪೮೨

ಹುಲ್ಲುಗಾವಲುಗಳು

ಮಾನವನು ವ್ಯವಸಾಯಕ್ಕೆ ಮುಂಚೆಯೇ ಪಶುಪಾಲನೆ ಮಾಡಲು ಪ್ರಾರಂಭಿಸಿದ್ದನು. ಪಶುಪಾಲನೆ ದೊಡ್ಡದಾಗುತ್ತ 'ಆಸ್ತಿ' ಪರಿಗಣನೆಗೆ ಬಂದ ಮೇಲೆ ಹುಲ್ಲುಗಾವಲುಗಳನ್ನು ರಕ್ಷಿಸಿಕೊಳ್ಳುವ ವ್ಯವಸ್ಥೆ ರೂಢಿಗೆ ಬಂದಿತು. ಈ ದೃಷ್ಟಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ಕಂಡುಬರುವ ಪ್ರಮುಖ ಬುಡಕಟ್ಟುಗಳ ಮ್ಯಾಸನಾಯಕರು, ಕಾಡುಗೊಲ್ಲರು ಮತ್ತು ಕುರುಬರು ಪ್ರಮುಖ ಪಶುಪಾಲಕರಾಗಿದ್ದರು. ಈ ಸಮುದಾಯಗಳೇ ಮೈಸೂರು ಒಡೆಯರ ಕಾಲದಲ್ಲಿಯೂ ಪ್ರಮುಖ ಪಶುಸಂಗೋಪನ ಸಮುದಾಯಗಳಾಗಿದ್ದವು.[೧೦೯] ಇವರ ಕಾಲದಲ್ಲಿ ಚಿತ್ರದುರ್ಗ ಜಿಲ್ಲೆಯ ಹುಲ್ಲುಗಾವಲುಗಳು ಇಲ್ಲಿನ ಜನರ ಆರ್ಥಿಕ ಜೀವನದ ಮೇಲೆ ಪ್ರಮುಖ ಪಾತ್ರವಹಿಸಿದ್ದವು. ೧೮೮೧ರಿಂದ ೧೯೪೭ರವರೆಗೂ ಸರಕಾರಿ ದನಗಳಾದ ಅಮೃತ್‌ಮಹಲ್ ತಳಿಯ ದನಗಳನ್ನು ಮೇಯಿಸುವುದಕ್ಕೋಸ್ಕರವೇ ಮೀಸಲಿಟ್ಟ ಹುಲ್ಲುಗಾವಲುಗಳಾಗಿದ್ದವು. ಈ ದನಗಳ ಸಾಕಾಣಿಕೆಯು ರಾಜ್ಯದ ಆದಾಯದ ಮೂಲವಾಗಿತ್ತು. ಈ ತಳಿಯ ಕರುಗಳು ತಾಯಿಹಾಲನ್ನು ಸಂಪೂರ್ಣವಾಗಿ ಕರುಗಳೇ ಕುಡಿದು ಚೆನ್ನಾಗಿ ಬೆಳೆಯುತ್ತಿದ್ದವು. ಇಂತಹ ರಾಸುಗಳ ತಳಿಯನ್ನು ಅಮೃತ ಮಹಲ್‌ತಳಿ ಎಂದು ಕರೆಯುತ್ತಿದ್ದರು. ಈ ತಳಿಯಿಂದ ಬಂದ ಕರುಗಳು ವ್ಯವಸಾಯಕ್ಕೆ ಯೋಗ್ಯವಾದ ಬಲಾಢ್ಯ ಶಕ್ತಿಯನ್ನು ಹೊಂದಿದ ದನಗಳಾಗಿ ಎಂತಹ ಕೃಷಿಕಾರ್ಯಕ್ಕೂ ಉಪಯೋಗವಾಗುತ್ತಿದ್ದವು. ಹೊಳಲ್ಕೆರೆಯಿಂದ ಗುಂಡೇರಿಗೆ. ಗುಂಡೇರಿಯಿಂದ ಸುಮಾರು ನಾಲ್ಕು-ಐದು ಕಿ.ಮೀ.ದೂರದಲ್ಲಿ ಉತ್ತರಕ್ಕೆ ಗುಂಡೇರಿ ಕೆರೆ ಇದೆ. ಇದು ಅತ್ಯಂತ ವಿಸ್ತಾರವಾದ ಸುಮಾರು ೫೦೦ ಎಕರೆಗೆ ನೀರು ಒದಗಿಸುವಂತಹ ಕೆರೆಯಾಗಿದೆ. ಈ ಗುಂಡೇರಿಯಿಂದ ಪಶ್ಚಿಮ ದಿಕ್ಕಿಗೆ ಹೋದರೆ ಎರಡು-ಮೂರು ಕಿ.ಮೀ. ಅಂತರದಲ್ಲಿ ರಾಮಗಿರಿ ಹುಲ್ಲುಗಾವಲು ಕಂಡುಬರುತ್ತದೆ. ಈ ಹುಲ್ಲುಗಾವಲಿನ ವಿಸ್ತೀರ್ಣ ಸುಮಾರು ೧೦,೦೦೦ ಎಕರೆಗಳು ಹಾಗೆಯೇ ಅದಕ್ಕೆ ಅಂಟಿಕೊಂಡಂತೆ ಹಾರೋಗುತ್ತಿ, ಕಾಯಿನಾಡು ಕಾವಲು ಎಂಬೆರಡು ಹುಲ್ಲು ಗಾವಲುಗಳಿವೆ.[೧೦೯] ಇವುಗಳ ವಿಸ್ತಾರ ಸುಮಾರು ೨೪೦೦ ಎಕರೆಗಳು. ಇವೆಲ್ಲವೂ ಒಂದಕ್ಕೊಂದು ಅಂಟಿಕೊಂಡಂತಹ ಹುಲ್ಲುಗಾವಲು ಪ್ರದೇಶಗಳು. ಕಾಯಿನಾಡು ಮತ್ತು ರಾಮಗಿರಿ ಎರಡೂ ಕಾವಲಿನಿಂದ ಸೇರಿಕೊಂಡು ಒಟ್ಟು ೬೦೦ ಅಮೃತ್ ಮಹಲ್ ರಾಸುಗಳು ಸಾಕಲ್ಪಟ್ಟಿದ್ದವು. ಈ ಬೆಟ್ಟ ಪ್ರದೇಶದಲ್ಲಿ ೩,೦೦೦ ಎಕರೆಯಷ್ಟು ಹುಲ್ಲುಗಾವಲನ್ನು ಮೈಸೂರು ಸರಕಾರವೇ ನೋಡಿಕೊಳ್ಳುತ್ತಿತ್ತು. ಹಾಗೆಯೇ ಸರಕಾರವು ಮುಖ್ಯವಾಗಿ ಕಂದಾಯ ಸಂಗ್ರಹಿಸುವ ವಿಧಾನದಲ್ಲಿ ಅವುಗಳ ನೋಂದಾಣಿ ಕ್ರಮದಲ್ಲಿ ಪ್ರತ್ಯೇಕವಾಗಿ

ದಾಖಲಿಸುವ ವಿಧಾನ ೧೯೩೩ರ ನಂತರ ಮೈಸೂರು ಸಂಸ್ಥಾನದಲ್ಲಿ ಜಾರಿಗೆ ಬಂದಿರುವುದನ್ನು ಗಮನಿಸಬಹುದಾಗಿದೆ.

ಭೂಹಿಡುವಳಿಗಳ ದಾಖಲೆ ವಿಧಾನ

ಚಿತ್ರದುರ್ಗ ಜಿಲ್ಲೆಯ ಭೂಹಿಡುವಳಿಗಳನ್ನು ದಾಖಲೆ ಮಾಡುವ ಕ್ರಮವು ಟಿಪ್ಪುವಿನ ಕಾಲದಿಂದಲೂ ಇತ್ತು. ಇದನ್ನು ದಿವಾನ್ ಪೂರ್ಣಯ್ಯನವರು ಪರಿಷ್ಕರಣೆ ಮಾಡಿದರು. ನಂತರ ಕಮೀಷನರುಗಳ ಕಾಲದಲ್ಲಿ ಭೂಹಿಡುವಳಿದಾರರಿಗೆ ಪಟ್ಟ ನೀಡುವ ಮೂಲಕ ಸಾಗುವಳಿದಾರರು ಹೊಂದಿರುವ ಭೂಮಿಯ ವಿವರವಾದ ಮಾಹಿತಿಯನ್ನು ಪಟ್ಟದ ಮೇಲಿಯೇ ದಾಖಲಿಸುತ್ತಿದ್ದರು. ನಂತರ ಮೈಸೂರು ಒಡೆಯರ ಕಾಲದಲ್ಲಿಯೂ ಈ ವಿಧಾನ ಜಾರಿಯಲ್ಲಿತ್ತು. ಆದರೆ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾದ ವಿವರದಲ್ಲಿ ೧೯೩೩ರ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ಭೂಹಿಡುವಳಿಗಳನ್ನು ಕುರಿತು ಅಧ್ಯಯನ ಮಾಡುವಾಗ ಮೂಲ ಆಕರವಾಗಿ ದೊರೆಯುವ ರಿಜಿಸ್ಟರ್‌ಗಳಲ್ಲಿ ಒರಿಜನಲ್ ಪ್ರಿಲಿಮಿನರಿ ರಿಕಾರ್ಡನ್ನು ಪ್ರತಿಯೊಂದು ಗ್ರಾಮಕ್ಕೆ ಒಂದರಂತೆ ತಯಾರಿಸಿರುತ್ತಾರೆ. ಈ ರಿಜಿಸ್ಟರ್ ಒಂದು ಗ್ರಾಮದಲ್ಲಿ ಕೃಷಿಗೊಳಪಟ್ಟ ಭೂಹಿಡುವಳಿಗಳ ದಾಖಲೆಯಾಗಿರುತ್ತದೆ. ಇದರ ಮುಖ್ಯಾಂಶಗಳೆಂದರೆ ಒಂದು ಗ್ರಾಮದ ಭೂಹಿಡುವಳಿದಾರರ ಸರ್ವೆ ನಂಬರ್, ಖಾತೆ ನಂಬರ್, ಖಾತೆದಾರನ ಹೆಸರು, ಪೋಡ್ ನಂಬರ್, ಆ ಭೂ ಹಿಡುವಳಿಯ ವಿಸ್ತೀರ್ಣ, ಎಕರೆ ಅಥವಾ ಗುಂಟೆಗಳಲ್ಲಿರುವುದನ್ನು ಮೂಲ ರೂಪದಲ್ಲಿರುವಂತೆ ನಮೂದಿಸಲಾಗಿರುತ್ತದೆ. ಈ ರಿಜಿಸ್ಟರ್‌ನಿಂದ ಯಾವ ಪ್ರದೇಶ ಸಾಗುವಳಿಗೆ ಒಳಪಟ್ಟಿದೆ ಅಥವಾ ಒಳಪಡದೇ ಇದೆಯೋ, ಹಾಗೆಯೇ ಇನಾಂ ಜಮೀನು ಅಥವಾ ಖಾಸಗಿ ಒಡೆತನದ ಭೂ ಹಿಡುವಳಿಯೋ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಒಟ್ಟಿನಲ್ಲಿ ಒಂದು ಗ್ರಾಮದ ಕೃಷಿ ಯೋಗ್ಯ ಭೂಹಿಡುವಳಿಗಳ ಸಂಪೂರ್ಣ ಮಾಹಿತಿಯನ್ನು ನೀಡುವುದರ ಜೊತೆಗೆ ಒಂದು ಪ್ರದೇಶದಲ್ಲಿ ಯಾವ ಸಮುದಾಯದವರು ಹೆಚ್ಚಿನ ಭೂ ಒಡೆತನ ಅಥವಾ ಸ್ವಾಧೀನದಲ್ಲಿ ಭೂಹಿಡುವಳಿಗಳನ್ನು ಇಟ್ಟುಕೊಂಡಿದ್ದಾರೆ ಎಂಬುದರ ಬಗ್ಗೆ ವಿವರಸಿಗುತ್ತದೆ.[೧೧೦]

ಹಾಗೆಯೇ ಆರ್. ಆರ್. ಫಾರಂ ನಂಬರ್ ೫ ಮತ್ತು ೬ ಇದನ್ನು ಇಂಡೆಕ್ಸ್ ಆಫ್ ಲ್ಯಾಂಡ್ ರಿಜಿಸ್ಟರ್ ಎಂದು ಕರೆಯುತ್ತಾರೆ. ಈ ರಿಜಿಸ್ಟರ್‌ನ್ನು ಕೇತುವಾರಿಗೆ ಬದಲಾಗಿ ಬರೆಯಲ್ಪಟ್ಟಿರುತ್ತದೆ.

ಇದೂ ಸಹ ಹಕ್ಕುದಾರನ ಹೆಸರು, ಹಕ್ಕಿನ ಸ್ವಭಾವ, ಭೂಹಿಡುವಳಿಯ ಸಂಬಂಧವುಳ್ಳ ಸರ್ವೆ ನಂಬರ್ ಅದರ ಉಪವಿಭಾಗವನ್ನು ತಿಳಿಯಲು ಸಹಾಯ ಮಾಡುತ್ತದೆ. ಈ ರಿಜಿಸ್ಟರನ್ನು ಎರಡು ಪ್ರತಿಗಳಾಗಿ ತಯಾರಿಸುತ್ತಿದ್ದರು. ಒಂದು ಪ್ರತಿ ತಾಲೂಕು ಕಛೇರಿಯಲ್ಲಿ ಮತ್ತೊಂದು ಪ್ರತಿ ಗ್ರಾಮದ ಶ್ಯಾನುಭೋಗರ ಬಳಿ ಇರುತ್ತಿದ್ದವು. ಈ ರಿಜಿಸ್ಟರ್‌ನಲ್ಲಿ ಗ್ರಾಮದ ಒಟ್ಟು ವಿಸ್ತೀರ್ಣ, ಪೋಡು, ಕರಾಬು, ಹುಲಬನ್ನಿ, ಸರಕಾರಿ ಜಮೀನು, ರಸ್ತೆ ಮಾರ್ಗ ಒಟ್ಟು ಭೂಹಿಡುವಳಿಗಳಿಂದ ದೊರೆಯ ಬಹುದಾದ ಕಂದಾಯದ ಮೊತ್ತ ಹೀಗೆ ಒಂದು ಗ್ರಾಮದ ಭೂವ್ಯವಸ್ಥೆಯನ್ನು ಕುರಿತ ಲಿಖಿತ ದಾಖಲೆ ಇದರಲ್ಲಿ ಇರುತ್ತದೆ. ಜಮೀನು ಹಕ್ಕಿನ ದಾಖಲೆ ರಿಜಿಸ್ಟರ್‌ನಲ್ಲಿ ಭೂ ಹಿಡುವಳಿದಾರನ ಹೆಸರು, ಸರ್ವೆ ನಂಬರ್, ಹೊಸದಾಗಿ ಸಾಗುವಳಿಯಾಗಿ ಸೇರುವ ಅಥವಾ ಮಾರಾಟವಾದ ಭೂಹಿಡುವಳಿಯ ಬಗ್ಗೆ ವಿವರಗಳನ್ನೊಳಗೊಂಡಿರುತ್ತದೆ.[೧೧೧] ಚಿತ್ರದುರ್ಗ ಜಿಲ್ಲೆಯಲ್ಲಿ ಒರಿಜಿನಲ್ ಪ್ರಿಲಿಮಿನರಿ ರಿಕಾರ್ಡ್‌ಗಳು ೧೮೬೫-೬೬ರಲ್ಲಿ ಭೂಮಾಪನ ಕಾರ್ಯ ಪ್ರಾರಂಭವಾದ ಮೇಲೆ ಭೂಹಿಡುವಳಿಗಳಿಗೆ ಸಂಬಂಧಿಸಿದ ರಿಜಿಸ್ಟರ್‌ಗಳನ್ನು ಇಡುವ ಪದ್ಧತಿ ಮುಂದುವರೆಯುತ್ತದೆ. ಹಿಂದಕ್ಕೆ ಅಂದರೆ ೧೮ನೇ ಶತಮಾನಕ್ಕೆ ಮೊದಲು ಕಂದಾಯ ವಸೂಲಿಯ ವ್ಯವಸ್ಥೆ ಭೂಹಿಡುವಳಿಯ ಸ್ವಾಧೀನ ಮತ್ತು ಒಡೆತನಗಳು ಹಲವು ಸಂದರ್ಭದಲ್ಲಿ ಬಾಯಿ ಮಾತಿನಲ್ಲಿ ನಡೆದಿರುವುದಕ್ಕೂ ಆಧಾರವಿದೆ. ಹಿಂದೆ ಭೂ ಹಿಡುವಳಿದಾರನು ಹೊಂದಿರುವ ನೇಗಿಲುಗಳ ಸಂಖ್ಯೆ, ಬಿತ್ತುವ ಬೀಜದ ಪ್ರಮಾಣ, ಅವನು ಹೊಂದಿರುವ ಬಿತ್ತುವ ಉಪಕರಣ ಕೂರಿಗೆ, ಅವನು ಎಷ್ಟು ಜೊತೆ ಎತ್ತುಗಳನ್ನು ಕಟ್ಟಿಕೊಂಡಿದ್ದಾನೆ ಎನ್ನುವ ಕೆಲವು ಅಂಶಗಳ ಆಧಾರದ ಮೇಲೆ ಅವನು ದೊಡ್ಡ ಭೂಹಿಡುವಳಿದಾರನೇ ಮಧ್ಯಮ ಅಥವಾ ಸಣ್ಣ ಭೂಹಿಡುವಳಿದಾರನೇ ಎಂಬುದನ್ನು ನಿರ್ಧರಿಸುವ ಕ್ರಮ ಜಾರಿಯಲ್ಲಿತ್ತು.

ಜಮೀನಿನ ವಿಷಯದಲ್ಲಿ ಕೋರ್ಟ್ ವ್ಯವಹಾರಗಳಿಗೆ ಅವಕಾಶವಿಲ್ಲದಂತೆ ಮಾಡುವುದು ಕೋರ್ಟ್‌ಗಳಲ್ಲಿ ಇರುವ ಮೊಕದ್ದಮೆಗಳನ್ನು ಸುಲಭವಾಗಿ ಬಗೆಹರಿಸಲು ಅನುಕೂಲ ಮಾಡುವುದು. ದಾಸ್ತಾವೇಜುಗಳನ್ನು ಬರೆದು ರಿಜಿಸ್ಟರ್ ಮಾಡಿಸಲು ರೈತರಿಗೆ ತಗಲುತ್ತಿರುವ ಅನವಶ್ಯಕ ವೆಚ್ಚವನ್ನು ತಗ್ಗಿಸುವುದು. ಮೋಸ ಮತ್ತು ಸುಳ್ಳುಹಕ್ಕುಗಳ ಸೃಷ್ಟಿ, ಇವುಗಳಿಂದುಂಟಾಗುವ ತೊಂದರೆಗಳಿಂದ ರೈತರನ್ನು ಪಾರು ಮಾಡುವುದು, ಈ ಜಮೀನು ಹಕ್ಕುಗಳ ದಾಖಲಾತಿಯ ಶಿಸ್ತಿನ ಉದ್ದೇಶ ಗಳಾಗಿದ್ದವು. ಅಷ್ಟೇ ಅಲ್ಲದೆ ನಾನಾ ಹಿಸ್ಸೇದಾರರುಗಳಲ್ಲಿ ಕಂದಾಯಗಳನ್ನು ಹಿಸ್ಸೇವಾರು ಹಂಚಿಕೆ ಮಾಡುವುದು. ಮತ್ತು ಜಮೀನು ಆಬಾದಿನ ಸಾಲಗಳನ್ನು ಕೊಡುವುದು. ಜಮೀನು ಕಂದಾಯವನ್ನು

ಸ್ವಲ್ಪ ಕಾಲ ವಸೂಲಿ ಮಾಡದೆ ನಿಲ್ಲಿಸಿರುವುದು. ವಜಾ ಮಾಡುವುದು. ಅಥವಾ ಕಂದಾಯವನ್ನು ಮಾಫಿ ಮಾಡುವುದು, ಇವೇ ಮೊದಲಾದ ವಿಷಯಗಳಲ್ಲಿ ಈ ಜಮೀನು ಹಕ್ಕು ದಾಖಲಾತಿಯು ಶಿಸ್ತಿನಿಂದ ಸರಕಾರಕ್ಕೂ ರೈತರಿಗೂ ಸಹ ಅನುಕೂಲವಾಗುವುದು. ಜಮೀನು ಹಕ್ಕುಗಳ ದಾಖಲಾತಿಯನ್ನು ಕರಾರುವಕ್ಕಾಗಿ ತಯಾರು ಮಾಡಲು ಅನುಕೂಲವಾಗುವಂತೆ, ಶಾನುಭೋಗರು ಮೊಟ್ಟಮೊದಲು ತಮ್ಮ ತಿಳುವಳಿಕೆಗೆ ಬಂದ ಮಟ್ಟಿಗೂ ಪ್ರಾಥಮಿಕ ರೆಕಾರ್ಡ್ ಒಂದನ್ನು ನಿರ್ದಿಷ್ಟ ನಮೂನೆಯಲ್ಲಿ ತಯಾರು ಮಾಡಬೇಕು. ಒಬ್ಬ ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಆ ರೆಕಾರ್ಡ್‌ನಲ್ಲಿರುವ ಸಂಗತಿಗಳು ಸರಿಯಾಗಿವೆಯೇ ಎಂಬ ವಿಚಾರದಲ್ಲಿ ಪ್ರತಿಯೊಂದು ಸಂದರ್ಭವನ್ನು ಅಮಲ್ದಾರರು ಅಥವಾ ಈ ಬಗ್ಗೆ ಡೆಪ್ಯೂಟಿ ಕಮೀಷನರ್‌ರಿಂದ ವಿಶೇಷ ಅಧಿಕಾರ ಕೊಡಲ್ಪಟ್ಟ ಇತರ ಅಧಿಕಾರಿಗಳು ತನಿಖೆ ಮಾಡಬೇಕು. ಮುಂದೆ ಜಮೀನು ಹಕ್ಕುಗಳ ದಾಖಲಾತಿಯ ರಿಜಿಸ್ಟರ್‌ನ್ನು ತಯಾರುಮಾಡುವುದಕ್ಕೆ ಈ ದಾಖಲೆಯೇ ಆಧಾರವಾಗಿರುತ್ತದೆ. ಆದಕಾರಣ ಈ ದಾಖಲೆಯು ಕರಾರುವಕ್ಕಾಗಿರುವಂತೆ ದೃಢಪಡಿಸುವುದಕ್ಕಾಗಿ ಜಮೀನಿನ ಅನುಭವದಾರರು ಜಮೀನಿನಲ್ಲಿ ಹಕ್ಕುಗಳಿರುವ ಇತರರು ಕರಾರುವಕ್ಕಾಗಿ ವಿಚಾರಣೆ ಮಾಡುವ ಅಧಿಕಾರಿಗಳಿಗೆ ತಮ್ಮ ತಿಳುವಳಿಕೆಯಲ್ಲಿರುವ ಎಲ್ಲಾ ವಿವರಗಳನ್ನು ಒದಗಿಸಬೇಕಾಗಿತ್ತು.[೧೨]

ಚಿತ್ರದುರ್ಗ ಜಿಲ್ಲೆ ಸಾಮಾನ್ಯವಾಗಿ ಭೂ ಹಿಡುವಳಿಗಳನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡುವ ವ್ಯವಸ್ಥೆಯೂ ಇತ್ತು. ಈ ಅಧಿಕಾರ ಡೆಪ್ಯೂಟಿ ಕಮಿಷನ್ನರಿಗೆ ಮತ್ತು ಅದಕ್ಕೆ ಸಂಬಂಧಿಸಿದ ಅಧಿಕಾರಿಗಳಿಗಿತ್ತು. ಅವರು ಒಂದು ನಿಗದಿಯಾದ ಸರಕಾರಿ ಕಿಮ್ಮತ್ತನ್ನು ಗೊತ್ತು ಮಾಡಬಹುದಾಗಿತ್ತು. ಹುಟ್ಟುವಳಿಯ ಅಬಾದಿನಲ್ಲಿ ನಷ್ಟವಾಗದಂತೆ ನೋಡಿಕೊಳ್ಳುವ ಉದ್ದೇಶದಿಂದಲೂ ಹರಾಜು ನಡೆಯುವ ವಿಷಯ ಎಲ್ಲರಿಗೂ ಗೊತ್ತಾಗುವಂತೆ ಪ್ರಕಟಿಸುತ್ತಿದ್ದರು. ಹರಾಜನ್ನು ಸಾಕಷ್ಟು ಬಹಿರಂಗವಾಗಿ ನಡೆಸುತ್ತಿದ್ದರು. ಹೀಗಾಗಿ ಮೈಸೂರು ಸಂಸ್ಥಾನದಲ್ಲಿ ೧೯ನೇ ಶತಮಾನದ ಕೊನೆಯ ವೇಳೆಗೆ ಭೂಹಿಡುವಳಿಗೆ ಸಂಬಂಧಿಸಿದ ಕಾಯಿದೆಗಳು ಸ್ಪಷ್ಟ ರೂಪ ತಾಳಿದವು. ೨೦ನೇ ಶತಮಾನದ ಪ್ರಾರಂಭದ ವೇಳೆಗೆ ಭೂಹಿಡುವಳಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಾರ್ವಜನಿಕರ ಎದುರಿನಲ್ಲೇ ಬಗೆಹರಿಸಿಕೊಳ್ಳುವ ಒಂದು ವಾತಾವರಣ ನಿರ್ಮಾಣವಾಗಿರುವ ಬಗ್ಗೆ ಮೇಲಿನ ದಾಖಲೆ ಸ್ಪಷ್ಟಪಡಿಸುತ್ತವೆ. ಹಾಗೆಯೇ ಹೊಸದಾಗಿ ಭೂಹಿಡುವಳಿಗಳನ್ನು ಸಾಗುವಳಿ ಮಾಡುವ ಸಂದರ್ಭದಲ್ಲಿ ದಾರಖಾಸ್ತು ಮೂಲಕ ಹಿಡುವಳಿಗಳನ್ನು ಹಂಚುವ ವ್ಯವಸ್ಥೆ ಭೂಕಂದಾಯ ಇಲಾಖೆಯಲ್ಲಿಯೇ ಪರಿಣಾಮಕಾರಿ ಪ್ರಭಾವ ಬೀರಿದ್ದನ್ನು ಈ ಸಂದರ್ಭದಲ್ಲಿ ವಿವೇಚಿಸಲಾಗಿದೆ.

ದರಖಾಸ್ತು ಭೂಹಿಡುವಳಿ

ಕಮೀಷನರ್ ಆಡಳಿತಾವಧಿಯಲ್ಲಿ (೧೮೩೧-೧೮೮೧) ಹೊಸದಾಗಿ ಭೂಹಿಡುವಳಿಗಳನ್ನು ಕೃಷಿಗೊಳಪಡಿಸುವಾಗ ದರಖಾಸ್ತು ಮೂಲಕ ಅರ್ಜಿ ಸಲ್ಲಿಸಿ ಭೂಹಿಡುವಳಿಗಳನ್ನು ಪಡೆಯಬೇಕಾಗಿತ್ತು. ಅವರು ದರಖಾಸ್ತು ಠೇವಣಿಯನ್ನು ನಿರ್ದಿಷ್ಟ ಮೊತ್ತದಲ್ಲಿ ಮುಂಗಡವಾಗಿ ಇಡಬೇಕಾಗಿತ್ತು. ಅದರ ಮೊತ್ತವು ನಾಲ್ಕನೇ ಒಂದರಷ್ಟಾಗಿತ್ತು. ಉಳಿದ ಮೊತ್ತವನ್ನು ಸಮಾನವಾದ ಆರು ಕಂತುಗಳಲ್ಲಿ ಪ್ರತಿ ತಿಂಗಳು ೨೦ನೇ ತಾರೀಖಿನೊಳಗೆ ತಾಲೂಕು ಕಛೇರಿಯಲ್ಲಿ ಪಾವತಿಸಬೇಕಾಗಿತ್ತು. ದರಖಾಸ್ತು ದಾರನು ಪಾವತಿಸಿದ ಹಣಕ್ಕೆ ರಸೀದಿ ಕೊಡುತ್ತಿದ್ದರು. ಈ ರೀತಿಯಾದ ವ್ಯವಸ್ಥೆ ಕಮೀಷನರ್ ಆಡಳಿತಾವಧಿಯಲ್ಲಿ ಜಾರಿಗೆ ಬಂದಿತು. ಸಾಮಾನ್ಯವಾಗಿ ದರಖಾಸ್ತನ್ನು ಚೀಫ್‌ಕಮೀಷನರ್ ಮಂಜೂರು ಮಾಡುತ್ತಿದ್ದರು. ದರಖಾಸ್ತು ಭೂಹಿಡುವಳಿಗೆ ಅರ್ಜಿಸಲ್ಲಿಸಿದವರು ತಮಗೆ ಭೂಮಿ ಮಂಜೂರಾದ ವಿಷಯವು ತಿಳಿದ ಒಂದು ವಾರದ ಒಳಗಾಗಿ ಈ ಮೊದಲೇ ಮುಂಗಡವಾಗಿ ಠೇವಣಿಯಾಗಿಟ್ಟಿರುವ ಹಣದ ಜೊತೆಗೆ ವಾರ್ಷಿಕವಾದ ಆದಾಯದಲ್ಲಿ ಕಾಲುಭಾಗದ ಠೇವಣಿಗೆ ಸರಿಯಾಗುವಂತೆ ನಗದಾಗಲಿ, ಸರಕಾರದ ಕ್ರಯಪತ್ರದ ಮೂಲಕವೇ ಆಗಲಿ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಠೇವಣಿ ಇಡಬೇಕಾಗಿತ್ತು. ನಂತರ ಸರಕಾರದ ಷರತ್ತುಗಳಿಗೆ ಒಪ್ಪಿಕೊಂಡು ಒಂದು ಕರಾರು ಪತ್ರ ಬರೆದುಕೊಡಬೇಕಾಗಿತ್ತು. ಯಾವುದೇ ದರಖಾಸ್ತುದಾರನು ಗೊತ್ತುಪಡಿಸಿದ ಠೇವಣಿಯನ್ನು ಕಟ್ಟದಿದ್ದಲ್ಲಿ ಅಥವಾ ಕರಾರಿಗೆ ರುಜು ಮಾಡಲು ನಿರಾಕರಿಸಿದರೆ ಅವನು ಮೊದಲಿಟ್ಟ ಠೇವಣಿಯು ರದ್ದಾಗುತ್ತಿತ್ತು. ಅಲ್ಲದೇ ಮಂಜೂರಾದ ದರಖಾಸ್ತು ಹಿಡುವಳಿಗಳನ್ನು ರದ್ದುಪಡಿಸುತ್ತಿದ್ದರು. ಕಮೀಷನರ್ ಕಾಲದಲ್ಲಾದ ಮತ್ತೊಂದು ಪ್ರಮುಖ ಅಂಶವೆಂದರೆ ಪ್ರತಿಯೊಬ್ಬ ದರಖಾಸ್ತುದಾರನು ಹೊಂದಿರುವ ಭೂಹಿಡುವಳಿಯ ವಿಧಾನವನ್ನು ಪಟ್ಟದಲ್ಲಿ ದಾಖಲಿಸುವ ಕ್ರಮ ಹೀಗಿತ್ತು:[೧೩]

೧. ಭೂಹಿಡುವಳಿದಾರರಾಗಿದ್ದು ಸ್ವತಃ ಸಾಗುವಳಿ ಮಾಡದೇ ಇದ್ದರೆ ಸ್ವತಃ ಸಾಗುವಳಿ ಮಾಡದೇ ಇರುವ ಜಮೀನ್ದಾರ ಎಂದು ಗುರುತಿಸುತ್ತಿದ್ದರು.

೨. ಸ್ವಂತ ಸಾಗುವಳಿ ಮಾಡುವವರನ್ನು ಸಾಗುವಳಿ ಜಮೀನ್ದಾರ ಅಥವಾ ರೈತರೆಂದು ಕರೆಯುತ್ತಿದ್ದರು.

೩. ಭೂಮಿಯಲ್ಲಿ ಹಕ್ಕಿಲ್ಲದೆ ನಗದು ಅಥವಾ ಧಾನ್ಯ 'ಗುತ್ತಿಗೆಗೆ' ಸಾಗುವಳಿ ಮಾಡುವವರನ್ನು ಗುತ್ತಿಗೆದಾರರೆಂದು ಕರೆಯುತ್ತಿದ್ದರು. ಕೃಷಿ ಕೆಲಸಕ್ಕೂ, ದನಗಳನ್ನು ಕಾಯುವುದಕ್ಕೂ ಇರುವ

ವ್ಯಕ್ತಿಗಳನ್ನು ವ್ಯವಸಾಯದ ಜೀತಗಾರರೆಂದು, ಸುಗ್ಗಿ ಮೊದಲಾದ ಕೆಲಸಗಳಲ್ಲಿ ತಾತ್ಕಾಲಿಕವಾಗಿ ಕೂಲಿ ಕೆಲಸ ಮಾಡುವವರನ್ನು ದಿನಗೂಲಿಗಳೆಂದು ಕರೆಯುತ್ತಿದ್ದರು.

ಇದರ ಜೊತೆಗೆ ಪ್ರತಿಯೊಬ್ಬ ದರಖಾಸ್ತುದಾರನು ಅವನ ಜಾತಿ, ಧರ್ಮದ ವಿವರಗಳನ್ನು ಸ್ಥಳೀಯವಾಗಿ ವಾಡಿಕೆಯಲ್ಲಿರುವಂತೆ ಬರೆಸಬೇಕಾಗಿತ್ತು. ಪ್ರತಿ ವ್ಯಕ್ತಿಯು ಯಾವ ಸಮುದಾಯ ಅಥವಾ ಯಾವ ಧರ್ಮಕ್ಕೆ ಸೇರಿದವನು ಎಂಬುದನ್ನು ವಿವರವಾಗಿ ಗುರುತಿಸುವ ಕೆಲಸ ನಡೆಯಿತು. ಉದಾಹರಣೆಗೆ ಬ್ರಾಹ್ಮಣರಲ್ಲಿ ಬರುವ ಒಳಪಂಗಡಗಳನ್ನು ಗುರುತಿಸಲಾಗಿತ್ತು. ಹಾಗೆಯೇ ಇತರ ಸಮುದಾಯಗಳಲ್ಲಿ ಕುಂಚಟಿಗ, ಹಾಲುಕುರುಬ, ಕಮ್ಮ, ಗೌಡ, ಒಕ್ಕಲಿಗ ಹೀಗೆ ಇತರ ಸಮುದಾಯ ಗಳನ್ನು ಗುರುತಿಸಲಾಗಿತ್ತು. ಅದೇ ರೀತಿ ಕೆಳಸಮುದಾಯಗಳಲ್ಲಿಯೂ ಹೊಲೆಯ, ಮಾದಿಗರ ಭೇದವನ್ನು, ಮುಸ್ಲಿಂ ಸಮುದಾಯದಲ್ಲಿ ಸೈಯದ್, ಶೇಕ್, ಪಠಾಣ್, ಸುನ್ನಿ ಅದೇ ರೀತಿ ಕ್ರೈಸ್ತರಲ್ಲಿರುವ ರೋಮನ್, ಕ್ಯಾಥೋಲಿಕ್ ಮೊದಲಾದ ಸಮೂಹಗಳಿಗೆ ಸೇರಿದವರು ದರಖಾಸ್ತು ಅರ್ಜಿ ಸಲ್ಲಿಸುವಾಗಲೇ ತಮ್ಮ ಸಮುದಾಯದ ವಿವರವನ್ನು ನೀಡಬೇಕಾಗಿತ್ತು.

ದಿವಾನರ ಕಾಲಾವಧಿಯಲ್ಲಿಯೂ ೧೮೮೧ರ ನಂತರ ದರಖಾಸ್ತು ಭೂಹಿಡುವಳಿಗಳಿಗೆ ಹೆಚ್ಚು ಮಹತ್ವ ನೀಡಲಾಯಿತು. ಈ ಅವಧಿಯಲ್ಲಿ ಹೊಸದಾಗಿ ಭೂಹಿಡುವಳಿಗಳನ್ನು ಕೃಷಿಗೊಳಪಡಿಸುವಾಗ ದರಖಾಸ್ತು ಅರ್ಜಿ ಸಲ್ಲಿಸಿ ತಾಲೂಕಿನ ಅಮಲ್ದಾರರಿಂದ ಮಂಜೂರಾತಿ ಪಡೆದ ನಂತರವೇ ಹಿಡುವಳಿಗಳನ್ನು ಕೃಷಿಗೊಳಪಡಿಸಬೇಕಾಗಿತ್ತು. ಆ ಕ್ರಮವೆಂದರೆ ಒಬ್ಬ ವ್ಯಕ್ತಿಗೆ ದರಖಾಸ್ತು ಮಂಜೂರಾದ ತರುವಾಯ ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಶ್ಯಾನುಭೋಗರು ತಯಾರಿಸುತ್ತಿದ್ದರು. ತನಗೆ ಮಂಜೂರಾದ ಭೂಮಿಯ ಬಗ್ಗೆ ಖಚಿತಪಡಿಸಿಕೊಳ್ಳಲು ಮಂಜೂರಾತಿ ಪತ್ರವನ್ನು ಪಡೆಯುವ ವ್ಯವಸ್ಥೆ ದಿವಾನರ ಕಾಲದಲ್ಲಿತ್ತು. ಅಂದಿನ ದರಖಾಸ್ತು ಪತ್ರದಲ್ಲಿ ಒಂದು ಭೂಹಿಡುವಳಿಯ ನಂಬರ್, ಹಿಡುವಳಿದಾರರ ಹೆಸರು, ತಾರೀಖು ಮತ್ತು ಹಿಡುವಳಿಯು ತರಿ, ಖುಷ್ಕಿ ಮತ್ತು ಭಾಗಾಯ್ತು ಎಂಬ ಅದರ ಸ್ವಭಾವವನ್ನು ಸ್ಪಷ್ಟವಾಗಿ ನಮೂದಿಸಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ೧೯೧೮ರಿಂದ ೧೯೨೮ರವರೆಗಿನ ಸುಮಾರು ೧೦ ವರ್ಷಗಳಲ್ಲಿ ಮಂಜೂರಾದ ದರಖಾಸ್ತು ಭೂಹಿಡುವಳಿಗಳ ಅಂಕಿ-ಅಂಶಗಳನ್ನು ಈ ಕೆಳಗಿನಂತೆ ಗಮನಿಸಬಹುದು.[೧೪]

ಮಂಜೂರಾದ ದರಖಾಸ್ತು ಭೂಹಿಡುವಳಿ ೧೯೧೮-೧೯೨೮

ವರ್ಷ	ದರಖಾಸ್ತು ಭೂಮಿ
೧೯೧೮-೧೯	೨೩೪
೧೯೧೯-೨೦	೬೮೯
೧೯೨೦-೨೧	೫೬೨
೧೯೨೧-೨೨	೭೨೬
೧೯೨೨-೨೩	೧,೨೯೬
೧೯೨೩-೨೪	೧,೦೪೨
೧೯೨೪-೨೫	೧,೭೮೪
೧೯೨೫-೨೬	೧,೬೩೦
೧೯೨೬-೨೭	೨,೦೧೮
೧೯೨೭-೨೮	೨,೨೦೯
ಒಟ್ಟು	೧೨,೧೯೦
೧೦ವರ್ಷದ ಶೇಕಡವಾರು	೮.೩

ಈ ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದರೆ ದಿವಾನರ ಕಾಲದಲ್ಲಿ ದರಖಾಸ್ತು ಭೂಹಿಡುವಳಿಗಳಿಗಿದ್ದ ಮಹತ್ವ ಸ್ಪಷ್ಟವಾಗಿ ತಿಳಿಯುತ್ತದೆ. ಏಕೆಂದರೆ ಕೃಷಿ ಮಾಡಲ್ಪಟ್ಟ ಭೂಹಿಡುವಳಿಗಳು ಕಂದಾಯ ಇಲಾಖೆಯ ಆಡಳಿತ ವ್ಯವಸ್ಥೆಯಲ್ಲಿ ಬರಲು ಮತ್ತು ಸಮುದಾಯದಲ್ಲಿರುವ ಎಲ್ಲರಿಗೂ ಭೂಹಿಡುವಳಿಗಳನ್ನು ಸಮಾನವಾಗಿ ಹಂಚಿಕೆಯಾಗುವಲ್ಲಿ ದರಖಾಸ್ತು ಭೂಹಿಡುವಳಿಯ ಮಂಜೂರಾತಿ ಪ್ರಮುಖ ಪಾತ್ರವಹಿಸಿತ್ತು. ಇದರಿಂದ ಸರಕಾರಕ್ಕೆ ಠೇವಣಿ ಹಣ, ಸ್ಟ್ಯಾಂಪ್ ಶುಲ್ಕ ಮತ್ತು ಭೂ ಕಂದಾಯದ ವಸೂಲಾತಿಯಲ್ಲಾಗುವ ದುರುಪಯೋಗವನ್ನು ಸುಲಭವಾಗಿ ತಡೆಯಬಹುದಾಗಿತ್ತು. ಈ ವ್ಯವಸ್ಥೆಯಿಂದಾಗಿ ಗ್ರಾಮಗಳಲ್ಲಿನ ಪಟೇಲರು ಮತ್ತು ಶ್ಯಾನುಭೋಗರು ಸರಕಾರದ ನೇರ ನಿಯಂತ್ರಣಕ್ಕೊಳಪಡುತ್ತಿದ್ದರು.

ಭೂ ಸಂಬಂಧಿ ಮಸೂದೆಗಳು ೧೮೮೧-೧೯೪೭

ಮೈಸೂರು ಸಂಸ್ಥಾನದಲ್ಲಿ ೧೮೮೧ರ ನಂತರದಲ್ಲಿ ರೆವಿನ್ಯೂ ಕಾಯಿದೆಗಳಿಗೆ ಸಂಬಂಧಿಸಿದಂತೆ ವಿಶೇಷ ಗಮನ ಕೊಡಲಾಯಿತು. ನೆರೆಯ ಪ್ರಾಂತ್ಯಗಳಲ್ಲಿ ಜಾರಿಯಲ್ಲಿದ್ದ ಲ್ಯಾಂಡ್ ರೆವಿನ್ಯೂ

ಕಾಯಿದೆಯನ್ನು ಅಧ್ಯಯನ ಮಾಡಲು ವಿಶೇಷ ಅಧಿಕಾರಿಗಳನ್ನು ಮೈಸೂರು ಸಂಸ್ಥಾನದಿಂದ ಕಳುಹಿಸಲಾಗಿತ್ತು. ಮೈಸೂರು ಸಂಸ್ಥಾನವು ಬಾಂಬೆ ಲ್ಯಾಂಡ್ ರೆವಿನ್ಯೂ ಕೋಡ್‌ಗೆ ಅನುಸಾರವಾಗಿ ಕಾಯಿದೆ ಕಾನೂನುಗಳನ್ನು ಇಲ್ಲಿಗೆ ಸರಿಹೊಂದುವಂತೆ ಮಾರ್ಪಡಿಸಿಕೊಂಡಿದ್ದರು. ಅದಕ್ಕಾಗಿ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ೧೮೮೩-೮೪ರವರೆಗೂ ನಡೆದ ಅಧಿವೇಶನಗಳಲ್ಲಿ ಚರ್ಚೆಗಳು ನಡೆದಿದ್ದವು. ರೆವಿನ್ಯೂ ವಿಷಯಕ್ಕೆ ಸಂಬಂಧಿಸಿದ ನ್ಯಾಯಾಧಿಕಾರಿಗಳ ಒಪ್ಪಿಗೆ ಪಡೆದ ನಂತರ ಕೆಲವು ಅವಶ್ಯಕವಾದ ಕಾಯಿದೆಗಳನ್ನು ರಚಿಸಿ ೧೮೮೬ರಲ್ಲಿ ಭಾರತ ಸರಕಾರದಿಂದ ಒಪ್ಪಿಗೆ ಪಡೆಯಲಾಯಿತು. ನಂತರ ೧೮೮೮ರಲ್ಲಿ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್ ಮೈಸೂರು ಸಂಸ್ಥಾನಾದ್ಯಂತ ಜಾರಿಗೆ ಬಂದಿತು. ಈ ಕಾಯಿದೆಯೂ ೧೮೯೧, ೧೮೯೨, ೧೯೦೫, ೧೯೦೯, ೧೯೧೨, ೧೯೧೬, ೧೯೧೯, ೧೯೨೨ ಹೀಗೆ ಹಲವು ಭಾರಿ ಪರಿಷ್ಕರಣೆಗೆ ಒಳಪಟ್ಟಿದೆ. ಇದರಲ್ಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ಸ್ ಕಾಯಿದೆ, ಲೋನ್ ರೆಗ್ಯುಲೇಶನ್ ಕಾಯಿದೆ, ಲ್ಯಾಂಡ್ ಅಕ್ವಿಜಿಷನ್ಸ್ ಕಾಯಿದೆಗಳು ಸೇರಿದ್ದವು. ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ ೧೮೯೦ರಲ್ಲಿ ಪ್ರಥಮ ಬಾರಿಗೆ ಪ್ರಕಟವಾಯಿತು. ಅದರ ಪರಿಷ್ಕರಣ ಕಾರ್ಯ ೧೯೦೧ರಲ್ಲಿ ಆಯಿತು. ೧೯೦೨ರ ನಂತರ ರೆವಿನ್ಯೂ ವಿಭಾಗಕ್ಕೆ ರೆವಿನ್ಯೂ ಕಮೀಷನರ್ ಎಂಬ ಮುಖ್ಯ ಅಧಿಕಾರಿಯನ್ನು ನೇಮಿಸಲಾಯಿತು. ೧೯೦೩, ೧೯೦೪ರ ನಂತರ ಇವರಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವುದರ ಜೊತೆಗೆ ವಿವಿಧ ಜವಾಬ್ದಾರಿಯನ್ನು ಕೊಡಲಾಯಿತು.[೧೦೫] ಇವರ ಕೆಳಗೆ ಜಿಲ್ಲೆಯಲ್ಲಿ ಡೆಪ್ಯೂಟಿ ಕಮೀಷನರ್ ಮತ್ತು ಅಸಿಸ್ಟೆಂಟ್ ಕಮೀಷನರ್‌ಗಳು ಮತ್ತು ತಾಲೂಕಿನ ಅಮಲ್ದಾರರು ರೆವಿನ್ಯೂ ಇಲಾಖೆಗೆ ಸಂಬಂಧಿಸಿದಂತೆ ವಿಶೇಷ ಅಧಿಕಾರ ಪಡೆದರು. ೧೮೮೮ರ ನಂತರ ಜಾರಿಗೆ ಬಂದ ಹಲವು ಕಾಯಿದೆಗಳು ಭೂ ಹಿಡುವಳಿದಾರರಿಗೆ ರಕ್ಷಣೆ ನೀಡುವುದರ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ವಹಿಸಿದವು. ಅವುಗಳಲ್ಲಿ ಕೆಲವನ್ನು ಹೀಗೆ ಗಮನಿಸಬಹುದು. ಲ್ಯಾಂಡ್ ರೆವಿನ್ಯೂ ಕೋಡ್‌ನ ೭೭ನೇ ವಿಧಿಯ ಪ್ರಕಾರ ಯಾವುದೇ ಭೂ ಹಿಡುವಳಿದಾರನು ತನ್ನ ಹಿಡುವಳಿಯನ್ನು ಪರಭಾರೆ ಮಾಡಿದಾಗ ಡೆಪ್ಯೂಟಿ ಕಮೀಷನರ್‌ರವರು ಪರಭಾರೆಯಾದ ಭೂಹಿಡುವಳಿಯ ಬಗ್ಗೆ ಸರಕಾರದ ವತಿಯಿಂದ ಸಂಬಂಧಿಸಿದ ಹಿಡುವಳಿದಾರನಿಗೆ ಮಾಹಿತಿ ನೀಡುವ ಕ್ರಮವೂ ಜಾರಿಗೆ ಬಂದಿತು.[೧೦೬] ಈ ವಿಧಾನಕ್ಕಾಗಿ ಪ್ರತಿ ತಾಲೂಕು ಕಛೇರಿಗಳಲ್ಲಿ ಒಂದು ದಾಖಲಾತಿ ಪುಸ್ತಕವನ್ನಿಡುತ್ತಿದ್ದರು. ಇಲ್ಲಿ ದಾಖಲಾತಿಯಾದ ಪ್ರತಿಯೊಂದು ಅರ್ಜಿಗೂ ಕೋರ್ಟ್ ಫೀ ಮತ್ತು ಸ್ಟಾಂಪು ಹಚ್ಚುವುದರ ಮೂಲಕ ಒಂದು ರೂ. ತೆರಿಗೆ ಪಾವತಿ ಮಾಡಬೇಕಾಗಿತ್ತು. ಈ ವಿಧಾನದಿಂದ

ಪ್ರತಿಯೊಬ್ಬ ಭೂಹಿಡುವಳಿದಾರನ ಹೆಸರುಗಳು ದಾಖಲಾತಿ ಪುಸ್ತಕದಲ್ಲಿ ನೋಂದಾಯಿಸಲ್ಪಟ್ಟಿದ್ದವು. ತನ್ನ ಹಿಸ್ಸೆಗನುಗುಣವಾಗಿ ಕಂದಾಯ ಕಟ್ಟುವ ಮೂಲಕ ಪಟ್ಟವನ್ನು ನವೀಕರಿಸಿಕೊಳ್ಳುತ್ತಿದ್ದನು.[೧೧೭]

ಸ್ಥಳೀಯ ಕೃಷಿಕರು ತಾವು ವಾಸಮಾಡುವ ಗ್ರಾಮದಲ್ಲಿ ಹೊಸದಾಗಿ ಭೂಹಿಡುವಳಿಗಳನ್ನು ಕೃಷಿಗೊಳಪಡಿಸುವ ವೇಳೆಯಲ್ಲಿ ತಮ್ಮ ಗ್ರಾಮದಲ್ಲಿರುವ ಶ್ಯಾನುಭೋಗರ ಹತ್ತಿರ ದರಖಾಸ್ತು ಅರ್ಜಿಗಳನ್ನು ಯಾವ ರೀತಿಯಾದ ತೆರಿಗೆಯನ್ನು ನೀಡದೆ ಬರೆಸಿಕೊಳ್ಳಬಹುದಾಗಿತ್ತು. ಶ್ಯಾನುಭೋಗರು ತಾನು ಬರೆದುಕೊಟ್ಟ ಅರ್ಜಿಯ ಕೆಳಗಿನ ಎಡಭಾಗದಲ್ಲಿ ಸಹಿ ಮಾಡಬೇಕಾಗಿತ್ತು. ಏಕೆಂದರೆ ಇದು ದರಖಾಸ್ತುದಾರನನ್ನು ಗುರುತಿಸುವ ಉದ್ದೇಶವಾಗಿತ್ತು.[೧೧೮] ದರಖಾಸ್ತು ಮೂಲಕ ಭೂಹಿಡುವಳಿ ಹಂಚಿಕೆಯ ಸಂಪೂರ್ಣ ಜವಾಬ್ದಾರಿಯನ್ನು ಜಿಲ್ಲೆಯಲ್ಲಿರುವ ಡೆಪ್ಯೂಟಿ ಕಮೀಷನರ್ ವಹಿಸಿ ಕೊಂಡಿದ್ದರು. ಅವರು ಎಕರೆವಾರು ಪ್ರತಿ ಹಿಡುವಳಿಗೆ ಒಂದು ನಿರ್ದಿಷ್ಟ ಬೆಲೆಯನ್ನು ನಿಗದಿಪಡಿಸಿದ್ದರು. ಈ ವೇಳೆಯಲ್ಲಿ ದರಖಾಸ್ತು ನೀಡುವ ಭೂಹಿಡುವಳಿಗಳ ವಿಸ್ತೀರ್ಣವು ಪ್ರತಿ ಹಿಡುವಳಿದಾರನಿಗೆ ಐದು ಎಕರೆಗಳಿಗಿಂತ ಹೆಚ್ಚಾಗಿರುವಂತಿರಲಿಲ್ಲ. ಈ ಹಿಡುವಳಿಗಳ ಮೌಲ್ಯವು ನೂರು ರೂ.ಗಳಿಗಿಂತ ಅಧಿಕವಾಗಿರುವಂತಿರಲಿಲ್ಲ. ಒಂದು ವೇಳೆ ಭೂ ಹಿಡುವಳಿಗಳ ವಿಸ್ತೀರ್ಣವು ಇಪ್ಪತ್ತು ಎಕರೆಗಳಿಗಿಂತ ಹೆಚ್ಚಾಗಿದ್ದರೆ ಇಲ್ಲವೇ ಮೌಲ್ಯವು ಐದುನೂರುಗಳಿಗಿಂತ ಅಧಿಕವಾಗಿದ್ದರೆ ರೆವಿನ್ಯೂ ಕಮೀಷನರ್ ,ಅನುಮತಿ ಪಡೆದು ಡೆಪ್ಯೂಟಿ ಕಮೀಷನರ್ ಅವರು ಮಂಜೂರಾತಿ ನೀಡಬಹುದಾಗಿತ್ತು.[೧೧೯]

ಒಂದು ಭೂಹಿಡುವಳಿಯ ಖಾತೆದಾರನಿಗೆ ಸೇರಿದ ಸರ್ವೇ ನಂಬರಿನಲ್ಲಾಗಲಿ, ಅದರ ಕೋಡ್ ನಂಬರಿನಲ್ಲಾಗಲಿ ಒಬ್ಬ ಭೂಹಿಡುವಳಿದಾರನಿಗೆ ಯಾವ ಹಕ್ಕು ಇಲ್ಲವೆಂಬ ವಿಚಾರ ಅಮಲ್ದಾರರ ಗಮನಕ್ಕೆ ಬಂದರೆ ಜಮಾಬಂದಿ ಕಾಲದಲ್ಲಿಯೇ ಆ ವಿಚಾರವನ್ನು ಕುರಿತು ತನಿಖೆ ನಡೆಸುತ್ತಿದ್ದರು. ಒಬ್ಬ ವ್ಯಕ್ತಿಯು ಭೂಹಿಡುವಳಿದಾರನಾಗಿ ದಾಸ್ತಾವೇಜಿನ ಮೂಲಕವಾಗಿ ಅಥವಾ ಯಾವ ದಾಸ್ತಾವೇಜು ಇಲ್ಲದೆಯೂ ೧೨ವರ್ಷಗಳವರೆಗೆ ಅಥವಾ ಅದಕ್ಕೂ ಹೆಚ್ಚಿನ ಕಾಲಾವಧಿಯವರೆಗೆ ಅವನು ಒಂದು ಭೂಹಿಡುವಳಿಯನ್ನು ಸಾಗುವಳಿ ಮಾಡಿದ್ದರೆ ಆ ವಿಚಾರವು ಸ್ಥಳೀಯ ಜನರ ಗಮನಕ್ಕೆ ಬಂದಿರಬೇಕಾಗಿತ್ತು. ಈ ಅವಧಿಯಲ್ಲಿ ಹಿಡುವಳಿದಾರರು ಕಂದಾಯವನ್ನು ಸಲ್ಲಿಸಿದ್ದರೆ ಈಗಾಗಲೆ ದಾಖಲಾದ ಖಾತೆದಾರನ ಬದಲಾಗಿ ತಮ್ಮ ಹೆಸರನ್ನು ದಾಖಲಿಸುವಂತೆ ಅಮಲ್ದಾರರನ್ನು ಕೇಳಿಕೊಳ್ಳಬಹುದಾಗಿತ್ತು. ಅದೇ ರೀತಿ ನಿಮ್ನವರ್ಗದ ಸಮುದಾಯದಿಂದ ಸಾಗುವಳಿಗಾಗಿ ದರಖಾಸ್ತು

ಅರ್ಜಿಗಳು ಬಂದರೆ ಡೆಪ್ಯೂಟಿ ಕಮೀಷನರ್ ಅವರು ಸಂಬಂಧಿಸಿದ ಭೂಹಿಡುವಳಿಗಳನ್ನು ಹರಾಜು ಮಾಡದೇ ನಿರ್ದಿಷ್ಟಪಡಿಸಿದ ಹಣವನ್ನು ಕಟ್ಟಿಸಿಕೊಂಡು ಮೊದಲನೇ ದರಖಾಸ್ತುದಾರನಿಗೆ ಕೊಡಬಹುದಾಗಿತ್ತು. ಆದರೆ ಇಂತಹ ಹಿಡುವಳಿಗಳನ್ನು ಪಡೆದವರು ೧೫ ವರ್ಷಗಳವರೆಗೆ ಅವುಗಳನ್ನು ಬೇರೆಯವರಿಗೆ ಪರಭಾರೆ ಅಥವಾ ಗುತ್ತಿಗೆ ಕೊಡುವುದಿಲ್ಲವೆಂಬುದಾಗಿ ಮುಚ್ಚಳಿಕೆಯನ್ನು ಬರೆದುಕೊಡಬೇಕಾಗಿತ್ತು. ಈ ಷರತ್ತಿನ ಪ್ರಕಾರ ೧೫ ಎಕರೆಗಳಷ್ಟು ಭೂಹಿಡುವಳಿಗಳನ್ನು ಮಾತ್ರ ಒಬ್ಬ ಭೂಹಿಡುವಳಿದಾರನಿಗೆ ಮಂಜೂರು ಮಾಡುತಿದ್ದರು. ಇಂತಹ ಸಂದರ್ಭದಲ್ಲಿ ಒಬ್ಬ ಹಿಡುವಳಿದಾರನು ಒಂದು ಭೂಹಿಡುವಳಿಯ ಅನುಭವವನ್ನು ಹೊಂದುವುದಕ್ಕೆ ಮೊದಲು ಲ್ಯಾಂಡ್ ರೆವಿನ್ಯೂ ಕೋಡ್‌ನ ೫೮ನೇ ವಿಧಿಯ ಪ್ರಕಾರ ಅಮಲ್ದಾರರಿಗೆ ಒಂದು ಅರ್ಜಿ ಸಲ್ಲಿಸಬೇಕಾಗಿತ್ತು.

ದಿವಾನರ ಕಾಲಾವಧಿಯಲ್ಲಿ ಬಂದ ಮತ್ತೊಂದು ಪ್ರಮುಖ ಕಾಯಿದೆಯಾದ ಲ್ಯಾಂಡ್ ರೆವಿನ್ಯೂ ಕೋಡ್‌ನ ೪೮ನೇ ವಿಧಿಯ ಪ್ರಕಾರ ಕೃಷಿಗೊಳಪಟ್ಟ ಭೂಹಿಡುವಳಿಗಳನ್ನು ಕೈಗಾರಿಕೆ, ವಾಣಿಜ್ಯೋದ್ಯಮ ಅಥವಾ ಇನ್ನಿತರ ಯಾವುದೇ ಉದ್ದೇಶಗಳಿಗಾಗಿ ಪರಿವರ್ತಿಸುವಾಗ ವಿಶೇಷ ರೀತಿಯ ಕಂದಾಯವನ್ನು ನೀಡಬೇಕಾಗಿತ್ತು. ಅಂದರೆ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ನಗರದಲ್ಲಿ ಎಕರೆ ಒಂದಕ್ಕೆ ಎಂಟು ರೂ.ಗಳಿತ್ತು. ಇತರ ಎಲ್ಲಾ ತಾಲೂಕುಗಳಲ್ಲಿಯೂ ಎಕರೆ ಒಂದಕ್ಕೆ ಆರು ರೂ. ಇತ್ತು. ಈ ಕಂದಾಯ ವಿಧಾನವು ಖುಷ್ಕಿ ಹಿಡುವಳಿಗಳಿಗೆ ಮಾತ್ರ ಅನ್ವಯಿಸುತ್ತಿತ್ತು. ತರಿ ಮತ್ತು ಭಾಗಾಯ್ತು ಭೂಹಿಡುವಳಿಗಳಾಗಿದ್ದರೆ ಆ ಹಿಡುವಳಿಗಳಿಗಿರುವ ಸ್ಥಳೀಯ ದರದ ಎರಡರಷ್ಟು ಹೆಚ್ಚಾಗಿರುತ್ತಿತ್ತು. ಇದೇ ರೀತಿ ಇಪ್ಪತ್ತೆಂಟನೇ ವಿಧಿಯ ಪ್ರಕಾರ ಕೃಷಿಗೋಸ್ಕರ ಉಪಯೋಗಿಸುವ ಭೂಹಿಡುವಳಿಗಳಲ್ಲಿ ಒಂದು ಸರ್ವೇನಂಬರಿನಲ್ಲಿ ಸಾಗುವಳಿಗೆ ಯೋಗ್ಯವಲ್ಲವೆಂದು ಬಿಟ್ಟಿರುವ ಹಿಡುವಳಿಗಳನ್ನು ಯಾರಾದರೂ ಕೃಷಿಗೊಳಪಡಿಸ ಬಹುದಾಗಿತ್ತು. ಇದಕ್ಕೆ ಯಾವುದೇ ರೀತಿಯ ಕಂದಾಯವನ್ನು ವಿಧಿಸುತ್ತಿರಲಿಲ್ಲ. ಆದರೆ ಈ ಪ್ರದೇಶವು ರಸ್ತೆ, ಕೆರೆ, ಸ್ಮಶಾನಕ್ಕಾಗಿ ಅಥವಾ ವಸತಿಗೃಹಗಳನ್ನು ಕಟ್ಟಲು ಉಪಯೋಗಿಸಲ್ಪಡುವ ಪ್ರದೇಶವಾಗಿದ್ದರೆ ಕೃಷಿಗೊಳಪಡಿಸಲು ಅವಕಾಶ ವಿರಲಿಲ್ಲ.[೧೨೦]

ಒಟ್ಟಿನಲ್ಲಿ ೧೮೮೧ರ ನಂತರ ಬಂದ ಭೂಸಂಬಂಧಿ ಮಸೂದೆಗಳು ಭೂಹಿಡುವಳಿದಾರನಿಗೆ ಕೃಷಿಯಲ್ಲಿ ಭದ್ರತೆ ನೀಡುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಐದನೇ ಘಟ್ಟದ ಅಧ್ಯಯನ ೧೯೪೭-೫೬

ಸ್ವಾತಂತ್ರ್ಯ ನಂತರದ ಭೂಹಿಡುವಳಿ ವ್ಯವಸ್ಥೆ

ಸ್ವಾತಂತ್ರ್ಯಾನಂತರದಲ್ಲಿ ಭೂಹಿಡುವಳಿಗಳಿಗೆ ಸಂಬಂಧಿಸಿದಂತೆ ಭಾರತ ಸರಕಾರವು ವಿಶೇಷ ಗಮನಹರಿಸಿತು. ಈ ಮೂಲಕ ಸಾಮಾಜಿಕ ಸಮಾನತೆಯನ್ನು ಕಂಡುಕೊಳ್ಳುವುದು ಮುಖ್ಯವಾಗಿತ್ತು. ಈ ಸಂದರ್ಭದಲ್ಲಿ ಭೂಹಿಡುವಳಿಗೆ ಸಂಬಂಧಿಸಿದಂತೆ ವಿಶೇಷ ಕಾಯಿದೆ ಕಾನೂನುಗಳನ್ನು ಜಾರಿ ಮಾಡಲಾಯಿತು. ಜಮೀನ್ದಾರಿ ಪದ್ಧತಿ, ಗೈರುಹಾಜರಿ ಭೂಮಾಲೀಕತ್ವ ಮೊದಲಾದ ಗೇಣಿದಾರಿ ವ್ಯವಸ್ಥೆಗಳನ್ನು ಕೃಷಿ ವಲಯದ ಅಭಿವೃದ್ಧಿಗಾಗಿ ಬಹುಮಟ್ಟಿಗೆ ಕಾಯಿದೆ ಕಾನೂನುಗಳ ಮೂಲಕ ನಿಯಂತ್ರಿಸಲಾಗಿದೆ. ಏಕೆಂದರೆ ಭೂಮಿಯೂ ಬೇರೆಯವರದಾಗಿದ್ದು, ಗೇಣಿದಾರರು ನಾಮ ಮಾತ್ರಕ್ಕೆ ಸಾಗುವಳಿ ಮಾಡುವುದರಿಂದ ಉತ್ಪನ್ನವನ್ನು ಹೆಚ್ಚಿಸಲು ಹಾಗೂ ಭೂಮಿಯ ದೀರ್ಘಕಾಲದ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಜವಾದ ಸಾಗುವಳಿದಾರರಿಗೆ ಭೂಮಾಲೀಕತ್ವವನ್ನು ನೀಡುವ ಮೂಲಕ ಅವನು ಸ್ವತಃ ಭೂಹಿಡುವಳಿಯನ್ನು ಪಡೆದಿರುವರೆಂಬ ಆಶಯದಿಂದ ತನ್ನ ಭೂಮಿಯನ್ನು ಅಭಿವೃದ್ಧಿಪಡಿಸುತ್ತಾನೆ.[೧೨]

ಈ ದೃಷ್ಟಿಯಿಂದ ಸ್ವಾತಂತ್ರ್ಯಾನಂತರದಲ್ಲಿ ಭೂಹಿಡುವಳಿಗೆ ಸಂಬಂಧಿಸಿದ ಕಾಯಿದೆಗಳು ಗೇಣಿದಾರರಿಗೆ ರಕ್ಷಣೆ ನೀಡಿದ್ದವು. ಸ್ವಾತಂತ್ರ್ಯಾನಂತರದಲ್ಲಿ ಜಮೀನ್ದಾರಿ ಮಾದರಿಯ ಭೂಹಿಡುವಳಿ ದಾರರಾಗಿದ್ದವರಲ್ಲಿ, ಬಹುಮಂದಿ ಭೂಸುಧಾರಣೆಯ ನಂತರ ಆರ್ಥಿಕವಾಗಿ ಗಣನೀಯವಾಗಿ ದುರ್ಬಲರಾದರು. ೨೦ನೇ ಶತಮಾನದ ಮಧ್ಯಭಾಗದಲ್ಲಿ ಕೃಷಿ ಕ್ಷೇತ್ರದಲ್ಲಿ ಇರುವ ಹಲವಾರು ಸಮಸ್ಯೆಗಳ ಬಗ್ಗೆ ಸರಕಾರ ಗಮನಹರಿಸಿತು.[೧೩]

೧. ಗೇಣಿದಾರರನ್ನು ಖಾಯಂಗೊಳಿಸುವುದು

೨. ಗೇಣಿದಾರರನ್ನು ಒಕ್ಕಲೆಬ್ಬಿಸುವದರ ಬಗ್ಗೆ ಭೂಮಾಲೀಕರಿಗಿದ್ದ ಹಕ್ಕನ್ನು ರದ್ದುಗೊಳಿಸಲಾಗಿದೆ.

೩. ಭೂಮಾಲೀಕರು ಗೇಣಿದಾರರಿಗೆ ಕಡಿಮೆ ಗುತ್ತಿಗೆ ಕೊಡುವುದನ್ನು ರದ್ದುಗೊಳಿಸಲಾಗಿದೆ.

ಈ ಮೂರು ಮುಖ್ಯವಾದ ಅಂಶಗಳಾಗಿದ್ದವು. ಆದ್ದರಿಂದ ಕಾಂಗ್ರೆಸ್ ೧೯೫೬-೫೭ರ ಚುನಾವಣಾ ಪ್ರಣಾಳಿಕೆಯಲ್ಲಿ ಭೂಸುಧಾರಣೆಯ ಅಗತ್ಯವನ್ನು ಒತ್ತಿ ಹೇಳಿ ಸರಕಾರಕ್ಕೂ ರೈತರಿಗೂ ನಡುವೆ

ಇರುವ ಯಾವುದೇ ಮಧ್ಯವರ್ತಿಗಳ ಹಕ್ಕನ್ನು ಕಿತ್ತುಹಾಕಬೇಕು. ಈ ಸಂದರ್ಭದಲ್ಲಿ ಭೂಮಾಲೀಕರು ಕಳೆದುಕೊಂಡ ಭೂಮಿಯ ಹಕ್ಕಿನ ಬದಲಾಗಿ ಅವರಿಗೆ ಪರಿಹಾರಕೊಡಬೇಕೆಂದು ಘೋಷಿಸಿತು. ೧೯೪೮ರಲ್ಲಿ ನಡೆದ ಕಾಂಗ್ರೆಸಿನ ವಿಶೇಷ ಸಮ್ಮೇಳನದಲ್ಲಿ ಕೆಲವು ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಅದರಲ್ಲಿ ಸರಕಾರವು ಹಿಡುವಳಿದಾರರ ನಡುವೆ ಇರುವ ಮಧ್ಯವರ್ತಿಗಳನ್ನು ರದ್ದುಗೊಳಿಸುವುದು, ಭೂಮಿತಿಯನ್ನು ಜಾರಿಗೆ ತರುವುದು, ಮಿತಿಗಿಂತ ಹೆಚ್ಚಿನ ಭೂಮಿಯನ್ನು ಸಹಕಾರಿ ಸಂಸ್ಥೆಗೆ ವಹಿಸಿಕೊಡುವುದು. ಸಣ್ಣ ಹಿಡುವಳಿಯನ್ನು ಕ್ರೋಡೀಕರಿಸಿ ಚಿಕ್ಕಚಿಕ್ಕ ಹಿಡುವಳಿಗಳಾಗಿ ಹೋಗುವುದನ್ನು ತಡೆಗಟ್ಟಬೇಕು ಎಂಬ ಸಲಹೆಯನ್ನು ಮುಂದಿಟ್ಟಿತು.

ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷರಾಗಿದ್ದ ರಾಜೇಂದ್ರಪ್ರಸಾದ್ ಅವರು ೧೯೪೭ರಲ್ಲಿ ಜೆ.ಸಿ.ಕುಮಾರಪ್ಪನವರ ನೇತೃತ್ವದಲ್ಲಿ ವ್ಯವಸಾಯ ಸುಧಾರಣ ಸಮಿತಿಯನ್ನು ರಚಿಸಿದರು. ಈ ಸಮಿತಿಯು ಗ್ರಾಮಾಂತರ ಪ್ರದೇಶದ ಭೂಹಿಡುವಳಿ ಸಂಬಂಧಿ ಸಮಸ್ಯೆಗಳನ್ನು ಚರ್ಚಿಸಿ, ಹಲವಾರು ಸಲಹೆಗಳನ್ನು ನೀಡಿತು. ಅವುಗಳಲ್ಲಿ ಮುಖ್ಯವಾಗಿ ಊಳಿಗಮಾನ್ಯ ಶೋಷಣೆಯನ್ನು ತಪ್ಪಿಸುವುದು, ಗೇಣಿದಾರರಿಗೆ, ವಾರಕ್ಕೆ ವ್ಯವಸಾಯ ಮಾಡುವವರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ಭೂಒಡೆತನ ದೊರಕಿಸಿಕೊಡುವುದು. ಜಮೀನ್ದಾರಿ ಮತ್ತು ಬಂಡವಾಳಶಾಹಿ ರೀತಿಯ ಭೂಮಾಲೀಕತ್ವವನ್ನು ರದ್ದುಗೊಳಿಸುವುದು ಮುಖ್ಯವಾಗಿತ್ತು. ಕಾಂಗ್ರೆಸಿನಲ್ಲಿದ್ದ ಎಡಪಂಥಿಯರು ಕುಮಾರಪ್ಪನವರ ಸಲಹೆಯನ್ನು ಒಪ್ಪಿದರು, ಆದರೆ ಬಲಪಂಥಿಯರು ಬಹಳಷ್ಟು ಸಲಹೆಯನ್ನು ತಳ್ಳಿ ಹಾಕಿದರು.[೧೨೬]

ಸ್ವಾತಂತ್ರ್ಯ ಬಂದ ಆರು ವರ್ಷಗಳವರೆಗೂ ಭೂಮಿತಿಯನ್ನು ಜಾರಿಗೊಳಿಸುವ ವಿಷಯ ಹರದೆಯ ಹಿಂದೆಯೇ ಉಳಿಯಿತು. ೧೯೫೩ರಲ್ಲಿ ಆಗ್ರಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಮ್ಮೇಳನದಲ್ಲಿ ಪ್ರತಿಯೊಂದು ರಾಜ್ಯವು ಕೂಡ ಭೂಮಿಗೆ ಸಂಬಂಧಪಟ್ಟ ಸರಿಯಾದ ಮಾಹಿತಿಯನ್ನು ಸಂಗ್ರಹಿಸುವಂತೆ ಸೂಚಿಸಲಾಯಿತು. ಇದರ ಅನ್ವಯ ಕರ್ನಾಟಕ ರಾಜ್ಯ ಸರಕಾರವು ೧೯೬೧ರ ನಂತರ ಕೆಲವು ಕಾಯಿದೆಗಳನ್ನು ಜಾರಿಗೆ ತಂದಿತು. ಅವುಗಳಲ್ಲಿ ಸಾಗುವಳಿದಾರನಿಗೆ ಭೂಹಿಡುವಳಿಯ ಭದ್ರತೆ ನೀಡುವುದು, ಭೂಹಿಡುವಳಿದಾರನಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ದೊರಕಿಸುವುದು, ಶಾಸನಾತ್ಮಕವಾಗಿ ಗೇಣಿಯನ್ನು ನಿಗದಿಪಡಿಸುವುದು, ಅಕ್ರಮ ಗೇಣಿ ವಸೂಲಿ, ಭೂಹಿಡುವಳಿಗಳ ಸ್ವಾಧೀನಪಡಿಸುವಿಕೆಯನ್ನು ರದ್ದುಪಡಿಸಲಾಯಿತು. ದೊಡ್ಡಹಿಡುವಳಿದಾರ ಮತ್ತು ಸಣ್ಣ ಹಿಡುವಳಿದಾರರ ನಡುವೆ ಭೂಮಿಯು ಸಮವಾಗಿ ವಿತರಣೆಯಾಗಬೇಕೆಂಬುದನ್ನು ಮನಗಾಣಲಾಯಿತು. ಹಿಡುವಳಿಯ

ಗಾತ್ರದ ಮೇಲೆ ಪರಮಾವಧಿ ಮಿತಿ ವಿಧಿಸಿ ಹೆಚ್ಚುವರಿ ಭೂಮಿಯನ್ನು ಸರಕಾರಕ್ಕೆ ಸೇರಿಸಿಕೊಂಡು ಅದನ್ನು ಭೂರಹಿತರಿಗೆ ಹಂಚುವ ಪ್ರಯತ್ನ ಮಾಡಿತು.[೧೨೪]

ಭಾರತದ ರಾಷ್ಟ್ರೀಯ ಆರ್ಥಿಕ ಬೆಳವಣಿಗೆಯು ೧೯೫೧ರ ಪ್ರಥಮ ಪಂಚವಾರ್ಷಿಕ ಯೋಜನೆಯು ಕಾಲಾವಧಿಯಲ್ಲಿ ಭೂಒಡೆತನದ ಈ ಗರಿಷ್ಠ ಮಿತಿಯ ನಿಷ್ಕರ್ಷೆ ಅತಿಮುಖ್ಯವಾದ ಪ್ರಶ್ನೆಯಾಗಿತ್ತು. ಇದೇ ವೇಳೆಯಲ್ಲಿ ಜಮೀನ್ದಾರಿ ಪದ್ಧತಿಯ ರದ್ಧತಿ ಕುರಿತ ಕಾಯಿದೆಗಳು ಅನುಷ್ಠಾನಕ್ಕೆ ಬಂದ ತಕ್ಷಣ ೧೯೫೩ರಲ್ಲಿ ಭೂ ಒಡೆತನದ ಈ ಗರಿಷ್ಠ ಮಿತಿಯ ಪ್ರಶ್ನೆ ಮತ್ತೆ ಮಂಡಿಸಲ್ಪಟ್ಟಿತು. ಈ ಗರಿಷ್ಠ ಮಿತಿ ಜಮೀನ್ದಾರರಿಗಷ್ಟೇ ಅಲ್ಲ, ಇಡೀ ಭೂಮಾಲಿಕ ವರ್ಗಕ್ಕೆ ಮುಟ್ಟಿತು. ಬಹುತೇಕ ಗ್ರಾಮಗಳಲ್ಲಿ ಭೂಮಿಯನ್ನು ತನ್ನ ಕೈಯಲ್ಲಿಟ್ಟುಕೊಂಡಿದ್ದ ಶ್ರೀಮಂತ ಭೂಮಾಲೀಕರು ತಮ್ಮ ಹಿತಗಳಿಗೂ ಧಕ್ಕೆ ಬರುವುದೆಂದು ಸಂಶಯಪಟ್ಟರು. ಆದರೂ ಕರ್ನಾಟಕ ಸೇರಿದಂತೆ ಬಹುತೇಕ ರಾಜ್ಯಗಳಲ್ಲಿ ಭೂ ಒಡೆತನದ ಮೇಲಿನ ಗರಿಷ್ಠ ಮಿತಿ ಕಾಯಿದೆಗಳನ್ನು ಅಂಗೀಕರಿಸಲಾಯಿತು. ಜಮೀನ್ದಾರಿ ಪದ್ಧತಿಯ ರದ್ಧತಿಗೆ ಸಂಬಂಧಿಸಿದ ಭೂಸುಧಾರಣೆ ಕಾಯಿದೆಯ ಸಿದ್ಧತೆ ಹಾಗೂ ಜಾರಿಗೊಳಿಸುವ ಕಾಲಾವಧಿಯಲ್ಲಿಯೇ ಆಚಾರ್ಯ ವಿನೋಬಾ ಭಾವೆ ೧೯೫೧ರ ಏಪ್ರಿಲ್ ೧೮ರಂದು ಭೂದಾನ ಚಳುವಳಿಯನ್ನು ಆರಂಭಿಸಿದರು. ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಸರಕಾರ ಭೂದಾನ ಮತ್ತು ಗ್ರಾಮದಾನ ಚಳುವಳಿಗಳಿಗೆ ಬೆಂಬಲ ನೀಡಿದ್ದವು. ಚಿತ್ರದುರ್ಗ ಜಿಲ್ಲೆಯಲ್ಲಿಯೂ ಭೂದಾನ ಚಳುವಳಿ ನಡೆಯಿತು. ಆದರೆ ಈ ಭಾಗದಲ್ಲಿ ದಾನವಾಗಿ ದೊರೆತ ಬಹುಭಾಗ ಭೂಮಿಯು ಸಾಗುವಳಿಗೆ ಯೋಗ್ಯವಾಗಿರಲಿಲ್ಲ. ಮತ್ತು ಭೂಮಾಲಿಕರ ಪ್ರಮಾಣ ಕಡಿಮೆ ಇದ್ದುದರಿಂದ ಈ ಚಳವಳಿ ಕ್ರಮೇಣ ಕಣ್ಮರೆಯಾಯಿತು. ಸ್ವಾತಂತ್ರ್ಯಾನಂತರದಲ್ಲಿ ಭಾರತ ಸರಕಾರವು ಸಾಮಾಜಿಕ ಸುಧಾರಣೆಯ ಹಲವು ಹಂತಗಳಲ್ಲಿ ಪರಿಣಮಕಾರಿಯಾದ ಕೆಲಸಗಳನ್ನು ಕೈಗೆತ್ತಿಕೊಂಡಿತು.[೧೨೫]

೧. ಕನಿಷ್ಠ ವೇತನ ಕಾಯಿದೆ ೧೯೪೮

೧೯೪೮ರಲ್ಲಿ ಜಾರಿಗೊಳಿಸಲಾದ ಕನಿಷ್ಠ ವೇತನ ಕಾಯಿದೆ ಬಹುತೇಕ ಭೂರಹಿತ ಕೂಲಿಕಾರರಿಗೂ ಅನುಕೂಲವಾಯಿತು. ಕೃಷಿ ಕ್ಷೇತ್ರದಲ್ಲಿ ತೀರ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದವರಿಗೆ, ಜೀತವ್ಯವಸ್ಥೆಗೆ ಒಳಗಾದವರಿಗೆ, ತಮಗರಿವಿಲ್ಲದೆ ಭೂಒಡೆಯರ ತುಳಿತಕ್ಕೆ ಒಳಗಾದವರಿಗೆ ಜೀವದಾನ ನೀಡುವ ಪ್ರಯತ್ನ ಈ ಮೂಲಕ ನಡೆಯಿತು. ಭೂ ಸುಧಾರಣಾ ಕಾಯಿದೆ ಅಥವಾ ಭೂಮಿಯ

ಪರಿಷ್ಕರಣೆಯ ಕಾನೂನು ಬಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರನ್ನು ಆರ್ಥಿಕವಾಗಿ ಮೇಲೆತ್ತುವುದರಲ್ಲಿ ಅಷ್ಟು ಯಶಸ್ವಿಯಾಗದಿದ್ದರೂ ಸಾಮಾಜಿಕ ಸುಧಾರಣೆಯಲ್ಲಿ ಮಹತ್ವದ ಬದಲಾವಣೆಯಾದವು. ೧೯೫೦ರ ಭೂಸುಧಾರಣ ಕಾಯಿದೆಯು ಜಮೀನ್ದಾರಿ ಪದ್ಧತಿ ಹಾಗೂ ಗೇಣಿ ಪದ್ಧತಿಯ ನಿರ್ಮೂಲನ ಪ್ರಕ್ರಿಯೆಯಿಂದ ಚಿತ್ರದುರ್ಗ ಜಿಲ್ಲೆಯ ಭೂರಹಿತ ಕೂಲಿ-ಕಾರ್ಮಿಕರ ಗಣನೀಯವಾದ ಅಭಿವೃದ್ಧಿ .ಕಂಡುಬಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

೨. ಭೂಸುಧಾರಣ ಕಾಯಿದೆ ೧೯೫೨

೧೯೫೧ರಲ್ಲಿ ಭಾರತ ರಾಜ್ಯಾಂಗದ ೩೧ನೇ 'ಎ' ವಿಧಿಯನ್ನು ಅಂಗೀಕರಿಸುವುದರ ಮೂಲಕ ಜಮಿನ್ದಾರಿ ಪದ್ಧತಿಯನ್ನು ಮೂಲೋತ್ಪಾಟನೆ ಮಾಡಲಾಯಿತು. ಕರ್ನಾಟಕ ಭೂಸುಧಾರಣ ಮಸೂದೆಗಳಲ್ಲಿ ಮೊದಲ ಮಸೂದೆ ೧೯೫೨ರಲ್ಲಿ ವಿಧಾನಸಭೆಯಲ್ಲಿ ಮಂಡಿಸಲ್ಪಟ್ಟಿತು. ಅದು ೧೯೫೪ರಲ್ಲಿ ಕೆಲವು ಪ್ರಾಂತ್ಯಗಳಲ್ಲಿ ಮಾತ್ರ ಜಾರಿಗೆ ಬಂದಿತು. ಈ ಕಾಯ್ದೆಯ ಪ್ರಕಾರ ಭೂಮಾಲೀಕ ತನ್ನ ಸ್ವಂತ ಸಾಗುವಳಿಯ ಒಕ್ಕಲುಗಳಿಂದ ಭೂಮಿಯನ್ನು ಬಿಡಿಸಿಕೊಳ್ಳಬಹುದಾಗಿತ್ತು. ಜೊತೆಗೆ ಗೇಣಿ ಬಾಕಿ ಇದ್ದರೆ ಗೇಣಿ ಜಮೀನಿನಲ್ಲಿ ಒಕ್ಕಲು ಕೃಷಿ ಮಾಡದೇ ಇದ್ದರೆ, ಜಮೀನು ಹಾಳುಗೆಡವಿದ್ದರೆ ಒಕ್ಕಲೆಬ್ಬಿಸಲು ಅವಕಾಶವಿತ್ತು. ಆದರೂ ಪ್ರಾರಂಭದಲ್ಲಿ ಭೂಹಿಡುವಳಿದಾರರಿಗೆ ಈ ಕಾಯಿದೆಯೂ ರಕ್ಷಣೆ ನೀಡಿತ್ತೆಂಬುದನ್ನು ಮರೆಯುವಂತಿಲ್ಲ.[೧೨೬]

ನಂತರ ೧೯೫೬ರಲ್ಲಿ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಬಿ.ಡಿ.ಜತ್ತಿಯವರ ನೇತೃತ್ವದಲ್ಲಿ ಭೂಸುಧಾರಣ ಸಮಿತಿಯನ್ನು ರಚಿಸಲಾಯಿತು. ೧೯೫೭ರಲ್ಲಿ ಈ ಸಮಿತಿಯು ಅಧ್ಯಯನ ನಡೆಸಿ ತಯಾರಿಸಿದ ಸಲಹೆಗಳನ್ನು ಸರಕಾರದ ಮುಂದೆ ಇಟ್ಟಿತು. ಇದರ ಸಲಹೆಗಳ ಆಧಾರದ ಮೇಲೆ ಬಿ.ಡಿ.ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಕಂದಾಯ ಮಂತ್ರಿಗಳಾದ ಕಡಿದಾಳ ಮಂಜಪ್ಪನವರು ಈ ಮಸೂದೆಯನ್ನು ೧೯೫೮ರಲ್ಲಿ ಶಾಸನಸಭೆಯ ಮುಂಟಿಟ್ಟರು. ೪೬ಮಂದಿ ಸದಸ್ಯರನ್ನೊಳಗೊಂಡ ಎರಡು ಶಾಸನಸಭೆಗಳು ೬೪ ದಿನಗಳ ಕಾಲ ಪರಿಶೀಲಿಸಿ ತನ್ನ ವರದಿಯನ್ನು ೧೯೬೧ರಂದು ವಿಧಾನಸಭೆಯ ಮುಂದಿಟ್ಟಿತು. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ೧೯೬೧ ನವೆಂಬರನಲ್ಲಿ ಈ ಮಸೂದೆಯನ್ನು ರಾಷ್ಟ್ರಪತಿಗಳ ಒಪ್ಪಿಗೆ ಪಡೆಯಲು ಕಳುಹಿಸಲಾಯಿತು. ಕೊನೆಗೆ ೧೯೬೨ರಲ್ಲಿ ರಾಷ್ಟ್ರಪತಿಯವರ ಒಪ್ಪಿಗೆ ಪಡೆದು ಕರ್ನಾಟಕದ ಭೂಸುಧಾರಣ ಶಾಸನ ಅಂಗೀಕೃತವಾಯಿತು.[೧೨೭]

ಸ್ವಾತಂತ್ರ್ಯ ನಂತರದಲ್ಲಿ ಚಿತ್ರದುರ್ಗ ಜಿಲ್ಲೆಯ ಕೃಷಿ ವ್ಯವಸ್ಥೆ

ಸ್ವಾತಂತ್ರ್ಯಾನಂತರದಲ್ಲಿ ಚಿತ್ರದುರ್ಗ ಜಿಲ್ಲೆಯ ಶೇ. ೭೫ರಷ್ಟು ಭೂಮಿಯೂ ಕೃಷಿಗೊಳಪಟ್ಟಿದೆ. ಭೂ ಹಿಡುವಳಿಗಳನ್ನು ಅವಲಂಬಿಸಿದ ನಿರ್ದಿಷ್ಟ ಕುಟುಂಬಗಳು ಒಂದು ನಿರ್ದಿಷ್ಟ ಗ್ರಾಮದಲ್ಲಿ ಒಟ್ಟಾಗಿ ವಾಸಿಸುತ್ತಿದ್ದಾರೆ. ಈ ಗ್ರಾಮಗಳಲ್ಲಿ ಭೂಹಿಡುವಳಿದಾರರು ಮತ್ತು ಅದಕ್ಕೆ ಪೂರಕವಾದ ಕೈ ಕಸುಬುಗಳನ್ನು ಅವಲಂಬಿಸಿದ ಎಲ್ಲ ಸಮುದಾಯದ ಜನರು ಕಂಡುಬರುತ್ತಾರೆ. ಲಿಂಗಾಯಿತ, ರೆಡ್ಡಿ, ಕುರುಬರು, ಗೊಲ್ಲರು, ಒಕ್ಕಲಿಗರು, ನಾಯಕರು ಮುಂತಾದ ಸಮುದಾಯಗಳು ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಕ್ಷೇತ್ರದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಉಳಿದ ಸಮುದಾಯಗಳು ಸಹ ಭೂಒಡೆತನ ಹೊಂದುವುದರ ಜೊತೆಗೆ ಕುಶಲ ಕಸುಬನ್ನು ಮಾಡುವ ಮೂಲಕ ಜಿಲ್ಲೆಯ ಸಾಮುದಾಯಿಕ ಪ್ರಗತಿಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕರ್ನಾಟಕ ರಾಜ್ಯ ಸರಕಾರವು ೧೯೫೭ರ ನಂತರ ಕಾನೂನು ರೀತಿಯಲ್ಲಿ ಎಲ್ಲಾ ಭೂರಹಿತ ಸಮುದಾಯಗಳಿಗೂ ದರಖಾಸ್ತು ಮೂಲಕ ಭೂಮಿಯನ್ನು ಹಂಚುವ ಪ್ರಯತ್ನ ನಡೆದಿದೆ. ಈ ಹಿನ್ನೆಲೆಯಲ್ಲಿ ಅಧಿಕ ಸಂಖ್ಯೆಯ ಫಲಾನುಭವಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳು ದರಖಾಸ್ತು ಭೂಮಿಯನ್ನು ಪಡೆದಿರುವ ಬಗ್ಗೆ ಅಂಕಿ-ಸಂಖ್ಯೆಗಳು ಸ್ಪಷ್ಟಪಡಿಸುತ್ತವೆ. ಅದೇ ರೀತಿ ಇತರ ಭೂರಹಿತ ಸಮುದಾಯಗಳು ದರಖಾಸ್ತು ಮೂಲಕ ಭೂಮಿ ಪಡೆದಿವೆ. ಆದರೂ ದರಖಾಸ್ತು ಮೂಲಕ ಹಂಚಿರುವ ಭೂಮಿಯ ಗುಣಮಟ್ಟ ಉತ್ಕೃಷ್ಟವಾಗಿಲ್ಲದೇ ಇರುವುದು, ಇಂತಹ ಭೂಮಿ ಕೇವಲ ಎರಡರಿಂದ ಮೂರು ಎಕರೆಯಷ್ಟು ಇರುವುದು, ಹಾಗೆ ಬಹುತೇಕ ಭೂಮಿಯು ಸಣ್ಣ ಕಲ್ಲುಗಳಿಂದ ಕೂಡಿದ್ದು, ನೀರಾವರಿಗೆ ಒಳಪಡಿಸಲು ಸಾಧ್ಯವಿಲ್ಲದ ಭೂಪ್ರದೇಶವಾಗಿದೆ. ಚಿತ್ರದುರ್ಗ ಜಿಲ್ಲೆಯೂ ಸದಾ ಬರಪ್ರದೇಶವಾಗಿದ್ದು, ಇಂತಹ ಭೂಮಿಯಲ್ಲಿ ಮಳೆಯನ್ನಾಧರಿಸಿ ಬೆಳೆಯನ್ನು ಪಡೆಯುವುದು ತುಂಬಾ ಕಷ್ಟಕರವಾಗಿದೆ.[೧೨೮]

ಸ್ವಾತಂತ್ರ್ಯಾನಂತರದಲ್ಲಿ ಭೂಹಿಡುವಳಿದಾರರಿಗೆ ಸಂಬಂಧಿಸಿದ ತೀರ ಇತ್ತೀಚಿನ ೧೯೯೦-೯೧ರ ಗಣತಿಯ ಪ್ರಕಾರ ದೊಡ್ಡ ಭೂಹಿಡುವಳಿದಾರರ ಸಂಖ್ಯೆ ಮತ್ತು ಪ್ರಬಲ ಕೃಷಿ ಸಮುದಾಯಗಳು ಕಡಿಮೆಯಾಗಿರುವುದು ಕಂಡುಬರುತ್ತದೆ. ಇಲ್ಲಿ ಒಂದು ಹೆಕ್ಟೇರಿಗೂ ಕಡಿಮೆ ಭೂ ಹಿಡುವಳಿಗಳನ್ನು ಹೊಂದಿದ ಭೂಹಿಡುವಳಿದಾರರ ಸಂಖ್ಯೆ ೮೧೫೦ ಜನರಿದ್ದಾರೆ. ಅವರು ಹೊಂದಿರುವ ಒಟ್ಟು ಭೂ ಹಿಡುವಳಿಯ ವಿಸ್ತೀರ್ಣ ೪೬೧೯೭ ಹೆಕ್ಟೇರಾಗಿದೆ. ಅದೇ ಸಣ್ಣ ಭೂಹಿಡುವಳಿದಾರರಾದ ಒಂದರಿಂದ

ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ ೧೯೬೯ರಡಿಯಲ್ಲಿ ಜಿಲ್ಲೆಯಲ್ಲಿ ಭೂ ವಿತರಣೆಯಲ್ಲಿ ಸಾಧಿಸಿದ ಪ್ರಗತಿ (ಎಕರೆಗಳಲ್ಲಿ)

ಕೋಷ್ಟಕ ೫

ವರ್ಷ	ಹಂಚಿರುವ ಒಟ್ಟು ಜಮೀನು		ಪರಿಶಿಷ್ಟಜಾತಿ ಮತ್ತು ಪಂಗಡ		ಇತರರು	
	ಫಲಾನುಭವಿಗಳ ಸಂಖ್ಯೆ	ವಿಸ್ತೀರ್ಣ ಎಕರೆ-ಗುಂಟೆ	ಸಂಖ್ಯೆ	ವಿಸ್ತೀರ್ಣ ಎಕರೆ-ಗುಂಟೆ	ಸಂಖ್ಯೆ	ವಿಸ್ತೀರ್ಣ ಎಕರೆ-ಗುಂಟೆ
೧	೨	೩	೪	೫	೬	೭
೧೯೭೦-೭೧	೧,೧೧೨	೨೮೬೯-೨೧	೫೬೧	೧೯೧೮-೦೧	೫೫೧	೧೯೫೧-೨೦
೧೯೭೧-೭೨	೧,೨೩೪	೫೧೨೭-೧೭	೬೬೩	೨೫೮೯-೧೮	೫೭೧	೨೫೬೭-೩೯
೧೯೭೨-೭೩	೧,೨೪೬	೩೭೨೦-೧೭	೫೮೪	೧೬೧೫-೦೩	೬೬೨	೨೧೦೫-೧೪
೧೯೭೩-೭೪	೨,೦೫೮	೫೫೬೯-೧೨	೧೦೦೦	೨೫೩೧-೧೫	೧೦೫೮	೩೦೩೭-೩೭
೧೯೭೪-೭೫	೩,೯೮೨	೮೯೨೯-೦೪	೧೮೨೫	೪೦೫೯-೧೦	೨೧೫೭	೪೮೬೯-೩೪
೧೯೭೫-೭೬	೯೭೪	೨೪೪೧-೧೯	೫೧೮	೧೫೧೪-೧೭	೪೫೬	೯೨೭-೦೨
೧೯೭೬-೭೭	೧೧೦೫	೨೬೮೫-೧೫	೫೫೮	೧೪೮೧-೨೧	೫೪೭	೧೨೦೩-೩೪
೧೯೭೭-೭೮	೩,೨೫೮	೯೮೦೦-೩೬	೧೯೩೮	೫೮೭೯-೩೨	೧೩೨೦	೩೯೨೧-೦೪
೧೯೭೮-೭೯	೫೧೫	೧೪೮೬-೧೫	೩೧೫	೯೮೦-೩೮	೨೦೦	೫೦೫-೧೭
೧೯೭೯-೮೦	೧೯೩	೬೭೪-೩೮	೧೪೮	೫೨೭-೩೩	೪೫	೧೪೭-೦೫
೧೯೮೦-೮೧	೪೭೦	೭೮೮-೩೧	೨೯೮	೫೮೭-೨೩	೧೭೨	೨೦೧-೦೮
೧೯೮೧-೮೨	೩೪೦	೯೧೮-೩೪	೨೫೯	೭೪೦-೨೩	೮೧	೧೭೮-೧೧
೧೯೮೨-೮೩	೧,೨೮೩	೩೦೧೦-೨೦	೮೯೩	೨೧೧೯-೨೯	೩೯೦	೮೯೦-೩೧
ಒಟ್ಟು	೧೭೭೭೦	೪೮೦೨೨-೩೯	೯೫೬೦	೨೬೫೧೫-೨೩	೮೨೧೦	೨೨೫೦೭-೧೬

ಎರಡು ಹೆಕ್ಟೇರ್ ಭೂ ಹಿಡುವಳಿಗಳನ್ನು ಹೊಂದಿದವರ ಸಂಖ್ಯೆ ೮೯೨೭೯. ಇವರು ಹೊಂದಿರುವ ಒಟ್ಟು ಕೃಷಿ ಭೂಮಿಯ ವಿಸ್ತೀರ್ಣ ೧೨೯೨೪ ಹೆಕ್ಟೇರು ಆಗಿದೆ. ಅರೆ ಮಧ್ಯಮ ಭೂ ಹಿಡುವಳಿದಾರರೆಂದರೆ ಎರಡರಿಂದ ನಾಲ್ಕು ಹೆಕ್ಟೇರು ಭೂ ಹಿಡುವಳಿಗಳನ್ನು ಹೊಂದಿದವರು. ಇವರ

ಸಂಖ್ಯೆ ೬೨೪೫೭ ಜನರಿದ್ದಾರೆ. ಅವರ ಒಟ್ಟು ಕೃಷಿ ಭೂಮಿಯ ವಿಸ್ತೀರ್ಣ ೧೯೫೬೩೩ ಹೆಕ್ಟೇರು ಆಗಿದೆ. ನಾಲ್ಕರಿಂದ ಹತ್ತು ಹೆಕ್ಟೇರುವರೆಗಿನ ಭೂಹಿಡುವಳಿಗಳನ್ನು ಹೊಂದಿದವರ ಸಂಖ್ಯೆ ೪೦೫೧೧. ಅವರ ಒಟ್ಟು ಕೃಷಿ ಭೂಹಿಡುವಳಿಯ ವಿಸ್ತೀರ್ಣ ೨೩೮೨೧೭ ಹೆಕ್ಟೇರು ಆಗಿದೆ. ಹತ್ತು ಹೆಕ್ಟೇರಿಗೂ ಹೆಚ್ಚು ಭೂಹಿಡುವಳಿಗಳನ್ನು ಹೊಂದಿದವರ ಸಂಖ್ಯೆ ೮೯೫. ಅವರ ಒಟ್ಟು ಭೂಹಿಡುವಳಿಯ ಕೃಷಿ ವಿಸ್ತೀರ್ಣ ೧೩೯೩೯೪ ಹೆಕ್ಟೇರು ಆಗಿದೆ. ಚಿತ್ರದುರ್ಗ ಜಿಲ್ಲೆಯ ಅತಿ ಸಣ್ಣ ಒಂದು ಹೆಕ್ಟೇರ್‌ಗಿಂತಲೂ ಕಡಿಮೆ ಭೂಹಿಡುವಳಿಗಳನ್ನು ಹೊಂದಿದವರಿಂದ ಹಿಡಿದು ೧೦ ಹೆಕ್ಟೇರಿಗೂ ಹೆಚ್ಚು ಭೂಹಿಡುವಳಿಗಳನ್ನು ಹೊಂದಿದವರ ಒಟ್ಟು ಸಂಖ್ಯೆ ೨೯೨೬೫೧ ಆಗಿದೆ. ಒಟ್ಟು ಕೃಷಿಗೊಳಪಟ್ಟಿರುವ ಭೂಹಿಡುವಳಿಯ ವಿಸ್ತೀರ್ಣ ೬೪೮೬೩೫ ಹೆಕ್ಟೇರು ಆಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿಯೇ ೨೬೫೬ಜನ ಅತಿಸಣ್ಣ ಭೂಹಿಡುವಳಿದಾರರನ್ನು ಹೊಂದಿರುವ ಮೊಳಕಾಲ್ಮೂರು ತಾಲೂಕು ಜಿಲ್ಲೆಯಲ್ಲಿಯೇ ಅತಿ ಕಡಿಮೆ ಸಣ್ಣ ಭೂಹಿಡುವಳಿದಾರರನ್ನು ಹೊಂದಿದೆ. ಹಾಗೆಯೇ ೧೪೬೯೬ಜನ ಅತಿ ಸಣ್ಣ ರೈತರನ್ನು ಹೊಂದಿರುವ ಹೊಸದುರ್ಗ ತಾಲೂಕು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಸಣ್ಣ ಭೂ ಹಿಡುವಳಿದಾರರನ್ನು ಹೊಂದಿದೆ. ೧೦ ಹೆಕ್ಟೇರಿಗೂ ಹೆಚ್ಚು ಭೂ ಹಿಡುವಳಿದಾರರನ್ನು ಜಿಲ್ಲೆಯಲ್ಲಿಯೇ ಹರಿಹರ ತಾಲೂಕಿನಲ್ಲಿ ಕೇವಲ ೨೧೪ಜನರಿದ್ದಾರೆ. ಜಿಲ್ಲೆಯಲ್ಲಿಯೇ ಅತಿ ದೊಡ್ಡ ಭೂಹಿಡುವಳಿದಾರರನ್ನು ಹೊಂದಿದ ಚಳ್ಳಕೆರೆ ತಾಲೂಕು ಮೊದಲ ಸ್ಥಾನದಲ್ಲಿದೆ. ಈ ತಾಲೂಕಿನಲ್ಲಿ ೨೮೧೪ ದೊಡ್ಡ ಭೂ ಹಿಡುವಳಿದಾಗರಿದ್ದಾರೆ. ಅದೇ ರೀತಿ ಎರಡನೇ ಸ್ಥಾನದಲ್ಲಿ ಹಿರಿಯೂರು ತಾಲೂಕು ಬರುತ್ತದೆ. ಇಲ್ಲಿ ೧೮೮೩ ಜನರು ದೊಡ್ಡ ಭೂಹಿಡುವಳಿದಾರರಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿಯೇ ಬಂಜರು ಮತ್ತು ವ್ಯವಸಾಯ ಮಾಡಲು ಯೋಗ್ಯವಲ್ಲದ ಪ್ರದೇಶ ೩೫೮೫ ಹೆಕ್ಟೇರು ಇದೆ. ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ ೨೯೭೬೫ ಹೆಕ್ಟೇರು ಇದೆ. ಇತರ ಉದ್ದೇಶಗಳಿಗಾಗಿ ಉಪಯೋಗಿಸಿಕೊಂಡಿರುವ ಪ್ರದೇಶ ೬೪೨೯೨ ಹೆಕ್ಟೇರು. ಒಟ್ಟು ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೧೦೧೫೫೦೫ ಹೆಕ್ಟೇರಾಗಿದೆ.[೧೨೯]

ಭೂ ಹಿಡುವಳಿಗಳ ಸ್ವರೂಪ, ಕೃಷಿ ಅಭಿವೃದ್ಧಿಯಲ್ಲಿ ಮಹತ್ವವಾದ ಪಾತ್ರವಹಿಸುತ್ತದೆ. ಯಾವ ಸ್ವರೂಪದ ಭೂಹಿಡುವಳಿಗಳು ವ್ಯವಸಾಯಕ್ಕೆ ಯೋಗ್ಯ ಮತ್ತು ಭೂ ಹಿಡುವಳಿಗಳ ವಿಸ್ತೀರ್ಣಕ್ಕೂ ಉತ್ಪಾದನೆಗೂ ಯಾವ ರೀತಿಯ ಸಂಬಂಧವಿರುತ್ತದೆ ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಭಾರತದಲ್ಲಿರುವ ಫಾರಂ ಮೇನೇಜ್‌ಮೆಂಟ್ ಅಧ್ಯಯನದಿಂದ ಸಾಗುವಳಿ ಭೂಮಿಯ ಗಾತ್ರವನ್ನು

೧೯೯೦-೯೧ರ ಗಣತಿ ಪ್ರಕಾರ ಭೌಗೋಳಿಕ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)

ಕೋಷ್ಟಕ ೬

ಕ್ರ ಸಂ.	ತಾಲೂಕು	ಭೌಗೋಳಿಕ ವಿಸ್ತೀರ್ಣ	ಅರಣ್ಯ	ಸಾಗುವಳಿಗೆ ಲಭ್ಯವಿಲ್ಲದ ಭೂಮಿ(ಹೆ)		
				ಬಂಜರು ಮತ್ತು ವ್ಯವಸಾಯ ಮಾಡಲು ಯೋಗ್ಯವಲ್ಲದ ಪ್ರದೇಶ	ಇತರೆ ಉದ್ದೇಶಗಳಿಗೆ ಉಪಯೋಗಿಸಿ ಕೊಂಡಿರುವ ಪ್ರದೇಶ	ಒಟ್ಟು
೧	೨	೩	೪	೫	೬	೭
೧	ಚಳ್ಳಕೆರೆ	೧೯೪೩೮೦	೬೯೮೭	೧೧೬೯೫	೧೦೫೬೭	೨೨೨೬೨
೨	ಚಿತ್ರದುರ್ಗ	೧೨೩೫೦೨	೧೨೦೪೭	೪೪೫೫	೧೨೨೯೫	೧೬೭೫೦
೩	ದಾವಣಗೆರೆ	೯೯೪೧೦	೨೩೬೨	೧೬೫೩	೬೪೪೮	೮೧೦೧
೪	ಹರಿಹರ	೪೯೮೬೬	೨೦೬೦	೧೩೧೧	೩೭೨೩	೫೦೩೪
೫	ಹಿರಿಯೂರು	೧೩೭೪೨೩	೧೧೩೫೮	೬೦೬	೭೬೧೩	೮೨೧೯
೬	ಹೊಳಲ್ಕೆರೆ	೧೩೫೮೬೮	೮೮೭೮	೫೮೬೫	೫೧೧೫	೧೦೯೮೦
೭	ಹೊಸದುರ್ಗ	೧೧೨೫೭೪	೧೮೪೯೭	೨೫೮೪	೧೦೦೮೮	೧೨೬೭೨
೮	ಜಗಳೂರು	೯೫೫೨೭	೧೨೬೮೮	೨೨೨೦	೩೩೮೩	೫೬೦೩
೯	ಮೊಳಕಾಲ್ಮೂರು	೬೬೯೫೫	೧೫೩೭೩	೧೯೫	೫೦೬೦	೫೨೫೫
	ಒಟ್ಟು	೧೦೧೫೫೦೫	೯೦೨೫೨	೩೦೫೮೪	೬೪೨೯೨	೯೪೮೭೬

೧೯೯೦-೯೧ರ ಗಣತಿ ಪ್ರಕಾರ ಭೂ ಹಿಡುವಳಿಗಳು ಮತ್ತು ವಿಸ್ತೀರ್ಣ (ಹೆಕ್ಟೇರುಗಳಲ್ಲಿ)

ಕ್ರ. ಸಂ.	ತಾಲೂಕು	ಅತಿಸಣ್ಣ (೧ ಹೆ.ಗೂ ಕಡಿಮೆ)		ಸಣ್ಣ (೧-೨ಹೆ)		ಅರೆ ಮಧ್ಯಮ (೨-೪ಹ)	
		ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
೧	೨	೩	೪	೫	೬	೭	೮
೧.	ಚಳ್ಳಕೆರೆ	೭೫೩೯	೪೨೬೮	೧೧೦೦೪	೧೬೬೨೮	೧೩೩೦೭	೩೫೧೯೦
೨.	ಚಿತ್ರದುರ್ಗ	೮೮೭೧	೫೨೬೩	೧೩೨೭೫	೧೯೪೦೧	೧೧೦೧೬	೩೦೦೦೯
೩.	ದಾವಣಗೆರೆ	೧೪೬೧೩	೮೧೬೮	೧೨೮೯೦	೧೮೧೪೮	೮೪೫೯	೨೩೧೦೬
೪.	ಹರಿಹರ	೭೮೩೩	೪೩೬೬	೫೮೪೦	೮೪೨೦	೪೩೬೪	೧೧೮೫೮
೫.	ಹಿರಿಯೂರು	೧೦೦೪೬	೫೪೬೦	೧೧೧೦೨	೧೫೮೬೯	೯೭೪೬	೨೬೧೮೧
೬.	ಹೊಳಲ್ಕೆರೆ	೯೫೫೪	೫೯೦೨	೧೦೬೧೬	೧೫೨೬೫	೭೧೩೮	೧೯೩೪೯
೭.	ಹೊಸದುರ್ಗ	೧೪೬೯೬	೮೨೦೪	೧೧೯೦೭	೧೬೯೫೩	೭೩೩೫	೨೦೧೧೬
೮.	ಜಗಳೂರು	೫೫೯೦	೩೦೫೭	೮೭೯೭	೧೨೮೯೨	೭೩೯೨	೧೯೭೬೯
೯.	ಮೊಳಕಾಲ್ಮೂರು	೨೭೬೭	೧೫೦೯	೩೮೪೮	೫೭೧೮	೩೭೦೦	೧೦೦೫೫
	ಒಟ್ಟು	೮೧೫೦೯	೪೬೧೯೭	೯೯೨೭೮	೧೨೨೯೪	೭೨೪೫೭	೧೯೫೬೩೩

೧೯೯೦-೯೧ರ ಗಣತಿ ಪ್ರಕಾರ ಭೂ ಹಿಡುವಳಿಗಳು ಮತ್ತು ವಿಸ್ತೀರ್ಣ (ಹೆಕ್ಟೇರುಗಳಲ್ಲಿ)

ಕ್ರ. ಸಂ.	ತಾಲೂಕು	(೪-೧೦ ಹೆ)		೧೦ ಹೆ.ಗೂ ಹೆಚ್ಚು		ಒಟ್ಟು	
		ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
೧	೨	೩	೪	೫	೬	೭	೮
೧.	ಚಳ್ಳಕೆರೆ	೮೨೨೦	೪೮೮೩೫	೨೮೧೪	೪೫೭೧೩	೪೨೮೩೪	೧೫೦೬೩೪
೨.	ಚಿತ್ರದುರ್ಗ	೫೮೮೮	೩೪೭೪೩	೧೦೪೬	೧೫೪೫೮	೪೦೦೯೬	೧೦೪೮೭೪
೩.	ದಾವಣಗೆರೆ	೩೯೧೯	೨೨೪೮೯	೪೩೭	೫೮೧೮	೪೦೩೧೮	೭೭೭೨೯
೪.	ಹರಿಹರ	೨೧೧೯	೧೨೨೫೭	೨೧೪	೨೯೫೭	೨೦೩೭೦	೩೯೮೫೮
೫.	ಹಿರಿಯೂರು	೬೬೦೬	೩೯೩೯೯	೧೮೮೩	೨೯೮೩೧	೩೯೩೮೩	೧೧೬೭೪೦
೬.	ಹೊಳಲ್ಕೆರೆ	೩೫೩೮	೨೦೨೮೧	೫೧೮	೮೨೯೩	೩೬೩೬೪	೬೯೦೯೦
೭.	ಹೊಸದುರ್ಗ	೪೧೪೨	೨೪೪೯೮	೭೫೩	೧೦೫೪೯	೩೮೮೩೩	೮೦೩೨೦
೮.	ಜಗಳೂರು	೩೫೪೩	೨೦೫೩೫	೬೩೪	೯೪೯೨	೨೫೯೫೬	೬೫೭೪೫
೯.	ಮೊಳಕಾಲ್ಮೂರು	೨೫೩೬	೧೫೧೮೦	೬೯೬	೧೧೨೮೩	೧೩೫೪೭	೪೩೭೪೫
	ಒಟ್ಟು	೪೦೫೧೧	೨೩೮೨೧೭	೮೯೯೫	೧೩೯೩೯೪	೨೯೨೭೫೧	೭೪೮೭೩೫

ಹೆಚ್ಚಿಸಿದಂತೆ ಅದರ ಉತ್ಪಾದನೆಯೂ ಸಹ ಹೆಚ್ಚುತ್ತದೆ. ಅದರೆ ಕೃಷ್ಣಾಭಾರಧ್ವಾಜಮುಖರ್ಜಿ ಚಟ್ಟೋಪಾಧ್ಯಾಯ ಅವರ ಅಧ್ಯಯನವು ಭೂಮಿಯ ಗಾತ್ರವನ್ನು ಹೆಚ್ಚಿಸಿದಂತೆಲ್ಲ ಅದರ ಉತ್ಪಾದಕತೆಯೂ ಕಡಿಮೆಯಾಗುತ್ತದೆ ಎಂಬುದನ್ನು ತಿಳಿಸುತ್ತದೆ. ಭೂಮಿಯ ಗಾತ್ರ ಮತ್ತು ಉತ್ಪಾದನೆಗಳ ನಡುವೆ ಹಲವು ರೀತಿಯ ಭಿನ್ನಾಭಿಪ್ರಾಯಗಳಿದ್ದರೂ, ಸಾಗುವಳಿ ಭೂಮಿಯ ಗಾತ್ರಕ್ಕಿಂತಲೂ ನೀರಾವರಿ, ರಾಸಾಯನಿಕ ಗೊಬ್ಬರಗಳು, ಭೂಮಿಯ ಫಲವತ್ತತೆ ಮೊದಲಾದವುಗಳು ಪ್ರಭಾವ ಬೀರಿರುವ ಪ್ರಮುಖ ಅಂಶಗಳೆಂದು ಹೇಳಬಹುದು. ಪ್ರಸ್ತುತ ಭಾಗದಲ್ಲಿ ಚಿತ್ರದುರ್ಗ ಜಿಲ್ಲೆಯೂ ಸ್ವಾತಂತ್ರ್ಯಾನಂತರದ ಭೂಹಿಡುವಳಿಗಳ ಸ್ವರೂಪ ಅವುಗಳಲ್ಲಿರುವ ಭಿನ್ನತೆಯನ್ನು ಕುರಿತಂತೆ ಚರ್ಚಿಸುವಲ್ಲಿ ಚಿತ್ರದುರ್ಗ ಜಿಲ್ಲೆಯ ಭೂಹಿಡುವಳಿಗಳನ್ನು ಅಧ್ಯಯನದ ದೃಷ್ಟಿಯಿಂದ ಅತಿಸಣ್ಣ, ಸಣ್ಣ, ಮಧ್ಯಮ, ಅತಿದೊಡ್ಡವೆಂಬುದಾಗಿ ಕರೆಯಬಹುದು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಜಗಳೂರು, ಹಿರಿಯೂರು, ಮೊಳಕಾಲ್ಮೂರು ತಾಲೂಕುಗಳಲ್ಲಿ ಹೆಚ್ಚಾಗಿ ದೊಡ್ಡ ಭೂ ಹಿಡುವಳಿದಾರರಿದ್ದಾರೆ. ಆದರೂ ಇದು ಸಂಪೂರ್ಣ ಮಳೆಯಾಶ್ರಿತ ಭೂಪ್ರದೇಶವಾದುದರಿಂದ ಕೃಷಿ

ಉತ್ಪಾದನೆಯೂ ಕಡಿಮೆಯಾಗಿದೆ. ಇದಕ್ಕೆ ವ್ಯತಿರಿಕ್ತವೆಂಬಂತೆ ಹೊಸದುರ್ಗ, ಹೊಳಲ್ಕೆರೆ, ದಾವಣಗೆರೆ, ಮತ್ತು ಹರಿಹರ ತಾಲೂಕುಗಳಲ್ಲಿ ಅತಿ ಹೆಚ್ಚು ಸಣ್ಣ ಭೂಹಿಡುವಳಿದಾರರಿದ್ದಾರೆ. ಈ ಭಾಗದಲ್ಲಿ ಶ್ರಮ ಮತ್ತು ಬಂಡವಾಳಗಳು ಮುಕ್ತವಾಗಿ ಅಭಿವೃದ್ಧಿ ಚಟುವಟಿಕೆಗಳಲ್ಲಿ ಭಾಗವಹಿಸಿವೆ. ಇಲ್ಲಿನ ಹವಾಮಾನವು ಜಿಲ್ಲೆಯ ಉತ್ತರ ಭಾಗಕ್ಕಿಂತ ಸ್ವಲ್ಪಮಟ್ಟಿಗೆ ಅರೆಮಲೆನಾಡಿನ ಪ್ರದೇಶವೆಂಬಂತೆ ಕಂಡುಬರುತ್ತದೆ. ಚಿತ್ರದುರ್ಗ ಜಿಲ್ಲೆಯ ಉತ್ತರ ಭಾಗದಲ್ಲಿನ ಕೃಷಿ ವ್ಯವಸ್ಥೆ, ಭೂಹಿಡುವಳಿಗಳ ಸಂಖ್ಯೆ ಹಾಗೂ ದೊಡ್ಡ ಭೂಹಿಡುವಳಿದಾರರ ಪಾಳೆಯಗಾರಿಕೆಯಿಂದಲೂ ಕೂಡಿದೆ. ಆದರೆ ದಕ್ಷಿಣದ ತಾಲೂಕುಗಳಲ್ಲಿಯೂ ಈ ವ್ಯವಸ್ಥೆ ಕಂಡುಬರುವುದಿಲ್ಲ.[೧೨೦]

ಮೇಲಿನ ಅಧ್ಯಯನಗಳನ್ನು ಗಮನಿಸುವ ಸಲುವಾಗಿ ಸಮುದಾಯವಾರು ಕೃಷಿಗೆ ಒಳಪಟ್ಟಿರುವ ಭೂಹಿಡುವಳಿಗಳ ಬಗ್ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿದರೆ ಬೇರೆ ಇನ್ನಾವುದೇ ಸಮುದಾಯಕ್ಕೂ ಸಂಬಂಧಿಸಿದಂತೆ ಸಮುದಾಯವಾರು ಕೃಷಿಗೊಳಪಟ್ಟ ಅಂಕಿ ಅಂಶಗಳು ಸ್ಪಷ್ಟವಾಗಿ ದೊರೆಯುವುದಿಲ್ಲ. ಈ ಹಿನ್ನೆಲೆಯಲ್ಲಿ ೧೯೭೪ರ ನಂತರದ ದರಖಾಸ್ತು ಮೂಲಕ ಹಂಚಿರುವ ಭೂಹಿಡುವಳಿಗಳ ಅಂಕಿ-ಸಂಖ್ಯೆಗಳನ್ನು ಗಮನಿಸಲಾಗಿದೆ. ಮೇಲಿನ ಅಂಕಿ ಅಂಶಗಳನ್ನು ಗಮನಿಸಿದರೆ ಹತ್ತು ಹೆಕ್ಟೇರಿಗೂ ಹೆಚ್ಚು ಭೂ ಹಿಡುವಳಿಗಳನ್ನು ಹೊಂದಿರುವ ಭೂಹಿಡುವಳಿದಾರರು ಸಂಖ್ಯೆಯಲ್ಲಿ ಗಣನೀಯವಾಗಿ ಕಡಿಮೆಯಾಗಿರುವುದು ಕಂಡುಬರುತ್ತದೆ.[೧೨೧] ಆದರೂ ಈ ವರ್ಗದಲ್ಲಿ ವಿರುದ್ಧವಾದ ಬದಲಾವಣೆಯನ್ನು ಗುರುತಿಸಬಹುದು. ಅಂದರೆ ಕಡಿಮೆ ಭೂ ಹಿಡುವಳಿಯನ್ನು ಹೊಂದಿದ್ದರೂ, ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಮೊದಲಿನಂತೆಯೇ ಸುಧಾರಿಸಿಕೊಂಡಿದ್ದಾರೆ. ಇವರು ಇಡೀ ಗ್ರಾಮಗಳನ್ನು ತಮ್ಮ ಅಧೀನದಲ್ಲಿಟ್ಟುಕೊಂಡಿರುವವರು ಸ್ವಾತಂತ್ರ್ಯಾನಂತರದ ದಶಕದಲ್ಲಾದ ವಿಜ್ಞಾನ, ತಂತ್ರಜ್ಞಾನ, ರಾಸಾಯನಿಕ ಗೊಬ್ಬರ ಹಾಗೂ ಇತರ ಅನುಕೂಲಗಳನ್ನು ದೊಡ್ಡ ಭೂ ಹಿಡುವಳಿದಾರರು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ದೊಡ್ಡ ಭೂ ಹಿಡುವಳಿದಾರರು ಕೆರೆ, ಕೊಳವೆ ಭಾವಿಯ ಅಥವಾ ಕಾಲುವೆಯ ಮೂಲಕ ತಮ್ಮ ಭೂಹಿಡುವಳಿಗಳನ್ನು ನೀರಾವರಿಗೆ ಒಳಪಡಿಸಿ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇನ್ನಿತರ ವಾಣಿಜ್ಯ ಬೆಳೆಗಳನ್ನು ಬೆಳೆಯುವುದರ ಮೂಲಕ ಈ ವರ್ಗ ಕಡಿಮೆ ಸಂಖ್ಯೆಯಲ್ಲಿದ್ದರೂ ತನ್ನ ಭೂಮಾಲಿಕತ್ವದ ಲಕ್ಷಣಗಳನ್ನು ಎಂದಿನಂತೆಯೇ ಉಳಿಸಿಕೊಂಡಿದೆ. ಮಧ್ಯಮವರ್ಗದ ಭೂಹಿಡುವಳಿದಾರರು ತಮ್ಮ ಕೌಟುಂಬಿಕ ಜೀವನ ನಡೆಸುವಲ್ಲಿ ಮಾತ್ರ ಯಶಸ್ವಿಯಾಗಿದ್ದಾರೆ. ಅಧಿಕ ಸಂಖ್ಯೆಯಲ್ಲಿರುವ ಸಣ್ಣ ಭೂಹಿಡುವಳಿದಾರರು ಆಧುನಿಕ ವ್ಯವಸಾಯ

ಪದ್ಧತಿಯನ್ನು ಅಳವಡಿಸಿಕೊಳ್ಳಲಾಗದೆ ವ್ಯವಸಾಯದಿಂದ ದೂರವಾಗುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆ ಕರ್ನಾಟಕದ ಮಧ್ಯಭಾಗದಲ್ಲಿದ್ದರೂ ಹೊಸದುರ್ಗ, ಹೊಳಲ್ಕೆರೆ, ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಜಗಳೂರು ತಾಲೂಕುಗಳು ನೀರಾವರಿಯಿಂದ ಸಂಪೂರ್ಣ ವಂಚಿತವಾಗಿವೆ. ಸ್ವಾತಂತ್ರ್ಯಪೂರ್ವದಿಂದಲೂ ಇಲ್ಲಿನ ಜನರ ಬದುಕನ್ನು ಹಸನುಗೊಳಿಸಬಹುದಾದ ಭದ್ರ ಮೇಲ್ದಂಡೆ ಯೋಜನೆ ಅಥವಾ ತುಂಗಾ ತಿರುವು ಯೋಜನೆಯು ಕಾರ್ಯರೂಪಕ್ಕೆ ಬರದೆ ಸರಕಾರದ ದಾಖಲೆಯಲ್ಲಿಯೇ ಉಳಿದಿದೆ. ಒಂದು ಕಡೆ ಜನಸಂಖ್ಯೆ ಹೆಚ್ಚಳದಿಂದಾಗಿ ಈ ಮೇಲಿನ ಬಯಲು ಪ್ರದೇಶದ ಸಣ್ಣ ಭೂಹಿಡುವಳಿದಾರರು ಎರಡು ಹೊತ್ತಿನ ಹೊಟ್ಟೆಬಟ್ಟೆಗೂ ಸಾಲದೆ ಪ್ರತಿವರ್ಷದ ಜನವರಿ ತಿಂಗಳಿನಿಂದ ಮೇವರೆಗೆ ಚಿಕ್ಕಮಗಳೂರು, ಮಂಗಳೂರು ಮತ್ತು ಬೆಂಗಳೂರು ಪ್ರದೇಶಗಳಿಗೆ ಗ್ರಾಮಾಂತರ ಪ್ರದೇಶಗಳಿಂದ ಸಾವಿರಾರು ಸಂಖ್ಯೆಯಲ್ಲಿ ಗುಂಪುಗುಂಪಾಗಿ ಉದ್ಯೋಗವನ್ನರಸಿ ದಿನಗೂಲಿಯನ್ನು ಹುಡುಕಿಕೊಂಡು ಹೋಗುವ ಪರಿಪಾಠವಿದೆ. ಇತ್ತೀಚಿನ ಆರ್ಥಿಕ ಬೆಳೆಗಳಾದ ಹತ್ತಿ, ಎಣ್ಣೆಕಾಳುಗಳು ಹಲವು ಸಂದರ್ಭದಲ್ಲಿ ಮಾನ್ಸೂನ್ ಮಾರುತದ ಏರುಪೇರುಗಳಿಂದಾಗಿ ಮಳೆ ಬಾರದೆ ನಷ್ಟ ಅನುಭವಿಸಿದ ಸಣ್ಣ ರೈತರು ಆತ್ಮಾಹುತಿಯನ್ನು ಮಾಡಿಕೊಂಡಿದ್ದಾರೆ. ಇಂಥ ಹಲವು ಉದಾಹರಣೆಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಇವೆ.[೧೩೨]

ಈ ಮೇಲಿನ ಹಲವು ಲಕ್ಷಣಗಳಿಂದಾಗಿ ಬಡವ ಮತ್ತು ಶ್ರೀಮಂತ ಭೂಹಿಡುವಳಿದಾರರ ನಡುವಿನ ಅಂತರವು ಇನ್ನಷ್ಟು ಹೆಚ್ಚಾಗುತ್ತಿದೆ. ಜೊತೆಗೆ ಸ್ವಾತಂತ್ರ್ಯಾನಂತರದಲ್ಲಿ ಬಂದ ಮಾರುಕಟ್ಟೆಯ ದಲ್ಲಾಳಿ ವ್ಯವಸ್ಥೆಯಲ್ಲಿ ಬಂಡವಾಳ ವರ್ಗವೊಂದು ಹೊಸದಾಗಿ ಹುಟ್ಟಿಕೊಂಡು ಸಣ್ಣ ರೈತರ ಶೋಷಣೆಯನ್ನು ಇನ್ನಷ್ಟು ಹೆಚ್ಚಿಸಿದೆ. ದೊಡ್ಡ ಭೂ ಒಡುವಳಿದಾರರು, ಅತಿ ಸಣ್ಣ ಭೂಹಿಡುವಳಿ ದಾರರು ಮತ್ತು ಗೇಣಿದಾರರ ಸಂಬಂಧಗಳು ಬೇರೆ ಬೇರೆ ರೂಪ ಪಡೆಯುತ್ತ ಬಂದರೂ ಅದರ ಮೂಲಸ್ವರೂಪದಲ್ಲಿ ಬದಲಾವಣೆ ಕಂಡುಬರುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ವ್ಯವಸಾಯಕ್ಕೆ ಒಳಪಡಿಸಬಹುದಾದ ಭೂಮಿ ಕಡಿಮೆಯಾಗಿದೆ. ಜೊತೆಯಲ್ಲಿಯೇ ಭೂರಹಿತ ಕೂಲಿಕಾರರ ಸಂಖ್ಯೆ ಮುಖ್ಯವಾಗಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಗಳು ಸೇರಿದಂತೆ ಎಲ್ಲಾ ಸಮುದಾಯಗಳಲ್ಲಿಯೂ ಹೆಚ್ಚಾಗುತ್ತಿದ್ದಾರೆ. ಇದರಿಂದ ಬೇರೊಂದು ರೀತಿಯದ ಸಮಸ್ಯೆ ಈ ಭಾಗದಲ್ಲಿ ಉದ್ಭವಿಸಬಹುದಾಗಿದೆ. ಭೂಸುಧಾರಣ ಶಾಸನಗಳು ಎಷ್ಟೇ ಪರಿಣಾಮಕಾರಿಯಾಗಿದ್ದರು ಅವು ಕಾರ್ಯಾಚರಣೆಗೆ ಬರುವ ವೇಳೆಯಲ್ಲಿ ವಿಫಲವಾಗುತ್ತಿವೆ ಎನ್ನುವ ಅಂಶ ಭೂ ಸುಧಾರಣ ಶಾಸನಗಳ ಕಾರ್ಯಾಚರಣೆಯಿಂದ

೧೬. ಲಕ್ಷ್ಮಣ್ ತೆಲಗಾವಿ, *ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ,* ಎಂ.ವಿ.ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ (ಸಂ)., ಚಂದ್ರವಳ್ಳಿ ಪು. ೮೧

೧೭. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ದಾವಣಗೆರೆ ಶಾಸನ ಸಂಖ್ಯೆ** ೧೪೭

೧೮. ರಾಬರ್ಟ್‌ಸಿವಿಲ್, ಎ **ಫರ್‌ಗಾಟನ್ ಎಂಫೈರ್** (ವಿಜಯನಗರ) ಏಷಿಯನ್ ಎಜುಕೇಶನಲ್ ಸರ್ವಿಸ್, ದೆಹಲಿ, ೧೯೯೧, ಪು. ೨೧೦

೧೯. ಸಿದ್ಧಲಿಂಗಸ್ವಾಮಿ, *ಮಧ್ಯಕಾಲೀನ ಸಮಾಜ ಮತ್ತು ಸಾಮಾಜಿಕ ಚಿಂತನೆಗಳು,* ರಾಮಕೃಷ್ಣ(ಸಂ) ಹೊಸತು, ಮಾಸಿಕ ಪತ್ರಿಕೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಏಪ್ರಿಲ್ ೨೦೦೦, ಪು. ೩೯

೨೦. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಚಿತ್ರದುರ್ಗ ಶಾಸನ ಸಂಖ್ಯೆ** ೪೧

೨೧. ರಾಬರ್ಟ್‌ಸಿವಿಲ್, ಎ **ಫರ್‌ಗಾಟನ್ ಎಂಫೈರ್** (ವಿಜಯನಗರ) ಏಷಿಯನ್ ಎಜುಕೇಶನಲ್ ಸರ್ವಿಸ್, ದೆಹಲಿ, ೧೯೯೧, ಪು. ೨೪೫

೨೨. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಹೊಳಲ್ಕೆರೆ ಶಾಸನ ಸಂಖ್ಯೆ** ೯೬

೨೩. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಹಿರಿಯೂರು ಶಾಸನ ಸಂಖ್ಯೆ** ೪೦

೨೪. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಹರಿಹರ ಶಾಸನ ಸಂಖ್ಯೆ** ೧೬

೨೫. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಚಿತ್ರದುರ್ಗ ಶಾಸನ ಸಂಖ್ಯೆ** ೪೫

೨೬. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಹರಿಹರ ಶಾಸನ ಸಂಖ್ಯೆ** ೨೩

೨೭. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಮೊಳಕಾಲ್ಮೂರು ಶಾಸನ ಸಂಖ್ಯೆ** ೧೦

೨೮. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಚಳ್ಳಕೆರೆ ಶಾಸನ ಸಂಖ್ಯೆ** ೨೩

೨೯. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಹಿರಿಯೂರು ಶಾಸನ ಸಂಖ್ಯೆ** ೩೫

೩೦. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಹೊಳಲ್ಕೆರೆ ಶಾಸನ ಸಂಖ್ಯೆ** ೧೪

೩೧. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಹೊಳಲ್ಕೆರೆ ಶಾಸನ ಸಂಖ್ಯೆ** ೧೧೩

೩೨. ಫ್ರಾನ್ಸಿಸ್ ಬುಕಾನಾನ್ **ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಅಂಡ್ ಮಲಬಾರ್**, ಸಂಪುಟ-೧, ಪರಿಷ್ಕೃತ ಮುದ್ರಣ, ಏಷಿಯನ್ ಎಜುಕೇಷನ್‌ಲ್ ಸರ್ವಿಸ್, ದೆಹಲಿ, ಮದ್ರಾಸ್, ೧೯೯೮, ಪು. ೩೮೭

೩೩. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಮೊಳಕಾಲ್ಮೂರು ಶಾಸನ ಸಂಖ್ಯೆ** ೨೫, **ಹೊಳಲ್ಕೆರೆ ಶಾಸನ ಸಂಖ್ಯೆ** ೮೧

೩೪. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಹೊಳಲ್ಕೆರೆ ಶಾಸನ ಸಂಖ್ಯೆ** ೧, **ಜಗಳೂರು ಶಾಸನ ಸಂಖ್ಯೆ** ೪೧

೩೫. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಚಿತ್ರದುರ್ಗ ಶಾಸನ ಸಂಖ್ಯೆ** ೫೧

೩೬. ಬಿ. ಎಲ್. ರೈಸ್, ಎ.ಕ. ಸಂಪುಟ ೧೧, **ಚಿತ್ರದುರ್ಗ ಶಾಸನ ಸಂಖ್ಯೆ** ೪೮

೩೭. ಬಿ. ಎಲ್. ರೈಸ್, **ಮೈಸೂರು ಗೆಜೆಟಿಯರ್,** ಸಂಪುಟ ೧, ಪು. ೬೧೨

೩೮. ಎಂ. ಎಸ್. ಪುಟ್ಟಣ್ಣ, **ಚಿತ್ರದುರ್ಗ ಪಾಳೆಯಗಾರರು,** ಪು. ೭೦

೩೯. ಅದೇ, ಪು. ೧೯

೪೦. ಅದೇ, ಪು. ೬೧

೪೧. ಬಿ.ಷೇಕ್ ಆಲಿ(ಸಂ)., **ಕರ್ನಾಟಕ ಚರಿತ್ರೆ** ಸಂಪುಟ-೫, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೪೫೨

೪೨. ಮೊಹಬುಲ್ ಹಸನ್, **ಹಿಸ್ಟರಿ ಆಫ್ ಟಿಪ್ಪುಸುಲ್ತಾನ್,** ಕಲ್ಕತ್ತಾ, ೧೯೭೧, ಪು. ೩೩೩

೪೩. ಬರ್ರಿಷ್ ಕ್ರಿಸ್ಪ್, **ದಿ ಮೈಸೂರಿಯನ್ ರೆವೆನ್ಯೂ ರೆಗ್ಯುಲೇಷನ್ಸ್,** ಕಲ್ಕತ್ತಾ, ೧೮೯೨, ಪು. ೨೮

೪೪. ಮೊಹಬುಲ್ ಹಸನ್, **ಹಿಸ್ಟರಿ ಆಫ್ ಟಿಪ್ಪುಸುಲ್ತಾನ್,** ಪು. ೩೩೫

೪೫. ಬರ್ರಿಷ್ ಕ್ರಿಸ್ಪ್, **ದಿ ಮೈಸೂರಿಯನ್ ರೆವೆನ್ಯೂ ರೆಗ್ಯುಲೇಷನ್ಸ್,** ಪು. ೧೭-೨೬

೪೬. ಫ್ರಾನ್ಸಿಸ್ ಬುಕಾನನ್ **ಜರ್ನಿ ಫ್ರಂ ಮದ್ರಾಸ್ ಥ್ರೂ ದೀ ಕಂಟ್ರಿಸ್ ಆಫ್ ಮೈಸೂರು ಕೆನರಾ ಲ್ಯಾಂಡ್ ಮಲಬಾರ್** ಸಂಪುಟ-೩, ಪು. ೨೯೮

೪೭. ಅದೇ, ೨೯೯

೪೮. ಅದೇ, ೩೧೬

೪೯. ಅದೇ, ೩೪೮

೫೦. ಅದೇ, ೩೮೬

೫೧. ಅದೇ, ೩೮೮

೫೨. ಕೆ. ಎನ್. ವೆಂಕಟಸುಬ್ಬಶಾಸ್ತ್ರೀ, **ದಿ ಮನ್ರೋ ಸಿಸ್ಟಂ ಆಫ್ ಬ್ರಿಟಿಶ್ ಸ್ಟೇಟ್ಸ್‌ಮೆನ್‌ಶಿಫ್ ಇನ್ ಇಂಡಿಯಾ,** ದಿ ಯುನಿವರ್‌ಸಿಟಿ ಆಫ್ ಮೈಸೂರ್, ಮೈಸೂರು, ೧೯೩೯, ಪು. ೭೬, ೮೦

೫೩. ಎಂ. ಎಚ್. ಗೋಪಾಲ್, **ಟಿಪ್ಪುಸುಲ್ತಾನ್ಸ್ ಮೈಸೂರು ಯಾನ್ ಎಕನಾಮಿಕ್‌ಸ್ಟಡಿ,** ಪಾಪ್ಯೂಲರ್ ಪ್ರಕಾಶನ್, ಬಾಂಬೆ, ೧೯೭೬, ಪು. ೧-೨

೫೪. ಬಿ. ಷೇಕ್ ಆಲಿ(ಸಂ), **ಕರ್ನಾಟಕ ಚರಿತ್ರೆ ಸಂಪುಟ-೫,** ಪು. ೪೫೫

೫೫. ಸಾಕಿ, **ಮೇಕಿಂಗ್ ಹಿಸ್ಟರಿ, ಕರ್ನಾಟಕ್ಸ್ ಫೀಪಲ್ ಆ್ಯಂಡ್ ದೇರ್ ಫಾಸ್ಟ್,** ಸಂಪುಟ-೧, ವಿಮುಕ್ತಿ ಪ್ರಕಾಶನ, ಬೆಂಗಳೂರು, ೧೯೯೮, ಪು. ೪೧೭

೫೬. ಮಹೀಶೂರ ಶ್ರೀ ಮನ್ಮಮಹಾರಾಜ ಚಾಮರಾಜೇಂದ್ರ ಒಡೆಯರ್ ಅವರ ವಂಶರತ್ನಾಕರ, ಮೈಸೂರು ಮುದ್ರಾಕ್ಷರ ಶಾಲೆ, ಮಿಥಿಕ್ ಸೊಸೈಟಿ, ಬೆಂಗಳೂರು, ೧೮೮೭, ಪು. ೩೪೦-೪೧

೫೭. ಎಂ. ಶಾಮರಾಯರು, **ಮೈಸೂರು ಸಂಸ್ಥಾನದ ಚರಿತ್ರಾಸಾರ,** ಸರಕಾರಿ ಮುದ್ರಣಾಲಯ, ಮೈಸೂರು, ೧೮೮೩, ಪು. ೭೦

೫೮. ಸಿ. ಹಯವದನ ರಾವ್, **ಮೈಸೂರು ಗೆಜೆಟಿಯರ್,** ಸಂಪುಟ-೪, ಮೈಸೂರು ಸರಕಾರ, ಮೈಸೂರು, ೧೯೩೦, ಪು.೪೫

೫೯. ಬಿ.ಎಲ್.ರೈಸ್, **ಮೈಸೂರು ಗೆಜೆಟಿಯರ್,** ಸಂಪುಟ ೧, ಪು.೬೧೬

೬೦. ಕೆ. ಕೆ. ಎನ್. ಕುರುಪ್, ***ಭೂಸ್ವಾಮ್ಯ ಮತ್ತು ಸಾಮಾಜಿಕ ಬದಲಾವಣೆ. ವಸಾಹತುಶಾಹಿ ಸಂದರ್ಭದಲ್ಲಿ ದಕ್ಷಿಣ ಕನ್ನಡ,*** ಸೆಬಾಸ್ಟಿಯನ್ ಜೋಸೆಫ್, ಸಂಪುಟ ಸಂಪಾದಕರು, ಕರ್ನಾಟಕ ಚರಿತ್ರೆ ಸಂಪುಟ-೬, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೧೩೨

೬೧. ಬಿ. ಎಲ್. ರೈಸ್, **ಮೈಸೂರು ಗೆಜಿಟಿಯರ್,** ಸಂಪುಟ-೧, ಲಂಡನ್, ೧೮೯೭, ಪು. ೬೧೭-೬೨೦

೬೨. ಎಂ. ಶಾಮರಾವ್, **ಮೈಸೂರು ಸಂಸ್ಥಾನದ ಚರಿತ್ರೆ,** ಸರಕಾರಿ ಮುದ್ರಣಾಲಯ, ಬೆಂಗಳೂರು, ೧೮೯೩, ಪು. ೧೭೯

೬೩. ಅದೇ, ಪು. ೧೮೮-೧೮೯

೬೪. ಎಂ. ಎಚ್. ಗೋಪಾಲ್, **ದಿ ಫೈನಾನ್ಸ್ ಆಫ್ ಮೈಸೂರು ಸ್ಟೇಟ್,** ೧೭೯೯-೧೮೩೧, ಮೈಸೂರು, ೧೯೬೦, ಪು. ೧೬೨

೬೫. ಎಂ. ಎಚ್. ಗೋಪಾಲ್, (ಸಂ)., **ರೈಟಿಶ್ ಸೋರ್ಸ್ ಆಫ್ ದಿ ಎಕಾನಾಮಿಕ್ ಪೊಲಿಟಿಕಲ್ ಆ್ಯಂಡ್ ಸೋಸಿಯಲ್ ಹಿಸ್ಟರಿ ಆಫ್ ಮೈಸೂರು ಸ್ಟೇಟ್,** ೧೮೧೩-೧೮೩೨, ಪಾಪ್ಯುಲರ್ ಪ್ರಕಾಶನ, ಬಾಂಬೆ, ೧೯೬೩, ಪು. ೩೪೭

೬೬. ಕೆ. ಎಸ್. ವಿಜಯಲಕ್ಷ್ಮಿ, ***ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಆರ್ಥಿಕ ಹಿನ್ನೆಲೆ,*** ಎಸ್. ಚಂದ್ರಶೇಖರ್, ಸಂಪುಟ ಸಂಪಾದಕರು, ಕರ್ನಾಟಕ ಚರಿತ್ರೆ ಸಂಪುಟ-೭, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೨೮

೬೭. ಶಾಮರಾವ್, **ಮಾಡರ್ನ್ ಮೈಸೂರು,** ಮೈಸೂರು ಸರಕಾರ, ಮೈಸೂರು, ೧೯೩೭, ಪು.೪೧೨

೬೮. ಸೆಬಾಸ್ಟಿಯನ್ ಜೋಸೆಫ್, ***ರೈತರಲ್ಲಿ ಒಗ್ಗಟ್ಟು ಮತ್ತು ಪ್ರತಿಭಟನೆ*** ಮೈಸೂರು(ಕ್ರಿ.ಶ.೧೮೩೦-೩೧) ಸೆಬಾಸ್ಟಿಯನ್ ಜೋಸೆಫ್, ಸಂಪುಟ ಸಂಪಾದಕರು, ಕರ್ನಾಟಕ ಚರಿತ್ರೆ ಸಂಪುಟ-೬, ಪು.೯೭

೬೯. ಎಚ್. ಸ್ಟೋಕ್ಸ್, **ದಿ ರಿಪೋರ್ಟ್ ಎನ್ ದಿ ನಗರ ಡಿವಿಜನ್ ಆಫ್ ಮೈಸೂರು,** ೧೯-೫-೧೮೮೮, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಧಾನ ಸೌಧ, ಬೆಂಗಳೂರು, ಪ್ಯಾರ-೬

೭೦. ಕೆ. ಎನ್. ವೆಂಕಟಸುಬ್ಬಶಾಸ್ತ್ರೀ, **ದಿ ಮನ್ರೋ ಸಿಸ್ಟಂ ಆಫ್ ಬ್ರಿಟಿಶ್ ಸ್ಟೇಟ್ಸ್‌ಮೆನ್‌ಶಿಪ್ ಇನ್ ಇಂಡಿಯಾ,** ದಿ ಯುನಿವರ್‌ಸಿಟಿ ಆಫ್ ಮೈಸೂರ್, ಮೈಸೂರು, ೧೯೩೯, ಪು. XLVII

೭೧. ಎನ್. ವೆಂಕಟಸುಬ್ಬಶಾಸ್ತ್ರಿ, ಅಡ್ಮಿನಿಸ್ಟ್ರೇಷನ್ ಅಂಡರ್ ಸರ್ ಮಾರ್ಕ್‌ಕಬ್ಬನ್, ಲಂಡನ್, ೧೯೩೨, ಪು.೯೭

೭೨. ಸಿದ್ದಲಿಂಗಸ್ವಾಮಿ, ಅಗ್ರೇರಿಯನ್ ರಿಲೇಶನ್ ಇನ್ ಮೈಸೂರು, ೧೭೯೯-೧೮೮೧, ನೇಷನ್ ಬಿಲ್ಡರ್ಸ್, ಬೆಂಗಳೂರು, ೧೯೯೭, ಪು. ೬೭

೭೩. ಕ್ಯಾಪ್ಟನ್ ಚಾಲ್ಮರ್ಸ್, ರಿಪೋರ್ಟ್ ಆನ್ ಚಿತ್ರದುರ್ಗ ಡಿವಿಜನ್ ಆಫ್ ಮೈಸೂರು, ೧೮೪೨, ಪು. ೩೦ (ಕರ್ನಾಟಕ ಸ್ಟೇಟ್ ಆರ್ಕೈವ್ಸ್)

೭೪. ಎಲ್. ಬಿ. ಬೌರಿಂಗ್, ಹಿಸ್ಟರ್ನ್ ಎಕ್ಸ್‌ಫೀರಿಯನ್ಸ್, ಲಂಡನ್, ೧೮೭೨, ಪು. ೧೬೫

೭೫. ಪೇಪರ್ಸ್ ರಿಲೇಂಟಿಂಗ್ ಟು ದಿ ಸರ್ವೇ ಆ್ಯಂಡ್ ಸೆಟ್ಲ್‌ಮೆಂಟ್ ಆಫ್ ಚಿತ್ರದುರ್ಗ ಡಿಸ್ಟ್ರಿಕ್ಟ್, (ಕೆ.ಎಸ್.ಎ)

೭೬. ಬಿ. ಎನ್. ಸತ್ಯನ್(ಸಂ) ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್, ಪು.೨೬೨

೭೭. ಬಿ. ಎಲ್. ರೈಸ್, ಮೈಸೂರು ಗೆಜೆಟಿಯರ್, ಸಂಪುಟ-೨, ಪು.೪೭೯

೭೮. ಅದೇ, ಪು. ೪೭೦

೭೯. ಎಲ್. ವೇಮಾರೆಡ್ಡಿ, ಪಟೇಲರ ಮತ್ತು ಶ್ಯಾನುಭೋಗರ ಕರ್ತವ್ಯಗಳು, ಸರಕಾರಿ ಮುದ್ರಣಾಲಯ, ಬೆಂಗಳೂರು, ೧೯೩೬, ಪು.೨೩-೨೪,

೮೦. ಅದೇ, ೫೮-೫೯

೮೧. ಅದೇ, ೧೦೬-೧೦೭

೮೨. ಅದೇ, ೨೨೩

೮೩. ಅದೇ, ಪು.೨೩, ೮೭, ೯೫

೮೪. ಪಿ. ವಿ. ಕೃಷ್ಣಮೂರ್ತಿ(ಸಂ), ಸುಗಟೂರು ವೀರಶೈವ ಅರಸು ಮನೆತನ, ಪು. ೪೨

೮೫. ಗೌರ್ನಮೆಂಟ್ ಆಫ್ ಹಿಸ್ ಹೈನೆಸ್ ದಿ ಮಹಾರಾಜ ಆಫ್ ಮೈಸೂರು, ಪ್ರೊಸೀಡಿಂಗ್ಸ್ ಆಫ್ ದಿ ಮೈಸೂರು, ರೆಪ್ರಜಂಟೇಟಿವ್ ಅಸೆಂಬ್ಲಿ(ದಸರಾ ಸೆಶನ್) ಅಕ್ಟೋಬರ್-ನವೆಂಬರ್ ೧೯೨೮, ಮೈಸೂರು ಗೌರ್ನಮೆಂಟ್ ಪ್ರೆಸ್, ೧೯೨೯, ಪು. ೨೧೪

೮೬. ಎಲ್. ವೇಮಾರೆಡ್ಡಿ, ಪಟೇಲರ ಮತ್ತು ಶ್ಯಾನುಭೋಗರ ಕರ್ತವ್ಯಗಳು, ಸರಕಾರಿ ಮುದ್ರಣಾಲಯ, ಬೆಂಗಳೂರು, ೧೯೩೬, ಪು. ೭೦

೮೭. ಮೈಸೂರು ರೆವಿನ್ಯೂ ಮ್ಯಾನ್ಯುಯಲ್, ಸರಕಾರದ ಛಾಪಾಖಾನೆಯಲ್ಲಿ ಮುದ್ರಿಸಲ್ಪಟ್ಟಿತು. ೧೯೧೯, ಪು.೬೬, ೭೦

೮೮. ಮೈಸೂರು ರೆವಿನ್ಯೂ ಮ್ಯಾನ್ಯುಯಲ್, ಸರಕಾರದ ಛಾಪಾಖಾನೆಯಲ್ಲಿ ಮುದ್ರಿಸಲ್ಪಟ್ಟಿತು. ೧೯೧೯, ಪು. ೧೦೦

೮೯. ಕೆ.ನೀಲಕಂಠಶಾಸ್ತ್ರಿ, **ದಿ ಚೋಳಾಸ್** ಮದ್ರಾಸ್, ೧೯೫೫, ಪು. ೫೭೪-೮೨

೯೦. ಫ್ರಾನ್ಸಿಸ್ ಬುಕಾನನ್, **ಜರ್ನಿ ಫ್ರಂ ಮದ್ರಾಸ್ ಥ್ರೂ ದ ಕಂಟ್ರೀಸ್ ಆಫ್ ಮೈಸೂರು ಕೆನರಾ ಅಂಡ್ ಮಲಬಾರ್**, ಸಂಪುಟ-೩, ಪು. ೪೫೩-೫೪

೯೧. **ಮೈಸೂರು ರೆವಿನ್ಯೂ ಮ್ಯಾನ್ಯುಯಲ್**, ಪು. ೪೭೬

೯೨. **ಮಹೀಶೂರ ಶ್ರೀ ಮನ್ ಮಹಾರಾಜ ಚಾಮರಾಜೇಂದ್ರ ಒಡೆಯರ ಅವರ ವಂಶರತ್ನಾಕರ** ಪು. ೩೬೫-೩೬೬

೯೩. **ಮೈಸೂರು ಗೆಜೆಟ್**, ಜನವರಿ ೨೧, ೧೮೮೧, (ಕೆ.ಎಸ್.ಎ) ಪು.೯೬

೯೪. **ಮೈಸೂರು ಗೆಜೆಟ್**, ಫೆಬ್ರುವರಿ ೧೮೮೧, (ಕೆ.ಎಸ್.ಎ) ಪು.೧೨೬-೨೭

೯೫. ಬಿ. ಎಲ್.ರೈಸ್, **ಮೈಸೂರು ಗೆಜೆಟಿಯರ್**, ಸಂಪುಟ-೧, ಪು. ೬೧೯

೯೬. ಸಿ. ಹಯವದನ್ ರಾವ್, **ಮೈಸೂರು ಗೆಜೆಟಿಯರ್**, ಸಂಪುಟ-೫, ಪು. ೧೪೧೫, ೧೪೨೨, ೧೪೨೯, ೧೪೩೬, ೧೪೪೧, ೧೪೪೫, ೧೪೪೮, ೧೪೫೮,

೯೭. **ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್‌ಗನುಸಾರವಾಗಿ ರಚಿಸಿದ ನಿಬಂಧನೆಗಳು**, ಮೈಸೂರು ಸರಕಾರ, ಮೈಸೂರು, ೧೯೩೭, ಪು. ೩೪೭

೯೮. **ಮೈಸೂರು ರೆವಿನ್ಯೂ ಮ್ಯಾನ್ಯುಯಲ್**, ಪು. ೪೯೪

೯೯. **ಜಟ್ಟಿಂಗಿರಾಮೇಶ್ವರ ದೇವಾಲಯದ ತಸ್ತಿಕ್**, ಮೊಳಕಾಲ್ಮೂರು ತಾಲೂಕು, ರಾಮಸಾಗರ ಗ್ರಾಮ, ಚಿತ್ರದುರ್ಗ ಜಿಲ್ಲಾ ಕಛೇರಿ, ಚಿತ್ರದುರ್ಗ

೧೦೦. **ಇನಾಂ ದೇವಾಲಯುಗಳ ತಸ್ತಿಕ್ ನೋಂದಾಣಿ ಪುಸ್ತಕ**, ಧಾರ್ಮಿಕ ಮತ್ತು ದತ್ತಿ ಉಪ ವಿಭಾಗ, ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ.

೧೦೧. ಸಿ. ಹಯವದನರಾವ್, **ಮೈಸೂರು ಗೆಜೆಟಿಯರ್**, ಸಂಪುಟ-೫, ಪು. ೧೪೧೭, ೧೪೨೪, ೧೪೩೧, ೧೪೪೩, ೧೪೪೭, ೧೪೫೦, ೧೪೫೩, ೧೪೬೧

೧೦೨. ವಿ. ಆರ್. ತ್ಯಾಗರಾಜಅಯ್ಯರ್(ಸಂ), **ಭಾರತೀಯ ಜನಸಂಖ್ಯೆ ವರದಿ** ೧೯೧೧, ಸಂಪುಟ-೨, ಬೆಂಗಳೂರು, ೧೯೧೨, ಪು. ೨೭೫

೧೦೩. ಸಿ.ಹಯವದನರಾವ್, **ಮೈಸೂರು ಗೆಜೆಟಿಯರ್**, ಸಂಪುಟ ೫, ಪು. ೧೩೯೦

೧೦೪. ಅದೇ, ಪು. ೧೩೯೧

೧೦೫. ಅದೇ, ಪು. ೧೩೯೨

೧೦೬. ಎಂ. ಜಿ. ಈಶ್ವರಪ್ಪ, **ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫, ಪು. ೨೧೫

೧೦೭. ಸಿ.ಹಯವದನರಾವ್, **ಮೈಸೂರು ಗೆಜೆಟಿಯರ್**, ಸಂಪುಟ ೩, ಪು. ೧೦೬, ೧೧೩, ೧೧೮

೧೦೮. ಮೀರಾಸಾಬಿಹಳ್ಳಿ, ಶಿವಣ್ಣ, ***ಚಿತ್ರದುರ್ಗ ಜಿಲ್ಲೆಯ ಜಾನಪದ,*** ವೀರಣ್ಣ ದಂಡೆ (ಸಂ), ಜನಪದ ೯೨, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೫, ಪು. ೬೨-೬೩

೧೦೯. ಕೃಷ್ಣಮೂರ್ತಿ ಹನೂರು, **ಮ್ಯಾಸಬೇಡರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೬೮

೧೧೦. ಎಚ್. ಈ. ಬಸವರಾಜಪ್ಪ, ***ಮೈಸೂರು ಸಂಸ್ಥಾನದ ಒಂದು ಭೂ ದಾಖಲೆ,*** ಎಂ.ಜಿ.ನಾಗರಾಜ, ಪಿ. ವಿ. ಕೃಷ್ಣಮೂರ್ತಿ(ಸಂ), ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ಸಂಪುಟ-೧೫/೨೦೦೦, ಪು.೧೮೯

೧೧೧. **ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್‌ಗೆ ಅನುಸಾರವಾಗಿ ರಚಿಸಿದ ನಿಬಂಧನೆಗಳು,** ಪು. ೧೨೦

೧೧೨. **ಜಮೀನು ಹಕ್ಕುಗಳ ದಾಖಲಾತಿ ಸ್ಕೀಂ,** ಗೌರ್ನಮೆಂಟ್ ಆರ್ಡರ್, ನಂ.೪೫೪೫, ಡೆವೆಲಪ್‌ಮೆಂಟ್ ಸೆಕ್ರಟರಿಯೇಟ್, ನಂ.ಆರ್.೪೫೪೫, ಎಲ್.ಎಸ್.೩೮/೩೨/೫ ಆರ್ ೯-೧೦ನೇ ಮಾರ್ಚ್, ೧೯೩೩, ಹೊಸದುರ್ಗ ತಾಲೂಕು ಅಧಿಕಾರಿಗಳ ದಾಖಲಾತಿ ವಿಭಾಗ ಚಿತ್ರದುರ್ಗ ಜಿಲ್ಲೆ

೧೧೩. **ಮೈಸೂರು ಗೆಜೆಟ್** ಮಾರ್ಚ್ ೫, ೧೮೮೧

೧೧೪. **ಗೌರ್ನಮೆಂಟ್ ಆಫ್ ಹಿಸ್ ಹೈನೆಸ್ ದಿ ಮಹಾರಾಜ ಆಫ್ ಮೈಸೂರು, ಪ್ರೊಸೀಡಿಂಗ್ಸ್ ಆಫ್ ದಿ ಮೈಸೂರು, ರೆಪ್ರಜಂಟೇಟಿವ್ ಅಸೆಂಬ್ಲಿ**(ದಸರಾ ಸೆಶನ್) ಅಕ್ಟೋಬರ್-ನವೆಂಬರ್ ೧೯೨೮, ಮೈಸೂರು ಗೌರ್ನಮೆಂಟ್ ಪ್ರೆಸ್, ೧೯೩೧, ಪು. ೧೨೨೧

೧೧೫. ೧೯೦೫ನೇ **ಮಾರ್ಚ್ ೭, ಹುಕುಂ** ಆರ್ ೧೧೬೨೧, ಎಲ್.ಆರ್, ೫೨೩೦೫, ೧ನೇ ನಂಬರ್‌ನ ೪೦ನೇ ನಿಬಂಧನೆಯ(ಕೆ.ಎಸ್.ಎ).

೧೧೬. ೧೯೧೩ **ಜುಲೈ ೨೮ನೇ ಹುಕುಂ** ೯೬೮-೭೭, ಎಲ್.ಆರ್.೬೧೯, ೧೨-೨ನೇ ನಂಬರಿನ ಸರಕಾರಿ ಹುಕುಂ(ಕೆ.ಎಸ್.ಎ).

೧೧೭. ೧೯೨೫ನೇ ಆಗಸ್ಟ್ ೧೮ನೇ ಹುಕುಂ ಆರ್ ೮೬೯-೭೫, ಎಲ್ .ಆರ್ .೭೫-೨೫-೨ನೇ ನಂಬರಿನ ಸರಕಾರಿ ಹುಕುಂ(ಕೆ.ಎಸ್.ಎ)

೧೧೮. ೧೯೨೭ ಜುಲೈ ೯ನೇ ಹುಕುಂ ಆರ್ ೧೯೭-೨೧೩ ಎಲ್.ಆರ್.೯೨-೨೬, ೮ನೇ ನಂಬರಿನ ಸರಕಾರಿ ಹುಕುಂ(ಕೆ.ಎಸ್.ಎ)

೧೧೯. ೧೯೩೨ ಏಪ್ರಿಲ್ ೧೨ನೇ ಹುಕ್ಕುಂ ಆರ್ ೪೮೦೪ ಎಲ್.ಆರ್.೯೧-೨೯-೯ನೇ ಸಂಬರಿನ ಮತ್ತು ೧೯೩೩ನೇ ಮಾರ್ಚ್ ೧೪ನೇ ಹುಕುಂ(ಕೆ.ಎಸ್.ಎ)

೧೨೦. ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್‌ಗೆ ಅನುಸಾರವಾಗಿ ರಚಿಸಿದ ನಿಬಂಧನೆಗಳು, ಪು. ೧೨೫

೧೨೧. ಸಿ. ಬಿ. ದಾಮ್ಲೆ, ಲ್ಯಾಂಡ್ ರಿಫಾರಮ್ಸ್ ಅಂಡ್ ಚೇಂಜಿಂಗ್ ಅಗ್ರೇರಿಯನ್ ರಿಲೇಷನ್ಸ್, ನವದೆಹಲಿ, ೧೯೯೨, ಪು. ೬೦

೧೨೨. ಪಿ. ಬೋನ್ನಿ, *ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ*, ಎಂ.ಎಸ್.ಶಂಕರ್ (ಸಂ) ಯೋಜನಾ, ಮಾಸಿಕ ಪತ್ರಿಕೆ, ಅಕ್ಟೋಬರ್, ಬೆಂಗಳೂರು, ೧೯೮೫, ಪು. ೨೮-೨೯

೧೨೩. ಪಿ. ಸಿ. ಜೋಶಿ., **ಲ್ಯಾಂಡ್ ರಿಫಾರಮ್ಸ್ ಇನ್ ಇಂಡಿಯಾ, ಟ್ರೆಂಡ್ಸ್ ಅಂಡ್ ಪ್ರಾಸ್‌ಪೆಕ್ಟಿವ್ಸ್**, ಭಾಗ-೧, ನವದೆಹಲಿ, ೧೯೭೫, ಪು. ೭೫

೧೨೪. ಕ್ಷೀರಸಾಗರ, **ದಿಕ್ಕು ತಪ್ಪಿದ ಕರ್ನಾಟಕ ಭೂ ಸುಧಾರಣೆ**, ಕಾಕ್ಸ್‌ಟೌನ್, ಬೆಂಗಳೂರು, ೧೯೮೫, ಪು.೨೬-೨೭

೧೨೫. ಎಂ. ಎ. ಎಸ್. ರಾಜನ್, **ಕರ್ನಾಟಕದಲ್ಲಿ ಭೂ ಸುಧಾರಣೆ**, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೭, ಪು.೧೮-೨೨

೧೨೬. ಎನ್. ಎಸ್. ರಾಮಪ್ರಸಾದ್, **ಡಿ. ದೇವರಾಜ ಅರಸ್**, ಡಿ. ದೇವರಾಜ ಅರಸ್ ಸಂಶೋಧನಾ ಸಂಸ್ಥೆ, ಬೆಂಗಳೂರು, ೧೯೮೩, ಪು. ೬೦

೧೨೭. ಸೂರ್ಯನಾಥ ಯು. ಕಾಮತ್ (ಸಂ)., **ಕರ್ನಾಟಕ ರಾಜ್ಯ ಗೆಜೆಟಿಯರ್**, ಭಾಗ-೨, ಕರ್ನಾಟಕ ರಾಜ್ಯ ಸರಕಾರ ಬೆಂಗಳೂರು, ೧೯೮೫, ಪು. ೪೩೩

೧೨೮. **ಪ್ರಜಾವಾಣಿ** ದಿನಪತ್ರಿಕೆ, ಫೆಬ್ರವರಿ ೧೧, ೧೯೭೫

೧೨೯. **ಕರ್ನಾಟಕ ರಾಜ್ಯ ಭೂ ಮಂಜೂರಾತಿ ನಿಯಮಾವಳಿ, ೧೯೬೯ರ ಅಡಿಯಲ್ಲಿ ಜಿಲ್ಲೆಯಲ್ಲಿ ಭೂ ವಿತರಣೆಯಲ್ಲಿ ಸಾಧಿಸಿದ ಪ್ರಗತಿಯ ವಿವರಗಳನ್ನು ಒಳಗೊಂಡಿದೆ. ಚಿತ್ರದುರ್ಗ ಜಿಲ್ಲಾ ಭೂ ದಾಖಲಾತಿ ವಿಭಾಗ, ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ**

೧೩೦. **೧೯೯೧ರ ನಂತರ ಚಿತ್ರುದುರ್ಗ ಜಿಲ್ಲೆಯಲ್ಲಿ ಸಾಗುವಳಿಯಾದ ಭೂಹಿಡುವಳಿಗಳ ಪಟ್ಟಿ, ಚಿತ್ರದುರ್ಗ ಜಿಲ್ಲಾ** ಕಂದಾಯ ಅಧಿಕಾರಿಗಳ ವಿಭಾಗ, **ಚಿತ್ರದುರ್ಗ**

೧೩೧. **೧೯೯೦-೯೧ರ ಗಣತಿ ಪ್ರಕಾರ ಭೂಹಿಡುವಳಿಗಳು ಮತ್ತು ವಿಸ್ತೀರ್ಣ, ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ಇಲಾಖೆ, ಚಿತ್ರದುರ್ಗ**

೧೩೨. ಜಿ. ಎಸ್. ಕೀರ್ತಿನಾಥ್, **ಶಿವಮೊಗ್ಗ ಜಿಲ್ಲೆಯ ಸಮಾಜವಾದಿ ಹೋರಾಟಗಳು**, (ಅಪ್ರಕಟಿತ) ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬, ಪು.೪೦-೬೦

ಅಧ್ಯಾಯ ೩

ಭೂಹಿಡುವಳಿ ಸಮುದಾಯಗಳ ಸಮಾಜ

ಭೂಹಿಡುವಳಿ ಸಮುದಾಯಗಳ ಸಮಾಜ

ಚಿತ್ರದುರ್ಗ ಪ್ರದೇಶದಲ್ಲಿ ಹಲವು ಮಠಗಳಿವೆ ಅವುಗಳಲ್ಲಿ ಚಿತ್ರದುರ್ಗದ ಮುರುಘಮಠ, ಸಿರಿಗೆರೆಯ ತರಳಬಾಳು ಮಠಗಳು ಪ್ರಮುಖವಾಗಿದ್ದು, ಇಲ್ಲಿಯ ಧಾರ್ಮಿಕ, ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ಚಿತ್ರದುರ್ಗ ಮುರುಘಮಠವು ೧೭ನೇ ಶತಮಾನದ ಮಧ್ಯ ಅವಧಿಯಿಂದಲೂ ಹಲವು ರಾಜ ಮನೆತನಗಳ ಆಶ್ರಯ ಪಡೆದು ಭೂದಾನ ಪಡೆದಿದೆ. ಹಾಗಾಗಿ ಇಂದಿಗೂ ಅದು ಪ್ರಬಲ ಭೂ ಒಡೆತನ ಹೊಂದಿದೆ. ಮುರುಘಮಠವು ಸುಮಾರು ೨೦೦೦ಕ್ಕೂ ಅಧಿಕ ಶಾಖಾ ಮಠ ಗಳನ್ನು ಹೊಂದುವ ಮೂಲಕ ಸ್ಥಿರ ಮತ್ತು ಚರಾಸ್ತಿಯನ್ನು ಹೊಂದಿದೆ. ಈ ಮಠಗಳು ಅವುಗಳಿರುವ ಪ್ರದೇಶದ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಕೊಂಡಿವೆ. ಆದರೆ ಸಿರೆಗೆರೆಯ ಮಠವು ೧೨ನೇ ಶತಮಾನದಿಂದಲೂ ಅಸ್ತಿತ್ವದಲ್ಲಿದ್ದರೂ ಯಾವ ರಾಜಾಶ್ರಯವು ಅದಕ್ಕೆ ದೊರೆತಿಲ್ಲ. ಆದರೂ ಕೂಡ ೨೦ನೇ ಶತಮಾನದ ಆರಂಭದ ವೇಳೆಗೆ ಸಾಕಷ್ಟು ಭೂಹಿಡುವಳಿಗಳನ್ನು ಹೊಂದುವ ಮೂಲಕ ಈ ಪ್ರದೇಶದ ಪ್ರಭಾವಿ ಮಠವಾಗಿ ಬೆಳೆದಿದೆ. ಮಠಗಳ ಭೂಒಡೆತನವನ್ನು ಕುರಿತ ಅಧ್ಯಯನದಿಂದ ತಿಳಿಯುವ ಮುಖ್ಯಾಂಶವೆಂದರೆ, ಮಠಗಳು ಸಾಮಾನ್ಯವಾಗಿ ತಮ್ಮ ಸಮುದಾಯದ ಪ್ರಭಾವಿ ಭೂಮಾಲೀಕರೊಂದಿಗೆ ಗುರುತಿಸಿಕೊಂಡಿವೆ. ಹಾಗೆಯೇ ಅವರಿಂದ ಭೂಹಿಡುವಳಿಗಳನ್ನು ದಾನ ಪಡೆದಿವೆ. ಮಠಗಳು ತಮ್ಮ ಒಡೆತನಕ್ಕೆ ಸೇರಿದ ಭೂಹಿಡುವಳಿಗಳನ್ನು ತಾವೇ ಕೃಷಿಗೊಳಪಡಿಸಿವೆ. ಇಲ್ಲವೇ ತಮ್ಮ ಹಿತಾಸಕ್ತಿಯನ್ನು ಗಮನಿಸಬಹುದಾದ ಯಾವುದೇ ಸಮುದಾಯದವರಿಗಾದರೂ ಕೋರು-ಲಾವಣಿ ಇಲ್ಲವೇ ಗುತ್ತಿಗೆಗೆ ಕೊಟ್ಟಿರುತ್ತವೆ. ಸ್ವತಃ ಮಠವೇ ಉಳುಮೆ ಮಾಡುವ ಭೂಹಿಡುವಳಿಗಳನ್ನು ಈ ಮಠಗಳು ಪ್ರತಿನಿಧಿಸುವ ಲಿಂಗಾಯತ ಸಮುದಾಯದವರೇ ಕೆಲವೊಮ್ಮೆ ಯಾವುದೇ ರೀತಿಯಾದ ಸಂಭಾವನೆಯನ್ನು ಪಡೆಯದೇ ಸಾಗುವಳಿ ಮಾಡುತ್ತಿದ್ದರು. ಹಾಗೆಯೇ ಮಠಗಳು ಸಹ ಸ್ವತಃ ಎತ್ತುಗಳನ್ನು, ಕೃಷಿ ಸಾಮಗ್ರಿಗಳನ್ನು ಹೊಂದುವ ಮೂಲಕ ವ್ಯವಸ್ಥಿ ರೀತಿಯಲ್ಲಿಯೇ ತಮ್ಮ ಭೂಹಿಡುವಳಿಗಳನ್ನು ಸಾಗುವಳಿಗೊಳಪಡಿಸಿದ್ದವು. ಸಾಮಾನ್ಯವಾಗಿ ಮಠದ ಭೂಹಿಡುವಳಿಗಳ ಮೇಲ್ವಿಚಾರಣೆಯನ್ನು ಮಠವು ಪ್ರತಿನಿಧಿಸುವ ಸಮುದಾಯದವರೇ ನೋಡಿಕೊಳ್ಳು ತ್ತಿದ್ದರು. ಆದರೆ ಕೃಷಿ ಚಟುವಟಿಕೆಗಳಾದ ಭೂಮಿಯ ಉಳುಮೆ ಮಾಡುವ, ಬೆಳೆಯನ್ನು ಕೊಯ್ಯುವ,

ಚಕ್ಕಡಿ ನಡೆಸುವ, ಧಾನ್ಯವನ್ನು ರಾಶಿಮಾಡಿ ಮಠಕ್ಕೆ ತರುವ ಇತರೇ ಕೃಷಿಸಂಬಂಧಿ ಕೆಲಸಗಳನ್ನು ಕೆಳಹಂತದ ಸಮುದಾಯದ ಜನರಿಂದಲೇ ಮಾಡಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಉಳಿದಂತೆ ಮಠವು ಹೊಂದಿರುವ ಅಪಾರ ಭೂಹಿಡುವಳಿಗಳಿಂದ ಬರುವ ಆದಾಯವನ್ನು ತಮ್ಮ ಮಠಗಳ ಅಭಿವೃದ್ಧಿಗಾಗಿಯೇ ಬಳಸಿಕೊಂಡಿರುವುದನ್ನು ಗಮನಿಸಬಹುದು.

ಪ್ರಾಚೀನ ಕಾಲದಿಂದಲೂ ಭಾರತೀಯ ಸಮಾಜದಲ್ಲಿ ಭೂ ಒಡೆತನ ಹೊಂದಿದ ಸಮುದಾಯಗಳನ್ನು ಭೂ ಒಡೆತನ ಹೊಂದದ ಇತರ ಸಮುದಾಯಗಳು ಯಾವಾಗಲೂ ಅವಲಂಬಿಸಿಕೊಂಡಿರುವುದು ಕಂಡುಬರುತ್ತದೆ. ಇದಕ್ಕೆ ಚಿತ್ರದುರ್ಗ ಪ್ರದೇಶವು ಹೊರತಾಗಿರಲಿಲ್ಲ. ಚಿತ್ರದುರ್ಗ ಪ್ರದೇಶದಲ್ಲಿ ನಾಯಕ ಅರಸರ ಕಾಲದಿಂದಲೂ ಪ್ರಬಲ ಭೂಮಾಲೀಕರಿಗೆ ಅಲಕ್ಷಿತ ಸಮುದಾಯಗಳು ಬಿಟ್ಟಿಯಾಗಿ ದುಡಿಯುತ್ತಿದ್ದ ಸಂಗತಿಗಳು ಜನಪದ ಕಥನಗಳಲ್ಲಿ ಕಂಡುಬರುತ್ತದೆ. ಹಾಗೆಯೇ ಕುಶಲ ಕರ್ಮಿಗಳಾದ ಕುಂಬಾರರು, ಕಂಬಾರರು, ಬಡಿಗಿ, ಕ್ಷೌರಿಕ ಇನ್ನಿತರರು ಕೃಷಿ ಕುಟುಂಬಗಳ ಮೂಲಕ 'ಆಯ' ಪಡೆದು ಜೀವಿಸುತ್ತಿದ್ದರು. ಇದು ೨೦ನೇ ಶತಮಾನದ ಆರಂಭದಲ್ಲಿಯೂ ರೂಢಿಯಲ್ಲಿದ್ದ ವ್ಯವಸ್ಥೆಯಾಗಿತ್ತು. ಈ ವ್ಯವಸ್ಥೆಯು ಚಿತ್ರದುರ್ಗ ಪ್ರದೇಶದ ಪ್ರತಿಯೊಂದು ಗ್ರಾಮದಲ್ಲಿಯೂ ರೂಢಿಯಲ್ಲಿತ್ತು. ಹಾಗೆಯೇ ಬಟ್ಟೆ ನೇಯುವ, ಕಂಬಳಿ ನೇಕಾರರೂ ಕೂಡ ಕೃಷಿ ಕುಟುಂಬಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು.

ಈ ಅಧ್ಯಾಯವು ಚಿತ್ರದುರ್ಗ ಪ್ರದೇಶದ ಭೂಹಿಡುವಳಿ ಸಮುದಾಯಗಳ ಸಾಮಾಜಿಕ ಅಧ್ಯಯನ ವನ್ನು ಒಳಗೊಂಡಿದೆ. ಚಿತ್ರದುರ್ಗ ಪ್ರದೇಶದ ಸಮಾಜವನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಈ ಪ್ರದೇಶದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿರುವ ಚಿತ್ರದುರ್ಗದ ಮುರುಘಮಠ ಮತ್ತು ಸಿರಿಗೆರೆಯ ತರಳಬಾಳು ಮಠಗಳನ್ನು ಭೂಹಿಡುವಳಿಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ತನ್ಮೂಲಕ ೧೯ ಮತ್ತು ೨೦ನೇ ಶತಮಾನದ ಸಾಮಾಜಿಕ ವ್ಯವಸ್ಥೆಯಲ್ಲಿ ಮಠಗಳ ಸಾಮುದಾಯಿಕ ಸಂಬಂಧಗಳನ್ನು ಕುರಿತು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಇದೇ ಅಧ್ಯಾಯದ ಎರಡನೇ ಭಾಗದಲ್ಲಿ ಚಿತ್ರದುರ್ಗ ಪ್ರದೇಶದ ಸಮಾಜದಲ್ಲಿರುವ ವಿವಿಧ ಸಮುದಾಯಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಕೃಷಿ ಆಧಾರಿತ ಸಮಾಜದಲ್ಲಿ ಭೂ ಹಿಡುವಳಿ ಹೊಂದಿದ ಮತ್ತು ಹೊಂದದ ಸಮುದಾಯಗಳ ಸಂಕೀರ್ಣ ಸಂಬಂಧಗಳನ್ನು ಇಲ್ಲಿನ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಒಟ್ಟು ಅಧ್ಯಾಯದಲ್ಲಿ ಚಿತ್ರದುರ್ಗ ಪ್ರದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಭೂಹಿಡುವಳಿಯ ಪಾತ್ರವೇನೆಂಬುದನ್ನು ಗ್ರಹಿಸಲು ಯತ್ನಿಸಲಾಗಿದೆ.

ಭಾರತದ ಸಂಸ್ಕೃತಿಯಲ್ಲಿ ಅದರ ಪ್ರಾಚೀನತೆಯೊಂದಿಗೆ ಹಲವಾರು ಸಮೂಹಗಳ, ಪಂಥಗಳ, ಪಂಗಡಗಳ, ಮತಗಳ ಮಠಗಳು ಕಂಡುಬರುತ್ತವೆ. ಇವುಗಳ ಜೊತೆಗೆ ಜನಸಾಮಾನ್ಯರ ಜೀವನ ಕ್ರಮಗಳು ಹಾಸುಹೊಕ್ಕಾಗಿರುವುದನ್ನು ನಾವು ಕಾಣಬಹುದು. ಜೊತೆಗೆ ನೂರಾರು ವರ್ಷಗಳ ದಾಸ್ಯತೆಯ ಮತ್ತು ಇತ್ತೀಚಿನ ಆಧುನಿಕತೆಯ ಪ್ರಭಾವಗಳು, ಅದರ ಮೂಲ ಸ್ವರೂಪವನ್ನು ಬದಲಿಸಿದೆಯೇ ಎನ್ನುವಂತಹ ಪ್ರಶ್ನೆಯು ನಮ್ಮನ್ನು ಕಾಡದಿರದು. ಈಗ ನಾವು ನೋಡುತ್ತಿರುವ ಸಂಸ್ಕೃತಿಯಲ್ಲಿ ನಮ್ಮ ಸಾಂಸ್ಕೃತಿಕ ಸಂಪರ್ಕ, ಸಂಘರ್ಷ ಹಾಗೂ ಸಾಮರಸ್ಯತೆಗಳ ಫಲಶ್ರುತಿ ಇದೆ ಎನ್ನಬಹುದಾದರೂ, ಅದನ್ನು ಅರಿಯುವ ಕುತೂಹಲ ಮುಖ್ಯವಾದುದು. ಈ ದೃಷ್ಟಿಯಿಂದ ಕರ್ನಾಟಕದ ಚರಿತ್ರೆಯಲ್ಲಿ ಮಠಗಳ ಚಾರಿತ್ರಿಕ ಬೆಳವಣಿಗೆಯನ್ನು ಗುರುತಿಸುವ ಪ್ರಯತ್ನ ಬಹಳ ಕಡಿಮೆ. ಪ್ರಸ್ತುತ ಅಧ್ಯಯನವು ಚಿತ್ರದುರ್ಗದಲ್ಲಿ ಬಹಳ ಪ್ರಭಾವಿಯಾಗಿರುವ ವೀರಶೈವ ಮಠಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.[೧] ಈ ಮಠಗಳು ವೀರಶೈವ ಧರ್ಮದಲ್ಲಿ ಬರುವ ಎಲ್ಲ ಅನುಶ್ರೇಣಿಯ ಒಳಪಂಗಡಗಳನ್ನು ಪ್ರತಿನಿಧಿಸುವಂತೆಯೇ ಕಂಡುಬರುತ್ತದೆ.

ತರಳಬಾಳು ಮಠ

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲೂಕಿನಲ್ಲಿರುವ ಸಿರಿಗೆರೆಯ ತರಳಬಾಳು ಮಠವು ಕ್ರಿ. ಶ. ೧೨ನೇ ಶತಮಾನದಲ್ಲಿ ಸ್ಥಾಪನೆಯಾಯಿತು. ಫ.ಗು.ಹಳಕಟ್ಟಿಯವರು ತಮ್ಮ 'ಸಾರಾಂಗ ಮಠಾಧೀಶ್ವರ'ರರು ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ ಪೀಠದ ಪ್ರವರ್ತಕನಾದ ಮರುಳು ಸಿದ್ಧನ ಕಾಲ ಕ್ರಿ.ಶ. ೧೨ನೇ ಶತಮಾನವೆಂದು ತಿಳಿಸಿದ್ದಾರೆ.[೨] ಉಜ್ಜಯಿನಿ ಪ್ರದೇಶವು ಕ್ರಿ. ಶ. ೧೦ ರಿಂದ ೧೨ನೇ ಶತಮಾನದಲ್ಲಿ ನೊಳಂಬವಾಡಿ ಪ್ರದೇಶಕ್ಕೆ ಸೇರಿತ್ತು. ಇದರ ವಿಸ್ತಾರವು "ನೊಳಂಬವಾಡಿ ೩೨ ಸಾವಿರ"ದವರೆಗೆ (ಇದೊಂದು ಆಡಳಿತ ಘಟಕ) ವ್ಯಾಪಿಸಿತ್ತು. ಇಲ್ಲಿ ನೊಳಂಬ ಪಲ್ಲವರು ರಾಜರಾಗಿ ಆಳುತ್ತಿದ್ದರು. ನೊಳಂಬವಾಡಿ ೩೨ ಸಾವಿರ ಪ್ರದೇಶವು ಇಂದಿನ ಚಿತ್ರದುರ್ಗ, ಬಳ್ಳಾರಿ, ಅನಂತಪುರ ಮತ್ತು ತುಮಕೂರು ಜಿಲ್ಲೆಯ ಬಹು ಭಾಗಗಳನ್ನು ಒಳಗೊಂಡಿತ್ತು.[೩] ೧೯೦೬ರಲ್ಲಿ ಪ್ರವಾಸ ಮಾಡಿದ ಎಡ್ಗರ್ ಥರ್ಸ್ಟನ್ ಉಜ್ಜಯಿನಿಯು ಲಿಂಗಾಯತರ ಪ್ರಮುಖ ಧಾರ್ಮಿಕ ಪ್ರದೇಶವೆಂದಿದ್ದಾನೆ.[೪]

ದೇವಕವಿ ಕವಿ ತನ್ನ 'ಮರುಳಸಿದ್ದನ ಕಾವ್ಯ' ಎಂಬ ಕೃತಿಯಲ್ಲಿ ಮರುಳಸಿದ್ಧನ ಕಥೆಯನ್ನು ಹೀಗೆ ಹೇಳಿದ್ದಾನೆ.[೫]

> "ಪರಶಿವನ ಆಜ್ಞೆಯ ಮೇರೆಗೆ ಚರಮೂರ್ತಿಯೊಬ್ಬನು ಕಗ್ಗಲ್ಲಪುರದ ಮಾದಿಗ ಕೂಚಿಮಾರನಿಗೆ ಮಗನಾಗಿ ಹುಟ್ಟಿದನು, ಅವನ ತಂದೆ ಸತ್ತನಂತರ ಕೂಚಿಮಾರನ ಒಡೆಯನಾದ ಬಾಚಿಗೌಡನು ಆ ಮಗುವನ್ನು ಕಂಡು ಅದನ್ನು ತಂದು ತನ್ನ ಮಡದಿಯಾದ ಮಲ್ಲಮ್ಮನಿಗಿತ್ತನು. ಅವರು ಸಾಕಿ ಬೆಳೆಸಿದ ಮಗುವೇ ಮರುಳಸಿದ್ಧ. ಅವನು ತನ್ನ ಚಿಕ್ಕವಯಸ್ಸಿನಲ್ಲಿ ದನಗಳನ್ನು ಕಾಯುವ ಕಾಯಕದಲ್ಲಿದ್ದು, ಆಗಲೇ ಕರುಗಳ ಪವಾಡ, ಕರುಗಾಹಿಗಳ ಪವಾಡ, ಎಳ್ಳು ಪವಾಡ ಮೊದಲಾದ ಪವಾಡಗಳನ್ನು ಮೆರೆದಿದ್ದನು. ಒಮ್ಮೆ ಆ ಹಳ್ಳಿಯವರು ಬೆಳೆ ಚೆನ್ನಾಗಿ ಬರಲೆಂದು ಬಾಚಿಗೌಡನ ಒಪ್ಪಿಗೆಯಿಂದ ಮಾರಿ ಹಬ್ಬವನ್ನು ಆಚರಿಸಲು, ಮರುಳನು ಅದನ್ನು ಒಪ್ಪದೆ ಇನ್ನು ಆ ಮನೆಯಲ್ಲಿ ಇರಬಾರದೆಂದು ಕಂಥೆಯನ್ನು ಹೊದ್ದು ಅಲ್ಲಿಂದ ಹೊರಟು ಬೇತೂರಿಗೆ ಹೋಗಿ, ಅಲ್ಲಿ ಬ್ರಾಹ್ಮಣರ ಯಾಗವನ್ನು ಕೆಡಿಸಿದನು. ನಂತರ ಅವರು ನೊಣ್ಣಂಬ ಚಕ್ರೇಶ್ವರರಲ್ಲಿ ದೂರಿಡುತ್ತಾರೆ. ಆ ರಾಜನು ಅವನನ್ನು ಮದ್ದಾನೆಯ ಮುಂದೆ ನೂಕಿಸಲು ಆ ಆನೆಯನ್ನು ನಿಗ್ರಹಿಸಿ ಮುನ್ನಡೆದು ಬಲ್ಲಾಳನೃಪನ ನೆಲೆವೀಡಾದ ಹಳೇಬೀಡು ಎಂಬ ಪುರಕ್ಕೆ ಹೋದನು. ಅಲ್ಲಿ ಮಳೆಯ ಪವಾಡವನ್ನು ಮೆರೆಸಿ ಅಲ್ಲಿಂದ ಮುಂದೆ ಹೋಗಿ ಚಿನ್ಮನಗಿರಿ ಎಂಬಲ್ಲಿಗೆ ಬಂದನು.[೬] ಅಲ್ಲಿ ತನ್ನ ಗುರುವಾದ ರೇವಣಸಿದ್ಧನನ್ನು ಕಂಡನು. ಅನಂತರ ಮರುಳಸಿದ್ಧನು. ತೆಲಗು ಬಾಳಿಗೆ ಹೋಗಿ ಒಕ್ಕಲಿಗ ಸಿದ್ಧನನ್ನು ಕರುಣಿಸಿ, ಕೊನೆಗೆ ಕಗ್ಗಲ್ಲಪುರದ[೭] ಹತ್ತಿರದ ಉಜ್ಜಯಿನಿ ಎಂಬ ಕೇತನಹಳ್ಳಿಯ ಕಾಡೆ ತನಗೆ ಹಿತಕರವೆಂದು ಬಗೆದು ಅಲ್ಲಿಯೇ ಸಮಾಧಿ ಹೊಂದಿದನು"ಎಂಬ ವಿವರಗಳು ದೊರೆಯುತ್ತವೆ.[೮]

ಮರುಳಸಿದ್ಧರಿಂದ ಸ್ಥಾಪಿಸಲ್ಪಟ್ಟಿರುವ ತರಳಬಾಳುಮಠದ ಗುರು ಪರಂಪರೆಯು ಕ್ರಿ. ಶ. ೧೨ನೇ ಶತಮಾನದ ಅಂತ್ಯದಿಂದ ೨೦ನೇ ಶತಮಾನದಲ್ಲಿಯೂ ಉಳಿದುಕೊಂಡು ಬಂದಿದೆ. ಈ ಬಗ್ಗೆ 'ತರಳಬಾಳು ಪಟ್ಟವಲ್ಲರಿ' ಎನ್ನುವ ದಾಖಲೆಯು ವಿವರವಾಗಿ ತಿಳಿಸುತ್ತದೆ. ವಿಶ್ವಬಂಧು ಮರುಳಸಿದ್ದನ ಬಳಿ ವಿಡಿದು ಬೆಳೆದುಬಂದ ತರಳಬಾಳು ಗುರು ಪರಂಪರೆಯನ್ನು ಕುರಿತು, ಶಿವಕುಮಾರ ಶಿವಾಚಾರ್ಯ

ಸ್ವಾಮಿಗಳು, ಹೆಚ್. ದೇವೀರಪ್ಪ, ಮಹದೇವ ಬಣಕಾರ ಮತ್ತು ಬಿ. ರಾಜಶೇಖರಪ್ಪ ಮುಂತಾದವರು ಚರ್ಚಿಸಿದ್ದಾರೆ.[೯]

ತರಳಬಾಳು ಮಠ ಮತ್ತು ಜರಿಮಲೆನಾಯಕರು

ಜರಿಮಲೆ ಪಾಳೆಗಾರರು ತರಳಬಾಳು ಮಠದ ಆಶ್ರಿತ ನಾಯಕರಾಗಿದ್ದರೆಂದು ಮಠದ ದಾಖಲೆಯಲ್ಲಿದೆ. ತರಳಬಾಳು ಮಠವು ಉಜ್ಜಯಿನಿಯಿಂದ ಸಿರಿಗೆರೆಗೆ ಬರಲು ಕಾರಣ ಹರಪನಹಳ್ಳಿಯ ಪಾಳೆಗಾರರ ವಿರೋಧವೇ ಮುಖ್ಯ ಕಾರಣವಾಗಿತ್ತು. ಕ್ರಿ. ಶ. ೧೭೪೨ರಲ್ಲಿ ಹರಪನಹಳ್ಳಿ ಸೋಮಶೇಖರ ನಾಯಕನು ಜರಿಮಲೆಯ ಮೇಲೆ ದಂಡೆತ್ತಿ ಹೋಗಿ ಉಜ್ಜಯಿನಿಯನ್ನು ಅದರ ಸುತ್ತಮುತ್ತಲ ಹಳ್ಳಿಗಳನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡಿದ್ದನು. ಜರಿಮಲೆ ಪಾಳೆಯಗಾರರು ಒಂದು ಕಡೆ ಚಿತ್ರದುರ್ಗ ಪಾಳೆಯಗಾರರು ಮತ್ತೊಂದು ಕಡೆ ಹರಪನಹಳ್ಳಿಯ ಪಾಳೆಯಗಾರರು ನಡೆಸುತ್ತಿದ್ದ ಆಕ್ರಮಣದ ಪರಿಣಾಮವಾಗಿ ತನ್ನ ಕೋಟೆಯ ಸುತ್ತಮುತ್ತಲ ಇರುವ ಕೆಲವು ಹಳ್ಳಿಗಳನ್ನು ಉಳಿದು ಎಲ್ಲ ರಾಜ್ಯವನ್ನು ಕಳೆದುಕೊಂಡಿದ್ದರು. ಉಜ್ಜಯಿನಿ ಪೀಠದ ಮಠಾಧೀಶ್ವರರಾಗಿದ್ದ ಜಂಬಪ್ಪ ಒಡೆಯರು ಜರಿಮಲೆ ಪಾಳೆಯಗಾರನ ಮೇಲೆ ಅಭಿಮಾನವನ್ನು ಉಳ್ಳವರಾಗಿದ್ದರು. ಆದ್ದರಿಂದ ಹರಪನಹಳ್ಳಿಯ ಪಾಳೆಯಗಾರರು ಸಣ್ಣಸಾರಂಗೇಶ್ವರರ ಶಿಷ್ಯರಿಗೆ ಉಜ್ಜಯಿನಿ ಪೀಠದ ಅಧಿಕಾರವನ್ನು ವಹಿಸಿಕೊಟ್ಟರು.[೧೦]

ಈ ಸಮಾಚಾರ ಸಿರಿಗೆರೆಯಲ್ಲಿದ್ದ ಜಂಬಪ್ಪ ಒಡೆಯರಿಗೆ ಮುಟ್ಟಿತು. ನಾಯಕನ ವಿರೋಧವನ್ನು ಕಟ್ಟಿಕೊಳ್ಳುವುದು ಸರಿಯಲ್ಲ ಎಂದು ಸಿರಿಗೆರೆಯನ್ನು ತಮ್ಮ ಆಧ್ಯಾತ್ಮಿಕ ಕೇಂದ್ರವನ್ನಾಗಿ ಮಾಡಿಕೊಂಡು ಅಲ್ಲಿಯೇ ನೆಲೆಸಿದರು. ನಂತರ ಸಿರಿಗೆರೆಯಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಆ ಕಾಲದಲ್ಲಿ ಪ್ರತಿಯೊಂದು ಪೀಠದಲ್ಲಿ ಸ್ಥಿರಪಟ್ಟಸ್ಥರು - ಚರಪಟ್ಟಸ್ಥರು ಎಂಬ ಇಬ್ಬರು ಸ್ವಾಮಿಗಳಿರುತ್ತಿದ್ದರು. ಉಜ್ಜಯಿನಿಯಲ್ಲಿ ಜಂಬಪ್ಪ ಒಡೆಯರೊಂದಿಗೆ ಚರಪಟ್ಟಾಧಿಪತಿಗಳಾಗಿದ್ದ ಸಪ್ಪೆಸಿದ್ಧಲಿಂಗ ದೇವರು ತಿಪಟೂರು ತಾಲೂಕು ಪಾಲ್ಕುರಿಕೆಯಲ್ಲಿ ತಮ್ಮ ಪರಂಪರೆಯನ್ನು ಬೆಳೆಸಿದರು. ಇವರು ಕೆಲವು ಕಾಲ ಪಾಲ್ಕುರಿಕೆಯಲ್ಲಿದ್ದು, ನಂತರ ಇವರ ವಂಶಿಕರು ಬೇಲೂರು ತಾಲೂಕು ಯಲಹಂಕಕ್ಕೆ ಬರುತ್ತಾರೆ. ಅಲ್ಲಿ ನೆಲಸಿದ ಮೊದಲನೆಯವರು ಮಾಗಡಿಪಟ್ಟದ ದೇವರು, ಹನಿಕೆ ನಂಜುಂಡಸ್ವಾಮಿಗಳು, ಅನಂತರ ಭೈರವನಾಯಕನಹಳ್ಳಿಯ ಶಿವನಂಜುಂಡೇಶ್ವರ ಸ್ವಾಮಿಗಳು. ಇವರು ೧೯೨೪ರಲ್ಲಿ

ಕಾಲವಾದರು. ನಂತರ ಚೆನ್ನವೃಷಭದೇಶಿಕೇಂದ್ರ ಸ್ವಾಮಿಗಳವರು ಮಠದ ಅಧಿಕಾರದಲ್ಲಿದ್ದು ೧೯೩೯ರಲ್ಲಿ ಕಾಲವಾದರು. ೧೯೩೩ರಲ್ಲಿ ಶಿವಕುಮಾರ ಸ್ವಾಮಿಗಳು ಯಲಹಂಕ ಮಠಕ್ಕೆ ಚರ ಪಟ್ಟಾಧಿಕಾರಿಗಳಾಗಿದ್ದರು. ಉಜ್ಜಯಿನಿಯನ್ನು ಬಿಟ್ಟು ನಂತರ ಪಾಲ್ಕುರಿಕೆ ಯಲಹಂಕ ಮಠಗಳ ಅನುಯಾಯಿಗಳಾಗಿ ಒಂದು ಶಿಷ್ಯವರ್ಗವು ಸಿರಿಗೆರೆ ಮಠದ ಅನುಯಾಯಿಗಳಾಗಿ, ಮತ್ತೊಂದು ಶಿಷ್ಯವರ್ಗವು ಹೀಗೆ ಎರಡು ಗುಂಪುಗಳಾಗಿದ್ದವು. ೧೯೩೭ರಲ್ಲಿ ಎರಡೂ ಮಠಗಳ ಭಕ್ತರನ್ನು ಕಡೂರು ತಾಲೂಕು ಹೊಸಹಳ್ಳಿ ಗ್ರಾಮದಲ್ಲಿ ಒಂದೇ ಮಠದ ಅಧೀನಕ್ಕೆ ಬರಬೇಕೆಂದು ನಿರ್ಧರಿಸಲಾಯಿತು. ನಂತರ ಒಂದೇ ಮಠದ ಅಧೀನಕ್ಕೆ ಸಾಣೆಹಳ್ಳಿಯ ಶ್ರೀಮಠ, ಯಲಹಂಕಮಠ, ಹಳಕಟ್ಟಿಮಠ ಎಲ್ಲಾ ಶಾಖಾ ಮಠಗಳು ಸೇರಿಕೊಂಡು ತರಳಬಾಳು ಮಠವೇ ಕೇಂದ್ರ ಮಠವಾಯಿತು. ೧೯೫೦ ಮೇ ೨ರಂದು ತರಳಬಾಳು ಮಠದ ಪಟ್ಟಾಧ್ಯಕ್ಷರಾಗಿ ಬಂದ ಶ್ರೀ ಶಿವಕುಮಾರಶಿವಾಚಾರ್ಯ ಸ್ವಾಮಿಗಳು ಸಿರಿಗೆರೆಯನ್ನು ಧಾರ್ಮಿಕ ಸಾಂಸ್ಕೃತಿಕ ಮತ್ತು ವಿದ್ಯಾಕೇಂದ್ರವನ್ನಾಗಿ ಪರಿವರ್ತಿಸಿದರು.[೧೧]

ಚಿತ್ರದುರ್ಗದ ಮುರುಘಮಠ

ಚಿತ್ರದುರ್ಗದ ಮುರುಘಮಠವು ಕ್ರಿ. ಶ. ೧೭ನೇ ಶತಮಾನದ ಅಂತ್ಯಭಾಗದಲ್ಲಿ ಸ್ಥಾಪನೆಯಾಯಿತು. ಚಿತ್ರದುರ್ಗದ ಬೃಹನ್ಮಠದ ಸ್ಥಾಪಕರಾದ ಮುರುಘ ಶಾಂತವೀರಸ್ವಾಮಿಗಳ ಆಶೀರ್ವಾದದೊಂದಿಗೆ ಚಿತ್ರದುರ್ಗದ ಭರಮಣ್ಣನಾಯಕನು ಅರಸನಾದನೆಂದು ತಿಳಿಯುತ್ತದೆ. ಕ್ರಿ. ಶ. ೧೬೮೯ರಲ್ಲಿ ಅವನು ಪಟ್ಟಕ್ಕೆ ಬಂದ ನಂತರ ಅವನ ಅರಮನೆಯ ಹತ್ತಿರವೇ ಇದ್ದ ಚಂಪಕಸಿದ್ಧೇಶನ ದೇವಾಲಯದ ಪಕ್ಕದಲ್ಲೇ ಮುನ್ನೂರು ಅರವತ್ತು ಅಂಕಣ ವಿಸ್ತಾರವಾದ ದೊಡ್ಡ ಮಠವನ್ನು ಕಟ್ಟಿಸಿಕೊಟ್ಟಿದ್ದನು. ನಂತರ ಮುರುಘ ಶಾಂತವೀರರನ್ನು ಕರೆತಂದನು. ಭರಮಣ್ಣನಾಯಕನ ಭಕ್ತಿ ಗೌರವದಿಂದ ಅವರು ಇಲ್ಲಿಯೇ ನೆಲೆಸಿದರು. ಅಂದಿನಿಂದ ಚಿನ್ಮೂಲಾದ್ರಿ ಬೃಹನ್ಮಠವು ಮುರುಘರಾಜೇಂದ್ರಸ್ವಾಮಿಗಳಿಂದ ಚಿತ್ರದುರ್ಗದಲ್ಲಿ ಸ್ಥಾಪನೆಯಾಯಿತು. ಇವರು ಚಿತ್ರದುರ್ಗ ನಾಯಕ ಅರಸರಿಗೆ ರಾಜಗುರುಗಳಾಗಿದ್ದರು. ಈ ಮಠದ ಗುರುಪರಂಪರೆಯು ಇಂದಿಗೂ ಶ್ರೀ ಶಿವಮೂರ್ತಿಮುರುಘರಾಜೇಂದ್ರ ಸ್ವಾಮಿಗಳೊಂದಿಗೆ ಮುಂದುವರಿದುಕೊಂಡು ಬಂದಿದೆ.[೧೨]

ಚಿತ್ರದುರ್ಗದ ಮುರುಘಮಠವು ದಕ್ಷಿಣ ಭಾರತದ ಹಲವು ಭಾಗದಲ್ಲಿ ತನ್ನ ಶಾಖಾ ಮಠಗಳನ್ನು ಹೊಂದಿದೆ.[೧೩] ಅವುಗಳಲ್ಲಿ ಮುಖ್ಯವಾದವುಗಳು ಧಾರವಾಡದ ಮುರುಘಮಠ, ಬೆಂಗಳೂರಿನ

ಸರ್ಪಭೂಷಣ ಮಠ, ಬೆಟ್ಟದಪುರದ ವಿರಕ್ತಮಠ, ಸೋಮವಾರಪೇಟೆಯ ಮುರುಘಮಠ, ಬ್ಯಾಡಗಿ ವಿರಕ್ತಮಠ, ಅಥಣಿ ಗಚ್ಚಿನಮಠ, ಹಾವೇರಿಯ ಮುರುಘಮಠ, ಶಿರಸಿಯ ರುದ್ರದೇವರಮಠ, ತಮಿಳುನಾಡಿನ ಕುಂಭಕೋಣಮಠ, ಕೊಲ್ಹಾಪುರದ ಮುರುಘಮಠ ಈ ಶಾಖಾ ಮಠಗಳನ್ನೆಲ್ಲ ಜನರು ವಿರಕ್ತಮಠ, ಮುರಿಗೆ ಮಠಗಳೆಂದು ಕರೆಯುತ್ತಾರೆ. ಮುರುಘಮಠಕ್ಕೆ ಸುಮಾರು ೨೦೦ದಷ್ಟು ಶಾಖಾ ಮಠಗಳಿವೆ. ಈ ಎಲ್ಲಾ ಶಾಖಾ ಮಠಗಳು ಸ್ವಂತ ಭೂಹಿಡುವಳಿಗಳನ್ನು ಸ್ಥಿರ, ಚರ, ಆಸ್ತಿಯನ್ನು ಆಯಾ ಭಾಗದ ಭಕ್ತರಿಂದ ರಾಜರುಗಳಿಂದ ಪಡೆದಿವೆ. ಲಿಂಗಾಯತರಷ್ಟೇ ಅಲ್ಲದೆ ಬೇರೆ ಸಮುದಾಯದ ಜನರು, ಮುಸ್ಲಿಂಧರ್ಮದ ನವಾಬರೂ ದತ್ತಿ ನೀಡಿದ್ದಾರೆ. ಹಿರೇಮಲ್ಲೂರು ಈಶ್ವರನ್ ಅವರು ಗಮನಿಸಿರುವಂತೆ "ಚಿತ್ರದುರ್ಗ ಮುರುಘಮಠವು ಸ್ಥಾವರ ಹಾಗೂ ಚರಸಂಪತ್ತಿಗೆ ಹೆಸರಾದ ವಿರಕ್ತಮಠ. ಆ ಮಠದ ಒಡೆತನಕ್ಕೆ ಸೇರಿದ ಭೂಮಿ ಚಿತ್ರದುರ್ಗ ಜಿಲ್ಲೆಯ ಹೊರಗೂ, ಒಳಗೂ ತುಂಬಿದೆ. ಕೊಡಗು ಜಿಲ್ಲೆಯ ಬೇಲೂರು, ಅಬ್ಬಿ, ಜಂಬೂರು ಹಳ್ಳಿಗಳಲ್ಲಿಯೇ ದಾನವಾಗಿ ಕೊಟ್ಟ ಮಠದ ಆಸ್ತಿ ೬೦೦ ಎಕರೆಗೂ ಮೀರುತ್ತದೆ" ಎಂದಿದ್ದಾರೆ.[೪] ಈ ಮಠದ ಇಂಥ ಕೆಲವು ಉದಾಹರಣೆಗಳಲ್ಲಿ ಮುರುಘಮಠದ ಆರ್ಥಿಕ ಭದ್ರತೆಗೆ ದಾನ ನೀಡಿದ ಹಲವು ಸಂಸ್ಥಾನಗಳ ರಾಜರುಗಳೆಂದರೆ ಚಿತ್ರದುರ್ಗದ ನಾಯಕ ಅರಸರು, ಕೆಳದಿ, ಕೊಡಗು, ಸೋದೆ, ಸವಣೂರು ನವಾಬರು, ಶಿರಸಂಗಿ, ಮೈಸೂರು ಒಡೆಯರು, ಉಮ್ಮತ್ತೂರು, ಪುಂಗನೂರು, ಕೊಲ್ಹಾಪುರ ಮತ್ತು ಇನ್ನು ಮುಂತಾದ ಸಂಸ್ಥಾನಗಳ ಅರಸರು ಚಿತ್ರದುರ್ಗದ ಮುರುಘಮಠಕ್ಕೆ ಅನೇಕ ವಿಧದ ದಾನದತ್ತಿ ಗಳನ್ನು ನೀಡಿದ್ದಾರೆ. ಅವುಗಳಲ್ಲಿ ಕೆಲವು ರಾಜವಂಶಗಳ ಸಂಬಂಧ ಮಠದೊಂದಿಗೆ ಇದ್ದುದನ್ನು ಇಲ್ಲಿ ಚರ್ಚಿಸಲಾಗಿದೆ.

ಚಿತ್ರದುರ್ಗದ ಮುರುಘಮಠ ಮತ್ತು ಕೆಳದಿ ಅರಸರು

ಚಿತ್ರದುರ್ಗದ ಮುರುಘಮಠಕ್ಕೂ ಮತ್ತು ಕೆಳದಿ ಅರಸರಿಗೂ ಅವರ ಆರಂಭದ ಆಡಳಿತಾವಧಿ ಯಿಂದಲೂ ಮಠದೊಂದಿಗೆ ನಿಕಟವಾದ ಸಂಬಂಧವಿತ್ತು. ಆನಂದಪುರದ ಮುರುಘಮಠದ ಒಂದು ತಾಮ್ರಶಾಸನವು ತಿಳಿಸುವಂತೆ ಕೆಳದಿ ಅರಸನಾದ ಸೋಮಶೇಖರ ನಾಯಕನು (೧೭೧೪-೩೯) ಚಿತ್ರದುರ್ಗದ ಮುರುಘ ಮಠದ ಪ್ರತಿನಿಧಿ ಮಠವಾದ ತುಂಗಭದ್ರಾ ನದಿಯ ಮಧ್ಯ ಸ್ಥಾನದಲ್ಲಿರುವ ಚಿಕ್ಕನಕಲ್ಮಠಕ್ಕೆ ನಡೆದುಕೊಂಡಿದ್ದನು. ಅದೇ ರೀತಿ ಕ್ರಿ. ಶ. ೧೭೪೦ರಲ್ಲಿ ಬಸವಪ್ಪ ನಾಯಕನು ತನ್ನ ದೊಡ್ಡಪ್ಪ ಸೋಮಶೇಖರ ನಾಯಕನ ತಮ್ಮನ ಪತ್ನಿ ನೀಲಮ್ಮಾಜಿ ಅಮ್ಮನವರ ಹೆಸರಿನಲ್ಲಿ

ಮುರುಘ ಸ್ವಾಮಿಯವರ ಸಂಪ್ರದಾಯದ ಶಾಂತವೀರ ಸ್ವಾಮಿಗಳಿಗೆ ವಿರಕ್ತಮಠವನ್ನು ಕಟ್ಟಿಸಿ ಕೊಟ್ಟಿದ್ದನು.[೧೫]

ಮುರುಘಮಠ ಮತ್ತು ಹಾಗಲವಾಡಿ ಪಾಳೆಯಗಾರರು

ಮುರುಘ ಮಠದಲ್ಲಿರುವ ಒಂದು ದೊಡ್ಡ ಡಮರುಗದ ಮೇಲೆ ಬರೆದಿರುವ ಬರಹವು ಆ ಡಮರುಗವನ್ನು ಹಾಗಲವಾಡಿ ಅರಸು ಮುದ್ದುವೀರಪ್ಪ ನಾಯಕನ ಭಕ್ತಿಯ ಕಾಣಿಕೆ ಎಂದು ಹೇಳುತ್ತದೆ. ಈ ಮುದ್ದುವೀರಪ್ಪ ಕ್ರಿ.ಶ. ೧೭೪೦-೫೩ರಲ್ಲಿ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹಾಗಲವಾಡಿಯಲ್ಲಿ ಆಳಿದ ಪಾಳೆಯಗಾರರಲ್ಲಿ ಹತ್ತನೆಯವನು. ಹೀಗಾಗಿ ಚಿತ್ರದುರ್ಗಮಠವು ಹಾಗಲವಾಡಿ ಪಾಳೆಗಾರರೊಂದಿಗೆ ಗೌರವದ ಸಂಬಂಧವನ್ನು ಇಟ್ಟುಕೊಂಡಿದ್ದು ಸ್ಪಷ್ಟವಾಗಿ ತಿಳಿಯುತ್ತದೆ.[೧೬]

ಮುರುಘಮಠ ಮತ್ತು ಕೊಡಗಿನ ಅರಸರು

ಇಂದಿನ ಕೊಡಗು ಜಿಲ್ಲೆಯ ಭೂಪ್ರದೇಶವನ್ನು ಕೊಡಗಿನ ಹಾಲೇರಿ ಅರಸರು ಕ್ರಿ. ಶ. ೧೬೩೩ರಿಂದ ೧೮೩೪ರವರೆಗೆ ಆಳ್ವಿಕೆ ನಡೆಸಿದರು. ಚಿತ್ರದುರ್ಗದ ಮುರುಘ ಸಂಪ್ರದಾಯದ ಮಠಗಳಿಗೂ ಕೊಡಗಿನ ರಾಜಮನೆತನಕ್ಕೂ ಇರುವ ಸಂಬಂಧವನ್ನು ಅಬ್ಬಿ ಮಠವು ತಿಳಿಸಿಕೊಡುತ್ತದೆ. ಕ್ರಿ. ಶ. ೧೭೦೮ರ ಅಬ್ಬಿ ಮಠ ಶಾಸನದಲ್ಲಿ ಈ ಮಠಕ್ಕೆ ನೀಡಿದ ಗ್ರಾಮದಾನದ ಬಗ್ಗೆ ವಿವರವಿದೆ. ಚಿತ್ರದುರ್ಗ ಬೃಹನ್ಮಠದ ಆಡಳಿತದಲ್ಲಿರುವ ಬೇಲೂರು ಮಠದ ನಿರ್ವಹಣೆಯಲ್ಲಿ ಇಂದು ಈ ಅಬ್ಬಿ ಮಠವಿದೆ. ಅಬ್ಬಿಮಠಕ್ಕೆ ನೀಡಿರುವ ದಾನ ಶಾಸನವು ಶಾಲಿವಾಹನ ಶಕವರ್ಷ ೧೬೫೦ನೇ ಅಕೀಲ ಸಂವತ್ಸರದ ಕಾರ್ತೀಕ ಶುದ್ಧ ಬುಧುವಾರದಂದು ಹಿರೇ ಅಜ್ಜಯವನರಾದ ದೊಡ್ಡ ಈರಪ್ಪ ಒಡೆಯರ ಅವರು ಯಡವನಾಡು ಅಬ್ಬಿಮಠಕ್ಕೆ ದೊಡ್ಡ ವಿರೂಪಾಕ್ಷಸ್ವಾಮಿಯವರು ಮಡಕೇರಿಗೆ ಬಂದಾಗ ಬಿಟ್ಟುಕೊಟ್ಟ ಗ್ರಾಮ ಬಾಚಹಳ್ಳಿ ಗ್ರಾಮವೊಂದಕ್ಕೆ ಕಂದಾಯ ಗ-೧೬ ವರಹ, ಜೊತೆಗೆ ಹೊಸಹಳ್ಳಿ ಗ್ರಾಮ-೧, ಚಿಗಟ್ಟಿಹಳ್ಳಿ ಗ್ರಾಮ-೧, ಬಾಚಹಳ್ಳಿ ಗ್ರಾಮ-೧, ಈ ಮೂರು ಗ್ರಾಮಗಳನ್ನು ಆಚಂದ್ರಾರ್ಕವಾಗಿ ಧರ್ಮವನ್ನು ನಡೆಸುತ್ತಾ ಇರಲೆಂದು ದಾನ ನೀಡಿರುವುದಾಗಿ ತಿಳಿದುಬರುತ್ತದೆ.[೧೭]

ಕೊಡಗಿನ ಮಾದಾಪುರ ಮಠಕ್ಕೆ ನೀಡಿದ ದಾನದಲ್ಲಿ, ಶಾಲಿವಾಹನ ಶಕವರ್ಷ ೧೭೧೮ರಲ್ಲಿ ವೀರ ರಾಜೇಂದ್ರ ಒಡೆಯರು ಮಹಾದೇವಪುರದ ಮಠಕ್ಕೆ ಚರಮೂರ್ತಿಗಳಾದ ಶಾಂತವೀರ ಸ್ವಾಮಿಗಳು

ಬಂದಾಗ ಚಿಕ್ಕಹಂದೆ, ಜಂಬೂರು ಗ್ರಾಮಕ್ಕೆ ಶಿಲಾಪ್ರತಿಷ್ಠೆಯನ್ನು ಮಾಡಿಸಿ ಕಂದಾಯದ ವಿವರದಲ್ಲಿ ಬಿಜ ಭಟ್ಟಿ ೪೩ಕ್ಕೆ ಕಂದಾಯ ೩೯ವರಹ ದಾನಕೊಟ್ಟಿರುವುದಾಗಿ ತಿಳಿಸಲಾಗಿದೆ. ಜೊತೆಗೆ ಯಡವನಾಡು ವಲತ್ತದ ಠೆಂಕನಾಡು ಮಂದಗೆ ಸೇರಿದ ಬೇಲೂರು, ಬಸವನಹಳ್ಳಿ ಒಳಗಣ ಗುಡುಗೂರು ಸಹ ಗ್ರಾಮ ಎರಡಕ್ಕೆ ಬಿಜ ವರಿ ಭಟ್ಟಿ ೫೦ಕ್ಕೆ ಕಂದಾಯ ೫೦ ವರಹವೆಂದು ತಿಳಿಸಲಾಗಿದೆ. ಮೇಲಿನ ಎಲ್ಲಾ ನಾಲ್ಕು ಗ್ರಾಮಗಳಿಂದ ಮಠಕ್ಕೆ ಬರುವ ಕಂದಾಯ ೬೦ ವರಹ ಭತ್ತ ಭಟ್ಟಿ ೨೦೦ ಬೆಳೆ ಎಂದು ದಾನ ನೀಡಿರುವುದಾಗಿ ಲಿಂಗಮುದ್ರೆ ಶಿಲಾಪ್ರತಿಷ್ಠೆಯನ್ನು ಮಾಡಿಸಲಾಯಿತು.[೧೮]

ಮುರುಘಮಠ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರು

ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ಸುಮಾರು ೬೦ ನಿರೂಪಗಳನ್ನು ಮಠಕ್ಕೆ ಕೊಟ್ಟಿದ್ದಾರೆ, ಈ ನಿರೂಪಗಳೆಲ್ಲವೂ 'ಬೃಹನ್ಮಠದ ರಹದಾರಿ ಪತ್ರಗಳು' ಎಂಬ ಪುಸ್ತಕದಲ್ಲಿ ಪ್ರಕಟಗೊಂಡಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮುರುಘಮಠಕ್ಕೆ ಸರಕಾರವು ಮಠದ ಚರಂತಿಗಳ ವಿನಂತಿಯ ಮೇರೆಗೆ ಪ್ರತಿ ತಿಂಗಳು ೩೦ ಕಂಠೀರಾಹಿ ವರಹದಂತೆ ಒಂದು ವರ್ಷಕ್ಕೆ ೩೬೦ ಕಂಠೀರಾಯಿ ವರಹಗಳನ್ನು ಮಠಕ್ಕೆ ಕೊಡುವಂತೆ ನಿರೂಪದಲ್ಲಿ ತಿಳಿಸಲಾಗಿದೆ.

೧೮೧೬ರಲ್ಲಿ ಕೊಟ್ಟಿರುವ ನಿರೂಪದಲ್ಲಿ ಚಿತ್ರದುರ್ಗ ತಾಲೂಕು ಅಮಲ್ದಾರರಾಗಿದ್ದ ಶ್ರೀ ಶಾಮರಾಯರು ಮುಮ್ಮಡಿ ಕೃಷ್ಣರಾಜ ಒಡೆಯರ ಆಜ್ಞೆಯ ಮೇರೆಗೆ ಮುಜರಾಯಿ ಇಲಾಖೆಯಿಂದ ಮುರುಘಮಠಕ್ಕೆ ಕುರುಬರಹಟ್ಟಿ, ಮಲ್ಲನಕಟ್ಟೆ, ಹಡ್ಲು, ಜೋಳಘಟ್ಟ, ಸಿದ್ಧಮ್ಮನಹಳ್ಳಿ, ಸಾದರಹಳ್ಳಿ, ಐಯ್ಯನಹಳ್ಳಿ, ಹೊರಕರೆದೇವಾಪುರ ಮತ್ತು ಅಜ್ಜಪ್ಪನಹಳ್ಳಿ ಎಂಬ ಗ್ರಾಮಗಳನ್ನು ಇನಾಂ ನೀಡಲಾಗಿತ್ತು.[೧೯] ಈಗೆ ನೀಡಲಾಗಿದ್ದ ಇನಾಂ ಗ್ರಾಮಗಳಿಂದ ಮಠಕ್ಕೆ ಸರಿಯಾದ ಆದಾಯ ಬರದಿದ್ದರಿಂದ ಮುಮ್ಮಡಿ ಕೃಷ್ಣರಾಜ ಒಡೆಯರು ಮಠಕ್ಕೆ ಪ್ರತಿ ತಿಂಗಳು ನಗದು ರೂಪದ ಹಣವನ್ನು ಮಂಜೂರು ಮಾಡಿದರು. ಅದು ತಿಂಗಳ ಒಂದಕ್ಕೆ ೧೨೦ ವರಹದಂತೆ ಒಂದು ವರ್ಷಕ್ಕೆ ೧೪೪೦ ಕಂಠೀರಾಹಿ ವರಹಗಳನ್ನು ಮಠಕ್ಕೆ ಕೊಡುವುದಾಗಿ ನಿರೂಪದಲ್ಲಿ ತಿಳಿಸಲಾಗಿತ್ತು. ಇದನ್ನು ಪಡೆದ ಮಠದ ಗುರುಗಳು ರಾಜರ ಶ್ರೇಯಸ್ಸಿಗೋಸ್ಕರ ಪ್ರಾರ್ಥನೆ ಸಲ್ಲಿಸಬೇಕಾಯಿತು.[೨೦]

ಮಠಗಳ ಭೂಒಡೆತನದ ಸಂಬಂಧಗಳು

ಚಿತ್ರದುರ್ಗ ಸಂಸ್ಥಾನದ ಮುರುಘಮಠದ ಧಾರ್ಮಿಕ ವಿಧಿವಿಧಾನಗಳಿಗೆ ಆರ್ಥಿಕವಾಗಿ ಎಂದೂ ತೊಂದರೆ ಬರದಂತೆ ಚಿತ್ರದುರ್ಗದ ನಾಯಕರು, ಕೆಳದಿ, ಕೊಡಗಿನ ಅರಸರು ಅಪಾರವಾದ ಭೂದಾನ ಗಳನ್ನು ಕೊಡುವ ಮೂಲಕ ಮಠದ ಆಚರಣೆ ಅನುಷ್ಠಾನಗಳನ್ನು ನಿರ್ಭಯ, ನಿಸ್ಸಂಕೋಚವಾಗಿ ನಡೆಸಿಕೊಂಡು ಬರಲು ಸಾಧ್ಯವಾಗಿತ್ತು. ಅದೇ ರೀತಿ ಸಿರಿಗೆರೆಯ ತರಳಬಾಳುಮಠವು ರಾಜಾಶ್ರಯವನ್ನು ಪಡೆಯದೆ ಇದ್ದರೂ, ಪ್ರಬಲ ಭೂಹಿಡುವಳಿದಾರರಿಂದ ಮತ್ತು ಸಾಮಾನ್ಯ ಭೂಹಿಡುವಳಿದಾರರು ಗಳಿಂದಲೂ, ಕೃಷಿಯ ಉತ್ಪಾದನೆಯಲ್ಲಿ ಸ್ವಲ್ಪ ಭಾಗವನ್ನು ಪಡೆಯುವ ಮೂಲಕ ಈ ಎರಡೂ ಮಠಗಳು ಕರ್ನಾಟಕದ ಪ್ರಮುಖ ಧಾರ್ಮಿಕ ಕೇಂದ್ರಗಳಾಗಿ ಬೆಳವಣಿಗೆ ಹೊಂದಿವೆ. ಆದರೆ ಚಿತ್ರದುರ್ಗದ ಮುರುಘಮಠವು ಕ್ರಿ. ಶ. ೧೭ನೇ ಶತಮಾನದಿಂದಲೂ, ರಾಜರುಗಳಿಂದ ಬಂದಂತಹ ತೆರಿಗೆಮುಕ್ತ ಭೂದಾನಗಳು, ಪ್ರಜೆಗಳಿಂದ ಬಂದ ಭೂದಾನಗಳು, ಮಠವೇ ಕೊಂಡು ಕೊಂಡ ಭೂ ಹಿಡುವಳಿಗಳು, ವಿಶಿಷ್ಟ ಸಂದರ್ಭಗಳಲ್ಲಿ ದೊರೆತ ದಾನದತ್ತಿಗಳು ವೀಸದಿಂದ ಬರುತ್ತಿದ್ದ ಆದಾಯ. ಹೀಗೆ ಬೇರೆ ಬೇರೆ ಹಂತಗಳಲ್ಲಿ ದೊರೆತ ಆದಾಯದಿಂದಾಗಿ ಮಠವು ಶ್ರೀಮಂತವಾಗಿ ಬೆಳೆದುದನ್ನು ಗುರುತಿಸಬಹುದಾಗಿದೆ.

ಚಿತ್ರದುರ್ಗದ ಮುರುಘಮಠದ ಭೂಹಿಡುವಳಿಗಳ ಹಂಚಿಕೆ

ಚಿತ್ರದುರ್ಗದ ಮುರುಘಮಠವು ಪ್ರಮುಖ ವೀರಶೈವ ಮಠಗಳಲ್ಲಿ ಒಂದಾಗಿದೆ. ಈ ಮಠವು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳುನಾಡಿನ ಹಲವು ಭಾಗಗಳಲ್ಲಿ ಭೂಒಡೆತನ ಹೊಂದಿದ್ದು, ಮಠವು ಜಮೀನ್ದಾರಿ ಸಂಸ್ಥೆಯಂತೆ ಭೂಮಾಲೀಕತ್ವದ ಎಲ್ಲ ಚಟುವಟಿಕಗಳಲ್ಲಿ ತೊಡಗಿದೆ. ಅದು ವಿಸ್ತಾರವಾದ ಭೂಹಿಡುವಳಿಯನ್ನು ಹೊಂದಿದೆ. ಈ ಮಠದ ಭೂಹಿಡುವಳಿಗಳನ್ನು ಖುಷ್ಕಿ, ತರಿ, ಮತ್ತು ಭಾಗಾಯ್ತು ಎಂದು ಗುರುತಿಸಬಹುದು. ಚಿತ್ರದುರ್ಗ ಪ್ರದೇಶದಲ್ಲಿದ್ದ ಮುರುಘಮಠದ ಭೂಹಿಡುವಳಿಗಳ ಹಂಚಿಕೆಯನ್ನು ಹೀಗೆ ವಿಂಗಡಿಸಬಹುದು.[೨]

ಅ. ಮಠದ ನೇರ ಒಡೆತನದಲ್ಲಿ ಸಾಗುವಳಿಯಾಗುತ್ತಿದ್ದ ಭೂಹಿಡುವಳಿಗಳು

೧. ಕುರ್ಚಿಕಲ್ಲು ಹೊಲ ೪೦ ಎಕರೆ

೨. ಬನ್ನಿ ಮರದ ಹೊಲ ಮತ್ತು ಮಜ್ಜಿಗೆ ಕಟ್ಟೆ ಸೇರಿ ೨೦ ಎಕರೆ.

೩. ದಳವಾಯಿ ಹೊಂಡ ಮತ್ತು ತೋಟ ಸೇರಿ ೪೦ ಎಕರೆ ಭೂಮಿಯಲ್ಲಿ ೬೦೦ ತೆಂಗಿನ ಗಿಡಗಳಿವೆ.

೪. ರಾಮಪ್ಪನ ಹೊಲ ಐದು ಎಕರೆ

೫. ಹೊಸಟ್ಟಿ ಹೊಲ ೧೫ ಎಕರೆ

೬. ಹೊಸಟ್ಟಿ ಗದ್ದೆ ನಾಲ್ಕು ಎಕರೆ

೭. ಹೊಸಟ್ಟಿ ಕಾವಲು ಮತ್ತು ಹೊಸಟ್ಟಿ ದೊಡ್ಡ ಗದ್ದೆ ೧೫ ಎಕರೆ.

೮. ಭರಮಜ್ಜರ ಹೊಲ ನಾಲ್ಕು ಎಕರೆ(ಈಗ ಜಮೀನು ಕಾವಾಡಿಗರ ಹಟ್ಟಿಗ್ರಾಮ ಕಟ್ಟಲು ಹೋಗಿದೆ)

೯. ಕಾಸ್ಯಾಪುರದ ಹತ್ತಿ ಮಠದ ಹೊಲ ೧೦೦ ಎಕರೆ ಕಾವಲು (ಈಗ ಮಾರಾಟವಾಗಿದೆ).

ಆ. ಕೋರು, ಗುತ್ತಿಗೆ ಕೊಡುತ್ತಿದ್ದ ಭೂ ಹಿಡುವಳಿಗಳು

೧. ಸೀಬಾರದಲ್ಲಿ ೨೫ ಎಕರೆ ಹೊಲ ಬಹುಕಾಲದವರೆಗೂ ಮುಸ್ಲಿಮರಿಗೆ ಕೋರು ಕೊಟ್ಟಿದ್ದರು.

೨. ಚಂದ್ರವಳ್ಳಿ ಪಕ್ಕದ ಅಂಕಲೀ ಮಠದ ಹೊಲಗಳು ೩೫ ಎಕರೆ(ಕೋರು)

೩. ಕೆಳಕೋಟೆ ಹೊಲ ೨೫ ಎಕರೆ ಎರೆ ಭೂಮಿ(ಕೋರು)

೪. ಗುರುಪಾದಸ್ವಾಮಿ ಹೊಲ ಅಥವಾ ಆನೆಗುಂದಿ ಹೊಲ ೩೫ ಎಕರೆ(ಕೋರು)

೫. ಹೊಳಲ್ಕೆರೆ ಪಟ್ಟಣದ ಒಂಟಿ ಕಂಬದ ಮಠದ ಹೊಲ ಸುಮಾರು ೬೦ ಎಕರೆ, ಇದೇ ಹೊಳಲ್ಕೆರೆಯ ಹೊನ್ನೆಕೆರೆ ಕೆರೆಯ ಹಿಂಭಾಗದ ಕೋಡಿಹಳ್ಳದ ಹೊಲ ೧೫ ಎಕರೆ ಗೊಲ್ಲರಿಗೆ ಗುತ್ತಿಗೆ ಕೊಟ್ಟಿದ್ದರು.

೬. ಹೊಳಲ್ಕೆರೆ ಹತ್ತಿರದ ಪಾಡೀಗಟ್ಟಿ ಹೊಲ ೨೫ ಎಕರೆ.

೭. ಕೊಡಗಳ್ಳಿ ಹೊಲ ೨೦೦ ಎಕರೆ

೮. ಚಳ್ಳಕೆರೆಯ ಮಾಡನಾಯಕನಹಳ್ಳಿಯಲ್ಲಿ ದಾನಕೊಟ್ಟಿದ್ದು ೩೦೦ ಎಕರೆ ಭೂಮಿಯಿತ್ತು(ಈಗ ಮಾರಾಟವಾಗಿದೆ).

೯. ಹೊಸದುರ್ಗದ ಹತ್ತಿರ ಸುಮಾರು ೩೦೦ ಎಕರೆ ಭೂಮಿ ಇತ್ತು (ಈಗ ಮಾರಾಟವಾಗಿದೆ).

೧೦. ಕೊಡಗು ಜಿಲ್ಲೆಯ ಸೋಮವಾರ ಪೇಟೆ, ಗುಂಡ್ಲುಪೇಟೆ, ಅಬ್ಬಿಮಠ, ಚಿಗಟಿಹಳ್ಳಿ ಮುಂತಾದ ಪ್ರದೇಶಗಳಲ್ಲಿ ಮಠದ ಭೂಹಿಡುವಳಿಗಳಿವೆ.[೨೨] ಕೊಡಗಿನ ರಾಜರು ಕ್ರಿ. ಶ. ೧೭೭೬ರಲ್ಲಿ ಸೋಮವಾರ ಪೇಟೆ ತಾಲೂಕು ಬೇಲೂರು ವಾಸವನಹಳ್ಳಿ ಸರ್ವೇನಂಬರ್ ೨/೪ರಲ್ಲಿ ೧೩೦೦ ಎಕರೆ ಭೂಮಿಯನ್ನು ಅಬ್ಬಿಮಠ ಮತ್ತು ಮಾದೇವಪುರ ಮಠಕ್ಕೆ ನೀಡಿದ್ದರು. ಈ ಎರಡು ಕೊಡಗಿನ ಮಠಗಳು ಚಿತ್ರದುರ್ಗದ ಮುರುಘ ಮಠದ ಶಾಖಾಮಠಗಳಾಗಿವೆ.[೨೩]

ಇನ್ನೂ ಹಲವು ಪ್ರದೇಶಗಳಲ್ಲಿ ಮಠಕ್ಕೆ ಸೇರಿದ ಭೂಹಿಡುವಳಿಗಳನ್ನು ನೇರವಾಗಿ ಮಠವೇ ಉಳುಮೆಗೊಳಪಡಿಸುತ್ತದೆ. ಚಿತ್ರದುರ್ಗ ಮುರುಘಮಠದಲ್ಲಿ ೧೯೪೭ರಲ್ಲಿ ಎಂಟು ಜೊತೆ ಎತ್ತುಗಳು ಹಾಗೂ ನಾಲ್ಕು ಎತ್ತಿನ ಗಾಡಿಗಳು ಇದ್ದವು. ಎಂಟು ಜನ ಆಳುಗಳು ಕೃಷಿ ಉತ್ಪಾದನೆಯಲ್ಲಿ ತೊಡಗಿದ್ದರು. ಪ್ರತಿ ದಿನ ಕೂಲಿ ಆಳುಗಳು ೨೫ ಜನರು ದುಡಿಯುತ್ತಿದ್ದರು. ಸುಗ್ಗಿ, ಬಿತ್ತನೆ, ಕೊಯ್ಯಲು ಈ ಮುಂತಾದ ವಿಶೇಷ ಸಂದರ್ಭಗಳಲ್ಲಿ ಸುಮಾರು ೧೦೦ಜನಕ್ಕೂ ಹೆಚ್ಚು ಕೃಷಿ ಕಾರ್ಮಿಕರು ಮಠದ ಭೂಹಿಡುವಳಿಗಳಲ್ಲಿ ದುಡಿಯುತ್ತಿದ್ದರು. ಮಠದಲ್ಲಿ ವರ್ಷಪೂರ್ತಿ ದುಡಿಯುತ್ತಿದ್ದ ಒಬ್ಬ ಆಳಿಗೆ ವಸತಿ, ಊಟ, ಬಟ್ಟೆ, ಸೇರಿ ಒಂದು ವರ್ಷಕ್ಕೆ ೧೨೦೦ ರೂ.ಗಳವರೆಗೆ ೨೦ನೇ ಶತಮಾನದ ಆರಂಭದಲ್ಲಿ ಸಂಬಳ ಕೊಡುತ್ತಿದ್ದರು. ಅದೇ ರೀತಿ ಪ್ರತಿದಿನ ಕೂಲಿಯಂತೆ ಬರುತ್ತಿದ್ದ ಹೆಣ್ಣಾಳುಗಳಿಗೆ ಒಂದು ರೂ. ೨೫ ಪೈಸೆ, ಗಂಡಾಳಿಗೆ ಒಂದು ರೂ ೫೦ ಪೈಸೆ ಕೂಲಿ ನಿಗದಿ ಮಾಡಿದ್ದರು. ಮಠವು ೧೯೪೭ರಲ್ಲಿ ಒಟ್ಟು ಕೃಷಿ ಉತ್ಪಾದನೆಯಲ್ಲಿ ರಾಗಿ ೨೦೦ ಚೀಲ, ಭತ್ತ ೩೦೦ ಚೀಲ (ವರ್ಷದ ಎರಡೂ ಬೆಳೆ ಸೇರಿ) ೪೫೦ ಚೀಲ ಜೋಳ, ಹುರುಳಿ, ಕುರಸಾಣಿ, ಮೆಣಸಿನ ಕಾಯಿ, ಇತ್ಯಾದಿ ೨೫ ಚೀಲ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದರು. ಈ ಉತ್ಪಾದನೆಯನ್ನು ಮಠವು ವಿದ್ಯಾರ್ಥಿನಿಲಯಗಳನ್ನು ನಡೆಸಲು ಮತ್ತು ಮಠದಲ್ಲಿ ವರ್ಷವಿಡೀ ನಿತ್ಯ ದಾಸೋಹ ನಡೆಸಲು ಹಾಗೂ ಮಠದ ಖರ್ಚು ವೆಚ್ಚಕ್ಕೆ ಬಳಸಿಕೊಂಡಿರುವುದು ಕಂಡುಬರುತ್ತದೆ.

ಭೂಹಿಡುವಳಿಗಳ ಮೇಲೆ ಮಠವು ನೇರವಾದ ಒಡೆತನವನ್ನು ಹೊಂದಿದ್ದರೂ ತನಗೆ ಬೇಕಾದ ವ್ಯಕ್ತಿಗಳಿಗೆ ಕೋರು ಅಥವಾ ಗುತ್ತಿಗೆಯನ್ನು ಕೊಡುವ ಮೂಲಕ ಅದರ ಒಡೆತನವನ್ನು ನಿರ್ವಹಿಸುತ್ತಿತ್ತು. ಮಠವು ಭೂ ಹಿಡುವಳಿಗಳನ್ನು ರಾಜರುಗಳಿಂದ, ಮೇಲ್ವರ್ಗದ ಭೂಹಿಡುವಳಿದಾರರುಗಳಿಂದ ಪಡೆದಿತ್ತು. ಆದರೂ ಅದರಲ್ಲಿ ಕೃಷಿ ಉತ್ಪಾದನೆಗೆ ತೊಡಗಲು ಎಲ್ಲಾ ಸಮುದಾಯಗಳಲ್ಲೂ ಹಂಚಿ ಹೋಗಿರುವುದು ಕಂಡುಬರುತ್ತದೆ. ಉದಾಹರಣೆಗೆ ಹೊಳಲ್ಕೆರೆ ಪಟ್ಟಣದಲ್ಲಿದ್ದ ಕೆರೆಯ ಹಿಂಭಾಗದ ಸುಮಾರು ೧೫ ಎಕರೆ ಭೂಹಿಡುವಳಿಗಳನ್ನು ಮುಳಗಾಯಿ ನೀಲಪ್ಪ ಮತ್ತು ಮಲ್ಲಂಡಿ ಪಾತಣ್ಣ ಎಂಬ ಗೊಲ್ಲ ಸಮುದಾಯಕ್ಕೆ ಪ್ರತಿ ವರ್ಷವೂ ಎಂಟು ಚೀಲ ರಾಗಿಯನ್ನು ನೀಡುವಂತೆ, ಕೆರೆಯ ಹಿಂಭಾಗದ ಭೂಮಿಯನ್ನು ಗುತ್ತಿಗೆ ನೀಡಿತ್ತು.

ಅದೇ ರೀತಿ ಜಮ್ಮಿಗೆ ಚಂದ್ರಪ್ಪ, ಮಾವಿನಹಳ್ಳಿ ಚೆನ್ನಬಸಪ್ಪ ಮತ್ತು ಗೊಡಬನಾಳು ಶಿವಣ್ಣ ಇವರು ಲಿಂಗಾಯತ ಸಮುದಾಯಕ್ಕೆ ಸೇರಿದ್ದರು. ಬಾರೆಹಳ್ಳಿ ತಿಪ್ಪಣ್ಣ ನಾಯಕ ಸಮುದಾಯಕ್ಕೆ

ಸೇರಿದ್ದರು. ತರೀಕೆರೆ ಬಾಜಿ ಸಾಹೇಬರು ಮುಸ್ಲಿಂ ಸಮುದಾಯದವರಾಗಿದ್ದಾರೆ. ಹಾಗೆಯೇ ಮರಿಯಣ್ಣನ ಮಗ ಶಿವಣ್ಣ, ನಿಂಗಜ್ಜನ ಮಗ ಈಶ್ವರಪ್ಪ ಗೊಲ್ಲ ಸಮುದಾಯಕ್ಕೆ ಸೇರಿದವರು. ಇವರುಗಳೆಲ್ಲರೂ ಹೊಳಲ್ಕೆರೆ ತಾಲೂಕಿನ ಪಟ್ಟಣವಾಸಿಗಳಾಗಿದ್ದು, ೧೯೪೭ರಿಂದಲೂ ಮಠದ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ಕೃಷಿಗೊಳಪಡಿಸುತ್ತಿದ್ದರು. ಈ ಮೇಲಿನ ಹಲವು ಕೃಷಿ ಭೂಹಿಡುವಳಿದಾರರು ಮಠದ ಭೂಮಿಯನ್ನು ಹಲವು ದಶಕಗಳವರೆಗೆ ಸಾಗುವಳಿ ಮಾಡುತ್ತಿದ್ದರು. ಉದಾಹರಣೆಗೆ ಚಳ್ಳಕೆರೆ ತಾಲೂಕು ಮಾಡನಾಯಕನಹಳ್ಳಿಯ ಭೂಮಿಯನ್ನು ಅಲ್ಲಿನ ಗೊಲ್ಲ ಸಮುದಾಯದವರು ಗುತ್ತಿಗೆ ರೂಪದಲ್ಲಿ ಸಾಗುವಳಿ ಮಾಡಿ ಪ್ರತಿ ವರ್ಷ ೧೦೦ಚೀಲ ನವಣೆಯನ್ನು ೧೯೩೭ರಿಂದಲೂ ಕೊಡುತ್ತಿದ್ದರು. ಜೊತೆಗೆ ಗುತ್ತಿಗೆದಾರರು ಕೊಟ್ಟ ಆಹಾರ ಧಾನ್ಯಗಳಿಗೆ ಮಠದ ಅಧಿಕಾರಿಗಳು ರಸೀದಿಗಳನ್ನು ಕೊಡುತ್ತಿದ್ದ ಬಗ್ಗೆ ಮಾಹಿತಿ ದೊರೆಯುತ್ತದೆ. ಮಠದ ಕರಾರಿಗೆ ಅನುಗುಣವಾಗಿ ಗುತ್ತಿಗೆಯ ಪ್ರಕಾರ ಭೂಹಿಡುವಳಿಗಳನ್ನು ಕೃಷಿಗೊಳಪಡಿಸಿ ಅದರಿಂದ ತಮ್ಮ ಉಪ ಜೀವನವನ್ನು ನಡೆಸುವುದರೊಂದಿಗೆ ಮಠದ ಗುತ್ತಿಗೆಯ ಪ್ರಕಾರ ನಿಯಮಾನುಸಾರವಾಗಿ ಆಹಾರ ಧಾನ್ಯಗಳನ್ನು ಮಠಕ್ಕೆ ಕೊಡುತ್ತಾ ಬಂದಿದ್ದಾರೆ.

ಸಿರಿಗೆರೆಯ ತರಳಬಾಳು ಮಠದ ಭೂಹಿಡುವಳಿಗಳ ಹಂಚಿಕೆ

ಸಿರಿಗೆರೆಯ ತರಳಬಾಳು ಮಠದ ಭೂಹಿಡುವಳಿಗಳು ಕರ್ನಾಟಕ ರಾಜ್ಯದ ಬಹುಭಾಗದಲ್ಲಿ ಇರುವು ದನ್ನು ಗುರುತಿಸಬಹುದು. ಈ ಮಠದ ಭೂಹಿಡುವಳಿಗಳ ಹಂಚಿಕೆಯನ್ನು ಕೆಳಗಿನಂತೆ ಗುರುತಿಸಬಹುದು.[೨೪]

೧. ಸಿರಿಗೆರೆಯಲ್ಲಿ ಸುಮಾರು ೩೬ ಎಕರೆ ತೆಂಗಿನ ತೋಟ, ೧೫ ಎಕರೆ ಅಡಿಕೆ ತೋಟ
೨. ಮರವಂಜಿಯಲ್ಲಿ ಎಂಟು ಎಕರೆ ಅಡಿಕೆ ತೋಟ
೩. ಶಿವಪುರದಲ್ಲಿ ಮೂರು ಎಕರೆ ಅಡಿಕೆ ತೋಟ
೪. ಯಲಹಂಕದಲ್ಲಿ ನಾಲ್ಕು ಎಕರೆ ಅಡಿಕೆ ತೋಟ, ೧೪ ಎಕರೆ ತೆಂಗಿನ ತೋಟ
೫. ಹರಳಕಟ್ಟದಲ್ಲಿ ೨೦ ಎಕರೆ ತೆಂಗಿನ ತೋಟ
೬. ಸಾಣೇಹಳ್ಳಿಯಲ್ಲಿ ೬೦ ಎಕರೆ ಭೂಮಿಯಲ್ಲಿ ಸುಮಾರು ೨೦೦೦ ಗಿಡಗಳ ತೆಂಗಿನ ತೋಟವಿದೆ
೭. ಕಡೂರು ತಾಲೂಕು ಬೀರೂರಿನಲ್ಲಿ ೪೦ ಎಕರೆ ಖುಷ್ಕಿ ಭೂಮಿ ಇದ್ದು, ಇದನ್ನು ಹಲವು ದಶಕಗಳವರೆಗೆ ಮಠವು ಗುತ್ತಿಗೆ ನೀಡಿತ್ತು. ಇದೇ ಪ್ರದೇಶದಲ್ಲಿ ಬೀರೂರಿನ ಲಿಂಗಾಪುರದ ಮಹದೇವಪ್ಪನವರು ಮಠಕ್ಕೆ ಮೂರು ಎಕರೆ ಅಡಿಕೆ ತೋಟವನ್ನು ದಾನವಾಗಿ ನೀಡಿದ್ದರು.
೮. ಹೊಳಲ್ಕೆರೆ ತಾಲೂಕು ಅಂಜಿನಾಪುರದ ಒನಕೆ ಮಂಡಿ ಕಾವಲುನಲ್ಲಿ ೧೦೦ ಎಕರೆ ಭೂಮಿಯನ್ನು ೧೯೫೫ರಲ್ಲಿ ಸರಕಾರ ಇನಾಮಾಗಿ ನೀಡಿತ್ತು. (ಅರಣ್ಯೀಕರಣಕೋಸ್ಕರ) ಹಾಗೆಯೇ ಹೊಳಲ್ಕೆರೆ ತಾಲೂಕು ಬಸಾಪುರದಲ್ಲಿ ೪೦ ಎಕರೆ

೯. ಚಿತ್ರದುರ್ಗ ತಾಲೂಕು ಮೆದಕೆಪುರದ ಕಾವಲಿನಲ್ಲಿ ೧೦೦೦ ಎಕರೆ ಭೂಮಿಯನ್ನು ಸರಕಾರ ಅರಣ್ಯೀಕರಣಕ್ಕಾಗಿ ಮಠಕ್ಕೆ ಇನಾಂ ಆಗಿ ನೀಡಿತ್ತು

೧೦. ಸಿರಿಗೆರೆಯ ಹತ್ತಿರದ ಪಳಕೆಯಳ್ಳಿಯಲ್ಲಿ ೧೦೦ ಎಕರೆ

೧೧. ಸಿರಿಗೆರೆ ಹತ್ತಿರದ ಕ್ಷೀರಸಾಗರದಲ್ಲಿ ಕೇಂದ್ರ ಕೃಷಿ ವಿಜ್ಞಾನ ಕೇಂದ್ರ ಪ್ರಾರಂಭಿಸಲಾಗಿದ್ದು, ಇಲ್ಲಿಯೂ ಸಹ ೧೫೦ ಎಕರೆ ಭೂಪ್ರದೇಶ ಮಠದ ಒಡೆತನದಲ್ಲಿದೆ

೧೨. ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕು ತೂಲಹಳ್ಳಿಯಲ್ಲಿ ೬೦ ಎಕರೆ ಭೂಹಿಡುವಳಿಯನ್ನು ಹೊಂದಿದ್ದು ಇದನ್ನು ಗುತ್ತಿಗೆ ಕೊಟ್ಟಿದ್ದರು.[೨೫]

ಸಿರಿಗೆರೆಯ ತರಳಬಾಳು ಮಠವು ತಾನು ಹೊಂದಿದ್ದ ಭೂಹಿಡುವಳಿಗಳಲ್ಲಿ ನೇರವಾಗಿ ಕೃಷಿ ನಿರ್ವಹಣೆಯನ್ನು ಹೊಂದಿದ್ದು ಮಠದಲ್ಲಿ ಪ್ರತಿದಿನವೂ ೩೫ಕ್ಕೂ ಹೆಚ್ಚು ಜನ ಕೃಷಿ ಕಾರ್ಮಿಕರು ದುಡಿಯುತ್ತಿದ್ದರು. ಮಠದಲ್ಲಿ ನೂರಾರು ಹಸುಗಳು, ಎಮ್ಮೆಗಳನ್ನು ಸಾಕಿದ್ದರು. ೧೯೩೭ಕ್ಕೆ ಮೊದಲು ವರ್ಷವಿಡೀ ದುಡಿಯುವ ಒಬ್ಬ ಆಳಿಗೆ ಊಟ, ವಸತಿ, ಬಟ್ಟೆಯ ಜೊತೆಗೆ ೧೦೦ ರೂ. ಸಂಬಳವನ್ನು ಕೊಡುತ್ತಿದ್ದರು. ಮಠದಲ್ಲಿ ಕೃಷಿ ಉತ್ಪಾದನೆಯು ರಾಗಿ, ಜೋಳ, ಭತ್ತ, ತೊಗರಿ, ಹುರುಳಿ, ಮೆಣಸಿನಕಾಯಿ ಎಲ್ಲಾ ಸೇರಿ ಸರಾಸರಿ ೫೦೦ ಚೀಲ ಬೆಳೆಯುತ್ತಿದ್ದರು. ವಾರ್ಷಿಕವಾಗಿ, ಸಂಗ್ರಹಿಸಿದ ಆಹಾರ ಧಾನ್ಯಗಳನ್ನು ಪಳತದಲ್ಲಿ ಸಂಗ್ರಹಿಸಿ, ವಿದ್ಯಾರ್ಥಿ ನಿಲಯಗಳನ್ನು ನಡೆಸಲು ಮತ್ತು ಮಠದಲ್ಲಿ ನಿತ್ಯ ದಾಸೋಹ ಮಾಡಲು ಉಪಯೋಗಿಸಲಾಗುತ್ತಿತ್ತು. ಜೊತೆಗೆ ಮುಂದಿನ ವರ್ಷದ ಬೆಳೆ ಬರುವವರೆಗೂ ಆಹಾರ ಧಾನ್ಯಗಳ ಸಂಗ್ರಹಣೆಯು ಮಠದಲ್ಲಿರುವಂತೆ ನೋಡಿಕೊಳ್ಳುತ್ತಿದ್ದರು.[೨೬]

ಮಠದ ಭೂಹಿಡುವಳಿಗಳ ಹಂಚಿಕೆ

ಮಠದ ಭೂಹಿಡುವಳಿಗಳನ್ನು ದುಡಿಯುವ ಯಾವುದೇ ವರ್ಗಕ್ಕಾದರೂ ಹಣದ ಅಥವಾ ಧಾನ್ಯದ ರೂಪದಲ್ಲಿ ಗುತ್ತಿಗೆ ಕೊಡುತ್ತಿದ್ದರು. ವಾರ್ಷಿಕವಾಗಿ ನಿರ್ದಿಷ್ಟಪಡಿಸಿದ ಧಾನ್ಯ ಅಥವಾ ಹಣವನ್ನು ವರ್ಷದ ಅಂತ್ಯದಲ್ಲಿ ಕೊಡುವುದು. ಇಲ್ಲವೆ ಕೃಷಿ ಭೂಹಿಡುವಳಿದಾರರೊಂದಿಗೆ ಸ್ಥಳೀಯ ನಿಯಮಗಳಿಗನುಸಾರವಾಗಿ ಕೋರು ಕೊಡುತ್ತಿದ್ದರು. ಕೋರು ವ್ಯವಸ್ಥೆಯಲ್ಲಿ ಬೆಳೆದ ಯಾವುದೇ ವಿಧವಾದ ಬೆಳೆಯನ್ನು ಪರಸ್ಪರ ಹಂಚಿಕೊಳ್ಳುವ ಪದ್ಧತಿ ರೂಢಿಯಲ್ಲಿತ್ತು. ಇಲ್ಲಿ ಮಠದ ಭೂ ಹಿಡುವಳಿಯ ಒಡೆತನವು ಮಠಾಧಿಪತಿಗಳಿಗೆ ಮಾತ್ರ ಸೀಮಿತವಾಗಿತ್ತು. ಇಲ್ಲಿ ಮಠದ ಭೂಮಿಯಲ್ಲಿ ಕೃಷಿ ಮಾಡುವ ಹಿಡುವಳಿದಾರರಿಗೆ ಯಾವುದೇ ರೀತಿಯಾದ ಹಕ್ಕುಗಳಿರುವುದಿಲ್ಲ. ಮಠದ ಒಪ್ಪಂದಕ್ಕೆ ಅನುಗುಣವಾಗಿ ನಿಗದಿತ ವರ್ಷಗಳವರೆಗೆ ಈ ಭೂಹಿಡುವಳಿಗಳಲ್ಲಿ ದುಡಿಯುತ್ತಿದ್ದರು. ಹಲವು

ಸಂದರ್ಭಗಳಲ್ಲಿ ಮಠಗಳು ತನ್ನ ಅನುಕೂಲಕ್ಕೆ ತಕ್ಕಂತೆ ಪದೇ ಪದೇ ಗುತ್ತಿಗೆ(ಲಾವಣಿ)ದಾರರನ್ನು, ಕೋರುದಾರರನ್ನು ಬದಲಾಯಿಸುವ ಮೂಲಕ ಮಠಗಳು ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಿದ್ದವು. ಕೆಲವೊಂದು ವೇಳೆ ಭಕ್ತಿಯ ಅತಿರೇಖದಲ್ಲಿ ಯಾವುದೇ ಪ್ರತಿಫಲವನ್ನು ನಿರೀಕ್ಷಿಸದೆ ದುಡಿದು ಆದಾಯವನ್ನು ಮಠಕ್ಕೆ ಸಮರ್ಪಣ ಭಾವನೆಯಿಂದ ಸಲ್ಲಿಸುವ ಲಿಂಗಾಯತ ಸಮುದಾಯದ ಜನರು ಇದ್ದರು. ಆದರೆ, ಇಂತಹ ಸಮುದಾಯ ಕಡಿಮೆ ಇತ್ತು. ಚಿತ್ರದುರ್ಗ ಪ್ರದೇಶದಲ್ಲಿ ಇರುವ ತರಳಬಾಳು ಮತ್ತು ಮುರುಘಮಠಗಳೆರಡೂ ಭೂಹಿಡುವಳಿಗಳನ್ನು ರಾಜರುಗಳಿಂದ, ಶ್ರೀಮಂತ ಭೂಹಿಡುವಳಿದಾರರಿಂದ ಪಡೆದಿವೆ. ಆದರೂ ತಾವು ಹೊಂದಿರುವ ಸಹಸ್ರಾರು ಎಕರೆ ಭೂ ಹಿಡುವಳಿ ಗಳನ್ನು ಮಠದ ಹಿತಾಸಕ್ತಿಯನ್ನು ಕಾಪಾಡಬಹುದಾದ ಯಾವುದೇ ಸಮುದಾಯಕ್ಕಾದರೂ ಗುತ್ತಿಗೆ ಅಥವಾ ಕೋರಿನ ರೂಪದಲ್ಲಿ ಮಠದ ಭೂಹಿಡುವಳಿಗಳನ್ನು ಕೃಷಿಗೊಳಪಡಿಸುತ್ತಿದ್ದರು.

ಮುರುಘಮಠದ ಭೂಹಿಡುವಳಿಗಳನ್ನು ಮುಸ್ಲಿಂ, ನಾಯಕ, ಗೊಲ್ಲ ಮತ್ತು ಲಿಂಗಾಯಿತ ಸಮುದಾಯದ ಭೂಹಿಡುವಳಿದಾರರು ಗುತ್ತಿಗೆ ಅಥವಾ ಕೋರಿನ ರೂಪದಲ್ಲಿ ಪಡೆದು ಕೃಷಿಗೊಳ ಪಡಿಸಿರುವುದು ಕಂಡುಬರುತ್ತದೆ. ಇದೇ ರೀತಿ ಸಿರಿಗೆರೆ ತರಳಬಾಳು ಮಠದಲ್ಲಿಯೂ, ಆ ಮಠದ ಭೂಹಿಡುವಳಿಗಳನ್ನು ಒಕ್ಕಲಿಗರು, ಕುರುಬರು ಮತ್ತು ಲಿಂಗಾಯಿತರೂ ಸಹ ಗುತ್ತಿಗೆ ಅಥವಾ ಕೋರಿನ ರೂಪದಲ್ಲಿ ಭೂಮಿಯನ್ನು ಪಡೆದಿದ್ದರು. ಸಾಮಾನ್ಯವಾಗಿ ಮಠದ ಭೂಹಿಡುವಳಿಗಳಲ್ಲಿ ಕಾರ್ಯನಿರ್ವಹಿಸುವ ರೈತರು ಚಿಕ್ಕ ಭೂಹಿಡುವಳಿದಾರರಾಗಿದ್ದರು. ಕೆಲವೊಮ್ಮೆ ಭೂರಹಿತರಾದ ಕೃಷಿ ಕಾರ್ಮಿಕರು ಇಲ್ಲಿ ಕೆಲಸ ಮಾಡುತ್ತಿದ್ದರು. ಚಿತ್ರದುರ್ಗ ಪ್ರದೇಶದಲ್ಲಿ ಇಂತಹ ಸಣ್ಣ ಭೂಹಿಡುವಳಿ ದಾರರಿಗೆ ಎರಡರಿಂದ ಐದು ಎಕರೆವರೆಗೆ ಭೂಮಿ ಇದೆ. ಸ್ವಂತ ಒಕ್ಕಲುತನ ಮಾಡಿಕೊಂಡಿರುವ ಈ ಕುಟುಂಬಗಳು ತಾವು ಹೊಂದಿರುವ ಭೂಮಿಯು ಚಿಕ್ಕ ಹಿಡುವಳಿಗಳಾಗಿರುವದರಿಂದ ಸ್ವತಃ ಭೂಮಿಯ ಜೊತೆಗೆ ಮಠದ ಭೂಮಿಯನ್ನು ಉಳುಮೆ ಮಾಡುವ ಮೂಲಕ ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಸರಿದೂಗಿಸಿಕೊಳ್ಳುವ ಉದ್ದೇಶ ಇಟ್ಟುಕೊಂಡಿದ್ದಾರೆ. ಆದರೆ ಇಲ್ಲಿ ಉಳುಮೆ ಮಾಡುವ ಯಾವುದೇ ಸಮುದಾಯದ ಭೂಹಿಡುವಳಿದಾರರು ಮಠದ ಹಿತಾಸಕ್ತಿಯನ್ನು ಕಡೆಗಣಿಸದೆ ಪ್ರತಿವರ್ಷ ಮಾಡಿಕೊಂಡ ಕರಾರಿನ ಪ್ರಕಾರ ಧಾನ್ಯಗಳನ್ನು ಸುಗ್ಗಿಯ ವೇಳೆಯಲ್ಲಿ ರಾಶಿ ಹಾಕಿ ಕೊಡುವ ಮೂಲಕ ಪರಸ್ಪರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಿದ್ದರು.

ಮಠವು ಇಂಥಹ ಸಂದರ್ಭದಲ್ಲಿ ಭೂಹಿಡುವಳಿಗಳ ಮೇಲ್ವಿಚಾರಣೆಗೋಸ್ಕರ ನುರಿತ ಮೇಲ್ವಿಚಾರಕನ್ನು ನೇಮಿಸಿಕೊಳ್ಳುತ್ತಿತ್ತು. ಇವರು ಸಾಮಾನ್ಯವಾಗಿ ಮಠದ ಗುರುಗಳ ಹತ್ತಿರದ ಸಂಬಂಧಿಕರು ಅಥವಾ

ಮಠದ ಟ್ರಸ್ಟಿನ ಸಂಬಂಧಿಕರೂ ಆಗಿರುತ್ತಿದ್ದರು. ಹೀಗಾಗಿ ಮಠದ ಒಕ್ಕಲುತನವು ತಮ್ಮ ಮನೆಯ ಒಕ್ಕಲುತನವೇ ಎಂದು ಭಾವಿಸಿ ಮಠದ ಅಭಿವೃದ್ಧಿಗೋಸ್ಕರ ಇವರೆಲ್ಲಾ ದುಡಿಯುತ್ತಿದ್ದರು ಎಂಬ ಅಂಶ ತರಳಬಾಳು ಮಠ ಮತ್ತು ಮುರುಘಮಠದ ಅಧ್ಯಯನದಿಂದ ಕಂಡುಬರುತ್ತದೆ. ಇಂತಹ ನುರಿತ ಮೇಲ್ವಿಚಾರಕರ ನೇತೃತ್ವದಲ್ಲಿ ಇತರೆ ಆಳುಗಳು ಕೆಲಸ ಮಾಡುತ್ತಿದ್ದರು. ಈ ಆಳುಗಳು ಸಾಮಾನ್ಯವಾಗಿ ದಲಿತರೇ ಆಗಿರುತ್ತಿದ್ದರು. ಸಾಮಾನ್ಯವಾಗಿ ಇವರನ್ನು ಮಠದ ದನಕರುಗಳನ್ನು ಕಾಯುವುದಕ್ಕೆ, ಮಠದ ಇತರೆ ಕೆಲಸಗಳನ್ನು ಮಾಡುವುದಕ್ಕೆ ಬಳಸಿಕೊಳ್ಳಲಾಗುತ್ತದೆ. ಒಕ್ಕಲುತನದ ಕೆಲಸಗಳಲ್ಲಿ ಅಂದರೆ ಕುಂಟೆರಂಟೆ ಹೊಡೆಯಲು, ಚಕ್ಕಡಿ ನಡೆಸಲು, ಬಿತ್ತಲು, ಹೊಲ ಕೊಯ್ಯಲು ಹಾಗೂ ರಾಶಿಯನ್ನು ಮಾಡಿ ಧಾನ್ಯಗಳನ್ನು ಮಠಕ್ಕೆ ತರಲು ಸಾಮಾನ್ಯವಾಗಿ ಕೆಳಹಂತದ ಆಳುಗಳನ್ನೇ ಬಳಸಲಾಗುತ್ತಿತ್ತು. ತರಳಬಾಳು ಮಠದಲ್ಲಿ ಅಸ್ಪೃಶ್ಯರಾಗಿದ್ದ ಈ ದಲಿತ ಮಾದಿಗ ಸಮುದಾಯವು ದಶಕಗಳಿಂದಲೂ ಒಕ್ಕಲುತನದ ಕೆಲಸವನ್ನು ನಿರ್ವಹಿಸುತ್ತಿದ್ದರು. ಇಂತಹ ಕೃಷಿ ಕೆಲಸಗಾರರು ಕೆಲವು ಸಂದರ್ಭದಲ್ಲಿ ಸ್ವಂತ ಭೂಮಿಯನ್ನು ಹೊಂದಿದ್ದರು. ಇವರು ತಮ್ಮ ಪರಿಪೂರ್ಣ ಜೀವನ ನಡೆಸಲು ಅಸಾಧ್ಯವಾಗಿದ್ದರಿಂದಲೇ ಈ ಮಠಗಳನ್ನು ಅವಲಂಬಿಸಿರುತ್ತಾರೆಯೇ ಹೊರತು ಭಾವನಾತ್ಮಕತೆ ಯಿಂದಾಗಲೀ, ತನ್ನ ಸಮುದಾಯದ ಮಠ ಉದ್ಧಾರವಾಗಲೆಂದಾಗಲೀ ಅಥವಾ ಭಕ್ತಿಯ ಅತಿರೇಖ ಗಳಿಂದಾಗಲೀ ಅಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಆದರೆ ಮಠದ ಒಕ್ಕಲುತನದಲ್ಲಿ ನಿರಂತರ ವಾಗಿ ದುಡಿಯುವ ಆಳುಗಳ 'ಯೋಗಕ್ಷೇಮ'ವನ್ನು ಮಠಗಳು ನೋಡಿಕೊಳ್ಳುತ್ತಿದ್ದವು. ತಂದೆ ತಾಯಿಗಳ ಅನಾರೋಗ್ಯ, ಹೆಂಡತಿ ಮಕ್ಕಳ ರೋಗ ರುಜಿನ, ಮಕ್ಕಳ ವಿದ್ಯಾಭ್ಯಾಸ ಇಂತಹ ತುರ್ತು ಸಂದರ್ಭಗಳಲ್ಲಿ ಮಠಗಳು ದುಡಿಯುವ ಆಳುಗಳಿಗೆ ಸಾಲವನ್ನು ನೀಡುತ್ತಿದ್ದವು. ಕೆಲವೊಮ್ಮೆ ಶ್ರಮಕ್ಕೆ ಪ್ರತಿಫಲವಾಗಿ ಬೇರಿನ್ನೇನಾದರೂ ವಸ್ತುರೂಪದಲ್ಲಿ ಸಹಾಯ ಮಾಡುತ್ತಿದ್ದವು. ಹೀಗಾಗಿ, ತಾವು ಪ್ರತಿಫಲವಾಗಿ ಪಡೆಯುತ್ತಿರುವ ಊಟ, ವಸತಿ, ಬಟ್ಟೆ ಸಂಭಾವನೆ, ಇವುಗಳಿಂದಾಗಿ ಇವರು ಯಾವಾಗಲೂ ಮಠಗಳಿಗೆ ಹತ್ತಿರವಾಗಿದ್ದು, ಮಠಗಳ ಒಕ್ಕಲುತನದ ಕೆಲಸ ಇಡೀ ವರ್ಷ ನಡೆಯಲು ಸಹಾಯಕವಾಗಿದ್ದರು. ಇಲ್ಲಿ ದುಡಿಯುವ ಕೃಷಿಕರಿಗೆ ಯಾವ ಕಾಲಕ್ಕೂ ವಿಶ್ರಾಂತಿ ಇರದಂತೆ ಕಾಲದ ಮಿತಿ ಇಲ್ಲದೆ ದುಡಿಯುತ್ತಿದ್ದರು.

ಸಮಾಜದಲ್ಲಿ ದುರ್ಬಲರ, ನಿರಾಶ್ರಿತರ ಬದುಕನ್ನು ಹಸನುಗೊಳಿಸುವ ಉದ್ದೇಶದಿಂದ ಕರ್ನಾಟಕ ಸರಕಾರವು ಕೈಗೊಂಡ ಭೂಸುಧಾರಣ ನೀತಿಯಲ್ಲಿ ಉಳುವವನೇ ಭೂಮಿಯ ಒಡೆಯ ಎಂಬ ಕಾಯಿದೆಯ ಜಾರಿಯಿಂದಾಗಿ ಸಹಸ್ರಾರು ಎಕರೆ ಮಠದ ಭೂಹಿಡುವಳಿಗಳು ಗೇಣಿದಾರರ ಪಾಲಾದವು.

ಇದಕ್ಕೆ ಚಿತ್ರದುರ್ಗದ ಮುರುಘಮಠ ಮತ್ತು ಸಿರಿಗೆರೆಯ ತರಳಬಾಳು ಮಠ ಹೊರತಾಗಿರಲಿಲ್ಲ. ಮಠದ ಭೂಹಿಡುವಳಿಗಳ ಮೇಲೆ, ಬಲವಾದ ಹೊಡೆತವನ್ನು ಕೊಟ್ಟಿತು. ಇದರಲ್ಲಿ ಬಡವರಿಗೆ ಬದಲಾಗಿ ಶ್ರೀಮಂತರೇ ಹೆಚ್ಚು ಅನುಕೂಲ ಪಡೆದಿದ್ದಾರೆ. ಏಕೆಂದರೆ ಮಠಕ್ಕೆ ಬಿಟ್ಟ ಭೂಹಿಡುವಳಿಗಳನ್ನು ಪುನಃ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಕೆಲವೊಂದು ಉದಾಹರಣೆಗಳಲ್ಲಿ ಮಾತ್ರ ಗೇಣಿದಾರರ ಪಾಲಾಗಿರುವುದು ತಿಳಿಯುತ್ತದೆ.[೨೨]

ಮಠಗಳೊಂದಿಗಿನ ಸಮುದಾಯದ ಸಂಬಂಧಗಳ ವಿಶ್ಲೇಷಣೆ

ಚಿತ್ರದುರ್ಗ ಪ್ರದೇಶದ ಎರಡು ಪ್ರಮುಖ ಮಠಗಳಾಗಿರುವ ಸಿರಿಗೆರೆಯ ತರಳಬಾಳು ಮಠ ಮತ್ತು ಚಿತ್ರದುರ್ಗ ಮುರುಘಮಠ ಈ ಚಿತ್ರದುರ್ಗ ಪ್ರದೇಶದ ಎಲ್ಲಾ ಸಮುದಾಯದೊಂದಿಗೆ ಭಾವನಾತ್ಮಕವಾದ ಸಂಬಂಧವನ್ನು ಇಟ್ಟುಕೊಂಡಿವೆ. ಈ ಎಲ್ಲಾ ಸಮುದಾಯಕ್ಕೂ ಅನ್ವಯವಾಗುವ ಸಾಮಾಜಿಕ ಕಾರ್ಯಕ್ರಮಗಳನ್ನು ೨೦ನೇ ಶತಮಾನದ ಪ್ರಾರಂಭದಿಂದಲೂ ಮಾಡಿಕೊಂಡು ಬಂದಿವೆ. ಅವುಗಳಲ್ಲಿ ಕೆಲವನ್ನು ಹೀಗೆ ಗಮನಿಸಬಹುದು.

೧. **ಕೌಟುಂಬಿಕ ವ್ಯಾಜ್ಯಗಳ ಪರಿಹಾರ :** ತರಳಬಾಳು ಮಠ ಮತ್ತು ಚಿತ್ರದುರ್ಗದ ಮುರುಘಮಠಗಳು ಶತಮಾನಗಳಿಂದಲೂ ಸಮಾಜದಲ್ಲಿ ಶಾಂತಿ, ನೆಮ್ಮದಿಯನ್ನು ಕಾಪಾಡಲು ಗ್ರಾಮೀಣ ಪ್ರದೇಶಗಳಲ್ಲಿ ಪರಂಪರೆಯಿಂದ ಬಂದ ಆಚಾರ, ವಿಚಾರಗಳ ಮೂಲಕ ನ್ಯಾಯಪದ್ಧತಿಯನ್ನು ಅನುಸರಿಸಿ ಈ ಪ್ರದೇಶದ ಎಲ್ಲಾ ಸಮುದಾಯದ ಜನರ ಸಮಸ್ಯೆಗಳನ್ನು ಬಗೆಹರಿಸಿವೆ. ಚಿತ್ರದುರ್ಗದ ಮುರುಘಮಠದಲ್ಲಿ ಈ ಮಠದ ಭಕ್ತರು ಯಾವುದಾದರೂ ಒಂದು ವಿಷಯವನ್ನು, ಮಹಾ ಸಂಸ್ಥಾನದ ಇತ್ಯರ್ಥಕ್ಕಾಗಿ ತಂದರೆ ಅದನ್ನು ಚರಮೂರ್ತಿಗಳ, ಏಜೆಂಟರು ಸೇರಿ ಮೊದಲು ವಿಮರ್ಶೆ ಮಾಡುತ್ತಿದ್ದರು. ಕೊನೆಯ ದಾಗಿ ಮಠಾಧಿಪತಿಗಳು ತೀರ್ಪು ನೀಡುತ್ತಿದ್ದರು. ಇದಕ್ಕಾಗಿ ಸರಕಾರದ ಮಾದರಿಯ ಒಂದು ಸಿಬ್ಬಂದಿಯೂ ಇತ್ತು. ಇದರಲ್ಲಿ ಸಿಪಾಯಿ, ಜವಾನ, ಫೌಜುದಾರ, ಸುಭೇದಾರ, ಗುಮಾಸ್ತರು ಮತ್ತು ಏಜೆಂಟರು ಮೊದಲಾದವರನ್ನೊಳಗೊಂಡ ಒಂದು ನೌಕರ ವರ್ಗವಿತ್ತು. ಈ ಎರಡು ಮಠಗಳ ನ್ಯಾಯ ನೀಡುವ ವಿಧಾನ ಒಂದೇ ರೀತಿ ಇತ್ತು. ಮಠಗಳಿಗೆ ಹಳ್ಳಿಯ ಹತ್ತು ಜನರ ಸಮಕ್ಷಮ ದೂರು ಕೊಡಬೇಕಾಗಿತ್ತು. ಹೀಗೆ ಸಾರ್ವಜನಿಕವಾಗಿ ದೂರು ಕೊಡುವ ವ್ಯಕ್ತಿಯು ತಾನು ಸಮಾಜಕ್ಕೆ ಯಾವ ಕೆಡುಕನ್ನೂ ಬಯಸುವುದಿಲ್ಲ. ತನಗಾದ ಅನ್ಯಾಯವು ಪರಿಹಾರವಾಗಲಿ ಎಂದು ಮಠಾಧಿಪತಿಗಳ ಸನ್ನಿಧಿಯಲ್ಲಿ ಭಕ್ತಿಯಿಂದ ವಿನಂತಿಸಿಕೊಳ್ಳುತ್ತಿದ್ದರು. ಇದನ್ನು ಜನರೂ ಸಮರ್ಥಿಸುತ್ತಿದ್ದರು.

ಉದಾಹರಣೆಗೆ ೧೯೦೮ರಲ್ಲಿ ದಾವಣಗೆರೆಯ ಪ್ರಸಿದ್ಧ ಮನೆತನದವರಾಗಿದ್ದ ಉರೇಕುಂಡಿ ಮಲ್ಲೇಶಪ್ಪನವರ ಮನೆತನದ ವ್ಯಾಜ್ಯವನ್ನು ಮಠದಲ್ಲಿ ಬಗೆಹರಿಸಿದ್ದರು. ಚಿತ್ರದುರ್ಗದ ಮುರುಘಮಠದಲ್ಲಿ ದಾವಣಗೆರೆ, ಹರಿಹರ ನಗರಗಳ ಗೌಳಿಗರಲ್ಲಿ ಬಳಕೆ ಭೋಜನದ ಬಗ್ಗೆ ೧೯೧೮ರಲ್ಲಿ ವ್ಯಾಜ್ಯವಾಯಿತು. ಈ ವಿಷಯವನ್ನು ಎರಡು ವರ್ಷಗಳವರೆಗೆ ವಿಚಾರಣೆ ಮಾಡಿ, ಮಠದಲ್ಲಿಯೇ ವ್ಯಾಜ್ಯ ತೀರ್ಮಾನವಾಗಿತ್ತು.[೫]

ಮಠಗಳ ಗ್ರಾಮೀಣ ನ್ಯಾಯದಾನದ ಒಂದು ವಿಶಿಷ್ಟ ರೂಪವಾಗಿತ್ತು. ಇಂದಿನ ಕೋರ್ಟ್-ಕಛೇರಿಗಳು ಅಂದಿನ ರಾಜ ಪ್ರತಿನಿಧಿಗಳು ವ್ಯವಹರಿಸಲು ಸಾಧ್ಯವಾಗದ, ಹಳ್ಳಿಗಾಡಿನಲ್ಲಿ ಜನರ ನ್ಯಾಯ ನಿರ್ಣಯಿಸಲು ಸಾಕ್ಷಿ ಆಧಾರಗಳನ್ನು ಕೊಡಲಾರದ ಸ್ಥಿತಿ ಇದ್ದಾಗ ಗ್ರಾಮ ಪಂಚಾಯಿತಿಗಳು, ನ್ಯಾಯ ಪಂಚಾಯತಿಗಳು ಇಲ್ಲದಿರುವಾಗ ಅಥವಾ ನ್ಯಾಯ ಕೊಡಲು ಅಸಮರ್ಥವಾದಾಗ ಜನರು ಮಠಗಳಿಗೆ ಮೊರೆ ಹೋಗುವುದು ಸಹಜ, ಚಿತ್ರದುರ್ಗ ಪ್ರದೇಶದ ಈ ಮಠಗಳನ್ನು ಗಮನಿಸಿದರೆ ಸಹಸ್ರಾರು ಕೌಟುಂಬಿಕ ವ್ಯಾಜ್ಯಗಳನ್ನು ಸಾಮಾಜಿಕ ವಿರಸಗಳನ್ನು ಬಗೆಹರಿಸಿದ್ದಾರೆ. ಈ ಮಠಗಳಿಗೆ ದೂರು ತರುವ ಜನರು ಭೂಹಿಡುವಳಿಗಳ ಸಂಬಂಧವಾದ ಹಂಚಿಕೆಯಲ್ಲಿ ಉದ್ಭವಿಸುವ ಸಮಸ್ಯೆ ಮತ್ತು ವೈವಾಹಿಕ ಸಂಬಂಧಗಳಲ್ಲಿ ಉಂಟಾಗುವ ಕೌಟುಂಬಿಕ ಕಲಹಗಳಾಗಿದ್ದವು. ಅವುಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳಲು ಮಠಗಳ ಆಶ್ರಯವನ್ನು ಬೇಡುವುದು ಸಾಮಾನ್ಯವಾಗಿತ್ತು. ಆದರೆ ಮಠದ ಸ್ವಾಮಿಗಳು ಇಂತಹ ದೂರುಗಳನ್ನು ಚರ್ಚಿಸಿ ಸುಲಭವಾಗಿ ಬಗೆಹರಿಸುತ್ತಿದ್ದರು. ಉದಾಹರಣೆಗೆ ಸಿರಿಗೆರೆ ತರಳಬಾಳು ಮಠದಲ್ಲಿ ಬಗೆಹರಿದ ತೀರ್ಮಾನಗಳಲ್ಲಿ ೧೯೫೪ರಲ್ಲಿ ೧. ಸಿರಿಗೆರೆಯ ಗೌಡರ ಹನುಮಂತಪ್ಪನವರ ಸಹೋದರರು ತಮ್ಮ ಮನೆಯ ಪಾಲು ಹಂಚಿಕೆಯಲ್ಲಿ ಆದ ವಿವಾಹವು ಮಠದಲ್ಲಿ ಬಗೆಹರಿಯುತ್ತದೆ. ೨. ಸಿರಿಗೆರೆಯ ಬಿಳಿಜೋಡು ಬಸಪ್ಪನವರ ಭೂಸಂಬಂಧಿ ವ್ಯಾಜ್ಯವು ಮಠದಲ್ಲಿ ತೀರ್ಮಾನವಾಗುತ್ತದೆ. ೩. ಸಿರಿಗೆರೆಯ ಮೂಲೆಮನೆ ಗಂಗಮ್ಮನವರ ಭೂ ವಿವಾದವು ಮಠದಲ್ಲಿ ತೀರ್ಮಾನವಾಗುತ್ತದೆ. ನಂತರ ಇವರು ತಮ್ಮ ಭೂಹಿಡುವಳಿಗಳ ಸ್ವಲ್ಪ ಭಾಗವನ್ನು ಮಠಕ್ಕೆ ದಾನವಾಗಿ ನೀಡಿದ್ದಾರೆ.

ಇಂತಹ ಸಂದರ್ಭಗಳಲ್ಲಿ ಎರಡೂ ಕಡೆಯ ಜನರಿಗೂ ಅನ್ಯಾಯವಾಗದಂತೆ ರಾಜೀ ಸೂತ್ರವನ್ನು ಅನುಸರಿಸುತ್ತಿದ್ದರು. ಮಠಾಧಿಕಾರಿಗಳ ಎದುರಿನಲ್ಲಿ ಆಸ್ತಿಗಳ ಪಾಲು, ಹಂಚಿಕೊಳ್ಳುವುದು ಬಹು ದಿನಗಳ ರೂಢಿ. ಹಂಚಿಕೆಯ ಸಮಯದಲ್ಲಿ ಹುಟ್ಟಿಕೊಂಡ ಹಲವು ಬಗೆಯ ವಿವಾದಗಳನ್ನು ಮಠಾಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ, ಇಬ್ಬರಿಗೂ ಒಪ್ಪುವ ರೀತಿಯಲ್ಲಿ ತೀರ್ಮಾನಿಸುತ್ತಿದ್ದರು.

ಇಂತಹ ಸಂದರ್ಭಗಳಲ್ಲಿ ಕೆಲವೊಮ್ಮೆ ಮಠದ ಹಿರಿಯಸ್ವಾಮಿಗಳ ಪ್ರತಿನಿಧಿಯೊಬ್ಬರು ಹಾಜರಿರುತ್ತಾರೆ. ರಾಜೀ ಮಾಡಿಕೊಂಡವರು ಆ ಸಂದರ್ಭದಲ್ಲಿ ಆದ ತೀರ್ಮಾನಕ್ಕೆ ಯಾವುದೇ ರೀತಿಯ ಭಂಗ ತರಲಾರದೆ ಅದಕ್ಕೆ ಬದ್ಧವಾಗಿ ನಡೆದುಕೊಳ್ಳುತ್ತಿದ್ದರು. ಅದೇ ರೀತಿ ಮಠಗಳು ಎಲ್ಲಾ ಸಮುದಾಯದ ಒಳಿತನ್ನು ಗಮನದಲ್ಲಿಟ್ಟುಕೊಂಡು ನ್ಯಾಯ ನಿರ್ಣಯಿಸುತ್ತಿದ್ದವು.[೨೯] ಹಾಗೇ ಮಠಗಳು ಪ್ರತಿನಿಧಿಸುವ ಸಮುದಾಯದ ಜೊತೆಗೆ ಇತರ ಸಮುದಾಯದ ಜನರಿಗೂ ಅನುಕೂಲವಾಗುವ ಕೆಲವು ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುವ ಮೂಲಕ ಸಮುದಾಯದ ಎಲ್ಲರನ್ನು ಒಳಗೊಂಡಿದ್ದವು.

೧. ಚಿತ್ರದುರ್ಗ ಮುರುಘಮಠವು ಹಲವು ಯೋಜನೆಗಳನ್ನು ಕೈಗೊಂಡಿದೆ. ಅದರಲ್ಲಿ ಶ್ರೀ ಬಸವೇಶ್ವರ ಗ್ರಾಮ ವಿಕಾಸ ವೇದಿಕೆ, ಶರಣ ಸ್ಮರಣೋತ್ಸವ, ಎಸ್.ಜೆ.ಎಂ. ಕ್ರೀಡಾ ಹಾಗೂ ಸಾಂಸ್ಕೃತಿಕ ಸಂಘದ ಮೂಲಕ ತೋಟಗಾರಿಕೆ, ಹೈನುಗಾರಿಕೆ, ಕೃಷಿ ಸಂಬಂಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಎಸ್.ಜೆ.ಎಂ.ಖಾದಿ ಗ್ರಾಮೋದ್ಯೋಗ ಸಹಕಾರ ಸಂಘದ ಮೂಲಕ ನಿರುದ್ಯೋಗಿ ಯುವಕರಿಗೆ ತರಬೇತಿ ನೀಡಲಾಗುತ್ತಿದೆ.[೩೦]

೨. ಸಿರಿಗೆರೆಯ ತರಳಬಾಳು ಬೃಹನ್ಮಠವು ಸಹ ಇದೇ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಸಮಾಜದ ಎಲ್ಲಾ ಸಮುದಾಯದ ಜನರಿಗೂ ಸೇರಬಹುದಾದ ಗ್ರಾಮೀಣ ಜಾನಪದ ಕಲೆಯನ್ನು ಪುರಸ್ಕರಿಸುವ ದೃಷ್ಟಿಯಿಂದ ಪ್ರತಿ ವರ್ಷ ಮಠದಲ್ಲಿ ನಡೆಯುವ ವೀರಗಾಸೆ ಸ್ಪರ್ಧೆ, ಭಜನ ಸ್ಪರ್ಧೆಗಳಲ್ಲಿ ನಾಡಿನ ಉದ್ದಗಲದಿಂದ ಬಂದ ೨೦೦ಕ್ಕೂ ಹೆಚ್ಚು ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸುತ್ತವೆ. ೧೯೪೮ರಲ್ಲಿ ಸ್ಥಾಪಿತವಾದ ತರಳಬಾಳು ಕಲಾ ಸಂಘದ ಮೂಲಕ ಮರಣವೇ ಮಹಾನವಮಿ, ವಿಶ್ವಬಂಧು ಮರುಳಸಿದ್ಧ, ಶರಣಸತಿ ಲಿಂಗಪತಿ ಎಂಬ ಇತರ ನಾಟಕಗಳು ಶರಣತತ್ವವನ್ನು ಪ್ರಚಾರ ಮಾಡುವುದರ ಜೊತೆಗೆ ಸಮುದಾಯದ ಜನರ ಗಮನವನ್ನು ಸೆಳೆದಿದೆ. ಇದೇ ಮಠದ ತರಳಬಾಳು ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು ಪ್ರಾರಂಭಿಸುವುದರ ಮೂಲಕ ಗ್ರಾಮೀಣ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಹಾಕಿಕೊಂಡಿದೆ. ಅದರಲ್ಲಿ ತರಳಬಾಳು ಸಸಿ ಯೋಜನೆ, ಅರಣ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಒಂದು ಸಾವಿರ ಎಕರೆ ಭೂ ಪ್ರದೇಶವನ್ನು ಅರಣ್ಯೀಕರಣಗೊಳಿಸಿದ್ದಾರೆ. ಗೋಮಾಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಅರಣ್ಯ ಬೆಳೆಸಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರವು ೧೯೮೭ರಲ್ಲಿ 'ಇಂದಿರಾ ಪ್ರಿಯದರ್ಶಿನಿ ವೃಕ್ಷ

ಮಿತ್ರ' ಪ್ರಶಸ್ತಿ ನೀಡಿ ಗೌರವಿಸಿದೆ. 'ನಿರ್ಮಲ ಕರ್ನಾಟಕ' ಯೋಜನೆಯನ್ನು ಕರ್ನಾಟಕ ಸರ್ಕಾರದ ನೆರವಿನಿಂದ ೨೪೬೬ ಶೌಚಾಲಯಗಳನ್ನು ನಿರ್ಮಿಸಿ ಕೊಡುವುದರ ಮೂಲಕ ಎಲ್ಲಾ ಸಮುದಾಯದ ಜನರು ಗ್ರಾಮೀಣ ಪರಿಸರದ ಸ್ವಚ್ಛತೆಯನ್ನು ಕಾಯ್ದುಕೊಳ್ಳುವಂತೆ ಜನರಲ್ಲಿ ಅರಿವು ಮೂಡಿಸುವಲ್ಲಿ ಮಠವು ಯಶಸ್ವಿಯಾಗಿದೆ. ಇದೇ ರೀತಿ ಔಷಧಿ ಸಸ್ಯ ಕ್ಷೇತ್ರ, ಮಹಿಳಾ ಸಾಲ ಮತ್ತು ಉಳಿತಾಯ ತರಬೇತಿ ಕೇಂದ್ರಗಳ ಮೂಲಕ ಮಹಿಳೆಯರನ್ನು ಸ್ವಾವಲಂಬಿಗಳಾಗುವಂತೆ ಮಾಡಿದ್ದಾರೆ. ತರಳಬಾಳು ವಿಜ್ಞಾನ ಕೇಂದ್ರವು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಹಯೋಗದೊಂದಿಗೆ ವಸ್ತು ಪ್ರದರ್ಶನವನ್ನು ಗ್ರಾಮೀಣ ಪ್ರದೇಶದಲ್ಲಿ ನಡೆಸುವುದರ ಮೂಲಕ ಗ್ರಾಮಾಂತರ ಜನರಲ್ಲಿಯೂ ವೈಜ್ಞಾನಿಕ ಅರಿವು ಮೂಡಿಸಿದೆ.[೩೧]

೩. ಪ್ರಕೃತಿ ವಿಕೋಪದಿಂದಾಗಿ ಬಂದ ಬರಗಾಲ, ಅತಿವೃಷ್ಟಿ, ಮಹಾಪೂರ, ಭೂಕಂಪ ಇತ್ಯಾದಿಗಳಿಂದಾಗಿ ಕಷ್ಟದಲ್ಲಿ ಸಿಕ್ಕಿರುವ ಜನರಿಗೆ ಮಠಗಳು ಸಹಾಯಕ್ಕೆ ಬಂದ ಅನೇಕ ಉದಾಹರಣೆಗಳಿವೆ. ೧೯೮೬ರಲ್ಲಿ ಕರ್ನಾಟಕದಲ್ಲಿ ಬರಗಾಲದ ಪ್ರಯುಕ್ತ ತರಳಬಾಳು ಮಠವು 'ತರಳಬಾಳು ಹುಣ್ಣಿಮೆ'ಯನ್ನು ರದ್ದುಗೊಳಿಸಿ ಬರಪರಿಹಾರ ಕಾರ್ಯವನ್ನು ನಡೆಸಿತು. ಈ ಸಂದರ್ಭದಲ್ಲಿ ಹರಿಹರ, ದಾವಣಗೆರೆ, ಭದ್ರಾವತಿ, ಹೊನ್ನಾಳಿ, ಚನ್ನಗಿರಿ, ಶಿವಮೊಗ್ಗ, ಚಿತ್ರದುರ್ಗ, ಹೊಳಲ್ಕೆರೆ ಮತ್ತು ಹೊಸದುರ್ಗ ತಾಲೂಕಿನ ರೈತರು ಮಠಕ್ಕೆ ಬರಪರಿಹಾರವಾಗಿ ಮೇವು, ದವಸ-ಧಾನ್ಯ ಹಣವನ್ನು ಕೊಟ್ಟಿದ್ದರು. ಅಂದು ರೈತರು ನೀಡಿದ ೪೦೭ ಟ್ರಾಕ್ಟರ್ ದನದ ಮೇವು, ೧೩೯೭ ಚೀಲ ದವಸವನ್ನು ಮಠಕ್ಕೆ ನೀಡಿದ್ದರು. ಹೀಗೆ ಸಂಗ್ರಹವಾದ ದವಸ, ಮೇವು, ಹಣವನ್ನು ಬರಪೀಡಿತ ಪ್ರದೇಶಗಳಿಗೆ ಹಂಚಿದರು. ಇದೇ ರೀತಿ ಮುರುಘಮಠವು ಭೂಕಂಪಪೀಡಿತ ಮಹಾರಾಷ್ಟ್ರಕ್ಕೆ ಧನಸಹಾಯ ಮಾಡಿದ್ದರು.

೪. ಮಠಗಳು ದಲಿತವರ್ಗದ ಸುಧಾರಣೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ಸಾಮೂಹಿಕ ವಿವಾಹಗಳಲ್ಲಿ ಹರಿಜನ, ಗಿರಿಜನರಿಗೆ ವಿವಾಹಗಳನ್ನು ಏರ್ಪಡಿಸಿಕೊಳ್ಳಲು ಅವಕಾಶ ಕಲ್ಪಿಸಿವೆ. ಮಠಗಳ ಗುರುಗಳು ಹರಿಜನ ಕೇರಿಗೆ ಹೋಗಿ ಅವರ ಸಮಸ್ಯೆಗಳನ್ನು ಗಮನಿಸಿದ್ದಾರೆ. ದಲಿತ ವರ್ಗದೊಂದಿಗೆ ಸಾಮೂಹಿಕ ಭೋಜನವನ್ನು ಏರ್ಪಡಿಸಿದ್ದಾರೆ. ಎರಡು ಮಠಗಳು ಮದ್ಯಪಾನ ನಿಷೇಧವನ್ನು ಜಾರಿಗೆ ತರಬೇಕೆಂದು ಕರ್ನಾಟಕ ಸರ್ಕಾರದ ಮೇಲೆ ಒತ್ತಾಯ ಹೇರಿವೆ. ಕೆಲವು ಗ್ರಾಮಗಳಲ್ಲಿ ಮಠದ ಸ್ವಾಮಿಗಳು ಪಾದಯಾತ್ರೆಯನ್ನು ಕೈಗೊಂಡು ಮದ್ಯದಂಗಡಿಗಳನ್ನು ಮುಚ್ಚಿಸಿದ್ದಾರೆ.

ತರಳಬಾಳು ಶಿವಮೂರ್ತಿ ಸ್ವಾಮಿಗಳು ಉಪವಾಸ ಕುಳಿತು, ಕರ್ನಾಟಕ ಸರ್ಕಾರಕ್ಕೆ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ರ್ಗಜರಲ್ಲಿ ಮನವಿ ಪತ್ರವನ್ನು ಸಲ್ಲಿಸಿದ್ದರು.

೫. ಹಾವೇರಿ, ದಾವಣಗೆರೆ ಹಾಗೂ ಚಿತ್ರದುರ್ಗದಲ್ಲಿ ನಡೆದ ಕೋಮುಗಲಭೆಯಲ್ಲಿ ಈ ಮಠಗಳು ಭಾವೈಕ್ಯತಾ ಪಾದಯಾತ್ರೆಯನ್ನು ಕೈಗೊಂಡು ಎಲ್ಲಾ ಸಮುದಾಯದ ಜನರು ಶಾಂತಿಯಿಂದ ಇರುವಂತೆ ನೋಡಿಕೊಂಡಿದ್ದರು. ಮುರುಘಮಠದ ಶಿವಮೂರ್ತಿ ಮುರಘರಾಜೇಂದ್ರ ಸ್ವಾಮಿಗಳು ದಾವಣಗೆರೆಯ 'ಈದಮಿಲಾದ್' ಕಾರ್ಯಕ್ರಮದಲ್ಲಿ ಭಾಗವಹಿಸಿ ಎಲ್ಲಾ ಧರ್ಮದ ತತ್ವ ಒಂದೇ ಎಂಬ ವಿಚಾರವನ್ನು ಪ್ರತಿಪಾದಿಸಿದರು. ಹಾಗೆಯೇ ಮೈಸೂರು ಜಿಲ್ಲೆಯ ಬದನವಾಳು, ಉಮ್ಮತ್ತೂರು ಗ್ರಾಮಗಳಲ್ಲಿ ಸವರ್ಣೀಯರು ಮತ್ತು ದಲಿತರ ನಡುವಿನ ದ್ವೇಷವನ್ನು ಸಾಮರಸ್ಯದಿಂದ ಬಗೆಹರಿಸಿದರು.

೬. ಈ ಎರಡು ಮಠಗಳು ಕಲ್ಯಾಣ ಮಂಟಪವನ್ನು ಕಟ್ಟಿಸಿ ಎಲ್ಲಾ ಸಮುದಾಯದವರು ವಿವಾಹ ಹಾಗೂ ಸಾರ್ವಜನಿಕ ಸಮಾರಂಭಗಳನ್ನು ಏರ್ಪಡಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದಾರೆ. ಅದರಲ್ಲಿ ತರಳಬಾಳು ಮಠದ ವತಿಯಿಂದ ನಡೆಯುತ್ತಿರುವ ಬೆಂಗಳೂರಿನ ತರಳಬಾಳು ಸಾಂಸ್ಕೃತಿಕ ಕೇಂದ್ರವು ಅತ್ಯಾಧುನಿಕ ಭವ್ಯ ವಾಸ್ತುಶಿಲ್ಪದಿಂದ ಕೂಡಿದ ಕಟ್ಟಡವಾಗಿದೆ. ಅದೇ ರೀತಿ ಚಿತ್ರದುರ್ಗದ ಮುರುಘರಾಜೇಂದ್ರ ಮಠದವತಿಯಿಂದ ನಡೆಯುವ ಬೆಂಗಳೂರಿನಲ್ಲಿರುವ ಮುರುಘರಾಜೇಂದ್ರ ಸಮುದಾಯ ಭವನವು ಸಹ ಎಲ್ಲಾ ಸಮುದಾಯದವರೆಗೂ ತೆರೆದ ಬಾಗಿಲಿನಂತಿದೆ. ಇವುಗಳಲ್ಲದೆ ಮಠಗಳು ಎಲ್ಲಾ ಸಮುದಾಯದ ಜನರನ್ನು ತಮ್ಮತ್ತ ಆಕರ್ಷಿಸಿಕೊಂಡು ಸಾಮಾಜಿಕ ಕಾರ್ಯಗಳಲ್ಲಿ ಜನರು ಭಾಗವಹಿಸುವಂತೆ ನೋಡಿಕೊಂಡಿವೆ.[೩೮]

೭. ತರಳಬಾಳು ಮಠವು ಜಲಾನಯನ ಪ್ರದೇಶಗಳ ಕಾರ್ಯಕ್ರಮದಡಿಯಲ್ಲಿ 'ಜಲಾನಯನ ಸಿರಿ' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅಳಗವಾಡಿ ಗ್ರಾಮದ ಹತ್ತಿರ ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ನೆರವಿನಿಂದ ಮೂರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಚಿಕ್ಕ ಡ್ಯಾಂ ಕಟ್ಟುವುದರ ಮೂಲಕ ಚಿತ್ರದುರ್ಗದ ಇತರ ಪ್ರದೇಶದ ಕೃಷಿಕರಿಗೆ ಅಂತರ್ಜಲವನ್ನು ಉಳಿಸಿಕೊಳ್ಳುವುದರಲ್ಲಿ ಜನರು ಅನುಸರಿಸಬಹುದಾದ ಕಾರ್ಯಕ್ರಮಕ್ಕೆ ಮಠವು ಮಾರ್ಗದರ್ಶಿಯಾಗಿದೆ. ಹಾಗೆಯೇ ಹೆಚ್ಚುತ್ತಿರುವ ಜನಸಂಖ್ಯೆಯನ್ನು ತಡೆಯುವುದಕ್ಕೋಸ್ಕರ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿಯೂ ತನ್ನನ್ನು ತೊಡಗಿಸಿಕೊಂಡು ಜನರಲ್ಲಿ ಅರಿವು ಮೂಡಿಸಿದೆ.

೮. ಚಿತ್ರದುರ್ಗದ ಮುರುಘಮಠವು ಗ್ರಾಮೀಣ ಜನರಲ್ಲಿ ಜಾಗೃತಿಯನ್ನುಂಟುಮಾಡಲು ಹಳ್ಳಿಗಳಲ್ಲಿ ಹಲವು ಕಾರ್ಯಕ್ರಮವನ್ನು ಕೈಗೊಂಡಿದೆ. ಅವುಗಳಲ್ಲಿ ಗ್ರಾಮಗಳನ್ನು ದತ್ತು ಗ್ರಾಮವನ್ನಾಗಿ ಸ್ವೀಕರಿಸಿ ಅದರ ಸರ್ವತೋಮುಖ ಪ್ರಗತಿಗೆ ಮಠವು ಶ್ರಮಿಸಿದೆ. ಎಸ್.ಜೆ.ಎಂ.ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಮೂಲಕ ರಕ್ತದಾನ ಶಿಬಿರ, ವಿವಿಧ ಕ್ರೀಡಾಕೂಟಗಳ ಸಂಘಟನೆ ಆಡಳಿತದಲ್ಲಿ ಕನ್ನಡ ತರಬೇತಿ ಶಿಬಿರ, ಯುವ ಬರಹಗಾರರ ಮತ್ತು ಕಲಾವಿದರ ಶಿಬಿರ, ರಾಜ್ಯಮಟ್ಟದ ಯುವಜನ ಮೇಳ ಮುಂತಾದವುಗಳನ್ನು ನಡೆಸುವುದರ ಮೂಲಕ ಸಮುದಾಯದ ಸಂಘಟನೆಯಲ್ಲಿ ಮಠ ಪ್ರಮುಖ ಪಾತ್ರವಹಿಸಿದೆ.[೩೩]

ಹೀಗಾಗಿ ಈ ಎರಡೂ ಮಠಗಳು ಪ್ರಗತಿಶೀಲರು, ವಿಚಾರವಾದಿಗಳು ಆಗಿದ್ದಾರೆ. ಈ ಮಠಗಳು ಕೈಗೊಂಡ ಹಲವು ಕಾರ್ಯಕ್ರಮಗಳು ಸಮಾಜದ ಎಲ್ಲಾ ವರ್ಗದ ಜನರನ್ನು ತಲುಪಿವೆ. ಬಸವಣ್ಣ ನವರ ಆದರ್ಶದ ದಾರಿಯಲ್ಲಿ ನಡೆದು, ಸಮಾಜದ ಸರ್ವತೋಮುಖ ಅಭಿವೃದ್ಧಿಯೇ ಮಠದ ಅಭಿವೃದ್ಧಿ ಎಂಬ ತಾತ್ವಿಕ ವಿಚಾರವನ್ನು ಒಳಗೊಂಡಿವೆ. ಇತರ ಸಮುದಾಯದ ಜನರು ಮಠಗಳೊಂದಿಗೆ ಸೌಹಾರ್ದಯುತವಾಗಿ ನಡೆದುಕೊಂಡಿರುವುದು ಕಂಡುಬರುತ್ತದೆ.

ಭೂ ಒಡೆತನ ಹೊಂದಿದ ಮತ್ತು ಹೊಂದದ ಸಮುದಾಯಗಳ ಸಂಕೀರ್ಣ ಸಂಬಂಧಗಳ ಅಧ್ಯಯನ

ಚಿತ್ರದುರ್ಗ ಪ್ರದೇಶವು ಪ್ರಾಚೀನ ಕಾಲದಿಂದಲೂ ಕೃಷಿ ಆಧರಿಸಿದ ಅರ್ಥವ್ಯವಸ್ಥೆಯುಳ್ಳ ಸಮಾಜವನ್ನು ಹೊಂದಿದೆ. ಕೃಷಿಕ ವೃತ್ತಿಯು ಗ್ರಾಮ ಸಮಾಜಗಳ ವಿಸ್ತರಣೆ ಹಾಗು ಹೊಸ ಭೂಮಿಯಲ್ಲಿ ನೆಲೆಸುವಿಕೆಯನ್ನು ಅವಲಂಬಿಸಿದೆ. ಭೂಮಿಯ ಮಾಲೀಕರು ಯಾರು, ಮತ್ತು ಅದನ್ನು ಸಾಗುವಳಿ ಮಾಡುವರು ಯಾರು, ಹಾಗೂ ಕೃಷಿ ಉತ್ಪನ್ನದ ಲಾಭಾಂಶವನ್ನು ಪಡೆಯುವವರು ಯಾರು, ಎಂಬುದನ್ನು ಖಚಿತಗೊಳಿಸುವ ಭೂಮಾಲೀಕತ್ವದ ಪ್ರಶ್ನೆಯಾಗಿದೆ. ಆದರೂ ಉತ್ಪಾದನಾವ್ಯವಸ್ಥೆಯಲ್ಲಿ ಅದು ಸಮರ್ಪಕವಾಗಿ ಹಂಚಿಕೆಯಾಗದೆ ಪ್ರಾಚೀನ ಕಾಲದಿಂದಲೂ ಉಳಿದು ಬಂದಿದೆ. ಹಾಗೇ ವಿಜಯನಗರ ಸಾಮ್ರಾಜ್ಯದ ಕಾಲದಿಂದಲೂ ಸಾಮ್ರಾಟರು ತಮ್ಮ ಸಾಮ್ರಾಜ್ಯದ ಅಭಿವೃದ್ಧಿಗೋಸ್ಕರ ಕಂದಾಯದ ಲಾಭಾಂಶವನ್ನು ಮಾತ್ರ ಪಡೆದು ಹೆಚ್ಚು, ಹೆಚ್ಚು ಭೂಹಿಡುವಳಿಗಳನ್ನು ಕೃಷಿಗೊಳಪಡಿಸಲು ಪ್ರಯತ್ನಿಸಿದ್ದರು.[೩೪]

೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯ ಪತನಾನಂತರ ಚಿತ್ರದುರ್ಗದ ಪಾಳೆಯಗಾರರು ಸ್ವತಂತ್ರರಾದರು. ತಮ್ಮ ಪ್ರದೇಶದ ಕೃಷಿ, ಕಸುಬುಗಾರಿಕೆ, ವಾಣಿಜ್ಯ ಮುಂತಾದ ಆರ್ಥಿಕ ಚಟುವಟಿಕೆಗಳ ಬೆಳವಣಿಗೆಯನ್ನು ಸದೃಢೀಕರಣಗೊಳ್ಳುವಂತೆ ಮಾಡಿ ಆಡಳಿತಕ್ಕೆ ಬೇಕಾದ ಆದಾಯ ಪಡೆಯುತ್ತಿದ್ದರು. ಈ ನಾಯಕ ಅರಸರು ತಮ್ಮನ್ನು ಸಾಪೇಕ್ಷವಾಗಿ ಸ್ವತಂತ್ರ ಆಡಳಿತಾಧಿಕಾರಿಗಳೆಂದು ಭಾವಿಸಿಕೊಂಡು ನೀತಿ ನಿಯಮಗಳನ್ನು ತಾವೇ ಜಾರಿಗೆ ತಂದರು. ಹೀಗಾಗಿ ಸ್ಥಳೀಯ ಸಂಸ್ಥಾನಗಳನ್ನು ಸಂಘಟಿಸಿ ಅಭಿವೃದ್ಧಿಪರವಾದ ಆಲೋಚನೆಗಳನ್ನು ಮಾಡಿ ಈ ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಚಟುವಟಿಕೆಗಳನ್ನು ಪೋಷಿಸಿದರು.[೩೫] ಈ ಸಾಮಂತೀಕರಣ ವ್ಯವಸ್ಥೆಯಲ್ಲಿ ಕೃಷಿ ಪ್ರಮುಖ ಪಾತ್ರ ವಹಿಸಿತು. ಅಂದು ಭೂಕಂದಾಯ ಪ್ರಮುಖ ರಾಜ್ಯಾದಾಯವಾಗಿತ್ತು. ಹೀಗಾಗಿ ಜಮೀನ್ದಾರಿ ಪದ್ಧತಿಯು ಈ ಕಾಲದಲ್ಲಿ ಇತ್ತು ಎಂಬುದು ಸ್ಪಷ್ಟವಾಗುತ್ತದೆ. ಆದರೂ ಭೂ ಸಂಬಂಧಗಳಲ್ಲಿ ಖಾಸಗೀ ಭೂಒಡೆತನ ಜಾರಿಯಲ್ಲಿ ಇತ್ತು. ಭೂಹಿಡುವಳಿದಾರರು ತಾವು ಬೆಳೆದ ಬೆಳೆಯಲ್ಲಿ ಅರ್ಧ ಭಾಗವನ್ನು ಆ ಸರ್ಕಾರಕ್ಕೆ ಸಲ್ಲಿಸಬೇಕಾಗಿತ್ತು. ಹಲವು ವರ್ಗದ ಕಸುಬುದಾರರು ಭೂಮಾಲೀಕರನ್ನು ಅವಲಂಬಿಸಿರಬೇಕಾಗಿತ್ತು.[೩೬] ಚಿತ್ರದುರ್ಗದ ಪಾಳೆಯಗಾರರ ಕಾಲದಲ್ಲಿ ಅರಮನೆಯಲ್ಲಿ ಬಿಟ್ಟಿ ದುಡಿಯುತ್ತಿದ್ದ ಬಗ್ಗೆ ವಿವರವಿದೆ. ಗ್ರಾಮದ ಮಾದಿಗರು ಖಾಸಾ ಕುದುರೆಗಳಿಗೆ ದಿನ ಒಂದಕ್ಕೆ ಹಸಿ ಹುಲ್ಲು ಹೊರೆ ಪ್ರಕಾರ ಸರದಿ ಮೇರೆಗೆ ತರಬೇಕಿತ್ತು. ಅದೇ ರೀತಿ ಗ್ರಾಮದಿಂದ ಬಂದ ಹಜಾಮರುಗಳು ಸರದಿ ಮೇರೆಗೆ ಕುದುರೆಗಳ ಮೈಕೂದಲನ್ನು ಕತ್ತರಿಸಬೇಕಿತ್ತು. ಜಾಡರು ಮಗ್ಗ ಒಂದಕ್ಕೆ ಒಂದು ನೂಲು ಹಗ್ಗದ ಪ್ರಕಾರ ಪ್ರತಿವರ್ಷವು ಅರಮನೆಗೆ ಕೊಡಬೇಕಿತ್ತು.[೩೭] ಈ ಮೇಲಿನ ಅಂಶಗಳು ಸಮಾಜದಲ್ಲಿ ಸಾಮಾನ್ಯವಾಗಿ ಕೆಳವರ್ಗದಿಂದ ಬಂದ ಎಲ್ಲಾ ಸಮುದಾಯಗಳು ಅರಸರಿಗೆ ಹಾಗೂ ಪ್ರಬಲ ಭೂಮಾಲೀಕರಿಗೆ ಬಿಟ್ಟಿ ದುಡಿಯುತ್ತಿದ್ದರೆಂಬ ವಿಚಾರವನ್ನು ಸಮರ್ಥಿಸುತ್ತದೆ. ಅಲಕ್ಷಿತ ಸಮುದಾಯವು ಚಿತ್ರದುರ್ಗ ಪ್ರದೇಶದಲ್ಲಿ ಸ್ಪಷ್ಟವಾಗಿ ಮೇಲ್ವರ್ಗದ ಸಮುದಾಯವನ್ನು ಅವಲಂಬಿಸಿ ಜೀವನ ಸಾಗಿಸಿರುವುದನ್ನು ಲಾವಣಿಗಳಲ್ಲಿ, ಜಾನಪದ ಕಥೆಗಳಲ್ಲಿ ಮತ್ತು ಪರೋಕ್ಷವಾಗಿ ತ.ರಾ. ಸುಬ್ಬರಾವ್‌ರವರ ಕಾದಂಬರಿ ಮಾಲೆಗಳಲ್ಲಿಯೂ ಅಲ್ಲಲ್ಲಿ ಗುರುತಿಸಬಹುದು.

ಜೀತ ಪದ್ಧತಿ : ಡಾ. ಬಿ.ಆರ್.ಅಂಬೇಡ್ಕರ್‌ರವರು ಹಳ್ಳಿಗಳನ್ನು ಜಾತೀಯತೆಯ ಬಿಲಗಳೆಂದು ಕರೆದಿದ್ದರು. ಇದು ಚಿತ್ರದುರ್ಗ ಪ್ರದೇಶದ ಗ್ರಾಮಗಳಿಗೂ ಅನ್ವಯಿಸುವ ಮಾತು, ಜಾತಿಯ ತಾರತಮ್ಯಗಳು ವ್ಯಕ್ತಿಯಲ್ಲಿ ಶ್ರೇಷ್ಠತೆ ಮತ್ತು ಕನಿಷ್ಠತೆಗಳನ್ನುಂಟುಮಾಡಿತು ಹಾಗು ಸಾಮಾಜಿಕ

ಅಂತರವನ್ನು ಹೆಚ್ಚಿಸಿತು. ಸಾಮಾನ್ಯವಾಗಿ ೧೭೭೯ರಿಂದಲೂ ಚಿತ್ರದುರ್ಗ ಪ್ರದೇಶದಲ್ಲಿ ಪ್ರಬಲ ಭೂಹಿಡುವಳಿದಾರರು ಮೇಲ್ಜಾತಿಗೆ ಸೇರಿದವರಾಗಿದ್ದರು. ಈ ಭಾಗದಲ್ಲಿ ರೆಡ್ಡಿಗಳು ಒಕ್ಕಲಿಗರು, ಮತ್ತು ಲಿಂಗಾಯತರು ಹೆಚ್ಚಿನ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಭೂಹೀನರು ಪರಿಶಿಷ್ಟಪಂಗಡ, ಪರಿಶಿಷ್ಟಜಾತಿಗೆ ಸೇರಿದವರು. ಆರ್ಥಿಕವಾಗಿ ಪ್ರಯೋಜನಕಾರಿಯಲ್ಲದ ಭೂಹಿಡುವಳಿಗಳನ್ನು ಹೊಂದಿದ್ದಾರೆ. ಚಿಕ್ಕ ಮತ್ತು ಸಾಧಾರಣ ರೈತರದು ಸಾಮಾನ್ಯವಾಗಿ ಕಳಪೆ ಗುಣಮಟ್ಟದ ಭೂಮಿ ಹೊಂದಿದ್ದಾರೆ. ಫಲವತ್ತಾದ ನೀರಾವರಿ ಸೌಲಭ್ಯವುಳ್ಳ ಕೆರೆಗಳ ಹಿಂಭಾಗದ ಭೂಮಿಯು ಶ್ರೀಮಂತ ಕೃಷಿಕರ ಕೈಯಲ್ಲಿ ಇತ್ತು. ಚಿತ್ರದುರ್ಗದ ಪ್ರದೇಶದ ಗ್ರಾಮಗಳಲ್ಲಿ ಭೂರಹಿತ ಕೃಷಿಕರೆಲ್ಲರೂ ಭೂಒಡೆಯರಿಗೆ ಅಧೀನವಾಗಿ ಬದುಕುತ್ತಿದ್ದರು.

ಚಿತ್ರದುರ್ಗ ಪ್ರದೇಶದಲ್ಲಿ ಸಾಮಾನ್ಯವಾಗಿ ಜೀತದಾಳುಗಳು ತಮ್ಮ ತಮ್ಮ ಹಳ್ಳಿಗಳಲ್ಲಿಯೇ ದೊಡ್ಡ ಜಮೀನುದಾರರ ಸೇವಕರಾಗಿ ಇದ್ದರು. ಸಾಮಾಜಿಕವಾಗಿ ಎಲ್ಲ ಹಳ್ಳಿಗಳಲ್ಲಿ ನಿಕಟವಾದ ಸಂಬಂಧಗಳು ಇದ್ದು, ಎಲ್ಲರೂ ಪರಸ್ಪರ ಸುಖದುಃಖಗಳಲ್ಲಿ ಪಾಲುದಾರರಾಗಿ ಇರುತ್ತಿದ್ದರು. ಇದು ಬಹಳ ಮಹತ್ವದ ಅಂಶವಾಗಿತ್ತು. ಸಾಮಾಜಿಕ ಆತ್ಮೀಯತೆ ಮತ್ತು ಸ್ನೇಹ ಸಂಬಂಧ ಜೀತಪದ್ಧತಿಯ ಕಟುತ್ವವನ್ನು ಬಹುಮಟ್ಟಿಗೆ ಕಡಿಮೆ ಮಾಡಿತ್ತು. ದೊಡ್ಡ ಭೂಹಿಡುವಳಿದಾರರು ಜೀತದಾಳುಗಳ ಕುಟುಂಬದ ಕಷ್ಟದಲ್ಲಿ ಸ್ವಲ್ಪ ಮಟ್ಟಿನ ಸಹಾಯ ಮಾಡುತ್ತಿದ್ದರು. ಅವರ ಆರ್ಥಿಕ ಪರಿಸ್ಥಿತಿ, ಅವರಿಗೆ ಇರುವ ಬೇಕು ಬೇಡ ಇವುಗಳ ಪರಿಕಲ್ಪನೆ ಭೂಹಿಡುವಳಿದಾರರಿಗೆ ಸಂಪೂರ್ಣವಾಗಿ ಇತ್ತು. ತನ್ನ ಮನೆಯ ಆಳಿನ ಮನೆಯಲ್ಲಿ ನಡೆಯುವ ಮದುವೆ, ಹಬ್ಬಗಳಂತಹ ಶುಭಕಾರ್ಯಗಳಿಗೆ ಆರ್ಥಿಕ ಸಹಾಯ ಮಾಡುತ್ತಿದ್ದರು.[೩೮] ದವಸ ಧಾನ್ಯಗಳನ್ನು ಕೊಡುತ್ತಿದ್ದರು. ಒಂದು ವೇಳೆ ಜೀತದಾಳು ಸ್ವಜಾತಿಯವನಾದರೆ ಇನ್ನಷ್ಟು ನಿಕಟವಾದ ಸ್ನೇಹಸಂಬಂಧ ಕಂಡುಬರುತ್ತಿತ್ತು. ಈ ಜೀತದಾಳುಗಳು ಕೃಷಿ ಭೂಮಿಯಲ್ಲಿ ಹಗಲು, ರಾತ್ರಿ, ಚಳಿಮಳೆ ಇವುಗಳಿಗೆ ಅಂಜದೆ ತನ್ನ ಕೆಲಸದಲ್ಲಿ ಹಿಂದೇಟು ಹಾಕದೆ ಕೆಲಸ ನಿರ್ವಹಿಸಬೇಕಾಗಿತ್ತು. ಒಕ್ಕಲುತನದ ಕೆಲಸದಲ್ಲಿ ಇಡೀ ವರ್ಷದ ಎಲ್ಲಾ ದಿವಸವೂ ಕೆಲಸವಿರುತ್ತದೆ. ಕೃಷಿಕರಿಗೆ ಯಾವ ಕಾಲಕ್ಕೂ ವಿಶ್ರಾಂತಿಯಿಲ್ಲದೆ ಮನೆಯ ಆಳಾದವರು ಕಾಲದ ಬಂಧನವಿಲ್ಲದೆ ದುಡಿಯಬೇಕಿತ್ತು. ಮನೆಯ ಎಲ್ಲಾ ಕೆಲಸಕ್ಕೂ ಅವರು ಬೇಕಾಗಿದ್ದರು. ಉದಾಹರಣೆಗೆ ಬಿತ್ತುವುದಕ್ಕೆ, ಕಳೆತೆಗೆಯುವುದಕ್ಕೆ, ಕೊಯ್ಲುಮಾಡುವುದಕ್ಕೆ, ನೇಗಿಲು ಹೊಡೆಯುವುದಕ್ಕೆ ಹೀಗೆ ಮನೆಯ ಕೆಲಸದಲ್ಲಿ ಅವರದೇ ಪ್ರಮುಖವಾದ ಕೆಲಸವಾಗಿರುತ್ತದೆ. ಈ ಭೂಹಿಡುವಳಿದಾರರು ಕಡಿಮೆ ವೆಚ್ಚದಲ್ಲಿ ಹೆಚ್ಚು ಕೆಲಸವನ್ನು ತೆಗೆದುಕೊಳ್ಳುವ ದುರಾಸೆ ಉಳ್ಳವರೆಂಬುದು ಕಂಡುಬರುತ್ತದೆ.

ಡಾ. ಕೃಷ್ಣಮೂರ್ತಿ ಹನೂರು ಸಂಪಾದಿಸಿದ 'ಲೀಲಾವತಿ-ಪದ್ಮಾವತಿ' ಎಂಬ ಜಾನಪದ ಕಥೆಯಲ್ಲಿ ಬರುವ ಕೆಲವು ದೃಷ್ಟಾಂತಗಳನ್ನು ಗಮನಿಸಿದರೆ, ಚಿತ್ರದುರ್ಗದ ಸಮುದಾಯದ ಬೆಳವಣಿಗೆಯನ್ನು ಗುರುತಿಸಬಹುದು.[೬೯] ಸಂಪಾದಕರೇ ಹೇಳಿ ಕೊಳ್ಳುವಂತೆ ಕಥೆಯನ್ನು ಹೇಳುತ್ತಿರುವ ಕಥೆಗಾರ ಗಿರಿಯಯ್ಯ ಗೊಲ್ಲರ ಸಮುದಾಯಕ್ಕೆ ಸೇರಿದವನು. ಈ ಪ್ರದೇಶದಲ್ಲಿ ಗೊಲ್ಲರ (ಯಾದವ)ಸಮುದಾಯವು ಇತರೆ ಯಾವುದೇ ಸಮುದಾಯದ ಜನಸಂಖ್ಯೆಗಿಂತ ಕಡಿಮೆ ಇಲ್ಲದ ಸಮುದಾಯವಾಗಿದ್ದು, ಈ ಸಮುದಾಯವು ೧೮ ಮತ್ತು ೧೯ನೇ ಶತಮಾನದ ಪ್ರಾರಂಭದವರೆವಿಗೂ ಹೆಚ್ಚಿನ ಸಂಖ್ಯೆಯಲ್ಲಿ ಪಶುಸಂಗೋಪನ ವೃತ್ತಿಯನ್ನುವಲಂಬಿಸಿತ್ತು. ಅಲ್ಪ ಪ್ರಮಾಣದಲ್ಲಿ ಚಿಕ್ಕ ಭೂಹಿಡುವಳಿದಾರರಾಗಿಯೂ ಇದ್ದು, ಊರ ಹೊರಗೆ ವಾಸಮಾಡುವುದು ವಾಡಿಕೆಯಾಗಿತ್ತು. ಇತರರ ಸಂಪರ್ಕವಿಲ್ಲದೆ ಒಟ್ಟಾಗಿರುವ ಗುಡಿಸಲುಗಳ ಸುತ್ತಾ ಮುಳ್ಳು ಬೇಲಿ ಹಾಕಿಕೊಂಡು ಬರುವ ಸಂಪ್ರದಾಯಗಳು, ಆಚಾರ ವಿಚಾರ ಗಳನ್ನೆಲ್ಲಾ ತಪ್ಪದೆ ಉಳಿಸಿಕೊಂಡು ಬಂದಿದ್ದಾರೆ. ತೀ.ನಂ.ಶಂಕರನಾರಾಯಣ ಅವರ ಮಹಾಪ್ರಬಂಧವಾದ "ಕಾಡುಗೊಲ್ಲರ ಸಂಪ್ರದಾಯಗಳು : ಒಂದು ಜಾನಪದ ಅಧ್ಯಯನ"ದಲ್ಲಿಯೂ ಸಹ ಪಶುಸಂಗೋಪನೆ ಅವರ ಮೂಲ ಕಸಬಾಗಿತ್ತೆಂಬ ವಿಚಾರವನ್ನು ವಿವರಿಸಿದ್ದಾರೆ.[೭೦] ಪೂರ್ವದಲ್ಲಿ ಪಶುಸಂಗೋಪನೆಯನ್ನು ಅವಲಂಬಿಸಿದ ಈ ಸಮುದಾಯವು, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಜನಾಂಗದಲ್ಲಿ ಒಂದಾಗಿದೆ. ಕ್ರಿ.ಶ. ೧೯ ಮತ್ತು ೨೦ನೇ ಶತಮಾನದ ನಂತರದಲ್ಲಿ ಈ ಸಮುದಾಯವು ಹೆಚ್ಚು ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿ ಸಣ್ಣ ಮತ್ತು ಮಧ್ಯಮ ಭೂಹಿಡುವಳಿದಾರರಾಗಿದ್ದಾರೆ. ಮತ್ತೊಂದು ಸಂಗತಿಯೆಂದರೆ ಜಾನಪದರೇ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡು ತಮ್ಮ ನಿತ್ಯಕರ್ಮದಲ್ಲಿ ಭಾಗಿಯಾಗಿರುವುದು 'ಲೀಲಾವತಿ-ಪದ್ಮಾವತಿ' ಎಂಬ ಜನಪದ ಕೃತಿಯಲ್ಲಿ ತಿಳಿದುಬರುತ್ತದೆ. ಅದರಲ್ಲಿ ಬರುವ ವಿವರದಂತೆ ತಳವಾರನದು ಗ್ರಾಮವನ್ನಾಗಲಿ, ಪಟ್ಟಣವನ್ನಾಗಲಿ ಕಾಯುವ ಕೆಲಸ, ವರ್ತಕನದು ವ್ಯಾಪಾರ, ಕುದುರೆಗಳ ಮೇಲೆ ಎತ್ತಿನ ಗಾಡಿಗಳ ಮೇಲೆ ಸಾಮಾನು ಸರಂಜಾಮುಗಳನ್ನು ಹೇರಿಕೊಂಡು ಊರಿಂದೂರಿಗೆ ಸಾಗಿಸಿ ಮಾರಾಟ ಮಾಡುವುದು ಅವರ ಕೆಲಸ. ದೇಶ ಪಟ್ಟಣ ಆಳುವ ಕೆಲಸ ರಾಜನದು. ಪ್ರಜೆಗಳ ಯೋಗಕ್ಷೇಮದ ಹೊಣೆಯೂ ಅವನದು. ರಾಜನು ತನ್ನ ರಾಜ್ಯದ ಮೇಲೆ ಆಕ್ರಮಣಕಾರರು ಬರದಂತೆ ಸೈನ್ಯವನ್ನು ಇಟ್ಟುಕೊಂಡಿರುತ್ತಾನೆ. ಇವರು ಕ್ಷತ್ರಿಯರೇ ಆಗಿರಬೇಕು. ರಾಜನ ಆಜ್ಞೆಯನ್ನು ಸಾರಲು ತಮಟೆ ಬಡಿಯುವ ಮಾದಿಗನೂ ಕಥೆಯಲ್ಲಿದ್ದಾನೆ. ಊರ ಜನರ ಮಲಿನವಸ್ತ್ರ ಶುದ್ಧಿ ಮಾಡುವ ಮಡಿವಾಳಯ್ಯ, ಸಾಬಣ್ಣ, ಪಶುಪಾಲನೆಯ ಗೊಲ್ಲ, ವೇಶ್ಯೆ ಎಲ್ಲರೂ ಇದ್ದಾರೆ. ಇವರೆಲ್ಲಾ ಜಾತಿವ್ಯವಸ್ಥೆಯನ್ನು ಒಪ್ಪಿಕೊಂಡು ಅವರವರ ಮಿತಿಯಲ್ಲೇ ಬದುಕಬೇಕು.

ಮಡಿವಾಳಯ್ಯ, ತಳವಾರ, ಮಾದಿಗ ಇಂತಹ ಕೆಳವರ್ಗದವರಲ್ಲಿ ಶ್ರೀಮಂತರು ಕಡಿಮೆ, ಶ್ರೀಮಂತಿಕೆಯನ್ನು ಬಯಸುವಂತೆಯೂ ಇಲ್ಲ. ಇನ್ನೊಬ್ಬರನ್ನು ಅವಲಂಬಿಸಿ ಬದುಕಬೇಕಾಗಿತ್ತು. ಇವರು ರಾಜಕುಮಾರಿಯನ್ನಾಗಲಿ, ಶ್ರೀಮಂತ ವರ್ಗದ ಕನ್ನೆಯನ್ನಾಗಲಿ ಬಯಸುವಂತಿರಲಿಲ್ಲ. ಇಂತಹ ಹಲವು ಭೂರಹಿತ ಸಮುದಾಯಗಳು ಬೇರೆಯವರನ್ನು ಅವಲಂಬಿಸಿ ಸಮಾಜದ ಗುಲಾಮಗಿರಿಯನ್ನು ತಮಗರಿವಿಲ್ಲದಂತೆ ಒಪ್ಪಿಕೊಂಡಿದ್ದರು. ತಾವು ಮಾಡುವ ವೃತ್ತಿಯು ಶೋಷಣೆಯ ಮಾದರಿಯೇ ಆಗಿದ್ದರೂ ದೈವದ ಹೆಸರಿನ ಹಣೆಪಟ್ಟಿ ಅವರ ಬಾಯಿಯನ್ನು ಮುಚ್ಚಿಹಾಕಿತ್ತು. ಇಂತಹ ಮೂಢ ನಂಬಿಕೆಯನ್ನು ಹೊಂದಿದ ಹಲವು ಭೂರಹಿತ ಸಮುದಾಯಗಳು ಬೇರೆಯವರ ಊಳಿಗದಲ್ಲಿಯೇ ಉಪಜೀವನ ಸಾಗಿಸುತ್ತಿದ್ದರು. ಇದನ್ನು ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿಯೂ ನೋಡಬಹುದು.

ಕಸುಬುದಾರರು : ವಿಜಯನಗರ ಕಾಲದಿಂದಲೂ ಭೂಒಡೆಯರಿಗೆ ಮತ್ತು ಭೂರಹಿತ ಸಮುದಾಯಕ್ಕೆ ನಿಕಟ ಸಂಬಂಧವಿತ್ತು. ಶಾಸನಗಳು ಇಂತಹ ಕುಶಲ ವೃತ್ತಿಯ ಶ್ರೇಣಿಗಳ ಬಗ್ಗೆ ಹೆಚ್ಚು ಬೆಳಕನ್ನು ಬೀರುತ್ತವೆ. ಇಂತಹ ಕುಶಲ ವೃತ್ತಿಯವರು ೧೮ ಪಣಿಗಳು ಅಥವಾ ವಿಭಾಗಗಳು ಇರುವ ಬಗ್ಗೆ ತಿಳಿಸುತ್ತವೆ. 'ಪಾಂಚಾಲರು' ಎಂದರೆ ಐದು ಬಗೆಯ ಕುಶಲ ಕರ್ಮಿಗಳಾಗಿದ್ದರು. ಕಮ್ಮಾರ, ಸುವರ್ಣಕಾರ, ಕಂಚುಗಾರ, ಬಡಗಿ ಹಾಗೂ ಶಿಲ್ಪಿ ಇವರೆಲ್ಲರನ್ನು ವೀರ ಪಾಂಚಾಲರು ಎಂದು ಶಾಸನಗಳು ಕರೆದಿವೆ. ಇವರಾರು ನಿಜವಾದ ಕೃಷಿಕರಾಗಲಿ, ಭೂ ಒಡೆಯರಾಗಲಿ ಆಗಿರಲಿಲ್ಲ. ಇವರು ತಮ್ಮ ಜೀವನಕ್ಕಾಗಿ ತಮ್ಮ ವೃತ್ತಿಗಳನ್ನು ನಡೆಸುತ್ತಿದ್ದರು. 'ಇದೇ ರೀತಿ ವ್ಯವಹಾರಿಕರು' ಪಾಂಚಾಲರು, ಕುಂಬಾರರು, ನೇಕಾರರು, ಬಟ್ಟೆಗೆ ಬಣ್ಣ ಹಾಕುವವರು, ಗಾಣದವರು, ಚಮ್ಮಾರರು, ವಸ್ತ್ರ ರಕ್ಷಕರು, ದೇವಾಂಗದವರು, ಗೂಳಿ ಸಾಕುವವರು, ಗೋರಕ್ಷಕರು, ಬೇಡರು, ಅಗಸರು ಹಾಗೂ ಕ್ಷೌರಿಕರು ಮುಖ್ಯವಾಗಿದ್ದರು.[೧೧] ವಿಜಯನಗರ ಕಾಲದಲ್ಲಿ ಭೂ ಕಂದಾಯವನ್ನು ಮೂರು ಕಂತುಗಳಲ್ಲಿ ವಸೂಲಿ ಮಾಡುತ್ತಿದ್ದರು. ಅದರಲ್ಲಿ ಒಂದು ಭಾಗವು ಗ್ರಾಮ ಸಮುದಾಯದಲ್ಲಿರುವ ಹನ್ನೆರಡು ಬಗೆಯ ಸಾಮಾಜಿಕ ಸೇವೆಗಳನ್ನು ಸಲ್ಲಿಸುತ್ತಿದ್ದ ಘಟಕಗಳು ಮತ್ತು ಸ್ಥಳೀಯ ಅಧಿಕಾರಿಗಳು ಇನ್ನಿತರ ಆಯಗಾರ ಸೇವೆ ಸಲ್ಲಿಸುತ್ತಿದ್ದವರಿಗೆ ಹಂಚಲಾಗುತ್ತಿತ್ತು.[೧೨] ಇದೇ ವ್ಯವಸ್ಥೆ ಚಿತ್ರದುರ್ಗದ ನಾಯಕ ಅರಸರ ಕಾಲದಲ್ಲಿಯೂ ರೂಢಿಯಲ್ಲಿತ್ತು. ಇಂತಹ ಕಸುಬುವುಳ್ಳ ವರ್ಗಗಳಿಗೆ ಭೂಮಿ ಯಾಗಲಿ, ರಾಜಕೀಯ, ಸಾಮಾಜಿಕ ಅಧಿಕಾರವಾಗಲಿ ಇರಲಿಲ್ಲ. ಹಲವು ವೇಳೆ ಭೂಹಿಡುವಳಿದಾರರ ಆರ್ಥಿಕ ಸಮಾಜಿಕ ಮತ್ತು ರಾಜಕೀಯ ಹತೋಟಿಗೆ ಇವರು ಒಳಪಟ್ಟಿದ್ದರು.

ಆಯಗಾರರು : ಚಿತ್ರದುರ್ಗ ಪ್ರದೇಶದಲ್ಲಿ ನಾಯಕ ಅರಸರ ಕಾಲದಿಂದಲೂ ಸ್ವಾತಂತ್ರ್ಯಾನಂತರದ ಕಾಲದವರೆವಿಗೂ ರೂಢಿಯಲ್ಲಿದ್ದ ಪದ್ಧತಿ ಎಂದರೆ ಆಯಗಾರ ಪದ್ಧತಿಯಾಗಿತ್ತು. 'ಆಯಗಾರ' ಎಂಬ ಪದ ಜಾತಿವಾಚಕ ಪದವಲ್ಲ. ಉದ್ಯೋಗವನ್ನು ಸೂಚಿಸುವ ವೃತ್ತಿವಾಚಕ ಪದ. ಸೇವೆಯಿಂದ ಧಾನ್ಯದ ರೂಪದಲ್ಲಿ ಆದಾಯ ಪಡೆಯುವುದು ಎಂಬರ್ಥ. ಆಯ ಪದ್ಧತಿ ಗ್ರಾಮೀಣ ಪ್ರದೇಶಗಳಲ್ಲಿ ಭೂಹಿಡುವಳಿದಾರರಿಗೂ ಹಾಗೂ ಭೂರಹಿತ ಕಸುಬುದಾರರಿಗೂ ಇರುವ ವೃತ್ತಿಸಂಬಂಧದ ವ್ಯವಸ್ಥೆ ಯಾಗಿದೆ. ಇದು ಪರಸ್ಪರರ ಬದುಕಿಗೆ ಪೂರಕ ಹಾಗೂ ಪೋಷಕವಾಗಿತ್ತು. ಭೂಹಿಡುವಳಿದಾರರಿಗೂ ಹಾಗೂ ಆಯಗಾರರಿಗೂ ಇರುವ ಸಂಬಂಧ ತುಂಬಾ ನಿಕಟವಾಗಿತ್ತು.[೪೩] ಆದುದರಿಂದ ಒಕ್ಕಲು ಕುಟುಂಬಗಳಿಗೆ ಕುಂಬಾರ, ಬಡಗಿ, ಕಮ್ಮಾರ, ಕ್ಷೌರಿಕ ಮುಂತಾದ 'ಆಯಗಾರರ' ನೆರವು ಅವಶ್ಯಕ ವಾಗಿತ್ತು. ಆಯ ಕರಾರುವಕ್ಕಾದ ಕೂಲಿಯಲ್ಲ, ಆರ್ಥಿಕ ಒಡಂಬಡಿಕೆಯೂ ಅಲ್ಲ. ಪರಸ್ಪರ ಕೊಡುಕೊಳ್ಳುವಿಕೆಯನ್ನು ಒಪ್ಪಿಕೊಂಡಿರುವ ಸಾಮಾಜಿಕ ಸೌಹಾರ್ದಯುತ ಸಂಬಂಧವನ್ನು ಹೊಂದಿರುವ ವ್ಯವಸ್ಥೆ. ಚಿತ್ರದುರ್ಗದ ಪಾಳೇಗಾರರ ಕಾಲದಲ್ಲಿ ೧೨ ಜನ ಕೈವಾಡದವರು ಗ್ರಾಮದಲ್ಲಿ ವಾಸಿಸುವ ಜೋಯಿಸ, ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ, ತೋಟಿ, ತಳವಾರ, ಓಲೆಕಾರ, ಪೂಜಾರಿ, ಕ್ಷೌರಿಕ (ಕೆಲಸಿಗ) ನೇಕಾರ (ಜೇಡ) ಇವರೇ ಮೊದಲಾದ ಆಯಗಾರರು ಇದ್ದರು. ಇವರು ಇಡೀ ವರ್ಷ ತಮ್ಮ ತಮ್ಮ ಉದ್ಯೋಗದಿಂದ ರೈತರಿಗೆ ನೆರವಾಗಿ, ಸಹಾಯ ಮಾಡುತ್ತಿದ್ದರು. ಇದರಿಂದ ಪ್ರತಿ ಕುಳದಿಂದ ಎಂದರೆ ಎರಡೆತ್ತಿನ ಬೇಸಾಯ ಒಂದಕ್ಕೆ ಮೊರಬತ್ತ, ಹೊರೆಹುಲ್ಲು ಪಡೆದು ಜೀವಿಸುತ್ತಿದ್ದರು. 'ಹೊರೆಹುಲ್ಲು' ಎಂದರೆ ತೆನೆ ಸಮೇತವಾಗಿ ಬತ್ತದ ಹುಲ್ಲು ಅಥವಾ ಜೋಳದ ಸಪ್ಪೆ ಎಂದರ್ಥ. ಆಯಗಾರರು ಆಗಿನ ಗ್ರಾಮೀಣ ಜೀವನದಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದರು.[೪೪] ಅವರು ಗ್ರಾಮದ ಜೀವನಾಡಿಯೆನಿಸಿದ್ದರು. ಒಂದೊಂದು ಗ್ರಾಮದ ವ್ಯವಸಾಯ ಜೀವನವೂ 'ಆಯಗಾರರ' ಸಹಕಾರದಿಂದ ಸ್ವಯಂಪೂರ್ಣವಾಗಿತ್ತು ಎನ್ನಬಹುದು. ಈ ವ್ಯವಸ್ಥೆ ಚಿತ್ರದುರ್ಗ ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲಿಯೂ, ಹಲವು ಶತಮಾನಗಳಿಂದಲೂ ಇತ್ತು.

ಈ ಆಯಗಾರರು ಗ್ರಾಮದ ಅವಶ್ಯಕತೆಗಳನ್ನು ಪೂರೈಸುತ್ತಿದ್ದರು. ಉದಾ: ರೈತನಿಗೆ ಬೇಕಾದ ನೇಗಿಲು, ಕುಂಟೆ,ರಂಟೆ ಮುಂತಾದ ಮರದ ಕೃಷಿ ಸಾಮಗ್ರಿಗಳನ್ನು ಬಡಗಿ ಒದಗಿಸುತ್ತಿದ್ದನು. ಕಬ್ಬಿಣದ ಉಪಕರಣಗಳನ್ನು ಕಮ್ಮಾರ ಒದಗಿಸುತ್ತಿದ್ದನು. ಮಡಕೆ, ಕುಡಿಕೆ ಮುಂತಾದ ಮಣ್ಣಿನ ಪಾತ್ರೆಗಳನ್ನು ಕುಂಬಾರ ಮಾಡಿ ಕೊಡುತ್ತಿದ್ದನು. ಅಗಸ ಬಟ್ಟೆಗಳನ್ನು ಮಡಿಮಾಡುತ್ತಿದ್ದನು. ಕ್ಷೌರಿಕ ತಲೆ

ಕೂದಲುಗಳನ್ನು ಕತ್ತಿರಿಸುವ ಸೇವೆ, ಚಮ್ಮಾರ ಹಗ್ಗ-ಮಿಣಿ ಮೆಟ್ಟುಗಳನ್ನು ತಯಾರಿಸುತ್ತಿದ್ದನು. ಇವರ ಸೇವೆಯು ಭೂಹಿಡುವಳಿದಾರರಲ್ಲದ ಕುಟುಂಬಗಳಿಗೂ ದೊರೆಯುತ್ತಿತ್ತು. ಗ್ರಾಮಗಳಲ್ಲಿ ನಡೆಯುವ ಹುಟ್ಟು, ಸಾವು, ಮದುವೆ, ಹಬ್ಬ, ಜಾತ್ರೆ ಮುಂತಾದ ಸಾಂಸ್ಕೃತಿಕ ಸಂದರ್ಭಗಳಲ್ಲಿಯೂ ಅಯಗಾರರು ಪ್ರಮುಖವಾಗಿ ನೆರವಾಗುತ್ತಿದ್ದರು.

ಗೃಹ ಕೈಗಾರಿಕೆ ಸಮುದಾಯಗಳು : ಚಿತ್ರದುರ್ಗ ಜಿಲ್ಲೆಯ ಪ್ರತಿಯೊಂದು ಗ್ರಾಮವು ಹಲವು ಸಮುದಾಯಗಳಿಂದ ಕೂಡಿವೆ. ಅನೇಕ ಸಮುದಾಯಗಳಿಗೆ ಸಂಬಂಧಿಸಿದ ವಿಶಿಷ್ಟ ವೃತ್ತಿಗಳಿದ್ದವು. ಅಂದರೆ ವ್ಯಕ್ತಿಯು ಜಾತಿಯ ಚೌಕಟ್ಟಿಲ್ಲದೆ ಯಾರು ಬೇಕಾದರೂ ಅನುಸರಿಸಬೇಕಾದ ವೃತ್ತಿಗಳವು. ಹಲವು ಸಾಂಪ್ರದಾಯಕ ವೃತ್ತಿಗಳಿಗೆ ಗ್ರಾಮದ ಕುಟುಂಬಗಳೊಂದಿಗೆ ಒಂದು ಬಗೆಯ ನಂಟು ಬೆಳೆದು ಬಂದಿರುತ್ತದೆ. ಸೇವೆಗೆ ಪ್ರತಿಫಲವನ್ನು ನಗದಾಗಿ ಅಥವಾ ವಸ್ತುರೂಪದಲ್ಲಿಯೂ ಕೊಡಬಹುದು. ಅಥವಾ ಎರಡನ್ನೂ ಕೊಡಬಹುದು. ಕೃಷಿಗೆ ಗ್ರಾಮದ ಕುಶಲಕಸಬುದಾರರ ಬೆಂಬಲವಿತ್ತು. ಈ ವಲಯದ ಕೆಲವು ಉತ್ಪನ್ನಗಳಿಗಾಗಿ ಮತ್ತು ಅವುಗಳ ಕಲಾವಂತಿಕೆಗಾಗಿ ಶ್ರೀಮಂತರಿಂದ, ನಗರವಾಸಿಗಳಿಂದ ವಿದೇಶಗಳಿಂದಲೂ ಕೂಡ ಬೇಡಿಕೆ ಇರುತ್ತಿತ್ತು. ಉದಾಹರಣೆಗೆ ಕೈಯಿಂದಲೇ ನೇಯುತ್ತಿದ್ದ ಮೊಳಕಾಲ್ಮೂರು ರೇಷ್ಮೆ ಸೀರೆಗಳಿಗೆ ಇಂತಹ ಬೇಡಿಕೆ ಇತ್ತು. ಚಿತ್ರದುರ್ಗ ಪ್ರದೇಶದಲ್ಲಿ ೧೯ನೇ ಶತಮಾನದ ಮೊದಲ ಭಾಗದಲ್ಲಿ ಮೈಸೂರು ಸಂಸ್ಥಾನದಲ್ಲಿಯೇ ಅಧಿಕ ಪ್ರಮಾಣದ ವಾಣಿಜ್ಯ ಬೆಳೆಯಾದ ಹತ್ತಿಯನ್ನು ಬೆಳೆಯುತ್ತಿದ್ದರು. ಅದರಿಂದ ನೇಯ್ಗೆಯ ಪ್ರಮುಖ ಕುಶಲ ಕಸುಬುಗಳಲ್ಲಿ ಒಂದಾಗಿ ಬೆಳೆಯಿತು. ಹತ್ತಿಯನ್ನು ಕೀಳುವ, ಗಂಟು ಕಟ್ಟುವ, ನೇಯುವ, ಬಣ್ಣ ಹಾಕುವ ಕೆಲಸವನ್ನು ಕುಶಲ ಕರ್ಮಿಗಳು ತಮ್ಮ ಮನೆಯಲ್ಲಿಯೇ ಮಾಡುತ್ತಿದ್ದರು.[೯೧] ದಾವಣಗೆರೆ, ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು ಮುಂತಾದ ತಾಲೂಕುಗಳ ಗ್ರಾಮಗಳಲ್ಲಿಯೂ ನೇಯ್ಗೆಯು ಪ್ರಮುಖ ಕಸುಬಾಗಿ ಬೆಳೆದಿತ್ತು. ಗ್ರಾಮಗಳಲ್ಲಿ ಕಂಬಳಿ, ಸೀರೆ, ಧೋತಿ, ರುಮಾಲು, ಜಮಖಾನೆ, ಹಾಗೂ ಖಾದೀ ಸಿದ್ಧ ಉಡುಪುಗಳನ್ನು ತಯಾರಿಸುವ ಕಸುಬುದಾರರ ವರ್ಗವಿತ್ತು. ಇದರಿಂದ ಕುಶಲಕರ್ಮಿಗಳ ಸರಕುಗಳಿಗಾಗಿ ಬೇಡಿಕೆ ಹೆಚ್ಚಾಗಿ ಅದೇ ವೃತ್ತಿಯಲ್ಲಿ ಮುಂದುವರಿದು ಪರಂಪರಾಗತ ವೃತ್ತಿಯಾದ ಕೃಷಿಕ್ಷೇತ್ರದ ಮೇಲೆ ತನ್ನ ಹಿಡಿತವನ್ನು ಹಂತ ಹಂತವಾಗಿ ಕಳೆದು ಕೊಳ್ಳುತ್ತಾ ಬಂದರು. ಇಂತಹ ಹಲವು ಕುಶಲಕರ್ಮಿ ಸಮುದಾಯಗಳು ಕೃಷಿ ಕ್ಷೇತ್ರದಿಂದ ಸಂಪೂರ್ಣವಾಗಿ ಬೇರ್ಪಟ್ಟು ತಾವು ತಯಾರಿಸಿದ ವಸ್ತುಗಳ ಮಾರಾಟದಿಂದಲೇ ಜೀವನ ಸಾಗಿಸಲು ಪ್ರಯತ್ನಿಸಿದರು. ಈ ಬಗೆಯ ಕುಶಲಕರ್ಮಿಗಳು ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಸ್ವಾವಲಂಬನೆ

ಸಾಧಿಸಿದ್ದುದು ಕಂಡುಬರುತ್ತದೆ. ಇದು ಬಹುತೇಕ ಕುಶಲಕಸುಬುದಾರರ ಸಮುದಾಯವು ಭೂಒಡೆತನ ದಿಂದ ಬೇರೆಯಾಗುವಂತೆ ಮಾಡಿತು. ತಮ್ಮ ವೃತ್ತಿಗೆ ಸಾಮಾಜಿಕವಾಗಿ ಗೌರವ-ಆಧಾರಗಳು ದೊರೆತಿದ್ದರಿಂದ ಯಾವುದೇ ಭೂಹಿಡುವಳಿದಾರರನ್ನು ಅವಲಂಬಿಸುವ ಅವಶ್ಯಕತೆಯೂ ಇರಲಿಲ್ಲ.[೪೭] ಆದರೂ, ಭೂಹಿಡುವಳಿದಾರ ಸಮುದಾಯ ಮತ್ತು ಕುಶಲಕರ್ಮಿ ಸಮುದಾಯವು ಪರಸ್ಪರ ಕೊಟ್ಟು ತೆಗೆದುಕೊಳ್ಳುವ ಹೊಂದಾಣಿಕೆಯಿಂದ ಮುಂದುವರೆದು ಬಂದವು. ಕುಶಲಕರ್ಮಿ ವರ್ಗದವರಿಗೆ ತಾವು ಭೂಮಿಯನ್ನು ಹೊಂದಿಲ್ಲವೆಂಬ ಭಾವನೆ ಆರ್ಥಿಕತೆಯ ದೃಷ್ಟಿಯಿಂದ ಯಾವುದೇ ಪರಿಣಾಮ ಬೀರಿರಲಿಲ್ಲ.

ವ್ಯಾಪಾರಿ ಸಮುದಾಯ : ೧೮ನೇ ಶತಮಾನದ ವೇಳೆಗೆ ಚಿತ್ರದುರ್ಗ ಪ್ರದೇಶವು ಮೈಸೂರು ಸಂಸ್ಥಾನದ ಮೇಲೆ ಪರಸ್ಪರ ಅವಲಂಬನೆಯನ್ನು ರೂಢಿಸಿಕೊಳ್ಳತೊಡಗಿದ್ದು ಕಂಡುಬರುತ್ತದೆ. ಹೀಗಾಗಿ ಹಲವಾರು ಹಳ್ಳಿಗಳು ಸೇರಿದಂತೆ ಹುಟ್ಟಿಕೊಂಡ ಸಂತೆಯೊಂದು ಇಂತಹ ಹಲವಾರು ಸಂತೆಗಳ ವರ್ತಕರು ಬಂದು ಹೋಗುವ ಮತ್ತೊಂದು ಹೋಬಳಿ ಮಟ್ಟದ ಅಥವಾ ತಾಲೂಕು ಮಟ್ಟದ ಸಂತೆಯೊಂದಿಗೆ ಸಂಪರ್ಕಗಳನ್ನು ಪಡೆದವು. ಈ ದೊಡ್ಡ ಸಂತೆಗಳು ಅವುಗಳಿಗಿಂತಲೂ ದೊಡ್ಡ ಮಾರುಕಟ್ಟೆಯಾದ ನಗರ ಕೇಂದ್ರಗಳ ಹಾಗು ಇತರ ವಾಣಿಜ್ಯ ಕೇಂದ್ರಗಳ ಸಂತೆಗಳೊಂದಿಗೆ ಬೆಸೆಯಲ್ಪಟ್ಟಿದ್ದವು. ಹೀಗಾಗಿ ಚಿತ್ರದುರ್ಗ ಪ್ರದೇಶದಲ್ಲಿ ೧೮೦೦ರ ವೇಳೆಗೆ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಎಲ್ಲಾ ಕೇಂದ್ರಗಳಲ್ಲಿಯೂ ವಾರದ ಸಂತೆಗಳಿದ್ದವು. ದಾವಣಗೆರೆ ನಗರವು ವಾಣಿಜ್ಯ ಕೇಂದ್ರವಾಗಿತ್ತು. ಇಲ್ಲಿ ಅನೇಕ ವ್ಯಾಪಾರಿ ಕುಟುಂಬಗಳು ವಾಸವಾಗಿದ್ದವು. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ವ್ಯಾಪಾರ ಸಾಮಗ್ರಿಗಳು ಎತ್ತಿನ ಗಾಡಿಗಳ ಮೂಲಕ ಇಲ್ಲಿಗೆ ಬರುತ್ತಿದ್ದವು. ಇಲ್ಲಿನ ಪ್ರಮುಖ ವ್ಯಾಪಾರಿಗಳಲ್ಲಿ ಶಿವಭಕ್ತರು, ಮುಸ್ಲಿಂರು ಮತ್ತು ಮರಾಠರು ಆಗಿದ್ದರೆಂದು ಬುಕಾನನ್ ಗುರುತಿಸಿದ್ದಾನೆ.[೪೮] ಇಲ್ಲಿನ ಈ ಸಂತೆಗಳು ಜನರ ಅನುಕೂಲವನ್ನು ನೋಡಿಕೊಂಡು ನಿಗದಿ ಪಡಿಸಿದ ಸ್ಥಳಗಳಲ್ಲಿ ನಡೆಯುತ್ತಿದ್ದವು ಅವುಗಳಲ್ಲಿ ಪ್ರಮುಖವಾದ ವಾರದ ದಿನ ಸಂತೆಗಳೆಂದರೆ[೪೯]

ಕ್ರಮ ಸಂಖ್ಯೆ	ಸಂತೆ ನಡೆಯುವ ಸ್ಥಳ	ಸಂತೆ ನಡೆಯುತ್ತಿದ್ದ ವಾರದ ದಿನ	ಸಂತೆಗೆ ಸೇರುತ್ತಿದ್ದ ಜನಸಂಖ್ಯೆ
೧.	ಚಿತ್ರದುರ್ಗ	ಸೋಮವಾರ	೧೦೦೦
೨.	ದಾವಣಗೆರೆ	ಭಾನುವಾರ	೨೦೦೦
೩.	ಹರಿಹರ	ಮಂಗಳವಾರ	೨೦೦೦
೪.	ಜಗಳೂರು	ಶನಿವಾರ	೨೦೦೦

ಚಿತ್ರದುರ್ಗ ಜಿಲ್ಲೆಯ ಪ್ರಮುಖ ಗೃಹ ಕೈಗಾರಿಕೆಗಳು ೧೮೮೧ರಲ್ಲಿ ಇದ್ದಂತೆ

ಕ್ರಮ ಸಂಖ್ಯೆ	ಕೈಗಾರಿಕೆಗಳು	ಹೆಸರು ಸ್ಥಳಗಳು
೧.	ಹತ್ತಿ ಕೈಗಾರಿಕೆ	ಚಳ್ಳಕೆರೆ, ಮೊಳಕಾಲ್ಮೂರು, ಹರಿಹರ, ಚಿತ್ರದುರ್ಗ ಶುದ್ಧ ಹತ್ತಿ ಬಟ್ಟೆಗೆ ಪ್ರಸಿದ್ಧವಾಗಿದ್ದವು. ಇತರ ಎಲ್ಲಾ ತಾಲೂಕುಗಳಲ್ಲಿಯೂ ನೇಯ್ಗೆ ಕಸಬು ಮನೆಗಳಲ್ಲಿಯೇ ನಡೆಯುತ್ತಿತ್ತು.
೨.	ಕಂಬಳಿ ಉಣ್ಣೆ ಕೈಗಾರಿಕೆಗಳು	ಚಳ್ಳಕೆರೆ, ಹಿರಿಯೂರು, ಚಿತ್ರದುರ್ಗ,ಹಂಪಾಪುರ, ದಾವಣಗೆರೆ ತಾಲೂಕಿನ ಹಲವು ಹಳ್ಳಿಗಳಲ್ಲಿ ಕಂಬಳಿ ನೇಯ್ಗೆ ಮಾಡಲಾಗುತ್ತಿತ್ತು. (ಹಾಗೆಯೇ ಹೊಳಲ್ಕೆರೆ ಹೊಸದುರ್ಗ)
೩.	ಚಪ್ಪಲಿ ತಯಾರಿಕೆ(ಮೆಟ್ಟು)	ಚಿತ್ರದುರ್ಗದಲ್ಲಿ ೨೨೦ ಕುಟುಂಬಗಳು, ಹಿರಿಯೂರಿನಲ್ಲಿ ೧೨೫ ಕುಟುಂಬಗಳು, ಚಳ್ಳಿಕೆರೆಯಲ್ಲಿ ೭೬ ಕುಟುಂಬಗಳು, ಹೊಸದುರ್ಗದಲ್ಲಿ ೬೭ ಕುಟುಂಬಗಳು ಮತ್ತು ಜಿಲ್ಲೆಯ ಎಲ್ಲಾ ಕಡೆ ತಯಾರು ಮಾಡುತ್ತಿದ್ದರು.[೪೯]
೪.	ಲೋಹದ ಮತ್ತು ಗಾಜಿನ ಬಳೆಗಳ ಕೈಗಾರಿಕೆ	ಮೊಳಕಾಲ್ಮುರು, ಹೊಸದುರ್ಗ, ಮತ್ತೋಡು, ಆನಿವಾಳ ಗ್ರಾಮ ಪ್ರಸಿದ್ಧವಾಗಿದ್ದವು.
೫.	ಬೀಡಿ ತಯಾರಿಕೆ	ಮೊಳಕಾಲ್ಮುರು.
೬.	ಬಿದಿರು ಬೆತ್ತ ಮತ್ತು ಚರ್ಮದ ಕೈಗಾರಿಕೆ	ಚಿತ್ರದುರ್ಗ ಪ್ರದೇಶದ ಎಲ್ಲಾ ಗ್ರಾಮಗಳಲ್ಲಿ ಆ ಕಸುಬಿಗೆ ಅನುಸಾರವಾದ ಸಮುದಾಯಗಳು ವೃತ್ತಿಯಲ್ಲಿ ನಿರತವಾಗಿದ್ದವು.
೭.	ಮಡಕೆ,ಎಣ್ಣೆ,ಬೆಲ್ಲ, ಕೈಗಾರಿಕೆ	ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿಯೂ ಇದ್ದವು.
೮.	ರೇಷ್ಮೆ ಕೈಗಾರಿಕೆ	ಮೊಳಕಾಲ್ಮುರು ಊರಿನ ಅರ್ಧಭಾಗದ ಜನತೆ ಈ ವೃತ್ತಿಯಲ್ಲಿ ನಿರತರಾಗಿದ್ದರು.
೯.	ಮರದ ಸಾಮಾನುಗಳು ಮತ್ತು ಗಾಡಿಗಳ ತಯಾರಿಕೆ	ಜಿಲ್ಲೆಯ ಬಹುತೇಕವಾಗಿ ಬಡಗಿಗಳು ವಾಸವಾಗಿದ್ದ ಗ್ರಾಮಗಳಲ್ಲಿ ಇದ್ದವು.[೫೦]

ಚಿತ್ರದುರ್ಗದ ಸಂತೆಯಲ್ಲಿ ಮುಖ್ಯವಾಗಿ ರೇಷ್ಮೆ ಬಟ್ಟೆಗಳಿಗೆ ಬೇಡಿಕೆ ಹೆಚ್ಚಾಗಿದ್ದಾಗ, ವರ್ತಕರು ನೇಕಾರರಿಗೆ ಉತ್ಪನ್ನದ ಅರ್ಧ ಅಥವಾ ಸಂಪೂರ್ಣ ಹಣವನ್ನು ಮುಂಗಡವಾಗಿ ಕೊಡುತ್ತಿದ್ದರು. ಬೇಡಿಕೆ ಕಡಿಮೆ ಇದ್ದಾಗ ವರ್ತಕರಿಂದ ನೇಕಾರರು ಬಡ್ಡಿಗೆ ಹಣ ತಂದು ಬಟ್ಟೆ ತಯಾರಿಸುತ್ತಿದ್ದರು.

ಬದ್ದಿದರ ಶೇ. ರೂ.೨ರಂತೆ ತಿಂಗಳಿಗೊಮ್ಮೆ ವರ್ತಕರಿಗೆ ಅವರು ಬಟ್ಟೆಯನ್ನು ಮಾರಾಟ ಮಾಡಬೇಕಾಗಿತ್ತು. ಹೀಗೆ ನೇಕಾರರಿಂದ ಖರೀದಿಸಿದ ಬಟ್ಟೆಗಳನ್ನು ವರ್ತಕರು ಸಂತೆಗಳಲ್ಲಿ ಮಾರಾಟ ಮಾಡುತ್ತಿದ್ದರು. ನೇಕಾರರು ಸಾರ್ವಜನಿಕ ಮಾರುಕಟ್ಟೆಗೆ ಹೋಗಿ ವ್ಯಾಪಾರ ಮಾಡುತ್ತಿರಲಿಲ್ಲ. ವರ್ತಕರೇ ಅನೇಕ ವೇಳೆ ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಂಡು ನೇಕಾರರಿಗೆ ಒದಗಿಸುತ್ತಿದ್ದರು. ಅನೇಕ ವೇಳೆ ವರ್ತಕರ ಏಜೆಂಟರು ನೇಕಾರರಿಂದ ಬಟ್ಟೆಗಳನ್ನು ಖರೀದಿಸಿ ಸಂತೆಗಳಲ್ಲಿ ಮಾರುತ್ತಿದ್ದರು.[೫೧]

ಚಿತ್ರದುರ್ಗ ಪ್ರದೇಶದ ಬಜಾರ್ ಸರಕು ೧೮೮೧ ರಂತೆ

ಕ್ರಮ ಸಂಖ್ಯೆ	ದಿನಸು ಹೆಸರು	ರೂಪಾಯಿ ೧ಕ್ಕೆ	ಚಿತ್ರದುರ್ಗದ ಸೇರು
೧.	ಸಣ್ಣ ಅಕ್ಕಿ	೧	೦೭
೨.	ದಪ್ಪ ಅಕ್ಕಿ	೧	೦೮
೩.	ತೊಗರಿ ಬೇಳೆ	೧	೦೬
೪.	ಹುರುಳಿ	೧	೦೯
೫.	ರಾಗಿ	೧	೧೧
೬.	ಜೋಳ	೧	೧೦
೭.	ಎಳ್ಳು	೧	೦೮
೮.	ಹಸಿಕಡ್ಲೆ	೧	೦೫
೯.	ಕಲ್ಲುಪ್ಪು	೧	೧೦
೧೦.	ಗೋಧಿ	೧	೦೫

ಚಿತ್ರದುರ್ಗ ಪ್ರದೇಶದ ವ್ಯಾಪಾರ ವಿವಿಧ ರೀತಿಯ ಜಾತಿ ಅಥವಾ ವರ್ಗಗಳಲ್ಲಿ ಹಂಚಿಹೋಗಿತ್ತು. ಲಿಂಗಾಯತರು, ಬಣಜಿಗರು, ಕೋಮಟಿ, ನಗರ್ತ, ಮುದಳಿ, ಜೈನ ಮತ್ತು ಶ್ರಾವಕ ಹಾಗೂ ಲಾಡರ್ ಜಾತಿಯವರು ಮುಖ್ಯವಾಗಿ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿದ್ದರು. ಈ ಎಲ್ಲಾ ಸಮುದಾಯಗಳು ಭೂರಹಿತರಾಗಿ ಅಂದಿನ ಕೃಷಿ ಸಮುದಾಯದ ಪ್ರಮುಖ ಕೊಂಡಿಯಾಗಿದ್ದರು. ಜಿಲ್ಲೆಯಲ್ಲಿನ ಅವರ ಸಂಖ್ಯಾಬಲ ಈ ರೀತಿ ಪಟ್ಟಿ ಮಾಡಬಹುದು.[೫೨]

ಚಿತ್ರದುರ್ಗ ಜಿಲ್ಲೆಯ ವಾಣಿಜ್ಯ ಸಮುದಾಯ ೧೮೮೧ ರಂತೆ

ಲಿಂಗಾಯತ	ಬಣಜಿಗ	ಕೋಮಟಿ	ನಗರ್ತ	ಮುದಳಿ	ಜೈನ ಮತ್ತು ಶ್ರಾವಕ	ಲಾಡರ್
೪೨೯೧	೪೨೨೪	೨೬೦೫	೬೫೧	೪೯೨	೨೦೦	೨೧೬

ಕೈಗಾರಿಕಾ ಬೆಳವಣಿಗೆ : ಚಿತ್ರದುರ್ಗ ಪ್ರದೇಶದ ಚಿತ್ರದುರ್ಗ ಮತ್ತು ದಾವಣಗೆರೆ ನಗರಗಳು ೧೯ ಮತ್ತು ೨೦ನೇ ಶತಮಾನದ ಮೊದಲ ಭಾಗದಲ್ಲಿ ಪ್ರಮುಖ ವಾಣಿಜ್ಯ ಕೇಂದ್ರವಾಗಿ ಬೆಳೆದವು. ಇದು ಕೃಷಿ ಕ್ಷೇತ್ರದಲ್ಲಿ ವಾಣಿಜ್ಯ ಪ್ರಕ್ರಿಯೆ ಇದ್ದಿತೆನ್ನುವುದನ್ನು ತಿಳಿಸುತ್ತದೆ. ಆ ಕಾಲದ ಕೃಷಿ ವ್ಯವಸ್ಥೆಯಲ್ಲಿ ಮಾರಾಟ ಮಾಡಬಹುದಾದ ವಸ್ತುಗಳ ಹೆಚ್ಚುವರಿ ಅಥವಾ ಬಾಹುಳ್ಯ ಇದ್ದಿತೆಂಬುದನ್ನು ಸೂಚಿಸುತ್ತದೆ. ಹಾಗೆ ಹೆಚ್ಚುವರಿ ಇರದಿದ್ದರೆ ವಾಣಿಜ್ಯವನ್ನಾಗಲಿ, ಒಂದು ನಗರಕೇಂದ್ರದ ಉಗಮವನ್ನಾಗಲಿ ಯೋಚಿಸಲು ಸಾಧ್ಯವಿರಲಿಲ್ಲ. ದಾವಣಗೆರೆ ನಗರ ಕೇಂದ್ರದ ಅಭ್ಯುದಯವು ಸುತ್ತಮುತ್ತ ಗ್ರಾಮಗಳನ್ನು ಒಂದು ಸ್ಥಳೀಯ ವಿನಿಮಯ ಸಮುದಾಯವಾಗಿ, ಮಾರುಕಟ್ಟೆಯ ಉದಯಕ್ಕಾಗಿ ಒಂದುಗೂಡಿಸುವ ಸಾಮರ್ಥ್ಯವನ್ನು ಅವಲಂಬಿಸಿತ್ತು. ೧೯ನೇ ಶತಮಾನದ ಮಧ್ಯಭಾಗದಲ್ಲಿ ದಾವಣಗೆರೆ ನಗರವು ವಿವಿಧ ಕುಶಲಕರ್ಮಿಗಳಿಂದ, ವರ್ತಕರಿಂದ, ಶೆಟ್ಟಿಗಳಿಂದ ತುಂಬಿತ್ತು. ಇವರು ಕೃಷಿಕೇಂದ್ರಿತ ವಲಯದಿಂದ ಆಚೆಗಿನ ಗ್ರಾಹಕರಿಗಾಗಿ ಬೆಲೆಬಾಳುವ ವಸ್ತುಗಳನ್ನು ಉತ್ಪಾದಿಸಿ ಹಳ್ಳಿಯ ಪೋಷಕ - ಗ್ರಾಹಕರ ಸಂಬಂಧವನ್ನು ಮೀರಿ ಬೆಳೆಯಲು ಅನುವಾಗುತ್ತಿದ್ದರು. ಸ್ಥಳೀಯವಾಗಿ ಚಿತ್ರದುರ್ಗ ಪ್ರದೇಶವು ಸ್ವಯಂಪೂರ್ಣವಾಗಿ ಬೆಳೆಯುತ್ತಿತ್ತು. ಹೀಗೆ ಬೆಳೆದಾಗ ಹೊರಗಿನ ಆರ್ಥಿಕ ಸಂಬಂಧಗಳು ವಾಣಿಜ್ಯದ ಸ್ಥಳೀಯ ವ್ಯವಸ್ಥೆಗಳನ್ನು ಬಹು ಪ್ರಾದೇಶಿಕ ಹಾಗೂ ಅಂತಾರಾಷ್ಟ್ರೀಯ ಜಾಲಗಳನ್ನಾಗಿ ಕೂಡ ಬೆಳೆಸಿದವು. ಇದು ಸ್ಪಷ್ಟವಾಗಿ ದಾವಣಗೆರೆ ನಗರದ ಮೇಲೆ ತನ್ನ ಪ್ರಭಾವ ಬೀರಿತು. ಬ್ರಿಟಿಷರ ತಂತ್ರಜ್ಞಾನ ಹಾಗೂ ಅವರ ವೈಜ್ಞಾನಿಕ ಪವರ್‌ಲೂಮ್‌ಗಳಿಂದಾಗಿ ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ಆಧುನಿಕ ತಂತ್ರಜ್ಞಾನ ಕೈಗಾರಿಕೆಗಳು ೧೯೩೦ರ ನಂತರ ಪ್ರಾರಂಭವಾದವು.

ಇವು ಕೇವಲ ಮೈಸೂರು ಸಂಸ್ಥಾನಕ್ಕೆ ಮಾತ್ರವಲ್ಲದೆ, ದೇಶದ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರಮುಖ ಪಾತ್ರ ವಹಿಸಿದವು. ದಾವಣಗೆರೆ ನಗರದಲ್ಲಿ ೧೯೩೦ರ ದಶಕದಲ್ಲಿ ಆರಂಭವಾದ ಮೊದಲ ಹತ್ತಿ ಮಿಲ್ಲುಗಳೆಂದರೆ, ಕಾಟನ್‌ಮಿಲ್, ಜಯದೇವಮಿಲ್. ನಂತರದಲ್ಲಿ ಯಲ್ಲಮ್ಮ ಕಾಟನ್‌ಮಿಲ್, ಉಲ್ಲನ್ ಮತ್ತು ಸಿಲ್ಕ್‌ಮಿಲ್‌ನ ಉತ್ಪಾದನಾ ಚಟುವಟಿಕೆಯಲ್ಲಿ ಖ್ಯಾತಿ

ಪಡೆದಿತ್ತು. ಇದು ಸುಮಾರು ೧೫೦ ಎಕರೆ ಪ್ರದೇಶದಲ್ಲಿ ಕಾರ್ಯಾರಂಭ ಮಾಡಿತು. ನಂತರ ಒಂದಾದ ಮೇಲೊಂದರಂತೆ ಗಣೇಶ ಟೆಕ್ಸ್‌ಟೈಲ್‌ಮಿಲ್, ಅಂಜನೇಯ ಕಾಟನ್‌ಮಿಲ್ ಮುಂತಾದ ಎಂಟು ಕಾಟನ್‌ಮಿಲ್ಲುಗಳು ಪ್ರಾರಂಭವಾದವು. ನಂತರ ಕರ್ನಾಟಕದಲ್ಲಿಯೇ ಪ್ರಸಿದ್ಧವಾದ ರವಿ ವೆಜಿಟೆಬಲ್ ಆಯಿಲ್‌ಮಿಲ್ ಪ್ರಾರಂಭವಾಯಿತು. ಇವುಗಳಿಂದಾಗಿ ದಾವಣಗೆರೆ ನಗರವನ್ನು ಕರ್ನಾಟಕದ ಮ್ಯಾಂಚೆಸ್ಟರ್ ಎಂದು ಕರೆಯಲಾಗುತ್ತಿದೆ. ಆದರೂ ಈ ವೈಜ್ಞಾನಿಕ ಪವರ್‌ಲೂಮ್‌ಗಳಿಂದಾಗಿ, ಸ್ಥಳೀಯವಾಗಿ ಅನೇಕ ತೊಂದರೆಗಳನ್ನು ಜಿಲ್ಲೆಯಾದ್ಯಂತ ಜನರು ಅನುಭವಿಸುವಂತಾಯಿತು. ಏಕೆಂದರೆ, ಸ್ಥಳೀಯ ಗೃಹ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟವು.[೫೩]

ಒಟ್ಟಿನಲ್ಲಿ ಭೂಹಿಡುವಳಿ ಹೊಂದಿದ ಮತ್ತು ಹೊಂದದ ಸಮುದಾಯಗಳನ್ನು ಕುರಿತ ಈ ಚರ್ಚೆಯಿಂದ ಮುಖ್ಯವಾಗಿ ಗಮನಿಸುವ ಅಂಶವೆಂದರೆ ಭೂಹಿಡುವಳಿ ಹೊಂದಿದ ಸಮುದಾಯಗಳಿಗೆ ಇತರ ಸಮುದಾಯಗಳು ಎಲ್ಲ ಕಾಲಾವಧಿಯಲ್ಲಿಯು ಅವಲಂಬಿತವಾಗಿರುವುದು ಕಂಡುಬರುತ್ತದೆ. ಹಾಗೇ ಹೆಚ್ಚು ಕ್ಲಿಷ್ಟ ಸನ್ನಿವೇಶಗಳನ್ನು ಎದುರಿಸಿದವರು ಸಹ ಭೂರಹಿತ ಸಮುದಾಯದವರೇ ಆಗಿದ್ದಾರೆ. ಈ ದೃಷ್ಟಿಯಿಂದ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡಿದ್ದ ಅಬ್ಬೆ, ಜೆ. ಎ. ದುಬಾಯಿಸ್‌ನ ಅಭಿಪ್ರಾಯದಂತೆ "ಪ್ರಾಕೃತಿಕವಾಗಿ ಸಂಪತ್ತಿನ ಗಣಿಯಾಗಿರುವ ಭಾರತದಲ್ಲಿ, ನೂರರಲ್ಲಿ ತೊಂಬತ್ತರಷ್ಟು ಜನ ಕೃಷಿಯಾಧಾರಿತ ಜೀವನವನ್ನು ನಡೆಸುತ್ತಿದ್ದಾರೆ. ಇಲ್ಲಿ ಸಾಕಷ್ಟು ಕೃಷಿ ಭೂಮಿ ಇದೆ. ಇಲ್ಲಿನ ರೈತರು ಎರಡು, ಮೂರು ಅಥವಾ ನಾಲ್ಕು ನೇಗಿಲುಗಳನ್ನು ಹೊಂದಿದ್ದಾರೆ. ಶೂದ್ರವರ್ಣದಲ್ಲಿ ಮೇಲ್ವರ್ಗದ ಜಾತಿಗಳು ತಮ್ಮ ಕೃಷಿ ನೆರವಿಗೆ ಕೆಳಹಂತದ ಜನರನ್ನು ಸೇವಕರಾಗಿ ಹೊಂದಿದ್ದಾರೆ. ಈ ಶೂದ್ರವರ್ಣದಲ್ಲಿ ಕೆಲವರು ಸಾಕಷ್ಟು ಶ್ರೀಮಂತರಾಗಿದ್ದಾರೆ. ಇವರು ವಾಸ ಮಾಡುವ ಹಳ್ಳಿಗಳಲ್ಲಿ ಶೂದ್ರರೇ ಮುಖಂಡರಾಗಿದ್ದಾರೆ. ಇವರು ಕೆಲವು ಸಂದರ್ಭಗಳಲ್ಲಿ ಅಧಿಕ ಪ್ರಮಾಣದ ಸರಕಾರಿ ಭೂಹಿಡುವಳಿಯ ಒಡೆತನವನ್ನು ಹೊಂದಿದ್ದಾರೆ. ಇಂತಹ ಮುಖಂಡರ ಮುಖ್ಯಕಾರ್ಯವು ಕಂದಾಯ ಸಂಗ್ರಹಿಸುವುದು, ಚಿಕ್ಕಪುಟ್ಟ ನ್ಯಾಯ ತೀರ್ಮಾನ ಮಾಡುವುದು. ಇಡೀ ಗ್ರಾಮಗಳು ಇವರಿಗೆ ನಂಬಿಕೆಯಿಂದ ಇರುತ್ತಿದ್ದವು. ಇವರು ಸುಶಿಕ್ಷಿತರಾಗಿದ್ದು, ಸಾಮಾನ್ಯವಾಗಿ ಓದಲು ಮತ್ತು ಬರೆಯಲು ಕಲಿತಿದ್ದರು. ಹಾಗೆಯೇ ಶೇಕಡ ೩೦ರಷ್ಟು ಜನಸಂಖ್ಯೆಯನ್ನು ಹೊಂದಿದ ಬ್ರಾಹ್ಮಣರು ಮತ್ತು ವೈಶ್ಯರು ಶೂದ್ರ ವರ್ಗದವರಿಗಿಂತ ಶ್ರೀಮಂತರಾಗಿದ್ದರು. ವೈಶ್ಯ ವರ್ಗವು ವ್ಯಾಪಾರ ಮತ್ತು ವಾಣಿಜ್ಯೋದ್ಯಮದಲ್ಲಿ ಹಿಡಿತ ಸಾಧಿಸಿತ್ತು. ಬ್ರಾಹ್ಮಣರು ಬಹುತೇಕವಾಗಿ ಸರಕಾರಿ

ಉದ್ಯೋಗವನ್ನು ಪಡೆದಿದ್ದರು. ಅವರಲ್ಲಿ ಕೆಲವರು ಸಾರ್ವಜನಿಕ ಕಂದಾಯ ಇಲಾಖೆಯಲ್ಲಿ ಸಹಾಯಕ ಕಲೆಕ್ಟರ್‌ಗಳಾಗಿ, ನ್ಯಾಯಾಧೀಶರಾಗಿ, ಗುಮಾಸ್ತರಾಗಿ . ಇವರು ಅಗ್ರಹಾರ ಗಳಲ್ಲಿ, ಬ್ರಾಹ್ಮಣರ ಹಳ್ಳಿಗಳಲ್ಲಿ, ನಗರಗಳಲ್ಲಿ, ಜಿಲ್ಲಾ ಕೇಂದ್ರಗಳಲ್ಲಿ ವಾಸವಾಗಿದ್ದಾರೆ" ಎಂದು ದುಬಾಯಿಸ್ ವಿವರಿಸುತ್ತಾನೆ.

ಇದೇ ಸಂದರ್ಭದಲ್ಲಿ ದುಬಾಯಿಸ್ ಭಾರತದ ಬಡತನಕ್ಕೆ ಕಾರಣವನ್ನು ಕೂಡ ವಿವರಿಸುತ್ತಾನೆ. ಪಾಶ್ಚಿಮಾತ್ಯ ಕೈಗಾರೀಕರಣದಿಂದಾಗಿ ಹೇಗೆ ಭಾರತದ ಕೈಗಾರಿಕೆಗಳು, ಅದರಲ್ಲೂ ನೇಯ್ಗೆ ಉದ್ಯಮವು ನಾಶ ಹೊಂದಿತು. ಇಂತಹ ಕುಶಲಕರ್ಮಿಗಳು ತಮ್ಮ ಹೊಟ್ಟೆ ಪಾಡಿಗಾಗಿ ಪರದಾಟ ಮಾಡುತ್ತಿದ್ದರು ಎನ್ನುತ್ತಾನೆ. ಸಾಮಾನ್ಯವಾಗಿ ನೇಯ್ಗೆಯವರಂತೆಯೇ ಕ್ಷೌರಿಕರು, ಮಡಿವಾಳರು ಇತರ ಕುಶಲ ಕೆಲಸಗಾರರ ಬದುಕು ದುಸ್ಥಿತಿಯಿಂದ ಕೂಡಿದ್ದನ್ನು ಗುರುತಿಸಿದ್ದಾನೆ. ಇದಕ್ಕಾಗಿ ದುಬಾಯಿಸ್ ತಾನು ಕಂಡ ಒಬ್ಬ ಅಕ್ಕಸಾಲಿಯ ಜೀವನ ಕುರಿತು ಬರೆಯುತ್ತಾ, "ಅವನ ಮನೆಯಲ್ಲಿ ಒಂದು ಅಥವಾ ಎರಡು ನೀರು ಕುಡಿಯುವ ಮತ್ತು ಕೆಲವು ಊಟಕ್ಕಾಗಿ ಬಳಸುವ ತಾಮ್ರದ ಪಾತ್ರೆಗಳಿದ್ದವು. ಹಾಗೆಯೇ ಕೆಲವು ಕಬ್ಬಿಣದ ಸಾಮಗ್ರಿಗಳಿದ್ದವು. ಮಣ್ಣಿನ ಗೋಡೆಗಳಿಂದ ನಿರ್ಮಿಸಿದ ಹುಲ್ಲಿನ ಗುಡಿಸಲಿನಲ್ಲಿ ಆತ ವಾಸವಾಗಿದ್ದನು" ಎನ್ನುತ್ತಾನೆ. ಈ ವಿಚಾರವು ಚಿತ್ರದುರ್ಗ ಪ್ರದೇಶಕ್ಕೂ ಅನ್ವಯಿಸುತ್ತದೆ.[೫೪]

೧೮೫೩-೫೪ರಲ್ಲಿ ವಿವಿಧ ವೃತ್ತಿಗಳನ್ನು ಅನುಸರಿಸುತ್ತಿದ್ದ ಸಮುದಾಯಗಳು

ಸಮುದಾಯಗಳು	ಕಸಬು	ಜನಸಂಖ್ಯೆ
೧. ಅಗಸರು	ಬಟ್ಟೆ ತೊಳೆಯುವವರು	೮,೭೮೮
೨. ಬಣಜಿಗರು	ವ್ಯಾಪಾರಿಗಳು	೪,೯೮೪
೩. ಬೇಡರು	ಬೇಟೆಗಾರರು	೨೮,೦೫೦
೪. ಬೆಸ್ತರು	ಮೀನುಗಾರರು	೬,೨೬೯
೫. ದರ್ಜಿಗಳು	ಬಟ್ಟೆ ಹೊಲಿಯುವವರು	೮೩೭
೬. ಗಾಣಿಗರು	ಎಣ್ಣೆ ತೆಗೆಯುವವರು	೧೯೬೨
೭. ಗೊಲ್ಲರು	ಪಶುಸಂಗೋಪಕರು	೪೬,೨೯೬
೮. ಕ್ಷೌರಿಕರು	ಕ್ಷೌರ ಮಾಡುವವರು	೨,೧೦೧
೯. ಈಡಿಗರು	ಹೆಂಡ ಇಳಿಸುವವರು	೫,೦೯೭
೧೦. ಕುಂಬಾರರು	ಮಡಿಕೆ ಮಾಡುವವರು	೨,೧೯೩
೧೧. ಕುರುಬರು	ಕುರಿ ಕಾಯುವವರು	೩೫,೪೫೯
೧೨. ಮೋಚಿ	ಚಮ್ಮಾರರು	೩೩೫
೧೩. ಮೊದಲಿ	ಪೂಜಾರರು	೧೨೧
೧೪. ನಟುವ	ನೃತ್ಯಗಾರರು	೮೪
೧೫. ನೇಕಾರರು	ಬಟ್ಟೆ ನೇಯುವವರು	೧೧,೦೪೦
೧೬. ಸಾದರು	ಕೃಷಿಕರು	೩೪,೯೮೩
೧೭. ಟೈಗ್ಲರ್	ತರಕಾರಿ ತೋಟ ಮಾಡುವವರು	೪೫
೧೮. ಉಪ್ಪಾರರು	ಉಪ್ಪು ತಯಾರು ಮಾಡುವವರು	೧೩,೦೭೦
೧೯. ಒಕ್ಕಲಿಗರು	ಕೃಷಿ ಕಾರ್ಮಿಕರು	೬೯,೭೩೫
	ಒಟ್ಟು	೩,೪೧,೪೪೯

ಚಿತ್ರದುರ್ಗ ಪ್ರದೇಶದ ವಿವಿಧ ಸಮುದಾಯಗಳ ಪಟ್ಟಿ ೧೮೮೧ ಭೂರಹಿತ ಸಮುದಾಯಗಳು

ಕ್ರ.ಸಂ.	ಜಾತಿ	ಗಂಡಸರು	ಹೆಂಗಸರು	ಒಟ್ಟು
೧.	ಕಮ್ಮಾರರು	೨೬೩೨	೨೪೮೧	೫೧೧೩
೨.	ಈಡಿಗರು	೧೫೫೩	೧೬೬೩	೩೨೨೧
೩.	ಪಂಚವಾಳರು	೩೨೪೦	೨೯೭೨	೬೨೧೨
೪.	ಕಂಬಳಿ ಕುರುಬರು	೧೮೯೪	೧೮೮೯	೩೭೮೩
೫.	ತೆಲುಗು ಬಣಜಿಗರು	೧೪೭೩	೧೩೪೭	೨೮೨೦
೬.	ದೇವಾಂಗದವರು	೧೫೧೯	೧೫೩೭	೩೦೫೬
೭.	ತೊಗಟರು	೬೧೭	೫೮೬	೧೨೦೩
೮.	ಪಟ್ಟೆಗಾರರು	೭೫೯	೬೬೯	೧೧೪೮
೯.	ಪದ್ಮಸಾಲೆಯವರು	೭೫೯	೬೮೯	೧೪೪೮
೧೦.	ಜಾಡರು	೪೩೮	೪೧೩	೮೪೩
೧೧.	ಕುಂಬಾರರು	೫೮೮	೫೨೩	೧೧೧೧
೧೨.	ಗಾಣಿಗರು	೯೩	೯೮	೧೯೧
೧೩.	ಮೇದರು	೫೧	೪೭	೯೮
೧೪.	ಹೊಲೆಯರು	೩೧೧೩	೩೧೭೯	೬೨೯೨
೧೫.	ಮಾದಿಗರು	೧೭೦.೨೭	೧೭೨೩೦	೩೪೨೫೭
೧೬.	ದರ್ಜಿಗಳು	೨೦೫	೧೮೫	೩೯೦
೧೭.	ಕೊಂಚರು	೩೮೦	೩೯೭	೭೭೭
೧೮.	ಲಂಬಾಣಿಗಳು	೧೬೮೦	೧೫೪೩	೩೨೨೯
೧೯.	ಜೋಗಿಗಳು	೧೩೫	೧೩೭	೨೭೨
೨೦.	ದೊಂಬರು	೫೧	೬೫	೧೧೬
೨೧.	ಉಪ್ಪಾರರು[೫೬]	೪೫೮೦	೪೨೨೩	೮೮೬೩

ಚಿತ್ರದುರ್ಗ ಜಿಲ್ಲೆಯ ರಸ್ತೆಗಳು ೧೮೮೧ರಲ್ಲಿದ್ದಂತೆ

ಚಿತ್ರದುರ್ಗ ಜಿಲ್ಲೆಯ ರಸ್ತೆಗಳ ಪ್ರಾಂತೀಯ ಹೆದ್ದಾರಿಗಳ ಉದ್ದ ೨೨೦ ಮೈಲಿಗಳು ಜಿಲ್ಲಾ ರಸ್ತೆಗಳ ಉದ್ದ ೨೯೬ ಮೈಲಿಗಳು.

೧೯೨೪-೨೫ರಲ್ಲಿದ್ದ ಚಿತ್ರದುರ್ಗ ಜಿಲ್ಲೆಯ ಪ್ರಮುಖ ರಸ್ತೆ ಮಾರ್ಗಗಳು

ಕ್ರಮ ಸಂಖ್ಯೆ	ಪ್ರಾಂತೀಯ ಹೆದ್ದಾರಿಗಳು
೧.	ಸೇಲಂ - ಬಳ್ಳಾರಿ (ಚಿತ್ರದುರ್ಗ ಮಾರ್ಗ)
೨.	ಬೆಂಗಳೂರು - ಧಾರವಾಡ
೩.	ಚಿತ್ರದುರ್ಗ - ಭದ್ರಾವತಿ
೪.	ಶಿವಮೊಗ್ಗ - ಭದ್ರಾವತಿ
೫.	ಹಿರಿಯೂರು - ವಾಣಿವಿಲಾಸಪುರ

ಕ್ರಮ ಸಂಖ್ಯೆ	ಜಿಲ್ಲೆ ರಸ್ತೆಗಳು
೦೧.	ಹಿರಿಯೂರು - ಹುಳಿಯಾರು ರಸ್ತೆ
೦೨.	ಚಳ್ಳಕೆರೆ - ಪಾವಗಡ ರಸ್ತೆ
೦೩.	ಚಳ್ಳಕೆರೆ - ನಾಯಕನಹಟ್ಟಿ, ಜಗಳೂರು ರಸ್ತೆ
೦೪.	ಚಿತ್ರದುರ್ಗ - ಚಳ್ಳಕೆರೆ ರಸ್ತೆ
೦೫.	ವಿಜಾಪುರದ - ಉಜ್ಜಯಿನಿ ರಸ್ತೆ
೦೬.	ದಾವಣಗೆರೆ - ಹದಡಿ ರಸ್ತೆ
೦೭.	ದಾವಣಗೆರೆ - ಅಣಜಿ - ಜಗಳೂರು ರಸ್ತೆ
೦೮.	ಹರಿಹರ - ಹರಪನಹಳ್ಳಿ ರಸ್ತೆ
೦೯.	ಅನಗೋಡು - ಕೊಡಗನೂರು ರಸ್ತೆ
೧೦.	ಅಣಜಿ - ಉಚ್ಚಂಗಿದುರ್ಗ ರಸ್ತೆ
೧೧.	ರಾಮಗಿರಿ - ಹೊಸದುರ್ಗ ರಸ್ತೆ
೧೨.	ಹೊಳಲ್ಕೆರೆ - ಹುಳಿಯಾರು ರಸ್ತೆ
೧೩.	ಬಿದರಕೆರೆ - ಹೊಸದುರ್ಗ ರಸ್ತೆ
೧೪.	ಚನ್ನಗಿರಿ - ಮಲೆಬೆನ್ನೂರು ರಸ್ತೆ
೧೫.	ಸೂಳೆಕೆರೆ - ಸಾಸಲು ರಸ್ತೆ
೧೬.	ತರೀಕೆರೆ - ಹೊಸದುರ್ಗ ರಸ್ತೆ[೫೭]

ಅಡಿಟಿಪ್ಪಣಿ

೧. **ಚಿತ್ರದುರ್ಗ ಜಿಲ್ಲೆಯಲ್ಲಿನ, ಚಿತ್ರದುರ್ಗ ತಾಲೂಕಿನ ಮಠಗಳು** ಚಿತ್ರದುರ್ಗದ ಮುರುಘಾಮಠ, ತರಳಬಾಳು ಬೃಹನ್ಮಠ ಸಿರಿಗೆರೆ, ಅಂಕಲಿಮಠ, ಕೂಡಲಿ ಶೃಂಗೇರಿಮಠ, ಉಜ್ಜನಿಮಠ, ಉತ್ತರಾಧಿಮಠ, ರಾಘವೇಂದ್ರಸ್ವಾಮಿಗಳಮಠ, ಆದಿಚುಂಚನಗಿರಿ ಶಾಖಾಮಠ, ಶ್ರೀ ಕಬೀರಾನಂದ ಮಠ.

ದಾವಣಗೆರೆ ತಾಲೂಕಿನ ಮಠಗಳು ವಿರಕ್ತ ಮಠ, ಮೈಸೂರು ಮಠ, ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಉತ್ತರಾಧಿಮಠ, ಶಂಕರಮಠ, ಶ್ರೀಶೈಲ ವಾಗೀಶ ಪಂಚಾಚಾರ್ಯಮಠ, ಶ್ರೀ ರಂಗಾವ ಧೂತರಮಠ, ಹಿರೇಮಠ, ಬೃಹನ್ಮಠ, ಶ್ರೀ ವೀರೇಶ್ವರ ಪುಣ್ಯಾಶ್ರಮಮಠ, ಶ್ರೀ ಶಿವಯೋಗ ಮಂದಿರ (ಶ್ರೀ ಜಯದೇವ ಜಗದ್ಗುರುಗಳವರ ಗದ್ದಿಗೆ), ಕಲ್ಲನಹಳ್ಳಿಯ ಶ್ರೀ ಶರಣ ಬಸವೇಶ್ವರ ಸ್ವಾಮಿಮಠ, ಹೆಬ್ಬಾಳ ರುದ್ರಸ್ವಾಮಿಮಠ, ಬೇತೂರಿನಕಲ್ಮಠ, ಕೊಳಾಳ ಶ್ರೀಕೆಂಚ ಅವಧೂತರ ಮಠ, ಅಣಜಿಮಠ

ಹರಿಹರ ತಾಲೂಕಿನ ಮಠಗಳು ಶ್ರೀ ರಾಘವೇಂದ್ರ ಸ್ವಾಮಿಗಳವರಮಠ, ಶ್ರೀ ಓಂಕಾರೇಶ್ವರಮಠ, ಶ್ರೀ ನಾರಾಯಣ ಮಹಾರಾಜರ ಆಶ್ರಮಮಠ, ಬಾವೋಜಿಮಠ, ಹುಚ್ಚಪ್ಪ ಸ್ವಾಮಿಗಳಮಠ, ಶ್ರೀಶೈಲಮಠ, ರಾಜನಹಳ್ಳಿಯ ವಾಲ್ಮೀಕಿಮಠ

ಹೊಸದುರ್ಗ ತಾಲೂಕಿನ ಮಠಗಳು ಶ್ರೀ ತರಳಬಾಳು ಜಗದ್ಗುರು ಶಾಖಾಮಠ, ಶ್ರೀ ಮಠ ಸಾಣೇಹಳ್ಳಿ, ಒಪ್ಪತ್ತಿನ ಸ್ವಾಮಿಮಠ, ಹೊಸದುರ್ಗ, ಪರಪ್ಪಸ್ವಾಮಿಮಠ, ಶ್ರೀರಾಂಪುರ, ಐರಣಿ ಹೊಳೆಮಠ, ಕಿಟ್ಟದಾಳು, ವಿರಕ್ತಮಠ, ಮತ್ತೋಡು, ಶ್ರೀ ಚಿನ್ಮೂಲಾದ್ರಿ ಶಿಲಾಪುರಿ ಉಪ್ಪಾರ ಮಹಾಸಂಸ್ಥಾನಮಠ, ಮಧುರೆ

ಹೊಳಲ್ಕೆರೆ ತಾಲೂಕಿನ ಮಠಗಳು ಚಿತ್ರಹಳ್ಳಿಮಠ, ಒಂಟಿ ಕಂಬದಮಠ, ಹೊಳಲ್ಕೆರೆ, ರಾಘವೇಂದ್ರಸ್ವಾಮಿಮಠ, ಮಲ್ಲಾಡಿಹಳ್ಳಿ

ಮೊಳಕಾಲ್ಮೂರು ತಾಲೂಕಿನ ಮಠಗಳು ಗವಿಸಿದ್ಧೇಶ್ವರಸ್ವಾಮಿಮಠ, ರಾಮ ಸಾಗರ ಹತ್ತಿರದ ಜಟಿಂಗರಾಮೇಶ್ವರಮಠ, ತಾತಾಚಾರ್ಯರಮಠ, ನುಂಕಿಮಲೆ ಬೆಟ್ಟ

ಜಗಳೂರು ತಾಲೂಕಿನ ಮಠಗಳು ಕಲ್ಮಠ ಜಗಳೂರು, ಮುಸ್ಟೂರುಮಠ, ಜಗಳೂರು ವಿರಕ್ತಮಠ, ಕಣಕುಪ್ಪಮಠ, ಗವಿಮಠ ಗವಿಮಠಗ್ರಾಮ

ಚಳ್ಳಕೆರೆ ತಾಲೂಕಿನ ಮಠಗಳು ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಯ ಸಮಾಧಿಮಠ, ನಾಯಕನ ಹಟ್ಟಿ, ಕಲ್ಮಠ ಬೆಳಗಟ್ಟ, ಹನುಮಂತದೇವರಮಠ, ಸಾಲೋಗಾವಿ,

ಹಿರಿಯೂರು ತಾಲೂಕಿನ ಮಠಗಳು ವ್ಯಾಸರಾಯರಮಠ ಹಿರಿಯೂರು, ಅನ್ನಛತ್ರದ ಮಠ ಉತ್ತಾರಾದಿಮಠ, ಹಿರಿಯೂರು

೨. ಬಸವಲಿಂಗ ಸೊಪ್ಪಿಮಠ, ***ಸಾರಂಗ ಮಠ ಇತಿಹಾಸ,*** ಸಾಧನೆ, ಸಂಪುಟ-೨೫, ಅಕ್ಟೋಬರ್-ಡಿಸೆಂಬರ್ ಸಂಚಿಕೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧, ಪು.೧೧

೩. ಎಸ್. ಶ್ರೀಕಂಠಶಾಸ್ತ್ರಿ ***ನೊಳಂಬ ಪಲ್ಲವರು,*** (ಅನು)ಸೂರ್ಯನಾಥ ಕಾಮತ್, ಆರ್.ಆರ್.ದಿವಾಕರ್ (ಸಂ), ಕರ್ನಾಟಕದ ಪರಂಪರೆ, ಸಂಪುಟ-೧, ಮೈಸೂರು ರಾಜ್ಯ ಸರಕಾರ, ಬೆಂಗಳೂರು, ೧೯೭೦, ಪು.೧೬೭

೪. ಎಡ್ಗರ್ ಥರ್ಸ್ಟನ್, **ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ,** ಗೌರ್ನಮೆಂಟ್ ಪ್ರೆಸ್, ಮದ್ರಾಸ್, ಸಂಪುಟ-IV, ೧೯೦೯, ಪು.೧೬೩

೫. ಅ. ನ. ಕೃಷ್ಣರಾಯ (ಸಂ), ***ದೇವಕವಿಯ ಮರುಳಸಿದ್ಧ ಕಾವ್ಯ,*** ವಿಶ್ವವಾಣಿ ಪ್ರಕಟಣಾ ಮಂದಿರ, ಬೆಂಗಳೂರು, ೧೯೮೨, ಪು.೨೦

೬. ದಾವಣಗೆರೆ ನಂ.೧೬೪ನೇ ಶಾಸನದಲ್ಲಿ (ಎ.ಕ.೧೧) ಚಿತ್ರದುರ್ಗವನ್ನು ಚಿನ್ಮನಗಿರಿದುರ್ಗ ಎಂದಿರುವುದರಿಂದ ಚಿನ್ಮನಗಿರಿ ಇಂದಿನ ಚಿತ್ರದುರ್ಗವೇ ಆಗಿದೆ.

೭. ಕಗ್ಗಲ್ಲಪುರ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಉಜ್ಜಯಿನಿಗೆ ಸುಮಾರು ಮೂರು ಮೈಲಿ ದೂರದಲ್ಲಿದೆ

೮. ಗೋವಿಂದ ಪೈ, ***ವೀರಶೈವ ಆಚಾರ್ಯತ್ರಯರ ಕಾಲ,*** ಹೆರಂಜೆ ಕೃಷ್ಣಭಟ್ಟ, ಮುರಳೀಧರ ಉಪಾಧ್ಯ (ಸಂ), ಗೋವಿಂದ ಪೈ ಸಂಶೋಧನ ಸಂಪುಟ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ, ಪು.೮೭೩

೯. ವೀರಣ್ಣ ರಾಜೂರ (ಸಂ), **ವೀರಶೈವ ತಾರಾವಳಿ,** ತೋಂಟದಾರ್ಯ ಮಠ, ಗದಗ, ೧೯೯೮, ಪು.೨೭೧. ಬಿ. ರಾಜಶೇಖರಪ್ಪ, **ತರಳಬಾಳು ಪಟ್ಟವಲ್ಲರಿ-ಕೆಲವು ಸಂಗತಿಗಳು,** ರಾಜಶೇಖರ ಹನುಮಲಿ(ಸಂ), ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ, ತರಳಬಾಳು ಹುಣ್ಣಿಮೆ ಮಹೋತ್ಸವ, ಹೊಸದುರ್ಗ, ೧೯೯೮, ಪು. ೬

೧೦. ಮಹದೇವ ಬಣಕಾರ(ಸಂ), **ದಿಟ್ಟಹೆಜ್ಜೆ-ಧೀರಕ್ರಮ** ಶ್ರೀ ತರಳಬಾಳು ಪ್ರಕಾಶನ, ಚಿತ್ರದುರ್ಗ ಜಿಲ್ಲೆ, ೧೯೮೮, ಪು.೩೫-೫೦

೧೧. ಮಹಾದೇವ ಬಣಕಾರ(ಸಂ), **ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ,** ತರಳಬಾಳು ಪ್ರಕಾಶನ, ಚಿತ್ರದುರ್ಗ ಜಿಲ್ಲೆ, ೧೯೮೨, ಪು.೧೮೨-೧೯೪

೧೨. ಎಲ್. ಬಸವರಾಜು(ಸಂ), **ಮಹದೇವನ ಮಹಾಲಿಂಗೇಂದ್ರ ವಿಜಯ,** ಚಿತ್ರದುರ್ಗ ಬೃಹನ್ಮಠ, ಚಿತ್ರದುರ್ಗ, ೧೯೭೧, ಪು.೭೪-೮೧

೧೩. ಎಡ್ಗರ್ ಥರ್ಸ್ಟನ್, **ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ,** ಸಂಪುಟ-IV, ಪು.೨೬೯

೧೪. ಹಿರೆಮಲ್ಲೂರು ಈಶ್ವರನ್, ಲಿಂಗಾಯತ ಧರ್ಮ ಒಂದು ಅಧ್ಯಯನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೬, ಪು.೧೧೦

೧೫. ಕೆ.ಜಿ.ವೆಂಕಟೇಶ ಜೋಯಿಸ್, **ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬, ಪು.೧೦೬

೧೬. ಲಕ್ಷ್ಮಣ್ ತೆಲಗಾವಿ, ***ಶ್ರೀ ಬೃಹನ್ಮಠದಲ್ಲಿ ದೊರೆತ ಕೆಲವು ಅಪ್ರಕಟಿತ ಶಾಸನಗಳು***, ಜಿ.ಎಸ್. ಸಿದ್ಧಲಿಂಗಯ್ಯ(ಸಂ), ಜಂಗಮ ಜ್ಯೋತಿ ಸ್ಮರಣ ಸಂಚಿಕೆ, ಚಿತ್ರದುರ್ಗ ಬೃಹನ್ಮಠ, ಚಿತ್ರದುರ್ಗ, ೧೯೭೫, ಪು. ೫೧

೧೭. **ಅಬ್ಬಿಮಠದ ತಾಮ್ರ ಶಾಸನ ೬೩(೧೩)**, ಎಪಿಗ್ರಫಿ ಕರ್ನಾಟಕ, ಸೋಮವಾರಪೇಟೆ ತಾಲೂಕು, ಕೊಡಗು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೨

೧೮. **ಮಾದಾಪುರ ಮಠದ ತಾಮ್ರ ಶಾಸನ ೩೨(೧೪)** ಎಫಿಗ್ರಫಿ ಕರ್ನಾಟಕ ಕೊಡಗು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೨

೧೯. ಕಣಕುಪ್ಪಿ, ಕೊಟ್ಟೂರು ಬಸವಪ್ಪ, **ಶ್ರೀ ಜಗದ್ಗುರು ಜಯದೇವ ದಿಗ್ವಿಜಯ**, ಶ್ರೀ ಜಯದೇವ ಪ್ರೆಸ್, ದಾವಣಗೆರೆ, ೧೯೬೬, ಪುರವಾಣಿ ಪು.೩೪(ಈ ಭಾಗದಲ್ಲಿ ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ್ ಮಠಕ್ಕೆ ನೀಡಿರುವ ನಿರೂಪಗಳನ್ನು ಮೂಲರೂಪದಲ್ಲಿ ಪ್ರಕಟಿಸಲಾಗಿದೆ)

೨೦. ಲಕ್ಷ್ಮಣ್ ತೆಲಗಾವಿ, ***ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ಶ್ರೀ ಬೃಹನ್ಮಠ ಸಂಬಂಧ***, ಜಿ. ಎಸ್. ಸಿದ್ಧಲಿಂಗಯ್ಯ(ಸಂ), ಜಂಗಮ ಜ್ಯೋತಿ ಪು. ೧೦೮

೨೧. ಚಿತ್ರದುರ್ಗ ಮುರುಘಾಮಠದ ಭೂಹಿಡುವಳಿಗಳಿಗೆ ಸಂಬಂಧಿಸಿದ ಭೂದಾಖಲೆಗಳು ಮಠದಲ್ಲಾಗಲಿ, ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಛೇರಿ ಮತ್ತು ತಾಲೂಕು ಅಧಿಕಾರಿಗಳ ಕಛೇರಿಯಲ್ಲಿ ದೊರೆಯಲಿಲ್ಲ. ಹಾಗಾಗಿ ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿ ಸಂಗ್ರಹ ಮಾಡಲಾಯಿತು. ನಂತರ ನಾನು ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ಮೂರು ಬಾರಿ ಮಠದಲ್ಲಿ ಸುಮಾರು ೫೦ ವರ್ಷದವರೆಗೆ ಕೃಷಿಯ ಮೇಲ್ವಿಚಾರಣೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ ಚಿತ್ರದುರ್ಗ ತಾಲೂಕು ಕವಾಡಿಗರಹಟ್ಟಿ ಪಿ. ಮಹಾದೇವಪ್ಪ ಎಂಬುವರನ್ನು ದಿನಾಂಕ.೧೬-೩-೨೦೦೦ರಂದು ಸಂದರ್ಶಿಸಲಾಗಿದೆ (೧೯೨೨ ಜನನ, ಈಗ ಅವರಿಗೆ ಸುಮಾರು ೭೫ ವರ್ಷ ವಯಸ್ಸಾಗಿದೆ). ಪಿ.ಮಹಾದೇವಪ್ಪನವರು ಮಠದ ಭೂಒಡೆತನಕ್ಕೆ ಸಂಬಂಧಿಸಿದಂತೆ ಹಾಗೂ ಮಠದ ಭೂಹಿಡುವಳಿಗಳ ಹಂಚಿಕೆಯನ್ನು ಕುರಿತು ವಿವರ ಒದಗಿಸಿದರು. ಹಾಗೆಯೇ ಚಿತ್ರದುರ್ಗ ತಾಲೂಕು ಕವಾಡಿಗರಹಟ್ಟಿ ಬಸವನಗೌಡ ಎಂಬುವರನ್ನು ಸಂದರ್ಶನ ಮಾಡಲಾಗಿದೆ. ಇವರು ಸುಮಾರು ೨೫ ವರ್ಷಗಳವರೆಗೆ ಮಠದ ಕೃಷಿಯ ಮೇಲ್ವಿಚಾರಣೆಯನ್ನು ನೋಡಿ ಕೊಂಡಿದ್ದವರು. ಇವರ ಸಂದರ್ಶನ ಸಂದರ್ಭದಲ್ಲಿ ಮಠದಲ್ಲಿ ದುಡಿಯುವ ಸಮುದಾಯಗಳು ಮತ್ತು ಉತ್ಪಾದನೆಯನ್ನು ಕುರಿತಂತೆ ವಿವರವಾದ ಮಾಹಿತಿ ಒದಗಿಸಿದರು.

೨೨. ಪ್ರಜಾವಾಣಿ, ದಿನಪತ್ರಿಕೆ, ಡಿಸೆಂಬರ್ ೫, ಬೆಂಗಳೂರು, ೧೯೯೮, ಪು.೫

೨೩. **ಕೊಡಗು ಸಮಾಚಾರ**, ವಿನಾಯಕ ಪ್ರಿಂಟರ್ಸ್, ವಿರಾಜಪೇಟೆ, ದಿನಪತ್ರಿಕೆ, ೧೭-೭-೨೦೦೦ದಂದು ಪ್ರಕಟವಾಗಿರುವಂತೆ ೧೬೯೭ರಲ್ಲಿ ಕೊಡಗಿನ ರಾಜರು ಕೊಡಗಿನಲ್ಲಿ ಅಸ್ತಿತ್ವದಲ್ಲಿದ್ದ ಅಬ್ಬಿಮಠ ಹಾಗೂ ಮಹಾದೇವಪುರ ಮಠಕ್ಕೆ ಸೋಮವಾರಪೇಟೆ ತಾಲೂಕಿನಲ್ಲಿ ಜಮೀನನನ್ನು ಇನಾಂ ಆಗಿ ನೀಡಿದ್ದರು. ಈ ಎರಡೂ ಮಠದ ಮುಖ್ಯ ಕಛೇರಿಯು ಬೇಲೂರು ಗ್ರಾಮದಲ್ಲಿತ್ತು. ಹಾಗೂ ಈ ಭೂಮಿಯ ಜಮಾಬಂದಿಯು ಎರಡೂ ಮಠದ ಹೆಸರಿನಲ್ಲಿತ್ತು. ಚಿತ್ರದುರ್ಗದ ಬೃಹನ್ಮಠವು ಈ ಎರಡೂ ಮಠಗಳನ್ನು ತನ್ನ ಶಾಖಾ ಮಠಗಳನ್ನಾಗಿ ವರ್ಗಾಯಿಸಿಕೊಂಡಿತು. ಹೀಗಾಗಿ ಮಠದ ಭೂಮಿಗಳು ಚಿತ್ರದುರ್ಗದ ಮುರುಘಮಠಕ್ಕೆ ಸೇರಿದ್ದವು. ಮಹಾದೇವಪುರ ಮಠಕ್ಕೆ ಒಟ್ಟು ೧೩೦೦ ಎಕರೆ ಭೂಮಿ ಹಾಗೂ ಬಾಣೆ ಜಾಗವನ್ನು ಅಂದಿನ ರಾಜರು ಇನಾಂ ಆಗಿ ನೀಡಿದ್ದು, ಈ ೩೦ ಎಕರೆ ಭೂಮಿ ಹಾಗೂ ೨೦೦ ಎಕರೆ ಬಾಣೆಯಲ್ಲಿ ಕಾಫಿ ಬೆಳೆಸಲಾಗಿತ್ತು. ಅಲ್ಲದೆ ಈ ಪ್ರದೇಶದಲ್ಲಿ ಒಟ್ಟು ೫೦ ಕುಟುಂಬಗಳು ಗೇಣಿದಾರರಾಗಿ ೪೦೦ ಎಕರೆ ಪ್ರದೇಶದ ಸ್ವಾಧೀನತೆಯನ್ನು ಹೊಂದಿದ್ದರು. ಉಳಿದ ೭೦೦ ಎಕರೆ ಪ್ರದೇಶ ಸಾಗುವಳಿಯಾಗದೆ ಅರಣ್ಯವಾಗಿ ಉಳಿದಿತ್ತು. ಮಠವು ಸುಮಾರು ಜಮೀನನ್ನು ಎಕರೆಗೆ ೨ ರಿಂದ ೩ ಸಾವಿರಕ್ಕೆ ಮಾರಾಟ ಮಾಡಿತು. ಅವರು ಗೇಣಿದಾರರೆಂದು ಅರ್ಜಿಯನ್ನು ಅವರ ಮೂಲಕ ಸಲ್ಲಿಸಿತ್ತು. ಸಾಕಷ್ಟು ಹೊರಗಿನವರು ಈ ಪ್ರದೇಶವನ್ನು ಅತಿಕ್ರಮಣ ಮಾಡಿದಾಗ ಗ್ರಾಮಸ್ಥರು ಸರಕಾರಕ್ಕೆ ದೂರು ಸಲ್ಲಿಸಿದ್ದರು. ಸರಕಾರ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ.

೨೪. ಸಿ.ವೀರಭದ್ರಪ್ಪ, ***ಕರ್ಮಯೋಗಿ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು, ಕ್ರಿಯಾಶೀಲ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು,*** ರಾಜಶೇಖರ ಹನುಮಲಿ(ಸಂ), ತರಳಬಾಳು ಹುಣ್ಣಿಮೆ, ಪು. ೨೧-೨೫

೨೫. ಮಹದೇವ ಬಣಕಾರ, ದಿಟ್ಟಹೆಜ್ಜೆ ಧೀರಕ್ರಮ, ಪು. ೧೯೩

೨೬. ಸಿರಿಗೆರೆ ಬೃಹನ್ಮಠದ ಚರಪಟ್ಟಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳನ್ನು ದಿನಾಂಕ ೨೦-೧-೨೦೦೦ರಂದು ಮಠದ ಭೂಹಿಡುವಳಿಗಳಿಗೆ ಸಂಬಂಧಿಸಿದ ವಿಷಯ ಸಂಗ್ರಹಿಸಲು ಸಂದರ್ಶನ ಮಾಡಲಾಯಿತು. ಈ ವೇಳೆಯಲ್ಲಿ ನನ್ನ ಜೊತೆಯಲ್ಲಿ ಬಿ.ಎಲ್.ಆರ್.ಜ್ಯೂನಿಯರ್ ಕಾಲೇಜಿನ ಉಪನ್ಯಾಸಕರಾದ, ಐ.ಜಿ.ಚಂದ್ರಶೇಖರಯ್ಯನವರು ಇದ್ದರು. ಈ ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು ೧೯೦೦ ರ ಆರಂಭಿಕದಶಕಗಳಿಂದಲೂ ಮಠವು ಹೊಂದಿರುವ ಭೂಹಿಡುವಳಿಗಳಿಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿ ಒದಗಿಸಿದರು.

೨೭. ಕ್ಷೇತ್ರಕಾರ್ಯದ ಮಾಹಿತಿ

೨೮. ಕಣಕುಪ್ಪಿ ಕೊಟ್ಟೂರು ಬಸವಪ್ಪ, ಶ್ರೀ ಜಗದ್ಗುರು ಜಯದೇವ ದಿಗ್ವಿಜಯ, ಪು. ೨೭೧

೨೯. ಸಿರಿಗೆರೆಯ ಬೃಹನ್ಮಠದ ಚರಪಟ್ಟಧ್ಯಕ್ಷರಾದ ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳಿಂದ ಪಡೆದ ಮಾಹಿತಿ

೩೦. ಬಿ. ರಾಜಶೇಖರಪ್ಪ, *ಮುರುಘರಾಜೇಂದ್ರ ಬೃಹನ್ಮಠ,* ಚಿತ್ರದುರ್ಗ, ಸಿದ್ಧಲಿಂಗ ಪಟ್ಟಣಶೆಟ್ಟಿ(ಸಂ),

ಕಲ್ಯಾಣದ ಹಾದಿ, ತೋಂಟದ ಸಿದ್ಧಲಿಂಗಸ್ವಾಮಿಗಳ ಅಭಿನಂದನ, ತೋಂಟದಾರ್ಯ ಸಂಸ್ಥಾನ ಮಠ, ಡಂಬಳ-ಗದಗ, ೧೯೯೯, ಪು. ೩೭೫

೩೧. ಐ. ಜಿ. ಚಂದ್ರಶೇಖರಯ್ಯ, *ತರಳಬಾಳು ಬೃಹನ್ಮಠ,* ಸಿದ್ಧಲಿಂಗ ಪಟ್ಟಣಶೆಟ್ಟಿ(ಸಂ), ಕಲ್ಯಾಣದ ಹಾದಿ, ಪು. ೭೪-೭೫

೩೨. ಹಸೂರು ಕೃಷ್ಣಮೂರ್ತಿ, *ಚಿತ್ರದುರ್ಗ ಗಂಡುಮೆಟ್ಟಿನ ನಾಡು,* ಪ್ರಜಾವಾಣಿ, ದೀಪಾವಳಿ ವಿಶೇಷಾಂಕ, ಬೆಂಗಳೂರು, ೧೯೯೬, ಪು.೪೧-೪೨

೩೩. ಜಿ. ಎಂ. ಕುಲಕರ್ಣಿ, *ಸಾಮಾಜಿಕ ಸ್ಪಂದನೆಯಲ್ಲಿ ಚಿತ್ರದುರ್ಗ ಬೃಹನ್ಮಠ,* ಕನ್ನಡಮ್ಮ ದೀಪಾವಳಿ ವಿಶೇಷಾಂಕ, ಬೆಂಗಳೂರು, ೧೯೯೩, ಪು. ೧೫೨-೫೩.

೩೪. ಕೆ. ವಿ. ಪುಟ್ಟಪ್ಪ, **ಭಾರತೀಯ ಸಂಸ್ಕೃತಿ,** ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೫೪, ಪು. ೯೬

೩೫. ಬಂಜಗೆರೆ ಜಯಪ್ರಕಾಶ್, **ಕನ್ನಡ ಸಾಹಿತ್ಯ ಮತ್ತು ರಾಷ್ಟ್ರೀಯತೆಯ ಬೇರುಗಳು,** (ಅಪ್ರಕಟಿತ) ಡಿಲಿಟ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೧೧೯

೩೬. ಕೆ. ಶ್ರೀಕಂಠಯ್ಯ, **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ (ಸಾಮಾಜಿಕ, ಆರ್ಥಿಕ, ರಾಜಕೀಯ),** ಗೀತಾಬುಕ್ ಹೌಸ್, ಮೈಸೂರು, ೧೯೮೩, ಪು.೧೧೫

೩೭. ಎಂ. ಎಸ್. ಪುಟ್ಟಣ್ಣ, **ಚಿತ್ರದುರ್ಗದ ಪಾಳೆಯಗಾರರು,** ಪು. ೬೦-೬೧

೩೮. ಜೆ. ಎಲ್. ಅಮೀಲ್ ಪೂಲ್‌ಕರ್, **ಭಾರತದಲ್ಲಿ ಜೀತ ಪದ್ಧತಿ,** ಎಸ್.ಬಿ.ಎಸ್.ಪಬ್ಲಿಷರ್ಸ್, ಬೆಂಗಳೂರು, ೧೯೯೨, ಪು. ೫೪-೫೫

೩೯. ಹಸೂರು ಕೃಷ್ಣಮೂರ್ತಿ, **ಲೀಲಾವತಿ-ಪದ್ಮಾವತಿ,** ಚಿತ್ರದುರ್ಗ ಜಿಲ್ಲಾ ಜಾನಪದ ಸಮಿತಿ, ಬೆಂಗಳೂರು, ೧೯೭೮, ಪು.VI, VIII

೪೦. ತೀ.ನಂ.ಶಂಕರನಾರಾಯಣ, **ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨, ಪು.೬೯

೪೧. **ಕರ್ನಾಟಕ ಶಾಸನ ಸಂಪುಟ-೩,** ಮೈಸೂರು ಜಿಲ್ಲೆ ಭಾಗ-೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪, ಪು. LXXXVI

೪೨. ಎಸ್. ಎ. ಬಾರಿ, *ಶ್ರೇಣಿಗಳು ವಿಜಯನಗರ ಕಾಲದಲ್ಲಿ* ಲಕ್ಷ್ಮಣ್ ತೆಲಗಾವಿ(ಸಂ) ಹರಿತಿಸಿರಿ, ಹರಿತಿಕೋಟೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ೧೯೮೭

೪೩. ಎಸ್. ಎಸ್. ಅಂಗಡಿ, **ಕುಂಬಾರ ವೃತ್ತಿಪದಕೋಶ,** ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ವಿರಕ್ತಮಠ, ದೇಸನೂರು, ೧೯೯೮, ಪು.೬

೪೪. ಚನ್ನಪ್ಪ ಎರೇಸೀಮೆ, *ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ವ್ಯಾಜ್ಯ ತೀರ್ಮಾನ*, ಎಂ. ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ(ಸಂ), ಚಂದ್ರವಳ್ಳಿ, ಪು. ೧೬

೪೫. ಶಾಮಚರಣ ದುಬೆ, ಭಾರತೀಯ ಸಮಾಜ, (ಅನು) ಆರ್. ಎಲ್. ಅನಂತರಾಮಯ್ಯ, ನ್ಯಾಶನಲ್ ಬುಕ್ ಟ್ರಸ್ಟ್, ಇಂಡಿಯಾ, ೧೯೯೪, ಪು.೧೯೫

೪೬. ಬಂಜೆಗೆರೆ ಜಯಪ್ರಕಾಶ್, ಕನ್ನಡ ಸಾಹಿತ್ಯ ಮತ್ತು ರಾಷ್ಟ್ರೀಯತೆಯ ಬೇರುಗಳು, ಪು.೧೨೦-೧೨೨

೪೭. ಬುಕಾನನ್ ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು ಕೆನರಾ ಆ್ಯಂಡ್ ಮಲಬಾರ್, ಸಂಪುಟ-೩, ಪು. ೩೩೦

೪೮. ಡಿ. ಸಿ. ರಾಜಪ್ಪ, ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು, ೧೮೦೦-೧೮೮೧, ಅಕ್ಷರ ಪ್ರಕಾಶನ, ಸಾಗರ, ೧೯೯೫, ಪು.೪೦,೪೫

೪೯. ದಿವಾನ್ ಬಹದ್ದೂರ್ ಎಲ್. ಕೆ. ಅನಂತಕೃಷ್ಣ ಅಯ್ಯರ್, ದಿ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್, ಸಂಪುಟ-೨, ಮೈಸೂರು ಯೂನಿವರ್ಸಿಟಿ, ಮೈಸೂರು, ೧೯೩೫, ಪು. ೪೦೪

೫೦. ಡಿ. ಸಿ. ರಾಜಪ್ಪ, ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು, ೧೮೦೦-೧೮೮೧, ಪು. ೮೨

೫೧. ಹಯವದನರಾವ್, ಮೈಸೂರು ಗೆಜೆಟಿಯರ್, ಸಂಪುಟ-೫, ಪು. ೧೪೦೦

೫೨. ಬಿ. ಎಲ್. ರೈಸ್, ಮೈಸೂರು ಗೆಜೆಟಿಯರ್, ಸಂಪುಟ-೨, ಪು. ೪೬೭-೪೭೫

೫೩. ಚಿತ್ರದುರ್ಗ ಜಿಲ್ಲಾ ಕೈಗಾರಿಕಾ ಘಟಕದ ಕಚೇರಿಯ ಅಂಕಿ-ಅಂಶಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

೫೪. ಅಬ್ಬೆ ಜೆ.ಎ.ದುಬಾಯಿಸ್, ಹಿಂದೂ ಮ್ಯಾನರ್ಸ್ ಕಸ್ಟಮ್ಸ್, ಆ್ಯಂಡ್ ಸೆರೆಮೊನೀಸ್, ಪು. ೮೮-೧೩೪

೫೫. ಬಿ. ಎಲ್.ರೈಸ್(ಸಂ), ಮೈಸೂರು ಗೆಜೆಟಿಯರ್, ಸಂಪುಟ-೨, ಪು. ೪೬೭

೫೬. ಡಿ. ಸಿ. ರಾಜಪ್ಪ, ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು, ೧೮೦೦-೧೮೮೧, ಪು. ೨೦೬-೨೧೭

೫೭. ಹಯವದನರಾವ್, ಮೈಸೂರು ಗೆಜೆಟಿಯರ್, ಸಂಪುಟ-೫, ಪು. ೧೪೦೧

ಅಧ್ಯಾಯ ೪

ಭೂಹಿಡುವಳಿ ಸಮುದಾಯಗಳ ರಾಜಕೀಯ ಅಭಿವ್ಯಕ್ತತೆ

ಭೂಹಿಡುವಳಿ ಸಮುದಾಯಗಳ ರಾಜಕೀಯ ಅಭಿವ್ಯಕ್ತತೆ

ಚಿತ್ರದುರ್ಗ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದವರು ಭೂಹಿಡುವಳಿ ಹೊಂದಿದ ಸಮುದಾಯದವರೇ ಆಗಿದ್ದರೆಂಬುದನ್ನು ಈಗಾಗಲೆ ಪ್ರಬಂಧದಲ್ಲಿ ಉಲ್ಲೇಖಿಸಲಾಗಿದೆ. ೧೯೩೭ರ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ಗ್ರಾಮ ಮಟ್ಟದಿಂದ ತಾಲೂಕು, ಜಿಲ್ಲಾ ಮಟ್ಟದವರೆಗೆ ಅಸ್ತಿತ್ವಕ್ಕೆ ಬಂದಿದ್ದ ಕಾಂಗ್ರೆಸ್ ಸಮಿತಿಗಳಲ್ಲಿ ಸಾಮಾನ್ಯವಾಗಿ ಅಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರಾಗಿ ಕಾರ್ಯನಿರ್ವಹಿಸಿದವರೆಲ್ಲರೂ ಭೂಹಿಡುವಳಿ ಸಮುದಾಯದ ಬೆಂಬಲ ಪಡೆದವರೇ ಆಗಿದ್ದಾರೆ. ಈ ಪ್ರದೇಶದಲ್ಲಿ ೧೯೩೭ರಿಂದಲೂ ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ಪ್ರತಿ ರೈತ ಸಮ್ಮೇಳನಗಳಲ್ಲಿಯೂ ಭೂಮಾಲೀಕರಿಗೆ ಅನುಕೂಲವಾಗುವ ರೀತಿಯಲ್ಲಿಯೇ ಠರಾವುಗಳನ್ನು ಮಂಡಿಸಿದವು. ಈ ಮೂಲಕ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸುವುದಾಗಿತ್ತು. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಿಂದ ಬಂದ ಭೂಹಿಡುವಳಿ ಸಮುದಾಯದ ನಾಯಕರುಗಳೇ ಪ್ರತಿ ಹಂತದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆಂಬುದನ್ನು ಗುರುತಿಸಲಾಗಿದೆ. ಈ ಸಮುದಾಯವು ಸ್ವಾತಂತ್ರ್ಯ ಚಳವಳಿಯ ಉದ್ದಕ್ಕೂ ಬ್ರಿಟಿಶ್ ಹಾಗೂ ಮೈಸೂರು ಸಂಸ್ಥಾನದ ಧೋರಣೆಗಳನ್ನು ಸಮಾನ ಸೈದ್ಧಾಂತಿಕ ನೆಲೆಯಲ್ಲಿ ವಿರೋಧಿಸಿದರು. ಸ್ವಾತಂತ್ರ್ಯೋತ್ತರದಲ್ಲಿ ಈ ಸಮುದಾಯಗಳು ಅಧಿಕಾರ ಗದ್ದುಗೆಯನ್ನೇರಿದ್ದನ್ನು ನಾವು ಗುರುತಿಸಬಹುದು. ಇವರ ನೇತೃತ್ವದಲ್ಲಿ ಬಂದ ಕಾಂಗ್ರೆಸ್ ಸರಕಾರವು ಭೂಮಾಲೀಕ ಸಮುದಾಯಕ್ಕೆ ಅನುಕೂಲವಾಗುವಂತ ಶಾಸನಗಳನ್ನು ತರುವಲ್ಲಿಯೂ ಯಶಸ್ವಿಯಾಗಿದ್ದನ್ನು ಗಮನಿಸಬಹುದು. ಸ್ವಾತಂತ್ರ್ಯ ಚಳವಳಿಯ ಜೊತೆಜೊತೆಗೆಯೇ ಏಕೀಕರಣ ಚಳವಳಿ ನಡೆದದ್ದನ್ನು ಈಗಾಗಲೇ ನಾಲ್ಕನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಇವೆರಡು ಹೆಚ್ಚುಕಡಿಮೆ ಜೊತೆಜೊತೆಗೆಯೇ ಬ್ರಿಟಿಶರ ಮತ್ತು ಮೈಸೂರು ಅರಸರ ವಿರುದ್ಧ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮುಂದುವರಿದವು. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಹಾಗೂ ಏಕೀಕರಣ ಚಳವಳಿಯಲ್ಲಿ ಎರಡು ಪ್ರಬಲ ಭೂಹಿಡುವಳಿ ಸಮುದಾಯಗಳಾಗಿದ್ದ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳಿಂದ ಬಂದ ನಾಯಕರಲ್ಲಿ ಭಿನ್ನಾಭಿಪ್ರಾಯವಿತ್ತು. ಒಕ್ಕಲಿಗ ಸಮುದಾಯದ ಎಚ್.ಕೆ.ವೀರಣ್ಣಗೌಡ, ಎಂ.ವಿ.ಕೃಷ್ಣಪ್ಪ, ಎಚ್.ಸಿ.ದಾಸಪ್ಪ ಅವರಂತಹ ನಾಯಕರು

ಏಕೀಕರಣ ಚಳವಳಿಯನ್ನು ವಿರೋಧಿಸಿದರು. ಆದರೆ ಲಿಂಗಾಯತ ಹಿನ್ನೆಲೆಯ ಎಸ್.ನಿಜಲಿಂಗಪ್ಪನವರಂಥ ನಾಯಕರು ಏಕೀಕರಣ ಚಳವಳಿಯನ್ನು ಬೆಂಬಲಿಸಿದರು. ಆ ಮೂಲಕ ೧೯೫೬ ನವೆಂಬರ್ ೧ರಂದು ಅಸ್ತಿತ್ವಕ್ಕೆ ಬಂದ ಏಕೀಕೃತ ಕರ್ನಾಟಕದಲ್ಲಿ ೧೯೭೨ರವರೆಗಿನ ಅವಧಿಯಲ್ಲಿ ರಾಜ್ಯದ ಮುಖ್ಯಮಂತ್ರಿಗಳೆಲ್ಲರೂ ಲಿಂಗಾಯತರೇ ಆಗಿದ್ದರೆಂಬುದನ್ನು ನಾವು ಗಮನಿಸಬಹುದು.

ಪ್ರಸ್ತುತ ಅಧ್ಯಾಯವು ಚಿತ್ರದುರ್ಗ ಪ್ರದೇಶದ ಭೂಹಿಡುವಳಿ ಸಮುದಾಯಗಳ ರಾಜಕೀಯ ಅಭಿವ್ಯಕ್ತಿಯ ಗುರುತಿಸುವಿಕೆಯನ್ನು ಹೊಂದಿದೆ. ಅದಕ್ಕಾಗಿ ಅಧ್ಯಾಯವನ್ನು ಹಲವು ಭಾಗಗಳಾಗಿ ವಿಭಾಗಿಸಿಕೊಂಡು, ಆ ಮೂಲಕ ಸ್ವಾತಂತ್ರ್ಯ ಚಳವಳಿಯ ವಿವಿಧ ಆಯಾಮಗಳನ್ನು ಭೂಹಿಡುವಳಿಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಅದಕ್ಕೋಸ್ಕರ ಚಿತ್ರದುರ್ಗ ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಬೆಳವಣಿಗೆ, ಕಾಂಗ್ರೆಸ್ ಮತ್ತು ಮೈಸೂರು ಸಂಸ್ಥಾನ ಹಾಗೂ ರಾಷ್ಟ್ರೀಯ ಕಾಂಗ್ರೆಸ್ ನಾಯಕರ ಚಟುವಟಿಕೆಗಳನ್ನು, ಕ್ವಿಟ್ ಇಂಡಿಯ ಚಳವಳಿ, ಮೈಸೂರು ಚಲೋ ಚಳವಳಿಗಳನ್ನು ಪರಿಶೀಲಿಸಲಾಗಿದೆ. ಈ ಚಳವಳಿ ಗಳಲ್ಲಿ ಪ್ರಬಲ ಭೂಹಿಡುವಳಿ ಸಮುದಾಯಗಳೇ ಮುಂಚೂಣಿಯಲ್ಲಿದ್ದವೆಂಬುದನ್ನು ಕಂಡುಕೊಳ್ಳಲಾಗಿದೆ. ಮುಂದಿನ ಭಾಗವು ಏಕೀಕರಣ ಚಳವಳಿಯಲ್ಲಿ ಭೂಹಿಡುವಳಿ ಸಮುದಾಯಗಳು ವಹಿಸಿದ ಪಾತ್ರವನ್ನು ಬಿಂಬಿಸುತ್ತವೆ.

ಚಿತ್ರದುರ್ಗ ಪ್ರದೇಶದಲ್ಲಿ ಭೂಹಿಡುವಳಿ ಸಮುದಾಯಗಳ ರಾಜಕೀಯ ಅಭಿವ್ಯಕ್ತಿ ಎಂದರೆ ಹೆಚ್ಚು ಕಡಿಮೆ ಕಾಂಗ್ರೆಸ್ ಪಕ್ಷದ ಹೋರಾಟವೇ ಆಗಿದೆ. ಏಕೆಂದರೆ ಆ ಕಾಂಗ್ರೆಸ್‌ನಲ್ಲಿ ಭೂಮಾಲೀಕರು, ಸಮಾಜದ ಉನ್ನತ ವರ್ಗದವರು ಪ್ರಬಲರಾಗಿದ್ದರು. ಇಂಗ್ಲಿಶ್ ಮಾದರಿಯ ಆಧುನಿಕ ಶಿಕ್ಷಣ ಕ್ರಮ ಈ ಭಾಗದಲ್ಲೂ ನವನಾಗರಿಕ ವರ್ಗವನ್ನು ಸೃಷ್ಟಿಸಿತ್ತು. ಸಾಂಪ್ರದಾಯಕವಾಗಿ ಜನರ ಮೇಲೆ ಹಿಡಿತವನ್ನು ಇಟ್ಟುಕೊಂಡಿದ್ದ ಈ ವರ್ಗ ಅದರಲ್ಲಿಯೂ ಪ್ರಮುಖವಾಗಿ ಬ್ರಾಹ್ಮಣ-ಲಿಂಗಾಯತ ಸಮುದಾಯಗಳಿಂದ ಬಂದ ಧುರೀಣರು ಕಾಂಗ್ರೆಸ್ ಹೋರಾಟದಿಂದ ಬಹಳ ಪ್ರಭಾವಿತರಾದರು. ಇವರೆಲ್ಲಾ ಕಾಂಗ್ರೆಸ್‌ನ ಮಾದರಿಯ ಸ್ವಾತಂತ್ರ್ಯ ಹೋರಾಟದಲ್ಲಿದ್ದು, ಕರ್ನಾಟಕದ ಏಕೀಕರಣ ಚಳವಳಿಯಲ್ಲಿಯೂ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಡುವುದು ಇವರ ಒಂದು ಉದ್ದೇಶವಾದರೆ, ಕರ್ನಾಟಕದ ಏಕೀಕರಣವನ್ನು ಸಾಧಿಸುವುದು ಇನ್ನೊಂದು ಉದ್ದೇಶ ವಾಗಿತ್ತು. ಭೂಹಿಡುವಳಿ ವರ್ಗದ ವಕ್ತಾರರು ಚಿತ್ರದುರ್ಗದ ರಾಜಕೀಯ ಶಕ್ತಿಗಳಾಗಿ ಬೆಳೆದದ್ದೇ ಹೀಗೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಈ ವರ್ಗವು ಸ್ವಾತಂತ್ರ್ಯ ಹೋರಾಟದಲ್ಲಿ

ಭಾಗವಹಿಸಿದ ಬಗೆಗಳನ್ನು, ಹಾಗೂ ಕರ್ನಾಟಕ ಏಕೀಕರಣ ಹೋರಾಟದಲ್ಲಿ ಸಕ್ರಿಯವಾಗಿದ್ದ ರೀತಿಗಳನ್ನು ಚರ್ಚಿಸಲಾಗಿದೆ. ಆ ಮೂಲಕ ವಸಾಹತುಕಾಲದ ಚಿತ್ರದುರ್ಗದ ರಾಜಕೀಯ -ಸಾಮಾಜಿಕ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ನೂತನ ಕರ್ನಾಟಕ ರಾಜ್ಯ ನಿರ್ಮಾಣವಾಗುವವರೆಗೂ (೧೯೫೬) ಭೂಹಿಡುವಳಿ ಸಮುದಾಯಗಳು ಭೌಗೋಳಿಕ ಹಾಗೂ ರಾಜಕೀಯ ದೃಷ್ಟಿಯಿಂದ ಹರಿದು ಹಂಚಿಹೋಗಿದ್ದವು. ಭೂಹಿಡುವಳಿದಾರರು ಭದ್ರತೆ ಕಾರಣಗಳಿಗಾಗಿ ರಾಜಕೀಯ ಕ್ಷೇತ್ರದಲ್ಲಿ ಅವರೆಲ್ಲ ಒಂದು ಸಮುದಾಯವಾಗಿ ವ್ಯವಹರಿಸುವುದು ಅನಿವಾರ್ಯವಾಗಿತ್ತು. ರಾಜಕೀಯ ವಿಚ್ಛಿನ್ನತೆಯಿಂದ ದುರ್ಬಲವಾಗಿದ್ದ ಅವರಿಗೆ ತಮ್ಮ ಸಮುದಾಯದ ಸಂಸ್ಕೃತಿಯನ್ನು, ಪರಂಪರೆಯನ್ನು ಕಾಪಾಡಿಕೊಂಡು ಹೋಗುವುದಕ್ಕೆ ಕಷ್ಟವಾಯಿತು. ಆದರೆ ಭಾರತದ ಒಕ್ಕೂಟದ ಆಶ್ರಯದಲ್ಲಿ ಏಕೀಕೃತ ಕರ್ನಾಟಕ ರಾಜ್ಯ ನಿರ್ಮಾಣವಾದಂದಿನಿಂದ ರಾಜಕೀಯದ ಬುನಾದಿಯ ಮೇಲೆ ಭೂ ಹಿಡುವಳಿ ಸಮುದಾಯಕ್ಕೆ ತಮ್ಮ ಸಂಸ್ಕೃತಿಯ ಸಂಘಟನೆಯನ್ನು ಮಾಡುವ ಐತಿಹಾಸಿಕ ಅವಕಾಶ ಮೊಟ್ಟಮೊದಲು ಸನ್ನಿಹಿತವಾಯಿತು.

ಎಂ. ಎನ್. ಶ್ರೀನಿವಾಸ ಅವರು ಸಂಖ್ಯೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಪ್ರಬಲವಾದ ಸಮುದಾಯ ಪ್ರಜಾಪೀಡಿತವಾಗಬಹುದು ಎನ್ನುತ್ತಾರೆ. ಆದರೆ ೨೦ನೇ ಶತಮಾನದ ಪ್ರಾರಂಭದ ಹಂತದಲ್ಲಿ ಲಿಂಗಾಯತರು ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆದು ಇತರ ಸಮುದಾಯಗಳಲ್ಲಿ ಕೀಳಿರಿಮೆ ಹುಟ್ಟಿಸಬಹುದೆಂದು ಅವರು ಹೇಳಿರುವುದನ್ನು ಒಪ್ಪಿಕೊಳ್ಳುವುದು ಕಷ್ಟ.[೧] ಅನೇಕ ಸಮುದಾಯಗಳು ಹೆಚ್ಚು ಭೂ ಹಿಡುವಳಿಯನ್ನು ಹೊಂದಿ ರಾಜಕೀಯ ಮುಂಚೂಣಿಯಲ್ಲಿರುವುದು ಕಂಡುಬರುತ್ತವೆ. ಚಿತ್ರದುರ್ಗ, ದಾವಣಗೆರೆ, ಹೊಳಲ್ಕೆರೆ, ಹೊಸದುರ್ಗದಲ್ಲಿ ಲಿಂಗಾಯತರು, ಹಿರಿಯೂರಿನಲ್ಲಿ ಗೊಲ್ಲರು, ಚಳ್ಳಕೆರೆಯಲ್ಲಿ ನಾಯಕ ಸಮುದಾಯಗಳು ರಾಜಕೀಯ ಶಕ್ತಿಗಳಾಗಿ ಬೆಳೆದು ಬಂದಿವೆ.

ಕರ್ನಾಟಕದಲ್ಲಿ ಅದರಲ್ಲೂ ಚಿತ್ರದುರ್ಗ ಪ್ರದೇಶದಲ್ಲಿ ಎಲ್ಲಾ ಸಮುದಾಯಗಳ ರಾಜಕೀಯ ಮುಂದಾಳುವಾಗಿ, ೧೯ನೇ ಶತಮಾನದ ಕೊನೆ ಹಾಗೂ ೨೦ನೇ ಶತಮಾನದ ಪ್ರಾರಂಭದಲ್ಲಿ ಸಿದ್ಧವನಹಳ್ಳಿ ನಿಜಲಿಂಗಪ್ಪ ರೂಪಗೊಂಡರು. ಲಿಂಗಾಯತ ಸಮುದಾಯಕ್ಕೆ ಸೇರಿದವರಾಗಿದ್ದರೂ ಅವರಿಗೆ ರಾಜಕೀಯದಲ್ಲಿ ಬೆಳೆಯಲು ಭೂಹಿಡುವಳಿಯ ಹಿನ್ನೆಲೆಯಿತ್ತು. ಆ ಮೂಲಕ ಪ್ರಬಲರಾದ ಈ ರೀತಿಯ ರಾಜಕಾರಣಿಗಳು ರಾಜಕೀಯದಲ್ಲಿ ಬೆಳೆಯಲು ಸಾಧ್ಯವಾಯ್ತು.

ಸ್ವಾತಂತ್ರ್ಯ ಚಳವಳಿಯ ವಿವಿಧ ಆಯಾಮಗಳು

ಚಿತ್ರದುರ್ಗ ಜಿಲ್ಲೆಯು ೧೮೫೮ರ ನಂತರ ಬ್ರಿಟಿಶ್-ಭಾರತದೊಂದಿಗೆ ಪರೋಕ್ಷ ರಾಜಕೀಯ ಸಂಪರ್ಕ ಪಡೆಯಿತು. ಏಕೆಂದರೆ ಬ್ರಿಟಿಶ್ ಆಡಳಿತಕ್ಕೆ ಒಳಪಟ್ಟಿದ್ದ ಧಾರವಾಡ ಮತ್ತು ಬಳ್ಳಾರಿಗಳು ಚಿತ್ರದುರ್ಗ ಜಿಲ್ಲೆಯ ಗಡಿಪ್ರದೇಶಗಳಾಗಿದ್ದವು. ಹಾಗೆಯೇ ಕೈಗಾರಿಕಾ ನಗರವಾದ ದಾವಣಗೆರೆ ಬೆಳೆಯಲು ಪ್ರಾರಂಭಿಸಿದ್ದು ೧೯ನೇ ಶತಮಾನದ ಕೊನೆಯ ಭಾಗದಲ್ಲಿ. ಹೀಗಾಗಿ ರಾಷ್ಟ್ರೀಯ ಚಳವಳಿ ಚಿತ್ರದುರ್ಗ ಜಿಲ್ಲೆಯಲ್ಲಿ ಬೆಳೆಯಲು ಇಂಗ್ಲಿಶ್ ಮತ್ತು ಪಾಶ್ಚಾತ್ಯ ಶಿಕ್ಷಣಗಳು ಕಾರಣವಾಗಿದ್ದವು. ಈ ಅವಧಿಯಲ್ಲಿ ಆಲೂರು ವೆಂಕಟರಾಯರು, ಗಳಗನಾಥರು, ಶಾಂತಕವಿ, ಕೆ. ವಾಸುದೇವಾಚಾರ್ಯರು, ಸುಭೋಧ ರಾಮರಾಯರು, ಬಿ.ವೆಂಕಟಾಚಾರ್ಯರು ಮುಂತಾದವರು ರಾಷ್ಟ್ರೀಯವಾದಿಗಳ ಮೇಲೆ ಪ್ರಭಾವ ಬೀರಿದರು. ಜನಜಾಗೃತಿ ಸಂಪರ್ಕ ಸಾಧನಗಳು, ಸುದ್ದಿ ಮಾಧ್ಯಮಗಳು, ತಾಂತ್ರಿಕ ಸೌಕರ್ಯಗಳಿಂದಾಗಿ ಚಳವಳಿಗಳು ಹೊಸ ಬದಲಾವಣೆ ಪಡೆದವು. ಅದೇ ರೀತಿ ಪ್ರಪಂಚದ ಇತರ ಭಾಗಗಳಲ್ಲಿ ನಡೆದ ಯುದ್ಧಗಳು, ಕ್ರಾಂತಿಗಳು ಭಾರತದ ಸ್ವಾತಂತ್ರ್ಯ ಚಳವಳಿಯ ಮೇಲೆ ಪ್ರಭಾವ ಬೀರಿದವು.[೨] ಚಿತ್ರದುರ್ಗ ಜಿಲ್ಲೆಯಲ್ಲಿಯೂ ಸಾಹಿತ್ಯ, ಪತ್ರಿಕೆಗಳು ಮತ್ತು ರಂಗಭೂಮಿ ಮುಂತಾದ ಸಮೂಹ ಮಾಧ್ಯಮಗಳು ಪ್ರಭಾವ ಬೀರಿದವು.

ಅ. ಪತ್ರಿಕಾ ಮಾಧ್ಯಮ ಮತ್ತು ಸಾಹಿತ್ಯ

ಪತ್ರಿಕೆಗಳು ಭಾಷೆಯ ದೃಷ್ಟಿಯಿಂದ ಮಾತ್ರವಲ್ಲದೆ ಅವು ನವಜಾಗೃತಿಯ ವಾಹಕಗಳೂ ಆಗಿವೆ. ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಪತ್ರಿಕೆಗಳನ್ನು ಬೇರೆ ಮಾಡಿ ನೋಡುವುದು ಅಸಾಧ್ಯ. ಆದ್ದರಿಂದಲೇ ಬ್ರಿಟಿಶ್ ಸರಕಾರ ಪತ್ರಿಕೆಗಳ ಬಾಯಿ ಮುಚ್ಚಿಸುವ ಪ್ರಯತ್ನ ಮಾಡಿತು. ಸಹಜವಾಗಿ ಭಾರತದಲ್ಲಿ ಬೆಳಕು ಕಂಡ ಮೊದಲ ಪತ್ರಿಕೆ ಇಂಗ್ಲಿಶ್ ಭಾಷೆಯದು. ೧೭೮೦ರಲ್ಲಿ 'ಜೇಮ್ಸ್ ಆಗಸ್ಟಸ್ ಹೀರೆ' ಎಂಬಾತ ಆರಂಭಿಸಿದ ಪತ್ರಿಕೆ ***ಬೆಂಗಾಲ್ ಗೆಜೆಟ್*** ಅಥವಾ ಕಲ್ಕತ್ತಾ ಜರನಲ್. ಹೀರೆ ಹೇಳುವಂತೆ 'ಎಲ್ಲರಿಗೂ ಅವಕಾಶ ನೀಡುವ, ಯಾರಿಂದಲೂ ಪ್ರಭಾವಿತವಾಗದ ರಾಜಕೀಯ ಹಾಗೂ ವಾಣಿಜ್ಯ ವಾರಪತ್ರಿಕೆ' ಅದು. ಹಾಗೆಯೇ ಕರ್ನಾಟಕದಲ್ಲಿಯೂ ಕನ್ನಡ ಭಾಷಾ ಪತ್ರಿಕೆಗಳು ತಲೆ ಎತ್ತಿದವು. ಅದರಲ್ಲಿ ಎಸ್.ಎಸ್.ಹರ್ಡೇಕರ್ ೧೯೦೭ರಲ್ಲಿ ಸಂಪಾದಿಸಿದ ***ಕನ್ನಡ ಕೇಸರಿ*** ಪತ್ರಿಕೆಯನ್ನು ಹುಬ್ಬಳ್ಳಿಯಿಂದ ಆರಂಭಿಸಿದರು. ಆರ್.ಎಸ್.ಹುಕ್ಕೇರಿಕರ್ ಮತ್ತು ಆರ್.ಆರ್.ದಿವಾಕರ್

ಅವರು ೧೯೨೧ರಲ್ಲಿ ***ಕರ್ಮವೀರ*** ಪತ್ರಿಕೆಯನ್ನು, ಬೆಳವಿನಾರಾಯಣರಾವ್ ಜೋಶಿ ಮತ್ತು ಬಿ. ಎಸ್. ದತ್ತರ್ ೧೯೨೪ರಲ್ಲಿ ***ಸಂಯುಕ್ತ ಕರ್ನಾಟಕ*** ಪತ್ರಿಕೆಯನ್ನು, ಎಲ್.ಎಸ್.ಪಾಟೀಲ್ ಅವರು ೧೯೨೮ರಲ್ಲಿ ***ತರುಣ ಕರ್ನಾಟಕ*** ಪತ್ರಿಕೆಯನ್ನು, ಟಿ.ಟಿ.ಶರ್ಮ ೧೯೩೮ರಲ್ಲಿ ***ವಿಶ್ವಕರ್ನಾಟಕ*** ಪತ್ರಿಕೆಯನ್ನು, ***ತಾಯಿನಾಡು*** ಪತ್ರಿಕೆಯನ್ನು, ಪಿ.ಆರ್.ರಾಮಯ್ಯ, ***ನವಜೀವನ*** ಪತ್ರಿಕೆಯನ್ನು, ಸಿ.ಅಶ್ವತನಾರಾಯಣರಾವ್, ***ವೀರಕೇಸರಿ*** ಎಂ.ಸೀತಾರಾಮಶಾಸ್ತ್ರೀ ಆರಂಭಿಸಿದ್ದರು. ೧೯೪೨ರ ದಶಕದ ಕರ್ನಾಟಕದಲ್ಲಿ ಹೆಚ್ಚು ಪ್ರಭಾವಿತ ಪತ್ರಿಕೆಗಳೆಂದರೆ ಮೈಸೂರಿನ ***ಸಾಧ್ವಿ***, ಧಾರವಾಡದ ***ಧನಂಜಯ, ಕರ್ನಾಟಕ ವೃತ್ತ, ರಾಜಹಂಸ*** ಇನ್ನು ಮುಂತಾದವು. ಇವುಗಳಲ್ಲಿ ಹಲವು ಪತ್ರಿಕೆಗಳು ತಿಲಕರ ***ಕೇಸರಿ*** ಪತ್ರಿಕೆಯಿಂದ ಪ್ರಭಾವಿತವಾಗಿದ್ದವು.[೩] ಮುಂದೆ ಅಸಹಕಾರ ಚಳವಳಿ ಆರಂಭವಾದ ನಂತರ ಕನ್ನಡ ಪತ್ರಿಕೆಗಳು ನಿರ್ವಹಿಸಿದ ಪಾತ್ರ ಗಮನಾರ್ಹವಾದುದು. ಅದೇ ರೀತಿ ಚಿತ್ರದುರ್ಗ ಜಿಲ್ಲೆಯಲ್ಲಿಯೂ ಸ್ಥಳೀಯ ಪತ್ರಿಕೆಗಳು ಪ್ರಮುಖ ಪಾತ್ರವಹಿಸಿದ್ದವು. ೧೯೦೭ರಲ್ಲಿ ಪ್ರಾರಂಭಿಸಿದ ***ಧನುರ್ಧಾರಿ*** ಪತ್ರಿಕೆಯಲ್ಲಿ ತಿಲಕರ ಕೇಸರಿ ಪತ್ರಿಕೆಯಲ್ಲಿ ಬರುವ ರಾಷ್ಟ್ರೀಯ ವಿಚಾರಗಳನ್ನು ಭಾಷಾಂತರ ಮಾಡಿ ಪ್ರಕಟಿಸುತ್ತಿದ್ದರು. ಹಾಗೆಯೇ ವಂಗಭಂಗ ಚಳವಳಿಯಂತಹ ಪ್ರಮುಖ ರಾಷ್ಟ್ರೀಯ ಘಟನೆಗಳ ಕುರಿತು ಚರ್ಚಿಸುತ್ತಿದ್ದವು. ಅವುಗಳಲ್ಲಿ ***ಕನ್ನಡ ಸಮಾಚಾರ*** ಎಂಬ ಹೆಸರಿನ ಪತ್ರಿಕೆಯೊಂದು ೧೯೧೨ರಲ್ಲಿ ದಾವಣಗೆರೆಯಲ್ಲಿ ಪ್ರಾರಂಭವಾಯಿತು. ಹಾಗೆಯೇ ಹರ್ಡೇಕರ್ ಮಂಜಪ್ಪನವರು ದಾವಣಗೆರೆಯಲ್ಲಿ ನಂತರ ಮುಂಬೈ ಕರ್ನಾಟಕದ ಕೆ.ಎಂ.ರಾಜಶೇಖರಯ್ಯನವರು ೧೯೩೦ರ ಅಂತ್ಯ ಭಾಗದಲ್ಲಿ 'ಸತ್ಯವಾಣಿ' ಎಂಬ ರಾಷ್ಟ್ರೀಯ ವಾರಪತ್ರಿಕೆಯನ್ನು ನಡೆಸಿ ಎರಡು ವರ್ಷಗಳ ನಂತರ ನಿಲ್ಲಿಸಿದರು.

ಪಂಡಿತ್ ವಿ.ಹಿರೇಮಠರವರು ***ಸಂಸಾರಪತ್ರಿಕೆ*** ಯನ್ನು, ಡಿ.ಎಂ.ರೇವಣಸಿದ್ದಯ್ಯನವರು ***ಪ್ರಜಾಶಕ್ತಿ*** ಮತ್ತು ***ನವಶಕ್ತಿ*** ಎಂಬ ಎರಡು ಪತ್ರಿಕೆಗಳನ್ನು ದಾವಣಗೆರೆಯಲ್ಲಿ ಸ್ವಾತಂತ್ರ್ಯ ಚಳವಳಿಯ ಕಾಲಾವಧಿಯಲ್ಲಿ ಪ್ರಕಟಿಸಿದ್ದರು. ೧೯೪೮ರಲ್ಲಿ ಇಟಗಿ ವೇದಮೂರ್ತಿಯವರು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಥಮವಾಗಿ ***ನೇತಾಜಿ*** ಹೆಸರಿನ ದಿನಪತ್ರಿಕೆಯನ್ನು ಆರಂಭಿಸಿದರು. ಇದರಲ್ಲಿ ಕರ್ನಾಟಕದ ಏಕೀಕರಣ ಮತ್ತು ಸ್ಥಳೀಯ ವಿಚಾರಗಳನ್ನು ಪ್ರಕಟಿಸುತ್ತಿದ್ದರು. ದಾವಣಗೆರೆ ಹತ್ತಿರದ ಕಡ್ಲೆಬಾಳು ಶಾಮರಾಯರು ***ಸಂಜಯ*** ಪತ್ರಿಕೆಯನ್ನು ಕೆಲಕಾಲ ನಡೆಸಿದರು.[೪]

ದಾವಣಗೆರೆಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ತನ್ನ ಕಾರ್ಯ ಚಟುವಟಿಕೆಯನ್ನು ಪ್ರಾರಂಭಿಸಿದ ಹರ್ಡೇಕರ್ ಮಂಜಪ್ಪನವರು ೧೯೩೦ರಲ್ಲಿ **ಭಾರತೀಯರ ದೇಶಭಕ್ತಿ** ಎಂಬ ವಿಚಾರ ಸರಣಿಯ ಪುಸ್ತಕವನ್ನು ದಾವಣಗೆರೆಯಲ್ಲಿ ಪ್ರಕಟಿಸಿದರು. ಅದೇ ರೀತಿ ಲಾವಣಿ ಬಸವರಾಜ್ ಜಿಲ್ಲೆಯಾದ್ಯಂತ ಕ್ರಾಂತಿಕಾರಿ ಲಾವಣಿಗಳನ್ನು ಹಾಡುತ್ತಾ ಜನರಲ್ಲಿ ದೇಶಭಕ್ತಿಯನ್ನು ಮೂಡಿಸಿದರು. ಪ್ರಾದೇಶಿಕ ಚರಿತ್ರೆಯ ಕಥಾನಾಯಕನನ್ನೇ ಒಳಗೊಂಡ ತ.ರಾ.ಸುಬ್ಬರಾವ್ ರವರ **ರಕ್ತತರ್ಪಣ** ಬಹುಮುಖ್ಯವಾದ ಕಾದಂಬರಿಯಾಗಿದೆ. ಅದು ಸ್ವಾತಂತ್ರ್ಯಪೂರ್ವದಲ್ಲಿಯೇ ಕಾದಂಬರಿ ಓದುವ ಒಂದು ವರ್ಗವನ್ನೇ ಸೃಷ್ಟಿಸಿತ್ತು. ಅದೇ ರೀತಿ ಅ.ರಾ.ಸೇತುರಾವ್ ಅವರಂತಹ ಸಾಹಿತಿಗಳು ೧೯೪೩ರ ವೇಳೆಯಲ್ಲಿಯೇ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುತ್ತಾರೆ. ಏಕೀಕರಣ ಕುರಿತಾದ ಅವರ ಕವನ ***ನಾಡಿನ ಉದಯ*** ಎಂಬುದು ಒಡೆದು ಹೋದ ಕರ್ನಾಟಕ ಬಹುಬೇಗ ಒಂದಾಗಬೇಕೆಂಬ ಕವಿಯ ಆಶಯವನ್ನು ವ್ಯಕ್ತಪಡಿಸುತ್ತದೆ.[೫]

ವೃತ್ತಿ ರಂಗಭೂಮಿ

ಚಿತ್ರದುರ್ಗ ಜಿಲ್ಲೆಯಲ್ಲಿ ವೃತ್ತಿ ರಂಗಭೂಮಿಯು ಸ್ವಾತಂತ್ರ್ಯಚಳವಳಿಗೆ ಪ್ರೇರಕವಾಗಿ ಜನರು ಸಂಘಟಿತರಾಗಲು ಕಾರಣವಾಗಿತ್ತು. ೧೯೨೧ರಲ್ಲಿ ಕಂಚಿಕೇರಿ ಕೊಟ್ರೂರು ಬಸಪ್ಪನವರು ಸ್ಥಾಪಿಸಿದ ***ಶ್ರೀ ಜಯಲಕ್ಷ್ಮೀ ಪ್ರಸಾದಿತ ಸಂಗೀತ ನಾಟಕ ಮಂಡಳಿ*** ದಾವಣಗೆರೆ, ಹಾಗೂ ೧೯೨೮ರಲ್ಲಿ ಗಾನಗಂಧರ್ವ ಶ್ರೀ ಚಿಂದೋಡಿ ವೀರಪ್ಪನವರಿಂದ ಸ್ಥಾಪಿಸಲ್ಪಟ್ಟ ***ಕೆ. ಬಿ. ಆರ್. ಡ್ರಾಮ ಕಂಪನಿ,*** ಹೀಗೆ ಇನ್ನಿತರ ನಾಟಕ ಮಂಡಳಿಗಳು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸಿದವು. ಉದಾಹರಣೆಗೆ ೧೯೪೦ರಲ್ಲಿ ಸಿ.ಕೆ.ನಾಗರಾಜರಾವ್ ಅವರಿಂದ ದಾವಣಗೆರೆಯಲ್ಲಿ ಅಸ್ತಿತ್ವಕ್ಕೆ ಬಂದ ***ಯುನೈಟೆಡ್ ಆರ್ಟಿಸ್ಟ್ಸ್ ಸಂಸ್ಥೆ*** ಚಳವಳಿಗೆ ಸಂಬಂಧಿಸಿದಂತೆ ಹರಿಹರದ ಬಳಿಯ ಹರಳಾಪುರದಲ್ಲಿ ಕೈಲಾಸಂ ಅವರ ***ಹೋಂ ರೋಲ್*** ನಾಟಕವನ್ನು ಅಲ್ಲಿಗೆ ಅತಿಥಿಯಾಗಿ ಬಂದಿದ್ದ ರಾಜೇಂದ್ರ ಪ್ರಸಾದ್‌ರ ಮುಂದೆ ಪ್ರದರ್ಶಿಸಿದರು. ಈ ಮನರಂಜನಾ ಕಾರ್ಯಕ್ರಮಕ್ಕೆ ಭಾರಿ ಜನಸ್ತೋಮ ಸೇರಿತ್ತು. ೧೯೪೬ರಲ್ಲಿ ಕಂಚಿಕೇರಿ ಕೊಟ್ರಬಸಪ್ಪನವರ ಶ್ರೀ ಜಯಲಕ್ಷ್ಮೀ ನಾಟ್ಯ ಸಂಘವು ದಾವಣಗೆರೆ ಲಕ್ಷ್ಮೀಥಿಯೇಟರ್‌ನಲ್ಲಿ ***ಹೇಮರೆಡ್ಡಿ ಮಲ್ಲಮ್ಮ*** ನಾಟಕ ಪ್ರಯೋಗಿಸಿ ದಾವಣಗೆರೆಯ ಸ್ತ್ರೀಯರ ಮನಸ್ಸಿಗೆ ಮೋಡಿ ಮಾಡಿತ್ತಲ್ಲದೆ, ಜನರು ಸಂಘಟಿತರಾಗಿ ಹೋರಾಡಲು ಪರೋಕ್ಷ ಬೆಂಬಲ ನೀಡಿತು.

ಪುನಃ ಇದೇ ಕಂಪನಿಯು ೧೯೪೭ರಲ್ಲಿ *ಬೀರಲಿಂಗೇಶ್ವರ* ಮೈದಾನದಲ್ಲಿ ಶ್ರೀ ಶಂಭಯ್ಯನವರ ಮುಂದಾಳತ್ವದಲ್ಲಿ ೬೦ ಸಾವಿರ ರೂ.ಖರ್ಚು ಮಾಡಿ *ಭಸ್ಮಾಸುರ* ಎಂಬ ನಾಟಕ ಪ್ರಯೋಗಿಸಿ ಅಪಾರ ಜನಮನ್ನಣೆಗಳಿಸಿತು. ಇಲ್ಲಿನ ಪಾತ್ರಗಳು ಪರೋಕ್ಷವಾಗಿ ಬ್ರಿಟಿಷ್ ಆಡಳಿತವನ್ನು ಟೀಕಿಸುತ್ತಿದ್ದವು. ಸ್ವಾತಂತ್ರ್ಯಪೂರ್ವದ ಮತ್ತೊಬ್ಬ ಮಹಾನ್ ಕಲಾಕಾರ ಶ್ರೀ ಕೆ.ಹಿರಣ್ಣಯ್ಯನವರ 'ಹಿರಣ್ಣಯ್ಯ ಮಿತ್ರ ಮಂಡಳಿ' ಶ್ರೀ ಅಚ್ಯುತರಾಯ ಪಾರ್ಥಸಾರಥಿ, ಶ್ರೀ ಬಿ.ಲಕ್ಷ್ಮಯ್ಯ, ಅನಂತರಾಮಯ್ಯ, ಬಳ್ಳಾರಿ ರತ್ನಮ್ಮ ಇವರೊಂದಿಗೆ ಬೀರಲಿಂಗೇಶ್ವರ ಮೈದಾನದಲ್ಲಿ ಕ್ರಾಂತಿಕಾರಿ 'ದೇವದಾಸಿ' ನಾಟಕವನ್ನು ಪ್ರಯೋಗಿಸಿದರು. ಬ್ರಿಟಿಶ್‌ರ ಆಡಳಿತದಲ್ಲಿ ಸರಕಾರವನ್ನು ಟೀಕಿಸುವ ಪರಿಸ್ಥಿತಿ ಇರದಂತಹ ಸಂದರ್ಭದಲ್ಲಿ 'ನಾಜೂಕಯ್ಯನ' ಪಾತ್ರದಲ್ಲಿ ಕೆ.ಹಿರಣ್ಣಯ್ಯನವರು ಒಂದು ಹೆಜ್ಜೆ ಮುಂದೆ ಹೋಗಿ ಬ್ರಿಟಿಶ್ ಆಡಳಿತದ ವಿರುದ್ಧ ಮಾತನಾಡಿದ ಉದಾಹರಣೆಗಳು ಸಿಗುತ್ತವೆ.[೬]

ಚಿತ್ರದುರ್ಗ ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಬೆಳವಣಿಗೆ

ಚಿತ್ರದುರ್ಗ ಜಿಲ್ಲೆಯಲ್ಲಿ ರಾಷ್ಟ್ರೀಯತೆಯು ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಮೂಡಿ ಬಂದಿತು. ಈ ಭಾಗದಲ್ಲಿ ತಿಲಕ್, ಆಲೂರು ವೆಂಕಟರಾವ್, ಗಂಗಾಧರರಾವ್ ದೇಶಪಾಂಡೆ ಮೊದಲಾದ ಆರಂಭ ಕಾಲದ ರಾಷ್ಟ್ರೀಯವಾದಿಗಳು ಜನರಲ್ಲಿ ರಾಷ್ಟ್ರ ಪ್ರಜ್ಞೆಯನ್ನು ಜಾಗ್ರತಗೊಳಿಸಿದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯೂ ಒಟ್ಟು ರಾಷ್ಟ್ರದ ಒಂದು ಅಂಗವಾಗಿ ಭಾಗವಹಿಸಿತ್ತೇ ಹೊರತು ಪ್ರತ್ಯೇಕವಾಗಿ ಅಲ್ಲ ಎಂಬ ಮಾತು ಸ್ಪಷ್ಟ. ರೈತರು ಸೇರಿದಂತೆ ಯಾವಾಗ ಕಾಂಗ್ರೆಸ್ ಪಕ್ಷದ ಬೇಡಿಕೆಗಳು ಎಲ್ಲ ಜನವರ್ಗಗಳವರೆಗೂ ಸಹಾಯಕವಾಗುವಂತೆ ಇದ್ದವೋ, ಆಗ ಇಡೀ ಜನವರ್ಗವು ಚಳವಳಿಯಲ್ಲಿ ಭಾಗವಹಿಸಿತ್ತು. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ಆರಂಭಿಕ ಸ್ವಾತಂತ್ರ್ಯ ಹೋರಾಟಗಾರರಾಗಿ ಜನರನ್ನು ಸಂಘಟಿಸಿದವರು ಹರ್ಡೇಕರ್ ಮಂಜಪ್ಪನವರು. ಅಂದಿನ ಬಾಂಬೆ ಕರ್ನಾಟಕ ಮತ್ತು ಮೈಸೂರು ಸಂಸ್ಥಾನಕ್ಕೆ ಕೊಂಡಿಯಾಗಿ ನಿಂತು ಎರಡೂ ಭಾಗದ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳೆಸಿದರು.

ಹರ್ಡೇಕರ್ ಮಂಜಪ್ಪ ೧೮೮೬ ಫೆಬ್ರವರಿ ೧೮ರಂದು ಬನವಾಸಿಯಲ್ಲಿ ಜನಿಸಿದರು. ೧೯೦೩ರಲ್ಲಿ ಕನ್ನಡ ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ೧೯೦೫ರಲ್ಲಿ ಶಿರ್ಶಿಯ ಕನ್ನಡ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ೧೯೦೬ರಲ್ಲಿ ಶಿಕ್ಷಕ ಹುದ್ದೆಗೆ ರಾಜೀನಾಮೆ ಇತ್ತು. ದಾವಣಗೆರೆಗೆ ಬಂದು

ನೆಲೆಸಿದರು. ಬಾಲಗಂಗಾಧರ ತಿಲಕರ ವಿಚಾರಗಳಿಂದ ಮತ್ತು ವಂಗಭಂಗ ಚಳವಳಿಯಿಂದ ಪ್ರಭಾವಿತರಾಗಿದ್ದ ಮಂಜಪ್ಪನವರು ೧೯೦೮ರಲ್ಲಿ ಸ್ವದೇಶಿ ವಿಚಾರ ಕುರಿತು ತಮ್ಮ ಭಾಷಣದಲ್ಲಿ ಕ್ರಾಂತಿಕಾರಕ ವಿಚಾರಗಳನ್ನು ವ್ಯಕ್ತಪಡಿಸಿದ್ದರು. ದಾವಣಗೆರೆಯಲ್ಲಿ ನೆಲೆಸಿದ ಹರ್ಡೇಕರ್ ಮಂಜಪ್ಪನವರು ಮಾಗನಹಳ್ಳಿ ದೊಡ್ಡಬಸಪ್ಪನವರ ಸಹಾಯದಿಂದ ಸೆಪ್ಟೆಂಬರ್ ೧೯೦೭ರಲ್ಲಿ 'ಧನುರ್ಧಾರಿ' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯು ನಾಲ್ಕು ಪುಟಗಳ ರಾಯಲ್ ಸೈಜ್ ಹೊಂದಿದ್ದು, ಪ್ರತಿ ಶುಕ್ರವಾರದಂದು ಮುದ್ರಣಗೊಳ್ಳುತ್ತಿತ್ತು. ತಿಲಕರ ಕೇಸರಿ ಪತ್ರಿಕೆಯಿಂದ ಸಂಪೂರ್ಣ ಪ್ರಭಾವಿತವಾಗಿದ್ದು, ಮರಾಠಿ ಭಾಷೆಯನ್ನು ಚೆನ್ನಾಗಿ ಬಲ್ಲ ಮಂಜಪ್ಪನವರು ತಮ್ಮ ಪತ್ರಿಕೆಯಲ್ಲಿ ಲಾಲಾ ಲಜಪತ್‌ರಾಯ್, ಬಾಲಗಂಗಾಧರ ತಿಲಕ್ ಮತ್ತು ಬಿಪಿನ್ ಚಂದ್ರಪಾಲರ ಭಾಷಣಗಳನ್ನು ಯಥಾವತ್ತಾಗಿ ಕನ್ನಡದಲ್ಲಿ ಪ್ರಕಟಿಸುತ್ತಿದ್ದರು. ಈ ಪತ್ರಿಕೆಯು ಪ್ರಥಮ ವರ್ಷದಲ್ಲಿಯೇ ಯಶಸ್ವಿಯಾಯಿತು. ಆರಂಭದಲ್ಲೇ ಸುಮಾರು ೭೦೦ ಜನ ಓದುಗರನ್ನೊಳಗೊಂಡ ದೇಶ ಪ್ರೇಮವನ್ನು, ಸ್ವಾತಂತ್ರ್ಯ ಚಳವಳಿಯನ್ನು ಪ್ರೇರೇಪಿಸುವ ಪತ್ರಿಕೆಯಾಗಿತ್ತು.

ಮಂಜಪ್ಪನವರು ದಾವಣಗೆರೆಯಲ್ಲಿ 'ಧನುರ್ಧಾರಿ' ವಾರಪತ್ರಿಕೆಯನ್ನು ೧೯೦೭-೧೯೧೯ರವರೆಗೆ ನಡೆಸಿಕೊಂಡು ಬಂದರು. ನಂತರ ಆರ್ಥಿಕ ಸಮಸ್ಯೆಯಿಂದ ಪ್ರಕಟಣಾಕಾರ್ಯ ನಿಂತಿತು. ಹರಿಹರದಲ್ಲಿದ್ದಾಗ ಅವರು ಪ್ರಾರಂಭಿಸಬೇಕಿದ್ದ 'ಕೈ ಪ್ರೆಸ್' ಯೋಜನೆ ಕೂಡ ಸಾಧ್ಯವಾಗದೆ ಉಳಿಯಿತು. ನಂತರ ಇವರು ಹರಿಹರ ಸಮೀಪದ ತುಂಗಭದ್ರ ನದಿಯ ದಡದಲ್ಲಿ, ಗಾಂಧೀಜಿಯವರ ಸಾಬರಮತಿ ಆಶ್ರಮದ ಮಾದರಿಯಲ್ಲಿಯೇ ೧೯೨೩ ಜನವರಿ ೧೫ರಂದು ಸತ್ಯಾಗ್ರಹ ಆಶ್ರಮ ಸ್ಥಾಪಿಸಿದರು. ಇಲ್ಲಿ ಅವಶ್ಯವಾಗಿದ್ದ ಎರಡು ಸರಳವಾದ ಕಟ್ಟಡಗಳನ್ನು ನಿರ್ಮಿಸಲಾಗಿತ್ತು. ಇದಕ್ಕೆ ತಗಲಿದ್ದ ಹಣ ೩೭೫ ರೂಪಾಯಿಗಳನ್ನು ಬಾಳಪ್ಪ ಮತ್ತು ಆಲೂರು ನಾಗಪ್ಪನವರು ಭರಿಸಿದ್ದರು. ಹೀಗಾಗಿ ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ಆಶ್ರಮ ಜೀವನ ಮತ್ತು ಬ್ರಹ್ಮಚರ್ಯ ಜೀವನವನ್ನು ಕರ್ನಾಟಕದಲ್ಲಿ ಆರಿಸಿಕೊಂಡ ಪ್ರಥಮರಲ್ಲಿ ಮಂಜಪ್ಪನವರು ಮೊದಲಿಗರು.[೭]

ಈ ಆಶ್ರಮ ಪ್ರವೇಶಿಸಿದ ದಿನದಿಂದ ತಮ್ಮ ಅಂಗಿ, ಟೊಪ್ಪಿಗೆ, ಕಾಲಿನ ಜೋಡುಗಳನ್ನು ತ್ಯಜಿಸಿದರು. ಗಾಂಧೀಜಿಯವರಂತೆಯೆ ಆಶ್ರಮ ಜೀವನದ ಕಾರ್ಯಕ್ರಮ ರೂಪಿಸಿಕೊಂಡರು. ಅವರ ಆಶ್ರಮ ಜೀವನ ಬೆಳಗಿನ ೪.೩೦ಕ್ಕೆ ಪ್ರಾರಂಭವಾಗಿ ರಾತ್ರಿ ೯.೩೦ರವರೆಗೂ ನಡೆಯುತ್ತಿತ್ತು. ಇಷ್ಟು ಕಾಲಾವಧಿಯಲ್ಲಿ ಭಜನೆ, ಪುಸ್ತಕ ಬರೆಯುವ ಕಾರ್ಯ, ತೋಟದ ಕೆಲಸ, ನೂಲುವುದು, ಆಶ್ರಮ

ಸದಸ್ಯರಿಗೆ ತರಬೇತಿ ಮೊದಲಾದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಈ ಆಶ್ರಮವು ಗಾಂಧೀಜಿಯವರ ಆಶ್ರಮದಂತೆ ಒಂಭತ್ತು ತತ್ವಗಳನ್ನು ಒಳಗೊಂಡಿತ್ತು. ಮಂಜಪ್ಪನವರು ಆಶ್ರಮದ ಸುತ್ತಲಿನ ಮೂರು ಮೈಲಿ ಒಳಗಿನ ಎಲ್ಲಾ ಗ್ರಾಮಗಳಿಗೆ ಖಾದಿ ಪ್ರಚಾರಕ್ಕಾಗಿ ಹೋಗುತ್ತಿದ್ದರು. ಆದರೆ ೧೯೨೪ರಲ್ಲಿ ತುಂಗಭದ್ರಾನದಿಯ ಮಹಾಪೂರ ಬಂದು, ಆಶ್ರಮದೊಳಗೆ ನೀರು ನುಗ್ಗಿದ್ದರಿಂದ ಮುಂದೆ ಆಶ್ರಮವನ್ನು ಬಿಡಬೇಕಾಯಿತು. ಅನಂತರ ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ಒಂದು ವಿದ್ಯಾಲಯವನ್ನು ಸ್ಥಾಪಿಸಿ ಅಲ್ಲಿಯೇ ನೆಲೆಸಿದರು.

ಭಾರತದ ಸ್ವಾತಂತ್ರ್ಯ ಆಂದೋಲನಕ್ಕೆ ಮಂಜಪ್ಪನವರು ಅಪಾರ ಸೇವೆ ಸಲ್ಲಿಸಿದರು. ವಸಾಹತು ಆಡಳಿತದಲ್ಲಿ ಸಿಕ್ಕಿ ನಲುಗುತ್ತಿದ್ದ ದೇಶದ ಅಂದಿನ ಸ್ಥಿತಿಗತಿಗಳು ಮತ್ತು ಗುಲಾಮಗಿರಿಯಲ್ಲಿ ಸಿಲುಕಿದ ಜನಸಾಮಾನ್ಯರ ನೋವು ಅಸಹಾಯಕತೆಗಳು ಅವರ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವ ಬೀರಿದವು. ಮಂಜಪ್ಪನವರು ಕನ್ನಡ ಜನತೆಯಲ್ಲಿ ರಾಷ್ಟ್ರೀಯತೆ, ಸ್ವದೇಶಾಭಿಮಾನ ಬೆಳೆಯಲೆಂದು ಪತ್ರಿಕೆಗಳನ್ನು ಪ್ರಾರಂಭಿಸಿದರು. ಹಾಗೆಯೇ ೧೯೧೫ ರಿಂದ ೧೯೨೩ರ ಒಳಗೆ ೧೫ ಪುಸ್ತಕಗಳನ್ನು ಪ್ರಕಟಿಸಿ, ಸುಮಾರು ೨೩ ಸಾವಿರ ಪ್ರತಿಗಳನ್ನು ಕನ್ನಡದ ಜನತೆಗೆ ತಲುಪಿಸಿದರು. ೧೯೨೧ರಲ್ಲಿ ***ಭಾರತೀಯರ ದೇಶಭಕ್ತಿ*** ಎಂಬ ಪುಸ್ತಕವನ್ನು ದಾವಣಗೆರೆಯಲ್ಲಿ ಪ್ರಕಟಿಸಿದರು. ಅವರ ಇತರ ಪುಸ್ತಕಗಳಾದ ವೀರಶೈವ ಸಮಾಜ ಸುಧಾರಣೆ, ಶ್ರೀ ಬಸವೇಶ್ವರ, ಆದಿಜನರ (ಹರಿಜನರ) ಸುಧಾರಣೆ ಮುಂತಾದವು ಬಹು ಮುಖ್ಯವಾದವು. ಈ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಹೊಸ ಅಲೆಯನ್ನೇ ಸೃಷ್ಟಿಸಿದವು. ತಮ್ಮ ಪುಸ್ತಕಗಳಲ್ಲಿ ತತ್ವಜ್ಞಾನದ ದೃಷ್ಟಿಯಲ್ಲಿ ದೇಶಭಕ್ತಿಯನ್ನು ವಿಶ್ಲೇಷಿಸಿದ್ದರು. ತಮ್ಮ ರಾಜಕೀಯ ಹೋರಾಟದ ರೀತಿ-ನೀತಿಗಳನ್ನು ಪುಸ್ತಕದಲ್ಲಿ ತಿಳಿಸಿದ್ದರು. ಅವರು ಬದುಕಿನ ಮೇರುಹಂತಕ್ಕೆ ತಲುಪುವುದಕ್ಕೆ ವೇದಿಕೆಯಾಗಿದ್ದ ಸ್ಥಳಗಳು, ದಾವಣಗೆರೆ ಮತ್ತು ಹರಿಹರ ತಾಲೂಕುಗಳು. ೧೯೨೨-೨೩ರಲ್ಲಿ ಎರಡು ವರ್ಷ ಮುಂಚೆ ಕರ್ನಾಟಕದಲ್ಲಿದ್ದಾಗ ಗಾಂಧೀಜಿಯವರ ತತ್ವಪ್ರಚಾರವನ್ನು ಮಂಜಪ್ಪನವರು ಮಾಡಿದರು. ೧೯೨೩ರಲ್ಲಿ ಬಿಜಾಪುರದಲ್ಲಿ ಹರ್ಡೇಕರ್ ಮಂಜಪ್ಪನವರ ಭಾಷಣದಿಂದ ಪ್ರೇರಿತರಾದ ಗಂಗಾಧರರಾವ್ ದೇಶಪಾಂಡೆ ಅವರು ಹರ್ಡೇಕರ್ ಮಂಜಪ್ಪನವರನ್ನು 'ಕರ್ನಾಟಕದ ಗಾಂಧಿ' ಎಂದು ಕರೆದರು.[೮]

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ೧೮ ನವೆಂಬರ್ ೧೯೨೩ರಲ್ಲಿ ಬಿಜಾಪುರದಲ್ಲಿ ಸಭೆ ಸೇರಿತ್ತು. ಮುಂದೆ ಹಾವೇರಿಯಲ್ಲಿ ಜರುಗಿದ ಜಿಲ್ಲಾ ಕಾಂಗ್ರೆಸ್ ಸಭೆಯ ಅಧ್ಯಕ್ಷತೆಯನ್ನು

ಹರ್ಡೇಕರ್ ಮಂಜಪ್ಪನವರು ವಹಿಸಿಕೊಂಡಿದ್ದರು. ತಮ್ಮ ಭಾಷಣದಲ್ಲಿ ಖಾದಿ ಪ್ರಚಾರ, ಅಸ್ಪೃಶ್ಯೋದ್ಧಾರ ಮುಂತಾದ ವಿಷಯಗಳ ಬಗ್ಗೆ ಮಾತನಾಡಿದರು. ಇಂತಹ ವ್ಯಕ್ತಿ ತಮ್ಮ ಬದುಕಿನ ಕೊನೆಯವರೆಗೂ ಚಿತ್ರದುರ್ಗ ಪ್ರದೇಶದಲ್ಲಿ ಹಲವು ಬಾರಿ ಸಂಚರಿಸಿ ರೈತರನ್ನೊಳಗೊಂಡಂತೆ ಅನೇಕರನ್ನು ಚಳವಳಿಗೆ ಪ್ರೇರೇಪಿಸಿದರು.

ಕಾಂಗ್ರೆಸ್ ಮತ್ತು ಮೈಸೂರು ಸಂಸ್ಥಾನ

ದೇಶೀಯ ಸಂಸ್ಥಾನದ ರಾಜರು ದೇಶಿಯರೇ ಆಗಿದ್ದರಿಂದ, ಅವರ ಆಡಳಿತಕ್ಕೆ ಒಳಪಟ್ಟ ರಾಜ್ಯಗಳ ಜನರ ಯೋಗಕ್ಷೇಮ ದೇಶಿಯ ಸಂಸ್ಥಾನಗಳಿಗೆ ಸೇರಿತ್ತು ಎಂಬ ಭಾವನೆ ರಾಷ್ಟ್ರೀಯ ಕಾಂಗ್ರೆಸ್ ನಾಯಕರದಾಗಿತ್ತು. ಇದರಿಂದಾಗಿ ರಾಷ್ಟ್ರೀಯ ಕಾಂಗ್ರೆಸ್‌ನ ಚಟುವಟಿಕೆಗಳು ಬ್ರಿಟಿಷ್ ಪ್ರಾಂತ್ಯಗಳಲ್ಲಿ ಮಾತ್ರ ಪ್ರಾರಂಭದಲ್ಲಿ ವ್ಯಾಪಕವಾಗಿ ಹರಡಿತ್ತು. ಜೊತೆಗೆ ರಾಷ್ಟ್ರೀಯ ಕಾಂಗ್ರೆಸ್‌ನ ಯಾವುದೇ ಚಳವಳಿಗಳು ಸಂಸ್ಥಾನಗಳಲ್ಲಿ ನಡೆದಿರಲಿಲ್ಲ. ಇದರಿಂದಾಗಿಯೇ ದೇಶಿಯ ಸಂಸ್ಥಾನಗಳ ಪ್ರಾಂತ್ಯಗಳಲ್ಲಿ ಚಳವಳಿಯ ಜನಜಾಗೃತಿಯು ಮೂಡಿರಲಿಲ್ಲ. ಆದರೆ ೧೯೨೦ ನಾಗಪುರ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವು ಕಾಂಗ್ರೆಸ್ ಸಮಿತಿಗಳನ್ನು, ಪ್ರಾದೇಶಿಕ ಭಾಷೆಯ ಆಧಾರದ ಮೇಲೆ ೨೧ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಗಳನ್ನು ರಚಿಸಿತು. ಇದರಲ್ಲಿ ಭಾಗವಹಿಸಿದ ಕಾಂಗ್ರೆಸ್ ಸದಸ್ಯರ ಸಂಖ್ಯೆ ೧೪ ಸಾವಿರದಷ್ಟಿತ್ತು. ಈ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಕಾಂಗ್ರೆಸಿಗೆ ಒಂದು ಹೊಸ ರೂಪ ಕೊಟ್ಟರು. ಮುಂದೆ ಗ್ರಾಮ ಮಟ್ಟದಿಂದ ತಾಲೂಕು, ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಸ್ಥಾಪಿತವಾದವು. ಇದರಿಂದಾಗಿಯೇ ಅಖಿಲ ಭಾರತ ಕಾಂಗ್ರೆಸ್ ಸಮಿತಿ ರಚಿತವಾಯಿತು. ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಂಸ್ಥೆಯಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸನ್ನು 'ಮೈಸೂರು ಜಿಲ್ಲಾ ಕಾಂಗ್ರೆಸ್' ಎಂದು ಕರೆಯಲಾಯಿತು.[೯]

ಆ ಕಾಲದಲ್ಲಿ ಹರಿಹರದ ಗುಂಡೂರಾಯರು ಚಿತ್ರದುರ್ಗದಲ್ಲಿ ವೃತ್ತಪತ್ರಿಕೆಗಳನ್ನು ಓದುವ ಅಭ್ಯಾಸವನ್ನು ಬೆಳೆಸುವುದು, ಸಾರ್ವಜನಿಕ ಭಾಷಣವನ್ನು ಏರ್ಪಡಿಸುವುದು ಮುಂತಾದ ಮುಖ್ಯ ಉದ್ದೇಶಗಳನ್ನಿಟ್ಟುಕೊಂಡು ತಿಲಕ್ ಪುಸ್ತಕಾಲಯ ಮತ್ತು ವಾಚನಾಲಯವನ್ನು ಪ್ರಾರಂಭಿಸಿದರು. ೧೯೨೧ರ ಆಗಸ್ಟ್‌ನಲ್ಲಿ ರಾಷ್ಟ್ರಾದ್ಯಂತ ತಿಲಕ್ ದಿನಾಚರಣೆ ನಡೆಸಲಾಯಿತು. ಅದೇ ರೀತಿ ಚಿತ್ರದುರ್ಗ ನಗರದಲ್ಲಿಯೂ ಹರಿಹರದ ಗುಂಡುರಾಯರು ತಿಲಕರ ದಿನಾಚರಣೆ ನಡೆಸುವುದರ ಮೂಲಕ, ತಿಲಕರ ಜೀವನತತ್ವಗಳು ಹಾಗೂ ಅವರ ಹೋರಾಟದ ಬಗೆಗೆ ತಿಳಿಸುತ್ತಿದ್ದರು.[೧೦]

ಗ್ರಾಮಾಂತರ ಪ್ರದೇಶದ ರೈತರನ್ನು ಸಂಘಟಿಸಲೆತ್ನಿಸಿದರು. ಇದೇ ಸಂದರ್ಭದಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದ ಎಸ್.ನಿಜಲಿಂಗಪ್ಪ, ಎಸ್.ಡಿ.ಗಣೇಶರಾವ್ ಮತ್ತು ನಿಟ್ಟೂರು ಶ್ರೀನಿವಾಸರಾವ್ ಮುಂತಾದ ವಿದ್ಯಾರ್ಥಿನಾಯಕರು ಸೆಂಟ್ರಲ್ ಕಾಲೇಜಿನ ಸಭಾಂಗಣದಲ್ಲಿ ತಿಲಕ್ ದಿನಾಚರಣೆ ಆಚರಿಸಿದರು. ಮೈಸೂರು ಸಂಸ್ಥಾನದಾದ್ಯಂತ ೧೯೨೧ರಲ್ಲಿ ತಿಲಕರ ದಿನಾಚರಣೆ ನಡೆಯಿತು. ಚಿತ್ರದುರ್ಗ ಪ್ರದೇಶದ ರೈತರೂ ಕಾಂಗ್ರೆಸ್ ನೇತೃತ್ವದ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಹೀಗಾಗಿ ಸಾಮುದಾಯಿಕ ಹೋರಾಟದಿಂದ ಕಾಂಗ್ರೆಸ್ ಶಕ್ತಿಯುತವಾಗಿ ಬೆಳೆಯಲು ಸಾಧ್ಯವಾಯಿತು.

ಹರಿಹರದ ಗುಂಡೂರಾಯರಿಂದ ಖಾದಿ ಪ್ರಭಾವ ಮತ್ತು ರೈತಸಂಘಟನೆಗಳು ಹೆಚ್ಚು ಜನಪ್ರಿಯವಾದವು. ೧೯೨೧ರಲ್ಲಿಯೇ ವಿದೇಶಿ ವಸ್ತ್ರ ಮಾರಾಟದ ವಿರುದ್ಧ ಪಿಕೆಂಟಿಗ್ ನಡೆಯಿತು. ಹರಿಹರದ ಗುಂಡೂರಾಯರೇ ಸ್ವತಃ ಧಾರವಾಡಕ್ಕೆ ಹೋಗಿ ನೂಲುವುದನ್ನು ಕಲಿತು ಬಂದರು. ಹಳ್ಳಿಯಲ್ಲಿ ದೊರೆಯುವ ಚರಕವನ್ನು ಸುಧಾರಿಸುವ ಪ್ರಯತ್ನವನ್ನೂ ಮಾಡಿದರು. ಈ ಕಾರ್ಯಕ್ಕೆ ಬಡಗಿ ಓಸೂರಪ್ಪ ಸಹಾಯಕರಾಗಿ ಒಂದು ಸುಧಾರಿಸಿದ 'ಚರಕ' ಮಾಡಿಕೊಟ್ಟರು. ಹಚ್ಚಡದಂತಹ ಬಟ್ಟೆಯನ್ನು ಮೊದಲು ತಮ್ಮ ಕೈಯಿಂದಲೇ ನೇಯ್ದರು. ಇದನ್ನೇ ಅವರು ಅವರ ಮಿತ್ರರೂ ಧರಿಸಿದರು. 'ಖಾದಿ ಪ್ರಚಾರ' ಈ ರೀತಿ ಮುಂದೆ ಸಾಗಿತು. ಇವರು 'ಖಾದಿ ಮಹಿಮೆ' ಎಂಬ ಪುಸ್ತಕವನ್ನು ಬರೆದರು. ನಂತರ ಇವರ ಪತ್ನಿ ವೆಂಕಟಮ್ಮನವರು ಖಾದಿ ಉಡತೊಡಗಿದರು. ಇದೇ ರೀತಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ ಕಾಂಗ್ರೆಸಿನ ಆದರ್ಶಗಳೊಂದಿಗೆ ಪ್ರಾರಂಭವಾಯಿತು.[೧೧] ಬೆಳಗಾವಿಯಲ್ಲಿ ೧೯೨೪ರಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಗಾಂಧೀಜಿಯವರು ವಹಿಸಿದ್ದರು. ಈ ಅಧಿವೇಶನಕ್ಕೆ ಮೈಸೂರು ಸಂಸ್ಥಾನದ ಕಾಂಗ್ರೆಸ್ ನಾಯಕರು ಹೋಗಿದ್ದರು. ಚಿತ್ರದುರ್ಗ ಜಿಲ್ಲೆಯ ಎಸ್. ನಿಜಲಿಂಗಪ್ಪನವರು ಭಾಗವಹಿಸಿದ್ದರು. ಈ ಅಧಿವೇಶನದಲ್ಲಿ ಪಾಲ್ಗೊಂಡ ಎಸ್.ನಿಜಲಿಂಗಪ್ಪನವರು ೧೯೨೧ರಲ್ಲಿಯೇ ಕಾಂಗ್ರೆಸ್ ಸದಸ್ಯತ್ವದ ಶುಲ್ಕ ನಾಲ್ಕಾಣೆಯನ್ನು ನೀಡಿ ಸದಸ್ಯರಾಗಿದ್ದರು. ಬೆಂಗಳೂರಿನಲ್ಲಿ ಅಧ್ಯಯನ ಮಾಡುತ್ತಿದ್ದಾಗ ನಿಟ್ಟೂರು ಶ್ರೀನಿವಾಸರಾಯರು ಅವರ ಸಹವರ್ತಿಗಳಾಗಿದ್ದರು. ೧೯೨೧ರಿಂದಲೂ ಖಾದಿ ಧರಿಸುತ್ತಿದ್ದರು. ೧೯೨೪ರ ಬೆಳಗಾವಿಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಗಾಂಧೀಜಿಯವರ ಭಾಷಣ ನಿಜವಾದ ಅರ್ಥದಲ್ಲಿ ಎಸ್. ನಿಜಲಿಂಗಪ್ಪನವರನ್ನು ರಾಜಕೀಯವಾಗಿ ರೂಪಿಸಲು ಕಾರಣವಾಯಿತು ಮತ್ತು

ಮದನಮೋಹನ್ ಮಾಳವೀಯ ಅವರ ಭಾಷಣದಿಂದಲೂ ಪ್ರಭಾವಿತರಾಗಿದ್ದರು.[೧೧] ೧೯೨೭ರಲ್ಲಿ ಮಹಾತ್ಮ ಗಾಂಧೀಜಿಯವರು ಮೈಸೂರು ಪ್ರಾಂತ್ಯದುದ್ದಕ್ಕೂ ಖಾದೀ ಪ್ರಚಾರಕ್ಕಾಗಿ ಪ್ರವಾಸ ಕೈಗೊಂಡರು. ಆಗ ಸಂಗ್ರಹವಾದ ಖಾದಿ ನಿಧಿಯಿಂದ ಖಾದಿ ಅಂಗಡಿಗಳು ಪ್ರಾರಂಭವಾದವು. ಅದೇ ರೀತಿ ದಾವಣಗೆರೆಯಲ್ಲಿ ಖಾಸಲು ಶ್ರೀ ಶ್ರೀನಿವಾಸ ಶೆಟ್ಟರ ಮೇಲ್ವಿಚಾರಣೆಯಲ್ಲಿ ಒಂದು ಖಾದಿ ಅಂಗಡಿಯನ್ನು 'ಅಖಿಲ ಭಾರತ ಚರಕ ಸಂಘ'ವು ಪ್ರಾರಂಭಿಸಿತು. ಅದರ ವ್ಯವಸ್ಥಾಪಕರಾಗಿದ್ದವರು ಬೆಲ್ಲದ ಸಿದ್ದಲಿಂಗಪ್ಪನವರು ತಮ್ಮ ಹೆಗಲ ಮೇಲೆ ಗಂಟುಗಳನ್ನು ಹೊತ್ತು ಹಳ್ಳಿ ಹಳ್ಳಿಗೆ ಹೋಗಿ ಖಾದಿ ಮಾರಾಟ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಚಿತ್ರದುರ್ಗದ ಪ್ರತಿಯೊಂದು ಹಳ್ಳಿಯು ಖಾದಿ ಧರಿಸುವ ರೈತ ಮುಂದಾಳುಗಳು ತಾವು ಇರುವ ಹಳ್ಳಿಹಳ್ಳಿಗಳಲ್ಲಿ ಎಲ್ಲ ಭೂಹಿಡುವಳಿದಾರರು ಸಂಘಟಿತರಾಗಿ ತಮ್ಮ ಹಳ್ಳಿಯ ಮುಖಂಡರುಗಳಿಗೆ ಸಹಾಯ ಮಾಡಿದರು. ೧೯೨೯ರಲ್ಲಿ ಲಾಹೋರ್ ಕಾಂಗ್ರೆಸ್‌ನಲ್ಲಿ ಅಂಗೀಕೃತವಾದ ಪೂರ್ಣ 'ಸ್ವರಾಜ್ಯ' ನಿರ್ಣಯದಿಂದ ಪ್ರಭಾವಿತರಾದ ಎಸ್. ವಾಸುದೇವರಾವ್ ಚಿತ್ರದುರ್ಗದಲ್ಲಿ ಮೊದಲ ಸಲ ಸೇವಾದಳದ ಕಾರ್ಯಕರ್ತರೊಂದಿಗೆ ಧ್ವಜ ವಂದನಾ ಕಾರ್ಯಕ್ರಮ ಏರ್ಪಡಿಸಿದ್ದರು. ಆಗಲೇ ಜಿಲ್ಲೆಯಲ್ಲಿ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಲಾಗಿತ್ತು.[೧೨]

೧೯೩೦ರಲ್ಲಿ ಅಂಕೋಲ, . ಸಿದ್ಧಾಪುರದಲ್ಲಿ ಪ್ರಾರಂಭವಾದ ಚಳವಳಿಗೆ ಎಸ್. ನಿಜಲಿಂಗಪ್ಪ ಮುಂತಾದವರು ಹಣ ಸಂಗ್ರಹಿಸಿ ಕಳಿಹಿಸಿದ್ದರು. ೧೯೩೦ರಿಂದಲೇ ಚಿತ್ರದುರ್ಗದಲ್ಲಿ ಪ್ರತಿ ಶನಿವಾರ ಕಾಂಗ್ರೆಸ್ ಕಾರ್ಯಕರ್ತರು ಧ್ವಜವಂದನಾ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ೧೯೩೧ ಜನವರಿ ೨೧ರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಖಾದಿ ಪ್ರಚಾರ ಮತ್ತು ಆಂದೋಲನ ಬಹಳ ಬಿರುಸಿನಿಂದ ನಡೆಯಿತು. ದಾವಣಗೆರೆಯಲ್ಲಿ ಖಾದಿ ವಸ್ತ್ರಾಲಯದ ಸದಸ್ಯರು ಸೇರಿ ಪ್ರಚಾರ ಮಾಡುತ್ತಾ ನಗರದಾದ್ಯಂತ ಕರಪತ್ರಗಳನ್ನು ಹಂಚಿ ಮನೆಗಳ ಗೋಡೆಗಳ ಮೇಲೆ ಭಾರತೀಯ ವಸ್ತುಗಳನ್ನು ಮಾತ್ರವೇ ಕೊಳ್ಳಿ ಎಂದು ಭಿತ್ತಿ ಬರಹದ ಮೂಲಕ ಸಾರಿದರು. 'ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಿ' ಎಂದು, ಗೋಡೆ ಪತ್ರಗಳನ್ನು ಬರೆಯುವುದರೊಂದಿಗೆ ಘೋಷಣೆಗಳನ್ನು ಸಹ ಕೂಗುತ್ತಿದ್ದರು. ಇದರಲ್ಲಿ ಜಿಲ್ಲೆಯ ಹಳ್ಳಿಗಳ ರೈತ ಯುವಕರ ಪಾತ್ರ ಬಹಳ ಮುಖ್ಯವಾಗಿತ್ತು.

೧೯೩೧ ಫೆಬ್ರವರಿ ೪ರಂದು ಖಾದಿ ವಸ್ತ್ರಾಲಯದ ಬೆಲ್ಲದ ಸಿದ್ಧಲಿಂಗಪ್ಪ ಇತರರು ಹೋಗಿ ದಾವಣಗೆರೆಯ ದೊಡ್ಡ ವ್ಯಾಪಾರಿಯಾದ ಕೆರೋಜಿರಾವ್ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿ,

ಇನ್ನು ಮುಂದೆ ವಿದೇಶಿ ವಸ್ತುಗಳನ್ನು ತರಿಸಬಾರದೆಂದು ವ್ಯಾಪಾರಿಗಳಲ್ಲಿ ಕೇಳಿಕೊಂಡರು. ಜೊತೆಗೆ ವ್ಯಾಪಾರಿಗಳು ಈಗಿರುವ ಸರಕು ಸಾಮಗ್ರಿಗಳನ್ನು ನಾಲ್ಕು ತಿಂಗಳೊಳಗಾಗಿ ಮಾರಾಟ ಮಾಡಬೇಕೆಂದು, ವಿದೇಶಿ ವಸ್ತುಗಳನ್ನು ತರಕೂಡದೆಂದು ಒಪ್ಪಂದ ಮಾಡಿಕೊಳ್ಳಲಾಯಿತು. ಸಾರ್ವಜನಿಕ ಸಭೆಯಲ್ಲಿ ಬೆಲ್ಲದ ಸಿದ್ಧಲಿಂಗಪ್ಪ ೧೯೩೧ ಫೆಬ್ರವರಿ ೭ರಂದು ಮಾತನಾಡುತ್ತಾ ವಿದೇಶಿ ವಸ್ತುಗಳನ್ನು ಎಲ್ಲಾ ಸಾರ್ವಜನಿಕರು ಬಹಿಷ್ಕರಿಸಬೇಕೆಂದರು. ಇದಕ್ಕೆ ವ್ಯಾಪಾರಿಗಳು ವಿದೇಶಿ ವಸ್ತುಗಳನ್ನು ತರದಂತೆ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಕೋರಿದರು. ಅವರು ಗಾಂಧೀಜಿಯ ಮನೋಭಾವನೆಯನ್ನು ಅರ್ಥಮಾಡಿಕೊಂಡು, ನಾವು ಸಾಧ್ಯವಾದಷ್ಟು ಬೇಗ 'ಸ್ವರಾಜ್ಯ' ಪಡೆಯಬೇಕಾದರೆ ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು ಅಗತ್ಯವೆಂದರು. ದಾವಣಗೆರೆಯಲ್ಲಿ ೧೯೩೧ ಫೆಬ್ರವರಿ ೯ರಿಂದ ೧೨ರವರೆಗೆ ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಲಾಯಿತು. ಅದೇ ವೇಳೆಯಲ್ಲಿ ಆ ಬಟ್ಟೆ ಅಂಗಡಿಯ ವ್ಯಾಪಾರಿಗಳಾದ ಮುರಿಗಪ್ಪ ಮತ್ತು ವೀರಚಂದ್ ಮಧ್ಯೆ ಪ್ರವೇಶಿಸಿ ಖಾದಿ ವಸ್ತ್ರಾಲಯದ ಸದಸ್ಯರೊಂದಿಗೆ ಇನ್ನೂ ಮುಂದೆ ಯಾವುದೇ ವಿದೇಶಿ ಬಟ್ಟೆಗಳನ್ನು ತಂದು ತಮ್ಮ ಅಂಗಡಿಗಳಲ್ಲಿ ಮಾರಾಟ ಮಾಡುವುದಿಲ್ಲವೆಂದು ಒಪ್ಪಂದ ಮಾಡಿಕೊಂಡರು.[೧೩]

ಖಾದಿ ವಸ್ತ್ರಾಲಯದ ಇತರ ಸದಸ್ಯರು ರೈಲ್ವೆ ನಿಲ್ದಾಣದಿಂದ ಯಾವುದೇ ರೀತಿಯಾದಂತಹ ವಿದೇಶಿ ವಸ್ತುಗಳು ನಗರಕ್ಕೆ ಬರದಂತೆ ಗಮನಿಸುತ್ತಿದ್ದರು. ಇದರಿಂದಾಗಿ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್ ಬೆಲ್ಲದ ಸಿದ್ಧಲಿಂಗಪ್ಪ ಮತ್ತು ಶಿವಗಂಗಪ್ಪ ಇತರ ಖಾದೀ ವಸ್ತ್ರಾಲಯದ ಸದಸ್ಯರಿಗೆ ಎಚ್ಚರಿಕೆ ನೀಡಿದ್ದರು. ವಿದೇಶಿ ಬಟ್ಟೆಗಳನ್ನು ತರುವುದನ್ನು ಜಿಲ್ಲೆಯ ಪ್ರತಿಯೊಂದು ಹಳ್ಳಿಯ ಭೂಹಿಡುವಳಿದಾರರು ಬಹಿಷ್ಕರಿಸಿದ್ದರು. ಕಾರಣ ಆ ಪ್ರದೇಶವು ಮೂಲದಿಂದಲೇ ಹತ್ತಿ ಬೆಳೆಗೆ ಪ್ರಸಿದ್ಧವಾಗಿದ್ದು, ಇಲ್ಲಿನ ನೇಯ್ಗೆ ಕಾರ್ಯವು ಅತ್ಯಂತ ಬಿರುಸಿನಿಂದ ಸಾಗಿತ್ತು. ವಿದೇಶಿ ಬಟ್ಟೆಗಳ ಆಮದಿನಿಂದಾಗಿ ಈ ಭಾಗದಲ್ಲಿ ತಯಾರಾದ ಬಟ್ಟೆಗಳ ಬೇಡಿಕೆ ಕಡಿಮೆಯಾಯಿತು. ಹೀಗಾಗಿ ಭೂಹಿಡುವಳಿದಾರರು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಕಾಂಗ್ರೆಸ್ ಜೊತೆ ಹೋರಾಟಕ್ಕೆ ಇಳಿದರು. ಏಕೆಂದರೆ ೧೮೦೦ರ ನಂತರದ ದಶಕಗಳಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ಹತ್ತಿ ಬೆಳೆ ಪ್ರಮುಖ ವಾಣಿಜ್ಯ ಬೆಳೆಯಾಗಿತ್ತು ಎಂಬ ಬಗ್ಗೆ ಬುಕಾನನ್ ಸಹ ವಿವರ ನೀಡುತ್ತಾನೆ.[೧೪] ೧೮೯೦ರ ದಶಕದಲ್ಲಿ ಹತ್ತಿ ಬೆಳೆಗೆ ಈ ಭಾಗದಲ್ಲಿ ವಿಶೇಷ ಪ್ರೋತ್ಸಾಹ ಕೊಡಲಾಯಿತು. ರೈತನೊಬ್ಬ ಹತ್ತಿಯನ್ನು ಬಿತ್ತಿದನೆಂದರೆ ಪೂರ್ವಭಾವಿಯಾಗಿ ಬೆಳೆಯ ನಿರೀಕ್ಷೆಯಲ್ಲಿ ಇರುವ ವೇಳೆಯಲ್ಲೇ

ಅವನಿಗೆ ಭಾರಿ ಪ್ರಮಾಣದಲ್ಲಿ ಮುಂಗಡ ಹಣ ಕೊಡುವ ಪರಿಪಾಟ ರೂಢಿಯಾಗಿತ್ತು. ಕಚ್ಚಾ ಹತ್ತಿಗೆ ಇನ್ನಷ್ಟು ಬೇಡಿಕೆ ಬಂದ ಕಾರಣ ಚಿತ್ರದುರ್ಗ ಜಿಲ್ಲೆಯಲ್ಲಿ ಹತ್ತಿಯ ಬೆಳೆ ವ್ಯಾಪಕವಾಗಿ ಹಬ್ಬಿತು. ಇದು ಸಹ ವಿದೇಶಿ ತಳಿಯ ಸೇರ್ಪಡೆಯಾಗಿ ಋತುಮಾನದ ಅನಾನುಕೂಲತೆ ಇದ್ದರೂ ರೈತರು ಬಿಡದೇ ವಿದೇಶಿ ತಳಿಗಳು ಸ್ಥಳೀಯ ಪರಿಸ್ಥಿತಿಗೆ ಬೀಜಗಳನ್ನು ಒಗ್ಗಿಸುವುದರಲ್ಲಿ ಸಫಲರಾದರು. ಜೊತೆಗೆ ಚಿತ್ರದುರ್ಗ ಜಿಲ್ಲೆಯ ಹರಿಹರದ ಸಮೀಪದಲ್ಲಿ ತುಂಗಾಭದ್ರಾ ನದಿಗೆ ಮೇಲುಸೇತುವೆ ನಿರ್ಮಾಣವಾದ ನಂತರದಿಂದ ಬೇರೆ ಕಡೆಗೆ ಕಚ್ಚಾ ಹತ್ತಿ ಸಾಗಿಸುವ ವ್ಯವಸ್ಥೆ ನಿರಂತರವಾಗಿ ನಡೆಯಿತು.[೧೫] ೨೦ನೇ ಶತಮಾನದ ಪ್ರಾರಂಭದ ದಶಕದಲ್ಲಿ ದಾವಣಗೆರೆಯಲ್ಲಿಯೇ ಹತ್ತಿ ಮಿಲ್ಲುಗಳು ಆರಂಭವಾದವು. ಈ ಮೇಲಿನ ಎಲ್ಲಾ ವ್ಯವಸ್ಥೆಯೂ ರೈತ ಸಮುದಾಯವನ್ನು ಶೋಷಣೆ ಮಾಡುತ್ತಿತ್ತು. ಹೀಗಾಗಿ ಕಾಂಗ್ರೆಸ್ ಪರವಾದ ಹೋರಾಟದಲ್ಲಿ ರೈತ ಮುಖಂಡರುಗಳು ಭಾಗವಹಿಸಿದ್ದರು.

ದಾವಣಗೆರೆಯಲ್ಲಿ ವಿದೇಶಿ ವಸ್ತ್ರಗಳ ಬಹಿಷ್ಕಾರ ಹಾಕುವ ಪಿಕೆಟಿಂಗ್ ೧೯೩೨ರಲ್ಲಿ ನಡೆಯಿತು. ಆಗ ಅಂಗಡಿ ಮಾಲೀಕರು ವಿದೇಶಿ ಬಟ್ಟೆಗಳನ್ನು ಕಟ್ಟಿ ಸೀಲ್ ಮಾಡಿಸಿದರು. ನಂತರ ಅವರಿಂದ ಇನ್ನೆಂದಿಗೂ ವಿದೇಶಿ ಬಟ್ಟೆಗಳನ್ನು ತರಿಸುವುದಿಲ್ಲ, ಮಾರಾಟ ಮಾಡುವುದಿಲ್ಲ ಎಂಬ ವಾಗ್ದಾನವನ್ನು ಮಾಲೀಕರಿಂದ ಪಡೆಯಲಾಯಿತು. ಚಿತ್ರದುರ್ಗ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದ ಜಿ.ಚನ್ನಪ್ಪನವರ ನೇತೃತ್ವದಲ್ಲಿ ೧೯೩೨ರಲ್ಲಿ ಐಮಂಗಲದಲ್ಲಿ ಖಾದಿ ಕೇಂದ್ರವೊಂದು ಸ್ಥಾಪಿತವಾಯಿತು. ಹೆಚ್. ನಂಜುಂಡಯ್ಯನವರು ಅದರ ವ್ಯವಸ್ಥಾಪಕರಾಗಿದ್ದರು. ೧೯೩೨ರ ನಂತರ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ಖಾದಿ ಕೇಂದ್ರದ ಶಾಖೆಗಳನ್ನು ಸ್ಥಾಪಿಸಲಾಯಿತು. ಇದೇ ಸಂದರ್ಭದಲ್ಲಿ ಡಾ.ಎನ್.ಎಸ್. ಹರ್ಡೇಕರ್‌ರವರು ಜಿಲ್ಲೆಯಾದ್ಯಂತ ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಬೇಕೆಂದು ಜನತೆಗೆ ಕರೆಕೊಟ್ಟರು. ಇದರಿಂದ ಪ್ರೇರಿತರಾದ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದ ಮಹಮದ್ ಇಮಾಂ ಐಮಂಗಲದ ಖಾದಿ ಕೇಂದ್ರದ ಯಶಸ್ಸಿಗೆ ಕಾರಣರಾದರು. ಎಸ್. ವಾಸುದೇವರಾವ್ ಐಮಂಗಲ ಖಾದಿ ಕೇಂದ್ರದ ಏಜೆಂಟರಾಗಿ ಚಿತ್ರದುರ್ಗದಲ್ಲಿ ಖಾದಿ ವಸ್ತ್ರಾಲಯವನ್ನು ಸ್ಥಾಪಿಸಿದರು. ಶ್ರೀನಿವಾಸರಾವ್ ನೇತೃತ್ವದಲ್ಲಿ ದಾವಣಗೆರೆಯ ಹರಿಜನ ಕೇರಿಯಲ್ಲಿ ೧೯೩೨ ಡಿಸೆಂಬರ್ ೧೮ರಂದು ಸಭೆ ಸೇರಿ ಕೆಳ ಸಮುದಾಯದ ಜನರಿಗೂ ದೇವಾಲಯಗಳಿಗೆ ಪ್ರವೇಶ ಕಲ್ಪಿಸಲು ಮನವೊಲಿಸಲಾಯಿತು. ಸಭೆಯ ಕೊನೆಯಲ್ಲಿ ಸಾಮೂಹಿಕ ಭೋಜನ ಮತ್ತು ಪುಷ್ಪಗಳನ್ನು ಹಂಚುವ ಮೂಲಕ ಮುಕ್ತಾಯವಾಯಿತು. ಖಾದಿ ವಸ್ತ್ರಾಲಯದ ಕಾರ್ಯಕರ್ತರು ನಡೆಸಿದ ಚಳವಳಿಗಳಿಂದಾಗಿ ಎಚ್ಚರವಹಿಸಿದ ಸರಕಾರವು ಚಿತ್ರದುರ್ಗ ಜಿಲ್ಲೆಯಾದ್ಯಂತ ನಿಷೇಧಾಜ್ಞೆ ಘೋಷಿಸಿತು.[೧೬]

ಚಿತ್ರದುರ್ಗ ಜಿಲ್ಲೆಯಲ್ಲಿ ೧೯೩೨ರಲ್ಲಿ ನಿಷೇಧಾಜ್ಞೆ ಇರುವ ವೇಳೆಯಲ್ಲಿ ಪ್ರತಿಯೊಂದು ಹಳ್ಳಿಯಿಂದ ಹತ್ತಾರು ಸಂಖ್ಯೆಯಲ್ಲಿ ರೈತರು ಭಾಗವಹಿಸುತ್ತಿದ್ದರು. ಈ ರೈತರಿಗೆ ಇಡೀ ಹಳ್ಳಿಯ ಪ್ರಭಾವಿ ಸಮುದಾಯಗಳು ಊಟ, ಹಣದ ಸಹಾಯ ಮಾಡುತ್ತಿದ್ದರು. ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದ ರೈತ ಮುಖಂಡರು ಪೋಲಿಸರ ಕಣ್ಣಿಗೆ ಬೀಳದಂತೆ ಹಳ್ಳಿಯ ಪ್ರಭಾವಿಗಳು ತಮ್ಮ ತೋಟದ ಮನೆ, ಹೊಲ ಗದ್ದೆಗಳಲ್ಲಿ ಗುಪ್ತವಾಗಿರಲು ಸಹಾಯ ಮಾಡುತ್ತಿದ್ದರು. ಕೆಲವೊಂದು ವೇಳೆ ತಮ್ಮ ಮನೆಯಲ್ಲಿ ಹಲವು ದಿನಗಳವರೆಗೆ ವಸತಿ ಕಲ್ಪಿಸುತ್ತಿದ್ದರು. ಯಾವುದೇ ಸ್ವಾತಂತ್ರ್ಯ ಚಳವಳಿಗಾರರು ಪೋಲಿಸರ ಕೈಗೆ ಸಿಗದಂತೆ ಮುಂಜಾಗ್ರತೆ ವಹಿಸುತ್ತಿದ್ದರು. ಒಂದು ವೇಳೆ ದಸ್ತಗಿರಿ ಆದರೂ ದಸ್ತಗಿರಿ ವಾರೆಂಟನ್ನೂ ತಪ್ಪಿಸಿಕೊಂಡು ಪೋಲಿಸರ ಕೈಗೆ ಸಿಕ್ಕದೇ ಓಡಾಡುತ್ತಿದ್ದರು. ಚಿತ್ರದುರ್ಗ ಜಿಲ್ಲೆಗೆ ಬ್ಯಾಡಗಿ, ಹಾವೇರಿ, ಹಿರೇಕೆರೂರು, ಶಿರಾಳಕೊಪ್ಪ, ಹಾನಗಲ್ ಮುಂತಾದ ಸ್ಥಳಗಳಿಂದಲೂ ಚಳವಳಿಗಾರರ ತಂಡಗಳನ್ನು ಕರೆಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಇವರ ಗುರುತು ಸಿಗದಂತಿರಲು ಮರೆಮಾಚುತ್ತಿದ್ದರು. ಉದಾಹರಣೆಗೆ ಈ ಮೇಲಿನ ಚಳವಳಿಗಾರರನ್ನು ಕೊಟಗಿ ಈಶ್ವರಪ್ಪನವರ ತೋಟದಲ್ಲಿ ಗೋಪ್ಯವಾಗಿರಿಸಿದರು. ಪೋಲಿಸರಿಗೆ ತಿಳಿಯದಂತೆ ಅವರಿಂದಲೇ ಚಳವಳಿ ನಡೆಸುತ್ತಿದ್ದರು. ಅದೇ ರೀತಿ ಚಿತ್ರದುರ್ಗ ಜಿಲ್ಲೆಯ ಕೆಂಚಪ್ಪನವರನ್ನು ೧೯೩೨ರಲ್ಲಿ ಪೋಲಿಸರು ಬಂಧಿಸಲು ಬಂದಾಗ ದಸ್ತಗಿರಿಯಿಂದ ತಪ್ಪಿಸಿಕೊಂಡು ಚಿತ್ರದುರ್ಗದಿಂದ ಓಡಿಬಂದು ಹಲವು ಗ್ರಾಮಗಳಲ್ಲಿ ಸುತ್ತಾಡಿ ಕೊಟ್ರೆ ನಂಜಪ್ಪನವರ ಊರಾದ ಹೊಳಲ್ಕೆರೆ ತಾಲೂಕು ದೊಗ್ಗನಾಳಗೆ ಬಂದು ಸೇರಿದರು. ಅಲ್ಲಿಂದ ತಪ್ಪಿಸಿಕೊಂಡು ಕಾಡು ಸೇರಿದರು. ಹೀಗೆ ಪೋಲಿಸರ ಕಣ್ಣು ತಪ್ಪಿಸಿಕೊಂಡು ಓಡಾಡಬೇಕಾಗಿತ್ತು. ಕೊನೆಗೆ ಕೆಂಚಪ್ಪನವರು ಕೊಟ್ರ ನಂಜಪ್ಪನವರ ಹುಲ್ಲು ಬಣವೆಯಲ್ಲಿ ಬಚ್ಚಿಟ್ಟುಕೊಂಡರು. ನಂತರ ಅಲ್ಲಿಂದ ಇವರು ಎಣ್ಣೆಕೊಪ್ಪದ ಸಭೆಗೆ ಹೋಗಿದ್ದಾಗಿ ವಿವರಿಸುತ್ತಾರೆ.[೧೭]

೧೯೩೩ರಲ್ಲಿ 'ಹಿಂದೂಸ್ಥಾನಿ ಸೇವಾದಳ'ವು ವಿಸರ್ಜಿಸಲ್ಪಟ್ಟ ನಂತರ ರಾಷ್ಟ್ರೀಯ ಸೇವಾದಳ ಮುಂತಾದ ಹಲವು ಹೆಸರುಗಳಿಂದ ಸ್ಥಳೀಯವಾಗಿ ಯುವಕರ ಸಂಘಟನೆ ಆಯಿತು.[೧೮] ಇದರಲ್ಲಿ ಇದ್ದ ಬಹುತೇಕ ಎಲ್ಲ ಸದಸ್ಯರು ಗ್ರಾಮಗಳ ಭೂಹಿಡುವಳಿದಾರರಾಗಿದ್ದರು. ಚಿತ್ರದುರ್ಗ ಜಿಲ್ಲೆಯಾದ್ಯಂತ ೧೯೩೪ ಮಾರ್ಚ್ ತಿಂಗಳು ಅಸ್ಪೃಶ್ಯತಾ ನಿವಾರಣ ಸಂಬಂಧವಾಗಿ ಗಾಂಧೀಜಿಯವರು ದಾವಣಗೆರೆಗೆ ಬಂದಿದ್ದರು. ಅಂದು ಅವರನ್ನು ನಗರದ ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರು ಚಿತ್ರದುರ್ಗ ಜಿಲ್ಲಾ ಬೋರ್ಡ್ ಸದಸ್ಯರು, ದಾವಣಗೆರೆ ಯುವಕ ಸಂಘದ ಸದಸ್ಯರು ಬರಮಾಡಿಕೊಂಡಿದ್ದರು. ಇವರ

ಪ್ರವಾಸದಿಂದ ಕಾಂಗ್ರೆಸ್ ಸಂಘಟನೆ ಪ್ರಬಲವಾಗಿ ಬೆಳೆಯಲು ಕಾರಣವಾಯಿತು. ಗಾಂಧೀಜಿಯವರ ನೆನಪಿಗಾಗಿ ಖಾಸಲು ಶ್ರೀನಿವಾಸ ಶೆಟ್ಟರು, ಹನುಮಂತರಾಜು ಮತ್ತು ಭೀಮರಾಜು ಮತ್ತಿತರರು ಸೇರಿ ದಾವಣಗೆರೆಯಲ್ಲಿ ಹರಿಜನ ವಿದ್ಯಾರ್ಥಿನಿಲಯಕ್ಕೆ ಅಸ್ತಿಭಾರ ಹಾಕಿದರು. ರಾಷ್ಟ್ರೀಯ ಕಾಂಗ್ರೆಸ್‌ನ ಸುವರ್ಣ ಮಹೋತ್ಸವವನ್ನು ೧೯೩೫ರಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಎಸ್. ವಾಸುದೇವರಾವ್ ಮತ್ತು ಎಸ್. ನಿಜಲಿಂಗಪ್ಪ ಮುಂತಾದವರು ಆಚರಿಸಿದರು. ೧೯೩೬ರಲ್ಲಿ ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಕೊಟ್ರೆ ನಂಜಪ್ಪನವರು ದಾವಣಗೆರೆಯಲ್ಲೂ ಆರಂಭಿಸಿದರು. ಮುಂದೆ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯ ಚಿತ್ರದುರ್ಗಕ್ಕೆ ಬಂದಿತು. ಎಸ್. ನಿಜಲಿಂಗಪ್ಪ ಅಧ್ಯಕ್ಷರು, ಕೊಟ್ರನಂಜಪ್ಪ ಮತ್ತು ಎಸ್. ವಾಸುದೇವರಾವ್ ಕಾರ್ಯದರ್ಶಿಗಳಾಗಿದ್ದರು. ನಂತರ ಇವರ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಸ್ವಾತಂತ್ರ್ಯ ಹೋರಾಟಕ್ಕೆ ಕಾರ್ಯಕರ್ತರನ್ನು ಸಂಘಟಿಸಲಾಯಿತು.

ರಾಷ್ಟ್ರೀಯ ಕಾಂಗ್ರೆಸ್ ನಾಯಕರ ಚಟುವಟಿಕೆಗಳು

ಚಿತ್ರದುರ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ ೧೯೩೭ರ ನಂತರ ಜನಸಮುದಾಯದ ಸಂಘಟನೆಯಾಗಿ ವಹಿಸಿದ ಪಾತ್ರ ಅದಕ್ಕೆ ರೈತ ಸಮುದಾಯಗಳು ಪ್ರತಿಕ್ರಿಯಿಸಿದ ವಿಧಾನ ಮಹತ್ವಪೂರ್ಣವಾದುದು. ಚಿತ್ರದುರ್ಗ ಜಿಲ್ಲೆಯ ದಾವಣಗೆರೆಯನ್ನು ಹೊರತು ಪಡಿಸಿದರೆ ಸ್ವಾತಂತ್ರ್ಯಪೂರ್ವದಲ್ಲಿ ಜಿಲ್ಲೆಯು ಸಂಪೂರ್ಣರೈತ ಸಮುದಾಯದಿಂದ ಕೂಡಿದ ಪ್ರದೇಶವಾಗಿತ್ತು. ಇಂತಹ ರೈತ ಸಮುದಾಯವು ಕ್ಷಾಮ ಇಲ್ಲವೇ ಬರದ ಸನ್ನಿವೇಶಗಳನ್ನು ಎದುರಿಸಿತು. ಜೊತೆಗೆ ಸರಕಾರಿ ಅಧಿಕಾರಿಗಳ ದಬ್ಬಾಳಿಕೆಯ ವಿರುದ್ಧ ರೈತ ಸಮುದಾಯ ರಕ್ಷಿಸಿಕೊಳ್ಳಬೇಕಾಗಿತ್ತು. ಅಂದರೆ ಅಧಿಕ ಪ್ರಮಾಣದ ಭೂಕಂದಾಯವನ್ನು ರೈತರು ಸರಕಾರಕ್ಕೆ ಸಲ್ಲಿಸಬೇಕಾಗಿತ್ತು. ಕಂದಾಯ ಕೊಡಲು ನಿರಾಕರಿಸಿದರೆ ಚರ-ಸ್ಥಿರ ಆಸ್ತಿಯನ್ನು ಜಪ್ತಿ ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ರೈತ ಸಮುದಾಯಪರವಾದ ನೀತಿಯನ್ನು ಅನುಸರಿಸಿತು. ಕಂದಾಯದಲ್ಲಿ ಆಂಶಿಕ ಇಲ್ಲವೆ ಪೂರ್ತಿ ರಿಯಾಯಿತಿ ನೀಡಬೇಕೆಂದೂ, ನೀರಾವರಿ ಅನುಕೂಲಗಳು ಸಿಗಬೇಕೆಂದು ೧೯೩೭ರಲ್ಲಿ ಠರಾವು ಮಾಡಿತು. ಹೀಗಾಗಿ ಕಾಂಗ್ರೆಸ್ ನಾಯಕರಿಗೆ ಚಿತ್ರದುರ್ಗ ಜಿಲ್ಲೆಯಾದ್ಯಂತ ಭೂಮಾಲೀಕರು ಬೆಂಬಲವಿತ್ತರು. ಜಿಲ್ಲೆಗೆ ಹಲವು ರಾಷ್ಟ್ರೀಯ ಕಾಂಗ್ರೆಸ್ ನಾಯಕರು ಭೇಟಿ ನೀಡಿದರು. ಅವರು ರಾಷ್ಟ್ರ ಸ್ವಾತಂತ್ರ್ಯ ಪಡೆಯುವ ಅವಶ್ಯಕತೆ ಗಾಂಧೀಜಿಯವರ 'ಸ್ವರಾಜ್ಯ'ದ ಕಲ್ಪನೆಯನ್ನು ಜನತೆಗೆ ತಿಳಿಯುವ ಭಾಷೆಯಲ್ಲಿ ವಿವರಿಸಿದ್ದರು.

ಜನಸಾಮಾನ್ಯರ ಬೆಂಬಲ ಪಡೆದ ನಾಯಕರುಗಳಲ್ಲಿ ೧೯೩೭ ಮೇ ೧೪ರಂದು ಎಸ್.ಎಸ್. ಹರ್ಡೇಕರ್ ಮತ್ತು ಉಮಾಬಾಯಿ ಕುಂದಾಪುರ ಹುಬ್ಬಳ್ಳಿಯಿಂದ ದಾವಣಗೆರೆಗೆ ಬಂದರು. ಅವರನ್ನು ಎಸ್.ನಿಜಲಿಂಗಪ್ಪ ಮತ್ತು ಎಸ್. ವಾಸುದೇವರಾವ್ ಮುಂತಾದವರು ಬರಮಾಡಿಕೊಂಡರು. ಅವರು ೧೯೩೭ರಲ್ಲಿ ಜಿಲ್ಲೆಯಾದ್ಯಂತ ಪ್ರವಾಸ ಮಾಡಿ ಕಾಂಗ್ರೆಸ್ ಪ್ರಚಾರ ಕೈಗೊಂಡರು.[೧೯] ಇವರ ಪ್ರವಾಸವು ಜಿಲ್ಲೆಯಲ್ಲಿ ವ್ಯಾಪಕ ಪ್ರಭಾವವನ್ನು ಬೀರಿತು. ತಾಲೂಕು ಮಟ್ಟದಲ್ಲಿ ಕಾಂಗ್ರೆಸ್ ಸಮಿತಿಗಳು ಅಸ್ತಿತ್ವಕ್ಕೆ ಬಂದವು. ಚಿತ್ರದುರ್ಗ ಜಿಲ್ಲೆಯ ಜಗಳೂರು, ಚಳ್ಳಕೆರೆ, ಮೊಳಕಾಲ್ಮುರು, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ಮುಂತಾದ ತಾಲೂಕು ಕೇಂದ್ರಗಳಲ್ಲಿ ಪ್ರವಾಸ ಕೈಗೊಂಡು, ತಮ್ಮ ಸಾರ್ವಜನಿಕ ಭಾಷಣದಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಸದಸ್ಯತ್ವ ಪಡೆಯಬೇಕೆಂದರು ಜೊತೆಗೆ ವಸಾಹತು ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಎನ್.ಎಸ್. ಹರ್ಡೇಕರ ಮತ್ತು ಉಮಾಬಾಯಿ ಕುಂದಾಪುರ ತಾವು ಭೇಟಿ ಮಾಡಿದ ತಾಲೂಕುಗಳಲ್ಲಿ ಕಾಂಗ್ರೆಸ್ ಸಮಿತಿಗಳನ್ನು ಸಂಘಟಿಸಿದರು. ೧೯೩೭ ಮೇ ೧೪ರಂದು ಜಗಳೂರಿಗೆ ಭೇಟಿ ನೀಡಿ ಬ್ರಿಟಿಶರನ್ನು ಭಾರತದಿಂದ ಓಡಿಸದ ಹೊರತು, ಭಾರತದ ಬಡತನದ ನಿವಾರಣೆ ಸಾಧ್ಯವಿಲ್ಲವೆಂದು ಸಾರಿದರು.[೨೦]

೧೯೩೭ರ ಮೇ ೧೬ರಂದು ಎನ್.ಎಸ್.ಹರ್ಡೇಕರ್, ಶ್ರೀಮತಿ ಉಮಾಬಾಯಿ ಕುಂದಾಪುರ, ಎಸ್. ವಾಸುದೇವರಾವ್, ಎಸ್. ನಿಜಲಿಂಗಪ್ಪ ಮುಂತಾದವರು ಚಿತ್ರದುರ್ಗ ಜಿಲ್ಲೆಯಲ್ಲಿ ಹಲವು ಗ್ರಾಮಗಳಿಗೆ ಭೇಟಿ ನೀಡಿದ್ದರು. ಅವುಗಳಲ್ಲಿ ಹಿರಿಯೂರು ತಾಲೂಕಿನ ತಲವಟ್ಟಿ ಮತ್ತು ಅರಿಯಬ್ಬೆ ಗ್ರಾಮಗಳಿಗೂ, ಹಾಗೂ ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ಧವ್ವನ ಹಳ್ಳಿಗೂ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಹರ್ಡೇಕರ್ ಜನತೆಯನ್ನುದ್ದೇಶಿಸಿ ಮಾತನಾಡುತ್ತಾ, ಮೈಸೂರು ಸಂಸ್ಥಾನವು ರೈತರಿಂದ ಸಂಗ್ರಹಿಸಿದ ಅಧಿಕ ತೆರಿಗೆಯ ಆದಾಯವನ್ನು ವೈಸರಾಯ್, ಗವರ್ನರ್ ಮತ್ತು ಇತರ ಬ್ರಿಟಿಶ್ ಅಧಿಕಾರಿಗಳು ಸಂಬಳ ರೂಪದಲ್ಲಿ ಪಡೆಯುತ್ತಿದ್ದಾರೆ. ಅವರು ವಿಧಿಸಿದ್ದ ಭೂಕಂದಾಯದಲ್ಲಿ ರಿಯಾಯತಿಯನ್ನಾಗಲಿ ಅಥವಾ ಭೂಕಂದಾಯವನ್ನು ಕೊಡಲು ತಪ್ಪಿಸಿಕೊಳ್ಳುವುದು ಯಾವ ರೈತರಿಂದಲೂ ಸಾಧ್ಯವಿರಲಿಲ್ಲ. ತಾವು ಬೆಳೆಯನ್ನು ಬೆಳೆಯದಿದ್ದರೂ, ನಿಗದಿಪಡಿಸಿದ ತೆರಿಗೆಯನ್ನು ನೀಡಲೇಬೇಕು.[೨೧] ಇಂತಹ ವ್ಯವಸ್ಥೆಯ ವಿರುದ್ಧ ಪ್ರತಿ ಗ್ರಾಮದ ರೈತರೂ ಸಂಘಟಿತರಾಗಿ ಹೋರಾಡುವುದು ಅವಶ್ಯಕ ಎಂದರು. ನಂತರ ಹೊಸದುರ್ಗ ತಾಲೂಕಿನ ಬಾಗೂರು ಗ್ರಾಮಕ್ಕೂ

ಭೇಟಿ ನೀಡಿದ್ದರು. ತಾವು ಭೇಟಿ ನೀಡಿದ ಹಲವು ಪ್ರದೇಶಗಳಲ್ಲಿ ಸಾರ್ವಜನಿಕ ಭಾಷಣ ಮಾಡಿದರು. ೧೯೩೭ ಮೇ ೧೮ರಂದು ಹುಬ್ಬಳ್ಳಿಗೆ ಹಿಂದಿರುಗಿದರು.[೨೨] ೧೯೩೭ರಲ್ಲಿ ನಡೆದ ಸಭೆ ಸಮಾರಂಭಗಳ ಕುರಿತು ಎಚ್ಚರವಹಿಸಿದ ಸರಕಾರ ನಿಷೇಧಾಜ್ಞೆಯ ಮೂಲಕ ಅವುಗಳನ್ನು ತಡೆಯಲು ಪ್ರಯತ್ನಿಸಿತು. ಚಿತ್ರದುರ್ಗ ಜಿಲ್ಲೆಯ ಯಾವ ತಾಲೂಕು ಅಥವಾ ಗ್ರಾಮಗಳಲ್ಲಾಗಲೀ ಸಭೆ ಸಮಾರಂಭಗಳು ನಡೆಯದಂತೆ ಸರಕಾರ ಕಾಯಿದೆ ರೂಪಿಸಿತು. ದಾವಣಗೆರೆಯ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್‌ರವರು ಸಕ್ಷನ್ ೩೯, ಮೈಸೂರು ಪೋಲಿಸ್ ರೆಗ್ಯುಲೇಷನ್‌ಗೆ ಅನುಗುಣವಾಗಿ, ಸಾರ್ವಜನಿಕ ಪ್ರದೇಶಗಳಲ್ಲಿ 'ಕಿಸಾನ್‌ಚಳವಳಿ'ಯಂತಹ ಸಾರ್ವಜನಿಕ ಸಭೆಗಳನ್ನು ಮಾಡದಂತೆ ನಿಷೇಧಿಸಿದರು. ದಾವಣಗೆರೆ ಮತ್ತು ಹರಿಹರದ ಸುತ್ತ ಹತ್ತು ಮೈಲುಗಳವರೆಗೆ ಇನ್ನೂ ಎರಡು ತಿಂಗಳವರೆಗೆ ಇಂತಹ ಚಟುವಟಿಕೆಗಳು ನಡೆಯದಂತಹ ಪ್ರತಿಬಂಧಕಾಜ್ಞೆ ಜಾರಿಗೊಳಿಸಿದ್ದರು. ಇದೇ ರೀತಿ ಅವರು ಜಿಲ್ಲೆಯ ತಾಲೂಕಗಳ ದಂಡಾಧಿಕಾರಿಗಳಾದ ಅಮಲ್ದಾರ್‌ಗಳಿಂದಲೂ ಸಾರ್ವಜನಿಕ ಸ್ಥಳಗಳಲ್ಲಿ ಜನ ಗುಂಪಾಗಿ ಸೇರದಂತೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಿದ್ದರು.

ಬ್ರಿಟಿಶ್‌ರು ಚಿತ್ರದುರ್ಗದಲ್ಲಿ ನಿಧಾನವಾಗಿ ಹರಡುತ್ತಿದ್ದ ಸ್ವಾತಂತ್ರ್ಯ ಚಳವಳಿಯನ್ನು ಬಗ್ಗುಬಡಿಯುತ್ತ ಇದ್ದ ಸಂದರ್ಭದಲ್ಲಿ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಅವರು ಚಿತ್ರದುರ್ಗದಲ್ಲಿ ೧೯೩೭ ಆಗಸ್ಟ್ ೧ರಂದು ಚಿತ್ರದುರ್ಗದ ಜಯದೇವ ಹಾಸ್ಟೆಲ್ ಕಾಂಪೌಂಡ್‌ನಲ್ಲಿ ಬಾವುಟ ಹಾರಿಸಿದರು. ಅದರಲ್ಲಿ ಸ್ಥಳೀಯ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದರು. ಅದರಲ್ಲಿ ಭಾಗವಹಿಸಿದ ಇತರ ಸದಸ್ಯರೆಂದರೆ ರಂಗರಾವ್, ಎಸ್.ವಾಸುದೇವರಾವ್, ಭೀಮಪ್ಪ ನಾಯಕ್, ರಾಮದಾಸ್, ಹರಿಹರದ ಗುಂಡೂರಾವ್, ಎಂ.ಎನ್. ಆನಂದಮೂರ್ತಿ ಮತ್ತು ಪಿ.ಎಸ್. ಶ್ರೀನಿವಾಸರಾವ್ ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಹರಿಹರದಗುಂಡುರಾವ್ ಮತ್ತು ಭೀಮಪ್ಪನಾಯಕ್ ಮಾತನಾಡುತ್ತಾ ತಿಲಕರ ಜೀವನ ಹಾಗೂ ಸಾಧನೆಯನ್ನು ಕುರಿತು ವಿವರಿಸಿದರು.[೨೩] ಹಾಗೆಯೇ ದಿ ನ್ಯೂ ಇಂಡಿಯಾ ಆ್ಯಕ್ಟ್ ಮತ್ತು 'ದುಂಡು ಮೇಜಿ'ನ ಸಮ್ಮೇಳನದ ವಿಚಾರಗಳನ್ನು ಕುರಿತು ಟೀಕಿಸಿದರು. ಹೊಳಲ್ಕೆರೆ ತಾಲೂಕು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾದ ಹನುಮಂತಪ್ಪನವರ ಮನೆಯಲ್ಲಿಯೂ ತಿಲಕ್ ದಿನಾಚರಣೆಯನ್ನು ಆಚರಿಸಿ ಪ್ರತಿ ತಿಂಗಳು ಕಾಂಗ್ರೆಸ್ ಸಭೆಯನ್ನು ಸೇರುವಂತೆಯೂ, ಕಾಂಗ್ರೆಸ್ ಬಾವುಟವನ್ನು ಹಾರಿಸಲು ತೀರ್ಮಾನ ಕೈಗೊಳ್ಳಲಾಯಿತು. ರಾಮಗಿರಿ ಗ್ರಾಮದ ಗೊಪ್ಪೇನಹಳ್ಳಿಯ ರುದ್ರಪ್ಪನವರ ಮನೆಯಲ್ಲಿಯೂ ಕಾಂಗ್ರೆಸ್ ಸದಸ್ಯರು ಸೇರಿ ತಿಲಕ್

ದಿನಾಚರಣೆಯನ್ನು ಆಚರಿಸಿದರು.[೨೪] ಇದೇ ರೀತಿ ಚಿತ್ರದುರ್ಗ ಜಿಲ್ಲೆಯಾದ್ಯಂತ ಗ್ರಾಮ ಮತ್ತು ತಾಲೂಕು ಕೇಂದ್ರಗಳಲ್ಲಿಯೂ ತಿಲಕ್ ದಿನಾಚರಣೆಯನ್ನು ಆಚರಿಸಿದರು. ವಿಶೇಷವಾಗಿ ೧೯ನೇ ಶತಮಾನದ ಪ್ರಾರಂಭದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ತಿಲಕರ ಪ್ರಭಾವ ಹೆಚ್ಚಾಗಿತ್ತು. ಏಕೆಂದರೆ ತಿಲಕರು ಹಿಂದೂ ಧರ್ಮವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ನಮ್ಮ ಪುರಾಣಗಳಲ್ಲಿ ಬರುವ ಗಣೇಶನ ವಿಶಿಷ್ಟ ಸ್ಥಾನವನ್ನು ಗಮನಿಸಿದ ತಿಲಕರು ಸ್ವಾತಂತ್ರ ಚಳವಳಿಯ ವೇಳೆಯಲ್ಲಿ ಅದೊಂದು ಸಾಂಸ್ಕೃತಿಕ ಉತ್ಸವವಾಗಿ ಆಚರಿಸುವ ಮೂಲಕ ಜನರ ಸಂಘಟನೆ ಮಾಡಲು ಪ್ರಯತ್ನಿಸಿದ್ದರು.[೨೫] ಅದು ಸ್ವಲ್ಪಮಟ್ಟಿನ ಯಶಸ್ಸು ಕಂಡಿತು. ಇದರಿಂದಾಗಿ ಗಣೇಶನ ಹಬ್ಬವನ್ನು ಅವರು ಉತ್ಸಾಹದಿಂದ ಆಚರಿಸಿದ್ದಲ್ಲದೇ ಸಂಘ-ಸಂಸ್ಥೆಗಳ ಮೂಲಕ ಸಾಮೂಹಿಕವಾಗಿಯೂ ಉತ್ಸವ ಏರ್ಪಡಿಸಿದ್ದರು. ಇದರ ಪ್ರಭಾವ ೨೦ನೇ ಶತಮಾನದ ಮೊದಲ ದಶಕಗಳಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿಯೂ ತಿಲಕ್ ಜಯಂತಿ ಮತ್ತು ಗಣೇಶ ಉತ್ಸವ ಆಚರಿಸುವ ಮೂಲಕ ಸ್ಥಳೀಯ ನಾಯಕರುಗಳು ಸಾರ್ವಜನಿಕರ ಸಂಘಟನೆಗೆ ಪ್ರಯತ್ನ ಮಾಡಿದ್ದರು. ಹೊಸದುರ್ಗ, ಬಾಗೂರು, ಚಳ್ಳಕೆರೆಯಲ್ಲಿ ತಿಲಕರ ಜಯಂತಿಯನ್ನು ಆಚರಿಸುವ ಮೂಲಕ ಸಾರ್ವಜನಿಕರ ಗಮನ ಸೆಳೆದರು.

ಕಾಂಗ್ರೆಸ್ ಮತ್ತು ರೈತ ಸಮುದಾಯ

೧೯೩೭ರ ನಂತರ ಚಿತ್ರದುರ್ಗ ಜಿಲ್ಲೆಯ ಭೂಹಿಡುವಳಿ ಸಮುದಾಯದ ಮೇಲೆ ಮೈಸೂರು ಅರಸರು ವಿಧಿಸುತ್ತಿದ್ದ ಭೂಕಂದಾಯ ಹಾಗೂ ಇನ್ನಿತರ ತೆರಿಗೆಗಳನ್ನು ಕೇಂದ್ರವಾಗಿಟ್ಟುಕೊಂಡು ಮಹಾರಾಜರನ್ನು ಟೀಕಿಸುವ ಮೂಲಕ, ಕಾಂಗ್ರೆಸ್ ನಾಯಕರು ರೈತ ಸಮುದಾಯವನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಂತೆ ಪ್ರೇರೆಪಿಸಿದರು. ಉದಾಹರಣೆಗೆ ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ೧೯೩೭ರ ಅಕ್ಟೋಬರ್ ೨ರಂದು ಗಾಂಧೀಜಿಯ ಹುಟ್ಟುಹಬ್ಬ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೆ.ಎಸ್.ವೆಂಕಟರಾಮಯ್ಯ, ಪಾರ್ಥನಾರಾಯಣ ಪಂಡಿತ್ ಮತ್ತು ಇತರರು ದಾವಣಗೆರೆಯಲ್ಲಿ ಮಾತನಾಡುತ್ತಾ ಮೈಸೂರು ಒಂದು ಮಾದರಿ ರಾಜ್ಯವಲ್ಲ, ಇದು *ಮಾರೀ ರಾಜ್ಯ* ಎಂದು ಘೋಷಣೆ ಕೂಗಿದರು. ಈ ಇಬ್ಬರು ಜನ ನಾಯಕರು ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಹೊಳಲ್ಕೆರೆಗೆ ಭೇಟಿ ನೀಡಿದರು. ಕಾಂಗ್ರೆಸ್ ಸಮಿತಿಯ ಸದಸ್ಯರೊಂದಿಗೆ ಹೊಳಲ್ಕೆರೆ ತಾಲೂಕಿನ ರಾಮಗಿರಿಗೂ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮಹಾರಾಜರನ್ನು ಕುರಿತು ಟೀಕಿಸುತ್ತಾ ಮಹಾರಾಜರು ಪದೇ ಪದೇ ಇಂಗ್ಲೆಂಡಿಗೆ ರೈತರ ಹಣದಿಂದ ಹೋಗುತ್ತಾರೆ ಎಂದು

ಟೀಕಿಸಿದರು. ಆದರೆ ಮಹಾರಾಜರು ರೈತರಿಂದ ಪಡೆಯುವ ಭೂಕಂದಾಯಕ್ಕೆ ಬದಲಾಗಿ, ರೈತರಿಗೆ ಯಾವುದೇ ರೀತಿಯ ಸಹಾಯ ಮಾಡುವುದಿಲ್ಲ ಎಂದು ಜನರ ಗಮನ ಸೆಳೆದರು.[೨೬]

೧೯೩೭ ಅಕ್ಟೋಬರ್ ೧೧ ರಂದು ಹೊಳಲ್ಕೆರೆ, ಚಳ್ಳಕೆರೆ, ಹರಿಹರ, ದಾವಣಗೆರೆಗಳಲ್ಲಿ ಸಭೆ ಸೇರಿದ ಕಾಂಗ್ರೆಸ್ ಕಾರ್ಯಕರ್ತರು ಆ ದಿನವನ್ನು 'ದಮನಕಾರಿ ದಿನ'ವನ್ನಾಗಿ ಆಚರಿಸಿದರು. ಅದೇ ದಿನ ಹೊಳಲ್ಕೆರೆಯಲ್ಲಿ ಸಭೆ ಸೇರಿದ ಹನುಮಂತಪ್ಪ,[೨೭] ಕೃಷ್ಣಾರೆಡ್ಡಿ,[೨೮] ಬಿ.ಎಚ್.ಚಂದ್ರಶೇಖರಯ್ಯನವರು[೨೯] ಚಿತ್ರದುರ್ಗದ ಕೃಷ್ಣಮೂರ್ತಿ ಮತ್ತು ಆರ್.ಟಿ. ಗೋವಿಂದರಾವ್[೩೦] ಭಾಗವಹಿಸಿದ್ದರು. ಅದರಲ್ಲಿ ಗೋವಿಂದರಾವ್ ಜನತೆಯನ್ನುದ್ದೇಶಿಸಿ ಮಾತನಾಡುತ್ತಾ, ಇತ್ತೀಚಿನ ಸೆಕ್ಷನ್ ೩೯ರ ಪೊಲೀಸ್ ಕಾಯಿದೆ ಜಾರಿ ಮಾಡಿದ ದಾವಣಗೆರೆಯ ಪ್ರಥಮ ದರ್ಜೆಯ ನ್ಯಾಯಾಧೀಶರು, ಜನತೆಯ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಿತ್ತುಕೊಂಡಿದ್ದಾರೆಂದು ಟೀಕಿಸಿದರು. ದಾವಣಗೆರೆಯಲ್ಲಿ ಬಿ.ಎಚ್. ಚಂದ್ರಶೇಖರಯ್ಯನವರು ಸರಕಾರದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರು. ಇದೇ ಸಂದರ್ಭದಲ್ಲಿ ಟಿ.ಸಿದ್ದಲಿಂಗಯ್ಯನವರು[೩೧] ಹಾಗೂ ಇತರ ಕಾಂಗ್ರೆಸ್ ನಾಯಕರು ಕಾರಾಗೃಹ ಸೇರಿದರು. ಅವರ ಉದ್ದೇಶ ಮೈಸೂರಿನಲ್ಲಿ ಜವಾಬ್ದಾರಿ ಸರಕಾರವನ್ನು ರಚಿಸಬೇಕೆಂಬುದ್ದಾಗಿತ್ತು. ಅಂದೇ ಚಿತ್ರದುರ್ಗ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಪ್ರತಿಬಂಧಕಾಜ್ಞೆಯನ್ನು ತಂದು, ಆರ್.ಟಿ. ಗೋವಿಂದರಾವ್ ಅವರ ಭಾಷಣವು ದಿವಾನರ "ನಿಂದನೆಯಿಂದ ಕೂಡಿದೆ" ಎಂದು ಅವರ ವಿರುದ್ಧ ಕಾಯಿದೆ ಜಾರಿಗೊಳಿಸಿದರು. ಹೊಳಲ್ಕೆರೆ ತಾಲೂಕು ರಾಮಗಿರಿಯ ಈ ಮೆರವಣಿಗೆಯಲ್ಲಿ ಮೆರವಣಿಗೆಕಾರರು ಗಾಂಧೀಜಿಯ ಭಾವಚಿತ್ರವನ್ನು ಹಿಡಿದು ಸರಕಾರದ ದೌರ್ಜನ್ಯವನ್ನು ಪ್ರತಿಭಟಿಸಿದರು. ಸರಕಾರದ ವಿರುದ್ಧ ಘೋಷಣೆ ಕೂಗುತ್ತಾ ಜನತೆಯಲ್ಲಿ ರಾಷ್ಟ್ರೀಯತೆಯ ಬೀಜ ಬಿತ್ತಿದರು.

೧೯೩೭ ಅಕ್ಟೋಬರ್ ೨೨ರಂದು ವಕೀಲರಾಗಿದ್ದ ಖಾಸಲು ಶ್ರೀನಿವಾಸಶೆಟ್ಟಿ, ದೊಡ್ಡಬಸಪ್ಪ ಹಾವೇರಿಯ ಕಾರ್ ರುದ್ರಪ್ಪ ಇವರು ಹರಿಹರದಲ್ಲಿ ಸಭೆ ಸೇರಿ ರಾಷ್ಟ್ರೀಯನಾಯಕ ಕೆ.ಎಫ್. ನಾರೀಮನ್ ವಕೀಲರನ್ನು ಭೇಟಿಮಾಡಿದರು. ಪಾರ್ಥನಾರಾಯಣ ಪಂಡಿತ್ ಅವರ ಜೊತೆಯಲ್ಲಿ ಕೆ.ಎಫ್. ನಾರಿಮನ್ ಹರಿಹರಕ್ಕೆ ಬಂದು ಹಿಂದಿಯಲ್ಲಿ ಭಾಷಣ ಮಾಡುತ್ತಾ, ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪನೆ ಮಾಡುವುದು ಅವಶ್ಯಕವಾಗಿದೆ.[೩೨] ಆದರೆ ಸರಕಾರ ನಾಯಕರನ್ನು ದಸ್ತಗಿರಿ ಮಾಡುತ್ತಿರುವುದು ಅವಿವೇಕದ ವಿಚಾರವಾಗಿದೆ ಎಂದರು. ಆ ದಿನ ಕೆ.ಎಫ್.ನಾರೀಮನ್ ದಾವಣಗೆರೆಯಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು ವ್ಯವಸ್ಥೆಮಾಡಿದ್ದ ಸಾರ್ವಜನಿಕ ಸಭೆಯಲ್ಲಿ

ಭಾಗವಹಿಸಿದ್ದರು. ಅವರ ಭಾಷಣದಲ್ಲಿ ಮೈಸೂರು ಸಂಸ್ಥಾನದ ರಾಜಕೀಯ ಮತ್ತು ನಾಗರಿಕ ಸನ್ನಿವೇಶವು ತುಂಬಾ ಆಪತ್ತಿನಲ್ಲಿದೆ ಎಂದು ಅಭಿಪ್ರಾಯಪಟ್ಟರು. ಈ ಸಮಯದಲ್ಲಿ ಕೆ.ಟಿ.ಭಾಷ್ಯಂ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟಕ್ಕೆ ಅಡಿಗಲ್ಲು ಹಾಕಿದ್ದರೂ ಅದು ಅಷ್ಟು ಯಶಸ್ವಿಯಾಗಲಿಲ್ಲ. ಮೈಸೂರು ಸಂಸ್ಥಾನದ ಜನತೆಯ ಜೀವನ ತುಂಬಾ ನಿಕೃಷ್ಟವಾಗಿದೆ. ಗ್ರಾಮಗಳಲ್ಲಿ ಸಂಗ್ರಹಿಸಿದ ತೆರಿಗೆ ಅರಸರ ದುಂದುವೆಚ್ಚಕ್ಕೆ ಮತ್ತು ಬೆಂಗಳೂರು ಮೈಸೂರು ನಗರಗಳ ಅಭಿವೃದ್ಧಿಗೆ ಪೋಲಾಗುತ್ತಿದೆ. ಬ್ರಿಟಿಶ್‌ರ ಸಂವಿಧಾನವನ್ನೇ ಮಹಾರಾಜರು ರಾಜ್ಯದ ಜನತೆಯ ಮೇಲೆ ಹೇರುತ್ತಿದ್ದಾರೆ. ಇಂತಹ ದೌರ್ಜನ್ಯದಿಂದ ವಿಮೋಚನೆಯಾಗದ ಹೊರತು ಇಲ್ಲಿಯ ಜನತೆಗೆ ಉಳಿಗಾಲವಿಲ್ಲವೆಂದು ಮಾತನಾಡಿದರು. ಇವರ ತೀಕ್ಷ್ಣವಾದ ಭಾಷಣದಿಂದಾಗಿ ಸರಕಾರ ಕೆ.ಎಫ್.ನಾರಿಮನ್ ಅವರನ್ನು ದಸ್ತಗಿರಿ ಮಾಡಿತು. ಇದರ ಪರಿಣಾಮವಾಗಿ ಕೆ.ಸಿ. ರೆಡ್ಡಿ, ಎಂ.ಎ. ಜೋಷಿ ಜಿಲ್ಲೆಯಾದ್ಯಂತ ಪ್ರವಾಸಮಾಡಿ ಕೆ.ಎಫ್. ನಾರೀಮನ್‌ರವರ ದಸ್ತಗಿರಿಯನ್ನು ಬಹುವಾಗಿ ಖಂಡಿಸಿದರು. ಕಾಂಗ್ರೆಸ್ ಜವಾಬ್ದಾರಿ ಸರಕಾರವನ್ನು ಸ್ಥಾಪಿಸಲೇಬೇಕೆಂದು ಹಿರಿಯೂರಿನಲ್ಲಿ ಭಾಷಣಮಾಡಿದರು. ರೈತ ವಿರೋಧಿ ತೆರಿಗೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ರೈತಪರವಾದ ಕಂದಾಯ ವ್ಯವಸ್ಥೆ ನಿಗದಿಯಾಗಬೇಕೆಂದು ಸರಕಾರವನ್ನು ಆಗ್ರಹಪಡಿಸಿದರು.[೩೩]

ಕೆ.ಎಫ್. ನಾರೀಮನ್‌ರವರನ್ನು ದಸ್ತಗಿರಿ ಮಾಡಿದ್ದನ್ನು ದಾವಣಗೆರೆಯ ವಿದ್ಯಾರ್ಥಿಗಳು ೧೯೩೭ ಅಕ್ಟೋಬರ್ ೨೭ರಂದು ಮಹಾತ್ಮ ಗಾಂಧೀಜಿ ಮತ್ತು ಇತರ ನಾಯಕರ ಫೋಟೋಗಳನ್ನು ಕೈಯಲ್ಲಿ ಹಿಡಿದು ಸರಕಾರದ ವಿರುದ್ಧ ಘೋಷಣೆ ಕೂಗುತ್ತ, ಇಂದಿನ ಸರಕಾರಿ ಹೈಸ್ಕೂಲ್ ಮೈದಾನದಲ್ಲಿ ಸೇರಿದರು. ಈ ಪ್ರತಿಭಟನೆಯಲ್ಲಿ ಕಾಸಲು ಶ್ರೀನಿವಾಸಶೆಟ್ಟಿ ಮಾತನಾಡುತ್ತ 'ಮೈಸೂರು ರಾಮರಾಜ್ಯವೂ ಅಲ್ಲ, ಮಾದರೀ ರಾಜ್ಯವೂ ಅಲ್ಲ' ಎಂದು ಟೀಕಿಸಿ ದಸ್ತಗಿರಿಯಾಗಿದ್ದ ನಾರೀಮನ್‌ರವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಡ ತಂದರು. ಬಳ್ಳಾರಿ ಸಿದ್ಧಮ್ಮ ಸಹ ಮಾತನಾಡಿ ಸರಕಾರದ ನೀತಿ ನಿರೂಪಣೆಗಳನ್ನು ಖಂಡಿಸುತ್ತಾ ನಾರೀಮನ್‌ರವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದರು.[೩೪] ಬಿ.ವೀರಶೆಟ್ಟಿ, ಶೇಷಪ್ಪ, ಬ್ಯಾಡಗಿಯ ವೀರಣ್ಣಗೌಡ, ಆನೆಕೊಂಡದ ಚೆನ್ನಬಸಪ್ಪ, ಹೈದರಾಬಾದ್‌ನ ಪಾಲಾಕ್ಷಯ್ಯ, ಡಿ.ಆರ್ ಮುದ್ದಪ್ಪ, ಅಗಳವಾಡಿ ರಾಮಶಾಸ್ತ್ರೀ, ಗಾಯಕ್‌ವಾಡ್ ನಾರಾಯಣರಾವ್, ವಿದ್ಯಾರ್ಥಿ ಓ. ಶಿವಾನಂದ, ಹಾಲಪ್ಪ, ಬಳ್ಳಾರಿ ಸಿದ್ಧಮ್ಮ ಮುಂತಾದ ನಾಯಕರುಗಳು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಚಿತ್ರದುರ್ಗದಲ್ಲಿ ಎಸ್.ನಿಜಲಿಂಗಪ್ಪನವರು ಹತ್ತಿ ವ್ಯಾಪಾರಿಗಳು ಕಾಂಗ್ರೆಸ್‌ನಲ್ಲಿ ಸೇರಬೇಕೆಂದು, ಮತ್ತು 'ಕಾಟನ್ ಮಾರ್ಕೆಟ್ ಕಮಿಟಿ'ಯನ್ನು ಚಿತ್ರದುರ್ಗದಲ್ಲಿ

ರಚಿಸಬೇಕೆಂದು ಜಿಲ್ಲೆಯ ಹತ್ತಿ ವ್ಯಾಪಾರಿಗಳಿಗೆ ತಿಳಿಸಿದರು. ಏಕೆಂದರೆ ೧೯೩೮ರ ವೇಳೆಗೆ ಚಿತ್ರದುರ್ಗ ಮತ್ತು ದಾವಣಗೆರೆ ಹತ್ತಿ ವ್ಯಾಪಾರದ ಕೇಂದ್ರಗಳಾಗಿದ್ದವು. ಇಲ್ಲಿನ ಸ್ಥಳೀಯ ಹತ್ತಿ ವಾಣಿಜ್ಯೋದ್ಯಮಿಗಳು ಆರ್ಥಿಕವಾಗಿ ಶ್ರೀಮಂತರಾಗಿದ್ದರು. ಹೀಗಾಗಿ ಕಾಂಗ್ರೆಸ್‌ಗೆ ಇಂತಹ ಶ್ರೀಮಂತ ವರ್ಗದ ಬೆಂಬಲದ ಅವಶ್ಯಕತೆಯೂ ಇತ್ತು. ಹೀಗೆ ಚಿತ್ರದುರ್ಗ ಜಿಲ್ಲೆಯಲ್ಲಿ ೧೯೩೭ರ ನಂತರ ಗ್ರಾಮಮಟ್ಟದಿಂದ ಕಾಂಗ್ರೆಸ್ ಸಮಿತಿಗಳು ರಚನೆಯಾದವು. ಸರಕಾರದ ವಿರುದ್ಧ ಘೋಷಣೆ ಕೂಗುತ್ತಾ ರೈತರು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸುವ ಬಗ್ಗೆ ಗಮನ ಸೆಳೆದಿದ್ದರು.[೩೫]

೧೯೩೭ರಲ್ಲಿ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷವನ್ನು ಜನಸಾಮಾನ್ಯರಲ್ಲಿ ಜನಪ್ರಿಯಗೊಳಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯ ಸದಸ್ಯರಾದ ಟಿ. ಸಿದ್ದಲಿಂಗಯ್ಯ, ವೀರಕೇಸರಿ, ಎಚ್.ಕೆ.ವೀರಣ್ಣಗೌಡ ಮತ್ತು ತಗಡೂರು ರಾಮಚಂದ್ರರಾಯರು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡರು. ಈ ವೇಳೆಗಾಗಲೇ ಪ್ರಜಾಪಕ್ಷ ಮತ್ತು ಪ್ರಜಾಮಿತ್ರ ಮಂಡಳಿ[೩೬] ಮೈಸೂರು ಸಂಸ್ಥಾನದ ಕಾಂಗ್ರೆಸ್‌ನೊಂದಿಗೆ ವಿಲೀನಗೊಂಡಿದ್ದವು. ಕಾಂಗ್ರೆಸ್ ಮೈಸೂರು ಸಂಸ್ಥಾನದಲ್ಲಿ ಏಕೈಕ ಪ್ರಬಲ ರಾಜಕೀಯ ಸಂಘಟನೆಯಾಗಿ ರೂಪುಗೊಂಡಿತ್ತು.[೩೭]

೧೯೩೮ರಲ್ಲಿ ಮೈಸೂರು ಕಾಂಗ್ರೆಸ್ ಸಮಿತಿಯು ಚಿತ್ರದುರ್ಗದಲ್ಲಿ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕರ್ನಾಟಕದ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಸ್ವರೂಪದ 'ವಿಧುರಾಶ್ವತ್ಥ[೩೮] ಘಟನೆ'ಯನ್ನು ಪ್ರತಿಭಟಿಸಲು ಸಭೆ ಸೇರಿದ್ದರು. ದಿನಾಂಕ ೨೬, ಏಪ್ರಿಲ್ ೧೯೩೮ ರಂದು ನವಜೀವನ ಪತ್ರಿಕೆಯು ವಿದುರಾಶ್ವತ್ಥ ಘಟನೆಯಲ್ಲಿ ೩೨ ಜನರು ಮಡಿದು, ೪೮ ಜನರು ಗಾಯಗೊಂಡರು ಎಂದು ಪ್ರಕಟಿಸಿತ್ತು.[೩೯] ಈ ಸಂದರ್ಭದಲ್ಲಿದ್ದ ಇತರ ಸದಸ್ಯರೆಂದರೆ ಕೆ.ಟಿ. ಭಾಷ್ಯಂ,[೪೦] ವಿಶ್ವಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದ ಶಾಮಾಚಾರ್, ಗುರುಸಿದ್ಧಯ್ಯ, ಭೀಮಪ್ಪನಾಯಕ, ಗೋವಿಂದರೆಡ್ಡಿ, ಟಿ.ಡಿ.ಸುಬ್ಬರಾವ್, ಭೀಮಕುಮಾರ್ ಮುಂತಾದವರು ಸೇರಿದ್ದರು. ವಿಧುರಾಶ್ವತ್ಥದಂತಹ ಬರ್ಬರ ಘಟನೆಗೆ ಕಾರಣವಾದ ಸರಕಾರವನ್ನು ತರಾಟೆಗೆ ತೆಗೆದುಕೊಂಡರು. ಹಾಗೆಯೇ ಜನತೆಗೆ ಇಂತಹ ಘಟನೆಗಳಿಂದ ದೂರವಿದ್ದು, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಬೇಕೆಂದು ಕರೆಯಿತ್ತರು.

೧೯೩೮ರ ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದ ಟಿ.ಸಿದ್ಧಲಿಂಗಯ್ಯನವರು ಜೈಲು ಸೇರಿದ್ದರು. ಇವರ ಬಿಡುಗಡೆಗೆ ಮೈಸೂರು ಸಂಸ್ಥಾನದಾದ್ಯಂತ ಕಾಂಗ್ರೆಸ್ ನೇತೃತ್ವದಲ್ಲಿ ಚಳವಳಿಗಳು

ನಡೆಯುತ್ತಿದ್ದವು. ಹಾಗೆಯೇ ಚಿತ್ರದುರ್ಗ ಜಿಲ್ಲೆಯಲ್ಲಿಯೂ, ೧೯೩೯ರಲ್ಲಿ ಕೃಷ್ಣಾರೆಡ್ಡಿ ಪಂಡಿತ್ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಟಿ.ಸಿದ್ಧಲಿಂಗಯ್ಯನವರನ್ನು ಜೈಲಿನಲ್ಲಿಟ್ಟಿರುವುದು ಕಾನೂನುಬಾಹಿರವಾಗಿದೆ, ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂಬುದಾಗಿ ಸರಕಾರವನ್ನು ಒತ್ತಾಯಿಸಿದರು. ಹಾಗೆಯೇ ಈಗಿರುವ ಮೈಸೂರು ಸಂಸ್ಥಾನದ ಆಡಳಿತ ತುಂಬಾ ಹದಗೆಟ್ಟಿದ್ದು, ರೈತರ ಮೇಲೆ ವಿಧಿಸುತ್ತಿರುವ ತೆರಿಗೆ ಕೂಡ ಸರಿಯಾಗಿಲ್ಲ. ಸರಕಾರ ನಿರ್ದಯದಿಂದ ಕಂದಾಯವನ್ನು ವಸೂಲಿ ಮಾಡುತ್ತಿದೆ. ಕೊಡದಿದ್ದಲ್ಲಿ ಹುಣಸೆ ಬರಲಿನಿಂದ ಹೊಡೆದು ತೆರಿಗೆ ವಸೂಲಿ ಮಾಡುತ್ತಿದ್ದಾರೆ, ಸರಕಾರದ ದೌರ್ಜನ್ಯ ತುಂಬಾ ಅತಿಯಾಗಿದೆ. ಇಂತಹ ಸರಕಾರ ಬಹುಕಾಲ ಉಳಿಯುವುದಿಲ್ಲವೆಂದು ಪ್ರತಿಭಟಿಸಿದರು.[೪೧]

೧೯೩೯ ಮಾರ್ಚ್ ೨೭ರಂದು ಎಸ್.ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯನ್ನು ಚಳ್ಳಕೆರೆಯಲ್ಲಿ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಮೈಸೂರು ಸಂಸ್ಥಾನದ ರಾಜಕೀಯ ಬಿಕ್ಕಟ್ಟನ್ನು ಕುರಿತು ಚರ್ಚಿಸಲಾಯಿತು. ಹಾಗೆಯೇ ಸರಕಾರ ಮತ್ತು ಕಾಂಗ್ರೆಸ್ ಮಧ್ಯೆ ಒಂದು ನಿರ್ದಿಷ್ಟ ಒಪ್ಪಂದ ಮಾಡಿಕೊಳ್ಳುವ ತೀರ್ಮಾನ ಕೈಗೊಳ್ಳಲಾಯಿತು. ಇದರ ಜೊತೆಗೆ ಮೈಸೂರು ಸಂಸ್ಥಾನದ ಎಲ್ಲಾ ಕಾಂಗ್ರೆಸ್ ಸಮಿತಿಗಳ ಮನೋವೃತ್ತಿಯನ್ನು ಗಮನಿಸಿ, ಸ್ಥಳೀಯ ಸಮಿತಿಗಳನ್ನು ಕಟ್ಟುವ ಬಗ್ಗೆ ಚರ್ಚಿಸಲಾಯಿತು. ಕರ್ನಾಟಕದಲ್ಲಿ ಕಾಂಗ್ರೆಸ್ ರೈತರ ಬೆಂಬಲ ಪಡೆದು ಪ್ರಬಲ ಸಂಘಟನೆಯಾಗಿ ಬೆಳೆಯಿತು. ಹಾಗೆಯೇ ಚಿತ್ರದುರ್ಗ ಜಿಲ್ಲೆಯಲ್ಲಿ ನಗರ ಪಟ್ಟಣ ಗ್ರಾಮಗಳಲ್ಲಿ ಜನರು ಸ್ವಯಂ ಸ್ಫೂರ್ತಿಯಿಂದ ಚಳವಳಿಯಲ್ಲಿ ಭಾಗಿಗಳಾದರು. ರಾಷ್ಟ್ರೀಯ ಹೋರಾಟದ ಸ್ವರೂಪ ಕುರಿತು ತುಂಬಾ ಮುಗ್ಧರಾಗಿದ್ದ ರೈತರಿಗೆ, ಸ್ಥಳೀಯ ರಾಷ್ಟ್ರೀಯವಾದಿ ನಾಯಕರುಗಳೇ ಸ್ಫೂರ್ತಿಯಾಗಿದ್ದರು.

ರೈತ ಸಮ್ಮೇಳನಗಳು

ಚಿತ್ರದುರ್ಗ ಜಿಲ್ಲೆಯಲ್ಲಿ ೧೯೩೮ರ ನಂತರ ಕಾಂಗ್ರೆಸ್ ರೈತ ಸಮ್ಮೇಳನಗಳನ್ನು ನಡೆಸುವ ಮೂಲಕ ಗ್ರಾಮಾಂತರ ಪ್ರದೇಶದ ರೈತರು ನೇರವಾಗಿ ಕಾಂಗ್ರೆಸಿನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿತು. ಈ ರೈತ ಸಮ್ಮೇಳನಗಳಲ್ಲಿ ಭೂಕಂದಾಯದ ರಿಯಾಯಿತಿ ಹಾಗೂ ಕೃಷಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಚರ್ಚಿಸುವ ಮೂಲಕ ರೈತರನ್ನು ಕಾಂಗ್ರೆಸನತ್ತ ಸೆಳೆಯಲಾಯಿತು. ಹೀಗೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ನಡೆದ ರೈತ ಸಮ್ಮೇಳನಗಳ ಪರಿಣಾಮವಾಗಿ ಕಾಂಗ್ರೆಸ್ ಹೆಚ್ಚು ಪ್ರಚಾರ ಪಡೆಯಿತು. ಜೊತೆಗೆ ಅದರ ಸದಸ್ಯರ ಸಂಖ್ಯೆಯೂ ಹೆಚ್ಚಾಯಿತು. ಈ ರೈತ ಸಮ್ಮೇಳನಗಳಿಗೆ

ಗಾಂಧೀಜಿಯವರ ನೇತೃತ್ವದಲ್ಲಿ ನಡೆದ 'ಚಂಪಾರಣ್ಯ' ಹಾಗೂ 'ಖೇಡಾ' ಸತ್ಯಾಗ್ರಹಗಳು ಕರ್ನಾಟಕದಲ್ಲಿಯೂ ಪ್ರಭಾವ ಬೀರಿದವು. ಎಚ್.ಕೆ.ವೀರಣ್ಣಗೌಡ ಮತ್ತು ಸರ್ದಾರ್ ವೀರಣ್ಣಗೌಡ ಪಾಟೀಲರಂತ ರೈತ ಸಮುದಾಯದ ಯುವಕರು, ರೈತರ ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಎರಡನೇ ಮಹಾಯುದ್ಧದ ಆರಂಭದಲ್ಲಿ ಆರ್ಥಿಕ ಮುಗ್ಗಟ್ಟು, ಕರ್ನಾಟಕದ ಮೇಲೂ ಪರಿಣಾಮ ಬೀರಿತು. ಹೀಗಾಗಿ ಎಲ್ಲಾ ಕೃಷಿ ಉತ್ಪನ್ನಗಳ ಬೆಲೆಗಳು ಇಳಿಮುಖವಾದವು. ಆದರೆ ಭೂಕಂದಾಯ ಹೆಚ್ಚಾಯಿತು. ಇದರಿಂದ ರೈತರಲ್ಲಿಯೂ ಸರಕಾರದ ಬಗ್ಗೆ ಅಸಮಾದಾನ ಹೊಗೆಯಾಡುತ್ತಿತ್ತು. ಈ ದೃಷ್ಟಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಕೆಲವು ರೈತ ಸಮ್ಮೇಳನಗಳನ್ನು ಗಮನಿಸಬಹುದು.

ಎಸ್.ಎಸ್.ಹರ್ಡೇಕರ್ ಮತ್ತು ಉಮಾಬಾಯಿ ಕುಂದಾಪುರ ಈ ಕಾಂಗ್ರೆಸ್ ಮುಖಂಡರಿಬ್ಬರು ಪ್ರಚಾರಕ್ಕಾಗಿ ಹಿರಿಯೂರಿಗೆ ೧೯೩೭ ಮೇ, ೧೭ರಂದು ಬಂದಿದ್ದರು. ಅದೇ ದಿನ ಎಸ್.ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸ್ಥಳೀಯ ತಿರುಮಲ್ಲೇಶ್ವರ ದೇವಸ್ಥಾನದಲ್ಲಿ ರೈತ ಸಮ್ಮೇಳನವನ್ನು ಹಿರಿಯೂರು ಕಾಂಗ್ರೆಸ್ ಸಮಿತಿಯವರು ಸಂಘಟಿಸಿದ್ದರು. ಈ ರೈತ ಸಮ್ಮೇಳನದಲ್ಲಿ ಸ್ಥಳೀಯ ರೈತರೊಂದಿಗೆ ಸಮಸ್ಯೆಗಳನ್ನು ಕುರಿತು ಚರ್ಚಿಸಿದ ನಂತರ 'ವಾಣಿವಿಲಾಸಸಾಗರ ಕೃಷಿ ಸಂಘ' ನೀತಿ ಸಂಹಿತೆಯನ್ನು ಬಿಡುಗಡೆ ಮಾಡಿದರು. ಅದರಲ್ಲಿ ಸರಕಾರ ರೈತರಿಗೆ ಉತ್ತಮ ನೀರಿನ ಸೌಕರ್ಯವನ್ನು ಒದಗಿಸಿ ಕೊಡಬೇಕೆಂದು ಒತ್ತಾಯಿಸಿದರು. ಜೊತೆಗೆ ವಾಣಿವಿಲಾಸಸಾಗರ ರೈತರಿಗೆ ಪ್ರತ್ಯೇಕ ಕೃಷಿ ಬ್ಯಾಂಕನ್ನು ಸ್ಥಾಪನೆ ಮಾಡಬೇಕು. ಅದರ ಹೆಸರನ್ನು 'ವಾಣಿವಿಲಾಸಸಾಗರ ಕೃಷಿ ಬ್ಯಾಂಕ್' ಎಂದು ಕರೆಯ ಬೇಕೆಂಬುದಾಗಿ ಸ್ಥಳೀಯ ರೈತರು ಒತ್ತಾಯಿಸಿದರು. ಇದೇ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಎಸ್.ಎಸ್.ಹರ್ಡೇಕರ್ ರೈತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಅಧಿಕ ಸಂಖ್ಯೆಯ ರೈತರು ಕಾಂಗ್ರೆಸ್‌ನಲ್ಲಿ ಸದಸ್ಯತ್ವ ಪಡೆಯುವ ಮೂಲಕ, ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ರಚನೆ ಮಾಡಲು ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ಮಾಡಬೇಕೆಂಬುದಾಗಿ ಜನರಿಗೆ ಕರೆ ನೀಡಿದರು.[೪೨]

ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಮತ್ತೊಂದು ಪ್ರಮುಖ ರೈತ ಸಮ್ಮೇಳನವೆಂದರೆ ಹೊಸದುರ್ಗ ತಾಲೂಕು ರೈತ ಸಮ್ಮೇಳನ. ಈ ಸಮ್ಮೇಳನವನ್ನು ಸ್ಥಳೀಯ ಕಾಂಗ್ರೆಸ್ ನಾಯಕರಾಗಿದ್ದ ಭೂಪಾಳಂ ಕೃಷ್ಣಮೂರ್ತಿಯವರು ಏರ್ಪಡಿಸಿದ್ದರು. ಈ ಸಮ್ಮೇಳನಕ್ಕೆ ಹೊಸದುರ್ಗ ತಾಲೂಕು ಕಾಂಗ್ರೆಸ್ ಸಮಿತಿಯ ಆಹ್ವಾನದ ಮೇರೆಗೆ ೧೯೩೭ ನವೆಂಬರ್ ೧೮ರಂದು ಮಂಡ್ಯ ಜಿಲ್ಲೆಯ ರೈತ ಸಂಘದ

ಅಧ್ಯಕ್ಷರಾಗಿದ್ದ ಎಚ್.ಕೆ.ವೀರಣ್ಣಗೌಡರು ಬಂದಿದ್ದರು. ಈ ಸಮ್ಮೇಳನವನ್ನು ಸ್ಥಳೀಯ ಬನಶಂಕರಿ ದೇವಸ್ಥಾನದಲ್ಲಿ ಏರ್ಪಡಿಸಲಾಗಿತ್ತು.[೪೩] ಸಮ್ಮೇಳನವನ್ನು ತಡೆಯಲು ಸ್ಥಳೀಯ ಅಮಲ್ದಾರರು, ಮ್ಯಾಜಿಸ್ಟ್ರೇಟ್ ೧೪೪ನೇ ಸೆಕ್ಷನ್ ಕಾಯಿದೆಯನ್ನು ಜಾರಿಗೊಳಿಸಿದರು. ಈ ಮೂಲಕ ಸಾರ್ವಜನಿಕ ಸಭೆಗಳು ಸಮ್ಮೇಳನಗಳು ನಡೆಯದಂತೆ ತಡೆಯುವುದಾಗಿತ್ತು. ಆದರೂ ಎಚ್.ಕೆ.ವೀರಣ್ಣಗೌಡರು[೪೪] ರೈತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಹೊಸದುರ್ಗ ತಾಲೂಕಿನ ರೈತರು ಕಾಂಗ್ರೆಸ್ ಸದಸ್ಯತ್ವವನ್ನು ಪಡೆಯುವುದು ಅವಶ್ಯಕ. ಹಾಗೆಯೇ ಹೊಸದುರ್ಗದ ರೈತರು ಹೇಡಿತನದಿಂದ ಬಂದು ಕುಳಿತಿರುವುದನ್ನು ನೋಡಿದರೆ ಕಾಂಗ್ರೆಸ್‌ನ ವಿಚಾರ ಸಂದೇಶವು ಇನ್ನು ನಿಮಗೆ ತಿಳಿದಿಲ್ಲ ಎಂದು ತೋರುತ್ತದೆ ಎಂದು ಆ ಮೂಲಕ ರೈತರ ಗಮನ ಸೆಳೆದರು. ಸರಕಾರದವರು ರೈತರ ಸೇವಕರು ಇದನ್ನು ರೈತರು ತಿಳಿಯಬೇಕು. ಆದ್ದರಿಂದ ಸರಕಾರದ ದಬ್ಬಾಳಿಕೆಯನ್ನು ಹೋಗಲಾಡಿಸಲು ತಾವೆಲ್ಲರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವುದು ಅವಶ್ಯವೆಂದು ಮನವರಿಕೆ ಮಾಡಿದರು. ಇದೇ ಸಮ್ಮೇಳನದಲ್ಲಿ ಭಾಗವಹಿಸಿದ ಬಳ್ಳಾರಿ ಸಿದ್ಧಮ್ಮ ರೈತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಈಗ ಸರಕಾರ ವಿಧಿಸಿರುವ ಸೆಕ್ಷನ್ ೧೪೪ರ ನಿಷೇಧಾಜ್ಞೆಯನ್ನು ಸಂಪೂರ್ಣವಾಗಿ ಮುರಿಯಬೇಕೆಂದರು.[೪೫] ನಂತರ ೧೯೩೭ ನವೆಂಬರ್ ೧೯ರಂದು ವೀರಣ್ಣಗೌಡರು, ಎಸ್.ನಿಜಲಿಂಗಪ್ಪ, ಬಳ್ಳಾರಿ ಸಿದ್ಧಮ್ಮ ಇನ್ನಿತರ ನಾಯಕರುಗಳು ಹೊಳಲ್ಕೆರೆ ತಾಲೂಕಿನ ಗ್ರಾಮಗಳಾದ ಗುಂಡೇರಿ, ಮಲೇನೂರು, ದೊಗ್ಗನಾಳು ಮತ್ತು ರಂಗಾಪುರ ಗ್ರಾಮಗಳಿಗೆ ಭೇಟಿ ನೀಡಿ, ಗ್ರಾಮಮಟ್ಟದಿಂದಲೂ ಕಾಂಗ್ರೆಸ್ ಸಮಿತಿಯ ರಚನೆ ಮತ್ತು ಕಾರ್ಯಕರ್ತರ ಅವಶ್ಯಕತೆಯನ್ನು ಒತ್ತಿ ಹೇಳಿದರು. ಇದರ ಜೊತೆಯಲ್ಲಿಯೇ ಕಾಂಗ್ರೆಸ್ ಸಂಘಟನೆಯ ಉದ್ದೇಶ ಮತ್ತು ಖಾದಿ ಉಪಯೋಗದ ಬಗ್ಗೆ ವಿವರಿಸಿದರು.[೪೬]

೧೯೩೮ರಲ್ಲಿ ಹೊಳಲ್ಕೆರೆ ತಾಲೂಕು, ರಂಗಾಪುರದಲ್ಲಿ ಕೊಟ್ರೆ ನಂಜಪ್ಪನವರು ರೈತ ಸಮ್ಮೇಳನವನ್ನು ಏರ್ಪಡಿಸಿದ್ದರು. ಸ್ಥಳೀಯರು ಈಗಲೂ ಹೇಳುವಂತೆ ಅಂದು ಕೊಟ್ರೆ ನಂಜಪ್ಪನವರು ಸುಮಾರು ನಾಲ್ಕುನೂರು ಎಕರೆಯಷ್ಟು ದೊಡ್ಡ ಭೂಹಿಡುವಳಿದಾರರಾಗಿದ್ದರು, ಜೊತೆಗೆ ಸ್ಥಳೀಯ ರೈತರ ಸಂಘಟಕರಾಗಿ ಪ್ರಮುಖ ಪಾತ್ರವಹಿಸಿದ್ದರು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಶಿವಮೊಗ್ಗದ ಎಚ್.ಸಿದ್ಧಯ್ಯ ವಹಿಸಿದ್ದರು.[೪೭] ಸಮ್ಮೇಳನದಲ್ಲಿ ಉತ್ತರ ಕರ್ನಾಟಕದ ನಾಯಕರಾದ ಕಳ್ಳಿ ತಿಪ್ಪಣ್ಣಶಾಸ್ತ್ರಿ, ಹಳ್ಳಿಕೇರಿ ಗುದ್ಲೆಪ್ಪ, ಕಜರಿ ಸ್ವಾಮಿ ಮುಂತಾದವರು ಬಂದಿದ್ದರು. ಜೊತೆಗೆ ಕೆ.ಸಿ.ರೆಡ್ಡಿ, ಎಸ್.ನಿಜಲಿಂಗಪ್ಪ, ಭೀಮಪ್ಪ ನಾಯಕ, ಮಾಧವರಾವ್ ಮುಂತಾದ ಮೈಸೂರು ಸಂಸ್ಥಾನದ ಕಾಂಗ್ರೆಸ್

ಮುಖಂಡರು ಭಾಗವಹಿಸಿದ್ದರು. ಈ ರೈತ ಸಮ್ಮೇಳನದಲ್ಲಿ ಸುಮಾರು ಹತ್ತು ಸಾವಿರ ಜನ ರೈತರು ಸೇರಿದ್ದರು. ಈ ಸಮ್ಮೇಳನದ ಊಟಕ್ಕಾಗಿ ನಲವತ್ತೈದು ಚೀಲ ಅಕ್ಕಿಯನ್ನು ವೆಚ್ಚ ಮಾಡಲಾಗಿತ್ತು ಮತ್ತು ಸಹಪಂಕ್ತಿ ಭೋಜನವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಚಿತ್ರದುರ್ಗ ಜಿಲ್ಲೆಯ ರೈತರಷ್ಟೇ ಅಲ್ಲದೆ ಕರ್ನಾಟಕದ ಬಹುಭಾಗದ ರೈತರು ಭಾಗವಹಿಸುವ ಮೂಲಕ ಕಾಂಗ್ರೆಸ್ ನೇತೃತ್ವದ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.[೪೮]

ಚಳ್ಳಕೆರೆ ತಾಲೂಕಿನಲ್ಲಿ ೧೯೩೯ ಏಪ್ರಿಲ್ ಮೊದಲ ವಾರದಲ್ಲಿ ಎಸ್.ನಿಜಲಿಂಗಪ್ಪ ಅವರ ಅಧ್ಯಕ್ಷತೆಯಲ್ಲಿ ರೈತ ಸಮ್ಮೇಳನವನ್ನು ಸಂಘಟಿಸಲಾಗಿತ್ತು. ಇದರ ಉದ್ಘಾಟನೆಯನ್ನು ಕೆ.ಸಿ.ರೆಡ್ಡಿಯವರಿಂದ ನೆರವೇರಿಸಲಾಯಿತು. ಈ ಸಮ್ಮೇಳನದಲ್ಲಿ ಸುಮಾರು ಎರಡುವರೆ ಸಾವಿರ ರೈತರು ಭಾಗವಹಿಸಿದರು. ಶ್ರೀ ಸಂಪಂಗಿರಾಮಯ್ಯನವರು ಪ್ರಾರಂಭದಲ್ಲಿ ಭಾಷಣ ಮಾಡಿದರು. ಅದರಲ್ಲಿ ರೈತರಿಗೆ ಅನುಕೂಲವಾಗುವಂತೆ ಕಾನೂನುಗಳನ್ನು ಬದಲಾಯಿಸುವುದು, ರೈತರ ಪರವಾದ ಸುಳ್ಳು ಘೋಷಣೆಯನ್ನು ನಿಲ್ಲಿಸಬೇಕು. ಬಳಕೆದಾರ ಹಾಗೂ ಮಾರಾಟದ ಸಹಕಾರ ಸಂಘಗಳನ್ನು ಸ್ಥಾಪಿಸಿ, ಕೃಷಿಕಾರ್ಯಗಳಿಗಾಗಿ ಶೇಕಡ ೬ರ ಬಡ್ಡಿಯಲ್ಲಿ ಸಾಲಕೊಡಬೇಕು ಎಂದು ಸರಕಾರವನ್ನು ಒತ್ತಾಯಿಸಿದ್ದರು.[೪೯] ರೈತರ ಸಮಸ್ಯೆಗಳನ್ನು ಕುರಿತು ಚರ್ಚಿಸಿದ ನಂತರ ಇಂತಹ ರೈತ ಸಮ್ಮೇಳನಗಳನ್ನು ನಡೆಸುವುದರಿಂದ ಬರುವ ಖರ್ಚುವೆಚ್ಚಗಳನ್ನು ರೈತರೇ ಉದಾರವಾಗಿ ನಿರ್ವಹಿಸಬೇಕೆಂದು ಸಾರ್ವಜನಿಕರಲ್ಲಿ ಸಮ್ಮೇಳನಾಧ್ಯಕ್ಷರು ಮನವಿ ಮಾಡಿಕೊಂಡಿದ್ದರು. ಹಾಗೆಯೇ ರೈತರು ಕಾಂಗ್ರೆಸ್ ನೇತೃತ್ವದ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಬೇಕೆಂಬುದಾಗಿ ಮನವಿ ಮಾಡಿಕೊಳ್ಳಲಾಯಿತು. ಚಳ್ಳಕೆರೆ ರೈತ ಸಮ್ಮೇಳನವನ್ನು ವಿರೋಧಿಸಿದ ಸರಕಾರ ಚಳ್ಳಕೆರೆಯಲ್ಲಿ ೧೪೪ನೇ ಸೆಕ್ಷನ್ ಕಾಯಿದೆಯನ್ನು ಜಾರಿಗೊಳಿಸಿತು. ಆದರೂ ಹಿರಿಯೂರು ತಾಲೂಕಿನ ಮರಡಿಹಳ್ಳಿ ಮತ್ತು ದಾವಣಗೆರೆ ಯಲ್ಲಿಯ ರೈತರು ಸಮ್ಮೇಳನಗಳನ್ನು ನಡೆಸುವುದರ ಮೂಲಕ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರೀಯ ವಾಗಿ ಭಾಗವಹಿಸಿದರು.[೫೦]

ಚಿತ್ರದುರ್ಗ ಜಿಲ್ಲೆಯಲ್ಲಿದ್ದ ಪ್ರಮುಖ ಕಾಂಗ್ರೆಸ್ ಸಮಿತಿಗಳು

೧೯೩೭ರಲ್ಲಿ ಕಾಂಗ್ರೆಸ್ ಸಮಿತಿಯಲ್ಲಿ ಜಿಲ್ಲೆಯ ರೈತರೇ ಪ್ರಮುಖ ನಾಯಕರಾಗಿದ್ದರು.

ಜಗಳೂರು ಕಾಂಗ್ರೆಸ್ ಸಮಿತಿ ೧೪ಮೇ ೧೯೩೭

ರಾಘವೇಂದ್ರರಾವ್ - ಕಾರ್ಯದರ್ಶಿಗಳು

ಮಹಾಲಿಂಗಪ್ಪ, ಖಜಾಂಚಿ
ಇತರ ಸದಸ್ಯರುಗಳಿದ್ದರು.

ಮೊಳಕಾಲ್ಮೂರು ಕಾಂಗ್ರೆಸ್ ಸಮಿತಿ ೧೪ ಮೇ ೧೯೩೭
ಬಿ.ಅಯ್ಯಣ್ಣ, ಅಧ್ಯಕ್ಷರು
ಬಿ.ಎಸ್. ಮಲ್ಲಪ್ಪ, ಕಾರ್ಯದರ್ಶಿ
ಪೋಸ್ಟ್ ಸಿದ್ದಪ್ಪ, ಖಜಾಂಚಿ
ದೇವತಿ ಸಿದ್ಧಪ್ಪ ಹಾಗೂ ಇತರ ನಾಲ್ವರು ಸದಸ್ಯರಿದ್ದರು.

ಚಳ್ಳಕೆರೆ ಕಾಂಗ್ರೆಸ್ ಸಮಿತಿ ೧೪ನೇ ಮೇ ೧೯೩೭
ಕೃಷ್ಣಮೂರ್ತಿರಾವ್, ಅಧ್ಯಕ್ಷರು
ಸಿ.ವಿ.ಕೃಷ್ಣಮೂರ್ತಿ, ಕಾರ್ಯದರ್ಶಿ
ಹೆಚ್. ಮಲ್ಲಪ್ಪ ಮತ್ತು ಸೂರನಾಯಕ್ ಖಜಾಂಚಿಗಳು

ಹಿರಿಯೂರು ಕ್ರಾಂಗೆಸ್ ಸಮಿತಿ ೧೫ ಮೇ ೧೯೩೭
ಸೀತಾರಾಮಯ್ಯ, ಅಧ್ಯಕ್ಷರು.
ಹನುಮಂತರಾವ್, ಕಾರ್ಯದರ್ಶಿ
ಮಲ್ಲಯ್ಯ, ಖಜಾಂಚಿ[೫೧]

ಹೊಸದುರ್ಗ ಕ್ರಾಂಗೆಸ್ ಸಮಿತಿ ೭ ನವೆಂಬರ್ ೧೯೩೭
ನರಸಿಂಹಶೆಟ್ಟಿ, ಅಧ್ಯಕ್ಷರು
ಟಿ.ಹೆಚ್.ದಾಸಪ್ಪ ಮತ್ತು ಡಿ.ಎಸ್. ತಿಮ್ಮಪ್ಪ, ಕಾರ್ಯದರ್ಶಿಗಳು.
ಈ. ಯಂಕಣ್ಣ, ಖಜಾಂಚಿ
ನಾಗೇಶಶೆಟ್ಟಿ, ಮತ್ತು ಇತರ ೧೨ಜನ ಸದಸ್ಯರುಗಳಾಗಿದ್ದರು.[೫೨]

೧೯೩೯ರ ಜನವರಿಯಲ್ಲಿ ಭೀಮಪ್ಪ ನಾಯಕ ಯಳಗೋಡು, ದುಮ್ಮಿ ತಿಪ್ಪೇರುದ್ರಪ್ಪ ಮುಂತಾದವರು, ಜಗಳೂರು ತಾಲೂಕಿನ ಬಿದರಕೆರೆ, ತೋರಣಘಟ್ಟದಲ್ಲಿ ಕಾಂಗ್ರೆಸ್ ಪ್ರಚಾರವನ್ನು ಕೈಗೊಂಡು, ಕಾಂಗ್ರೆಸ್ ಸಮಿತಿಗಳನ್ನು ಪುನರ್ರಚಿಸಿದರು. ಈ ವೇಳೆಯಲ್ಲಿ ಚಿತ್ರದುರ್ಗ ಜಿಲ್ಲೆಯು ಕರ್ನಾಟಕದಲ್ಲಿಯೇ ಮಾದರಿಯಾಗಿ ಸಕ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿತ್ತು ಎನ್ನುವುದಕ್ಕೆ, ಅತಿ ಚಿಕ್ಕ ಹಳ್ಳಿಗಳಲ್ಲಿಯೂ ಕಾಂಗ್ರೆಸ್ ಸಮಿತಿಗಳಿದ್ದವೆಂಬುದೇ ಸಾಕ್ಷಿ. ಅಂತಹ ಕೆಲವು ಗ್ರಾಮಗಳಲ್ಲಿ ಜಗಳೂರು ತಾಲೂಕಿನ ಬಿದರಕೆರೆ ಮತ್ತು ತೋರಣಘಟ್ಟ ವ್ಯವಸ್ಥಿತ ಕಾಂಗ್ರೆಸ್ ಸಮಿತಿಯನ್ನು ಹೊಂದಿದ್ದನ್ನು ದಾಖಲೆಗಳು ತಿಳಿಸುತ್ತವೆ.

ಜಗಳೂರು ತಾಲೂಕು ಕಾಂಗ್ರೆಸ್ ಸಮಿತಿ ೨೦ ಜನವರಿ ೧೯೩೯ರಲ್ಲಿ ಪುನರ್ರಚಿಸಲಾಯಿತು
ಜಿ.ಎಸ್.ಕಲ್ಲಪ್ಪ, ಅಧ್ಯಕ್ಷರು
ಭರಮೂಜಿರಾವ್, ಕಾರ್ಯದರ್ಶಿಗಳು
ಮಹಾಲಿಂಗಪ್ಪ ಮತ್ತು ಇತರ ಆರು ಜನ ಸದಸ್ಯರಿದ್ದರು

ಬಿದರೆಕೆರೆ ಗ್ರಾಮ ಕಾಂಗ್ರೆಸ್ ಸಮಿತಿ ೨೦ ಜನವರಿ ೧೯೩೯

ಅಯ್ಯಣ್ಣರೆಡ್ಡಿ, ಅಧ್ಯಕ್ಷರು

ಮಹಾದೇವಪ್ಪ, ಉಪಾಧ್ಯಕ್ಷರು

ಷಡಕ್ಷರಪ್ಪ, ಕಾರ್ಯದರ್ಶಿಗಳು

ಆನಗೋಡು ಶಿವಣ್ಣ, ಖಜಾಂಚಿ

ವೀರಪ್ಪ ಮತ್ತು ಇತರ ಏಳು ಜನ ಸದಸ್ಯರಿದ್ದರು

ತೋರಣಘಟ್ಟ, ಕಾಂಗ್ರೆಸ್ ಸಮಿತಿ ೨೦ ಜನವರಿ ೧೯೩೯

ಹನುಮಂತಪ್ಪ, ಅಧ್ಯಕ್ಷರು

ಓಬಳಪ್ಪ, ಕಾರ್ಯದರ್ಶಿಗಳು

ಗೋವಿಂದಪ್ಪ, ಖಜಾಂಚಿ

ಪಟೇಲ ಬಸಪ್ಪ ಮತ್ತು ಇತರ ಏಳು ಜನ ಸಮಿತಿಯ ಸದಸ್ಯರಿದ್ದರು.[೫೩]

೧೯೩೯ ಫೆಬ್ರವರಿ ೧೮ರಂದು ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಸಭೆ ಸೇರಿದ ಸದಸ್ಯರುಗಳು ಜಿಲ್ಲಾ ಕಾಂಗ್ರೆಸ್ ಸಮಿತಿ ಮತ್ತು ತಾಲೂಕು ಕಾಂಗ್ರೆಸ್ ಸಮಿತಿಯನ್ನು ಪುನರ್ರಚಿಸಿದರು.

ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿ ೧೮ ಫೆಬ್ರವರಿ ೧೯೩೯

ಎಸ್.ನಿಜಲಿಂಗಪ್ಪ, ಅಧ್ಯಕ್ಷರು

ಆನೆಕೊಂಡ ಚೆನ್ನಬಸಪ್ಪ ಮತ್ತು ಎನ್.ಗೋವಿಂದರೆಡ್ಡಿ, ಉಪಾಧ್ಯಕ್ಷರು.

ಡಿ. ಹನುಮಂತಪ್ಪ, ಕಾರ್ಯದರ್ಶಿ

ಪಂಡಿತ್ ಎಂ.ಕೃಷ್ಣರೆಡ್ಡಿ, ಜಂಟಿ ಕಾರ್ಯದರ್ಶಿ

ಯಳಗೋಡು ಮುರುಗಪ್ಪ, ಖಜಾಂಚಿ

ಕುಸ್ತಿ ಬಸಪ್ಪ, ಕೆ.ಕರೀಮ್‌ಖಾನ್, ಈ ಕೊಟ್ರೆನಂಜಪ್ಪ, ಕೆ.ಟಿ.ವಾಸುದೇವರೆಡ್ಡಿ, ಸೀತಾರಾಮರೆಡ್ಡಿ, ದುಮ್ಮೀ ತಿಪ್ಪೇರುದ್ರಪ್ಪ, ಎಸ್. ವಾಸುದೇವರಾವ್ ಜಿ.ಹರಿಯಪ್ಪ ಮತ್ತು ರುದ್ರಪ್ಪ ಸಮಿತಿಯ ಸದಸ್ಯರಾಗಿದ್ದರು.

ಚಿತ್ರದುರ್ಗ ತಾಲೂಕು ಕಾಂಗ್ರೆಸ್ ಸಮಿತಿ ೧೮ ಫೆಬ್ರವರಿ ೧೯೩೯

ದುಮ್ಮಿ ತಿಪ್ಪೇರುದ್ರಪ್ಪ, ಅಧ್ಯಕ್ಷರು ಮತ್ತು ಖಜಾಂಚಿ

ಎಸ್.ನಾರಾಯಣ ರೆಡ್ಡಿ, ಉಪಾಧ್ಯಕ್ಷರು

ಪಿ.ಚೆನ್ನಾರೆಡ್ಡಿ ಕಾರ್ಯದರ್ಶಿಗಳು

ಕೆ.ಕಲ್ಲಪ್ಪ ಜಂಟಿ ಕಾರ್ಯದರ್ಶಿಗಳು

ಅಜ್ಜರ್ ಸಿದ್ದಪ್ಪ, ಈ ರುದ್ರಪ್ಪ, ಜೆ.ಸಿ ಮರುಳಪ್ಪ, ಎಸ್. ಬಸಣ್ಣ, ದುಮ್ಮಿಮುರುಗಪ್ಪ, ಗೌಡ್ರ ಶಾಮಣ್ಣ, ಸಿ.ಚೆನ್ನಬಸಪ್ಪ, ಕೃಷ್ಣಾರೆಡ್ಡಿ, ಕೆ.ಎಂ.ಉಜ್ಜಪ್ಪ, ರಾಯಲ್‌ರಾಮಪ್ಪ ಮತ್ತು ಎಂ.ರಾಮಾರೆಡ್ಡಿ ಇವರು ಸಮಿತಿಯ ಸದಸ್ಯರುಗಳಾಗಿದ್ದರು. ಮೇಲಿನ ಎರಡು ಸಮಿತಿಗಳಿಗೆ ಎಸ್.ವಾಸುದೇವರಾವ್ ಡಿ.ನರಸಿಂಹಯ್ಯ ಮತ್ತು ಕೆ.ಜಿ. ಚೆನ್ನಬಸಪ್ಪ ಲೆಕ್ಕ ಪರಿಶೋಧಕರಾಗಿದ್ದರು.[೫೪]

೧೯೩೯ರಲ್ಲಿ ಚಿತ್ರದುರ್ಗದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಒಂದೇ ಸ್ವಾತಂತ್ರ್ಯ ಚಳವಳಿಗೋಸ್ಕರ ಹೋರಾಟ ಮಾಡುವ ಸಂಘಟನೆಯಾಗಿತ್ತು. ೧೯೩೯ ಏಪ್ರಿಲ್ ಎರಂದು ದಾವಣಗೆರೆಯ ಗಾಂಧಿಭವನದಲ್ಲಿ ಮೈಸೂರು ಕಾಂಗ್ರೆಸ್ ಸಮಿತಿ ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿ ಧಾರವಾಡ ಈ ಎರಡು ಸಮಿತಿಗಳನ್ನು ದಾವಣಗೆರೆಯಲ್ಲಿ ಪುನರ್ರಚಿಸಲಾಯಿತು.

ಮೈಸೂರು ಕಾಂಗ್ರೆಸ್ ಸಮಿತಿ ಮೈಸೂರು ೨ ಏಪ್ರಿಲ್ ೧೯೩೯
ಗಂಜಿ ವೀರಪ್ಪ, ಅಧ್ಯಕ್ಷರು
ಕೆ.ಟಿ.ಜಂಬಣ್ಣ, ಉಪಾಧ್ಯಕ್ಷರು
ಕೆ.ವೀರಭದ್ರಪ್ಪ ಮತ್ತು ಮೌನೇಶ್ವರಪ್ಪ, ಜಂಟಿ ಕಾರ್ಯದರ್ಶಿಗಳು
ಬಂಡೆ ಹನುಮಂತಪ್ಪ ಮತ್ತು ಇತರ ಐದು ಜನ ಸದಸ್ಯರಿದ್ದರು.

ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿ ಧಾರವಾಡ ೨ ಏಪ್ರಿಲ್ ೧೯೩೯
ಕಾಸಲು ಶ್ರೀನಿವಾಸ ಶೆಟ್ಟಿ, ಅಧ್ಯಕ್ಷರು
ಬಂಡೆ ಹನುಮಂತಪ್ಪ, ಉಪಾಧ್ಯಕ್ಷರು
ಕೆ.ಟಿ. ಜಂಬಣ್ಣ ಮತ್ತು ವೀರಪ್ಪ, ಜಂಟಿ ಕಾರ್ಯದರ್ಶಿಗಳು
ಗಂಜಿ ವೀರಪ್ಪ ಮತ್ತು ಇತರ ಎಂಟು ಜನರು ಸದಸ್ಯರಿದ್ದರು.[೫೫]

ಅರಣ್ಯ ಸತ್ಯಾಗ್ರಹ

ಮೈಸೂರು ಸಂಸ್ಥಾನದ ಸರಕಾರ ಕಾಂಗ್ರೆಸ್ ಕೋರಿಕೆಯಂತೆ ಪಾನನಿರೋಧವನ್ನು ೧೯೩೯ ಸೆಪ್ಟೆಂಬರ್ ೧೮ರಂದು ಜಾರಿಗೆ ತರದಿರುವುದರಿಂದ ಮತ್ತು ಜವಾಬ್ದಾರಿ ಸರಕಾರ ರಚನೆಗಾಗಿ ಅರಣ್ಯ ಸತ್ಯಾಗ್ರಹವನ್ನು ಆರಂಭಿಸಲಾಯಿತು. ಅರಣ್ಯ ಚಳವಳಿಯು ಪ್ರಥಮವಾಗಿ ಚಿತ್ರದುರ್ಗ ತಾಲೂಕಿನ ತುರುವನೂರಿನಲ್ಲಿ ಆರಂಭವಾಯಿತು. ಇದರ ಮೂಲ ಉದ್ದೇಶವೇನೆಂದರೆ ಮೈಸೂರು ಸಂಸ್ಥಾನದ ಸರಕಾರಿ ಜಮೀನಿನಲ್ಲಿರುವ ಈಚಲು ಮರದ ವನಗಳನ್ನು ಕಡಿದು, ಸಂಸ್ಥಾನದಾದ್ಯಂತ ಸರಬರಾಜಾಗುತ್ತಿರುವ ಹೆಂಡದ ಮಾರಾಟವನ್ನು ನಿಲ್ಲಿಸುವುದಾಗಿತ್ತು.[೫೬] ಇಂತಹ ಚಳವಳಿಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕರನ್ನು, ಯುವಕರನ್ನು ಮತ್ತು ರೈತರನ್ನು ಸರಕಾರ ದಸ್ತಗಿರಿ ಮಾಡಿ, ದೂರದ ಕಾಡುಗಳಲ್ಲಿ ಮಧ್ಯರಾತ್ರಿಯಲ್ಲಿ ಬಿಟ್ಟು ಚಿತ್ರಹಿಂಸೆ ಕೊಡುತ್ತಿತ್ತು. ಇದರ ಹಿಂದೆ ಸರಕಾರದ ಮುಖ್ಯ ಉದ್ದೇಶವೇನೆಂದರೆ ಈ ಚಳವಳಿಗಳಲ್ಲಿ ಜನರು ಭಾಗವಹಿಸದಂತೆ ತಡೆಯುವುದೇ ಆಗಿತ್ತು. ಇದನ್ನೇ ಮೈಸೂರು ಸ್ವಾತಂತ್ರ್ಯ ಚರಿತ್ರೆಯಲ್ಲಿ ಅರಣ್ಯ ಸತ್ಯಾಗ್ರಹವೆಂದು ಕರೆಯಲಾಗಿದೆ. ಇದು ಚಿತ್ರದುರ್ಗ ತಾಲೂಕಿನ ತುರುವನೂರು, ಹೊಳಲ್ಕೆರೆ ತಾಲೂಕಿನ ರಂಗಾಪುರ, ಹೊಸದುರ್ಗ

ತಾಲೂಕಿನ ಬಾಗೂರು, ದಾವಣಗೆರೆ ತಾಲೂಕಿನ ಮಾಯಾಕೊಂಡ, ಹಿರಿಯೂರು ತಾಲೂಕಿನ ಕಸ್ತೂರಿ ರಂಗಪ್ಪನಹಳ್ಳಿ ಮತ್ತು ಮರಡಿಹಳ್ಳಿ ಇನ್ನು ಮುಂತಾದ ಸ್ಥಳಗಳಲ್ಲಿ ಅರಣ್ಯ ಸತ್ಯಾಗ್ರಹ ಚಳುವಳಿ ನಡೆದವು.

ಅರಣ್ಯ ಸತ್ಯಾಗ್ರಹ : ರಂಗಾಪುರ

ಹೊಳಲ್ಕೆರೆ ತಾಲೂಕು ರಂಗಾಪುರದಲ್ಲಿ ಅರಣ್ಯಸತ್ಯಾಗ್ರಹವು ೧೯೩೮ ಸೆಪ್ಟೆಂಬರ್‌ನಲ್ಲಿ ಕೊಟ್ರೆ ನಂಜಪ್ಪನವರ ನೇತೃತ್ವದಲ್ಲಿ ನಡೆಯಿತು. ಈ ಅರಣ್ಯ ಸತ್ಯಾಗ್ರಹ ಶಿಬಿರಕ್ಕೆ 'ಶಿವಾನಂದಾಶ್ರಮ'ವೆಂದು ಹೆಸರಿಟ್ಟಿದ್ದರು. ಈ ಶಿಬಿರದಿಂದ ಸತ್ಯಾಗ್ರಹಿ ತಂಡಗಳು ಒಂದೊಂದಾಗಿ ಕೊಟ್ರೆನಂಜಪ್ಪ, ಕೊಟ್ರೆಬಸಪ್ಪ, ಕೋಟಗಿ ಸಿದ್ಧಲಿಂಗಪ್ಪ, ರಾಮಗಿರಿ ತಿಮ್ಮಪ್ಪಯ್ಯ, ಚಿಕ್ಕಜಾಜೂರು ಸಿದ್ಧಪ್ಪ, ಗೌಡ್ರಈಶ್ವರಪ್ಪ ಮುಂತಾದವರು ಸತ್ಯಾಗ್ರಹಕ್ಕಾಗಿ ಸಿದ್ಧರಾಗಿ ಹೊರಟಿದ್ದ ಪ್ರಮುಖರು. ದೊಗ್ಗನಾಳು ಕೊಟ್ರೆ ನಂಜಪ್ಪನವರ ಮನೆತನ ಆಗ ತೆತ್ತ ಬೆಲೆ ಅನುಭವಿಸಿದ ಹಿಂಸೆ ಅಪಾರವಾಗಿತ್ತು.[೫೭] ರಂಗಾಪುರ ಸುತ್ತಮುತ್ತಲಿನ ಗ್ರಾಮದ ಜನರು ಗಂಡು, ಹೆಣ್ಣು ಎನ್ನದೆ, ವಿದ್ಯಾರ್ಥಿಗಳ ಸಮೇತ ಬಹುಸಂಖ್ಯೆಯ ರೈತರು ಈ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಗ್ರಾಮಗಳಲ್ಲಿ ಅಂದಿನ ಸತ್ಯಾಗ್ರಹಿಗಳಿಗೆ ಮಹಿಳೆಯರು ಹಣೆಗೆ 'ಕುಂಕುಮ ಅರಿಶಿಣ ಹಚ್ಚಿ', ವೀರ ತಿಲಕವಿಟ್ಟು, ಕೊರಳಿಗೆ ಹೂಮಾಲೆಯನ್ನು ಹಾಕಿ, ಆರತಿ ಬೆಳಗಿ ಬೀಳ್ಕೊಡುತ್ತಿದ್ದರು. ಪ್ರತಿಯೊಂದು ವಿಭಾಗದಲ್ಲಿಯೂ ೨೦ಕ್ಕಿಂತ ಹೆಚ್ಚು ಅರಣ್ಯ ಸತ್ಯಾಗ್ರಹಿಗಳಿದ್ದರು. ಈ ಸತ್ಯಾಗ್ರಹಿಗಳು ತಮ್ಮ ಹೆಗಲ ಮೇಲೆ ಕೊಡಲಿ ಹೊತ್ತು ಜಯ ಘೋಷ ಕೂಗುತ್ತಾ, ರಾಷ್ಟ್ರಗೀತೆ ಹಾಡುತ್ತಾ ಈಚಲ ಮರಗಳಿರುವ ಪ್ರದೇಶಗಳಿಗೆ ಹೋಗುತ್ತಿದ್ದರು. ಇಂತಹ ಕೆಲವು ನಾಯಕರನ್ನು ಸರಕಾರ ಬಂಧಿಸಿ, ದಾವಣಗೆರೆಯ ಸ್ಪೆಷಲ್ ಕೋರ್ಟಿನಲ್ಲಿ ಹಾಜರು ಪಡಿಸಿತು. ಹೊಳಲ್ಕೆರೆ ತಾಲೂಕು ಅರಣ್ಯ ಸತ್ಯಾಗ್ರಹಿಗಳ ತನಿಖೆಯನ್ನು ಪ್ರಾರಂಭಿಸಿದಾಗ ಸತ್ಯಾಗ್ರಹಿಗಳು ನೀಡುತ್ತಿದ್ದ ಉತ್ತರಗಳನ್ನು ಆಲಿಸಿದ ನ್ಯಾಯಾಧೀಶರು ಆಶ್ಚರ್ಯಗೊಳ್ಳುತ್ತಿದ್ದರು. ಉದಾಹರಣೆಗೆ ಸತ್ಯಾಗ್ರಹಿಗಳ ವಯಸ್ಸನ್ನು ಕೇಳಿ ಪ್ರಶ್ನಿಸಿದರೆ ಸ್ವಾತಂತ್ರ್ಯ ಪ್ರಜ್ಞೆ ಮೂಡಿದಾಗಿನಿಂದ ಲೆಕ್ಕ ಹಾಕಿ ವಯಸ್ಸು ಹೇಳುತ್ತಿದ್ದರು. ನಿಮ್ಮ ಕೆಲಸ ಏನೆಂದು ಪ್ರಶ್ನಿಸಿದರೆ 'ದೇಶಸೇವೆ'ಎಂಬ ಉತ್ತರ ನೀಡುತ್ತಿದ್ದರು.[೫೮] ಇಂತಹ ಸತ್ಯಾಗ್ರಹಿಗಳನ್ನು ಶಿಕ್ಷೆಗೊಳಪಡಿಸಿದ ಸರಕಾರ ೫೦೦ರೂ. ದಂಡ ವಿಧಿಸಿತು. ಆ ದಂಡವನ್ನು ಕಟ್ಟಲು ಸಾಧ್ಯವಿಲ್ಲದವರು ಸುಮಾರು ೪೮ ತಿಂಗಳುಕಾಲ ಶಿಕ್ಷೆಗೊಳಗಾಗಿದ್ದರು.

ಹೀಗೆ ಶಿಕ್ಷೆಗೊಳಗಾದ ಸ್ವಾತಂತ್ರ್ಯ ಹೋರಾಟಗಾರರನ್ನು ನೋಡಲು ಅಪಾರ ಜನರು, ದಾವಣಗೆರೆಯ ನ್ಯಾಯಾಲಯದ ಮುಂದೆ ಹಾಗೂ ಮಂಡಿಪೇಟೆಯುದ್ದಕ್ಕೂ ಸೇರುತ್ತಿದ್ದರು.[೫೯]

ಅರಣ್ಯ ಸತ್ಯಾಗ್ರಹ : ತುರುವನೂರು

ಕರ್ನಾಟಕದ ಸ್ವಾತಂತ್ರ್ಯ ಚಳವಳಿಯಲ್ಲಿ ೧೯೩೯ರ ಸೆಪ್ಟೆಂಬರ್ ೧೮ರಂದು ಚಿತ್ರದುರ್ಗದಿಂದ ೨೦ ಕಿ.ಮಿ ದೂರದ ತಾಲೂಕಿನ ತುರುವನೂರು ಗ್ರಾಮದಲ್ಲಿ, ಮೈಸೂರು ಕಾಂಗ್ರೆಸ್‌ವತಿಯಿಂದ ಸ್ವಾತಂತ್ರ್ಯ ಹೋರಾಟದ ಅಂಗವಾಗಿ ನಡೆದ ಅರಣ್ಯ ಸತ್ಯಾಗ್ರಹವು ರಾಜ್ಯಾದ್ಯಂತ ಗಮನಸೆಳೆದ ಚಾರಿತ್ರಿಕ ಘಟನೆಯಾಗಿದೆ. ಈ ಅರಣ್ಯ ಸತ್ಯಾಗ್ರಹದ ಮುಖಂಡತ್ವವನ್ನು ಎಸ್.ನಿಜಲಿಂಗಪ್ಪ ಮತ್ತು ಬಳ್ಳಾರಿ ಸಿದ್ಧಮ್ಮನವರು ವಹಿಸಿಕೊಂಡಿದ್ದರು. ಇದೊಂದು ವ್ಯವಸ್ಥಿತವಾಗಿ ನಡೆದ ಸತ್ಯಾಗ್ರಹಿ ಚಳವಳಿಯಾಗಿದೆ. ಮುಖಂಡರುಗಳ ನಿರ್ದೇಶನದಂತೆ ಪ್ರತಿದಿನ ೧೫ ಜನರಂತೆ ಈಚಲ ಮರ ಕಡಿಯಲು ಹೋಗುವುದೆಂಬ ಅವರ ತೀರ್ಮಾನ ಗಮನಾರ್ಹವಾದದು. ಈ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದವರು ತಂಡರೂಪದಲ್ಲಿ ವಿಭಾಗಿಸಿಕೊಳ್ಳಲು ಮುಖ್ಯವಾದ ಕಾರಣ ಸರಕಾರವು ಎಲ್ಲರನ್ನು ಒಂದೇ ಬಾರಿಗೆ ದಸ್ತಗಿರಿ ಮಾಡಬಹುದು ಎಂಬ ಮುಂಜಾಗರೂಕತೆಯಿತ್ತು. ಒಂದು ತಂಡವನ್ನು ದಸ್ತಗಿರಿ ಮಾಡಿದರೆ ಮತ್ತೊಂದು ತಂಡದ ಮೂಲಕ ಸತ್ಯಾಗ್ರಹವು ಮುಂದುವರಿಯುತ್ತಿತ್ತು.[೬೦]

ಹೀಗೆ ಒಂದೊಂದು ತಂಡದ ಸತ್ಯಾಗ್ರಹಿಗಳು ಪಾಲ್ಗೊಳ್ಳುವುದೆಂದು ತೀರ್ಮಾನಿಸಲಾಯಿತು. ಸತ್ಯಾಗ್ರಹವು ಪ್ರಾರಂಭವಾದ ದಿನವೇ ರಾಜಶೇಖರಯ್ಯ ಹಿರೇಮಠ, ಎಂ.ರಾಮರೆಡ್ಡಿ, ತಿಮ್ಮನಗೌಡ್ರು, ನೆಟ್ಕಲ್‌ತಿಪ್ಪೇರುದ್ರಪ್ಪ, ಹನುಮಂತಪ್ಪ ಇನ್ನೂ ಮುಂತಾದವರು ಈಚಲು ಮರಗಳನ್ನು ಕಡಿಯಲು ಗ್ರಾಮದೇವತೆಯಾದ ಮಾರಮ್ಮನ ದೇವಸ್ಥಾನದ ಹತ್ತಿರ ಬಂದರು. ೧೯೩೯ ಸೆಪ್ಟೆಂಬರ್ ೧೮ರಂದು ಅನೇಕ ಜನರು ದೇವಸ್ಥಾನದ ಹತ್ತಿರ ಸೇರಿದ್ದರು. ಈ ಸತ್ಯಾಗ್ರಹಿಗಳಿಗೆ ಗ್ರಾಮದ ಜನರು ಹೂವಿನ ಹಾರ ಹಾಕಿ, ಕುಂಕುಮ ಹಚ್ಚಿ ಶುಭ ಹಾರೈಸುವುದರೊಂದಿಗೆ ನಾನಾರೀತಿಯ ಘೋಷಣೆಗಳನ್ನು ಕೂಗಿದರು. ಈ ಗ್ರಾಮಕ್ಕೆ ಎರಡು ಮೈಲಿ ದೂರದಲ್ಲಿರುವ 'ದೇವರಮರ'ದ ಹಳ್ಳದ ಹತ್ತಿರಕ್ಕೆ ಸತ್ಯಾಗ್ರಹಿಗಳ ಮೆರವಣಿಗೆ ಹೊರಟಿತು. ಈ ಹಳ್ಳದಲ್ಲಿ ಸಾವಿರಾರು ಈಚಲು ಮರಗಳಿದ್ದವು. ಆ ಮರಗಳಿಗೆ ಹೆಂಡ ಇಳಿಸುವ ಮಡಕೆಗಳನ್ನು ಕಟ್ಟಿದ್ದರು. ಈ ಸ್ಥಳಕ್ಕೆ ಬಂದ ತಕ್ಷಣ ಎಸ್. ನಿಜಲಿಂಗಪ್ಪನವರು, ಬಳ್ಳಾರಿ ಸಿದ್ಧಮ್ಮ, ನಾಗರತ್ನಮ್ಮಹಿರೇಮಠ, ದುಮ್ಮಿಮುರುಗಪ್ಪ, ರಾಮಗಿರಿ

ಹನುಮಂತಪ್ಪ, ಎಸ್.ವಾಸುದೇವರಾವ್ ಮತ್ತು ಪಿ.ಚನ್ನಾರೆಡ್ಡಿ ಮುಂತಾದ ನಾಯಕರು ಭಾಷಣ ಮಾಡಿದರು. ನಂತರ ಅರಣ್ಯ ಸತ್ಯಾಗ್ರಹದ ಉದ್ದೇಶ, ಮಹತ್ವವನ್ನು ವಿವರಿಸಿದರು. ಪ್ರತಿಯೊಬ್ಬ ಸತ್ಯಾಗ್ರಹಿಯು ಒಂದೊಂದು ಮರದ ಬಳಿ ಹೋಗಿ ಮರಗಳನ್ನು ಕಡಿಯುವ ವೇಳೆಯಲ್ಲಿ ಪೋಲಿಸ್ ಇನ್ಸ್‌ಪೆಕ್ಟರ್ ಬಂದು ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿದರು. ಸುತ್ತಮುತ್ತಲಿನ ರೈತರಿಂದ ಕೂಡಿದ ಗುಂಪು ಯಾವುದೇ ರೀತಿಯಾದ ಹಿಂಸಾತ್ಮಕ ಘಟನೆಗಳಲ್ಲಿ ತೊಡಗಲಿಲ್ಲ. ಅಂದಿನ ದಿನ ಮಧ್ಯರಾತ್ರಿಯಲ್ಲಿ ಎಸ್. ನಿಜಲಿಂಗಪ್ಪನವರನ್ನು (೧೯೩೯ ಸೆಪ್ಟೆಂಬರ್ ೧೯ರ ಬೆಳಗಿನ ಜಾವ) ಪೋಲಿಸರು ಬಂಧಿಸಿದರು. ಹಾಗೆಯೇ ಬಳ್ಳಾರಿ ಸಿದ್ಧಮ್ಮ, ನಾಗರತ್ನಮ್ಮಹಿರೇಮಠ, ಪಿ.ಚನ್ನಾರೆಡ್ಡಿ, ಎಸ್.ವಾಸುದೇವರಾವ್ ಮುಂತಾದ ಜಿಲ್ಲೆಯ ಪ್ರಮುಖ ನಾಯಕರನ್ನು ಅವರ ಮನೆಯಲ್ಲಿಯೇ ದಸ್ತಗಿರಿ ಮಾಡಿದರು.[೬೧] ಇವರುಗಳೆಲ್ಲರಿಗೂ ಎರಡು ವರ್ಷದಿಂದ ಮೂರು ವರ್ಷಗಳವರೆಗೆ ಜೈಲು ಶಿಕ್ಷೆಯಾಯಿತು. ಅದೇ ರೀತಿ ಎರಡನೆಯ ದಿನ ಗೌಡ್ರ ಜಡಿಯಪ್ಪ, ಏಕಾಂತಪ್ಪ, ನೆಟ್ಕಲ್‌ತಿಪ್ಪೇರುದ್ರಪ್ಪ, ಎಸ್. ತಿಪ್ಪಣ್ಣ, ತೋರಣಘಟ್ಟದ ಕೃಷ್ಣಪ್ಪ, ದಾಸರುಸರಸಪ್ಪ ಮುಂತಾದವರನ್ನು ದಸ್ತಗಿರಿ ಮಾಡಲಾಯಿತು. ಇವರಿಗೆ ಒಂದು ವರ್ಷದಿಂದ, ಒಂದೂವರೆ ವರ್ಷದವರೆಗೆ ಜೈಲು ಶಿಕ್ಷೆ ನೀಡಲಾಯಿತು. ತುರುವನೂರು ಗ್ರಾಮದ ಬಹುತೇಕ ಜನರೆಲ್ಲರೂ ಈ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರಿಂದ ಅವರ ಮೇಲೆ ಸರಕಾರ 'ಪುಂಡುಗಂದಾಯ' ವಿಧಿಸಿತು. ಈ ತುರುವನೂರು ಸತ್ಯಾಗ್ರಹವು ಮಹಾತ್ಮ ಗಾಂಧೀಜಿಯವರ ಗಮನಕ್ಕೂ ಬಂದಿತ್ತು. ಅವರು ತಮ್ಮ ಕಾರ್ಯದರ್ಶಿಯಾಗಿದ್ದ ಮಹದೇವ ದೇಸಾಯಿ ಅವರನ್ನು ಮೈಸೂರು ಸಂಸ್ಥಾನಕ್ಕೆ ಕಳುಹಿಸಿದರು. ಮಹದೇವ ದೇಸಾಯಿ ಅವರು ೧೯೩೯ ಡಿಸೆಂಬರ್ ೧೨ರಂದು ಮೈಸೂರು ಸಂಸ್ಥಾನಕ್ಕೆ ಬಂದು ತುರುವನೂರು ಗ್ರಾಮಕ್ಕೆ ಭೇಟಿ ನೀಡಿದರು. ನಂತರ ಕಾಂಗ್ರೆಸ್ ಕಾರ್ಯಕರ್ತರನ್ನು ಭೇಟಿಮಾಡಿ ಮಾಹಿತಿ ಸಂಗ್ರಹಿಸಿದರು. ಸತ್ಯಾಗ್ರಹಿಗಳಿದ್ದ ಜೈಲು, ಆಸ್ಪತ್ರೆಗಳಿಗೂ ಭೇಟಿ ನೀಡಿದರು. ಪೋಲಿಸರ ದೌರ್ಜನ್ಯದಿಂದ ನರಳುತ್ತಿದ್ದ ಜನರ ಪರಿಸ್ಥಿತಿಯನ್ನು ಗಮನಿಸಿದರು. ನಂತರ ಪೋಲಿಸರ ದೌರ್ಜನ್ಯ ಹಾಗೂ ಸರಕಾರದ ದುರಾಳಿಡತವನ್ನು ಖಂಡಿಸುವ ಮನವಿ ಪತ್ರಗಳನ್ನು ಹರಿಹರ, ದಾವಣಗೆರೆ, ಚಿತ್ರದುರ್ಗ ಮುಂತಾದ ಸ್ಥಳಗಳಲ್ಲಿ ಮಹದೇವ ದೇಸಾಯಿಯವರಿಗೆ ಸ್ಥಳೀಯ ನಾಯಕರು ಸಲ್ಲಿಸಿದರು.

ಮೈಸೂರು ಸಂಸ್ಥಾನದ ಚಿತ್ರದುರ್ಗ ತಾಲೂಕಿನ ಅರಣ್ಯ ಸತ್ಯಾಗ್ರಹವನ್ನು ಕುರಿತು ಅಧ್ಯಯನ ಮಾಡಿದ ಮಹದೇವದೇಸಾಯಿ ಅವರು, ವಾರ್ಧಕ್ಕೆ ಹೋಗಿ ಗಾಂಧೀಜಿಯವರಿಗೆ ನಡೆದ ಘಟನೆಗಳನ್ನು

ವಿವರಿಸುವ ವರದಿಯನ್ನು ಸಲ್ಲಿಸಿದರು. ಪೋಲಿಸರ ದೌರ್ಜನ್ಯದ ಬಗ್ಗೆ ಒಂದು ನಿಷ್ಪಕ್ಷಪಾತ ತನಿಖೆಯನ್ನು ಮಾಡಬೇಕೆಂದು ಮತ್ತು ರಾಜಕೀಯ ಬಂಧಿಗಳನ್ನು ಸೆರೆಮನೆಯಿಂದ ಬಿಡುಗಡೆ ಮಾಡಬೇಕೆಂದು ಗಾಂಧೀಜಿ ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ತನಗಿರುವ ಜನ ಬೆಂಬಲವನ್ನು ವ್ಯಕ್ತಪಡಿಸಲು ಸತ್ಯಾಗ್ರಹವನ್ನು ಕೈಬಿಟ್ಟಿತು. ನಂತರ ೧೯೪೦ರಲ್ಲಿ ನಡೆದ ಚಿತ್ರದುರ್ಗ ಜಿಲ್ಲೆಯ ಎಲ್ಲಾ ಚುನಾವಣಾ ಸ್ಥಾನಗಳಲ್ಲಿಯೂ, ಕಾಂಗ್ರೆಸ್ ಜಯಗಳಿಸಿತು. ೧೯೪೦ರಲ್ಲಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮರಣ ನಂತರ ಸರಕಾರವು ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿತು. ಮಿರ್ಜಾ ಇಸ್ಮಾಹಿಲ್‌ರವರು ದಿವಾನ್ ಪದವಿಯಿಂದ ನಿವೃತ್ತ ರಾದರು. ಈ ವೇಳೆಯಲ್ಲಿ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯ ಚಳವಳಿಯ ಕಾವು ಕಡಿಮೆ ಆಗಿತ್ತು.[೭೨]

ಮೈಸೂರು ಕಾಂಗ್ರೆಸ್‌ನ ನಾಲ್ಕನೆಯ ಅಧಿವೇಶನವು ೧೯೪೧ನೇ ಏಪ್ರಿಲ್ ಆರರಿಂದ ಒಂಬತ್ತರವರೆಗೆ ಹರಿಹರ ಪಟ್ಟಣದ ಹತ್ತಿರದ ಹರಪುರ ಗ್ರಾಮದಲ್ಲಿ ನಡೆಯಿತು. ಈ ಅಧಿವೇಶನದ ಅಧ್ಯಕ್ಷತೆಯನ್ನು ಶಿವಮೊಗ್ಗದ ಎಚ್. ಸಿದ್ಧಯ್ಯನವರು ವಹಿಸಿಕೊಂಡಿದ್ದರು. ಈ ಕಾಂಗ್ರೆಸ್ ಅಧಿವೇಶನಕ್ಕೆ ಎಸ್.ನಿಜಲಿಂಗಪ್ಪನವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಅವರು ಅಧಿವೇಶನಕ್ಕೆ ಸದಸ್ಯರುಗಳನ್ನು ಸ್ವಾಗತಿಸುತ್ತಾ, "ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ನಾವು ನಡೆಸುತ್ತಿರುವ ನಿರಂತರ ಪ್ರಯತ್ನದಲ್ಲಿ ಮೈಸೂರು ಕಾಂಗ್ರೆಸ್‌ನ ಪ್ರತಿ ಅಧಿವೇಶನವು ಒಂದೊಂದು ಗಣನೀಯವಾದ ಘಟ್ಟವಾಗಿರುವುದಲ್ಲದೆ, ನಮ್ಮ ಮುನ್ನಡೆಯ ಸ್ಪಷ್ಟವಾದ ಕುರುಹೂ ಆಗಿದೆ" ಎಂದರು. ಈ ಅಧಿವೇಶನ ನಡೆದ ಸ್ಥಳಕ್ಕೆ ಭೂದಾನ ಪ್ರವರ್ತಕರೂ, ಸರ್ವೋದಯ ನಾಯಕರು ಆದ ವಿನೋಬಾಭಾವೆಯವರ ಹೆಸರಿಟ್ಟಿದ್ದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ರಾಜೇಂದ್ರಪ್ರಸಾದರು ಖಾದಿ ಪ್ರದರ್ಶನದ ಉದ್ಘಾಟನೆಗಾಗಿ ಬಂದಿದ್ದರು. ಅಧಿವೇಶನದ ಅನಂತರ ರಾಜೇಂದ್ರ ಪ್ರಸಾದರು ಸಂಸ್ಥಾನದಲ್ಲೆಲ್ಲ ಪ್ರಚಾರ ಪ್ರವಾಸ ಮಾಡಿದರು.

ಕ್ವಿಟ್ ಇಂಡಿಯಾ ಚಳವಳಿ ಮತ್ತು ಜಿಲ್ಲೆಯ ರೈತರು

೧೯೪೨ರ ಆಗಸ್ಟ್ ೮ರ ರಾತ್ರಿ ಮುಂಬಯಿನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ಪ್ರಸಿದ್ಧ 'ಕ್ವಿಟ್ ಇಂಡಿಯಾ' ನಿರ್ಣಯ ಸ್ವೀಕರಿಸಿ ಗಾಂಧೀಜಿಯವರಿಗೆ ಚಳವಳಿ ನಡೆಸುವ ಅಧಿಕಾರವನ್ನು ನೀಡಿತು. ತಾವು ವೈಸ್‌ರಾಯರವರಿಗೆ ಪತ್ರ ಬರೆದು ಶಾಂತಿ ಭಂಗವಾಗದಂತೆ ಕೊನೆಯ

ಪ್ರಯತ್ನ ಮಾಡಿ ಅದು ವಿಫಲವಾದರೆ ಮಾತ್ರ ಚಳವಳಿಯನ್ನು ಆರಂಭಿಸುವುದಾಗಿ ಗಾಂಧೀಜಿ ತಮ್ಮ ಇತರ ಸಹಪಾಠಿಗಳಿಗೆ ತಿಳಿಸಿದ್ದರು. ಆದರೆ ಸರಕಾರ ಅಂತಹ ಪ್ರಯತ್ನಗಳಿಗೆ ಅವಕಾಶ ನೀಡದೆ ಆಗಸ್ಟ್ ಒಂಭತ್ತರ ನಸುಕಿನಲ್ಲಿಯೇ ಗಾಂಧೀಜಿ ಮತ್ತು ಇತರ ಕಾಂಗ್ರೆಸ್ ನಾಯಕರೆಲ್ಲರನ್ನು ಬಂಧಿಸಿತು. ಕಾಂಗ್ರೆಸ್ ಮತ್ತು ಗಾಂಧೀಜಿ ಈ ಬಾರಿ ತೀವ್ರ ದಬ್ಬಾಳಿಕೆ ನಿರೀಕ್ಷಿಸಿದ್ದರು. ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಾಕಾರಿ ಸಮಿತಿಯು ೧೯೪೨ರ 'ಭಾರತ ಬಿಟ್ಟು ತೊಲಗಿ' ಎಂದು ಬ್ರಿಟಿಶರಿಂದ ಸಂಪೂರ್ಣ ಸ್ವಾತಂತ್ರ್ಯ ಪಡೆಯುವ ನಿರ್ಣಯ ಅಂಗೀಕರಿಸಿತು. ೧೯೪೨ರಲ್ಲಿ ಗಾಂಧೀಜಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ ನಡೆಸಿದ ಅಹಿಂಸಾ ಹೋರಾಟ ಮತ್ತು ಅಂತ್ಯದ ಹೋರಾಟವೇ 'ಕ್ವಿಟ್ ಇಂಡಿಯಾ' ಅಥವಾ 'ಭಾರತವನ್ನು ಬಿಟ್ಟು ತೊಲಗಿ' ಎಂಬ ಚಳವಳಿ. ಕಾಂಗ್ರೆಸ್‌ನ ಈ 'ಕ್ವಿಟ್ ಇಂಡಿಯಾ' ನಿರ್ಣಯದೊಂದಿಗೆ ದೇಶದಾದ್ಯಂತ 'ಮಾಡಿ ಇಲ್ಲವೇ ಮಡಿಯಿರಿ' ಎಂಬ ಘೋಷಣೆ ಮೊಳಗಿತು.[೬೩] ಈ ಚಳವಳಿಗೆ ಚಿತ್ರದುರ್ಗ ಜಿಲ್ಲೆಯ ಎಲ್ಲಾ ಗ್ರಾಮಗಳು ಪಾಲುಗೊಂಡಿದ್ದವು. ಚಿತ್ರದುರ್ಗ ಮತ್ತು ದಾವಣಗೆರೆ ನಗರಗಳ ಸೆರೆಮನೆಗಳು ತುಂಬಿದ್ದವು. ಗಾಂಧೀಜಿ ಮತ್ತಿತರ ಕಾಂಗ್ರೆಸ್ ನಾಯಕರ ಬಂಧನಕ್ಕೆ ದಾವಣಗೆರೆಯಲ್ಲಿ ಬಾರಿ ಪ್ರತಿಭಟನೆ ನಡೆಯಿತು. ಕಾರ್ಮಿಕರು ಸಹ ಮುಷ್ಕರ ನಡೆಸಿದರು. ದಾವಣಗೆರೆ ಮಿಲ್‌ಗಳಿಂದ ಸುಮಾರು ೧೦೦೦ ಜನ ಕಾರ್ಮಿಕರು ಭಾಗವಹಿಸಿದ್ದರು. ಎರಡು ವಾರದವರೆಗೆ ನಡೆದ ಮುಷ್ಕರದಲ್ಲಿ ಮಿಲ್‌ಗಳ ಒಡೆಯರು ಸಹ ಬೆಂಬಲ ವ್ಯಕ್ತಪಡಿಸಿದರು. ಕಾರ್ಮಿಕರ ಪ್ರಮುಖನಾಯಕರನ್ನು ಬಂಧಿಸಲಾಯಿತು. ದಾವಣಗೆರೆಯಲ್ಲಿ ಸುಮಾರು ೧೫೦ ಕಾರ್ಮಿಕರು ಬಂಧನಕ್ಕೆ ಒಳಗಾದರು.[೬೪]

ದಾವಣಗೆರೆ ನಗರದಲ್ಲಿ ಚಳವಳಿಯ ಉಗ್ರರೂಪ ತಾಳಿದಾಗ ಪರಿಸ್ಥಿತಿಯನ್ನು ಎದುರಿಸಲು, ಸೈನಿಕರ ಸಹಾಯದಿಂದ ಪೊಲೀಸರು ರೈತರ ಗುಂಪಿನ ಮೇಲೆ ಗುಂಡು ಹಾರಿಸಿದರು. ಗುಂಡು ಹಾರಿಸಿದಾಗ ಲಿಂಗಪ್ಪ, ನಾಗಪ್ಪ ಮತ್ತು ವಿರೂಪಾಕ್ಷಪ್ಪ ಎಂಬ ರೈತ ತರುಣರು ಮಡಿದರು. ಹಾಗೆಯೇ ಅಂದೇ ಗಾಯಗೊಂಡ ನಿಂಗಪ್ಪ, ತಿಮ್ಮಪ್ಪ, ನೀಲಜ್ಜಿಹನುಮಂತಪ್ಪ ಮತ್ತು ಬಸಪ್ಪ ಇವರು ಸತ್ತಿದ್ದರಿಂದ ದಾವಣಗೆರೆ ನಗರದಲ್ಲಿ ಸರಕಾರಿ ಕಛೇರಿಗಳ ಮೇಲೆ ಕಾರ್ಯಕರ್ತರು ಮುತ್ತಿಗೆ ಹಾಕಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ವಿದ್ಯಾರ್ಥಿ ಮುಷ್ಕರ ಬಿರುಸಾಗಿದ್ದಿತು. ವಿದ್ಯಾರ್ಥಿಗಳು ಚಳವಳಿಯ ಮಾರ್ಗ ಹಿಡಿದು ಅನೇಕ ತಿಂಗಳುಗಳ ಕಾಲ ತಮ್ಮ ತರಗತಿಗಳನ್ನು ಬಹಿಷ್ಕರಿಸಿ, ಬುಡಮೇಲು ಕೃತ್ಯಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು.[೬೫] ಹುಬ್ಬಳ್ಳಿ ಮತ್ತು ಹರಿಹರಗಳ

ಮಾರ್ಗದ ಮಧ್ಯ ಚಲಿಸುತ್ತಿದ್ದ ರೈಲಿನಲ್ಲಿ ದಾವಣಗೆರೆಯ ಒಂದು ವಿದ್ಯಾರ್ಥಿ ಗುಂಪು ರಾಷ್ಟ್ರೀಯ ಧ್ವಜವನ್ನು ರೈಲ್ವೆ ಇಂಜಿನ್‌ಗೆ ಕಟ್ಟಿತು. ಅದೇ ರೈಲಿನ ಎರಡನೇ ದರ್ಜೆ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ ಯೂರೋಪಿನ ಪ್ರಯಾಣಿಕರ ಟೋಪಿಯನ್ನು ಕಿತ್ತುಕೊಂಡು ಅವರ ಕೈಯಲ್ಲಿ ರಾಷ್ಟ್ರಧ್ವಜವನ್ನು ಹಿಡಿದುಕೊಳ್ಳವಂತೆ ಮಾಡಿದರು. ಅದರಲ್ಲಿ ಯೂರೋಪಿನ ಪುರುಷ ಮತ್ತು ಮಹಿಳಾ ಪ್ರಯಾಣಿಕರಿದ್ದರು. ಕಾಂಗ್ರೆಸ್‌ನ 'ಅಹಿಂಸಾ' ಹೋರಾಟಕ್ಕೆ ಇಂತಹ ನಿದರ್ಶನಗಳು ಇವೆ. ಈ ಮುಷ್ಕರದಿಂದಾಗಿ ಮೈಸೂರು ಸಂಸ್ಥಾನದಲ್ಲಿ ಹತ್ತು ದಿನಗಳವರೆಗೆ ರಾತ್ರಿ ರೈಲ್ವೆ ಪ್ರಯಾಣವನ್ನು ರದ್ದುಗೊಳಿಸಲಾಯಿತು. ನಂತರ ಮೂರು ವಾರಗಳವರೆಗೆ ರೈಲ್ವೆಮಾರ್ಗಗಳಾದ ಹುಬ್ಬಳ್ಳಿ ಮತ್ತು ಹರಿಹರ, ಹರಿಹರ ಮತ್ತು ಬೆಂಗಳೂರು, ಬೆಂಗಳೂರು ಮತ್ತು ಗುಂತಕಲ್, ಗುಂತಕಲ್ ಮತ್ತು ಬೆಂಗಳೂರು ಮಾರ್ಗಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಯಿತು.[೬೬] ಇಲ್ಲಿ ಸಂಚರಿಸುವ ಕೆಲವು ರೈಲು ಬೋಗಿಗಳಲ್ಲಿ ಮಿಲಿಟರಿ ಮತ್ತು ಪೋಲೀಸ್ ಬೆಟಾಲಿಯನ್‌ಗಳನ್ನು ನಿಯೋಜಿಸಲಾಯಿತು. ಚಿತ್ರದುರ್ಗ ಜಿಲ್ಲೆಯಲ್ಲಿ ದಾವಣಗೆರೆ, ಮಾಯಕೊಂಡ, ಕೊಡಗನೂರು, ಹೊಳಲ್ಕೆರೆ, ಚಿಕ್ಕಜಾಜೂರು ಮತ್ತು ಬಿದರಕೆರೆ ರೈಲ್ವೆನಿಲ್ದಾಣಗಳು ಹಾನಿಗೊಳಗಾದ ಇಲ್ಲವೇ ಅಗ್ನಿ ಸ್ಪರ್ಶಕ್ಕೆ ತುತ್ತಾದ ನಿಲ್ದಾಣಗಳಾಗಿದ್ದವು.[೬೭]

೧೯೪೨ ಆಗಸ್ಟ್ ೮, ೯ರಂದು ಪ್ರಾರಂಭವಾದ ಈ ಹೋರಾಟವು ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೂಪ ತಳೆಯಿತು. ದಾವಣಗೆರೆಯಲ್ಲಿ ಚಳವಳಿ ಬೃಹತ್‌ರೂಪ ತಾಳಿತು. ಮೂಲತಃ ಕಾಂಗ್ರೆಸಿಗರಾಗಿದ್ದು ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಇಟಗಿ ವೇದಮೂರ್ತಿ, ಸಮಾಜವಾದಿ ಶಿವಾನಂದಯ್ಯ, ಮುರಿಗೇಂದ್ರಯ್ಯ ಇವರುಗಳು ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ಕೊಟ್ಟಿಗೆ ಸಿದ್ದಿಂಗಪ್ಪ, ಬಳ್ಳಾರಿ ಮುರಿಗೆಪ್ಪ, ವೆಂಕಟೇಶಶೆಟ್ಟಿ, ಗುರುಬಸಪ್ಪ, ರುದ್ರಪ್ಪ, ರಾಜಪ್ಪ, ಲೋಕಪ್ಪ, ಇವರು ದಸ್ತಗಿರಿಯಾಗಿ ಕಾರಾಗೃಹ ಸೇರಿದರು. ಪರಿಣಾಮವಾಗಿ ಗೋಲೀಬಾರು ಆಯಿತು. ಸರಕಾರವು ಪ್ರತಿಭಟನೆಕಾರರನ್ನು ಬಂಧಿಸಿತು.[೬೮]

ಬಿದರಕೆರೆಯ ರೈಲ್ವೆ ನಿಲ್ದಾಣದಿಂದ ಹೊಸದುರ್ಗಕ್ಕೆ ತೆಗೆದುಕೊಂಡು ಹೋಗುತ್ತಿದ್ದ ಅಂಚೆ ಚೀಲಗಳನ್ನು ಅಂಚೆ ಜವಾನನಿಂದ ಅಪಹರಿಸುವ ಕಾರ್ಯವನ್ನು ರೇವಣಸಿದ್ದಪ್ಪ, ಪಂಚಾಕ್ಷರಯ್ಯ, ಡಿ.ಸಿ.ಕೃಷ್ಣಪ್ಪ, ಕೆ.ವೆಂಕಟರಾಮಯ್ಯ ಮತ್ತು ಬಿ.ಎನ್. ನರಸಿಂಹರೆಡ್ಡಿ ಮಾಡಿದರು. ಕೊನೆಗೆ ಇವರೂ ಶಿಕ್ಷೆಗೆ ಒಳಗಾದರು. ಹಿರಿಯೂರು ತಾಲೂಕು ಮದ್ದೂರ ಹಳ್ಳದ ಸೇತುವೆಗೆ ಡೈನಾಮೈಟ್ ಇಡಲು

ಹೋದ ಗೋವಿಂದಸ್ವಾಮಿ, ಎಸ್. ಉಗ್ರಯ್ಯ ಮತ್ತು ರಂಗಯ್ಯನವರು ಸಿಕ್ಕಿಬಿದ್ದು ಶಿಕ್ಷೆಗೆ ಒಳಗಾದರು. ಚಿತ್ರದುರ್ಗ ರೈಲ್ವೆ ನಿಲ್ದಾಣ ಮತ್ತು ಚಿಕ್ಕಜಾಜೂರು ರೈಲ್ವೆ ನಿಲ್ದಾಣದ ನೀರಿನ ಟ್ಯಾಂಕ್‌ಗಳಿಗೆ ಬೆಂಕಿ ಇಡುವ ಕಾರ್ಯದಲ್ಲಿಯೂ ಕೆಲವು ಯುವಕರು ತೊಡಗಿದರು. ಇದರಿಂದ ಪಟೇಲ್ ಸೋಮಣ್ಣ ಮುಂತಾದವರು ದಸ್ತಗಿರಿಯಾದರು. ದಸ್ತಗಿರಿಗೆ ಒಳಗಾಗದೆ ಗುಪ್ತವಾಗಿದ್ದು ಕೆಲಸ ಮಾಡಿದ ಪ್ರಮುಖರಲ್ಲಿ ಪಿ.ಚೆನ್ನಾರೆಡ್ಡಿ ಮೊದಲಿಗರಾಗಿದ್ದಾರೆ.[೬೯]

೧೯೪೨ರ ನಂತರ ಎಸ್.ನಿಜಲಿಂಗಪ್ಪನವರು ಕರ್ನಾಟಕದ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ನಾಯಕರಾದರು. ಕರ್ನಾಟಕದ ಉದ್ದಗಲಕ್ಕೂ ಪ್ರವಾಸ ಕೈಗೊಂಡು ಜನಸಂಘಟನೆಯಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಕರ್ನಾಟಕದ ಬಹುತೇಕ ನಾಯಕರು ಎಸ್.ನಿಜಲಿಂಗಪ್ಪನವರ ನಾಯಕತ್ವದಲ್ಲಿ ಹೋರಾಟ ಮಾಡಿರುವುದು ತಿಳಿಯುತ್ತದೆ. ಹೀಗಾಗಿ ೧೯೪೪ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಉತ್ತರ ಕರ್ನಾಟಕದ ನಾಯಕರಾದ ಗುದ್ಲೆಪ್ಪ ಹಳ್ಳಿಕೇರಿ, ಚನ್ನಪ್ಪ ಭದ್ರಾಪೂರ, ಕಳ್ಳಿತಿಪ್ಪಣ್ಣಶಾಸ್ತ್ರಿ, ಎಲ್.ಎಸ್.ಪಾಟೀಲ ಮುಂತಾದ ನಾಯಕರು ಪ್ರಮುಖ ಪಾತ್ರವಹಿಸಿದ್ದರು.

ಮೈಸೂರು ಚಲೋ ಚಳವಳಿ

ಮೈಸೂರಿನಲ್ಲಿ ಕಾಂಗ್ರೆಸ್ ಪಕ್ಷವು ತನ್ನ ನೆಲೆಯನ್ನು ಅಚ್ಚಳಿಯದಂತೆ ಉಳಿಸಿಕೊಂಡು ತುಂಬಾ ಚಟುವಟಿಕೆಯಿಂದ ಮುಂದುವರೆಯಿತು. ಎರಡನೆಯ ಮಹಾಯುದ್ಧದ ನಂತರ ಕಾಲದಲ್ಲಿ ಕಾಂಗ್ರೆಸ್ಸಿನಲ್ಲಿ ಕೆಲವು ಬದಲಾವಣೆಗಳು ಕಂಡುಬಂದವು. ಆದರೆ ಮೈಸೂರು ಸರಕಾರ ಮಾತ್ರ ಎಂದಿನಂತೆ ತನ್ನ ತಾಟಸ್ಥ್ಯವನ್ನು ಪ್ರದರ್ಶಿಸಿತು. ೧೯೪೫ರ ಸೆಪ್ಟೆಂಬರವರೆಗೆ ಕಾಂಗ್ರೆಸ್‌ನ ಮೇಲಿಂದ ಯಾವುದೇ ಬಹಿಷ್ಕಾರವನ್ನು ತೆಗೆದಿರಲಿಲ್ಲ. ರಾಜ್ಯದಲ್ಲಿದ್ದಂಥ ಕ್ಷಾಮ ಸಂದರ್ಭವನ್ನು ಸರಕಾರದಿಂದ ನಿಭಾಯಿಸಲು ಸಾಧ್ಯವಾಗದ ವೇಳೆಯಲ್ಲಿ, ಕಾಂಗ್ರೆಸ್ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಮುಂದೆ ಬಂದಿತು. ೧೯೪೬ರ ಜುಲೈನಲ್ಲಿ ಆಗ ದಿವಾನರಾಗಿದ್ದ ಪಿ.ಮಾಧವರಾವ್ ಅವರ ಸ್ಥಾನದಲ್ಲಿ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರನ್ನು ನೇಮಕ ಮಾಡಲಾಯಿತು. ೧೯೩೦-೪೬ರ ಅವಧಿಯಲ್ಲಿ ಸರಕಾರ ಅನುಸರಿಸಿದ್ದ ದಮನಕಾರಿ ನೀತಿಯ ಪರಿಣಾಮವಾಗಿ ಕಾಂಗ್ರೆಸ್ ಪಕ್ಷದಲ್ಲಿ ಬ್ರಾಹ್ಮಣೇತರರು ತುಂಬಾ ಕಷ್ಟವನ್ನು ಅನುಭವಿಸಿದ್ದರು. ಮೌಂಟ್ ಬ್ಯಾಟನ್‌ನನು ೧೯೪೬ರ ಜೂನ್

೪ರಂದು ಭಾರತಕ್ಕೆ ಸ್ವಾತಂತ್ರ್ಯ ಕೊಡುವುದಾಗಿ ಘೋಷಿಸಿದನು. ಇದರಿಂದಾಗಿ ಮೈಸೂರಿನ ವಿಲೀನದ ಗತಿಯನ್ನು ತೀವ್ರಗೊಳಿಸಬೇಕಾಯಿತು.[೨೦] ೧೯೪೭ರ ಆಗಸ್ಟ್ ೧೫ರಂದು ಆಡಳಿತಾಧಿಕಾರ ವನ್ನು ಭಾರತೀಯರಿಗೆ ವಹಿಸಿ, ಬ್ರಿಟಿಶ್‌ರು ಭಾರತದಿಂದ ತೆರಳಿದರು. ಭಾರತವು ಅಂದು ಸ್ವತಂತ್ರ ರಾಷ್ಟ್ರವಾಯಿತು. ಆ ದಿನ ಇಡೀ ದೇಶದಲ್ಲೆಲ್ಲಾ ತ್ರಿವರ್ಣ ಧ್ವಜ ಹಾರಿಸಿ ರಾಷ್ಟ್ರಗೀತೆ, ಜನಗಣಮನ ಹಾಡಿ, ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು ರಾಷ್ಟ್ರದ ಐಕ್ಯತೆ ಮತ್ತು ಅಭಿವೃದ್ಧಿಗಾಗಿ ಕೆಲಸ ಮಾಡಲು ಜನರೆಲ್ಲರೂ ಪ್ರತಿಜ್ಞೆ ಕೈಗೊಂಡರು.

ರಾಷ್ಟ್ರದ ಇತರ ಕಡೆಗಳಂತೆಯೇ ಮೈಸೂರು ಸಂಸ್ಥಾನದಾದ್ಯಂತ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಿದರು. ಆದರೆ ಸಂಸ್ಥಾನದ ಸರಕಾರವು ಮಾತ್ರ ತ್ರಿವರ್ಣ ಧ್ವಜ ಹಾರಿಸದೆ ಸ್ವಾತಂತ್ರ್ಯದ ಸಮಾರಂಭಗಳಲ್ಲಿ ಭಾಗವಹಿಸಲಿಲ್ಲ. ಇದರಿಂದ ಸಂಸ್ಥಾನದಲ್ಲಿ ತಮ್ಮ ಜವಾಬ್ದಾರಿ ಸರಕಾರ ಸ್ಥಾಪನೆಯನ್ನು ಸಾಧಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅರಮನೆಯ ಮುಂದೆ ಸತ್ಯಾಗ್ರಹ ನಡೆಸಲು ತೀರ್ಮಾನಿಸಿತು.[೨೧] ಇದಕ್ಕಾಗಿ ನಡೆದ ಹೋರಾಟವನ್ನು 'ಮೈಸೂರು ಚಲೋ' ಚಳವಳಿಯೆಂದು ಕರೆಯುತ್ತಾರೆ. ೧೯೪೭ರಲ್ಲಿ ಎಸ್. ನಿಜಲಿಂಗಪ್ಪನವರು ದೆಹಲಿಯಿಂದ ಮದ್ರಾಸಿಗೆ ಹೋಗಿ, ಅಲ್ಲಿಂದ ಕೊಡಗಿನ ಮಾರ್ಗವಾಗಿ ಮೈಸೂರಿಗೆ ಬರುತ್ತಿರುವ ವೇಳೆಯಲ್ಲಿ ಅವರನ್ನು ಬಂಧಿಸಲಾಯಿತು. ಈ ಸಂದರ್ಭದಲ್ಲಿ ಎಸ್. ನಿಜಲಿಂಗಪ್ಪನವರನ್ನು ೧೫ ರಿಂದ ೨೦ ದಿನಗಳವರೆಗೆ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಬಂಧನದಲ್ಲಿಟ್ಟಿದ್ದರು. ತಮ್ಮ ನಾಯಕನ ಬಂಧನ ವಿಷಯ ತಿಳಿದ ತಕ್ಷಣ ಚಿತ್ರದುರ್ಗ ಜಿಲ್ಲೆಯಲ್ಲಿ ಚಳವಳಿಯು ಉಗ್ರರೂಪ ತಾಳಿತು. ಹೆಂಡದ ಅಂಗಡಿಗಳ ಪಿಕೆಟಿಂಗ್, ಈಚಲಮರ ಕಡಿಯುವುದು, ಕೋರ್ಟ್ ಮತ್ತು ಸರಕಾರಿ ಕಚೇರಿಗಳ ಮುಂದೆ ಪಿಕೆಟಿಂಗ್, ಸರಕಾರದ ಕಟ್ಟಡಗಳ ಮೇಲೆ ರಾಷ್ಟ್ರಧ್ವಜ ಹಾರಿಸುವುದು, ಶಾಲಾಕಾಲೇಜುಗಳಿಗೆ ಬಹಿಷ್ಕಾರ ಮುಂತಾದ ಕಾರ್ಯಕ್ರಮಗಳು ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ನಡೆದವು. ಹಾಗೆಯೇ ಈ ವಿಷಯ ತಿಳಿದ ಉತ್ತರ ಕರ್ನಾಟಕದ ರಾಣೆಬೆನ್ನೂರು, ಹಾವೇರಿ, ಹಿರೇಕೆರೂರು ಕಡೆಗಳಿಂದಲೂ ಚಿತ್ರದುರ್ಗಕ್ಕೆ ಬಂದ ಸತ್ಯಾಗ್ರಹಿಗಳು ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಲಾಕಪ್‌ಗಳಲ್ಲಿ ಜಾಗವಿಲ್ಲದೇ ಟೌನ್‌ಹಾಲ್ ಮುಂತಾದ ಕಟ್ಟಡಗಳೇ ಜೈಲುಗಳಾದವು. ಚಳವಳಿಯಲ್ಲಿ ಭಾಗವಹಿಸಿದ ವರಲ್ಲಿ ಚಿತ್ರದುರ್ಗದಲ್ಲಿ ಎಸ್.ವಾಸುದೇವರಾವ್, ರಾಮರೆಡ್ಡಿ, ಕೃಷ್ಣಾರೆಡ್ಡಿ, ಬಳ್ಳಾರಿ ಸಿದ್ದಮ್ಮ, ಕೊಟ್ರೆನಂಜಪ್ಪ, ಎ.ಎಸ್.ಶ್ರೀನಿವಾಸಮೂರ್ತಿ, ಭೀಮಪ್ಪನಾಯಕ, ಹುಲ್ಲೂರು ಶ್ರೀನಿವಾಸ ಜೋಯಿಸ್ ಮತ್ತು ಹೊಳಲ್ಕೆರೆಯ ಕೃಷ್ಣಮೂರ್ತಿಶೆಟ್ಟಿ ಎಂಬುವರು ಜಿಲ್ಲೆಯಲ್ಲಿ ಬಂಧಿತ ಸತ್ಯಾಗ್ರಹಿಗಳಾಗಿದ್ದರು.[೨೨]

ಸರಕಾರಿ ಕಟ್ಟಡಗಳ ಮೇಲೆ ಧ್ವಜ ಹಾರಿಸುವ ಕಾರ್ಯಕ್ರಮವು ಲಾಠಿಛಾರ್ಜು ಮತ್ತು ಗುಂಡಿನೇಟುಗಳಿಗೆ ಎಡೆ ಮಾಡಿಕೊಟ್ಟಿತು. ಚಿತ್ರದುರ್ಗ, ದಾವಣಗೆರೆ ಮುಂತಾದ ಪ್ರದೇಶಗಳಲ್ಲಿ ಗಲಭೆಗಳುಂಟಾದುದರಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲು ಪೊಲೀಸರು ಗುಂಡು ಹಾರಿಸಿದರು. ಈ ಸಂದರ್ಭದಲ್ಲಿ ಸಂಸ್ಥಾನದ ರೈಲ್ವೆ ಸಿಬ್ಬಂದಿಯವರು ಹಾಗೂ ಪೊಲೀಸ್ ಇಲಾಖೆಯ ಕಾನ್ಸ್ಟೇಬಲ್‌ರವರೂ ತಮ್ಮ ಕೆಲಸ ನಿಲ್ಲಿಸಿ ಮುಷ್ಕರ ಆರಂಭಿಸಿದ ಘಟನೆ ಗಮನಾರ್ಹವಾದುದು. ೧೯೪೭ರಲ್ಲಿ ಹೊಸದುರ್ಗ ತಾಲೂಕು ಕಛೇರಿಯ ಮುಂದೆ ಸುಮಾರು ಒಂದು ಸಾವಿರ ಜನ ಸೇರಿ ರಾಷ್ಟ್ರಧ್ವಜ ಹಾರಿಸಲು ಪ್ರಯತ್ನಿಸಿದರು. ಈ ಗುಂಪನ್ನು ಚದುರಿಸಲು ಪೊಲೀಸರು ಗುಂಡು ಹಾರಿಸಿದರು. ಪರಿಣಾಮವಾಗಿ ಕಾಟಪ್ಪ ಬಿನ್ ಕುಕ್ಕೇರಜ್ಜ, ಹನುಮಂತಪ್ಪ ಬಿನ್ ಕರಿಯಪ್ಪ, ಗಿರಿತಿಮ್ಮಯ್ಯ, ಸಣ್ಣಮ್ಮ, ಕೊಂಡಪುರದರಂಗಣ್ಣ, ಎಣ್ಣೆಗೆರೆ ರಾಮಯ್ಯ ಯಳನಾಡು ಎಂಬ ರೈತರು ಆಸುನೀಗಿದರು.[೭೩] ಚಿತ್ರದುರ್ಗದಲ್ಲಿ ಬಳ್ಳಾರಿ ಸಿದ್ಧಮ್ಮ ಮತ್ತಿತರರ ನೇತೃತ್ವದಲ್ಲಿ ಒಂದು ದೊಡ್ಡ ಗುಂಪು ಸೆಪ್ಟೆಂಬರ್ ೧೧ ಮತ್ತು ೧೩ರಂದು ರಾಷ್ಟ್ರೀಯ ಧ್ವಜ ಹಾರಿಸಲು ಪ್ರಯತ್ನಿಸಿದರು. ರಾಷ್ಟ್ರಧ್ವಜವನ್ನು ತಾಲೂಕು ಕಛೇರಿ ಮತ್ತು ಪೊಲೀಸ್ ಸ್ಟೇಷನ್‌ಗಳ ಮೇಲೆ ಹಾರಿಸಲಾರಂಭಿಸಿದರು. ಸರಕಾರಿ ಅಧಿಕಾರಿಗಳ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿ ತೆರಿಗೆ ಕೊಡಲು ನಿರಾಕರಿಸಿದರು. ಅಂದರೆ ಸ್ಥಳೀಯರು ಸರಕಾರಿ ಅಧಿಕಾರಿಗಳಿಗೆ ಆಹಾರ ನೀರನ್ನು ಕೂಡ ಕೊಡಬಾರದೆಂದು ಸೂಚಿಸಲಾಯಿತು. ಜೊತೆಗೆ ಯಾವುದೇ ರೂಪದ ತೆರಿಗೆಯನ್ನು ಸರಕಾರಕ್ಕೆ ಸಲ್ಲಿಸಬಾರದೆಂದು ಕಾಂಗ್ರೆಸ್ ನಾಯಕರು ಜನರಿಗೆ ತಿಳಿಸಿದ್ದರು. ಜಿಲ್ಲಾ ಕಛೇರಿಯ ಮುಂದೆ ನಡೆಸಿದ ಚಳವಳಿಯಲ್ಲಿ ಗೋಲಿಬಾರು ನಡೆದು, ಚಿತ್ರದುರ್ಗದಲ್ಲಿ ಚಳವಳಿಗಾರರಾದ ಸುಬ್ರಾಯ ಶೆಟ್ಟರು, ದಾವಣಗೆರೆಯಲ್ಲಿ ಬೆಳ್ಳಿಕ್ಕೆ ಕರಿಬಸಪ್ಪ ಎಂಬ ಇಬ್ಬರು ಹೋರಾಟದಲ್ಲಿ ಮಡಿದರು. ಮೈಸೂರು ಸಂಸ್ಥಾನವು ವಿಜಯದಶಮಿಯಂದು ೧೯೪೭ರ ಅಕ್ಟೋಬರ್ ೨೪ರಲ್ಲಿ ಪ್ರಜಾನಾಯಕರಿಂದ ಕೂಡಿದ ಹೊಸ ಮಂತ್ರಿಮಂಡಲವನ್ನು ಹೊಂದಿತ್ತು. ಕೆ. ಚೆಂಗಲರಾಯರೆಡ್ಡಿಯವರು ಮುಖ್ಯ ಮಂತ್ರಿಯಾಗಿ ಅಧಿಕಾರವಹಿಸಿಕೊಳ್ಳುವ ಮೂಲಕ ಪ್ರಜಾಪ್ರಭುತ್ವ ಸರಕಾರ ಸ್ಥಾಪನೆಯಾಯಿತು.

ಕರ್ನಾಟಕ ಏಕೀಕರಣ ಚಳವಳಿ ಮತ್ತು ಚಿತ್ರದುರ್ಗ ಜಿಲ್ಲೆ

ಸ್ವಾತಂತ್ರ್ಯ ಚಳವಳಿಯ ಜೊತೆಯಲ್ಲಿ ಕರ್ನಾಟಕ ಏಕೀಕರಣ ಚಳವಳಿ ನಡೆಯಿತು. ಭಾಷೆಯ ಆಧಾರದ ಮೇಲೆ ರಾಜ್ಯವನ್ನು ಪುನರ್‌ರಚಿಸಬೇಕೆಂದು, ೧೯ನೇ ಶತಮಾನದ ಪ್ರಥಮಾರ್ಧದಲ್ಲಿ

ನಾಡಿನ ಚಿಂತಕರು ಗಮನ ಸೆಳೆದರು. ಪ್ರಾದೇಶಿಕವಾಗಿ ಒಂದು ಭಾಷೆಯ ಆಧಾರದ ಮೇಲೆ ಏಕೀಕರಣಗೊಳಿಸುವ ಪ್ರಕ್ರಿಯೆಯು, ರಾಷ್ಟ್ರಭಾವನೆ ವ್ಯಾಪಕವಾಗಿ ಹರಡಿದ ನಂತರವೇ ಆರಂಭವಾಯಿತು. ಭಾರತದ ಇತರ ಭಾಷೆಗಳನ್ನಾಡುವ ಜನರು ಸಹ ಭಾಷಾವಾರು ಪ್ರಾಂತ್ಯ ರಚನೆಗೆ ಚಳವಳಿ ನಡೆಸಿದರು. ಈ ಸಂದರ್ಭದಲ್ಲಿ ಜನರನ್ನು ಒಗ್ಗೂಡಿಸುವ ಸಾಧನವಾಗಿ ಭಾಷೆಯೂ ಪ್ರಮುಖ ಪಾತ್ರವಹಿಸಿತು. ಅಂದಿನ ಕನ್ನಡ ನಾಡು ವಿವಿಧ ಆಡಳಿತ ಭಾಗದಲ್ಲಿ ಹಂಚಿತ್ತು. ಅವುಗಳು ಒಂದೇ ಆಡಳಿತದಡಿಯಲ್ಲಿ ಬರಲು ಕನ್ನಡ ನಾಡಿನ ಎಲ್ಲಾ ಭಾಗದಿಂದಲೂ ಒತ್ತಾಯ ಬಂದಿತು. ಇಂತಹ ಏಕೀಕರಣ ಚಳವಳಿಯಲ್ಲಿ ಚಿತ್ರದುರ್ಗ ಜಿಲ್ಲೆಯೂ ಮುಂಚೂಣಿಯಲ್ಲಿತ್ತು.

ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಏಕೀಕರಣಪೂರ್ವ ಚಟುವಟಿಕೆಗಳು ಕರ್ನಾಟಕದ ಏಕೀಕರಣಕ್ಕೆ ಪೂರಕವಾಗಿದ್ದವು. ೧೮ನೇ ಶತಮಾನದ ಪ್ರಾರಂಭದಲ್ಲಿಯೇ ಚಿತ್ರದುರ್ಗ ಪ್ರದೇಶವು ಕರ್ನಾಟಕದ ಎಲ್ಲಾ ಭಾಗಗಳೊಂದಿಗೆ ನೇರ ಸಂಪರ್ಕ ಹೊಂದಿತ್ತು. ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕದ ಏಕೀಕರಣದಲ್ಲಿ ಚಿತ್ರದುರ್ಗ ಪ್ರದೇಶವು ನಿರ್ವಹಿಸಿದ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ.

ದಕ್ಷಿಣ ಭಾರತದಲ್ಲಿಯೇ ವಿಶಾಲ ರಾಜ್ಯವಾಗಿದ್ದ ವಿಜಯನಗರ ಆಡಳಿತಾವಧಿಯಲ್ಲಿ ಚಿತ್ರದುರ್ಗವು ಬೇರೆ ಬೇರೆ ಪ್ರಾಂತ್ಯಗಳೊಂದಿಗೆ ನಿಕಟಸಂಪರ್ಕ ಹೊಂದಿತ್ತು. ವಿಜಯನಗರದ ಪತನಾಂತರ ಚಿತ್ರದುರ್ಗದ ಸ್ಥಳೀಯ ನಾಯಕ ಅರಸರು ಇಲ್ಲಿಯ ಸಂಸ್ಕೃತಿಯನ್ನು ಬೆಳೆಸುವ ಮೂಲಕ ಚಿತ್ರದುರ್ಗದ ವಿಶಿಷ್ಟ ಪರಂಪರೆಯನ್ನು ರೂಪಿಸುವ ಕಡೆ ಗಮನಹರಿಸಿದರು.[೭೪] ಹೀಗಾಗಿ ೧೭ನೇ ಶತಮಾನದ ಪ್ರಾರಂಭದಲ್ಲಿಯೇ ಚಿತ್ರದುರ್ಗ ಪ್ರದೇಶದ ಜನರ ನಡೆನುಡಿ, ಆಚಾರ ವಿಚಾರಗಳು, ಸಂಪ್ರದಾಯಗಳು ಸಂಪೂರ್ಣ ಕನ್ನಡತನವನ್ನು ಉಳಿಸಿಕೊಂಡಿದ್ದನ್ನು ಗಮನಿಸಬಹುದಾಗಿದೆ. ಚಿತ್ರದುರ್ಗ ಪ್ರದೇಶವು ೧೮ನೇ ಶತಮಾನದ ಪ್ರಾರಂಭದಲ್ಲಿಯೇ ಉತ್ತರ ಕರ್ನಾಟಕದ ಜನರೊಂದಿಗೆ ನೇರವಾದ ಸಂಪರ್ಕ ಪಡೆದಿತ್ತು. ಈ ವೇಳೆಯಲ್ಲಿ ಹರಿಹರವು ಉತ್ತರ ಮತ್ತು ದಕ್ಷಿಣ ಭಾಗಕ್ಕೆ ಗಡಿ ಪ್ರದೇಶವಾಗಿತ್ತು. ಈ ರೀತಿಯಾದ ಆಡಳಿತಾತ್ಮಕ ಎಲ್ಲೆಯನ್ನು ದಾಟಿದ ಕನ್ನಡಿಗರು ಬಾಂಬೆ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದ ಭಾಗಗಳ ವಾಣಿಜ್ಯೋದ್ಯಮಿಗಳು ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಬಂದು ನೆಲೆಸಿದರು. ಈ ಮೂಲಕ ಕರ್ನಾಟಕದ ಎಲ್ಲ ಭಾಗದ ಜನರೊಂದಿಗೆ ಸಂಪರ್ಕ ಪಡೆಯಿತು.

ಚಿತ್ರದುರ್ಗ ಪ್ರದೇಶದಲ್ಲಿ ೧೮೦೦ರ ವೇಳೆಯಲ್ಲಿ ಪ್ರವಾಸ ಮಾಡಿದ ಬುಕಾನನ್ ದಾವಣಗೆರೆ ನಗರವು ವಾಣಿಜ್ಯ ಚಟುವಟಿಕೆಗಳಿಂದ ಕೂಡಿತ್ತು ಎಂದು ವಿವರಿಸಿದ್ದಾನೆ. ಅವನ ಪ್ರಕಾರ ಇಲ್ಲಿ ಹಲವು ವ್ಯಾಪಾರಿ ಕುಟುಂಬಗಳು ನೆಲೆಸಿದ್ದವು. ಕರ್ನಾಟಕದ ವಿವಿಧ ಭಾಗಗಳಿಂದ ವಾಣಿಜ್ಯ ಸಾಮಗ್ರಿಗಳು ಇಲ್ಲಿಗೆ ಬರುತ್ತಿದ್ದವು. ಇಲ್ಲಿನ ಪ್ರಮುಖ ವ್ಯಾಪಾರಿಗಳು ಶಿವಭಕ್ತರು, ಮರಾಠರು, ಮುಸ್ಲಿಮರು ಎಂದು ಗುರುತಿಸಿದ್ದಾನೆ. ಜೊತೆಗೆ ಚಿತ್ರದುರ್ಗ ಪ್ರದೇಶದಲ್ಲಿ ತಯಾರಾಗುವ ಕಂಬಳಿಗಳಿಗೆ ದೇಶದ ಎಲ್ಲಾ ಭಾಗದಲ್ಲಿಯೂ ಬೇಡಿಕೆ ಇತ್ತು. ಎರಡರಿಂದ ಹನ್ನೆರಡು ಪಗೋಡದವರೆಗೆ ಇಲ್ಲಿನ ಕಂಬಳಿಗಳು ಮಾರಾಟವಾಗುತ್ತಿದ್ದವು ಎಂದಿದ್ದಾನೆ. ಭಾನುವಾರದಂದು ದಾವಣಗೆರೆಯಲ್ಲಿ ಎರಡು ಸಾವಿರದಷ್ಟು ಕರ್ನಾಟಕದ ವಿವಿಧ ಭಾಗದ ಜನರು ಬಂದು ಸೇರುತ್ತಿದ್ದ ಬಗ್ಗೆ ಹೇಳುತ್ತಾನೆ.[೨೫] ೧೮೦೦ರಲ್ಲಿ ಕರ್ನಾಟಕದಲ್ಲಿ ಪ್ರವಾಸ ಮಾಡಿದ ಬುಕಾನನ್ ಬರವಣಿಗೆಯಿಂದ ದಾವಣಗೆರೆ, ಹರಿಹರದಲ್ಲಿ ಸೇರುತ್ತಿದ್ದ, ಕರ್ನಾಟಕದ ವಿವಿಧ ಭಾಗಗಳ ಜನತೆಯಲ್ಲಿ ಆಗಲೇ ಕನ್ನಡದ ಭಾಷಿಕ ಸಮುದಾಯದ ಐಕತ್ಯೆಯ ಕುರಿತು ಒಂದು ಸ್ಪಷ್ಟ ಚಿತ್ರಣವಿತ್ತು ಎಂದು ಗೊತ್ತಾಗುತ್ತದೆ.

ಇದೇ ರೀತಿ ೧೮೦೦ರ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ನಿರ್ಮಾಣವಾದ ರಸ್ತೆ ಮಾರ್ಗಗಳು ಹೊರ ಜಗತ್ತಿನೊಂದಿಗೆ ಸುಲಭ ಸಂಪರ್ಕ ಕಲ್ಪಿಸಿದವು. ಅವುಗಳಲ್ಲಿ ೧೮೫೦ರಲ್ಲಿ ನಿರ್ಮಾಣವಾದ ಬೆಂಗಳೂರು-ಹರಿಹರ ರಸ್ತೆ ಹರಿಹರ ಮಾರ್ಗವಾಗಿ ಬೆಂಗಳೂರು ಮತ್ತು ಧಾರವಾಡ ರಸ್ತೆ ಅತ್ಯಂತ ಪ್ರಮುಖ ಪಾತ್ರವಹಿಸಿದವು. ನಂತರದಲ್ಲಿ ನಿರ್ಮಾಣವಾದ ಹರಿಹರದ ಹತ್ತಿರದ ತುಂಗಭದ್ರಾ ನದಿಗೆ ೧೮೬೮ರಲ್ಲಿ ತುಂಗಭದ್ರಾ ಮೇಲುಸೇತುವೆಯನ್ನು ಕಮೀಷನರ್ ಕಾಲಾವಧಿಯಲ್ಲಿ ನಿರ್ಮಿಸಲಾಯಿತು. ಇದರ ನಿರ್ಮಾಣದಿಂದಾಗಿ ಕನ್ನಡ ಮಾತನಾಡುವ ಎರಡು ಪ್ರದೇಶಗಳನ್ನು ಒಂದಾಗಿ ಸೇರುವಂತೆ ಮಾಡಿತು. ಉತ್ತರ ಕರ್ನಾಟಕದಿಂದ ಮುಖ್ಯವಾಗಿ ಹಾವೇರಿ, ರಾಣೇಬೆನ್ನೂರು, ಕೊಟ್ಟೂರು ಇನ್ನಿತರ ಪ್ರದೇಶದಿಂದ ಬಂದ ಜನರು, ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ನೆಲೆಸುವ ಮೂಲಕ ಈ ಎರಡು ಪ್ರದೇಶಗಳನ್ನು ಸಾಂಸ್ಕೃತಿಕವಾಗಿ ಒಂದು ಮಾಡಿದರು. ಅದೇ ರೀತಿ ರೈಲ್ವೆ ಸಂಪರ್ಕದಿಂದಾಗಿ ಆಧುನಿಕ ಜಗತ್ತಿನ ಸಂಪರ್ಕವೇ ಕನ್ನಡಿಗರಿಗೆ ದೊರೆತಂತಾಯಿತು. ಬೆಂಗಳೂರು ಮತ್ತು ಹರಿಹರದ ನಡುವೆ ರೈಲ್ವೆ ೧೮೮೯ರಲ್ಲಿ ಪೂರ್ಣಗೊಂಡಿತು. ಸದರನ್ ಮರಾಠ ರೈಲ್ವೆ ಕಂಪನಿಯು ಪುಣೆ-ಹರಿಹರದೊಂದಿಗೆ ರೈಲ್ವೆ ಸಂಪರ್ಕ ಕಲ್ಪಿಸುವ ಮೂಲಕ ಚಿತ್ರದುರ್ಗ ಪ್ರದೇಶವು ಕರ್ನಾಟಕದ ಉತ್ತರ ಮತ್ತು ದಕ್ಷಿಣ ಭಾಗಕ್ಕೆ ಸಂಪರ್ಕ ಸೇತುವೆಯಾಯಿತು. ಈ ಭಾಗದ ಜನರು ರೈಲ್ವೆ ಪ್ರಯಾಣದ ಮೂಲಕ

ಒಂದುಕಡೆಯಿಂದ ಮತ್ತೊಂದು ಕಡೆಗೆ ಅಲ್ಪಾವಧಿಯಲ್ಲಿಯೇ ಪ್ರಯಾಣಿಸುವ ಅವಕಾಶ ಲಭಿಸಿದ್ದರಿಂದಾಗಿ ಒಂದು ಭಾಷೆಯನ್ನು ಮಾತನಾಡುವ ಜನರು ಸೇರಲು ಸುಲಭವಾಯಿತು. ಈ ಎಲ್ಲಾ ಚಾರಿತ್ರಿಕ ಹಿನ್ನೆಲೆಯಿಂದ ಕರ್ನಾಟಕದ ಏಕೀಕರಣ ಚಳವಳಿ ಈ ಭಾಗದಲ್ಲಿ ಪ್ರಬಲವಾಗಲು ಸಾಧ್ಯವಾಯಿತು.[೨೧]

ಕರ್ನಾಟಕದ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದ ಹರ್ಡೇಕರ್ ಮಂಜಪ್ಪನವರು ಗಾಂಧಿಜೀಯವರ ಮಾರ್ಗದಲ್ಲಿ ಸಾಬರಮತಿ ಆಶ್ರಮವನ್ನು, ೧೯೦೭ರಲ್ಲಿ ಹರಿಹರದ ಸಮೀಪದ ತುಂಗಭದ್ರಾ ನದಿಯ ದಡದಲ್ಲಿ ಸ್ಥಾಪಿಸುವುದರ ಮೂಲಕ ಉತ್ತರ ಕರ್ನಾಟಕದ ಜನರು ಬಂದು ಹೋಗುವಂತೆ ಮಾಡಿದರು.[೨೨]

ಎರಡನೇ ಮಹಾಯುದ್ಧದ ವೇಳೆಗೆ ದಾವಣಗೆರೆಯು ವ್ಯಾಪಾರದ ಹೆಚ್ಚಳದಿಂದ ಮಲೆನಾಡು ಮತ್ತು ಬಯಲು ಪ್ರದೇಶಗಳಿಗೆ ಕೇಂದ್ರಸ್ಥಳವಾಗಿ, ಹೊರ ರಾಜ್ಯದ ರಸ್ತೆ ಸಂಪರ್ಕ ಪಡೆದು ಪ್ರಮುಖ ವಾಣಿಜ್ಯ ಕೇಂದ್ರವೆಂದು ಪ್ರಸಿದ್ಧಿ ಪಡೆದಿತ್ತು. ಈ ವೇಳೆಗಾಗಲೆ ದಾವಣಗೆರೆಯಲ್ಲಿ ಹತ್ತಿ ಮಿಲ್ಲುಗಳು, ಎಣ್ಣೆ ಮಿಲ್ಲುಗಳು ಸ್ಥಾಪನೆಯಾಗುವುದರೊಂದಿಗೆ ಕೆಲಸವನ್ನು ಹುಡುಕಿ ಬರುವ ಜನರಿಗೆ ಆಶ್ರಯ ತಾಣವಾಗಿತ್ತು. ಈ ನಗರದ ಅಭಿವೃದ್ಧಿಯ ಪ್ರಯೋಜನ ಪಡೆದವರಲ್ಲಿ ಬಹುಸಂಖ್ಯಾತರು ಉತ್ತರ ಕರ್ನಾಟಕದಿಂದ ಬಂದವರಾಗಿದ್ದರು. ಹೀಗಾಗಿ ಕರ್ನಾಟಕದ ಏಕೀಕರಣಕ್ಕೆ ಚಿತ್ರದುರ್ಗ ಜಿಲ್ಲೆಯೂ ಕನ್ನಡ ನಾಡಿನ ಮಧ್ಯಭಾಗದಲ್ಲಿದ್ದು, ಎರಡು ಭಾಗದ ಜನರನ್ನು ಒಂದಾಗಿ ಸೇರಿಸುವ ಪ್ರಕ್ರಿಯೆಯಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿತು. ಕರ್ನಾಟಕ ಏಕೀಕರಣ ಚಳವಳಿಯು ಸ್ವಾತಂತ್ರ್ಯ ಚಳವಳಿಯೊಂದಿಗೆ ನಡೆಯಿತು. ಕನ್ನಡ ನಾಡು ಒಂದಾಗಬೇಕೆಂಬ ಅಭಿಲಾಷೆ ಅಖಂಡ ಕರ್ನಾಟಕ ನಿರ್ಮಾಣವೇ ಆಗಿತ್ತು.

೨೦ನೆಯ ಶತಮಾನದ ಆದಿಭಾಗದ ವೇಳೆಗೆ ಕನ್ನಡ ಭಾಷೆಯನ್ನು ಮಾತನಾಡುವ ಜನವರ್ಗಗಳು ಐದು ಆಡಳಿತ ವಿಭಾಗಗಳಲ್ಲಿ ಹರಿದು ಹಂಚಿತ್ತು. ಈ ಐದು ಆಡಳಿತ ವಿಭಾಗಗಳೆಂದರೆ ಮೈಸೂರು ಪ್ರಾಂತ್ಯ, ಮದ್ರಾಸು ಪ್ರಾಂತ್ಯ, ಬೊಂಬಾಯಿ ಪ್ರಾಂತ್ಯ, ಹೈದರಾಬಾದ್ ಪ್ರಾಂತ್ಯ ಹಾಗೂ ಕೊಡಗು. ಅಲ್ಲದೇ ಇಪ್ಪತ್ತೆರಡು ದೇಶಿಯ ಸಂಸ್ಥಾನಗಳು ಪ್ರತ್ಯೇಕವಾಗಿದ್ದವು. ಸ್ವಾತಂತ್ರ್ಯ ಚಳವಳಿಯ ಜೊತೆಯಲ್ಲಿಯೇ ಹರಿದು ಹಂಚಿ ಹೋದ ಕನ್ನಡನಾಡು ಒಂದೇ ಆಡಳಿತದಡಿ ಬರಲು ಕರ್ನಾಟಕದಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಮಾಡಲು ಒತ್ತಾಯ ತಂದರು ಎಂಬುದು ಇಲ್ಲಿ ಚರ್ಚೆಯವಿಷಯವಾಗಿದೆ. ಡೆಪ್ಯೂಟಿ ಚೆನ್ನಬಸಪ್ಪನವರು ೧೮೫೭ರಲ್ಲಿಯೇ ಇಂತಹ ಚಳವಳಿಯನ್ನು ಉತ್ತರ ಕನ್ನಡದಲ್ಲಿ ಆರಂಭಿಸಿದರು. ಈ ದಿಸೆಯಲ್ಲಿ ೧೮೯೦ರಲ್ಲಿ ಸ್ಥಾಪಿತವಾದ 'ಕರ್ನಾಟಕ ವಿದ್ಯಾವರ್ಧಕ ಸಂಘ' ಒಂದು

ಮಹತ್ವಪೂರ್ಣವಾದ ಮೈಲುಗಲ್ಲೆನ್ನಬಹುದು.[೨೮] ಈ ಸಂಘವು ಕನ್ನಡ ಭಾಷೆ ಮತ್ತು ಕಲೆಗಳ ಅಭಿವೃದ್ಧಿ ಹಾಗೂ ಕರ್ನಾಟಕವು ಸ್ವಾಯುತ್ತತೆ ಪಡೆಯುವಲ್ಲಿ ಪ್ರಮುಖ ಪಾತ್ರವಹಿಸಿತು.

೧೯೨೪ರಲ್ಲಿ ಬೆನಗಲ್ ರಾಮರಾಯರು ಅಧ್ಯಕ್ಷರಾಗಿ,ಬಿ.ಶಿವಮೂರ್ತಿಶಾಸ್ತ್ರಿಗಳು ಕಾರ್ಯದರ್ಶಿಯಾಗಿ ಬೆಂಗಳೂರಿನಲ್ಲಿ ಸ್ಥಾಪನೆಯಾದ ಕರ್ನಾಟಕ ಏಕೀಕರಣ ಸಂಘವು ಮೈಸೂರು ಪ್ರದೇಶದಲ್ಲಿ ಏಕೀಕರಣ ಚಳವಳಿಯನ್ನು ತೀವ್ರಗೊಳಿಸಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ೧೯೩೮ರಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ತನ್ನ ಸಮ್ಮತಿಯನ್ನು ಸೂಚಿಸಿ ನಿರ್ಣಯವನ್ನು ಮಂಡಿಸಿತು. ಇದನ್ನು ಅನುಮೋದಿಸಿದ ಮಹಾತ್ಮಗಾಂಧೀಜಿ ಅವರು ಪ್ರತ್ಯೇಕ ಕರ್ನಾಟಕ ಪ್ರಾಂತ್ಯದ ಅಸ್ತಿತ್ವವನ್ನು ಆಶಿಸಿ ಕರ್ನಾಟಕ ಚಿರಾಯುವಾಗಲಿ ಎಂದು ಘೋಷಿಸಿದರು. ೧೯೪೦ರ ನಂತರ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಂಘ, ಕನ್ನಡನಾಡಿನ ಎಲ್ಲ ಪ್ರದೇಶಗಳಲ್ಲಿಯೂ ಅಧಿವೇಶನಗಳನ್ನು ನಡೆಸಿ ಪ್ರಬಲ ಹೋರಾಟವನ್ನಾರಂಭಿಸಿತು. ಈ ಹೋರಾಟವು ಸ್ವಾತಂತ್ರ್ಯ ಚಳವಳಿಯ ಜೊತೆಯಲ್ಲಿಯೇ ನಡೆಯಿತು.

ಕರ್ನಾಟಕ ಏಕೀಕರಣಕ್ಕೆ ಮೈಸೂರು ಸಂಸ್ಥಾನದಲ್ಲಿಯೇ ಕೆಲವರು ವಿರೋಧಿಸುತ್ತಿದ್ದರು. ಅವರೆಲ್ಲರೂ ಮೈಸೂರು ಸಂಸ್ಥಾನವು ಉತ್ತಮ ಆಡಳಿತ ಹೊಂದಿ ಮುಂದುವರೆದಿದೆ, ಏಕೀಕರಣವಾದರೆ ಹಿಂದುಳಿದ ಪ್ರದೇಶಗಳು ಸೇರಿ ಸಂಸ್ಥಾನದ ಪ್ರಗತಿ ಕುಂಠಿತಗೊಳ್ಳುತ್ತದೆ ಎಂಬ ಅಭಿಪ್ರಾಯ ಹೊಂದಿದ್ದರು. ಎಚ್.ಸಿ.ದಾಸಪ್ಪ ಮತ್ತು ಸಚಿವರಾಗಿದ್ದ ಎ.ಜಿ.ರಾಮಚಂದ್ರರಾವ್ ಮುಂತಾದವರು ಕರ್ನಾಟಕ ಏಕೀಕರಣವಾದರೆ ವೀರಶೈವ ಸಮುದಾಯವು ಸಂಖ್ಯಾಬಲದಿಂದ ಪ್ರಬಲರಾಗುತ್ತಾರೆಂಬ ಸಂಶಯದಿಂದ ಅದನ್ನು ವಿರೋಧಿಸಿದರು. ಇವರು ಮೈಸೂರಿನೊಡನೆ ಉತ್ತರ ಕರ್ನಾಟಕದ ಭಾಗಗಳು ಸೇರುವುದನ್ನು ಕಟುವಾಗಿ ವಿರೋಧಿಸಿದರು. ಹೊಸದಾಗಿ ಸೇರ್ಪಡೆಯಾಗುವ ಭಾಗಗಳು ಸೇರಿ ಒಂದು ಪ್ರತ್ಯೇಕ ಕರ್ನಾಟಕ, ಮೈಸೂರೇ ಒಂದು ಪ್ರತ್ಯೇಕ ಕರ್ನಾಟಕ ಎರಡು ರಾಜ್ಯಗಳಾಗಿ ಉಗಮವಾಗಲೆಂದು ಅವರು ವಾದಿಸಿದ್ದರು. ಇಷ್ಟೆಲ್ಲಾ ವಿರೋಧಗಳಿದ್ದರೂ ಏಕೀಕರಣ ಚಳವಳಿ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಹೋಯಿತು. ಇದಕ್ಕೆ ಚಿತ್ರದುರ್ಗವು ಅಪವಾದವೇನಲ್ಲ.

೧೯೩೭ರ ಅಕ್ಟೋಬರ್ ೧೦ರಂದು ಕರ್ನಾಟಕದಾದ್ಯಂತ ಕರ್ನಾಟಕ ಏಕೀಕರಣ ದಿನವನ್ನಾಗಿ ಆಚರಿಸಲಾಯಿತು. ಇದೇ ವೇಳೆಯಲ್ಲಿ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ, ಹರಿಹರ ಇನ್ನಿತರ ಸ್ಥಳಗಳಲ್ಲಿಯೂ ಏಕೀಕರಣ ದಿನವನ್ನಾಚರಿಸಿದ ಬಗ್ಗೆ ವರದಿಗಳಿವೆ. ಕರ್ನಾಟಕ ಏಕೀಕರಣ

ಚಳವಳಿಯ ನಾಯಕರಾಗಿದ್ದ ಎಸ್. ನಿಜಲಿಂಗಪ್ಪ, ಜಿ.ವಿ.ಹಳ್ಳಿಕೆರೆ, ಜಿನರಾಜ ಹೆಗ್ಗಡೆ ಮತ್ತು ಕೆ.ಆರ್. ಕಾರಂತ ಅವರು ಆ ಕಾಲದಲ್ಲಿ ಕರ್ನಾಟಕ ಏಕೀಕರಣ ಚಳವಳಿಯ ನೇತಾರರಾಗಿದ್ದರು. ಕೆ.ಎಫ್.ಪಾಟೀಲರು ಹೇಳುವಂತೆ ಕರ್ನಾಟಕ ಏಕೀಕರಣ ಆಗಲೇಬೇಕು ಎನ್ನುವ ಕಾತರವಿತ್ತು. ಅದಕ್ಕೆ ಮೊದಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಯಾರಾಗಬೇಕು ಎನ್ನುವ ಪ್ರಶ್ನೆಯೂ ಇತ್ತು. ಮೈಸೂರು ಸಂಸ್ಥಾನ ಮತ್ತು ಬ್ರಿಟಿಶ್ ಕರ್ನಾಟಕದ ಭಾಗಗಳು ಈ ಎರಡು ಪ್ರದೇಶಗಳಿಗೂ ಸರಿಹೊಂದುವ ಸಮಾನ ಮನಸ್ಕ ವ್ಯಕ್ತಿಯೊಬ್ಬರು ಆಯ್ಕೆಯಾಗುವುದು ಸೂಕ್ತ ಎನ್ನುವುದು ಎಲ್ಲರ ಅಭಿಪ್ರಾಯವಾಗಿತ್ತು. ಚಿತ್ರದುರ್ಗ ಅಥವಾ ಶಿವಮೊಗ್ಗ ಜಿಲ್ಲೆಯ ಯಾರಾದರೊಬ್ಬರು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರೆ ಎರಡೂ ಕಡೆಯವರನ್ನು ಸರಿದೂಗಿಸಿಕೊಂಡು ಹೋಗುತ್ತಾರೆ. ಎನ್ನುವುದು ಎಲ್ಲ ಕಾರ್ಯಕರ್ತರ ಅಭಿಪ್ರಾಯವಾಗಿತ್ತು. ಏಕೆಂದರೆ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳು ಉತ್ತರ ಕರ್ನಾಟಕದ ಗಡಿ ಪ್ರದೇಶವಾಗಿದ್ದು, ಉತ್ತರ ಕರ್ನಾಟಕದ ಕಾಂಗ್ರೆಸ್ ನಾಯಕರು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದರು. ಹೀಗಾಗಿ ಈ ಪ್ರದೇಶದ ವ್ಯಕ್ತಿಗಳು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾದರೆ ಸಮಗ್ರ ಕರ್ನಾಟಕದ ದೃಷ್ಟಿಯಿಂದ ಸರಿ ಎಂಬ ಅಭಿಪ್ರಾಯ ಕಾಂಗ್ರೆಸ್ ನಾಯಕರದಾಗಿತ್ತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಎರಡೂ ಕಡೆ ಸದಸ್ಯರಾಗಿದ್ದವರು ಮಾತ್ರ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಬಹುದಾಗಿತ್ತು.

ಆದರೂ ಕಾರ್ಯಕರ್ತರ ಮೊದಲ ಆಯ್ಕೆ ಶಿವಮೊಗ್ಗದ ಹೆಚ್.ಸಿದ್ದಯ್ಯನವರಾಗಿದ್ದರು. ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸದಸ್ಯರಾಗಿರಲಿಲ್ಲ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಯಾರಾಗಬೇಕು ಎಂಬ ಪ್ರಶ್ನೆ ಕಗ್ಗಂಟಾಗಿತ್ತು. ಉತ್ತರ ಕರ್ನಾಟಕ ಕಾಂಗ್ರೆಸ್ ಪಕ್ಷದಲ್ಲಿ ಪ್ರಭಾವಿ ನಾಯಕರಾಗಿದ್ದ ಕೆ.ಎಫ್.ಪಾಟೀಲರು ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಎಸ್.ನಿಜಲಿಂಗಪ್ಪ ಅವರನ್ನೇ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಸೂಕ್ತ ವ್ಯಕ್ತಿ ಎಂದು ಭಾವಿಸಿದರು. ಒಮ್ಮತದಿಂದ ೧೯೪೪ರಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನಾಗಿ ಅವರನ್ನು ಆಯ್ಕೆ ಮಾಡಲಾಗಿತ್ತು. ಎಸ್.ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸದಸ್ಯರಾಗಿಯೂ ಹಾಗೂ ಸಂವಿಧಾನ ರಚನಾ ಸಮಿತಿಯ

ಸದಸ್ಯರೂ ಆಗಿದ್ದರು. ಅವರು ಹಳೇಯ ಮೈಸೂರು ಕರಾವಳಿ ಕೊಡಗು ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಕಾಂಗ್ರೆಸ್ ವಲಯಗಳ ಸದಸ್ಯರ ಅಪಾರ ವಿಶ್ವಾಸಗಳಿಸಿದ್ದ ಎಸ್.ನಿಜಲಿಂಗಪ್ಪನವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಉತ್ತರ ಕರ್ನಾಟಕದ ಕಾಂಗ್ರೆಸ್ ಧುರೀಣರ ವಿಶ್ವಾಸಗಳಿಸಲು ಸಮಿತಿಯ ಕಾರ್ಯದರ್ಶಿಯನ್ನಾಗಿ ಪ್ರಭಾವಿ ಉತ್ತರ ಕರ್ನಾಟಕದ ಕಾಂಗ್ರೆಸ್ ಧುರೀಣರಾಗಿದ್ದ ಹಳ್ಳಿಕೇರಿ ಗುದ್ಲಪ್ಪ ಅವರನ್ನು ನೇಮಿಸಿ ಪಕ್ಷದೊಳಗಿನ ಟೀಕಾಕಾರರ ಬಾಯಿ ಮುಚ್ಚಿದ್ದರು. ಈ ನೇಮಕ ಅವರ ದೂರದರ್ಶಿ ಹಾಗೂ ಮುತ್ಸದ್ದಿತನದ ಪ್ರತೀಕವಾಗಿತ್ತು. ಎಸ್.ನಿಜಲಿಂಗಪ್ಪ ಕನ್ನಡ ಪ್ರದೇಶದಲ್ಲಿ ವ್ಯಾಪಕ ಸಂಚಾರ ಕೈಗೊಂಡು ಜನರ ಸಂಪರ್ಕ ಸಾಧಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಕರ್ನಾಟಕ ಏಕೀಕರಣ ಚಳವಳಿಯ ಮುಂಚೂಣಿಯಲ್ಲಿತ್ತು. ಎಸ್. ನಿಜಲಿಂಗಪ್ಪ ಅದರ ನಾಯಕರಾಗಿದ್ದರು.[೭೯]

ದಾವಣಗೆರೆಯಲ್ಲಿ ಏಕೀಕರಣ ಸಭೆ

ದಾವಣಗೆರೆಯಲ್ಲಿ ೧೯೪೬ ಆಗಸ್ಟ್ ೩೧ರಂದು ನಡೆದ ಕರ್ನಾಟಕದ ಏಕೀಕರಣ ಸಭೆಯು ಅತ್ಯಂತ ಮಹತ್ವದ ರಾಜಕೀಯ ಘಟನೆ ಘಟಿಸಿದ ದಿನವಾಗಿತ್ತು. ಈ ಅಧಿವೇಶನವನ್ನು ಎಸ್.ನಿಜಲಿಂಗಪ್ಪನವರು ಏರ್ಪಡಿಸಿದ್ದರು. ಇದರ ಕಾರ್ಯದರ್ಶಿಗಳಾಗಿ ಪಾಟೀಲ ಪುಟ್ಟಪ್ಪನವರು ಇದ್ದರು. ಸ್ವಾಗತಾಧ್ಯಕ್ಷ ರಾಗಿದ್ದವರು ಉರುವಕೊಂಡ ಚನ್ನಬಸವಸ್ವಾಮಿಗಳು. ಕರ್ನಾಟಕದಲ್ಲಿ ನಡೆದ ಏಕೀಕರಣ ಸಭೆಗಳಲ್ಲಿ ದಾವಣಗೆರೆ ಸಭೆ ದೊಡ್ಡದಾಗಿತ್ತು. ಇದಕ್ಕೆ ಅಖಿಲ ಕರ್ನಾಟಕದ ಮಟ್ಟದ ಸದಸ್ಯರುಗಳು ಭಾಗವಹಿಸಿದ್ದರು. ಬಾಂಬೆ ಪ್ರಾಂತ್ಯದ ಕೃಷಿ ಮಂತ್ರಿಗಳಾದ ಪಾಟೀಲ್ ಮಲ್ಲನಗೌಡರು ಇದರ ಅಧ್ಯಕ್ಷತೆ ವಹಿಸಿದ್ದರು. ಮದ್ರಾಸ್ ಪ್ರಾಂತ್ಯದ ಕಂದಾಯ ಮಂತ್ರಿಗಳಾಗಿದ್ದ ಕೆ.ಆರ್. ಕಾರಂತರು ಉದ್ಘಾಟಿಸಿದರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಕರ್ನಾಟಕ ಏಕೀಕರಣ ಸಂಘ ಮುಂತಾದ ಸಂಘ ಸಂಸ್ಥೆಗಳ ಸದಸ್ಯರು, ಇದರಲ್ಲಿ ಭಾಗವಹಿಸಿದ್ದರು.[೮೦] ಬೊಂಬಾಯಿ, ಮದ್ರಾಸ್, ಹೈದರಾಬಾದ್ ಮತ್ತು ಮೈಸೂರಿನ ಶಾಸನ ಸಭೆಗಳ ಸದಸ್ಯರು ಜೊತೆಗೆ ಕರ್ನಾಟಕದ ಪ್ರಮುಖ ನಗರ ಸಭೆಗಳ ಮತ್ತು ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು, ಹಾಗೂ ಸಾವಿರಾರು ಪದಾಧಿಕಾರಿಗಳು ಭಾಗವಹಿಸಿದ್ದರು. ದಾವಣಗೆರೆಯಲ್ಲಿ ನಡೆದ ಈ ಮಹಾಸಭೆಯು ಅಖಂಡ ಕರ್ನಾಟಕದ ಪ್ರಾತಿನಿಧಿಕ ಸಭೆಯಾಗಿತ್ತು ಎಂಬುದು ಗಮನಾರ್ಹ. ಮಹಾಸಭೆಯ ಕಾರ್ಯದರ್ಶಿಯಾಗಿದ್ದ ಪಾಟೀಲ

ಪುಟ್ಟಪ್ಪನವರೇ ಹೇಳುವಂತೆ ಸಮಗ್ರ ಕರ್ನಾಟಕವನ್ನು ಒಂದು ಮಾಡಬೇಕೆನ್ನುವ ಮೊಟ್ಟಮೊದಲ ವಿಚಾರ ಬಂದಿತು. ಬ್ರಿಟಿಶರು ಭಾರತವನ್ನು ಬಿಟ್ಟು ಖಚಿತವಾಗಿ ಹೋಗುತ್ತಾರೆ ಎಂಬ ವಿಚಾರ ತಿಳಿದ ನಂತರ ಮಹಾರಾಜರು ಹೋಗಲಿ ಎನ್ನುವ ವಿಚಾರವು ಬಂದಿತು. ಏಕೆಂದರೆ ೧೯೪೬ರ ವೇಳೆಗಾಗಲೇ ಹೈದ್ರಾಬಾದ್ ಪ್ರಾಂತ್ಯ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ಪ್ರಜಾಪ್ರತಿನಿಧಿಗಳಿಂದ ಕೂಡಿದ ಸರಕಾರ ರಚಿಸಲು ಎಲ್ಲಾ ರೀತಿಯ ಪ್ರಯತ್ನಗಳು ನಡೆದಿದ್ದವು. ಆದರೆ ಮೈಸೂರು ಸಂಸ್ಥಾನದಲ್ಲಿ ರಾಜ ಪ್ರಭುತ್ವವೇ ಇತ್ತು. ಹೀಗಾಗಿ ಕರ್ನಾಟಕದ ಇತರ ಪ್ರದೇಶಗಳಂತೆ ಮೈಸೂರು ಸಂಸ್ಥಾನದಲ್ಲಿಯೂ ಪ್ರಜಾಪ್ರತಿನಿಧಿಗಳಿಂದ ಕೂಡಿದ ಸರಕಾರವನ್ನು ರಚಿಸುವುದಾಗಿತ್ತು. ಈ ಮಹಾ ಅಧಿವೇಶನವು ಅಖಿಲ ಕನ್ನಡಿಗರ ಪ್ರಥಮ ಮಹಾಅಧಿವೇಶನವಾಗಿತ್ತು ಎಂದಿದ್ದಾರೆ.[೫೦]

ಸಮಗ್ರ ಕರ್ನಾಟಕವೇ ಕನ್ನಡ ನಾಡೆಂದು ಹೇಳುತ್ತಿದ್ದ ಅಖಿಲ ಕರ್ನಾಟಕ ಏಕೀಕರಣ ಸಂಘದವರು ಈ ಮಹಾಪರಿಷತ್ತನ್ನು ಸೇರಿದ್ದು ಸಮಯೋಚಿತವಾಗಿತ್ತು. ಪ್ರಜಾಪ್ರಭುತ್ವದ ಯಶಸ್ಸು ಬಹುಮಟ್ಟಿಗೆ ಭಾಷಾವಾರು ಪ್ರಾಂತ್ಯ ರಚನೆಯನ್ನು ಒಳಗೊಂಡಿದೆ. ಆಡಳಿತದ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿಯೂ ಜನತೆ ಭಾಗವಹಿಸಬೇಕಾದರೆ ಭಾಷಾವಾರು ಪ್ರಾಂತ್ಯಗಳ ರಚನೆ ಅನಿವಾರ್ಯವಾಗಿತ್ತು. ಈ ಚಳವಳಿಯ ವಿಚಾರದಲ್ಲಿ ದೇಶೀಯ ಸಂಸ್ಥಾನದ ಪ್ರಜೆಗಳು, ಬ್ರಿಟಿಶ್ ಆಡಳಿತಕ್ಕೊಳಪಟ್ಟ ಪ್ರಜೆಗಳು ಎಂದು, ಹೀಗೆ ಎರಡು ಭಾಗ ಮಾಡಿ ನೋಡುವುದು ಸಮಂಜಸವಾಗಿರಲಿಲ್ಲ, ಇನ್ನು ಮುಂದೆ ಮೈಸೂರು ಸಂಸ್ಥಾನದಿಂದ ಏಕೀಕರಣ ಚಳವಳಿಗೆ ವಿರೋಧವಿದೆ ಎಂಬ ಭಾವನೆ ದಾವಣಗೆರೆ ಅಧಿವೇಶನದಿಂದ ಸಂಪೂರ್ಣ ಬಗೆಹರಿಯಿತು.[೫೧]

ದಾವಣಗೆರೆಯ ೧೯೪೬ರ ಏಕೀಕರಣ ಸಮಾವೇಶವು ಆದಷ್ಟು ಬೇಗ ಕರ್ನಾಟಕದ ಏಕೀಕರಣದ ಬೇಡಿಕೆಯನ್ನು ಈಡೇರಿಸಬೇಕೆಂದು ಈ ಸಮಸ್ಯೆಯ ಬಗ್ಗೆ ಗಮನ ಸೆಳೆಯಲು, ಎಂ.ಪಿ.ಪಾಟೀಲ್, ಎಸ್. ನಿಜಲಿಂಗಪ್ಪ ಹಾಗೂ ಕೆ.ಬಿ. ಜಿನರಾಜ ಹೆಗ್ಗಡೆ ಇವರನ್ನೊಳಗೊಂಡ ಮೂರು ಮಂದಿ ಸಮಿತಿಯನ್ನು ನೇಮಕ ಮಾಡಲಾಯಿತು. ನೂರಾರು ಸಂಖ್ಯೆಯಲ್ಲಿ ಮೈಸೂರು ಸಂಸ್ಥಾನದ ಸದಸ್ಯರು ಸಮಾವೇಶದಲ್ಲಿ ಭಾಗವಹಿಸಿದ್ದರು. ಏಕೀಕರಣದ ಬೇಡಿಕೆಗೆ ಮೈಸೂರು ಕಾಂಗ್ರೆಸ್ ತನ್ನ ಬೆಂಬಲ ಸೂಚಿಸಿತು. ಜವಾಬ್ದಾರಿ ಸರಕಾರಕ್ಕಾಗಿ ಮೈಸೂರಿನವರು ಸಲ್ಲಿಸಿದ್ದ ಈ ಬೇಡಿಕೆಯು ಇನ್ನು ಈಡೇರಿರಲಿಲ್ಲ. ಜವಾಬ್ದಾರಿ ಸರಕಾರ ರಚನೆಯಾಗುವುದೆಂಬ ಆಶಯದಿಂದ ಪ್ರಾಯಶಃ ಮೈಸೂರಿಗರು ಸಮಾವೇಶಕ್ಕೆ ಬೆಂಬಲ ಸೂಚಿಸಿದ್ದರು. ಏಕೆಂದರೆ ಕರ್ನಾಟಕದಲ್ಲಿ ಮೈಸೂರು ಸಂಸ್ಥಾನವನ್ನು ಬಿಟ್ಟು

ಕರ್ನಾಟಕ ಏಕೀಕರಣ ನಿರ್ಮಾಣ ಮಾಡುವುದು ಸರಿಯಲ್ಲ ಮದ್ರಾಸ್, ಬಾಂಬೆ ಪ್ರಾಂತ್ಯಗಳಲ್ಲಿ ಮಂತ್ರಿ ಮಂಡಲಗಳು ಯಾವ ಗೌರ್ನರ್ ಅಡ್ಡಿ ಅಂತಕಗಳಿಲ್ಲದೇ ಜನರ ಸೇವೆಮಾಡುತ್ತವೆ. ಸ್ವಾತಂತ್ರ್ಯವನ್ನು ಪಡೆದಿರುವ ಬ್ರಿಟಿಶ್ ಕರ್ನಾಟಕದ ಜನರು, ಪ್ರಜಾಸ್ವಾತಂತ್ರ್ಯವಿಲ್ಲದ ಮೈಸೂರಿನಲ್ಲಿ ಸೇರುವುದು ಹೇಗೆ ಎಂಬ ಪ್ರಶ್ನೆ ಹುಟ್ಟುತ್ತದೆ. ಆದರೆ "ಈ ಸಭೆ ಬ್ರಿಟಿಶ್ ಕರ್ನಾಟಕ ಪ್ರಾಂತ್ಯದ ಏಕೀಕರಣದ ಬಗ್ಗೆ ಮಾತ್ರ ನಿರ್ಣಯ ಅಂಗೀಕರಿಸಿದಾಗ ಮೈಸೂರಿಗರು ಆಕ್ರೋಶಗೊಂಡರು. ಈ ಆಕ್ರೋಶವು ಮೈಸೂರನ್ನು ಏಕೀಕರಣವಾಗಬೇಕಾದ ಪ್ರಾಂತ್ಯಕ್ಕೆ ಸೇರಿಸಲಿಲ್ಲ ಎಂಬ ಕಾರಣಕ್ಕಿಂತ, ದೇಶಿಯ ಸಂಸ್ಥಾನಗಳು ಜವಾಬ್ದಾರಿ ಸರಕಾರ ಪಡೆದುಕೊಂಡ ನಂತರ ಸೇರಿಸಿಕೊಳ್ಳಬಹುದು ಎಂದು ತೆಗೆದುಕೊಂಡ ನಿರ್ಣಯದಿಂದಾಗಿ ಎನ್ನಿಸುತ್ತದೆ. ಈ ಸಭೆಯಲ್ಲಿ ಹಾಜರಿದ್ದ ಕೆಂಗಲ್ ಹನುಮಂತಯ್ಯ ಮತ್ತು ಎಚ್.ಸಿ.ದಾಸಪ್ಪನವರು ಈ ನಿಯಮವನ್ನು ಒಪ್ಪಿಕೊಂಡರೆ ಮತ್ತೆ ಮೈಸೂರಿಗರು ರಾಜರ ನಿರಂಕುಶ ಆಡಳಿತದಲ್ಲಿ ಉಳಿಯಬೇಕಾಗುತ್ತದೆ. ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯವರು ಮೈಸೂರಿಗರ ಹೋರಾಟಕ್ಕೆ ಬೆಂಬಲ ಕೊಡುವುದಿಲ್ಲವೇನೋ ಎಂದು ಶಂಕಿಸಿ ಈ ನಿಯಮದ ವಿರುದ್ಧ ಪ್ರತಿಭಟಿಸಿದರು" ಎಂಬುದಾಗಿ ಎಸ್.ಚಂದ್ರಶೇಖರ್ ವಿಶ್ಲೇಷಿಸಿದ್ದಾರೆ.[೮೩] ಆದರೂ ಮೈಸೂರು ಮತ್ತು ಬ್ರಿಟಿಶ್ ಕರ್ನಾಟಕಗಳ ಏಕೀಕರಣಗಳಿಂದ ಎರಡೂ ಭಾಗಗಳಿಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವಿತ್ತು.

೧೯೪೬ ಸೆಪ್ಟೆಂಬರ್ ಏರಡು ಆರ್.ಆರ್. ದಿವಾಕರ ಅವರು ಪತ್ರಿಕಾವರದಿಯಲ್ಲಿ ಕೆಲವು ಮಹತ್ವದ ಪ್ರಕಟಣೆ ನೀಡಿದರು. ಅದೇನೆಂದರೆ "ಒಂದೇ ಭಾಷೆಯ ಬ್ರಿಟಿಶ್ ಪ್ರಾಂತ್ಯದ ಮತ್ತು ಸಂಸ್ಥಾನದ ಪ್ರಜೆಗಳು ಒತ್ತಟ್ಟಿಗೆ ಸೇರಿ ತಮ್ಮ ಪ್ರಾಂತ್ಯಕ್ಕೆ ಒಂದೇ ಆಡಳಿತದ ಬೇಡಿಕೆಯನ್ನು ಮಂಡಿಸಿದ ಈ ಮಹಾಸಭೆಯು ಇಡೀ ಭಾರತದಲ್ಲಿಯೇ ಮಹತ್ವದ್ದಾಗಿದೆ". ಬ್ರಿಟಿಶ್ ಕರ್ನಾಟಕದಿಂದ ಮುಂಬೈ-ಮದ್ರಾಸ್, ಕೊಡಗುಗಳ ಶಾಸನ ಸಭೆಗಳಿಗೆ ಪ್ರತಿನಿಧಿಗಳಾಗಿದ್ದವರೇ ಈ ಮಹಾಸಭೆಗೂ ಪ್ರತಿನಿಧಿಗಳಾಗಿದ್ದಾರೆ. ಕರ್ನಾಟಕದ ಸಂಸ್ಥಾನಗಳ ಶಾಸನ ಸಭೆಗಳ ಸದಸ್ಯರಾಗಿದ್ದವರು ಈ ಮಹಾಸಭೆಗೆ ಪ್ರತಿನಿಧಿಗಳಾಗಿ ಬಂದಿದ್ದರು. ಈಗಾಗಿ "ಅಖಂಡ ಕರ್ನಾಟಕದ" ಪ್ರಾತಿನಿಧಿಕ ವಿಧಿ ವಿಧಾನಗಳಿಂದಲೇ ದಾವಣಗೆರೆ ಪರಿಷತ್ತು ಪ್ರಾರಂಭವಾಯಿತು. ದಾವಣಗೆರೆಯ ಮಹಾಅಧಿವೇಶನದಲ್ಲಿ ದೇಶಿಯ ಸಂಸ್ಥಾನ ಪ್ರದೇಶಗಳಿಗೆ ಸಂಬಂಧಪಟ್ಟ ನಿರ್ಣಯವೊಂದು ಅಂಗೀಕೃತವಾಯಿತು.[೮೪] ಇದು 'ಅಖಂಡ ಕರ್ನಾಟಕ' ಸ್ಥಾಪನೆಯ ಹಿತದೃಷ್ಟಿಯಿಂದ ಹಾಗೂ ಬ್ರಿಟಿಷ್ ಕರ್ನಾಟಕ ಎಂಬ

ಭಿನ್ನತೆಗಳನ್ನು ಅಳಿಸಿ ಹಾಕುವುದರ ಹಿನ್ನೆಲೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯವಾಗಿತ್ತು. ಬ್ರಿಟಿಶ್ ಕರ್ನಾಟಕದ ವಿಭಾಗಗಳನ್ನು ಮೊದಲು ಒಂದೆಡೆ ಸೇರಿಸಿ ಕರ್ನಾಟಕ ಪ್ರಾಂತ್ಯವನ್ನು ನಿರ್ಮಿಸುವುದಕ್ಕೆ ಅಂತಕವುಂಟಾಗದಂತೆ ಬ್ರಿಟಿಶ್ ಕರ್ನಾಟಕ, ಸಂಸ್ಥಾನದ ಕರ್ನಾಟಕದ ಭಿನ್ನತೆಯನ್ನು ಎಣಿಸದೆ ಎಲ್ಲರೂ ಕರ್ನಾಟಕದಲ್ಲಿ ಒಂದೇ ಆಡಳಿತವುಳ್ಳ ಸರ್ಕಾರ ರಚಿಸುವುದು ಅಖಂಡ ಕರ್ನಾಟಕದ ಹಿತದೃಷ್ಟಿಯಿಂದ ಒಳ್ಳೆಯದೆಂದು, ಈ ಅಖಿಲ ಕರ್ನಾಟಕದ ಪ್ರತಿನಿಧಿಗಳ ಪರಿಷತ್ತು ವಿವೇಚಿಸಿತು. ಭಾಷಾವಾರು ಪ್ರಾಂತ್ಯ ರಚನೆಯ ವಿಷಯವನ್ನು ಮಹತ್ವದ ವಿಷಯವೆಂದು ಕರ್ನಾಟಕ ಏಕೀಕರಣ ಸಮಿತಿಯವರು ತಿಳಿದು ಕರ್ನಾಟಕ ಏಕೀಕರಣ ಕಾರ್ಯವು ಬೇಗನೆ ಮುಗಿಯಬೇಕೆಂದು ಈ ಮೂಲಕ ಪರಿಷತ್ತು ಸೂಚಿಸಿತು. ಈ ಏಕೀಕರಣ ಸಮಿತಿಗೆ ಬ್ರಿಟಿಶ್ ಭಾರತದಿಂದ ಆಯ್ಕೆಯಾದ ಪ್ರತಿನಿಧಿಗಳೇ ಇರುವುದರಿಂದ ಸಂಸ್ಥಾನಗಳಿಂದಲೂ ಚುನಾಯಿಸಲ್ಪಟ್ಟ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಈ ಮಹಾ ಅಧಿವೇಶನದಲ್ಲಿ ತಿಳಿಸಲಾಯಿತು."[೨೫]

೧೯೪೮ರ ಡಿಸೆಂಬರ್‌ನಲ್ಲಿ ಜೈಪುರದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಕ್ಕೆ ಭಾಷಾವಾರು ಪ್ರಾಂತ್ಯಗಳನ್ನು ಪ್ರತಿನಿಧಿಸುತ್ತಿದ್ದ ಡಾ. ಪಟ್ಟಾಭಿ ಸೀತಾರಾಮಯ್ಯನವರು ಅಧ್ಯಕ್ಷರಾದರು. ಅವರು ರಚಿಸಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಪಾರ್ಲಿಮೆಂಟರಿ ಬೋರ್ಡಿನಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರನ್ನು ಸದಸ್ಯರನ್ನಾಗಿ ಸೇರಿಸಿಕೊಂಡಿದ್ದರು. ಭಾಷಾವಾರು ಪ್ರಾಂತ್ಯದ ಬಗ್ಗೆ ನೆಹರೂ, ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯನವರು ಒಂದು ವರದಿಯನ್ನು ನೀಡುತ್ತಾ, ಅದರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾಗಬೇಕಾದರೆ ದೇಶೀಯ ಸಂಸ್ಥಾನಗಳು ಯೂನಿಯನ್ ಪ್ರದೇಶಗಳಲ್ಲಿ ವಿಲೀನವಾಗತಕ್ಕದ್ದು. ದೇಶೀಯ ಸಂಸ್ಥಾನಗಳು ವಿಲೀನವಾಗದೆ ಭಾಷಾವಾರು ಪ್ರಾಂತ್ಯ ರಚನೆ ಸಾಧ್ಯವಿಲ್ಲ ಎಂಬ ವಿಚಾರವನ್ನು ಪ್ರತಿಪಾದಿಸಿದರು. ಮೈಸೂರು ಸಂಸ್ಥಾನವು ಕರ್ನಾಟಕದಲ್ಲಿ ದೇಶೀಯ ಸಂಸ್ಥಾನವಾಗಿ ಪ್ರತ್ಯೇಕ ಆಡಳಿತ ಹೊಂದಿ ಒಡೆಯರ ಅಧೀನದಲ್ಲಿರುವುದರಿಂದ, ಅದು ವಿಲೀನವಾಗದ ಹೊರತು ಕರ್ನಾಟಕ ಏಕೀಕರಣ ಸಾಧ್ಯವಿಲ್ಲ ಎಂಬುದನ್ನು ಎಸ್. ನಿಜಲಿಂಗಪ್ಪನವರು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು.

ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಏಕೀಕರಣಕ್ಕೆ ಇದ್ದ ವಿರೋಧವನ್ನು ಕಡೆಗಣಿಸಿ, ಏಕೀಕರಣ ಪರವಾದ ಜನಜಾಗೃತಿಯನ್ನು ಮಾಡುವುದು ಅನಿವಾರ್ಯವಾಯಿತು. ಏಕೀಕರಣ ಪರವಾಗಿದ್ದ ಮುಖಂಡರೆಲ್ಲ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಇದನ್ನು ಸಾಧಿಸಬೇಕಾದರೆ

ಯುವಕರ ಬೆಂಬಲ ಅಗತ್ಯವೆಂದು ಮನಗಂಡರು. ಕರ್ನಾಟಕ ಯುವಕ ಪರಿಷತ್ತಿನ ಆಶ್ರಯದಲ್ಲಿ ಕರ್ನಾಟಕ ಏಕೀಕರಣ ಸಮಾವೇಶವನ್ನು ನಡೆಸಲಾಯಿತು. ಅವುಗಳಲ್ಲಿ ದಾವಣಗೆರೆಯಲ್ಲಿ ನಡೆದ ಯುವ ಅಧಿವೇಶನಗಳು ಕರ್ನಾಟಕ ಏಕೀಕರಣದ ದೃಷ್ಟಿಯಿಂದ ಮಹತ್ವದ ಪರಿಣಾಮ ಬೀರಿದ್ದವು.

ಕರ್ನಾಟಕ ಯುವ ಅಧಿವೇಶನಗಳು

ದಾವಣಗೆರೆಯಲ್ಲಿ 'ಅಖಿಲ ಕರ್ನಾಟಕ ಯುವಕ ಅಧಿವೇಶನ' ವನ್ನು ೧೯೪೮ರಲ್ಲಿ ಕೆ. ವೀರಭದ್ರಪ್ಪನವರು ಸಂಘಟಿಸಿದ್ದರು. ಈ ಅಧಿವೇಶನಲ್ಲಿ ಸಂಸ್ಥಾನಗಳ ಮತ್ತು ಬ್ರಿಟಿಶ್ ಕರ್ನಾಟಕದ ಯುವಕರು ಅಧಿಕ ಸಂಖ್ಯೆಯಲ್ಲಿ ಸೇರಿದ್ದರು. ಈ ಅಧಿವೇಶನವು ಪಕ್ಷಾತೀತವಾಗಿತ್ತು. ಕೇವಲ ಕಾಂಗ್ರೆಸ್ ಪಕ್ಷವಲ್ಲದೆ ವಿರೋಧ ಪಕ್ಷದ ಮುಖಂಡರಾದ ಜೆ.ಮಹ್ಮಮದ್ ಇಮಾಂ ಸಹ ಬಂದಿದ್ದರು. ಈ ಅಧಿವೇಶನಲ್ಲಿ ತೆಗೆದುಕೊಂಡ ಮುಖ್ಯ ನಿರ್ಧಾರಗಳಿಗೆ ಕರ್ನಾಟಕ ಏಕೀಕರಣ ಸಂಘ ಬೆಂಬಲ ವ್ಯಕ್ತಪಡಿಸಿತ್ತು. ಈ ಅಧಿವೇಶನದ ಮುಖ್ಯ ಉದ್ದೇಶವೇ ಏಕೀಕೃತ ಕರ್ನಾಟಕದ ಸ್ಥಾಪನೆಯಾಗಿತ್ತು.[೮೭]

ಕರ್ನಾಟಕ ಯುವಕ ಸಂಘವು ದಾವಣಗೆರೆಯಲ್ಲಿ ೧೯೪೯ರ ಜುಲೈ ೭ ಮತ್ತು ೮ರಂದು ಮೂರನೇ 'ಕರ್ನಾಟಕ ಯುವಕ ಅಧಿವೇಶನ'ವನ್ನು ಏರ್ಪಡಿಸಿತ್ತು. ಇದನ್ನು ಸಹ ಪುರಸಭಾ ಉಪಾಧ್ಯಕ್ಷರಾಗಿದ್ದ ಕೆ.ವೀರಭದ್ರಪ್ಪನವರು ಸಂಘಟಿಸಿದರು. ಈ ಅಧಿವೇಶನವನ್ನು ನೇತಾಜಿ ಸುಭಾಷ್‌ಚಂದ್ರಬೋಸ್‌ರ ಅಣ್ಣಂದಿರಾದ ಶರತ್‌ಚಂದ್ರಬೋಸ್‌ರು ಉದ್ಘಾಟಿಸಿದರು. ಹಾಸನದ ವಕೀಲರು ಮತ್ತು ಯುವಜನ ಮುಂದಾಳು ಕೆ.ಎನ್. ರುದ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಏಕೀಕರಣ ಸಮಸ್ಯೆಯನ್ನು ರಾಷ್ಟ್ರೀಯ ಸಮಸ್ಯೆ ಎಂಬಂತೆ ರಾಷ್ಟ್ರದ ಗಮನಸೆಳೆಯವಲ್ಲಿ ಯಶಸ್ವಿಯಾಗಿತ್ತು. ೧೯೪೯ರಲ್ಲಿಯೂ ಅದರ ಮುಖ್ಯ ಉದ್ದೇಶವು ಕರ್ನಾಟಕ ಏಕೀಕರಣವಾಗುವುದೇ ಆಗಿತ್ತು. ಸಾವಿರಾರು ಪ್ರತಿನಿಧಿಗಳು ಸಂಸ್ಥಾನಗಳಿಂದ ಮತ್ತು ಬ್ರಿಟಿಷ್ ಕರ್ನಾಟಕದ ಭಾಗದಿಂದ ಬಂದಿದ್ದರು. ಈ ಅಧಿವೇಶನದಲ್ಲಿ ಶರತ್‌ಚಂದ್ರಬೋಸ್ ಮಾತನಾಡುತ್ತಾ ಈ ಅಧಿವೇಶನವು "ಕಾಂಗ್ರೆಸ್‌ಪರವಾದುದಲ್ಲ ಇದು ಕರ್ನಾಟಕ ಏಕೀಕರಣ ಪರವಾದುದು" ಎಂದು ಹೇಳಿದರು. ಹಾಗೆಯೇ ಅವರು ದಕ್ಷಿಣ ಭಾರತವು ಜಯಪ್ರಕಾಶ್ ನಾರಾಯಣರ ವಿಚಾರವಾದಗಳಿಂದ ಪ್ರಭಾವಿತವಾಗಿದೆ. ಅವರ ನಿಲುವುಗಳು ಸಹ ಭಾಷಾವಾರು ಪ್ರಾಂತ್ಯದ ರಚನೆಯ ಪರವಾಗಿವೆ ಎಂದು ಹೇಳಿದರು.[೮೨] ಅಧಿವೇಶನದಲ್ಲಿ ಪ್ರಮುಖ ಕಾಂಗ್ರೆಸ್ ನಾಯಕರಾದ ಶಿವಮೊಗ್ಗದ ಎಸ್.ಬಿ.ಕೃಷ್ಣಮೂರ್ತಿ, ಎಸ್. ನಿಜಲಿಂಗಪ್ಪ ಮತ್ತು ಕೆ.ಆರ್.

ಕಾರಂತರು, ಉರುವಕೊಂಡ ಚನ್ನಬಸವಸ್ವಾಮಿಗಳು,ಎಸ್.ಕೃಷ್ಣರಾವ್, ದಾವಣಗೆರೆಯ ಎಚ್.ಶಿವಾನಂದ ಸ್ವಾಮಿ, ಶಿವಮೊಗ್ಗದ ಸಮಾಜವಾದಿ ಶಾಂತವೇರಿ ಗೋಪಾಲಗೌಡರು, ಕಾಂಗ್ರೆಸ್ ಯುವ ಮುಂದಾಳು ವಾದ ಹಾರ್ನಳ್ಳಿರಾಮಸ್ವಾಮಿ, ಜಿ.ಎಂ.ಜವಳಿ, ಎಚ್.ಎಸ್.ದೊರೆಸ್ವಾಮಿ, ಪಾಟೀಲ ಪುಟ್ಟಪ್ಪ, ಕೂಲಿ-ಕಾರ್ಮಿಕರ ಮುಖಂಡರಾದ ರಾಮಚಂದ್ರಶೆಟ್ಟಿ ಇವರು ಭಾಗವಹಿಸಿ ಕರ್ನಾಟಕ ಏಕೀಕರಣಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಮೈಸೂರು ಸಹಿತ ಕರ್ನಾಟಕವಾಗಬೇಕೆಂಬುದರ ಬಗ್ಗೆ ಸಮಾವೇಶದಲ್ಲಿ ಭಾಷಣ ಮಾಡಿದವರಲ್ಲಿ ಒಮ್ಮತವಿದ್ದರು, ಮೈಸೂರು ರಾಜರು ತುಂಬಾ ಜನಪ್ರಿಯರು. ಅವರ ಸ್ಥಾನಕ್ಕೆ ಚ್ಯುತಿಬಂದರೆ ಹಳೇ ಮೈಸೂರಿನಲ್ಲಿ ಜನರ ಪ್ರತಿಕ್ರಿಯೆ ಏನಾದಿತ್ತೆಂಬುದು ಕೆಲವರ ಆತಂಕಕ್ಕೆ ಕಾರಣವಾಯಿತು. ಖಾದ್ರಿ ಶಾಮಣ್ಣನವರು ಮೈಸೂರು ರಾಜರು ತಮ್ಮ ಅರಸತ್ವವನ್ನು ತ್ಯಜಿಸಿ ಕರ್ನಾಟಕ ಏಕೀಕರಣಕ್ಕೆ ಅನುವು ಮಾಡಿಕೊಡಬೇಕೆಂದು ಹೇಳಿದರು. ಅದಕ್ಕೆ ವಕೀಲರು ಮತ್ತು ಶಾಸಕರಾಗಿದ್ದ ಹೊಳಲ್ಕೆರೆ ಶಿವಲಿಂಗಪ್ಪನವರು ವಿರೋಧಿಸಿದರು. ಅನಂತರ ಎಸ್.ನಿಜಲಿಂಗಪ್ಪನವರು ಮಾತನಾಡಿದ ಮೇಲೆ ಸಭೆ ಶಾಂತವಾಯಿತು. ಅದೇ ಸಭೆಯಲ್ಲಿ ಮೈಸೂರು ಸಹಿತ ಕರ್ನಾಟಕ ಏಕೀಕರಣವನ್ನು ಸಾಧಿಸಿಬೇಕು ಇದಕ್ಕಾಗಿ ಏಕೀಕರಣದ ಪರವಾಗಿ ಜನಾಭಿಪ್ರಾಯವನ್ನು ರೂಢಿಸಲು ಯುವಕರನ್ನೊಳಗೊಂಡ ಸಮಿತಿಯನ್ನು ರಚನೆ ಮಾಡುವ ಅಧಿಕಾರವನ್ನು ಸಭೆಯ ಅಧ್ಯಕ್ಷರಾಗಿದ್ದ ಕೆ.ಎಂ.ರುದ್ರಪ್ಪನವರಿಗೆ ವಹಿಸಿಕೊಟ್ಟರು. ಮಾರನೇ ದಿನ ಸಭೆಯಲ್ಲಿ ಕನ್ನಡ ಸಂಸ್ಕೃತಿ ಬಗ್ಗೆ ಜನಜಾಗೃತಿ ಮೂಡಿಸುವುದು ಹಾಗೂ ಭಾವ್ಯಕತೆ ಬಗ್ಗೆ ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಸಭೆಯ ತೀರ್ಮಾನದಂತೆ ಕೆ.ಎಂ.ರುದ್ರಪ್ಪನವರು ಯುವಕ ಮುಂದಾಳುಗಳ ಜೊತೆ ಸಮಲೋಚಿಸಿ ಅವರ ಅಧ್ಯಕ್ಷತೆಯಲ್ಲಿ ಒಂದು ಸ್ಥಾಯಿ ಸಮಿತಿಯನ್ನು ರಚಿಸಿದರು. ಅದಕ್ಕೆ ಕೆ.ವೀರಭದ್ರಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಹಾರ್ನಳ್ಳಿರಾಮಸ್ವಾಮಿಯವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಯೂ, ಜಿ.ಎಂ.ಜವಳಿ ಅವರನ್ನು ಸಂಘಟನಾ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು. ಇದರೊಂದಿಗೆ ಕರ್ನಾಟಕದ ಎಲ್ಲಾ ಭಾಗಗಳ ವರ್ಚಸ್ವಿ ಯುವಮುಂದಾಳುಗಳನ್ನು ಆ ಸಮಿತಿಗೆ ಆಯ್ಕೆ ಮಾಡಿದರು.[೮೮]

ಇದೇ ಸಂದರ್ಭದಲ್ಲಿ ಮೈಸೂರಿನ ಜನಸಾಮಾನ್ಯರೆಲ್ಲರೂ ಸಂಯುಕ್ತ ಕರ್ನಾಟಕದ ರಚನೆಗೆ ಹಾತೊರೆಯುತ್ತಿದ್ದರು. ವಾಣಿಜ್ಯ ಪ್ರಪಂಚವಂತೂ ಯಾವಾಗಲೂ ಇದನ್ನು ಸ್ವಾಗತಿಸುತ್ತಿತ್ತು. ೧೯೪೯ ನವೆಂಬರ್ ೨ರಂದು ದಾವಣಗೆರೆಯ ವಾಣಿಜ್ಯ ಸಂಘವು ಸಂಯುಕ್ತ ಕರ್ನಾಟಕ ಪ್ರಾಂತ್ಯದ ಚಳವಳಿಗೆ

ಸಹಾಯ ಮಾಡುವುದಕ್ಕಾಗಿ ಕರ್ನಾಟಕ ಪ್ರಾಂತ್ಯದ ಕಾಂಗ್ರೆಸ್ ಸಮಿತಿಗೆ ಹತ್ತು ಲಕ್ಷ ರೂಪಾಯಿಗಳ ನಿಧಿಯನ್ನು ಕೂಡಿಸಿಕೊಡಬೇಕೆಂದು ನಿರ್ಧರಿಸಿತ್ತು. ಅವರು ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದ ಜೊತೆಗೆ ಕರ್ನಾಟಕ ಏಕೀಕರಣಕ್ಕಾಗಿ ಚಿತ್ರದುರ್ಗವನ್ನು ಕೇಂದ್ರ ಮಾಡಿಕೊಂಡು ಹೋರಾಟ ಮಾಡುತ್ತಿದ್ದ ಪ್ರಮುಖರಾಗಿದ್ದರೆಂಬುದನ್ನು ಈಗಾಗಲೇ ವಿವರಿಸಲಾಗಿದೆ. ಅನೇಕ ವರ್ಷಗಳಿಂದಲೂ ನಡೆದು ಬಂದ ಹಾಗೂ ಸರ್ವರಿಗೂ ಸಮ್ಮತವಾಗಿದ್ದ ಕರ್ನಾಟಕ ಏಕೀಕರಣಕ್ಕೆ ಕೆಲವರಿಂದ ಉಂಟಾಗಬಹುದಾದ ತೊಂದರೆಯನ್ನು ಗಮನಿಸಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರು ಚಿತ್ರದುರ್ಗದಲ್ಲಿ ಒಂದು ಹೇಳಿಕೆ ನೀಡಿದರು. ಆ ಹೇಳಿಕೆಯಲ್ಲಿ "ದ್ವಿಕರ್ನಾಟಕವನ್ನು ಸಕಾರಣವಾಗಿ ಖಂಡಿಸಿದ್ದರು. ಎರಡು ಕರ್ನಾಟಕಗಳಿರಬೇಕೆಂಬುದು ತರ್ಕಬದ್ಧವೂ ಅಲ್ಲ, ಜಾಣತನದ್ದೂ ಅಲ್ಲ, ವ್ಯವಹಾರಿಕವೂ ಅಲ್ಲ" ಎಂದು ಅವರು ಸಾರಿ ಹೇಳಿದರು. ಉತ್ತರ ಪ್ರದೇಶವೊಂದರಲ್ಲೇ ಆರು ಕೋಟಿ ಜನರಿರುವುದು ಸಾಧ್ಯವಿದ್ದ ಮೇಲೆ ಅಖಂಡ ಕರ್ನಾಟಕದಲ್ಲಿ ಸುಮಾರು ಮೂರುಕೋಟಿ ಜನರಿರುವುದು ಏಕೆ ಸರಿಯಲ್ಲವೆಂದು ಅವರು ಪ್ರಶ್ನಿಸಿದ್ದರು. ಎಸ್. ನಿಜಲಿಂಗಪ್ಪನವರು ಮೈಸೂರು ಪ್ರಾಂತ್ಯದಲ್ಲಿ ಸಂಚರಿಸಿ ಕರ್ನಾಟಕ ಏಕೀಕರಣಕ್ಕೆ ಪರವಾಗಿದ್ದ ವಿಧಾನ ಸಭೆ, ವಿಧಾನ ಪರಿಷತ್ತು ಮತ್ತು ಮೈಸೂರು ಪ್ರಾಂತ್ಯ ಕಾಂಗ್ರೆಸ್ ಸದಸ್ಯರ ಸಹಿ ಸಂಗ್ರಹಿಸಿದರು. ನಂತರ ಎಸ್. ನಿಜಲಿಂಗಪ್ಪ, ಬಿ. ಶಿವಮೂರ್ತಿಶಾಸ್ತ್ರೀ, ಸಿ.ಆರ್. ಬಸಪ್ಪನವರೊಂದಿಗೆ ಮೈಸೂರು ಸರಕಾರಕ್ಕೆ ಒಂದು ಭಿನ್ನವತ್ತಳೆಯನ್ನು ಅರ್ಪಿಸಿದರು. ಅದರಲ್ಲಿ ಕರ್ನಾಟಕ ಏಕೀಕರಣಕ್ಕೆ ಸರ್ವಪಕ್ಷಗಳು ಒಂದಾಗಿ ಒಗ್ಗಟ್ಟಿನಿಂದ ಹೋರಾಡುವುದು, ಅದಕ್ಕೆ ಮೈಸೂರು ಸರಕಾರದ ಬೆಂಬಲವು ಇರಬೇಕೆಂಬುದಾಗಿತ್ತು.[೮೯]

ಎಸ್. ನಿಜಲಿಂಗಪ್ಪ, ಎ.ಭೀಮಪ್ಪನಾಯಕ, ಟಿ.ಸಿದ್ಧಲಿಂಗಯ್ಯ ಮುಂತಾದವರು ಸೇರಿ ದೆಹಲಿಗೆ ಹೋಗಿ ಕೇಂದ್ರನಾಯಕರನ್ನು ನೋಡಿ ಕರ್ನಾಟಕ ಏಕೀಕರಣ ಸಮಸ್ಯೆಯನ್ನು ಪರಿಶೀಲಿಸಲು, ತೀರ್ಮಾನಿಸಿದರು, ನಂತರ ೧೯೪೮ರ ಜನವರಿಯಲ್ಲಿ ಎಸ್.ನಿಜಲಿಂಗಪ್ಪನವರ ನೇತೃತ್ವದಲ್ಲಿ ದೆಹಲಿಗೆ ತೆರಳಿದರು. ಅಲ್ಲಿ ಡಾ.ರಾಜೇಂದ್ರಪ್ರಸಾದ್, ಪಂಡಿತ್‌ನೆಹರು, ಸರ್ದಾರ್ ವಲ್ಲಭಾಯಿ ಪಟೇಲ್ ಮುಂತಾದವರನ್ನು ಭೇಟಿ ಮಾಡಿದರು. ಆಂಧ್ರ ಪ್ರಾಂತ್ಯದ ಜೊತೆಗೆ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕೆಂದು ಅವರನ್ನು ಎಸ್.ನಿಜಲಿಂಗಪ್ಪನವರ ನಿಯೋಗ ಒತ್ತಾಯಿಸಿತ್ತು.[೯೦]

ಚಿತ್ರದುರ್ಗ ಜಿಲ್ಲೆಯಲ್ಲಿ ಎಸ್.ನಿಜಲಿಂಗಪ್ಪನವರ ಜೊತೆಯಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಪ್ರಮುಖರಲ್ಲಿ ಹೆಚ್.ಕೆ.ಸಿದ್ಧವೀರಪ್ಪ, ದಾವಣಗೆರೆಯ ಗಂಜಿ ವೀರಪ್ಪ, ಕೆ.ವೀರಭದ್ರಪ್ಪ ಎಣ್ಣೆಕೊಪ್ಪದ ಮಲ್ಲಿಕಾರ್ಜುನಪ್ಪಗೌಡ್ರು ಪ್ರಮುಖ ಪಾತ್ರವಹಿಸಿದರು. ಅದರಲ್ಲಿ ಹೆಚ್. ಸಿದ್ಧವೀರಪ್ಪ ಕರ್ನಾಟಕದ ಏಕೀಕರಣಕ್ಕೋಸ್ಕರ ಅವಿರತವಾಗಿ ದುಡಿದ ವ್ಯಕ್ತಿಯಾಗಿದ್ದಾರೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ೧೯೪೮ರ ಜನವರಿಯಲ್ಲಿ ಹರಿಹರದ ತುಂಗಭದ್ರಾ ನದಿಯ ತೀರದಲ್ಲಿ ಎಚ್.ಸಿದ್ಧಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಈ ಸಭೆಯಲ್ಲಿ ಮೈಸೂರು ಅರಸರ ಮುಂದಾಳತ್ವದಲ್ಲಿ ಮೈಸೂರು ಕರ್ನಾಟಕ ಪ್ರದೇಶವನ್ನು ನಿರ್ಮಿಸುವ ಆಲೋಚನೆ ಮಾಡಿದರು. ಅಂದಿನ ಮೈಸೂರು ಕಾಂಗ್ರೆಸ್ ನಾಯಕರಲ್ಲಿ ಬಿ.ಶಿವಮೂರ್ತಿಶಾಸ್ತ್ರಿಗಳು,ಟಿ.ಸುಬ್ರಹ್ಮಣ್ಯಂ, ಎಸ್.ನಿಜಲಿಂಗಪ್ಪ ಮೊದಲಾದ ನಾಯಕರು ಅದನ್ನು ಪ್ರೋತ್ಸಾಹಿಸಿದರು. ಇವರೆಲ್ಲರೂ ಸೇರಿ ಮೈಸೂರಿನ ನೇತೃತ್ವದಲ್ಲಿಯೇ ಕರ್ನಾಟಕ ರಾಜ್ಯ ರಚನೆಯಾಗಬೇಕೆಂದು ದೃಢ ನಿರ್ಧಾರ ಹೊಂದಿದ್ದರು. ಈ ಸಂದರ್ಭವನ್ನು ಪಾಟೀಲಕಲ್ಲನಗೌಡ ಹೀಗೆ ವಿವರಿಸಿದ್ದಾರೆ. "ಎಸ್.ನಿಜಲಿಂಗಪ್ಪನವರು ಮೈಸೂರು ನಾಯಕರ ಮನವೊಲಿಸಲು ಸತತವಾಗಿ ಪ್ರಯತ್ನಿಸುತ್ತಿದ್ದರು. ಅವರ ಧೋರಣೆಯ ಗುರಿಯನ್ನು ಬಲವಾಗಿ ವಿರೋಧಿಸುತ್ತಿದ್ದುದು ಅಸ್ವಾಭಾವಿಕವೇನು ಆಗಿರಲಿಲ್ಲ. ಹೈದ್ರಾಬಾದಿನ ಕನ್ನಡಿಗರು ಸಹ ಅವರ ನೀತಿಗೆ ವಿರೋಧವಾಗಿದ್ದರು. ಮೈಸೂರನ್ನು ತಮ್ಮ ನಿಲುವಿಗೆ ಒಪ್ಪಿಸುವುದು ಎಸ್. ನಿಜಲಿಂಗಪ್ಪನವರಿಗೆ ತಾವು ತಿಳಿದುಕೊಂಡಷ್ಟು ಸುಲಭವಾಗಿರಲ್ಲಿಲ್ಲ. ಮೈಸೂರಿನ ಸಂಸ್ಕೃತಿಯೂ ಇತರರಿಗಿಂತಲೂ ಮೇಲ್ಮಟ್ಟದು, ಭಿನ್ನವಾದುದು ಆಗಿರುವುದರಿಂದ ಅದು ಪ್ರತ್ಯೇಕವಾದ ಸ್ಥಾನದಲ್ಲಿರಬೇಕು ಎಂಬುದೇ ಮೊದಲಾದ ವಿಚಾರಗಳಿಂದ ಭಿನ್ನತೆ ಹೆಚ್ಚಿತು. ಕೊಡಗು ಪ್ರದೇಶವನ್ನು ಮೈಸೂರಿನಲ್ಲಿ ಸೇರಿಸಿಕೊಳ್ಳಬಹುದೆಂದು ಹೇಳುತ್ತಿದ್ದರು. ಹಾಗೆಯೇ ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳೆರಡನ್ನು ಸೇರಿಸಿಕೊಳ್ಳಬಹುದೆಂದು ಹೇಳುತ್ತಿದ್ದರು. ಉತ್ತರಕನ್ನಡದಲ್ಲಿ ಅತಿ ಹೆಚ್ಚು ಜನ ಸಂಖ್ಯೆಯನ್ನು ಹೊಂದಿರುವ ಲಿಂಗಾಯತರು ಏಕೀಕರಣ ಸಾಧಿಸುವ ಮೂಲಕ, ತಮ್ಮ ಕೈಯಲ್ಲೇ ಅಖಂಡ ಕರ್ನಾಟಕ ಸೂತ್ರವನ್ನು ಕೇಂದ್ರೀಕರಿಸುವ ಪ್ರಯತ್ನದಲ್ಲಿದ್ದಾರೆಂದು ಕೆಲವರು ಆರೋಪಿಸುತ್ತಿದ್ದರು. ಆದ್ದರಿಂದ ಮೈಸೂರು ಕರ್ನಾಟಕ ಮತ್ತು ಉತ್ತರ ಕರ್ನಾಟಕಗಳೆಂಬ ಎರಡು ಪ್ರತ್ಯೇಕ ಕರ್ನಾಟಕಗಳಾಗಲೆಂದು ಕೆಲವರು ಪ್ರತಿಪಾದಿಸುತ್ತಿದ್ದರು" ಎಂದಿದ್ದಾರೆ.[೯೧] ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಹಲವು ಎಡರುತೊಡರುಗಳು ಬಂದರು ಎಸ್.ನಿಜಲಿಂಗಪ್ಪನವರು ಕೊನೆಯವರೆಗೂ ಅಖಂಡ ಕರ್ನಾಟಕ ನಿರ್ಮಿಸುವತ್ತ ತಮ್ಮ ಗಮನಹರಿಸಿದ್ದರು.

ಕರ್ನಾಟಕ ಪ್ರಾಂತ್ಯ ನಿರ್ಮಾಣದ ಬೇಡಿಕೆಯನ್ನು ಕೇಂದ್ರದ ವರಿಷ್ಠರ ಮುಂದಿಟ್ಟು ಚರ್ಚಿಸಲು ೧೯೪೯ರ ಅಕ್ಟೋಬರ್‌ನಲ್ಲಿ ಒಂದು ನಿಯೋಗವು ಕೆ.ಎಂ.ರುದ್ರಪ್ಪನವರ ನೇತೃತ್ವದಲ್ಲಿ ದೆಹಲಿಗೆ ಹೋದರು. ದೆಹಲಿಯಲ್ಲಿ ವರಿಷ್ಠರನ್ನು ಕಂಡು ಮಾತುಕತೆ ನಡೆಸಿದರು. ಆದರೆ ಯಾರಿಂದಲೂ ಸ್ಪಷ್ಟ ಉತ್ತರ ದೊರೆಯಲಿಲ್ಲ. ಸರ್ದಾರ್ ಪಟೇಲರು ಮಾತ್ರ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕಾದರೆ ಮೈಸೂರು ಸಂಸ್ಥಾನ ವಿಲೀನವಾಗಬೇಕು ಎಂದರು.[೯೨] ಹೀಗೆ ಎಸ್.ನಿಜಲಿಂಗಪ್ಪನವರು ಕರ್ನಾಟಕದ ಇತರ ನಾಯಕರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಲು ಅವರಿಗೂ ಜವಾಬ್ದಾರಿ ನೀಡುವ ಮೂಲಕ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.[೯೩]

ದಾವಣಗೆರೆಯಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆ

ಕರ್ನಾಟಕದ ಈ ಭಾಗದ ಜನತೆಯ ಉತ್ಸಾಹ ಹಾಗೂ ಕಟ್ಟಾ ಅಭಿಮಾನವನ್ನು ಮನಗಂಡು, ಅಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆ ಹಾಗೂ ಕರ್ನಾಟಕ ಏಕೀಕರಣ ಮಹಾಸಮಿತಿಯ ಅಧ್ಯಕ್ಷರಾಗಿದ್ದ ಎಸ್.ನಿಜಲಿಂಗಪ್ಪನವರು ೧೯೪೯ರ ನವೆಂಬರ್ ತಿಂಗಳಲ್ಲಿ ದಾವಣಗೆರೆಯಲ್ಲಿ ಕರ್ನಾಟಕ ಪ್ರಾಂತೀಯ ಸಮಿತಿಯ ಸಭೆಯನ್ನು ಕರೆದರು. ಕರ್ನಾಟಕದ ಎಲ್ಲಾ ಭಾಗದಿಂದ ಮೈಸೂರು ಹಾಗೂ ಹೈದರಾಬಾದ್ ಸಂಸ್ಥಾನಸಹಿತ ಎಲ್ಲ ಜನತೆಯು ಆ ಸಭೆಯಲ್ಲಿ ಭಾಗವಹಿಸಿದ್ದರು. ಅಲ್ಲಿ ಕೆಳಕಂಡ ನಿರ್ಣಯವನ್ನು ಕೈಗೊಳ್ಳಲಾಯಿತು. ಮೈಸೂರು ಮಹಾರಾಜರನ್ನು ಸಂವಿಧಾನಾತ್ಮಕ ಮುಖ್ಯಸ್ಥರನ್ನಾಗಿ ಮಾಡಿ ಮೈಸೂರು ಪ್ರದೇಶದೊಳಗೆ ಬಾಂಬೆ ಕರ್ನಾಟಕ ಹೈದ್ರಬಾದ್ ಕರ್ನಾಟಕ ಪ್ರದೇಶವನ್ನು ವಿಲೀನಗೊಳಿಸಿ. ಅಖಂಡ ಕರ್ನಾಟಕ ರಚಿಸಬೇಕೆಂದು ಈ ಸಮ್ಮೇಳನ ಒತ್ತಾಯಿಸಿತು.[೯೪]

ಕರ್ನಾಟಕ ಪ್ರಾಂತ್ಯರಚನೆಯಲ್ಲಿ ವಿಳಂಬ ಮಾಡುತ್ತಿರುವುದರಿಂದ ಕೇಂದ್ರ ಮತ್ತು ಪ್ರಾಂತ್ಯ ಶಾಸನ ಸಭೆಯ ಕನ್ನಡಿಗರು ರಾಜೀನಾಮೆ ನೀಡುವುದು ಇಲ್ಲವೇ ಪ್ರತಿಭಟಿಸಲು ನಿರ್ಧರಿಸಿದರು. ಪ್ರಾಂತ್ಯ ರಚನೆಯ ಬಗೆಗೆ ಕೇಂದ್ರ ಸರ್ಕಾರ ಘೋಷಣೆ ಮಾಡದಿದ್ದರೆ, ಅನ್ಯಮಾರ್ಗವಿಲ್ಲದೆ ರಾಜೀನಾಮೆ ನೀಡಬೇಕಾಗುತ್ತದೆ. ಅದಕ್ಕೆ ಕಾಂಗ್ರೆಸ್ ವರಿಷ್ಠ ಮಂಡಳಿ ಅನುಮತಿ ನೀಡಬೇಕೆಂಬ ಗೊತ್ತುವಳಿಯು ಸ್ವೀಕೃತವಾಯಿತು. ಆ ಗೊತ್ತುವಳಿಯ ಪ್ರಕಾರ ೧೯೫೦ ಜನವರಿ ೧೪ರಂದು ಎಸ್. ನಿಜಲಿಂಗಪ್ಪನವರು ಕಾಂಗ್ರೆಸ್ ವರಿಷ್ಠರನ್ನು ಸಂಪರ್ಕಿಸಿ ರಾಜೀನಾಮೆ ಸಲ್ಲಿಕೆಗೆ ಅನುಮತಿ ಕೇಳಿದರು.

ಆಗ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಡಾ.ಬಾಬುರಾಜೇಂದ್ರಪ್ರಸಾದರು ಕರ್ನಾಟಕದ ಬಗೆಗೆ ಯಾರಿಗೂ ಭೇದಭಾವನೆಯಿಲ್ಲವೆಂದು ತಿಳಿಸಿ ರಾಜೀನಾಮೆಗೆ ಅನುಮತಿ ನೀಡಲಿಲ್ಲ.

ಕಾಂಗ್ರೆಸ್ ಪಕ್ಷ ೧೯೫೧ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯ ತನ್ನ ಪ್ರಣಾಳಿಕೆಯಲ್ಲಿ ಭಾಷಾವಾರು ಪ್ರಾಂತ್ಯ ರಚನೆ ತನ್ನ ಮುಖ್ಯಗುರಿಗಳಲ್ಲಿ ಒಂದು, ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದಿತು. ಆದರೆ ತನ್ನ ಭರವಸೆಯನ್ನು ಈಡೇರಿಸಲು ಯಾವುದೇ ಕ್ರಮಕೈಗೊಳ್ಳಲಿಲ್ಲ. ಇದನ್ನು ಗಮನಿಸಿ ಕರ್ನಾಟದಲ್ಲಿ ಕೆ.ಆರ್.ಕಾರಂತ ಅವರ ಅಧ್ಯಕ್ಷತೆಯಲ್ಲಿ 'ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು' ಎಂಬ ಸಂಸ್ಥೆ ಸ್ಥಾಪಿತವಾಯಿತು. ಇದು ಕರ್ನಾಟಕದ ಏಕೀಕರಣ ಹೋರಾಟಕ್ಕೆ ಪುನಃ ಕರೆ ನೀಡಿತ್ತು. ಈ ಪರಿಷತ್ತಿನಲ್ಲಿದ್ದ ನಾಯಕರೆಂದರೇ ಕೆ.ಆರ್.ಕಾರಂತ, ಜಿನರಾಜ ಹೆಗ್ಡೆ, ಎಸ್.ನಿಜಲಿಂಗಪ್ಪ, ಅಳವಂಡಿ ಶಿವಮೂರ್ತಿಸ್ವಾಮಿ ಮುಂತಾದವರಿದ್ದರು.

ನಂತರ ಕಾಂಗ್ರೆಸ್ ವರಿಷ್ಠರ ಮಾತಿಗೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದಿಯಾಗಿ ಎಲ್ಲರ ಒಪ್ಪಿಗೆಯಿತ್ತು. ಕರ್ನಾಟಕ ರಾಜ್ಯ ರಚನೆಯನ್ನು ಪ್ರತ್ಯೇಕವೆಂದು ಪರಿಗಣಿಸದೆ ರಾಜ್ಯ ಪುನರ್ವಿಂಗಡಣೆಯ ಸಂದರ್ಭದಲ್ಲಿಯೇ ತೀರ್ಮಾನಿಸುವುದಾಗಿ ಪ್ರಧಾನ ಮಂತ್ರಿ ನೆಹರು ಹೇಳುತ್ತಲೇ ಇದ್ದರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಎಸ್.ನಿಜಲಿಂಗಪ್ಪನವರು ಸಮಯ ದೊರೆತಾಗಲೆಲ್ಲ ನೆಹರೂ ಅವರನ್ನು ಭೇಟಿಯಾಗಿ ಏಕೀಕರಣ ವಿಷಯ ಪ್ರಸ್ತಾಪಿಸುತ್ತಲೇ ಇದ್ದರು. ಎಸ್. ನಿಜಲಿಂಗಪ್ಪನವರು ೧೯೫೩ ಜೂನ್ ೧೫ರಂದು ಅವರ ಪತ್ರಕ್ಕೆ ನೆಹರೂ ಉತ್ತರಿಸುತ್ತ '೧೯೫೩ ಸೆಪ್ಟೆಂಬರ್ ೨೦ರಲ್ಲಿ ಕರ್ನಾಟಕ ರಾಜ್ಯ ರಚನೆಯು ಸುಲಭವಾಗಿದೆ. ಬೇರೆ ಬೇರೆ ಕಾರಣಗಳಿಂದ ಆ ಬಗ್ಗೆ ನಿರ್ಧಾರ ಕೈಗೊಳ್ಳಲು ತಡವಾಗಿದೆ. ಮೈಸೂರು ಏಕೀಕರಣಕ್ಕೆ ಯಾವ ಅಡ್ಡಿ ಆತಂಕವೂ ಈಗಿಲ್ಲ. ಯಾವುದೇ ಪ್ರಾಂತ ರಚನೆಯನ್ನು ಪ್ರತ್ಯೇಕವಾಗಿ ನಿರ್ಧರಿಸುವ ಬದಲು ಎಲ್ಲಾ ಪ್ರಾಂತ್ಯಗಳ ಸಮಸ್ಯೆಗಳನ್ನು ಒಮ್ಮೆಗೆ ಬಗೆಹರಿಸುವುದು ಸೂಕ್ತವೆಂದು ವಿಶಿಷ್ಟಾಧಿಕಾರವುಳ್ಳ ಪ್ರಾಂತ್ಯ ಪುನರ್ವಿಂಗಡಣಾ ಸಮಿತಿಯನ್ನು ಈ ವರ್ಷದ ಕೊನೆಗೆ ರಚಿಸಲಾಗುವುದೆಂದು' ತಿಳಿಸಿದರು. ಕರ್ನಾಟಕದಲ್ಲಿ ಏಕೀಕರಣಕ್ಕೆ ಧ್ವನಿ ಎತ್ತದಂತೆ ಮಾಡಲು ನೆಹರೂ ಅವರ ಪತ್ರ ಮಾತ್ರ ಯಶಸ್ವಿಯಾಗಿತ್ತು. ಕಾಂಗ್ರೆಸಿಗರ ಪೈಕಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರು ಮಾತ್ರ ಏಕೀಕರಣಕ್ಕೆ ಶ್ರಮಿಸುತ್ತಿದ್ದಾರೆಂದು ಭಾವಿಸುವ

ಕಾಲ ಬಂದಿತೆಂದು ಕಾಂಗ್ರೆಸ್ಸೇತರ ಕೆಲವು ನಾಯಕರ ಮಾತುಗಳಿಂದ ಗ್ರಹಿಸಬಹುದಾಗಿದೆ. ಏಕೆಂದರೆ ಎಸ್.ನಿಜಲಿಂಗಪ್ಪನವರು ಕಾಂಗ್ರೆಸ್ ಪಕ್ಷದ ಮತ್ತು ವಿರೋಧ ಪಕ್ಷದ ನಾಯಕರ ಜೊತೆಯೂ ಏಕೀಕರಣ ಕುರಿತು ಚರ್ಚಿಸಿದ್ದರು. ಹಾಗೆಯೇ ಉತ್ತರ ಕರ್ನಾಟಕದ ನಾಯಕರೊಂದಿಗೂ ಸ್ವಾತಂತ್ರ್ಯ ಹೋರಾಟದ ಕಾಲಾವಧಿಯಿಂದಲೂ ಸಂಪರ್ಕ ಹೊಂದಿದ್ದರು.[೬೫] ಹಿಗಾಗೀ ಏಕೀಕರಣ ವೇಳೆಯಲ್ಲಿ ಸಮಗ್ರ ಕರ್ನಾಟಕವನ್ನು ಎಸ್.ನಿಜಲಿಂಗಪ್ಪನವರು ಪ್ರತಿನಿಧಿಸಿದ್ದರೆಂಬುದು ಗಮನಾರ್ಹ. ೧೯೫೩ನೇ ಅಕ್ಟೋಬರ್ ೧ರಿಂದ ಪ್ರತ್ಯೇಕ ಆಂಧ್ರ ರಾಜ್ಯವು ಅಸ್ತಿತ್ವದಲ್ಲಿ ಬಂದುದರ ಪರಿಣಾಮವಾಗಿ ಕನ್ನಡಿಗರ ಮೇಲೆ ಪ್ರಭಾವ ಬೀರಿತು. ನಂತರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು 'ಉಗ್ರ ಹೋರಾಟ' ಮಾಡಲು ನಿರ್ಧರಿಸಿತು.

೧೯೫೪ರ ಮೇ ತಿಂಗಳು ೨೮-೨೯ರಲ್ಲಿ ದಾವಣಗೆರೆಯಲ್ಲಿ ಸರ್ವಪಕ್ಷದ ಸಮ್ಮೇಳನದಲ್ಲಿ ಸಭೆ ಸೇರಿ ಕಾಂಗ್ರೆಸಿನ ನಾಯಕತ್ವದಲ್ಲಿ ಹೋರಾಡಲು ನಿರ್ಧರಿಸಿತು. ಅಷ್ಟರಲ್ಲಿ ಸ್ಥಾಪಿತವಾಗಿದ್ದ, ಕೇಂದ್ರ ಸರಕಾರ ೧೯೫೩ ಡಿಸೆಂಬರ್ ೨೨ರಂದು ರಾಜ್ಯ ಪುನರ್ವಿಂಗಡಣ ಸಮಿತಿಯನ್ನು ಸೈಯದ್ ಫಜಲ್ ಅಲಿ ಅಧ್ಯಕ್ಷತೆಯಲ್ಲಿ ತ್ರಿಸದಸ್ಯರ ಸಮಿತಿಯನ್ನು ರಚಿಸಿತು. ಈ ಸಮಿತಿಯಲ್ಲಿ ಎಚ್.ಎನ್.ಕುಜ್ರು ಮತ್ತು ಕೆ.ಎಂ.ಫಣೀಕ್ಕರ್ ಸದಸ್ಯರಾಗಿ ನೇಮಕಗೊಂಡರು. ಈ ಸಮಿತಿಯೂ ಭಾರತದ ಎಲ್ಲಾ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ ಸಾವಿರಾರು ಜನರನ್ನು ಸಂದರ್ಶಿಸಿ ಅವರ ಅಹವಾಲುಗಳನ್ನು ಪರಿಶೀಲಿಸಿ ೧೯೫೫ ಸೆಪ್ಟೆಂಬರ್ ೩೦ರಂದು ತನ್ನ ವರದಿ ಸಲ್ಲಿಸಿತ್ತು. ಫಜಲ್ ಅಲಿ ಸಮಿತಿಯ ಎದುರು ಏಕಮುಖವಾದ ವರದಿ ಮಂಡಿಸಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ರಾಗಿದ್ದ ಎಸ್.ನಿಜಲಿಂಗಪ್ಪನವರಿಗೆ ಅಧಿಕಾರವೀಯುವ ಗೊತ್ತುವಳಿಯನ್ನು ಮಾಡಿದ್ದು, ಒಂದು ವಿಶೇಷವೆಂದೇ ಹೇಳಬೇಕು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರು ಪತ್ರಿಕಾ ಪರಿಷತ್‌ನಲ್ಲಿ ಮಾತನಾಡುತ್ತಾ ಎರಡು ಕರ್ನಾಟಕ, ಎರಡು ಆಂಧ್ರ ಮತ್ತು ಎರಡು ಮಹಾರಾಷ್ಟ್ರಗಳನ್ನು ರಚಿಸಬೇಕೆಂಬ ವಿಚಾರಕ್ಕೆ ತಾವು ವಿರುದ್ಧವಿರುವುದಾಗಿ ಸಾರಿದರು. ಆಡಳಿತದ ಸೌಕರ್ಯದೃಷ್ಟಿಯಿಂದ ಸಹ, ಇದು ವಿಚಾರಕ್ಕೆ ನಿಲುಕದ ಸೂಚನೆಯಾಗಿದೆ ಎಂದು ಹೇಳಿದರು.[೬೬]

ಅದೇ ವೇಳೆಯಲ್ಲಿ ಎಸ್ .ನಿಜಲಿಂಗಪ್ಪನವರು ಸಂದರ್ಶನವೊಂದರಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ ಹೀಗಿದೆ : "ಒಂದು ಕರ್ನಾಟಕ ರಚನೆಯಿಂದ ಮೈಸೂರಿನ ಅಭಿವೃದ್ಧಿಗೆ ಕುಂಠಿತವಾಗುವುದೆಂದು ಮೈಸೂರಿನಲ್ಲಿಯೇ ಭೀತಿಗೊಂಡಿದ್ದಾರೆ. ನನಗೆ ತಿಳಿದಿರುವಂತೆ ಕೆಲವು ನಾಯಕರನ್ನು ಹೊರತುಪಡಿಸಿ

ಉಳಿದ ಕಾಂಗ್ರೆಸಿಗರೆಲ್ಲರೂ ಕರ್ನಾಟಕ ಏಕೀಕರಣಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಇದರಿಂದ ಒಂದು ಕರ್ನಾಟಕ ರಾಜ್ಯ ರಚನೆಗೆ ಅನುಕೂಲಕರವಾಗಿದೆ. ಎರಡೂ ಪ್ರದೇಶಗಳನ್ನು ಚೆನ್ನಾಗಿ ಅರಿತುಕೊಂಡಿರುವ ನಾನು ಮೈಸೂರಿನ ಔದ್ಯಮಿಕ ಪ್ರಗತಿಗೆ ಧಕ್ಕೆಯುಂಟಾಗದೆಂದು ಖಂಡಿತವಾಗಿ ಹೇಳುತ್ತೇನೆ. ಮೈಸೂರಿನ ತಾಂತ್ರಿಕವಿಜ್ಞಾನ ಹಾಗೂ ಹೊರಗಿನ ಫಲವತ್ತಾದ ಪ್ರದೇಶವು ದೊರೆತು ಎರಡು ಪ್ರದೇಶದ ಜನರಿಗೆ ಆಡಳಿತ ದೃಷ್ಟಿಯಿಂದ ಅನುಕೂಲವಾಗುವುದು. ಮೈಸೂರಿನಲ್ಲಿಯ ವಿಚಾರವಂತ ಜನರು ಒಂದು ಕರ್ನಾಟಕ ರಾಜ್ಯ ನಿರ್ಮಾಣವು ಸರಿಯೆಂಬ ಅಭಿಪ್ರಾಯಕ್ಕೆ ಬರತೊಡಗಿದ್ದಾರೆ. ಮೈಸೂರಿನ ವರಿಷ್ಠ ಮಂಡಳಿಯು ಈ ಅಂಶವನ್ನು ಅರಿತುಕೊಳ್ಳಬೇಕಾಗಿದೆ ಎಂದು ವಿವರಿಸಿದ್ದರು.

ಮೈಸೂರಿನ ಹಿತ ದೃಷ್ಟಿಯಿಂದಲೂ ಒಂದು ಕರ್ನಾಟಕ ರಾಜ್ಯವಾಗಬೇಕೆಂದು ಹೇಳಿದರು. ಮೈಸೂರು ಪ್ರದೇಶ ಕಾಂಗ್ರೆಸಿನ ಕಾರ್ಯಸಮಿತಿ ಹಾಗೂ ಸಾಧಾರಣ ಸಭೆಗಳು ಈ ಬಗ್ಗೆ ಅವಿರೋಧ ನಿರ್ಣಯ ಸ್ವೀಕರಿಸುತ್ತವೆಂದು ನಾನು ನಿರೀಕ್ಷಿಸಿದ್ದೇನೆ ಎಂದರು. ಎಸ್. ನಿಜಲಿಂಗಪ್ಪನವರು ಸ್ವಾತಂತ್ರ್ಯ ಚಳವಳಿಯ ವೇಳೆಯಲ್ಲಿ ಬಾಂಬೆ ಕರ್ನಾಟಕದ ಕಾಂಗ್ರೆಸ್‌ನೊಂದಿಗೆ ಮತ್ತು ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ನಿಕಟಸಂಬಂಧವನ್ನು ಇಟ್ಟುಕೊಂಡಿದ್ದರು. ಸ್ವಾತಂತ್ರ್ಯ ಚಳವಳಿಯ ಪ್ರಚಾರಕ್ಕಾಗಿ ಮುಂಬೈ-ಕರ್ನಾಟಕ ಪ್ರದೇಶದಲ್ಲಿ ಅನೇಕ ಸಾರಿ ಅವರು ಸಂಚರಿಸಿ ಈ ಭಾಗದ ಕಾರ್ಯಕರ್ತರಲ್ಲಿ ಚೈತನ್ಯವನ್ನು ತುಂಬಿದ್ದರು. ಅವರು ಮುಂಬೈ ಕರ್ನಾಟಕದವರೆನ್ನುವಷ್ಟು ಉತ್ತರಕರ್ನಾಟಕದೊಂದಿಗೆ ನಿಕಟಸಂಬಂಧವನ್ನು ಹೊಂದಿದ್ದರು. ಹೀಗಾಗಿ ಅವರಿಗೆ ಕರ್ನಾಟಕದ ಏಕೀಕರಣದ ಹಾದಿ ಸುಗಮವಾಗಿತ್ತು.[೬೨]

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯೂ ೧೯೫೬ ಫೆಬ್ರವರಿ ೧೯ರಂದು ಎಚ್.ಕೆ.ವೀರಣ್ಣಗೌಡ, ಎಚ್.ಸಿ.ದಾಸಪ್ಪ ಮತ್ತು ಎಂ.ವಿ.ಕೃಷ್ಣಪ್ಪನವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸಭೆ ಸೇರಿ ಪುನಃ ಕರ್ನಾಟಕ ಏಕೀಕರಣವನ್ನು ವಿರೋಧಿಸಿದರು. ಕಾರಣ ಏಕೀಕರಣವಾದಲ್ಲಿ ಲಿಂಗಾಯತರು ರಾಜಕೀಯ ಮೇಲುಗೈ ಪಡೆಯುತ್ತಾರೆಂಬ ಭಯದಿಂದ ಏಕೀಕರಣ ಚಳವಳಿಯನ್ನೇ ವಿರೋಧಿಸಿದ ಎಂ.ವಿ. ಕೃಷ್ಣಪ್ಪನವರಂತಹ ನಾಯಕರ ನಿಷ್ಠುರ ಕಟ್ಟಿಕೊಂಡು ಕರ್ನಾಟಕ ರಾಜ್ಯ ರಚನೆಯನ್ನು ಬೆಂಬಲಿಸುವ ಮೂಲಕ ಎರಡು ಕರ್ನಾಟಕಗಳ ಬಗ್ಗೆ ಮುಖ್ಯವಾಗಿ ತಮ್ಮದೇ ಒಕ್ಕಲಿಗ ಸಮುದಾಯದಿಂದ ಬಂದಿದ್ದ ಕೂಗನ್ನು ಸಮರ್ಥವಾಗಿ ಕೆಂಗಲ್ ಹನುಮಂತಯ್ಯ ಹತ್ತಿಕ್ಕಿದರು.[೬೩] ಇದೇ ವೇಳೆಯಲ್ಲಿ ದಕ್ಷಿಣ

ರಾಜ್ಯಗಳ ಏಕೀಕರಣ ಸಮಿತಿಯ ಮುಂದಾಳತ್ವ ವಹಿಸಿದ್ದ ಕಾರ್ಯಕಾರಿಣಿ ಸಮಿತಿಯ ಸದಸ್ಯರಾದ ಕೆ.ಎಂ.ಫಣೇಕ್ಕರ್ ಈ ನಾಯಕರ ವಾದವನ್ನು ಕಾನೂನು ರೀತಿಯಲ್ಲಿ ಸಂಪೂರ್ಣವಾಗಿ ವಿರೋಧಿಸಿದ ಅವರು ಎಸ್.ನಿಜಲಿಂಗಪ್ಪನವರ ನೇತೃತ್ವದ ಅಖಂಡ ಕರ್ನಾಟಕ ರಚನೆಗೆ ರೂಪರೇಷೆ ನೀಡಿದರು.

ಎಸ್. ನಿಜಲಿಂಗಪ್ಪನವರು ಹೈದರಾಬಾದ್ ಕರ್ನಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಭಾಷೆ, ಭೌಗೋಳಿಕ ಹಾಗೂ ಆರ್ಥಿಕತೆ ಆಧಾರದ ಮೇಲೆ ಬಳ್ಳಾರಿಯನ್ನು ಕರ್ನಾಟಕದಲ್ಲಿ ವಿಲೀನಗೊಳಿಸಬೇಕೆಂದು ಪ್ರಬಲವಾಗಿ ವಾದಿಸಿದ್ದರು. ಸ್ವಾಮಿ ರಮಾನಂದತೀರ್ಥರೊಂದಿಗೆ ಎಸ್. ನಿಜಲಿಂಗಪ್ಪನವರು ಬಹಳ ವರ್ಷಗಳ ಕಾಲ ಸ್ನೇಹ ಬೆಳೆಸಿ ಕೊಂಡವರು. ಹೀಗಾಗಿ ಎಲ್ಲ ಪ್ರದೇಶದ ನಾಯಕರುಗಳು ಇವರ ಮುಂದಾಳತ್ವದಲ್ಲಿ ನಂಬಿಕೆ ಇಟ್ಟಿದ್ದು, ಏಕೀಕರಣಕ್ಕಾಗಿ ಪ್ರಯತ್ನಿಸಿದರು.[೯೯]

ಸುಮಾರು ಅರ್ಧಶತಮಾನಕಾಲಕ್ಕೂ ಹೆಚ್ಚು ಈ ದೇಶದ ಆಗುಹೋಗುಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಎಸ್.ನಿಜಲಿಂಗಪ್ಪನವರ ಬದುಕಿನ ಬಹುದೊಡ್ಡ ಸಾಧನೆ ಎಂದರೆ ಕರ್ನಾಟಕದ ಏಕೀಕರಣಕ್ಕಾಗಿ ನಿರಂತರವಾಗಿ ಧ್ವನಿ ಎತ್ತಿದ್ದು. ೧೯೫೨ ರಿಂದ ೫೬ರವರೆಗೆ ಚಿತ್ರದುರ್ಗ ಲೋಕಸಭಾ ಸದಸ್ಯರಾಗಿದ್ದ ಅವರು ತಮ್ಮ ಏಕೀಕೃತ ಕರ್ನಾಟಕದ ಕನಸಿಗೆ ಅನೇಕ ಅಡ್ಡಿ ಅಡಚಣೆಗಳು ಬಂದರೂ ಎದೆಗುಂದಲಿಲ್ಲ. ಸಂಸತ್ತಿನಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಅಗತ್ಯವನ್ನು ಅವರು ಸತತವಾಗಿ ಪ್ರಸ್ತಾಪಿಸಿದರು.[೧೦೦]

ಕರ್ನಾಟಕ ಏಕೀಕರಣಕ್ಕೆ ಸ್ಥಳೀಯ ಮತ್ತು ರಾಷ್ಟ್ರೀಯ ಪತ್ರಿಕೆಗಳು ಮಹತ್ವ ನೀಡಿದವು. ಎಸ್. ನಿಜಲಿಂಗಪ್ಪನವರ ದೃಢ ನಿಶ್ಚಯ, ತಾಳ್ಮೆ, ಚಾಣಾಕ್ಷತನ ಮತ್ತು ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣ ಚಳವಳಿಯ ನೇತೃತ್ವಗಳ ಪರಿಣಾಮವಾಗಿ ಸುಮಾರು ಅನೇಕ ವರ್ಷಗಳ ಹೋರಾಟದ ನಂತರ ಐದು ತುಂಡುಗಳಲ್ಲಿ ಹಂಚಿಹೋಗಿದ್ದ ಕನ್ನಡನಾಡು ೧೯೫೬ರ ನವೆಂಬರ್ ೧ರಂದೇ ಅಸ್ತಿತ್ವಕ್ಕೆ ಬಂದಿತು. ಅನಂತರ ಏಕೀಕೃತ ಮೈಸೂರು ರಾಜ್ಯದ ಪ್ರಥಮ ಮುಖ್ಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ನಾಡಿನ ಬಹುತೇಕ ಪತ್ರಿಕೆಗಳು ಏಕೀಕರಣ ನಾಯಕನೆಂದೇ ಅವರನ್ನು ಬಣ್ಣಿಸಿದ್ದವು.

ಅಡಿಟಿಪ್ಪಣಿ

೧. ಎಂ.ಎನ್.ಶ್ರೀನಿವಾಸ್, **ಕ್ಯಾಸ್ಟ್ ಇನ್ ಮಾಡ್ರನ್ ಇಂಡಿಯಾ,** ಏಶಿಯನ್ ಪಬ್ಲಿಷಿಂಗ್ ಹೌಸ್, ಮುಂಬಯಿ, ೧೯೬೨, ಪು. ೩೨-೩೩

೨. ಎಸ್. ಶಂಕರನಾರಾಯಣರಾವ್ **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು,** ನವಕರ್ನಾಟಕ, ಬೆಂಗಳೂರು, ೧೯೯೧, ಪು. ೭೯

೩. ಜಿ. ಎಸ್. ಹಾಲಪ್ಪ **ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ,** ಸಂಪುಟ-೨, ಮೈಸೂರು ಸರಕಾರ ಬೆಂಗಳೂರು, ೧೯೬೪, ಪು. ೩೪೬-೩೫೫

೪. ಇ. ಎಂ. ಮಂಜುನಾಥ, ***ಪತ್ರಿಕೋದ್ಯಮದಲ್ಲಿ ದಾವಣಗೆರೆಯ ಪಾತ್ರ,*** ಕೊಡೆತ್ತೂರು ಸಚ್ಚಿದಾನಂದ ಉಡುಪ (ಸಂ), ದಾವಣಗೆರೆಯ ವಿಶೇಷ, ಅನಂತ ಪ್ರಕಾಶನ, ಸಂಪುಟ-೧, ಸಂಚಿಕೆ-೭, ೧೯೯೬, ಪು.೧೦೭

೫. ಸಿ. ಆರ್. ಗೋವಿಂದರಾಜು **ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ,** ಬೆಂಗಳೂರು, ೧೯೯೮, ಪು. ೧೫೭

೬. ಕಂಚಿಕೇರಿ ಶಿವಣ್ಣ, ***ದಾವಣಗೆರೆಯಲ್ಲಿ ವೃತ್ತಿ ರಂಗಭೂಮಿ,*** ಕೊಡೆತ್ತೂರು ಸಚ್ಚಿದಾನಂದ ಉಡಪ(ಸಂ)., ದಾವಣಗೆರೆಯ ವಿಶೇಷ, ಅನಂತ ಪ್ರಕಾಶನ, ಸಂಪುಟ-೧, ಸಂಚಿಕೆ-೭, ೧೯೯೬, ಪು.೭೯

೭. ಎಸ್. ಎಚ್. ಪಾಟೀಲ, ***ಸ್ವಾತಂತ್ರ್ಯ ಚಳವಳಿ ವಿದಾಯಕ ಕಾರ್ಯ,*** ಕಲಬುರ್ಗಿ ಎಂ.ಎಂ.(ಸಂ), ಕರ್ನಾಟಕದ ಗಾಂಧೀ ಹರ್ಡೇಕರ ಮಂಜಪ್ಪ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೯, ಪು.೨೬೪,೨೬೮,೨೭೫

೮. ಜಿ. ಎಸ್. ಹಾಲಪ್ಪ **ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ,** ಸಂಪುಟ-೨, ಪು.೩೬೦-೩೬೫

೯. ಕೆ. ವೀರತಪ್ಪ **ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ,** ವಿಜಯರವಿ ಪ್ರಕಾಶನ, ಬೆಂಗಳೂರು, ೧೯೭೭, ಪು. ೧೧-೧೨

೧೦. ಸೂರ್ಯನಾಥ ಕಾಮತ್ (ಸಂ), **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಸಂಪುಟ-೨, ಗೀತಾ ಬುಕ್ ಹೌಸ್, ಮೈಸೂರು, ೧೯೭೭, ಪು.೫೧೨

೧೧. ದೇ. ಜವರೇಗೌಡ **ಕರ್ನಾಟಕದ ರೂವಾರಿ** (ಶ್ರೀ ನಿಜಲಿಂಗಪ್ಪನವರ ಜೀವನ ಚರಿತ್ರೆ), ಕಲಾ ಕಂಠೀರವ, ಟಿ. ಕರಿಬಸಯ್ಯ ಟ್ರಸ್ಟ್, ಬೆಂಗಳೂರು, ೧೯೮೫, ಪು.೯೬

೧೨. ಸೂರ್ಯನಾಥ ಕಾಮತ್ (ಸಂ), **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಸಂಪುಟ-೨, ಪು. ೫೨೬

೧೩. ಜಿ. ಎಸ್. ಹಾಲಪ್ಪ **ಹಿಸ್ಟರಿ ಆಫ್ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ,** ಸಂಪುಟ-೨, ಪು. ೬೨೭

೧೪. ಫ್ರಾನ್ಸಿಸ್ ಬುಕಾನನ್ **ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಅಂಡ್ ಮಲಬಾರ್,** ಸಂಪುಟ-೩, ಪು. ೩೩೬

೧೫. **ರಿಪೋರ್ಟ್ ಏನ್ ದಿ ಆಡ್ಮಿನಿಸ್ಟ್ರೇಶನ್ ಆಫ್ ಮೈಸೂರು**(ಕರ್ನಾಟಕ ಸ್ಟೇಟ್ ಆರ್ಕೈವ್ಸ್), ೧೮೭೨-೭೩, ಪು. ೧೧೪

೧೬. ಸೂರ್ಯನಾಥ ಕಾಮತ್ (ಸಂ), **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಸಂಪುಟ-೨, ಪು. ೫೯೧

೧೭. ಪಿ. ಆರ್. ತಿಪ್ಪೇಸ್ವಾಮಿ **ಹೋರಾಟಗಾರ ಕೆಂಚಪ್ಪ,** ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ೧೯೯೭, ಪು.೪೭

೧೮. **ಹಿಂದೂಸ್ಥಾನಿ ಸೇವಾದಳ.** ಎನ್. ಎಸ್. ಹರ್ಡೇಕರರು ೧೯೩೭ರಲ್ಲಿ ಹಿಂದೂಸ್ಥಾನಿ ಸೇವಾದಳವನ್ನು ಸ್ಥಾಪಿಸುವಲ್ಲಿ ಪ್ರಮುಖಪಾತ್ರ ವಹಿಸಿದರು. ಜವಾಹರಲಾಲ್ ನೆಹರೂರವರು ಅದರ ಅಧ್ಯಕ್ಷರಾಗಿಯೂ, ಎನ್.ಎಸ್.ಹರ್ಡೇಕರರು, ಪ್ರಧಾನ ಕಾರ್ಯದರ್ಶಿಯಾಗಿಯೂ ನಿಯುಕ್ತರಾಗಿದ್ದರು. ಇದು ರಾಷ್ಟ್ರೀಯ ಕಾಂಗ್ರೆಸಿನ ಒಂದು ಅಂಗವಾಗಿದ್ದರೂ ಕಾರ್ಯನಿರ್ವಹಣೆಯಲ್ಲಿ ಸ್ವತಂತ್ರ್ಯವಾಗಿತ್ತು. ಇದರ ಮುಖ್ಯ ಉದ್ದೇಶ ಸ್ವಾತಂತ್ರ್ಯ ಚಳವಳಿಗೆ ಸ್ವಯಂಸೇವಕರನ್ನು ತಯಾರುಮಾಡುವುದಾಗಿತ್ತು. ಇದರ ಕೇಂದ್ರ ಕಾರ್ಯಾಲಯ ಹುಬ್ಬಳ್ಳಿಯೇ ಆಗಿತ್ತು. ಆದರೂ ಬಾಗಲಕೋಟೆ, ಬೆಂಗಳೂರು ಮುಂತಾದ ಸ್ಥಳಗಳಲ್ಲಿಯೂ ಇದರ ಶಾಖೆಗಳಿದ್ದವು. ಗಾಂಧೀಜಿಯವರ ಕಾನೂನುಭಂಗ ಚಳವಳಿಯಲ್ಲಿ ಹಿಂದೂಸ್ತಾನಿ ಸೇವಾದಳದ ಕಾರ್ಯಚಟುವಟಿಕೆಯೂ ಪ್ರಮುಖ ಪಾತ್ರವಹಿಸಿತ್ತು.

೧೯. ಕೆ. ರಾಘವೇಂದ್ರರಾವ್ **ರಾಷ್ಟ್ರ ಬಂಧು, ಎಸ್.ನಿಜಲಿಂಗಪ್ಪ ಮ್ಯಾನ್ ಅಂಡ್ ಸ್ಟೇಟ್ ಮ್ಯಾನ್,** ಶ್ರೀ ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್, ಬೆಂಗಳೂರು, ೧೯೯೯, ಪು.೪೬-೪೭

೨೦. **ಸ್ಪೆಶಲ್ ಬ್ರಾಂಚ್, ಆಬ್‌ಸ್ಟ್ರಾಕ್ಟ್ ಫಾರ್ ದಿ ವೀಕ್ ಎಂಡಿಂಗ್,** ಸಾಟರ್‌ಡೇ ೨೭ ಜನವರಿ, ೧೯೩೭, ಚಿತ್ರದುರ್ಗ ಜಿಲ್ಲಾ ಕಛೇರಿ, ಪು.೬೦

೨೧. ಅದೇ, ಪು. ೧೭೫

೨೨. ಅದೇ, ಪು. ೧೮೬

೨೩. **ಹರಿಹರದ ಗುಂಡೂರಾಯರು.** ೧೮೯೩ರಲ್ಲಿ ಹರಿಹರದಲ್ಲಿ ಜನಿಸಿದರು. ವಿದ್ಯಾಭ್ಯಾಸ ಮುಗಿದ ನಂತರ ಚಿತ್ರದುರ್ಗ ಜಿಲ್ಲಾ ಕಛೇರಿಯಲ್ಲಿ ಗುಮಾಸ್ತರಾಗಿ ಸೇರಿದರು. ಗುಂಡೂರಾಯರು, ೧೯೩೫ರ ನಂತರ ಕಾಂಗ್ರೆಸ್ ಚಳವಳಿಗಳಲ್ಲಿ ಪ್ರಮುಖ ಪಾತ್ರವಹಿಸಿದರು. ಆರಂಭಿಕ ಸಂದರ್ಭದಲ್ಲಿ ಯುವಕರಿಗೆ ಇವರು ಮಾರ್ಗದರ್ಶಕರಾಗಿದ್ದರು. ಗುಂಡೂರಾಯರ ಸಾರ್ವಜನಿಕ ಸೇವಕಾರ್ಯದಲ್ಲಿ ಅವರ ಪತ್ನಿಯೂ ಭಾಗವಹಿಸಿದ್ದರು.

೨೪. ಸ್ಪೆಶಲ್ ಬ್ರ್ಯಾಂಚ್, ಅಬ್‌ಸ್ಟ್ರಾಕ್ಟ್ ಫಾರ್ ದಿ ವೀಕ್ ಎಂಡಿಂಗ್, ೨೭ ಜನವರಿ, ೧೯೩೭, ಪು.೨೨೧, ೨೩೪

೨೫. ವಿಘ್ನೇಶ್ವರ ಹೇರಳೆ, ಗಣೇಶ ಬಂದ, ಜಾನಪದ ಪತ್ರಿಕೆ, ಜಾನಪದ ಅಕಾಡೆಮಿ, ಸೆಪ್ಟೆಂಬರ್, ೧೯೯೪, ಪು. ೭

೨೬. ಸ್ಪೆಶಲ್ ಬ್ರ್ಯಾಂಚ್, ಅಬ್‌ಸ್ಟ್ರಾಕ್ಟ್ ಫಾರ್ ದಿ ವೀಕ್ ಎಂಡಿಂಗ್, ೨೭ ಜನವರಿ, ೧೯೩೭, ಪು. ೧೭೪-೧೭೫

೨೭. **ಹನುಮಂತಪ್ಪ.** ೧೫-೧೨-೧೯೦೭ರ ರಾಮಗಿರಿಯಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದರು. ಇವರು, ೧೯೩೬-೩೭ರಲ್ಲಿಯೇ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರೀಯವಾದ ಪಾತ್ರವಹಿಸಿದರು. ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರು. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿಯೂ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದರು. ನಂತರ ೧೯೪೭ರ ಮೈಸೂರು ಚಲೋ ಚಳವಳಿಯಲ್ಲಿಯೂ ಭಾಗವಹಿಸಿ ೧೮ ತಿಂಗಳು ಬೆಂಗಳೂರು ಜೈಲಿನಲ್ಲಿ ಇದ್ದರು.

೨೮. **ಕೃಷ್ಣಾರೆಡ್ಡಿ.** ೧೦-೯-೧೯೦೨ರಲ್ಲಿ ಹೊಳಲ್ಕೆರೆಯ ಕೃಷಿ ಕುಟುಂಬದಲ್ಲಿ ಜನಿಸಿದರು. ಇವರು ಎಸ್.ನಿಜಲಿಂಗಪ್ಪನವರ ಅನುಯಾಯಿಗಳಾಗಿ ೧೯೩೬ರ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. ೧೯೩೯ರ ಅರಣ್ಯ ಸತ್ಯಾಗ್ರಹ, ೧೯೪೨ರ ಕ್ವಿಟ್ ಇಂಡಿಯಾ ಚಳವಳಿ, ೧೯೪೭ರ ಮೈಸೂರು ಚಲೋ ಚಳವಳಿಯಲ್ಲಿಯೂ ಭಾಗವಹಿಸಿದರು.

೨೯. **ಬಿ. ಎಚ್. ಚಂದ್ರಶೇಖರಯ್ಯ.** ಹರಿಹರದಲ್ಲಿ ಜನಿಸಿದ ಇವರು ೧೯೩೭ರಲ್ಲಿ ಎಸ್.ಎಸ್. ಹರ್ಡೇಕರ್ ನೇತೃತ್ವದ ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗವಹಿಸಿದರು. ನಂತರ ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ ಮೈಸೂರು ಚಲೋ ಚಳವಳಿಯಲ್ಲಿಯೂ ಭಾಗವಹಿಸಿ, ಹನ್ನೊಂದು ತಿಂಗಳವರೆಗೆ ಬೆಂಗಳೂರಿನ ಸೆಂಟ್ರಲ್ ಜೈಲು ಮತ್ತು ದಾವಣಗೆರೆ ಜೈಲಿನಲ್ಲಿಯೂ ಇವರನ್ನು ಬಂಧನದಲ್ಲಿಡಲಾಗಿತ್ತು.

೩೦. **ಗೋವಿಂದರಾವ್.** ೧೦-೦೨-೧೯೧೭ರಲ್ಲಿ ಹೊಳಲ್ಕೆರೆಯ ಕೃಷಿ ಕುಟುಂಬದಲ್ಲಿ ಜನಿಸಿದರು. ೧೯೩೬ರ ಧ್ವಜ ಸತ್ಯಾಗ್ರಹ, ೧೯೩೯ರ ಅರಣ್ಯ ಸತ್ಯಾಗ್ರಹ, ೧೯೪೨ರ ಕ್ವಿಟ್ ಇಂಡಿಯಾ ಚಳವಳಿಗಳಲ್ಲಿ ಪ್ರಮುಖ ಪಾತ್ರವಹಿಸಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಿಗೆ ಮುಖಂಡರಾಗಿ ಕಾರ್ಯನಿರ್ವಹಿಸಿದರು.

೩೧. **ಟಿ.ಸಿದ್ಧಲಿಂಗಯ್ಯ.** ೧೮೯೮ರಲ್ಲಿ ದೊಡ್ಡಬಳ್ಳಾಪುರದಲ್ಲಿ ಜನಿಸಿದರು. ತೋಟಪ್ಪನವರು ಇವರ ತಂದೆ. ವಕೀಲರಾದ ಇವರು ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೆ.ಟಿ.ಭಾಷ್ಯಂ, ಎಸ್. ನಿಜಲಿಂಗಪ್ಪ, ಕೆ.ಸಿ.ರೆಡ್ಡಿ, ಎಸ್.ಚನ್ನಯ್ಯ ಮುಂತಾದವರೊಂದಿಗೆ ಭಾಗವಹಿಸಿದ್ದರು. ೧೯೩೮ರಲ್ಲಿ ಜರುಗಿದ ಶಿವಪುರ ಕಾಂಗ್ರೆಸ್‌ನ ಧ್ವಜಾರೋಹಣ ಮಾಡಿದ ಸಿದ್ಧಲಿಂಗಯ್ಯನವರು ಈ ಮೂಲಕ ಇಡೀ ಸಂಸ್ಥಾನದ ಗಮನ ಸೆಳೆದರು. ಇದರಲ್ಲಿ ಸುಮಾರು ೨೫ ಸಾವಿರ ಜನರು ಭಾಗವಹಿಸಿದ್ದರು. ಎಚ್.ಸಿ.ದಾಸಪ್ಪ, ಕೆ.ಟಿ.ಭಾಷ್ಯಂ, ಎಸ್.ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ ಮೊದಲಾದವರು

ಬಂಧನಕ್ಕೊಳಗಾಗಿದ್ದರು. ನಂತರ ಅವರು ೧೯೪೨ರ ಕ್ವಿಟ್ ಇಂಡಿಯಾ ಚಳವಳಿ, ೧೯೪೭ರ ಮೈಸೂರು ಚಲೋ ಚಳವಳಿಯಲ್ಲಿ ಜವಾಬ್ದಾರಿ ಸರಕಾರ ರಚನೆಗಾಗಿ ಹೋರಾಟ ನಡೆಸಿದರು.

೩೨. **ಸ್ಪೆಶಲ್ ಬ್ರಾಂಚ್, ಅಬ್ಸ್ಟ್ರಾಕ್ ಫಾರ್ ದಿ ವೀಕ್ ಎಂಡಿಂಗ್,** ೨೭ ಜನವರಿ, ೧೯೩೭, ಪು. ೧೮೬-೧೮೭

೩೩. ಅದೇ, ಪು. ೨೧೨-೨೧೩

೩೪. ಅದೇ, ಪು. ೨೧೪

೩೫. ಕೆ. ರಾಘುವೇಂದ್ರರಾವ್ **ರಾಷ್ಟ್ರ ಬಂಧು, ಎಸ್. ನಿಜಲಿಂಗಪ್ಪ, ಮ್ಯಾನ್ ಅಂಡ್ ಸ್ಟೇಟ್ ಮ್ಯಾನ್,** ಪು. ೪೮-೪೯

೩೬. ಎಚ್. ದೇವೀರಪ್ಪ, **ಮೈಸೂರು ಬಸವಯ್ಯನವರು,** ತರಳಬಾಳು ಪ್ರಕಾಶನ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ, ೧೯೮೮ ಪು. ೩೦

೩೭. **ಪ್ರಜಾಪಕ್ಷ ಮತ್ತು ಪ್ರಜಾ ಮಿತ್ರಮಂಡಳಿ** ಮೈಸೂರು ಸಂಸ್ಥಾನದ ಹಿಂದುಳಿದ ಮುಖಂಡರು ೧೯೧೭ರ ನವೆಂಬರ್ ೨ರಂದು ಸಂಜೆ ೬-೩೦ ಗಂಟೆಗೆ ಮೈಸೂರಿನ ಧರ್ಮಪ್ರಕಾಶ ಬನುಮಯ್ಯನವರ ಪಾಠಶಾಲೆಯಲ್ಲಿ ಲಿಂಗಾಯತರು, ವೈಶ್ಯರು, ಮುಸಲ್ಮಾನರು, ಕುರುಬರು ಮುಂತಾದ ಹಲವು ಸಮುದಾಯದವರು ಸಭೆ ಸೇರಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ಎಸ್. ಚನ್ನಯ್ಯನವರುವಹಿಸಿದ್ದರು. ನಂತರ ಸಭೆಯನ್ನುದ್ದೇಶಿಸಿ ಎಂ. ಬಸವಯ್ಯನವರು ಮಾತಾನಾಡುತ್ತ "ಮೈಸೂರು ಸಂಸ್ಥಾನದ ಸಮಸ್ತ ಪ್ರಜೆಗಳ ವಿಶೇಷವಾಗಿ ಹಿಂದುಳಿದ ಜನಾಂಗದ ಪ್ರತಿನಿಧಿಗಳ ಈ ಸಭೆಯು ನ್ಯಾಯ ವಿಧೇಯಕ ಸಭೆ, ಪ್ರಜಾಪ್ರತಿನಿಧಿ ಸಭೆ, ಸ್ಥಳೀಯ ಮತ್ತು ಪೌರಸಭೆಗಳನ್ನು ಅವು ನಿಜವಾಗಿಯೂ ಪ್ರಜಾಪ್ರಭುತ್ವ ತತ್ತ್ವಕ್ಕೆ ಹೊಂದಿಕೊಳ್ಳುವಂತೆಯೂ, ಜನಪ್ರಿಯತೆಯನ್ನು ಪಡೆಯುವಂತೆಯೂ, ಸಮುದಾಯವಾರು ಆಧಾರದ ಮೇಲೆ ಸದಸ್ಯರನ್ನು ನೇಮಕ ಮಾಡಬೇಕೆಂಬುದಾಗಿ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ" ಎಂದಿದ್ದರು. ಸಭೆಯಲ್ಲಿ ಇದಕ್ಕೆ ಸಂಬಂಧಿಸಿದ ನಿರ್ಣಯವನ್ನು ಗುಲಾಮ್ ಅಹಮದ್‌ಕಲಾಮಿ ಅವರು ಮಂಡಿಸಿದರು. ಎಂ.ಸುಬ್ಬಯ್ಯನವರು ಹಾಗೂ ಇತರ ಸದಸ್ಯರು ಅನುಮೋದಿಸಿದರು. ಈ ನಿರ್ಣಯಗಳು ಸರ್ವಾನುಮತದಿಂದ ಒಪ್ಪಿತವಾಯಿತು. ನಂತರ ಬೆಂಗಳೂರಿನಲ್ಲಿ ೧೯೧೭ ನವೆಂಬರ್ ೧೮ರಂದು ಇನ್ನುಳಿದ ಮುಖಂಡರೆಲ್ಲ ಸಭೆ ಸೇರಿದ್ದರು. ಸಭೆಯ ನಿರ್ಣಯದಂತೆ ಪ್ರಜಾಮಿತ್ರ ಮಂಡಳಿ ಸ್ಥಾಪನೆಯಾಯಿತು. ಅದರ ಮುಖ್ಯ ನಾಯಕರು ಎಂ. ಬಸವಯ್ಯನವರು. ಅವರ ಜೊತೆಗಾರರಲ್ಲಿ ಜನಾಬ್ ಗುಲಾಮ್ ಮಹಮದ್ ಮೇಕ್ರಿ ಅವರು ಮುಖ್ಯವಾಗಿದ್ದರು. ಅನಂತರ ೧೯೩೦ರಲ್ಲಿ ಪ್ರಜಾಮಿತ್ರಮಂಡಳಿಯನ್ನು ಒಡೆದು, ಪ್ರಜಾಪಕ್ಷವನ್ನು ಸ್ಥಾಪಿಸಿದರು. ಈ ಪಕ್ಷವು ಗ್ರಾಮಾಂತರ ಪ್ರದೇಶದ ರೈತರ ಸಂಘಟನೆಯನ್ನು ಮಾಡಿತು. ೧೯೩೫ರಲ್ಲಿ ಹಿಂದುಳಿದ ಚಳವಳಿಯ ಎರಡು ಗುಂಪುಗಳಾದ ಪ್ರಜಾಮಿತ್ರ ಮತ್ತು ಪ್ರಜಾಪಕ್ಷ ಎರಡು ಸೇರಿ ಪ್ರಜಾ ಸಂಯುಕ್ತ ಪಕ್ಷವೆಂಬ ಹೊಸ ಪಕ್ಷವಾಗಿ ವಿಲೀನಗೊಂಡವು. ಎರಡು ಪಕ್ಷದ ನಾಯಕರು ೧೯೩೭ ಅಕ್ಟೋಬರ್ ೧೬ರಂದು ಮೈಸೂರು ಕಾಂಗ್ರೆಸ್‌ನಲ್ಲಿ ವಿಲೀನಗೊಂಡರು.

೩೮. ವಿಧುರಾಶ್ವತ್ಥ ಘಟನೆ. ಈ ಗ್ರಾಮವು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲೂಕಿನಲ್ಲಿದೆ. ಇಲ್ಲಿ ಪ್ರತಿವರ್ಷವು ದನಗಳ ಜಾತ್ರೆ ನಡೆಯುತ್ತದೆ. ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ಸಹಸ್ರಾರರು ಜನ ಸೇರುತ್ತಾರೆ. ಇಂಥಹ ಸಂದರ್ಭದಲ್ಲಿ ಕಾಂಗ್ರೆಸ್ ತನ್ನ ಪ್ರಚಾರ ಕಾರ್ಯಕ್ಕಾಗಿ ಸಭೆ ನಡೆಸಲು ನಿರ್ಧರಿಸಿತ್ತು. ಇದನ್ನು ಸರಕಾರ ಬಹಿಷ್ಕರಿಸಿತ್ತು. ೧೯೩೮ರ ಏಪ್ರಿಲ್ ೨೫ರಂದು ಕಾಂಗ್ರೆಸ್‌ನ ಪ್ರಚಾರ ಕೈಗೊಂಡು ಧ್ವಜ ಹಾರಿಸಿತು. ಅದು ಅಕ್ರಮಕೂಟವೆಂದು ಜಿಲ್ಲಾಧಿಕಾರಿಗಳು ಅಜ್ಞೆಯನ್ನು ಹೊರಡಿಸಿದರು. ಆ ಅಜ್ಞೆಯನ್ನು ಉಲ್ಲಂಘಿಸಿ ಸಭೆ ನಡೆಸುತ್ತಿರುವಾಗ ಪೊಲೀಸರು ಗೋಲಿಬಾರ್ ನಡೆಸಿದರು. ಇದರಿಂದ ಸ್ಥಳದಲ್ಲಿಯೇ ಸುಮಾರು ೧೦ ಜನ ಸತ್ತರು. ಇದು ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದು ಹೆಸರಾಗಿದೆ. ಈ ಘಟನೆಯ ವಿರುದ್ಧ ಕರ್ನಾಟಕದೆಲ್ಲೆಡೆ ಪ್ರತಿಭಟನೆ ವ್ಯಕ್ತಪಟ್ಟಿತು. ಅದೇ ರೀತಿ ಚಿತ್ರದುರ್ಗ ಜಿಲ್ಲೆಯಲ್ಲಿಯೂ ಎಲ್ಲಾ ತಾಲೂಕುಗಳಲ್ಲಿಯೂ ಪ್ರತಿಭಟನಾತ್ಮಕ ಚಳವಳಿಯನ್ನು ನಡೆಸಿ ಧ್ವಜ ಸತ್ಯಾಗ್ರಹಕ್ಕೆ ತೀರ್ಮಾನಿಸಿದರು. ಭಾರತ ಸ್ವಾತಂತ್ರ್ಯ ಚಳವಳಿಯಲ್ಲಿ ವಿಧುರಾಶ್ವತ್ಥ ಘಟನೆಯಂತು ದೇಶದ ಗಮನ ಸೆಳೆಯಿತು. ಈ ಬಂಡಾಯ ಶಕ್ತಿಗೆ ಅಂಜಿದ ಬ್ರಿಟಿಶ್ ಆಡಳಿತ ದಂಡ ಪ್ರಯೋಗಕ್ಕೆ ಪೊಲೀಸ್ ಬಲವನ್ನು ನಿಯೋಜಿಸಿದ್ದನ್ನು ರಾಷ್ಟ್ರದಾದ್ಯಂತ ಟೀಕಿಸಲಾಗಿತ್ತು.

೩೯. ನವಜೀವನ ಪತ್ರಿಕೆ ಮೈಸೂರು ೨೬ ಏಪ್ರಿಲ್ ೧೯೩೮

೪೦. ಕೆ. ಟಿ. ಭಾಷ್ಯಂ. ಕೆ.ಟಿ. ಭಾಷ್ಯಂ ಅವರು ಮೈಸೂರಿನಲ್ಲಿ ೧೮೯೫ರಲ್ಲಿ ಜನಿಸಿದರು. ವಕೀಲ ವೃತ್ತಿಯನ್ನು ಆರಂಭಿಸಿದ ಇವರು ೧೯೩೦ರ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ೧೩ ವರ್ಷ ಸೇವೆ ಸಲ್ಲಿಸಿದರು. ೧೯೩೦ರ ನಂತರ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು. ಮೈಸೂರು ಕಾಂಗ್ರೆಸ್‌ನ ಸಂಸ್ಥಾಪಕ ಸದಸ್ಯರಾಗಿದ್ದು, ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಹಲವು ಬಾರಿ ಜೈಲು ಶಿಕ್ಷೆ ಅನುಭವಿಸಿದ್ದರು. ೧೯೪೭ರ ನಂತರ ಕೆ.ಸಿ.ರೆಡ್ಡಿಯವರ ಮಂತ್ರಿಮಂಡಲದಲ್ಲಿ ಕಾನೂನು ಮತ್ತು ಕಾರ್ಮಿಕ ಮಂತ್ರಿಯಾಗಿ ಸೇವೆ ಸಲ್ಲಿಸಿದರು. ೧೯೫೨ರಲ್ಲಿ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕಾರ್ಮಿಕ ಮುಖಂಡರಾಗಿದ್ದ ಇವರು. ೧೯೫೭ರಲ್ಲಿ ನಿಧನರಾದರು.

೪೧. ಸ್ಪೆಶಲ್ ಬ್ರಾಂಚ್, ಅಬ್ಸ್ಟ್ರಾಕ್ ಫಾರ್ ದಿ ವೀಕ್ ಎಂಡಿಂಗ್, ಸಾಟರ್‌ಡೇ ೨೮ ಜನವರಿ, ೧೯೩೯, ಚಿತ್ರದುರ್ಗ ಜಿಲ್ಲಾ ಕಛೇರಿ, ಪು. ೨೬೮

೪೨. ಸ್ಪೆಶಲ್ ಬ್ರಾಂಚ್, ಅಬ್ಸ್ಟ್ರಾಕ್ ಫಾರ್ ದಿ ವೀಕ್ ಎಂಡಿಂಗ್, ೨೮ ಜನವರಿ, ೧೯೩೯, ಪು. ೬೧

೪೩. ಅದೇ, ಪು. ೨೩೮

೪೪. ಎಚ್. ಕೆ. ವೀರಣ್ಣಗೌಡರು. ಇವರು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ತೋಟದ ಮನೆಯಲ್ಲಿ ೧೮೮೯ರಲ್ಲಿ ಜನಿಸಿದರು. ೧೯೨೭ರಲ್ಲಿ ಬೆಂಗಳೂರು ಒಕ್ಕಲಿಗರ ಸಂಘದ ಪತ್ರಿಕೆಯ

ಸಂಪಾದಕರಾಗಿದ್ದರು. ಇದೇ ಕಾಲದಲ್ಲಿ ಎಸ್.ಎಸ್.ಹರ್ಡೇಕರ್, ಕಮಲಾಬಾಯಿ ಚಟ್ಟೋಪಾಧ್ಯಾಯ, ಆರ್.ಆರ್.ದಿವಾಕರ್ ಸಂಪರ್ಕದಿಂದ ಕಾಂಗ್ರೆಸ್‌ನ ರೈತ ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿದರು. ೧೯೩೧ರಲ್ಲಿ ಮದ್ದೂರು ರೈತಸಂಘದ ಅಧ್ಯಕ್ಷರಾಗಿದ್ದ ಇವರು ನಡೆಸಿದ ಪ್ರಮುಖವಾದ ರೈತ ಚಳವಳಿ ಇರ್ವಿನ್ ನಾಲೆ ರೈತ ಹೋರಾಟವಾಗಿತ್ತು. ಇದರಲ್ಲಿ ೪೦೦೦ ಜನ ರೈತರು ಜಾಥಾ ಸಹಿತ ೬೦ ಮೈಲಿ ಕಾಲನಡಿಗೆಯಲ್ಲಿ ಬೆಂಗಳೂರಿಗೆ ಬಂದು ದಿವಾನರಿಗೆ ಒಂದು ಮನವಿ ಸಲ್ಲಿಸಿದರು. ಅದರಲ್ಲಿ ರೈತರಿಗೆ ರಿಯಾಯಿತಿಯಾಗಿ ನೀರು ನೀಡಲು ಒತ್ತಾಯಿಸಿದರು. ಎಚ್.ಕೆ. ವೀರಣ್ಣಗೌಡರು ಚಿತ್ರದುರ್ಗ ಜಿಲ್ಲೆಯ ನಾಯಕರಾದ ಬಳ್ಳಾರಿ ಸಿದ್ದಮ್ಮ, ಎಸ್. ನಿಜಲಿಂಗಪ್ಪ, ಭೀಮಣ್ಣನಾಯಕ, ವಾಸುದೇವರಾವ್ ಮುಂತಾದವರೊಂದಿಗೆ ನಿಕಟವಾದ ಸಂಪರ್ಕವನ್ನಿಟ್ಟುಕೊಂಡಿದ್ದರು. ೧೯೩೭ರಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಲ್ಲಿ ರೈತ ಸಂಘಟನೆಯನ್ನು ಕುರಿತು ಪರಿಣಾಮಕಾರಿಯಾದ ಭಾಷಣ ಮಾಡಿದರು. ಹಾಗೆಯೇ ಹಲವು ಬಾರಿ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಸ್ವಾತಂತ್ರ್ಯ ಚಳವಳಿಗೆ ರೈತರನ್ನು ಸಂಘಟಿಸಿದರು.

೪೫. ಬಳ್ಳಾರಿ ಸಿದ್ದಮ್ಮ. ಕರ್ನಾಟಕ ಸ್ವಾತಂತ್ರ್ಯ ಚಳವಳಿಯಲ್ಲಿ ಇವರ ಹೆಸರು ಚಿರಸ್ಮರಣೆಯವಾಗಿದೆ. ಇವರು ೧೯೦೩ರಲ್ಲಿ ಹಾವೇರಿ ತಾಲೂಕಿನ ದುಂಡಸಿ ಗ್ರಾಮದಲ್ಲಿ ಜನಿಸಿದರು. ಅವರ ತಂದೆ ಶ್ರೀ ಕೊಟಗಿ ಬಸವಂತಪ್ಪ ವ್ಯಾಪಾರಿಗಳಾಗಿದ್ದರು. ಹೀಗಾಗಿ ಇವರು ಯಾವುದೇ ರೀತಿಯ ಉನ್ನತ ಶಿಕ್ಷಣವನ್ನು ಪಡೆಯಲಾಗಲಿಲ್ಲ. ಅಂದಿನ ಸಮಕಾಲೀನ ಬರಹಗಳನ್ನು ಚೆನ್ನಾಗಿ ಓದಿಕೊಂಡಿದ್ದರು. ಬಳ್ಳಾರಿ ಸಿದ್ದಮ್ಮನವರನ್ನು ಬಳ್ಳಾರಿ ಮುರುಗಪ್ಪನವರಿಗೆ ಕೊಟ್ಟು ಮದುವೆ ಮಾಡಿದರು. ಅವರ ಪತಿಯೂ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. ತನ್ನ ಪತಿಯೊಂದಿಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಇವರು ಬಳ್ಳಾರಿ ಸಿದ್ದಮ್ಮನೆಂದೇ ಹೆಸರು ಪಡೆದರು. ಒಬ್ಬ ಮಹಿಳಾ ಸಂಘಟನಾಕಾರರಾಗಿ ಉತ್ತಮ ಭಾಷಣಕಾರರಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಚಿತ್ರದುರ್ಗವನ್ನು ಕೇಂದ್ರ ಮಾಡಿಕೊಂಡು ಕರ್ನಾಟಕದಾದ್ಯಂತ ಸಂಚಾರ ಮಾಡಿದರು. ೧೯೩೭ರಲ್ಲಿ ಎನ್.ಎಸ್.ಹರ್ಡೇಕರ್ ಮತ್ತು ಉಮಾಭಾಯಿ ಕುಂದಾಪುರ ಜೊತೆಯಲ್ಲಿ ಚಿತ್ರದುರ್ಗ ಜಿಲ್ಲೆಯಾದ್ಯಂತ ಸಂಚರಿಸಿ ಕಾಂಗ್ರೆಸ್ ಸಂಘಟನೆಯನ್ನು ಮಾಡಿದ್ದರು. ಅಪ್ಪಟ ಖಾದಿಧಾರಿಯಾಗಿದ್ದ ಬಳ್ಳಾರಿ ಸಿದ್ದಮ್ಮನವರು ೧೯೩೮ರ ಏಪ್ರಿಲ್‌ನ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ೧೯೩೯ರ ತುರುವನೂರು ಅರಣ್ಯ ಸತ್ಯಾಗ್ರಹದಲ್ಲಿ ಎಸ್. ನಿಜಲಿಂಗಪ್ಪನವರ ತಂಡದಲ್ಲಿ ಬಂಧಿತರಾಗಿ ದೀರ್ಘಾವದಿ ಶಿಕ್ಷೆಗೆ ಒಳಗಾಗಿದ್ದರು. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಒಂದು ವರ್ಷ ಶಿಕ್ಷೆ ಅನುಭವಿಸಿದರು. ಹಾಗೆಯೇ ೧೯೪೭ರ ಮೈಸೂರು ಚಲೋ ಚಳವಳಿಯಲ್ಲಿ ಚಿತ್ರದುರ್ಗದ ಜಿಲ್ಲಾ ಕಛೇರಿಯ ಮೇಲೆ ಧ್ವಜ ಹಾರಿಸಿ ಬಂಧಿತರಾಗಿದ್ದರು. ಸ್ವಾತಂತ್ರ್ಯನಂತರ ಗಾಂಧೀಜಿಯವರ ಆದೇಶದಂತೆ 'ಮಾತೃಮಂದಿರ' ಅರ್ಥಾತ್ ಪ್ರಸೂತಿ ಗೃಹವೊಂದನ್ನು ಹಿರಿಯೂರ ಬಳಿ ಗನ್ನಾಯಕನಹಳ್ಳಿಯಲ್ಲಿ ಪ್ರಾರಂಭಿಸಿದರು. ಈ ಮಾತೃ ಮಂದಿರವೇ ಬಳ್ಳಾರಿ ಸಿದ್ದಮ್ಮನವರ ಸೇವಾ ನಿಷ್ಠೆಯನ್ನು ಪ್ರಚಾರ ಮಾಡಿತು. ಈ ಸೇವಾ

ಕ್ಷೇತ್ರಕಂಡ ಕಸ್ತೂರಬಾಟ್ರಸ್ಟ್‌ನವರು ತಾವು ನಡೆಸಲು ಆ ಮಾತೃಮಂದಿರವನ್ನು ತೆಗೆದುಕೊಂಡರು. ನಂತರ ಮತ್ತೊಂದು ಮಾತೃಮಂದಿರವನ್ನು ದಾವಣಗೆರೆ- ಚಿತ್ರದುರ್ಗ ಮಾರ್ಗದ ಮಧ್ಯ ಹೆಬ್ಬಾಳ ಗ್ರಾಮದಲ್ಲಿ ಆರಂಭಿಸಿದರು. ಬಳ್ಳಾರಿ ಸಿದ್ಧಮ್ಮನವರು ಸ್ವತಃ ಕೈಮುಟ್ಟಿ ಹೆರಿಗೆ ಮಾಡಿಸಿ ಮಗು-ಶೈಶ್ರೂಷೆ ರಕ್ಷಣೆ ಮಾಡುತ್ತಿದ್ದರು. ಇವರ ಸೇವೆ, ತ್ಯಾಗವನ್ನು ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಹಳ್ಳಿಕೇರಿ ಗುದ್ಲೆಪ್ಪ ಮತ್ತಿತರರು ಮೆಚ್ಚಿ ಪ್ರೋತ್ಸಾಹ ನೀಡಿದ್ದರು. ಇವರು ನಂತರ ವಿಧಾನ ಸಭೆಯ ಸದಸ್ಯರು ಆಗಿದ್ದರು.

೪೬. ಸರೋಜಿನಿ ಶಾಸ್ತ್ರಿ, ಕೆ.ರಾಘವೇಂದ್ರರಾವ್, **ವುಮನ್ ಫ್ರೀಡಂ ಫೈಟರ್ಸ್ ಇನ್ ಕರ್ನಾಟಕ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩, ಪು. ೪೭-೫೦

೪೭. ದಿನಾಂಕ.೨೦-೦೮-೧೯೯೯ರಂದು ಎಸ್. ನಿಜಲಿಂಗಪ್ಪನವರನ್ನು ಸಂದರ್ಶನ ಮಾಡಿ ಚಿತ್ರದುರ್ಗ ಜಿಲ್ಲೆಯು ಸ್ವಾತಂತ್ರ್ಯ ಚಳವಳಿಯಲ್ಲಿ ವಹಿಸಿದ ಪಾತ್ರವನ್ನು ಕುರಿತಂತೆ ಸುಮಾರು ನಾಲ್ಕು ಗಂಟೆಗಳ ಕಾಲ ಚರ್ಚಿಸುವುದರೊಂದಿಗೆ ಧ್ವನಿ ಮುದ್ರಣವನ್ನು ಸಹ ಮಾಡಲಾಯಿತು. ಈ ಸಂದರ್ಭದಲ್ಲಿ ಅವರ ಮಗ ರಾಜಶೇಖರ ಅವರು ಸಹಕಾರ ನೀಡಿದ್ದರು.

೪೮. ಸೂರ್ಯನಾಥ ಕಾಮತ್ (ಸಂ), **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಸಂಪುಟ-೨, ಪು. ೫೫೫

೪೯. **ಸಾಧ್ವಿ ದಿನಪತ್ರಿಕೆ,** ಮೈಸೂರು, ೧೪-೦೩-೧೯೩೯

೫೦. **ಸ್ಪೆಶಲ್ ಬ್ರಾಂಚ್, ಅಬ್ಸ್ಟ್ರಾಕ್ ಫಾರ್ ದಿ ವೀಕ್ ಎಂಡಿಂಗ್,** ಸಾಟರ್‌ಡೇ ೨೭ ೧೯೩೯ ಪು. ೨೨೯

೫೧. **ಸ್ಪೆಶಲ್ ಬ್ರಾಂಚ್, ಅಬ್ಸ್ಟ್ರಾಕ್ ಫಾರ್ ದಿ ವೀಕ್ ಎಂಡಿಂಗ್,** ಸಾಟರ್‌ಡೇ ೨೭ ಜನವರಿ, ೧೯೩೭, ಪು. ೬೦-೬೧

೫೨. ಅದೇ, ಪು. ೨೩೮

೫೩. **ಸ್ಪೆಶಲ್ ಬ್ರಾಂಚ್, ಅಬ್ಸ್ಟ್ರಾಕ್ ಫಾರ್ ದಿ ವೀಕ್ ಎಂಡಿಂಗ್,** ಸಾಟರ್‌ಡೇ ೨೮ ಜನವರಿ, ೧೯೩೯, ಪು. ೯೫

೫೪. ಅದೇ, ಪು. ೧೩೧-೧೩೨

೫೫. ಅದೇ, ಪು. ೨೫೦

೫೬. ಕೆ. ವೀರತಪ್ಪ **ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ,** ಪು. ೭೫

೫೭. ಕೊಟಗಿ ಸಿದ್ದಲಿಂಗಪ್ಪ, ಸಂಪಾದಕರು, **ಹೋರಾಟದ ನೆನಹು,** ಸ್ಮರಣ ಸಂಚಿಕೆ, ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯ ಯೋಧರ ಸಮ್ಮೇಳನ, ಚಿತ್ರದುರ್ಗ, ೧೯೯೬, ಪು.೨೫

೫೮. ದಿನಾಂಕ ೧೮-೦೬-೧೯೯೯ರಂದು ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಗೌರವಾಧ್ಯಕ್ಷರಾದ ಡಿ. ಎಸ್. ಚಿದಾನಂದಪ್ಪ ಅವರನ್ನು ಸಂದರ್ಶಿಸಿ ಧ್ವನಿ ಸುರುಳಿ

ಮಾಡಿಕೊಳ್ಳುವುದರೊಂದಿಗೆ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು.

೫೯. ಹೊಸದುರ್ಗ ತಾಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರಾಗಿಯೂ ಮೂರು ಭಾರಿ ಶಾಸಕರಾಗಿದ್ದ ಜಿ. ಬಸಪ್ಪನವರನ್ನು ೨೬-೦೭-೧೯೯೯ರಂದು ಸಂದರ್ಶನ ಮಾಡಿ ಧ್ವನಿಮುದ್ರಣ ಮಾಡಿಕೊಳ್ಳಲಾಯಿತು.

೬೦. ಕೊಟಗಿ ಸಿದ್ದಲಿಂಗಪ್ಪ, ಸಂಪಾದಕರು, **ಹೋರಾಟದ ನೆನೆಹು**, ಪು. ೨೫

೬೧. ದಿನಾಂಕ ೨೬-೪-೧೯೯೯ರಂದು ಎಸ್. ನಿಜಲಿಂಗಪ್ಪನವರನ್ನು ಭೇಟಿ ಮಾಡಿ ತುರವನೂರು ಅರಣ್ಯ ಸತ್ಯಾಗ್ರಹ ಕುರಿತಂತೆ ಮಾಹಿತಿ ಸಂಗ್ರಹಿಸಲಾಯಿತು.

೬೨. ಕೆ. ರಾಘವೇಂದ್ರರಾವ್ **ರಾಷ್ಟ್ರ ಬಂಧು, ಎಸ್. ನಿಜಲಿಂಗಪ್ಪ, ಮ್ಯಾನ್ ಅಂಡ್ ಸ್ಟೇಟ್ ಮ್ಯಾನ್**, ಪು. ೫೦-೫೧

೬೩. ಬಿಪಿನ್ ಚಂದ್ರ ಮತ್ತು ಇತರರು, **ಇಂಡಿಯನ್ ಸ್ಟ್ರಗಲ್ ಫಾರ್ ಫ್ರೀಡಮ್**, ನವದೆಹಲಿ, ೧೯೮೩, ಪು. ೩೩೨-೩೩೪

೬೪. ಜಿ. ಎಸ್. ಹಾಲಪ್ಪ **ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ**, ಸಂಪುಟ-೨, ಪು. ೨೮೬

೬೫. ಸೂರ್ಯನಾಥ ಕಾಮತ್, **ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಇನ್ ಕರ್ನಾಟಕ್**, ಬೆಂಗಳೂರು, ೧೯೮೫, ಪು. ೧೮-೧೯

೬೬. **ಸ್ಟ್ರಿಕ್ಟ್‌ಲಿ ಕಾನ್ಫಿಡೆನ್ಸಿಯಲ್ ಫೋರ್ಟ್‌ನೈಟ್ಲಿ ರಿಪೋರ್ಟ್ ಫಾರ್ ದಿ ಫಾಸ್ಟ್ ಆಫ್ ಮಾರ್ಚ್**, ೧೯೪೧, ಸಂಖ್ಯೆ. ೧೩,೪,೭, ಮದ್ರಾಸ್ ರಾಜ್ಯ, ಪತ್ರಾಗಾರ ವಿಭಾಗ, ಮದ್ರಾಸ್

೬೭. ಸೂರ್ಯನಾಥ ಕಾಮತ್, **ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು, ಮಾಧವ ಸ್ಮಾರಕ ಪ್ರತಿಷ್ಠಾನ, ಹುಬ್ಬಳ್ಳಿ**, ೧೯೮೮, ಪು. ೪೯

೬೮. ಆರ್. ಆರ್. ದಿವಾಕರ್(ಸಂ), **ಕರ್ನಾಟಕದ ಪರಂಪರೆ**, ಕರ್ನಾಟಕ ಸರಕಾರ, ಬೆಂಗಳೂರು, ೧೯೬೮ ಪು. ೯೪೫

೬೯. ಕೊಟಗಿ ಸಿದ್ದಲಿಂಗಪ್ಪ, ಸಂಪಾದಕರು, **ಹೋರಾಟದ ನೆನಹು**, ಪು. ೨೭

೭೦. ಎಸ್. ಚಂದ್ರಶೇಖರ್, ***ಸ್ವಾತಂತ್ರ್ಯದೆಡೆಗೆ***, ಸಂಪುಟ ಸಂಪಾದಕರು, ಕರ್ನಾಟಕ ಚರಿತ್ರೆ ಸಂಪುಟ-೭, ಪು. ೨೦೫

೭೧. **ಸ್ಪೆಶಲ್ ಬ್ರಾಂಚ್, ಅಬ್ಸ್ಟ್ರಾಕ್**, ೧೯೪೦-೪೭(ಕೆ.ಎಸ್.ಎ)

೭೨. ಕೊಟಗಿ ಸಿದ್ದಲಿಂಗಪ್ಪ, ಸಂಪಾದಕರು, **ಹೋರಾಟದ ನೆನೆಹು**, ಪು. ೨೮

೭೩. **ಸ್ವಾತಂತ್ರ್ಯ ಸಂಗ್ರಾಮದ ಹುತಾತ್ಮರ ಸ್ಮಾರಕ ಕಂಬ**, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ, ೧೯೭೨

೭೪. ಎಂ. ಎಸ್. ಪುಟ್ಟಣ್ಣ **ಚಿತ್ರದುರ್ಗದ ಪಾಳೆಯಗಾರರು,** ಪು. ೧-೯

೭೫. ಬುಕಾನನ್ **ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು ಕೆನರಾ, ಆ್ಯಂಡ್ ಮಲಬಾರ್,** ಸಂಪುಟ ೩, ಪು. ೩೩೦

೭೬. ಬಿ. ಎಲ್. ರೈಸ್ **ಮೈಸೂರು ಗೆಜೆಟಿಯರ್,** ಸಂಪುಟ-೨, ಪು. ೪೮೭

೭೭. ಜಿ. ಎಸ್. ಹಾಲಪ್ಪ **ಹಿಸ್ಟರಿ ಆಫ್ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ,** ಪು. ೪೨೩

೭೮. ಕೆ. ವೀರತಪ್ಪ ***ಮೈಸೂರು ಸಂಸ್ಥಾನದ ಏಕೀಕರಣ ಮನೋಭೂಮಿಕೆಯ ನಿರ್ಮಾಣ,*** ಕಲಬುರ್ಗಿ ಎಂ.ಎಂ.(ಸಂ), ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದಲ್ಲಿ ಲಿಂಗಾಯತರ ಪಾತ್ರ, ತೋಂಟದಾರ್ಯ ಮಠ, ಗದಗ, ೧೯೯೭, ಪು. ೬೧

೭೯. ಎಸ್. ನಿಜಲಿಂಗಪ್ಪ ಅವರೊಡನೆ ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ ೧೫-೧೧-೨೦೦೦ದಂದು ಸಂದರ್ಶನ ಮಾಡಲಾಯಿತು. ಜೊತೆಯಲ್ಲಿ ಅವರ ಮಗ ರಾಜಶೇಖರ್ ಇದ್ದರು. ಧ್ವನಿ ಮುದ್ರಣ ಮಾಡಿಕೊಳ್ಳಲಾಯಿತು. ಕರ್ನಾಟಕ ಏಕೀಕರಣ ಕುರಿತು ಮಾತನಾಡಿದ ಅವರು ವಿಶೇಷವಾಗಿ ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿರುವ ಎಸ್. ನಿಜಲಿಂಗಪ್ಪನವರು ಅದರ ಬಗೆಗೆ ಕಿಂಚಿತ್ತೂ 'ಅಹಂ' ಇಲ್ಲದೆ ಹೇಳಿದ ಮಾತುಗಳು ಅವರ ಸರಳತೆಗೆ ಸಾಕ್ಷಿಯಾಗಿದ್ದವು. ಭಾಷಾವಾರು ಪ್ರಾಂತ್ಯವಾಗಬೇಕೆಂಬುದು ಗಾಂಧೀಜಿ ಅಭಿಪ್ರಾಯವಾಗಿತ್ತು. ನಮ್ಮ ಕರ್ನಾಟಕ ಏಕೀಕರಣಕ್ಕೆ ಸೇವ ಮಾಡಲು ಅವರೇ ನನಗೆ ಪ್ರೇರಕರು. ಗಾಂಧೀಜಿ ಸಾಧಾರಣ ಮನುಷ್ಯರಲ್ಲ. ಅವರು ನಿಜಕ್ಕೂ ಮಹಾತ್ಮ ಅವರ ಮಾರ್ಗದರ್ಶನದಲ್ಲಿ ಹೋಗುವಂತೆ ಆದದ್ದು ನನ್ನ ಪುಣ್ಯ. ಏಕೀಕರಣಕ್ಕಾಗಿ ಶ್ರಮಿಸಿದ್ದು ನಿಜ. ಅದಕ್ಕಾಗಿ ಹಲವಾರು ರಾಜಕಾರಣಿಗಳು, ಸಾಹಿತಿಗಳು, ಜನಸಾಮಾನ್ಯರು ಎಲ್ಲರೂ ಶ್ರಮಿಸಿದ್ದಾರೆ. ನನ್ನೊಬ್ಬನದೇ ಹೆಚ್ಚುಗಾರಿಕೆ ಎಂದು ಹೇಳಿಕೊಳ್ಳಲಾರೆ...... ಅಂದರು.

೮೦. ಜಿ. ಎಸ್. ಹಾಲಪ್ಪ **ಹಿಸ್ಟರಿ ಆಫ್ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ,** ಪು. ೪೨೨

೮೧. ಎಚ್. ಎಸ್. ಗೋಪಾಲರಾವ್ **ಕರ್ನಾಟಕ ಏಕೀಕರಣ ಇತಿಹಾಸ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬, ಪು. ೩೧೦

೮೨. ಆರ್. ಆರ್. ದಿವಾಕರ(ಸಂ)., **ಕರ್ನಾಟಕ ಥ್ರೂ ದ ಏಜಸ್,** ಮೈಸೂರು ರಾಜ್ಯ ಸರಕಾರ, ಬೆಂಗಳೂರು, ೧೯೬೮, ಪು. ೯೪೮

೮೩. ಎಸ್. ಚಂದ್ರಶೇಖರ್ ***ಮೈಸೂರು ಮತ್ತು ಏಕೀಕೃತ ಕರ್ನಾಟಕದ ರಚನೆ,*** ೧೯೩೭-೧೯೫೬, ಸಾಧನೆ, ಸಂಪುಟ-೧೩, ಸಂಚಿಕೆ-೧, ಜನವರಿ-ಮಾರ್ಚ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೪, ಪು. ೪೦

೮೪. ಆರ್. ಆರ್. ದಿವಾಕರ **ಕರ್ನಾಟಕ ಏಕೀಕರಣದ ಕಥೆ,** ಹುಬ್ಬಳ್ಳಿ, ೧೯೫೬, ಪು. ೧೨೯

೮೫. ಸಿ. ಆರ್. ಗೋವಿಂದರಾಜು ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಬೆಂಗಳೂರು, ೧೯೯೮, ಪು. ೨೦೮

೮೬. ಜಿ. ಎಸ್. ಹಾಲಪ್ಪ **ಹಿಸ್ಟರಿ ಆಫ್ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ,** ಸಂಪುಟ-೨, ಪು. ೪೨೩

೮೭. ಅದೇ, ಪು. ೪೪೯-೪೫೦

೮೮. ಕೆ.ಎಂ.ರುದ್ರಪ್ಪ ***ಕರ್ನಾಟಕ ಏಕೀಕರಣ,*** ಕಾಳೇಗೌಡನಾಗವಾರ(ಸಂ), ಜಿ.ವಿ.ಆನಂದಮೂರ್ತಿ ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೯೪-೯೬

೮೯. ಪಾಟೀಲ್ ಕಲ್ಲನಗೌಡ **ಕರ್ನಾಟಕ ಏಕೀಕರಣದ ಹಾದಿಯಲ್ಲಿ** ವಿವೇಕ ಪ್ರಕಾಶನ, ಹುಬ್ಬಳ್ಳಿ, ೧೯೮೬, ಪು. ೧೧೦

೯೦. ಅದೇ, ಪು. ೧೩೩

೯೧. ಅದೇ, ಪು. ೧೦೩

೯೨. ಎಸ್. ನಿಜಲಿಂಗಪ್ಪ, ***ಕರ್ನಾಟಕ ಏಕೀಕರಣ,*** ದಿವಾಕರ ಆರ್.ಆರ್.(ಸಂ), ಕರ್ನಾಟಕ ಥ್ರೂ ದ ಏಜಸ್, ಪು.೫೬೦

೯೩. ಎಂ. ಜಮುನ ***ಕರ್ನಾಟಕ ಏಕೀಕರಣ ಚಳವಳಿ,*** ಎಸ್. ಚಂದ್ರಶೇಖರ್ ಸಂಪುಟ ಸಂಪಾದಕರು, ಕರ್ನಾಟಕ ಚರಿತ್ರೆ ಸಂಪುಟ-೭, ಪು. ೨೨೮

೯೪. ಬಿ. ಸಿ. ಮಹಾಬಲೇಶ್ವರಪ್ಪ **ಹೈದ್ರಾಬಾದ್-ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು,** ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, ೧೯೯೭, ಪು. ೬೭

೯೫. ಕೆ. ರಾಘವೇಂದ್ರರಾವ್ **ರಾಷ್ಟ್ರಬಂಧು ಎಸ್. ನಿಜಲಿಂಗಪ್ಪ, ಮ್ಯಾನ್ ಅಂಡ್ ಸ್ಟೇಟ್ ಮ್ಯಾನ್,** ಪು. ೮೧

೯೬. ಅದೇ, ಪು.೮೨

೯೭. ಎಸ್. ಎ. ಪಾಟೀಲ, ***ಮುಂಬಯಿ ಕರ್ನಾಟಕ ಏಕೀಕರಣದ ಸ್ಫೂರ್ತಿಯ ಸೆಲೆ,*** ಕಲಬುರ್ಗಿ ಎಂ.ಎಂ.(ಸಂ), ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದಲ್ಲಿ ಲಿಂಗಾಯತರ ಪಾತ್ರ, ಪು. ೫೨

೯೮. **ಲಂಕೇಶ್** ವಾರಪತ್ರಿಕೆ, ಬೆಂಗಳೂರು, ಆಗಸ್ಟ್ ೨೩, ೨೦೦೦, ಪು. ೪

೯೯. **ನೂತನ** ಸಾಪ್ತಾಹಿಕ, ಬೆಂಗಳೂರು, ಆಗಸ್ಟ್ ೨೦, ೨೦೦೦, ಪು.೧೪-೧೫

೧೦೦. **ವಿಜಯ ಕರ್ನಾಟಕ,** ದಿನಪತ್ರಿಕೆ, ಆಗಸ್ಟ್ ೧೦, ೨೦೦೦

ಉಪಸಂಹಾರ

ಉಪಸಂಹಾರ

ಆಧುನಿಕ ಕರ್ನಾಟಕ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಹಿನ್ನೆಲೆಯಲ್ಲಿ ಚಿತ್ರದುರ್ಗ ಪ್ರದೇಶದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳ ಪ್ರಕ್ರಿಯೆಗಳನ್ನು ಅಭ್ಯಾಸ ಮಾಡುವ ಜರೂರು ಎಂದಿಗಿಂತಲೂ ಇಂದು ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪ್ರದೇಶದ ಭೂಹಿಡುವಳಿಗಳನ್ನು ಕೇಂದ್ರಬಿಂದುವನ್ನಾಗಿಟ್ಟುಕೊಂಡು ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿ ಭಾರತದ ಉಪಖಂಡದಲ್ಲಿ ಎಲ್ಲಾ ಕಡೆ ಕಾಣಬಹುದಾದ ಜಾತಿ ಸಂಕೀರ್ಣತೆ- ಜಾತಿ ಶ್ರೇಣೀಕೃತ ವ್ಯವಸ್ಥೆ, ವಸಾಹತು ಪೂರ್ವ ಮತ್ತು ವಸಾಹತು ಕಾಲಗಳಲ್ಲಿ ಇದ್ದ ರಾಜ್ಯ ವ್ಯವಸ್ಥೆಗಳ ತಿಕ್ಕಾಟಗಳು, ವಸಾಹತು ಕಾಲದಲ್ಲಿ ಪ್ರಕ್ರಿಯೆಗೊಂಡ ಸಾಮ್ರಾಜ್ಯಶಾಹಿ ಹಾಗೂ ಪ್ರಜಾಪ್ರಭುತ್ವವಾದಿ ಹೋರಾಟ ಗಾರರ ನಡುವಿನ ಸಂಘರ್ಷಗಳು ಚಿತ್ರದುರ್ಗ ಪ್ರದೇಶದ ಚರಿತ್ರೆಯನ್ನು ರೂಪಿಸಲು ಸಹಾಯಕ ವಾಗಿವೆ. ಈಗಾಗಲೇ "ಒಪ್ಪಿಕೊಂಡಿರುವ" ಹಾಗೂ ವೈಭವೀಕರಣಗೊಂಡಿರುವ ಮದಕರಿನಾಯಕ, ಒನಕೆಓಬವ್ವ, ಏಳುಸುತ್ತಿನಕೋಟೆ ಮುಂತಾದ ಚರಿತ್ರೆಗಿಂತ ಭಿನ್ನವಾದ ಮಜಲುಗಳನ್ನು ಪ್ರಸ್ತುತ ಅಧ್ಯಯನವು ಪರಿಶೀಲಿಸಲು ಪ್ರಯತ್ನಪಟ್ಟಿದೆ. ಈ ಕಾರಣಕ್ಕಾಗಿಯೇ ಚಿತ್ರದುರ್ಗದ ಪ್ರಾದೇಶಿಕ ಚರಿತ್ರೆ ಬರೆಯುವ ಸಂದರ್ಭದಲ್ಲಿ ಹೈದರ್ ಮತ್ತು ಟಿಪ್ಪು ಇವರುಗಳನ್ನು ಅನೇಕರು ಸರಳ ರೇಖಾತ್ಮಕ ಪೂರ್ವಗ್ರಹಗಳಿಂದ "ಖಳನಾಯಕ" ಎಂದು ಚಿತ್ರಿಸಿರುವುದನ್ನು ನಾವು ನೋಡಿದ್ದೇವೆ. ಪ್ರಸ್ತುತ ಪ್ರಬಂಧವು ರಾಜರನ್ನು ಅಥವಾ ಪಾಳೆಯಗಾರರನ್ನು ಈ ದೃಷ್ಟಿಕೋನದಲ್ಲಿ ನೋಡದೆ, ರಾಜರ ಖಳತ್ವದೊಂದಿಗೆ ಅವರ ಸುಧಾರಣೆಗಳನ್ನು ಓರೆಹಚ್ಚಿ ನೋಡಿದೆ.[೧] ಮೊದಲನೆಯ ಅಧ್ಯಾಯದಲ್ಲಿ ಇದಕ್ಕೆ ಸಂಬಧಪಟ್ಟ ಅನೇಕ ಮಾಹಿತಿಗಳನ್ನು ಈ ಹಿನ್ನೆಲೆಯಲ್ಲೇ ನೋಡಲಾಗಿದೆ. "ಒಪ್ಪಿತವಾದ ಚರಿತ್ರೆಯಲ್ಲಿ" ಕೆಳಜಾತಿಗಳನ್ನು, ಲಿಂಗಾಯತರಂತಹ ಮೇಲ್ಜಾತಿಗಳನ್ನು, ನಾಯಕ ಅರಸರ ಸಂತತಿಯವರನ್ನು "ಹಿಂದು" ಎಂದು ಕರೆಯಲಾಗುತ್ತದೆ. ಇಲ್ಲಿ "ಹಿಂದುಗಳ" ಮಧ್ಯೆ ಇರುವ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳದೆ ನಾಯಕರನ್ನು "ಮುಸ್ಲಿಂ"ರ ವಿರುದ್ಧ "ಹಿಂದುಗಳ ಪ್ರತಿನಿಧಿ" ಎಂಬಂತೆ ವೈಭವೀಕರಿಸಿರುವುದು ಒಳ್ಳೆಯ ಬೆಳವಣಿಗೆಯಾಗಲಾರದು.

ಹೈದರಾಲಿ ನಂತರ ಅಧಿಕಾರಕ್ಕೆ ಬಂದ ಟಿಪ್ಪುವು ಚಿತ್ರದುರ್ಗದಲ್ಲಿ ಸುಭದ್ರವಾದ ಆಡಳಿತ ನೀಡುವ ಪ್ರಯತ್ನ ಮಾಡಿದನು. ಹಾಗೆಯೇ ತನ್ನ ಆಡಳಿತಕ್ಕೆ ಸೇರಿದ ಎಲ್ಲಾ ಪ್ರದೇಶದಲ್ಲಿ ಒಂದೇ ರೀತಿಯಾದ ಕಾಯಿದೆ ಕಾನೂನುಗಳನ್ನು ಜಾರಿ ಮಾಡುವ ಮೂಲಕ ಭೂಹಿಡುವಳಿ ವ್ಯವಸ್ಥೆಯ ಮೇಲೂ ಗಮನಾರ್ಹವಾದ ಬದಲಾವಣೆ ತಂದಿರುವುದನ್ನು ಗುರುತಿಸಲಾಗಿದೆ. ಇವನ ಕಾಲಾವಧಿಯಲ್ಲಿ ಪ್ರತ್ಯೇಕವಾದ ಕಂದಾಯ ಇಲಾಖೆ ಇತ್ತು. ಭೂಹಿಡುವಳಿಯ ಒಡೆತನದ ಮೇಲೆ ನಿಯಂತ್ರಣವನ್ನು ಹೇರಿ ಪ್ರಬಲ ಭೂಹಿಡುವಳಿದಾರರನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದನು. ಇವನ ಕಾಲದಲ್ಲಿ ಕಂದಾಯ ಅಧಿಕಾರಿಗಳು ಕಂದಾಯ ವಸೂಲಿ ವೇಳೆಯಲ್ಲಿ ಪ್ರಜೆಗಳಿಂದ ಲಂಚ ಪಡೆಯುತ್ತಿದ್ದರು ಎಂಬ ಬುಕಾನನ್‌ನ ವಿವರ ಕೂಡ ಇಲ್ಲಿ ಮುಖ್ಯವಾಗುತ್ತದೆ.[೩] ಟಿಪ್ಪು ಕಾಲದ ಜಿಲ್ಲಾಧಿಕಾರಿಗಳಾದ 'ಅಮೀಲರು' ಶ್ರೀಮಂತ ಮಧ್ಯವರ್ತಿ ಭೂಹಿಡುವಳಿದಾರರಿಂದ ಬಾಡಿಗೆ ಪಡೆಯುವುದರಲ್ಲಿಯೇ ಕಾಲ ಕಳೆಯುತ್ತಿದ್ದರು. ಅವರು ಹಳ್ಳಿಗಳ ಆಡಳಿತವನ್ನು ಸರಿಯಾಗಿ ನಿರ್ವಹಿಸುತ್ತಿರಲಿಲ್ಲ ಮತ್ತು ಅವರಿಗೆ ಭೂಹಿಡುವಳಿಗೆ ಸಂಬಂಧಿಸಿದ ಲೆಕ್ಕ ಪತ್ರಗಳನ್ನು ಸಿದ್ಧಗೊಳಿಸುವುದರ ಬಗ್ಗೆ ಜ್ಞಾನವಿದ್ದರೂ ಅದರ ವ್ಯಾಪ್ತಿಯ ಬಗ್ಗೆ ಅರಿವಿರಲಿಲ್ಲ ಎಂದು ಥಾಮಸ್ ಮನ್ರೋ ಹೇಳಿರುವುದು ಗಮನಾರ್ಹವಾಗಿದೆ.[೪] ಈ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿ ವಕ್ತಾರರಂತೆ ಬ್ರಿಟಿಶ್ ಪರವಾದ "ಒರಿಎಂಟಲ್ ಡೆಸ್ಪಾಟಿಸಂ" ಪೂರ್ವಗ್ರಹಗಳನ್ನು ಬುಕಾನನ್ ಮತ್ತು ಮನ್ರೋ ಅವರ ಬರವಣಿಗೆಗಳಲ್ಲಿ ನೋಡಬಹುದು. ಹೈದರ್ ಮತ್ತು ಟಿಪ್ಪುವಿನ ಆಡಳಿತಾತ್ಮಕ ಸುಧಾರಣೆಗಳನ್ನು ಇವರು ಹೀಗೆಳೆಯುವ ಪ್ರಯತ್ನಗಳ ಬಗ್ಗೆ ಅನೇಕ ಸಂದೇಹಗಳಿರುವುದರಿಂದ ಅವರ ಬರವಣಿಗೆಗಳನ್ನು ಪೂರ್ಣವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ಸಾಮ್ರಾಜ್ಯಶಾಹಿ ಹಾಗೂ ದೇಶೀ ಅರಸರ ನಡುವಿನ ಸಂಘರ್ಷವೆಂದು ಹಲವೆಡೆ ಕಂಡುಬಂದರೂ, ಅನೇಕ ಬಾರಿ ಪ್ರಮುಖವಾಗಿ ವಸಾಹತೋತ್ತರ ದಿನಗಳಲ್ಲಿ 'ಹಿಂದೂ-ಮುಸ್ಲಿಂ' ದ್ವೈಕಾಟೆಮಿಯಲ್ಲೂ ಚರ್ಚೆಯಾಗುತ್ತಿರುವುದ್ದನ್ನು ನಾವು ಕಾಣಬಹುದು. ಅಂದರೆ ಚಿತ್ರದುರ್ಗದ ಪಾಳೆಯಗಾರರನ್ನು ಟಿಪ್ಪುವು ತನ್ನ "ಬುದ್ಧಿವಂತಿಕೆ" ಅಥವಾ "ಕುತಂತ್ರಗಳಿಂದ" ನಾಶಮಾಡಿದ ಎನ್ನುವ ಕಾರಣಕ್ಕಾಗಿ ಅವನು ಸಹಜವಾಗಿಯೇ ಚಿತ್ರದುರ್ಗದ ನಾಯಕ ಪಾಳೆಯಗಾರರ ಮತ್ತು ಅವನ ಸಂತತಿಯವರ ಆಕ್ರೋಶಕ್ಕೆ ಒಳಗಾಗಬೇಕಾಗುತ್ತದೆ. ಹೀಗಾಗಿ ಟಿಪ್ಪುವು ಅವನ ಕಾಲದಲ್ಲಿಯೇ ಒಂದು ಕಡೆಯಿಂದ ಸಾಮ್ರಾಜ್ಯಶಾಹಿಗಳ ಹಾಗೂ ಇನ್ನೊಂದು ಕಡೆಯಿಂದ ಸ್ಥಳೀಯ ಪಾಳೆಯಪಟ್ಟುಗಳ ವಿರೋಧಗಳನ್ನು ಏಕಕಾಲದಲ್ಲಿ ಎದುರಿಸಬೇಕಾಗಿತ್ತು. ಈ ಕಾರಣಕ್ಕಾಗಿಯೇ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಮುಖ್ಯ ಪ್ರಶ್ನೆಯಾಗಿ ಭುಗಿಲೆದ್ದ "ಹಿಂದೂ-ಮುಸ್ಲಿಂ" ಪ್ರಶ್ನೆಗಳಲ್ಲಿ ಪಾಳೆಯಗಾರರು

"ಹಿಂದೂ"ಗಳ ವಕ್ತಾರರಂತೆಯೂ ಹಾಗೂ ಟಿಪ್ಪುವು "ಮುಸ್ಲಿಂ"ರ ವಕ್ತಾರರಂತೆಯೂ ಚಿತ್ರೀಕರಣ ಕೊಂಡಿರುವುದನ್ನು ನಾವು ಗಮನಿಸಬಹುದು. ಆದರೆ, ಪ್ರಸ್ತುತ ಅಧ್ಯಯನವು ಇಂತಹ ಪೂರ್ವಗ್ರಹಗಳಿಗಿಂತ ಭಿನ್ನವಾಗಿರುವ ಪ್ರಯತ್ನಗಳನ್ನು ಮಾಡಿದೆ. ಚಿತ್ರದುರ್ಗದ "ನಾಯಕ" ಅರಸರು ಕೆಳಜಾತಿಗಳಿಂದ ಬಂದವರಾಗಿದ್ದರೂ "ಅಧಿಕಾರದ" ಕಾರಣದಿಂದ ಜಾತಿ ಶ್ರೇಣೀಕರಣವನ್ನು ಬೆಂಬಲಿಸಿದರು.[೪] ಈ ಕಾರಣದಿಂದಾಗಿ ಅವರಿಗಿಂತಲೂ ಹಿಂದುಳಿದ ಸಮುದಾಯಗಳು ಅವರನ್ನು ಇಷ್ಟಪಟ್ಟಿರಲಿಲ್ಲ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕು. ಹಾಗೆಯೇ ಮೇಲ್ಜಾತಿಯ ಹೆಣ್ಣುಗಳನ್ನು ತಮ್ಮ "ಅಧಿಕಾರ" ಬಲದಿಂದ ವಿವಾಹವಾದ ಕಾರಣ ಮೇಲ್ಜಾತಿಯವರಿಗೂ ಅವರು ಅಪ್ರಿಯರಾಗಿದ್ದರು.[೫] ಹೀಗಾಗಿ ನಾಯಕ ಅರಸರು "ಹಿಂದು"ಗಳ ಪ್ರತಿನಿಧಿಯಾಗಿರಲಿಲ್ಲ ಎನ್ನುವುದು ಇಲ್ಲಿ ಸ್ಪಷ್ಟವಾಗಿದೆ. ಟಿಪ್ಪು ಮತ್ತು ನಾಯಕರ ನಡುವಿನ ಸಂಬಂಧಗಳನ್ನು ಈ ರೀತಿಯೇ ಅರ್ಥಮಾಡಿಕೊಳ್ಳಬೇಕಾಗಿದೆ. ಈ ಕಾರಣಕ್ಕಾಗಿಯೇ ಭೂಹಿಡುವಳಿಗಳ ಅಧ್ಯಯನದ ಮೂಲಕ ಸಮಾಜವನ್ನು ನೋಡುವ ಕ್ರಮ ಹೆಚ್ಚು ಪ್ರಸ್ತುತವಾಗಿದೆ.

ಚಿತ್ರದುರ್ಗ ಪ್ರದೇಶದ ಸಮಾಜವನ್ನು ಭೂಹಿಡುವಳಿಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಮಠಗಳ ಅಧ್ಯಯನ ಮಾಡಿರುವುದನ್ನು ಈಗಾಗಲೆ ವಿವರಿಸಲಾಗಿದೆ. ಈ ದೃಷ್ಟಿಯಿಂದ ಮಠಗಳು ಹೊಂದಿರುವ ಭೂಹಿಡುವಳಿಯ ಒಡೆತನದ ವಿಧಾನ, ಸಾಗುವಳಿ ಮಾಡುವ ಕ್ರಮ, ಮಠದ ಭೂಹಿಡುವಳಿಗಳ ಹಂಚಿಕೆ ಕುರಿತ ಚರ್ಚೆಯಲ್ಲಿ ನಾಯಕ ಅರಸರ ಕಾಲದಿಂದ ಸ್ವಾತಂತ್ರ್ಯ ನಂತರದ ಕಾಲದವರೆಗೂ ಕೃಷಿಯಾಧಾರಿತ ಉತ್ಪಾದನೆ ಆರ್ಥಿಕತೆಯ ಬುನಾದಿಯಾಗಿತ್ತು. ಮಠದ ಕೃಷಿ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವ ಸಮುದಾಯಗಳನ್ನು ಈ ಸಂದರ್ಭದಲ್ಲಿ ಗಮನಿಸಲಾಗಿದೆ. ಈ ಮಠಗಳು ನಿರ್ದಿಷ್ಟ ಸಮುದಾಯದ ಪ್ರತಿರೂಪವಾದರೂ ಇಡೀ ಸಾಮಾಜಿಕ ವ್ಯವಸ್ಥೆಯೊಂದಿಗೆ ಹೊಂದಿದ್ದ ಸಾಮುದಾಯಿಕ ಸಂಬಂಧವನ್ನು ಗುರುತಿಸಲಾಗಿದೆ. ಕೃಷಿಯೇತರ ಚಟುವಟಿಕೆ ಮತ್ತು ಉತ್ಪಾದನೆಗಳಿಗೆ ಸಂಬಂಧಿಸಿದಂತೆ ಭೂಹಿಡುವಳಿ ಹೊಂದಿದ ಮತ್ತು ಹೊಂದದ ಸಮುದಾಯಗಳ ಸಂಕೀರ್ಣ ಸಂಬಂಧದ ಹಿನ್ನೆಲೆಯಲ್ಲಿ ಜೀತಪದ್ಧತಿ, ಕಸುಬುದಾರರು, ಆಯಗಾರರು, ವ್ಯಾಪಾರಿ ಸಮುದಾಯ, ಮುಂತಾದ ವಿಷಯಗಳು ಚಿತ್ರದುರ್ಗದ ಚರಿತ್ರೆಯನ್ನು ರೂಪಿಸಲು ಮುಖ್ಯವಾದ ಆಕರಗಳಾಗುತ್ತವೆ. ಆ ಕಾಲದಲ್ಲಿ ಆದ ಹೊಸ ಬದಲಾವಣೆಗಳೂ ಇಲ್ಲಿ ಗಮನಾರ್ಹವಾದುದು. ಅವುಗಳಲ್ಲಿ ಮುಖ್ಯವಾದವು ಹೊಸ ಸಂತೆಗಳು ಮತ್ತು ಮಾರುಕಟ್ಟೆಗಳಿಗೆ ಪ್ರೋತ್ಸಾಹ, ಒಂದು ಕಡೆ

ವ್ಯಾಪಾರ ವರ್ಧನೆ, ಇನ್ನೊಂದು ಕಡೆ ವ್ಯಾಪಾರ ಮಾರ್ಗಗಳ ಸ್ಥಾಪನೆ. ಇವು ಆರ್ಥಿಕ ಪರಿಸ್ಥಿತಿಯ ಪ್ರವೃತ್ತಿಯಲ್ಲಿ ಒಂದು ಮಹತ್ತರ ಬದಲಾವಣೆಯನ್ನು ಸೂಚಿಸಿದವು. ಹೀಗಾಗಿ ೧೯ನೇ ಶತಮಾನದ ಮೊದಲ ಭಾಗದಲ್ಲಿ ಚಿತ್ರದುರ್ಗ ಪ್ರದೇಶದಲ್ಲಿಯೇ ದಾವಣಗೆರೆಯು ಕರ್ನಾಟಕದ ಮುಖ್ಯ ನಗರವಾಗಿ ಅಭಿವೃದ್ಧಿ ಹೊಂದಿರುವುದನ್ನು ನಾವು ನೋಡಬಹುದು.

ಚಿತ್ರದುರ್ಗದ ರಾಷ್ಟ್ರೀಯ ಕಾಂಗ್ರೆಸ್‌ನ ಶಾಖೆಯೊಂದಿಗೆ ೨೦ನೆಯ ಶತಮಾನದ ಮೊದಲ ಭಾಗದಿಂದಲೂ ಗುರುತಿಸಿಕೊಂಡ ನಾಯಕರೆಲ್ಲ ಪ್ರಬಲ ಸಮುದಾಯಗಳಿಗೆ ಸೇರಿದವರು. ಇವರೆಲ್ಲ ಭೂಹಿಡುವಳಿಯ ಹಿನ್ನೆಲೆಯಿಂದ ಬಂದವರಾಗಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಹಲವು ರೈತ ಸಮ್ಮೇಳನಗಳಲ್ಲಿ ಈ ನಾಯಕರು ರೈತರ ಪರವಾದ ತೆರಿಗೆ ವ್ಯವಸ್ಥೆ, ಕಡಿಮೆ ಬಡ್ಡಿದರದಲ್ಲಿ ರೈತರಿಗೆ ಸಾಲ ನೀಡಲು ಸರಕಾರಕ್ಕೆ ಒತ್ತಾಯ, ಕೃಷಿ ಬ್ಯಾಂಕ್‌ಗಳ ಸ್ಥಾಪನೆ ಮುಂತಾದ ರೈತರ ಹಿತಾಸಕ್ತಿ ಪರವಾದ ನೀತಿಗಳನ್ನು ಅನುಸರಿಸಿದರು. ಈ ನೀತಿಯು ಚಿತ್ರದುರ್ಗದ ಪ್ರಬಲ ಸಮುದಾಯಗಳ ಭೂಹಿಡುವಳಿದಾರರಿಗೆ ಹೆಚ್ಚು ಲಾಭವಾಗಿದ್ದರಿಂದ ಕಾಂಗ್ರೆಸ್ ಕೂಡ ಪ್ರಬಲ ಸಂಘಟನೆಯಾಗಿ ಬೆಳೆಯಲು ಕಾರಣ ವಾಯಿತು. ೧೯೩೦ರ ನಂತರದಲ್ಲಿ ಕಾಂಗ್ರೆಸ್ ಪಕ್ಷವು ಚಿತ್ರದುರ್ಗ ಪ್ರದೇಶದ ಚಿಕ್ಕ ಚಿಕ್ಕ ಗ್ರಾಮಗಳಲ್ಲೂ ಅನೇಕ ಕಾರ್ಯಕಾರಿ ಸಮೀತಿಗಳನ್ನು ಹೊಂದಿದ್ದ ಬಗ್ಗೆ ವಿವರಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಪ್ರಬಲ ಸಮುದಾಯಗಳ ಭೂಒಡೆಯರೇ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಸದಸ್ಯರುಗಳಾಗಿದ್ದರು. ಮುಂದೆ ನಡೆದ ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ, ಮೈಸೂರು ಚಲೋ ಚಳವಳಿಗಳಲ್ಲಿ ಇವರ ಪಾತ್ರವನ್ನು ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಚರ್ಚೆಮಾಡಲಾಗಿದೆ. ಸ್ವಾತಂತ್ರ್ಯ ಚಳವಳಿಯ ಭಾಗವಾಗಿದ್ದ ವಿವಿಧ ಮಜಲುಗಳು ಪ್ರಸ್ತುತ ಅಧ್ಯಯನದ ಒಂದು ಮುಖ್ಯವಾದ ಅಂಶ. ಸ್ವಾತಂತ್ರ್ಯ ಚಳವಳಿಯಲ್ಲಿ ಎಲ್ಲರೂ ಭಾರತೀಯ ಎಂದು ಹೋರಾಡಿದರೂ, ಏಕೀಕರಣ ಸಂದರ್ಭದಲ್ಲಿ ಅವರು 'ಲಿಂಗಾಯತ' ಮತ್ತು 'ಒಕ್ಕಲಿಗ' ಎಂಬ ಐಡೆಂಟಿಟಿಯಿಂದ ಹೋರಾಟ ಮಾಡಿದ್ದನ್ನು ನಾವು ನೋಡಬಹುದು. ಹೀಗಾಗಿ ಒಕ್ಕಲಿಗರ ಪ್ರಾಧಾನ್ಯ ಇರುವ ಒಂದು ಗುಂಪು 'ಮೈಸೂರು ಮೈಸೂರಿನವರಿಗಾಗಿ' ಎಂಬ ಘೋಷಣೆಯೊಂದಿಗೆ ತನ್ನ ಕಾರ್ಯಚಟುವಟಿಕೆ ಆರಂಭಿಸಿತು. ಇವರಿಗೆ ಲಿಂಗಾಯತರು ಸಂಖ್ಯೆಯಲ್ಲಿ ಪ್ರಧಾನವಾಗಿರುವ ಉತ್ತರ ಕರ್ನಾಟಕವು ಉದಯವಾಗಲಿರುವ ಮೈಸೂರು ರಾಜ್ಯಕ್ಕೆ ಸೇರಲು ಇಷ್ಟವಿರಲಿಲ್ಲ. ಲಿಂಗಾಯತರೇ ಪ್ರಧಾನವಾಗಿದ್ದ ಇನ್ನೊಂದು ಗುಂಪು ಲಿಂಗಾಯತ ಪ್ರಾಧಾನ್ಯತೆ ಹಿನ್ನೆಲೆಯಲ್ಲಿ ಏಕೀಕೃತ ಕರ್ನಾಟಕ ರಚನೆಯಾಗಬೇಕೆಂದು ಒತ್ತಾಯ ತಂದಿತು. ಹೀಗಾಗಿ ಕನ್ನಡ

ಭಾಷೆ ಮಾತಾಡುವ ಪ್ರದೇಶಗಳೆಲ್ಲ ಏಕೀಕರಣಗೊಂಡವು. ಇದರಿಂದಾಗಿ ಲಿಂಗಾಯತ ಸಮುದಾಯದ ಬಣಜಿಗ ಪಂಗಡದವರಿಗೆ ಏಕೀಕರಣವು ಒಂದು ರೀತಿಯಲ್ಲಿ ವರದಾನ ವಾಯಿತು. ಕರ್ನಾಟಕದ ಮೊದಲನೆಯ ಮುಖ್ಯಮಂತ್ರಿಯಾದ ಚಿತ್ರದುರ್ಗದ ಎಸ್.ನಿಜಲಿಂಗಪ್ಪನವರು ಬಣಜಿಗ ಪಂಗಡದವರು. ಕರ್ನಾಟಕದ ಒಟ್ಟು ೧೬ಜನ ಮುಖ್ಯಮಂತ್ರಿಗಳಲ್ಲಿ ೭ ಜನರು ಲಿಂಗಾಯತ ಸಮುದಾಯಕ್ಕೆ ಸೇರಿದವರು. ಈ ಲಿಂಗಾಯತ ಮುಖ್ಯಮಂತ್ರಿಗಳಲ್ಲಿ ಲಿಂಗಾಯತ ಸಾದರ ಸಮುದಾಯಕ್ಕೆ ಸೇರಿದ ಎಸ್.ಆರ್.ಬೊಮ್ಮಾಯಿ ಅವರನ್ನು ಬಿಟ್ಟರೆ ಉಳಿದಂತೆ ಕಡಿದಾಳ ಮಂಜಪ್ಪ, ಎಸ್.ನಿಜಲಿಂಗಪ್ಪ, ಬಿ.ಡಿ.ಜತ್ತಿ, ಎಸ್.ಆರ್.ಕಂಠಿ, ವೀರೇಂದ್ರ ಪಾಟೀಲ್, ಜೆ.ಎಚ್.ಪಟೇಲ್ ಇವರೆಲ್ಲ ಲಿಂಗಾಯತ ಬಣಜಿಗರು ಎಂಬುದು ಗಮನಾರ್ಹವಾಗಿದೆ. ಚಿತ್ರದುರ್ಗದಲ್ಲಿ ಸಾಂಖ್ಯಿಕವಾಗಿ ಪ್ರಬಲವಾದ ಆದರೆ ಬಣಜಿಗರಿಗೆ ಹೋಲಿಸಿದರೆ ಆರ್ಥಿಕವಾಗಿ ಹಿಂದುಳಿದ ಲಿಂಗಾಯತ ಸಾದರ ಸಮುದಾಯವು ಬಣಜಿಗ ಸಮುದಾಯದ ರಾಜಕೀಯ ಆಕಾಂಕ್ಷೆಗೆ ಸ್ಪರ್ಧಿಯಾಗಿತ್ತು. ಏಕೀಕರಣೋತ್ತರ ಕರ್ನಾಟಕ ಸರಕಾರದಲ್ಲಿ ಮಂತ್ರಿಗಳಾಗಿದ್ದ ಎಚ್. ಸಿದ್ಧವೀರಪ್ಪ ಮತ್ತು ಗಂಜಿ ವೀರಪ್ಪನವರು ಚಿತ್ರದುರ್ಗದಲ್ಲಿ ಸಾದರ ಸಮುದಾಯ ರಾಜಕೀಯ ವರ್ತುಲವನ್ನು ಬಲಪಡಿಸಿಕೊಳ್ಳುವ ಹೊತ್ತಿಗೆ ಬಣಜಿಗ ಸಮುದಾಯದ ರಾಜಕಾರಣಿಗಳು ಅನಿವಾರ್ಯವಾಗಿ ಉತ್ತರ ಕರ್ನಾಟಕದ ಲಿಂಗಾಯತರ ಕಡೆಗೆ ಬೆಂಬಲಕ್ಕಾಗಿ ಹೋಗಲೇಬೇಕಾಯಿತು. ಈ ಹಿನ್ನೆಲೆಯಲ್ಲಿ ಅವರೆಲ್ಲರೂ ವಿಫಲರಾದರು ಕೂಡ, ಕರ್ನಾಟಕದ ಏಕೀಕರಣವನ್ನು ಪ್ರಬಲವಾಗಿ ಪ್ರತಿಪಾದಿಸಿದ ಎಸ್.ನಿಜಲಿಂಗಪ್ಪನವರು ಮುಖ್ಯವಾಗಿ ಚಿತ್ರದುರ್ಗ ದವರಾದರೂ, ಮುಖ್ಯಮಂತ್ರಿಯಾದ ತರುವಾಯ ತಮ್ಮ ರಾಜಕೀಯ ನೆಲೆಯನ್ನು ಉತ್ತರ ಕರ್ನಾಟಕದಲ್ಲೇ ಕಂಡುಕೊಂಡರು. ಹಲವಾರು ಜಾತಿಗಳಿಂದ ಕೂಡಿದ ಲಿಂಗಾಯತರಲ್ಲಿ ಬಣಜಿಗ ಸಮುದಾಯವು ಅಥವಾ ಆ ಸಮುದಾಯಕ್ಕೆ ಸೇರಿದ ಮುಖ್ಯಮಂತ್ರಿಗಳಿಗೆ ಉತ್ತರ ಕರ್ನಾಟಕದ "ಕನ್ನಡ ಭಾಷಿಕರು" ಮುಖ್ಯವಾದ ಬೆಂಬಲಿಗರಾಗಿದ್ದರು ಎಂಬ ವಿಚಾರ ಪ್ರಸ್ತುತ ಕರ್ನಾಟಕದ ರಾಜಕೀಯ ಹಾಗೂ ಸಾಮಾಜಿಕ ಸಂಕೀರ್ಣತೆಗೆ ಉತ್ತಮ ಉದಾಹರಣೆಯಾಗುತ್ತದೆ.

ಅಡಿಟಿಪ್ಪಣಿ

೧. ಎಂ.ಎಸ್.ಪುಟ್ಟಣ್ಣ **ಚಿತ್ರದುರ್ಗದ ಪಾಳೆಯಗಾರರು**, ೧೯೯೭, ತ.ರಾ.ಸುಬ್ಬರಾವ್ **ದುರ್ಗಾಸ್ತಮಾನ** (ಕಾದಂಬರಿ) ಮೈಸೂರು, ೧೯೮೨, ಬಿ.ಎಲ್.ವೇಣು **ಗಂಡುಗಲಿ ಮದಕರಿನಾಯಕ** (ಕಾದಂಬರಿ) ೧೯೮೧, **ರಾಜಾ ಬಿಚ್ಚುಗತ್ತಿ ಭರಮಣ್ಣನಾಯಕ**(ಕಾದಂಬರಿ) ಚಿತ್ರದುರ್ಗದ ಬೃಹನ್ಮಠ ೧೯೯೫,

ಎಚ್.ವೀರನಾಯಕ ಹರಿತಿ, **ದುರ್ಗದ ಧವಳ ಕೀರ್ತಿ** (ನಾಟಕ) ಹರಿತಿಕೋಟೆ, ೧೯೮೧, ಎ.ಡಿ.ಕೃಷ್ಣಯ್ಯ ***ವೀರವನಿತೆ ಓಬವ್ವೆಯ ಐತಿಹಾಸಿಕತೆ*** (ಲೇಖನ) ಚಂದ್ರವಳ್ಳಿ, ೧೯೭೬, ನಾ.ಡಿಸೋಜ **ದುರ್ಗವೆಂಬ ವ್ಯೂಹ** (ನಾಟಕ) ಮೈಸೂರು, ೧೯೮೬, ಕ.ರಾ. ಕೃಷ್ಣಸ್ವಾಮಿ(ಸಂ) **ಚಿತ್ರಕಲ್ಲು ಮದಕರಿ** (ಜನಪದ ಗೀತೆಗಳ ಸಂಗ್ರಹ) ಬೆಂಗಳೂರು, ೧೯೭೫, ಎಂ.ವಿ.ಶ್ರೀನಿವಾಸ ***ಚಿತ್ರದುರ್ಗ ಜಿಲ್ಲೆಯಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆ,*** ಎಂ.ವಿ.ಶ್ರೀನಿವಾಸ, ಲಕ್ಷ್ಮಣ್ ತೆಲಗಾವಿ(ಸಂ) ಚಂದ್ರವಳ್ಳಿ, ೧೯೭೬ ಪುಟ್ಟಣ್ಣ ಕಣಗಲ್ ನಿರ್ದೇಶನದ **ನಾಗರ ಹಾವು**(೧೯೭೨) ಹಾಗೂ ಅಯ್ಯಪ್ಪ ಪಿ.ಶರ್ಮ ನಿರ್ದೇಶನದ **ದುರ್ಗದ ಹುಲಿ**(೨೦೦೦) ಎನ್ನುವ ಚಲನಚಿತ್ರಗಳನ್ನು ಇಲ್ಲಿ ಉದಾಹರಿಸಬಹುದು. ೧೯೯೮ರಲ್ಲಿ ದೂರದರ್ಶನದಲ್ಲಿ ಪ್ರಸಾರಗೊಂಡ **ಐತಿಹಾಸಿಕ ಚಿತ್ರದುರ್ಗ** (ಎಪಿಸೋಡಗಳು ೨) (೧೯೯೪) ಎನ್ನುವ ಟೆಲಿಸೀರಿಯಲ್ ಕೂಡ ಈ ಹಿನ್ನೆಲೆಯಲ್ಲಿ ಇನ್ನೊಂದು ಉದಾಹರಣೆಯನ್ನಾಗಿ ನೀಡ ಬಹುದು.

೨. ಫ್ರಾನ್ಸಿಸ್ ಬುಕಾನನ್ **ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಅಂಡ್ ಮಲಬಾರ್,** ಸಂಪುಟ-೧, ಮದ್ರಾಸ್, ೧೯೯೮, ಪು. ೩೮೮


೩. ಎಂ. ಎಚ್.ಗೋಪಾಲ್ **ಟಿಪ್ಪುಸುಲ್ತಾನ್ಸ್ ಮೈಸೂರು ಯಾನ್ ಎಕನಾಮಿಕ್ ಸ್ಟಡಿ,** ಪಾಪ್ಯೂಲರ್ ಪ್ರಕಾಶನ, ಬಾಂಬೆ, ೧೯೭೬ ಪು. ೩. ಕೆ. ಎನ್.ವೆಂಕಟಸುಬ್ಬಶಾಸ್ತ್ರೀ **ದಿ ಮನ್ರೋ ಸಿಸ್ಟಂ ಆಫ್ ಬ್ರಿಟಿಷ್ ಸ್ಟೇಟ್ಸ್‌ಮೆನ್ ಶಿಫ್ ಇನ್ ಇಂಡಿಯಾ,** ಮೈಸೂರು, ೧೯೩೬, ಪು. ೮೦

೪. ಟಿ.ಗಿರಿಜಾ, **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ೧೯೯೧, ಪು. ೧೭೦, ಚಳ್ಳಕೆರೆ ತಾಲೂಕಿನ ಹಟ್ಟಿ ಪಾಳೆಯಗಾರರು ವೀರಶೈವರಾಗಿದ್ದರು. ಚಿತ್ರದುರ್ಗದ ಪಾಳೆಯಗಾರರು ಬೇಡ ಕುಲದವರಾಗಿದ್ದರು. ಆದರೂ ಇವರಲ್ಲಿ ವಿವಾಹ ಸಂಬಂಧ ನಡೆದು ಬಂದಿತ್ತು. ಕ್ರಿ.ಶ.೧೬೭೫ರಲ್ಲಿ ಚಿತ್ರದುರ್ಗದ ಪಾಳೆಯಗಾರನಾಗಿದ್ದ ಚಿಕ್ಕಣ್ಣನಾಯಕನಿಗೆ ಹಟ್ಟಿ ಮಲ್ಲಪ್ಪನಾಯಕರ ಮಗಳು ಮಲ್ಲವ್ವನಾಗತಿಯನ್ನು ಕೊಟ್ಟು ವಿವಾಹ ಮಾಡಲಾಗಿತ್ತು.

೫. ಎಂ.ಎಸ್.ಪುಟ್ಟಣ್ಣ, **ಚಿತ್ರದುರ್ಗದ ಪಾಳೆಯಗಾರರು,** ೧೯೯೭, ಪು. ೧೯


ನಕ್ಷೆಗಳು

ವಿಜಯನಗರ ಕಾಲದ ಚಿತ್ರದುರ್ಗ ಪ್ರದೇಶದ ಆಡಳಿತ ಘಟಕಗಳು



ನಕ್ಷೆ ೧.

ನಾಯಕ ಅರಸರ ಕಾಲದ ಚಿತ್ರದುರ್ಗ



ನಕ್ಷೆ ೨.

ಹೈದರಾಲಿ ಮತ್ತು ಟಿಪ್ಪು ಕಾಲದ ಚಿತ್ರದುರ್ಗ




ನಕ್ಷೆ ೨.

ಮೈಸೂರು ಒಡೆಯರ ಕಾಲದ ಚಿತ್ರದುರ್ಗ ಜಿಲ್ಲೆ




ನಕ್ಷೆ ೪.

ಏಕೀಕರಣ ನಂತರದ ಚಿತ್ರದುರ್ಗ ಜಿಲ್ಲೆ



ನಕ್ಷೆ ೩.

೧೯೯೭ರ ನಂತರದ ಚಿತ್ರದುರ್ಗ ಜಿಲ್ಲೆ



ನಕ್ಷೆ ೬

ಪದಕೋಶ

ಪದಕೋಶ

೧. ಅಕ್ಕಡಿ : ಖುಷ್ಕಿ ಜಮೀನಿನಲ್ಲಿ ನಾಲ್ಕು ಸಾಲುಗಳ ನಂತರ ಬರುವ ಮಿಶ್ರ ಬೆಳೆಗಳ ಸಾಲು

೨. ಅರ್ಧಮಾನ್ಯದಾರ : ಅಲ್ಪಗೇಣಿದಾರದಲ್ಲಿ ಕೊಡುವ ಭೂಮಿಯನ್ನು ಅನುಭವಿಸುವವ

೩. ಅಮಲ್ದಾರ : ತಾಲೂಕಿನಲ್ಲಿ ಭೂಕಂದಾಯ ಮುಂತಾದ ತೆರಿಗೆಗಳನ್ನು ವಸೂಲು ಮಾಡಲು ನಿಯುಕ್ತವಾದ ಮುಖ್ಯಾಧಿಕಾರಿ, ಅಮಿಲ್ದಾರ, ಅಮಲುದಾರ, ಅಮಲದಾರ

೪. ಆಯಕೊಡುವುದು : ರೈತರಿಗೆ ಸಹಕಾರ ನೀಡಿದ ವೃತ್ತಿಯವರಿಗೆ ಧಾನ್ಯ ರೂಪದಲ್ಲಿ ಕೊಡುವುದು

೫. ಇನಾಂ : ಕಂದಾಯ ರಹಿತ ಕೊಡುಗೆ ಭೂಮಿ

೬. ಇನಾಂದಾರ : ಕಂದಾಯ ರಹಿತ ಭೂಮಿಯ ಮಾಲೀಕ

೭. ಇಳುವರಿ : ಪ್ರತಿ ಎಕರೆಗೆ ಬರುವ ಬೆಳೆಯ ಮೊತ್ತ

೮. ಉಂಬಳಿ : ಕಂದಾಯ ರಹಿತ ಜಮೀನು

೯. ಎಕರೆ : ವ್ಯವಸಾಯದ ಭೂಮಿಯ ಅಳತೆ

೧೦. ಎರೆ : ಫಲವತ್ತಾದ ಕಪ್ಪು ಭೂಮಿ

೧೧. ಕಂದಾಯ : ಭೂಮಿ, ಮನೆ, ಮೋದಲಾದವುಗಳಿಗಾಗಿ ಸರಕಾರಕ್ಕೆ ತೆರುವ ನಿಗದಿಯಾದ ಹಣ

೧೨. ಕರಾಬು : ಕೃಷಿ ಯೋಗ್ಯವಲ್ಲದ ಭೂಮಿ

೧೩. ಕಲ್ಲು ಜಜ್ಜು : ಕಲ್ಲುಮಣ್ಣಿನ ಸಮಮಿಶ್ರಿತ ಭೂಮಿ

೧೪. ಕಲ್ಪಟುರು : ಸಣ್ಣ ಸಣ್ಣ ಕಲ್ಲಿನಿಂದ ಕೂಡಿದ ಭೂಮಿ

೧೫. ಕ್ರಯ : ಭೂಮಿಯನ್ನು ಬೆಲೆಕೊಟ್ಟು ಕೊಂಡುಕೊಳ್ಳುವುದು

೧೬. ಕಾಯಂ ಗುತ್ತ	:	ಕಡಿಮೆದರದಲ್ಲಿ ಕಂದಾಯವನ್ನು ಕೊಡುವುದು
೧೭. ಕೆಂಗಲು, ಕೆಂಗಲ್ಲ	:	ಕೆಂಪು ಮಣ್ಣಿನ ಭೂಮಿ
೧೮. ಕೋರಿಗೆ	:	ಬೇರೊಬ್ಬರ ಹೊಲವನ್ನು ಎರಡು ಅಥವಾ ಒಂದು ಪಾಲಿನ ಕರಾರಿನ ಮೇಲೆ ಭೂಮಿಯನ್ನು ಉಳುಮೆ ಮಾಡುವುದು
೧೯. ಕೊಳಗ	:	ಧಾನ್ಯವನ್ನು ಅಳೆಯುವ ಒಂದು ಪ್ರಮಾಣ. ಈ ಪ್ರಮಾಣವನ್ನುಳ್ಳ ಅಳತೆಯ ಪಾತ್ರೆಗೂ ಕೊಳಗ ಎನ್ನುತ್ತಾರೆ
೨೦. ಕೋರು	:	ನಿರ್ದಿಷ್ಟ ಕರಾರಿನ ಮೇಲೆ ಜಮೀನನ್ನು ಉಳುಮೆಗೆ ಕೊಡುವುದು
೨೧. ಖಂಡುಗ	:	ಇಪ್ಪತ್ತು ಚೀಲದ ಧಾನ್ಯ
೨೨. ಖಂಡುಗಪೆರೆಡತ್ತು	:	ಒಂದು ಖಂಡುಗ ಬೀಜವೆರಿಯ ಗದ್ದೆ
೨೩. ಖಾತೆ	:	ಹಿಡುವಳಿ ಜಮೀನು ಲೆಕ್ಕ
೨೪. ಖುಷ್ಕಿ	:	ಒಣ ಭೂಮಿ, ಮಳೆಯ ನೀರನ್ನು ಆಶ್ರಯಿಸಿದ ಭೂಮಿ
೨೫. ಗದ್ದೆ	:	ಭತ್ತ ಮುಂತಾದ ಬೆಳೆಗಳನ್ನು ಬೆಳೆಯುವ ನೀರಾವರಿ ಜಮೀನು
೨೬. ಗಳೆ	:	ಭೂಮಿಯನ್ನು ಅಳೆಯುವಾಗ ಬಳಸುವ ಅಳತೆಗೋಲು
೨೭. ಗುತ್ತಿಗೆ	:	ಹೊಲ ಮಾಡಲು ಇನ್ನೊಬ್ಬರಿಗೆ ಕೊಡುವ ಒಪ್ಪಂದ ಗೇಣಿ, ಲಾವಣಿ
೨೮. ಗೇಣಿ	:	ಜಮೀನು ಮಾಡಲು ಇನ್ನೊಬ್ಬರಿಗೆ ಬಾಡಿಗೆಯ ಮೇರೆಗೆ ಕೊಡುವುದು
೨೯. ಜಮಾಬಂದಿ	:	ಕಂದಾಯ ವಸೂಲಿಯ ವಾರ್ಷಿಕ ಲೆಕ್ಕ
೩೦. ಜೀತ	:	ಜಮೀನ್ದಾರರ ಬಳಿ ಪಡೆದ ಒಂದು ಮೊತ್ತದ ಹಣಕ್ಕಾಗಿ ಇಡೀ ವರ್ಷ ಕೆಲಸಕ್ಕೆ ಇರುವುದು
೩೧. ತರಿ	:	ನೀರಾವರಿ ಆಶ್ರಯದ ಜಮೀನು
೩೨. ತೋಟ	:	ತೆಂಗು, ಮಾವು, ಅಡಿಕೆ ಮುಂತಾದ ಬೆಳೆಗಳನ್ನು ನೀರಾವರಿ ಮೂಲಕ ಬೆಳೆಯುವ ಜಮೀನು
೩೩. ದರಖಾಸ್ತು	:	ಸರಕಾರದ ಜಮೀನಾಗಿದ್ದದ್ದನ್ನು ಖಾಸಗಿಯವರಿಗೆ ನಿಗದಿತ ಬೆಲೆಗೆ ನೀಡಲಾದ ಭೂಮಿ

೩೪. ಪಟ್ಟಾ : ಜಮೀನಿನ ಒಡೆತನದ ಬಗ್ಗೆ ಸರಕಾರದ ದಾಖಿಲು ಪತ್ರವನ್ನು ಉಳ್ಳವನು

೩೫. ಪಾಣಿ ಲೆಕ್ಕ : ಪ್ರತಿಯೊಬ್ಬ ಜಮೀನುದಾರನ ಜಮೀನಿನ ಅಳತೆ, ಬೆಳೆ ಮುಂತಾದವನ್ನು ನಮೂದಿಸಿರುವ ದಾಖಲೆ ಪುಸ್ತಕದಲ್ಲಿರುವ ಲೆಕ್ಕ

೩೬. ಬರಬಲೂತಿ : ಗ್ರಾಮಮಟ್ಟದ ಪಟೇಲ ಮತ್ತು ಶ್ಯಾನುಭೋಗರನ್ನೊಳಗೊಂಡ ನೌಕರರ ವ್ಯವಸ್ಥೆ

೩೭. ಬಾಗಾಯತು : ನೀರಾವರಿ ಜಮೀನಿಗೆ ಕಂದಾಯ ಕಟ್ಟುವ ವಿಧಾನ

೩೮. ಬೆದ್ದಲು : ಹೊಲವಾಗಿ ಬಳಕೆಯಾಗುವ ಜಮೀನು

೩೯. ಭೂಹಿಡುವಳಿದಾರ : ರೈತ

೪೦. ಭೋಗ್ಯ : ರೈತನು ಹಣವನ್ನು ಪಡೆದು ತನ್ನ ಭೂಮಿಯ ಸಾಗುವಳಿ ಹಕ್ಕನ್ನು ಒಂದು ನಿರ್ದಿಷ್ಟ ಕಾಲದವರೆಗೆ ಹಣವನ್ನು ಕೊಟ್ಟವರಿಗೆ ನೀಡಿ ಅವಧಿ ಮುಗಿದ ನಂತರ ಪಡೆದಿದ್ದ ಹಣವನ್ನು ಹಿಂತಿರುಗಿಸಿ, ತನ್ನ ಭೂಮಿಯನ್ನು ಹಿಂದಕ್ಕೆ ಪಡೆಯುವುದು.

೪೧. ಮತ್ತರು : ಭೂಮಿಯ ಅಳತೆಯ ಒಂದು ಪ್ರಮಾಣ

೪೨. ಮಾಗಣಿ : ಜಿಲ್ಲಾ ಅಥವಾ ತಾಲೂಕಿನ ವಿಭಾಗ

೪೩. ಮಾರು : ಭೂಮಿಯ ಅಳತೆಯ ಒಂದು ಪ್ರಮಾಣ

೪೪. ಮೋಜಣಿ : ಭೂಮಿಯನ್ನು ಕಾನೂನಿನ ಪ್ರಕಾರ ಅಳೆದು ದಾಖಲಿಸುವುದು

೪೫. ಮೌಸ್ : ಭೂಮಿಯ ಅಳತೆಯ ಪ್ರಮಾಣ

೪೬. ಲಾವಣಿ : ಭೂಮಾಲೀಕನಿಗೆ ಅವನ ಒಡೆತನಕ್ಕೆ ಭೂಮಿ ಉಳುವವನು ಇಂತಿಷ್ಟು ಮೊತ್ತದ ನಿಗದಿಪಡಿಸಿದ ಹಣ ಅಥವಾ ಧಾನ್ಯವನ್ನು ಕೊಡುವುದು

೪೭. ಲಿಂಗಮುದ್ರೆಕಲ್ಲು : ಭೂಮಿಯ ಗುರುತಿಗಾಗಿ ನೆಟ್ಟಕಲ್ಲು

೪೮. ವಂಶಾವೃಕ್ಷ : ಒಬ್ಬನ ಜಮೀನಿನ ಒಡೆತನವನ್ನು ತನ್ನ ಮಕ್ಕಳಿಗೆ ವರ್ಗಾಯಿಸಬೇಕಾದಾಗ ನೀಡುವ ಕುಟುಂಬದ ವಿವರ

೪೯. ವಾರ : ವ್ಯವಸಾಯ ಮಾಡುವವನು, ಮಾಲೀಕ ಇಬ್ಬರೂ ಅರ್ಧ ಅರ್ಧ ಖರ್ಚು ಭರಿಸಿ ಬೆಳೆದು ಅರ್ಧ ಅರ್ಧ ಹಂಚಿಕೊಳ್ಳುವುದು

೫೦. ಶ್ಯಾನುಭೋಗ : ಕೃಷಿಯ ಸಂಪೂರ್ಣ ದಾಖಲೆಗಳನ್ನು ಹೊಂದಿರುತ್ತಿದ್ದ ಗ್ರಾಮ ಮಟ್ಟದ ಸರಕಾರಿ ನೌಕರ

೫೧. ಶಿರಸ್ತೇದಾರ : ಜಿಲ್ಲಾಧಿಕಾರಿಗಳ ಕಛೇರಿಯಲ್ಲಿರುವ ಮುಖ್ಯ ಕಂದಾಯ ಅಧಿಕಾರಿ

೫೨. ಸಾಗುವಳಿದಾರ : ಗೇಣಿದಾರ, ವ್ಯವಸಾಯಗಾರ, ರೈತ, ಜಮೀನನ್ನು ಸಾಗುವಳಿ ಮಾಡುವ ಕೃಷಿಕ

೫೩. ಸರ್ವೆ : ಮೋಜಿಣಿ ಕೆಲಸ ಮಾಡುವುದು ಜಮೀನನ್ನು ಅಳೆದು ಅದಕ್ಕೊಂದು ಸಂಖ್ಯೆಯನ್ನು ನೀಡುವುದು

೫೪. ಸೀವುದು : ಹುಲ್ಲಿನ ಸಣ್ಣ ಕಟ್ಟು

೫೫. ಹಕ್ಕುದಾರಿ : ಒಡೆತನಕ್ಕೆ ಒಳಪಟ್ಟ ಭೂಮಿ

೫೬. ಹಕ್ಕು ರಿಜಿಸ್ಟಾರ್ : ಜಮೀನುದಾರನ ಹೊಲಕ್ಕೆ ಸಂಬಂಧಿಸಿದ ವಿವರಣೆಗಳನ್ನು ಒಳಗೊಂಡಿದ್ದು

೫೭. ಹಿಸ್ಸೆ : ಜಮೀನು ಭಾಗ ಮಾಡಿ ಹಂಚಿಕೊಳ್ಳುವುದು

೫೮. ಹುಲ್ಲುಗಾವಲು : ಜಾನುವಾರಗಳ ಮೇವಿಗೆ ಮೀಸಲಾದ ಭೂಮಿ

೫೯. ಹೊಲದ ನಕಾಶೆ : ಒಂದು ಊರಿನ ಜಮೀನಿಗೆ ಸಂಬಂಧಪಟ್ಟ ನಕಾಶೆ

೬೦. ಹೇರು : ಎರಡು ಚೀಲಗಳ ಅಳತೆ

೬೧. ಹೊಲ ಖಾತೆ : ಭೂಮಿ ನೊಂದಣಿ

೬೨. ಹೊಲದೆರೆ : ಹೊಲದ ಮೇಲೆ ಹಾಕುವ ಒಂದು ಬಗೆಯ ತೆರಿಗೆ

ಗ್ರಂಥ ಸೂಚಿ

ಗ್ರಂಥ ಸೂಚಿ

ಶಾಸನಗಳು

೧. ಎಪಿಗ್ರಫಿ ಕರ್ನಾಟಕ, ಕೊಡಗು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೨

೨. ಕರ್ನಾಟಕ ಶಾಸನ ಸಂಪುಟ-೩, ಮೈಸೂರು ಜಿಲ್ಲೆ ಭಾಗ-೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪

೩. ಗೋಪಾಲ್ ಬಿ. ಆರ್. (ಸಂ)., ವಿಜಯನಗರ ಇನ್‌ಸ್ಕ್ರಿಪ್ಷನ್ಸ್ ಸಂಪುಟ-೨, ಪುರಾತತ್ವ ಇಲಾಖೆ, ಕರ್ನಾಟಕ ಸರಕಾರಬೆಂಗಳೂರು, ೧೯೮೬

೪. ರೈಸ್ ಬಿ. ಎಲ್. ಎಪಿಗ್ರಾಫಿಯ ಆಫ್ ಕರ್ನಾಟಕ, ಸಂ. ೧೧, ಬೆಂಗಳೂರು, ೧೯೦೪

ಅಪ್ರಕಟಿತ ಆಧಾರಗಳು

೧. ಇನಾಂ ದೇವಾಲಯಗಳ ತಸ್ತಿಕ್ ನೋಂದಣಿ ಪುಸ್ತಕ, ಧಾರ್ಮಿಕ ಮತ್ತು ದತ್ತಿ ಉಪವಿಭಾಗ, ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ.

೨. ಕ್ಯಾಪ್ಟನ್ ಚಾಲ್ಸ್ಮರ್ಸ್, ರಿಪೋರ್ಟ್ ಆನ್ ಚಿತ್ರದುರ್ಗ ಡಿವಿಜನ್ ಆಫ್ ಮೈಸೂರು, ೧೮೪೨, ಪು.೩೦ ಕರ್ನಾಟಕ ಸ್ಟೇಟ್ ಆರಿರ್ಕೈಸ್, ಬೆಂಗಳೂರು

೩. ಗೌರ್ನಮೆಂಟ್ ಆಫ್ ಹಿಸ್ ಹೈನೆಸ್ ದಿ ಮಹಾರಾಜ ಆಫ್ ಮೈಸೂರು, ಪ್ರೊಸೀಡಿಂಗ್ಸ್ ಆಫ್ ದಿ ಮೈಸೂರು, ರೆಪ್ರಜಟೇಟಿವ್ ಅಸೆಂಬ್ಲಿ(ದಸರಾ ಸೆಶನ್) ಅಕ್ಟೋಬರ್-ನವೆಂಬರ್ ೧೯೨೮, ಮೈಸೂರು ಗೌರ್ನಮೆಂಟ್ ಪ್ರೆಸ್, ೧೯೨೯, ಪು. ೨೧೪

೪. ಗೌರ್ನಮೆಂಟ್ ಆಫ್ ಹಿಸ್ ಹೈನೆಸ್ ದಿ ಮಹಾರಾಜ ಆಫ್ ಮೈಸೂರು, ಪ್ರೊಸೀಡಿಂಗ್ಸ್ ಆಫ್ ದಿ ಮೈಸೂರು, ರೆಪ್ರಜಂಟೇಟಿವ್ ಅಸೆಂಬ್ಲಿ(ದಸರಾ ಸೆಶನ್) ಅಕ್ಟೋಬರ್-ನವೆಂಬರ್ ೧೯೨೮, ಮೈಸೂರು ಗೌರ್ನಮೆಂಟ್ ಪ್ರೆಸ್, ೧೯೩೧, ಪು. ೧೨೨೧

೫. ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ, ೧೯೬೯ರ ಅಡಿಯಲ್ಲಿ ಜಿಲ್ಲೆಯಲ್ಲಿ ವಿತರಣೆಯಾದ ಭೂ ಹಂಚಿಕೆ ಕುರಿತ ವಿವರಗಳು ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ಇಲಾಖೆ, ಚಿತ್ರದುರ್ಗ

೬. ೧೯೯೦-೯೧ರ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಭೂಹಿಡುವಳಿಗಳ ವಿಸ್ತೀರ್ಣ ಕುರಿತ ಮಾಹಿತಿ ನೊಂದಾಣಿ ಪುಸ್ತಕ, ಚಿತ್ರದುರ್ಗ ಜಿಲ್ಲಾ ಕಂದಾಯ ಅಧಿಕಾರಿಗಳ ವಿಭಾಗ, ಚಿತ್ರದುರ್ಗ

೭. ಚಿತ್ರದುರ್ಗ ಜಿಲ್ಲಾ ಕೈಗಾರಿಕಾ ಘಟಕದ ಕಚೇರಿಯ ಅಂಕಿ-ಅಂಶಗಳು, ಚಿತ್ರದುರ್ಗ

೮. ೧೯೯೦-೯೧ರ ಪ್ರಕಾರ ಭೌಗೋಳಿಕ ವಿಸ್ತೀರ್ಣ ಮತ್ತು ಸಾಗುವಳಿಯಾದ ಭೂಹಿಡುವಳಿಗಳನ್ನು ವಿವರಿಸುವ ನೊಂದಾಣಿ ಪುಸ್ತಕ ಚಿತ್ರದುರ್ಗ ಜಿಲ್ಲಾ ಭೂ ದಾಖಲಾತಿ ವಿಭಾಗ, ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ

೯. ಜಟ್ಟಿಂಗಿರಾಮೇಶ್ವರ ದೇವಾಲಯದ ತಸ್ತಿಕ್, ಮೊಳಕಾಲ್ಮೂರು ತಾಲ್ಲೂಕು, ರಾಮಸಾಗರ ಗ್ರಾಮ, ಚಿತ್ರದುರ್ಗ ಜಿಲ್ಲಾ ಕಛೇರಿ, ಚಿತ್ರದುರ್ಗ

೧೦. ಜಮೀನು ಹಕ್ಕುಗಳ ದಾಖಲಾತಿ ಸ್ಕೀಂ, ಗೌರ್ನಮೆಂಟ್ ಆರ್ಡರ್, ನಂ.೪೫೪೫, ಡೆವೆಲಪ್‌ಮೆಂಟ್ ಸೆಕ್ರೆಟರಿಯೇಟ್, ನಂ.ಆರ್.೪೫೪೫, ಎಲ್.ಎಸ್.೩೮/೩೨/೫ ಆರ್ ೯-೧೦ನೇ ಮಾರ್ಚ್, ೧೯೩೩, ಹೊಸದುರ್ಗ ತಾಲೂಕು ಅಧಿಕಾರಿಗಳ ದಾಖಲಾತಿ ವಿಭಾಗ ಚಿತ್ರದುರ್ಗ ಜಿಲ್ಲೆ

೧೧. ಪೇಪರ್ಸ್ ರಿಲೇಟಿಂಗ್ ಟು ದಿ ಸರ್ವೇ ಅಂಡ್ ಸೆಟ್ಲ್‌ಮೆಂಟ್ ಆಫ್ ಚಿತ್ರದುರ್ಗ ಡಿಸ್ಟ್ರಿಕ್ಟ್, ಕರ್ನಾಟಕ ಸ್ಟೇಟ್ ಆರಕ್ರೈಸ್, ಬೆಂಗಳೂರು

೧೨. ಮಹೀಶೂರ ಶ್ರೀ ಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಅವರ ವಂಶರತ್ನಾಕರ, ಮೈಸೂರು ಮುದ್ರಾಕ್ಷರ ಶಾಲೆ, ಮಿಥಿಕ್ ಸೊಸೈಟಿ, ಬೆಂಗಳೂರು, ೧೮೮೭

೧೩. ಮೈಸೂರು ಗೆಜೆಟ್ ಜನವರಿ ೧೧, ೧೮೮೧, ಮೈಸೂರು ಸರಕಾರ, ಮೈಸೂರು

೧೪. ಮೈಸೂರು ಗೆಜೆಟ್ ಮಾರ್ಚ್ ೫, ೧೮೮೧, ಮೈಸೂರು ಸರಕಾರ, ಮೈಸೂರು

೧೫. ಮೈಸೂರು ಗೆಜೆಟ್ ಏಪ್ರಿಲ್ ೧೧, ೧೮೮೬, ಮೈಸೂರು ಸರಕಾರ, ಮೈಸೂರು

೧೬. ಮೈಸೂರು ರೆವಿನ್ಯೂ ಮ್ಯಾನ್ಯುಯಲ್, ಸರಕಾರದ ಛಾಪಾ ಖಾನೆಯಲ್ಲಿ ಮುದ್ರಿಸಲ್ಪಟ್ಟಿತು. ಮೈಸೂರು,೧೯೧೯

೧೭. ಮೈಸೂರು ಲ್ಯಾಂಡ್ ರೆವಿನ್ಯೂ ಕೊಡುಗೆ ಅನುಸಾರವಾಗಿ ರಚಿಸಿದ ನಿಬಂಧನೆಗಳು, ಮೈಸೂರು ಸರಕಾರ, ಮೈಸೂರು, ೧೯೩೭

೧೮. ಸ್ಪ್ರಿಕ್ಟಲಿ ಕನ್ಫಿಡೆನ್ಶಿಯಲ್ ನೈಟ್ಲಿ ರಿಪೋರ್ಟ ಫಾರ್ ದಿ ಫಸ್ಟ್ ಆಫ್ ಮಾರ್ಚ್, ೧೯೪೧ ಕರ್ನಾಟಕ ಸ್ಟೇಟ್ ಆರಕ್ಕೈವ್ಸ್, ಬೆಂಗಳೂರು

೧೯. ಸ್ಪೇಶಲ್ ಬ್ರಾಂಚ್, ಅಬ್‌ಸ್ಟ್ರಾಕ್ಟ್ ಫಾರ ದಿ ವೀಕ್ ಎಂಡಿಂಗ್, ಸಾಟರ್‌ಡೇ ೨೭ ಜನವರಿ, ೧೯೩೭, ಚಿತ್ರದುರ್ಗ ಜಿಲ್ಲಾ ಕಛೇರಿ

೨೦. ಸ್ಪೇಶಲ್ ಬ್ರಾಂಚ್, ಅಬ್ಸ್‌ಸ್ಟ್ರಾಕ್ ಫಾರ ದಿ ವೀಕ್ ಎಂಡಿಂಗ್, ಸಾಟರ್‌ಡೇ ೨೮ ಜನವರಿ, ೧೯೩೯, ಚಿತ್ರದುರ್ಗ ಜಿಲ್ಲಾ ಕಛೇರಿ

೨೧. ಸ್ಟೋಕ್ಸ್ ಎಚ್. ದಿ ರಿಪೋರ್ಟ್ ಯಾನ್ ದಿ ನಗರ ಡಿವಿಜನ್ ಆಫ್ ಮೈಸೂರು, ೧೯-೫-೧೮೮೮, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ವಿಧಾನ ಸೌಧ, ಬೆಂಗಳೂರು, ಪ್ಯಾರಾ-೬

೨೨. ರಿಪೋರ್ಟ ಆನ್ ದಿ ಆಡ್ಮಿನಿಸ್ಟ್ರೇಶನ್ ಆಫ್ ಮೈಸೂರು, ೧೮೭೨-೭೩, ಕರ್ನಾಟಕ ಸ್ಟೇಟ್ ಆರಕ್ಕೈವ್ಸ್, ಬೆಂಗಳೂರು

೨೩. ಹೊಳಲ್ಕೆರೆ ತಾಲೂಕು, ಬರಬಲೂತಿ ರಿಜಿಸ್ಟ್ರಾರ್ ೧೯೩೩, ಹೊಳಲ್ಕೆರೆ ತಾಲೂಕು ಅಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ

೨೪. ೧೯೧೩ ಜುಲೈ ೨೮ನೇ ಹುಕುಂ ೯೬೮-೭೭, ಎಲ್.ಆರ್.೬೧೯, ೧೨-೨ನೇ ನಂಬರಿನ ಸರಕಾರಿ ಹುಕುಂ, ಕರ್ನಾಟಕ ಸ್ಟೇಟ್ ಆರಕ್ಕೈವ್ಸ್, ಬೆಂಗಳೂರು

೨೫. ೧೯೨೫ ಆಗಸ್ಟ್ ೧೮ನೇ ಹುಕುಂ ರೂಲ್ಸ್ ೮೬೯-೭೫, ಎಲ್.ಆರ್.೭೫-೨೫-೨ನೇ ನಂಬರಿನ ಸರಕಾರಿ ಹುಕುಂ, ಕರ್ನಾಟಕ ಸ್ಟೇಟ್ ಆರಕ್ಕೈವ್ಸ್, ಬೆಂಗಳೂರು

೨೬. ೧೯೨೭ ಜುಲೈ ೯೦ನೇ ಹುಕುಂ ರೂಲ್ಸ್ ೧೯೭-೨೧೩ ಎಲ್.ಆರ್.೯೨-೨೬, ೮ನೇ ನಂಬರಿನ ಸರಕಾರಿ ಹುಕುಂ, ಕರ್ನಾಟಕ ಸ್ಟೇಟ್ ಆರಕ್ಕೈವ್ಸ್, ಬೆಂಗಳೂರು

೨೭. ೧೯೩೨ ಏಪ್ರಿಲ್ ೧೨ನೇ ಹುಕುಂ ರೂಲ್ಸ್ ೪೮೦೪ ಎಲ್.ಆರ್.೯೧-೨೯-೯ನೇ ನಂಬರಿನ ಮತ್ತು ೧೯೩೩ನೇ ಮಾರ್ಚ್ ೧೪ನೇ ಹುಕ್ಕುಂ, ಕರ್ನಾಟಕ ಸ್ಟೇಟ್ ಆರಕ್ಕೈವ್ಸ್, ಬೆಂಗಳೂರು

ಪ್ರಕಟಿತ ಗ್ರಂಥಗಳು

೧. ಅಂಗಡಿ ಎಸ್. ಎಸ್., **ಕುಂಬಾರ ವೃತ್ತಿಪದಕೋಶ**, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ವಿರಕ್ತಮಠ, ದೇಸನೂರು, ೧೯೯೮

೨. ಅಬ್ಬೆ ಜೆ.ಎ. ದುಬಾಯಿಸ್, **ಹಿಂದೂ ಮ್ಯಾನರ್ಸ ಕಸ್ಟಮ್ಸ್ ಆ್ಯಂಡ್ ಸೆರೆಮೊನೀಸ್**, ಆಕ್ಸ್‌ಫರ್ಡ್ ಯುನಿವರಸಿಟಿ ಪ್ರೆಸ್, ಲಂಡನ್, ೧೯೦೬

೩. ಅಮೀಲ್ ಪೂರ್‌ಕರ್ ಜೆ. ಎಲ್. **ಭಾರತದಲ್ಲಿ ಜೀತ ಪದ್ಧತಿ**, ಎಸ್.ಬಿ.ಎಸ್.ಪಬ್ಲಿಷರ್ಸ್, ಬೆಂಗಳೂರು, ೧೯೯೨

೪. ಈಶ್ವರಪ್ಪ ಎಂ. ಜಿ., **ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫

೫. ಕಣಕುಪ್ಪಿ ಕೊಟ್ಟೂರು ಬಸವಪ್ಪ, **ಶ್ರೀ ಜಗದ್ಗುರು ಜಯದೇವ ದಿಗ್ವಿಜಯ**, ಶ್ರೀ ಜಯದೇವ ಪ್ರೆಸ್, ದಾವಣಗೆರೆ, ೧೯೬೬

೬. ಕೃಷ್ಣಮೂರ್ತಿ ಹಸೂರು, **ಲೀಲಾವತಿ-ಪದ್ಮಾವತಿ**, ಚಿತ್ರದುರ್ಗ ಜಿಲ್ಲಾ ಜಾನಪದ ಸಮಿತಿ, ಬೆಂಗಳೂರು, ೧೯೭೮

೭. ಕೃಷ್ಣಸ್ವಾಮಿ ಕ.ರಾ., **ಚಿತ್ರಕಲ್ಲು ಮದಕರಿ**, ಜಾನಪದ ಅಕಾಡೆಮಿ, ಬೆಂಗಳೂರು, ೧೯೭೫

೮. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ರೇಖಾ ಪ್ರಕಾಶನ, ದಾವಣಗೆರೆ, ೧೯೯೧

೯. ಗೋಪಾಲ್ ಎಂ. ಎಚ್., **ಟಿಪ್ಪುಸುಲ್ತಾನ್ಸ್ ಮೈಸೂರು ಯಾನ್ ಎಕನಾಮಿಕ್ ಸ್ಟಡಿ**, ಪಾಪ್ಯೂಲರ್ ಪ್ರಕಾಶನ, ಬಾಂಬೆ, ೧೯೭೬,

೧೦. ಗೋಪಾಲ್ ಎಂ. ಎಚ್., **ದಿ ಫೈನಾನ್ಸ್ ಆಫ್ ಮೈಸೂರು ಸ್ಟೇಟ್**, ೧೭೯೯-೧೮೩೧, ಪಾಪ್ಯೂಲರ್ ಪ್ರಕಾಶನ, ಬಾಂಬೆ, ೧೯೬೦

೧೧. ಗೋಪಾಲರಾವ್ ಎಚ್. ಎಸ್., **ಕರ್ನಾಟಕ ಏಕೀಕರಣ ಇತಿಹಾಸ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬

೧೨. ಜವರೇಗೌಡ ದೇ. **ಕರ್ನಾಟಕದ ರೂವಾರಿ**(ಶ್ರೀ ನಿಜಲಿಂಗಪ್ಪನವರ ಜೀವನ ಚರಿತ್ರೆ), ಕಲಾ ಕಂಠೀರವ, ಟಿ. ಕರಿಬಸಯ್ಯ ಟ್ರಸ್ಟ್, ಬೆಂಗಳೂರು, ೧೯೮೫

೧೩. ಜೇಮ್ಸ್ ಮನೋರ್, ಪೊಲಿಟಿಕಲ್ ಚೇಂಜ್ ಇನ್ ಯ್ಯಾನ್ ಇಂಡಿಯಾನ್ ಸ್ಟೇಟ್, ಮೈಸೂರು, ೧೯೧೭-೧೯೫೫, ಸೌತ ಏಷಿಯಾನ್ ಬುಕ್, ದೆಹಲಿ, ೧೯೭೮

೧೪. ಜೋಶಿ ಪಿ. ಸಿ., ಲ್ಯಾಂಡ್ ರಿಫಾರಮ್ಸ್ ಇನ್ ಇಂಡಿಯಾ, ಟ್ರೆಂಡ್ಸ್ ಅಂಡ್ ಪ್ರಾಸ್‌ಪೆಕ್ಟಿವ್ಸ್, ಭಾಗ-೧, ನವದೆಹಲಿ, ೧೯೭೫

೧೫. ತಿಪ್ಪೇಸ್ವಾಮಿ ಪಿ. ಆರ್., ಹೋರಾಟಗಾರ ಕೆಂಚಪ್ಪ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ೧೯೯೭

೧೬. ದಾಮ್ಲೆ ಸಿ. ಬಿ., ಲ್ಯಾಂಡ್ ರಿಫಾರಮ್ಸ್ ಅಂಡ್ ಚೇಂಜಿಂಗ್ ಅಗ್ರೇರಿಯನ್ ರಿಲೇಷನ್ಸ್, ನವದೆಹಲಿ, ೧೯೯೨

೧೭. ದಿವಾಕರ್ ಆರ್. ಆರ್., ಕರ್ನಾಟಕ ಏಕೀಕರಣದ ಕಥೆ, ವಿವೇಕ ಪ್ರಕಾಶನ, ಹುಬ್ಬಳ್ಳಿ, ೧೯೫೬

೧೮. ನಾಗೇಶ ಹಾ. ವೆಂ., ಭಾರತೀಯ ಗ್ರಾಮ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೬

೧೯. ನೀಲಕಂಠ ಶಾಸ್ತ್ರಿ ಕೆ. ಎ., ಹಿಸ್ಟರಿ ಆಫ್ ಸೌತ್ ಇಂಡಿಯಾ ಫ್ರಂ ಹಿಸ್ಟಾರಿಕಲ್ ಟೈಮ್ಸ್ ಟು ದಿ ಫಾಲ್ ಆಫ್ ದಿ ವಿಜಯನಗರ ಎಂಪೈರ್, ಮದ್ರಾಸ್ ಯೂನಿವರಿಸಿಟಿ, ಮದ್ರಾಸ್, ೧೯೫೮

೨೦. ನೀಲಕಂಠ ಶಾಸ್ತ್ರಿ ಕೆ. ಎ., ದಿ ಚೋಳಾಸ್, ಮದ್ರಾಸ್ ಯೂನಿವರಿಸಿಟಿ, ಮದ್ರಾಸ್, ೧೯೫೫

೨೧. ಪಾಟೀಲ್ ಕಲ್ಲನಗೌಡ ಕರ್ನಾಟಕ ಏಕೀಕರಣದ ಹಾದಿಯಲ್ಲಿ, ವಿವೇಕ ಪ್ರಕಾಶನ, ಹುಬ್ಬಳ್ಳಿ, ೧೯೮೬

೨೨. ಪುಟ್ಟಣ್ಣ ಎಂ. ಎಸ್., ಚಿತ್ರದುರ್ಗದ ಪಾಳೆಯಗಾರರು, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೯೭

೨೩. ಪುಟ್ಟಪ್ಪ ಕೆ. ವಿ., ಭಾರತೀಯ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೫೪

೨೪. ಫ್ರಾನ್ಸಿಸ್ ಬುಕಾನನ್ ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಅಂಡ್ ಮಲಬಾರ್, ಸಂಪುಟ-೧, ಪರಿಷ್ಕೃತ ಮುದ್ರಣ, ಏಷಿಯನ್ ಎಜುಕೇಷನಲ್ ಸರ್ವಿಸ್, ದೆಹಲಿ, ಮದ್ರಾಸ್, ೧೯೮೮

೨೫. ಬರ್ರಿಷ್ ಕ್ರಿಸ್ಪ್, ದಿ ಮೈಸೂರಿಯೆನ್ ರೆವಿನ್ಯೂ ರೆಗುಲೇಷನ್ಸ್, ಕಲ್ಕತ್ತಾ, ೧೭೯೨

೨೬. ಬಿಪಿನ್‌ಚಂದ್ರ ಮತ್ತು ಇತರರು, ಇಂಡಿಯಾಸ್ ಸ್ಟ್ರಗಲ್ ಫಾರ್ ಫ್ರೀಡಂ, ಪಿಂಗ್‌ವಿನ್ ಪಬ್ಲಿಕೇಷನ್, ನವದೆಹಲಿ, ೧೯೮೩

೨೭. ಬೌರಿಂಗ್ ಎಲ್. ಬಿ., ಈಸ್ಟರನ್ ಎಕ್ಸ್‌ಪೀರಿಯನ್ಸ್, ಲಂಡನ್, ೧೮೭೨

೨೮. ಮಹಾಲಿಂಗಮ್ ಟಿ.ವಿ., ಆಡಮಿನಿಸ್ಟ್ರೇಷನ್ ಆ್ಯಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ, ಯೂನಿವರಸಿಟಿ ಆಫ್ ಮದ್ರಾಸ್, ಮದ್ರಾಸ್, ೧೯೭೫

೨೯. ಮಾರ್ಕ್‌ವಿಲ್ಕ್ಸ್ , ಹಿಸ್ಟಾರಿಕಲ್ ಸ್ಕೆಚಸ್ ಆಫ್ ದಿ ಸೌತ್ ಆಫ್ ಇಂಡಿಯಾ ಇನ್ ಯ್ಯಾನ್, ಅಟೆಸ್ಟ್ ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರು, ಏಷ್ಯನ್ ಎಜುಕೇಷನಲ್ ಸರ್ವೀಸ್, ನ್ಯೂ ದೆಹಲಿ, ೧೯೮೯, ಸಂಪುಟ ೧

೩೦. ಮೊಹಿಬ್ಬೂಲ್ ಹಸನ್, ಹಿಸ್ಟರಿ ಆಫ್ ಟಿಪ್ಪುಸುಲ್ತಾನ್, ದಿ ವರ್ಲ್ಡ್‌ಪ್ರೆಸ್, ಕಲ್ಕತ್ತಾ, ೧೯೭೧

೩೧. ಯೋಗಿಶ್ವರಪ್ಪ ಡಿ. ಎನ್., ಹಾಗಲವಾಡಿ ನಾಯಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩೨. ರಾಘವೇಂದ್ರರಾವ್ ಕೆ., ರಾಷ್ಟ್ರ ಬಂಧು, ಎಸ್.ನಿಜಲಿಂಗಪ್ಪ ಮ್ಯಾನ್ ಅಂಡ್ ಸ್ಟೇಟ್ ಮ್ಯಾನ್, ಶ್ರೀ ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್, ಬೆಂಗಳೂರು, ೧೯೯೯

೩೩. ರಾಬರ್ಟ್‌ಸಿವಿಲ್, ಎ ಫರ್‌ಗಾಟನ್ ಎಂಫೈರ್ (ವಿಜಯನಗರ) ಏಷಿಯನ್ ಏಜುಕೇಶನಲ್ ಸರ್ವಿಸ್, ದೆಹಲಿ, ೧೯೯೧

೩೪. ರೋಮಿಲಾ ಥಾಪರ್, ದಿ ಫಾಸ್ಟ್ ಆ್ಯಂಡ್ ಪ್ರಿಜಿಡಿಸ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ದೆಹಲಿ, ೧೯೭೫

೩೫. ವೀರತಪ್ಪ ಕೆ. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ವಿಜಯರವಿ ಪ್ರಕಾಶನ, ಬೆಂಗಳೂರು, ೧೯೭೭

೩೬. ವೆಂಕಟರತ್ನಂ ಎಂ. ವಿ., ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ವಿಜಯನಗರ ಎಂಫೈರ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨

೩೭. ವೆಂಕಟರತ್ನಂ ಎ. ವಿ., ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪

೩೮. ವೆಂಕಟಸುಬ್ಬಶಾಸ್ತ್ರಿ ಎಸ್., ಅಡ್ಮಿನಿಸ್ಟ್ರೇಷನ್ ಅಂಡರ್ ಸರ್ ಮಾರ್ಕ್‌ಕಬ್ಬನ್, ಲಂಡನ್, ೧೯೩೨

೩೯. ವೆಂಕಟಸುಬ್ಬಶಾಸ್ತ್ರೀ ಕೆ. ಎಸ್., ದಿ ಮನ್ರೋ ಸಿಸ್ಟಂ ಆಫ್ ಬ್ರಿಟಿಷ್ ಸ್ಟೇಟ್ಸ್‌ಮೆನ್ ಶಿಫ್ ಇನ್ ಇಂಡಿಯಾ, ದಿ ಯುನಿವರ್‌ಸಿಟಿ ಆಫ್ ಮೈಸೂರ್, ಮೈಸೂರು, ೧೯೩೯

೪೦. ವೇಮಾರೆಡ್ಡಿ ಎಲ್., ಪಟೇಲರ ಮತ್ತು ಶ್ಯಾನಭೋಗರ ಕರ್ತವ್ಯಗಳು, ಸರಕಾರಿ ಮುದ್ರಣಾಲಯ, ಬೆಂಗಳೂರು, ೧೯೩೬

೪೧. ಶಂಕರನಾರಾಯಣರಾವ್ ಎಸ್. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ, ಬೆಂಗಳೂರು, ೧೯೯೧

೪೨. ಶಾಮಚರಣ ದುಬೆ, ಆರ್.ಎಲ್.ಅನಂತರಾಮಯ್ಯ, (ಅನು) ಭಾರತೀಯ ಸಮಾಜ, ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ, ದೆಹಲಿ, ೧೯೯೪

೪೩. ಶಾಮರಾಯರು ಎಂ., ಮೈಸೂರು ಸಂಸ್ಥಾನದ ಚರಿತ್ರಾಸಾರ, ಸರಕಾರಿ ಮುದ್ರಣಾಲಯ, ಮೈಸೂರು, ೧೮೮೩

೪೪. ಶಾಮರಾವ್ ಎಂ., ಮೈಸೂರು ಸಂಸ್ಥಾನದ ಚರಿತ್ರೆ, ಸರಕಾರಿ ಮುದ್ರಣಾಲಯ, ಬೆಂಗಳೂರು, ೧೮೯೩

೪೫. ಶಾಮರಾವ್, ಮಾಡರ್ನ್ ಮೈಸೂರು, ಐಜನ್ ಬೋಥಮ್ಸ್, ಮೈಸೂರು, ೧೯೩೭

೪೬. ಸಾಕಿ, ಮೇಕಿಂಗ್ ಹಿಸ್ಟರಿ, ಕರ್ನಾಟಕಾಸ್ ಪೀಪಲ್ ಆ್ಯಂಡ್ ದೇರ್ ಫಾಸ್ಟ್, ಸಂಪುಟ-೧, ವಿಮುಕ್ತಿ ಪ್ರಕಾಶನ, ಬೆಂಗಳೂರು, ೧೯೯೮

೪೭. ಸಿದ್ಧಲಿಂಗಸ್ವಾಮಿ, ಅಗ್ರೇರಿಯನ್ ರಿಲೇಶನ್ ಇನ್ ಮೈಸೂರು, ೧೭೯೯-೧೮೮೧, ನೇಷನ್ ಬಿಲ್ಡರ್ಸ್, ಬೆಂಗಳೂರು, ೧೯೯೯

೪೮. ಸೂರ್ಯನಾಥ ಕಾಮತ್, ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಇನ್ ಕರ್ನಾಟಕ, ಬೆಂಗಳೂರು, ೧೯೮೫

೪೯. ಹಾಲಪ್ಪ ಜಿ. ಎಸ್. ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ, ಸಂಪುಟ-೨, ಮೈಸೂರು ಸರಕಾರ ಬೆಂಗಳೂರು, ೧೯೬೪

೫೦. ಕ್ಷೀರಸಾಗರ, ದಿಕ್ಕು ತಪ್ಪಿದ ಕರ್ನಾಟಕ ಭೂ ಸುಧಾರಣೆ, ಕಾಕ್ಸ್‌ಟೌನ್, ಬೆಂಗಳೂರು, ೧೯೮೫

ಸಂಪಾದಿತ ಗ್ರಂಥಗಳು

೧. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೯

೨. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕದ ಕೈಫಿಯತ್ತುಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೩. ಕಲಬುರ್ಗಿ ಎಂ.ಎಂ.(ಸಂ), **ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದಲ್ಲಿ ಲಿಂಗಾಯತರ ಪಾತ್ರ** ಗದುಗಿನ ತೋಂಟದಾರ್ಯ ಮಠ, ಗದಗ, ೧೯೯೯

೪. ಕಲಬುರ್ಗಿ ಎಂ.ಎಂ.(ಸಂ), **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು**, ಭಾಗ ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೫. ಕಾಳೇಗೌಡ ನಾಗವಾರ, ಜಿ.ವಿ. ಆನಂದಮೂರ್ತಿ(ಸಂ), **ಶಾಂತವೇರಿ ಗೋಪಾಲಗೌಡ** ನೆನಪಿನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೬. ಗೋಪಾಲ್ ಎಂ.ಎಚ್.(ಸಂ), **ಬ್ರಿಟಿಶ್ ಸೋರ್ಸ್ ಆಫ್ ದಿ ಎಕಾನಾಮಿಕ್ ಪೊಲಿಟಿಕಲ್ ಆ್ಯಂಡ್ ಸೋಷಿಯಲ್ ಹಿಸ್ಟರಿ ಆಫ್ ಮೈಸೂರು ಸ್ಟೇಟ್**, ೧೮೧೩-೧೮೩೨, ಪಾಪ್ಯುಲರ್ ಪ್ರಕಾಶನ, ಬಾಂಬೆ, ೧೯೯೩

೭. ಚಂದ್ರಶೇಖರ ಎಸ್. ಸಂಪುಟ ಸಂಪಾದಕರು, **ಕರ್ನಾಟಕ ಚರಿತ್ರೆ ಸಂಪುಟ ೭**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೮. ದಿವಾನ್ ಬಹದ್ದೂರ ಎಲ್.ಕೆ.ಅನಂತಕೃಷ್ಣ ಐಯ್ಯರ್(ಸಂ), **ದಿ ಮೈಸೂರ್ ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್**, ಸಂಪುಟ ೨, ಮೈಸೂರು ಯೂನಿವರ್‌ಸಿಟಿ, ಮೈಸೂರು, ೧೯೩೫

೯. ದಿವಾಕರ್ ಆರ್.ಆರ್.(ಸಂ),, **ಕರ್ನಾಟಕ ಥ್ರೂ ದಿ ಏಜಸ್**, ಕರ್ನಾಟಕ ಸರಕಾರ, ಬೆಂಗಳೂರು, ೧೯೬೮

೧೦. ನಾಗರಾಜ್ ಎಂ.ಜಿ. ಕೃಷ್ಣಮೂರ್ತಿ ಪಿ.ವಿ.(ಸಂ), **ಇತಿಹಾಸ ದರ್ಶನ**, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ಸಂಪುಟ ೧೫, ೨೦೦೦

೧೧. ಲಕ್ಷ್ಮಣ ತೆಲಗಾವಿ(ಸಂ), ಹರತಿ ಸಿರಿ, ಹರತಿಕೋಟೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ೧೯೮೭

೧೨. ವೀರಣ್ಣದಂಡೆ (ಸಂ), ಜಾನಪದ ೯೨, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೫

೧೩. ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), ಚಂದ್ರವಳ್ಳಿ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಲಿ, ಚಿತ್ರದುರ್ಗ, ೧೯೭೬

೧೪. ಷೇಕ ಆಲಿ ಬಿ., ಸಂಪುಟ ಸಂಪಾದಕರು, ಕರ್ನಾಟಕ ಚರಿತ್ರೆ ಸಂಪುಟ ೫, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೫. ಸೆಬಾಸ್ಟಿಯನ್ ಜೋಸೆಫ್, ಸಂಪುಟಸಂಪಾದಕರು, ಕರ್ನಾಟಕ ಚರಿತ್ರೆ ಸಂಪುಟ ೬, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೬. ಸೂರ್ಯನಾಥ್ ಯು. ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೨, ಗೀತಾ ಬುಕ್ ಹೌಸ್, ಮೈಸೂರು, ೧೯೭೭

ಮಹಾ ಪ್ರಬಂಧಗಳು

೧. ಕೀರ್ತಿನಾಥ ಜಿ.ಎನ್., ಶಿವಮೊಗ್ಗ ಜಿಲ್ಲೆಯ ಸಮಾಜವಾದಿ ಹೋರಾಟಗಳು, ಎಂ.ಫಿಲ್., ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, (ಅಪ್ರಕಟಿತ) ೧೯೯೬

೨. ಗೋವಿಂದರಾಜು ಸಿ.ಆರ್., ಕರ್ನಾಟಕದ ಏಕೀಕರಣ ಮತ್ತು ಕನ್ನಡ ಸಾಹಿತ್ಯ, ಎಚ್.ಬಿ.ಎಸ್. ಪ್ರಕಾಶನ, ಬೆಂಗಳೂರು, ೧೯೯೮

೩. ಬಂಜಗೆರೆ ಜಯಪ್ರಕಾಶ, ಕನ್ನಡ ಸಾಹಿತ್ಯ ಮತ್ತು ರಾಷ್ಟ್ರೀಯತೆಯ ಬೇರುಗಳು, (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೪. ಮಹಾಬಲೇಶ್ವರಪ್ಪ ಬಿ.ಸಿ., ಹೈದ್ರಾಬಾದ್-ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗಾ, ೧೯೯೭

೫. ವೆಂಕಟೇಶ ಜೋಯಿಸ್ ಕೆ.ಜಿ., ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬

೬. ಶಂಕರನಾರಾಯಣ ತೀ.ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೭. ಶ್ರೀಕಂಠಯ್ಯ ಕೆ., ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ(ಸಾಮಾಜಿಕ, ಆರ್ಥಿಕ, ರಾಜಕೀಯ) ಗೀತಾ ಬುಕ್ ಹೌಸ್, ಮೈಸೂರು, ೧೯೮೩

ಪತ್ರಿಕೆಗಳು

೧. **ಕನ್ನಡ ಅಧ್ಯಯನ**, ಬಿಸಿಲು ಸಂಚಿಕೆ, ತ್ರೈಮಾಸಿಕ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨. **ಕನ್ನಡಮ್ಮ**, ದೀಪಾವಳಿ ವಿಶೇಷಾಂಕ, ಬೆಂಗಳೂರು, ೧೯೯೩

೩. **ಜಾನಪದ ಪತ್ರಿಕೆ**, ಜಾನಪದ ಅಕಾಡೆಮಿ, ಸೆಪ್ಟೆಂಬರ್, ಬೆಂಗಳೂರು, ೧೯೯೪

೪. **ದಾವಣಗೆರೆ ವಿಶೇಷ** ಅನಂತ ಪ್ರಕಾಶ, ಸಂಪುಟ ೧, ಸಂಚಿಕೆ ೭, ತ್ರೈಮಾಸಿಕ, ದಾವಣಗೆರೆ, ೧೯೮೬

೫. **ನೂತನ** ಸಾಪ್ತಾಹಿಕ, ಬೆಂಗಳೂರು, ಆಗಸ್ಟ್ ೨೦, ೨೦೦೦

೬. **ಪ್ರಜಾವಾಣಿ**, ದಿನಪತ್ರಿಕೆ, ಫೆಬ್ರವರಿ, ೧೧,೧೯೭೫

೭. **ಪ್ರಜಾವಾಣಿ**, ದೀಪಾವಳಿ ವಿಶೇಷಾಂಕ, ಬೆಂಗಳೂರು, ೧೧೯೬

೮. **ಯೋಜನಾ**, ಮಾಸಿಕ ಪತ್ರಿಕೆ, ಅಕ್ಟೋಬರ್, ಬೆಂಗಳೂರು, ೧೯೮೫

೯. **ಲಂಕೇಶ್** ವಾರಪತ್ರಿಕೆ, ಬೆಂಗಳೂರು, ಆಗಸ್ಟ್ ೨೩, ೨೦೦೦

೧೦. **ವಾಲ್ಮೀಕಿ ವಾಣಿ**, ಮಾಸಿಕ ಪತ್ರಿಕೆ, ಚಿತ್ರದುರ್ಗ, ಜೂನ್, ೧೯೯೮

೧೧. ವಿಜಯ **ಕರ್ನಾಟಕ** ದಿನಪತ್ರಿಕೆ, ಬೆಂಗಳೂರು, ಆಗಸ್ಟ್ ೧೦, ೨೦೦೦

೧೨. **ಸಾಧನೆ**, ಸಂಪುಟ ೧೩, ಸಂಚಿಕೆ ೧, ಜನವರಿ-ಮಾರ್ಚ್, ಬೆಂಗಳೂರು ವಿಶ್ವವಿದ್ಯಾಲಯ, ೧೯೮೪

೧೩. **ಸಾಧ್ವಿ** ದಿನಪತ್ರಿಕೆ, ಮೈಸೂರು, ೧೯೩೯

೧೪. **ಹೊಸತು**, ಮಾಸಿಕ ಪತ್ರಿಕೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಏಪ್ರಿಲ್, ೨೦೦೦

ಗೆಜೆಟಿಯರ್

೧. ರೈಸ್ ಬಿ. ಎಲ್. (ಸಂ), **ಮೈಸೂರು ಗೆಜೆಟಿಯರ್**, ಸಂಪುಟ ೧,೨ ಲಂಡನ್, ೧೮೯೭

೨. ಸತ್ಯನ್ ಬಿ.ಎನ್.(ಸಂ), **ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್**, ಕರ್ನಾಟಕ ಸರಕಾರ, ಬೆಂಗಳೂರು, ೧೯೬೭

೩. ಸೂರ್ಯನಾಥ್ ಯು. ಕಾಮತ್(ಸಂ), **ಕರ್ನಾಟಕ ರಾಜ್ಯ ಗೆಜೆಟಿಯರ್, ಭಾಗ** ೨, ಕರ್ನಾಟಕ ಸರಕಾರ, ಬೆಂಗಳೂರು, ೧೯೮೫

೪. ಹಯವದನ ರಾವ್ (ಸಂ), **ಮೈಸೂರು ಗೆಜೆಟಿಯರ್**, ಸಂಪುಟ ೧-೫ ಮೈಸೂರು ಸರಕಾರ, (ಬೆಂಗಳೂರು ೧೯೨೭, ೧೯೩೦, ೧೯೨೯, ೧೯೨೯, ೧೯೩೦)

ಜನಸಂಖ್ಯೆ ವರದಿ

೧. ತ್ಯಾಗರಾಜ ಅಯ್ಯರ್, ವಿ.ಆರ್.(ಸಂ), **ಭಾರತೀಯ ಜನಸಂಖ್ಯೆ ವರದಿ**, ೧೯೧೧, ಸಂಪುಟ ೨, ಬೆಂಗಳೂರು, ೧೯೧೨

ನಿಘಂಟುಗಳು

೧. ನಾರಾಯಣ ಕೆ.ವಿ., ಮತ್ತು ಇತರರು, **ಕೃಷಿಪದಕೋಶ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨. ರೆವೆರೆಂಡ್ ಎಫ್. ಕಿಟೆಲ್, **ಕನ್ನಡ ಇಂಗ್ಲಿಶ್ ಡಿಕ್ಷನರಿ**, ಏಷಿಯನ್ ಎಜುಕೇಷನಲ್ ಸರ್ವೀಸ್, ದೆಹಲಿ, ೧೯೯೪

ಸಂದರ್ಶಿಸಿದ ವ್ಯಕ್ತಿಗಳು

೧. **ಚಿದಾನಂದಪ್ಪ ಡಿ. ಎಸ್.** ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷರು, ಚಿತ್ರದುರ್ಗ

೨. **ನರಸಿಂಹ ಜಟ್ಟಿ**, ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಕಾರ್ಯದರ್ಶಿಗಳು, ಚಿತ್ರದುರ್ಗ

೩. **ನಿಜಲಿಂಗಪ್ಪ ಎಸ್.**, ರಾಷ್ಟ್ರನಾಯಕರು, ವಿನಯ, ಜಿಲ್ಲಾಧಿಕಾರಿಗಳ ಕಛೇರಿ ಹತ್ತಿರ, ಚಿತ್ರದುರ್ಗ

೪. ಬಸಪ್ಪ ಜಿ., ಮಾಜಿ ಶಾಸಕರು ಮತ್ತು ಸ್ವಾತಂತ್ರ್ಯ ಹೋರಾಟಗಾರರ, ಚಿಕ್ಕಯುಗಟ್ಟಿ, ಹೊಸದುರ್ಗ ತಾಲೂಕು, ಚಿತ್ರದುರ್ಗ

೫. ಮಹಾದೇವಪ್ಪ ಪಿ., ಕೃಷಿಕರು, ಕಾವಡಿಗರಹಟ್ಟಿ, ಮುರುಘಾಮಠದ ಹತ್ತಿರ, ಚಿತ್ರದುರ್ಗ

೬. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು, ಚರಪಟ್ಟಾಧ್ಯಕ್ಷರು, ತರಳಬಾಳು ಮಠ, ಸಿರಿಗೆರೆ